೧

ದೈವ : ಒಂದು ಪೀಠಿಕೆ

ನಮ್ಮ ದೇವ–ದೇವತೆಯರನ್ನು ಕುರಿತ ಗಂಭೀರ ಚರ್ಚೆಗಿಂತ ಮೊದಲು ಚಿಕ್ಕಂದಿನಲ್ಲಿ ನಾನು ಕಂಡ ದೈವಸಂಬಂಧಿಯಾದ ಕೆಲವು ಘಟನೆಗಳನ್ನು ವಿವರಿಸುವುದು ಸೂಕ್ತ ಎಂದುಕೊಂಡಿದ್ದೇನೆ. ಯಾಕೆಂದರೆ ಬಾಲ್ಯದಲ್ಲಿ ಕಂಡುಂಡು ಅನುಭವಿಸಿದ ಆ ಘಟನೆಗಳು ಈಗ ನಾನು ಮಂಡಿಸಬೇಕಿರುವ ಚರ್ಚೆಗಳಿಗೆ ಪೀಠಿಕೆಯಾಗಬಲ್ಲವು ಎಂಬ ನಂಬಿಕೆ ನನಗಿದೆ. ನಾನು ಹುಟ್ಟಿ ಬೆಳೆದ ಊರು ಮತ್ತು ಪರಿಸರ ಒಂದು ಬುಡಕಟ್ಟಿನ ಹಂತವನ್ನು ದಾಟಿದ ಕೃಷಿ ಸಮಾಜ ವ್ಯವಸ್ಥೆಗೆ ಸೇರಿದ್ದಾಗಿತ್ತಾದರೂ, ಇಂದು ಆ ಬಾಲ್ಯವನ್ನು ಮೆಲುಕು ಹಾಕುವಾಗ, ಎಷ್ಟೆಲ್ಲ ಬುಡಕಟ್ಟಿನ ಅಂಶಗಳು ಅಂದು ನಮ್ಮ ನಡುವೆ ಇದ್ದವು ಎಂಬುದು ಹೊಳೆಯುತ್ತಾ ಹೋದಂತೆ ಆಶ್ಚರ್ಯವಾಗುತ್ತದೆ. ಈ ಸಂದರ್ಭದಲ್ಲಿ ಖ್ಯಾತ ಚಿಂತಕ ಡಾ. ದೇವಿಪ್ರಸಾದ್ ಚಟ್ಟೋಪಾಧ್ಯಾಯ ಅವರ ಒಂದು ಮಾತು ನೆನಪಿಗೆ ಬರುತ್ತದೆ. "ಅನಾಗರಿಕ ವ್ಯವಸ್ಥೆಯನ್ನು ದಾಟಿ ನಾಗರಿಕತೆಯ ಹೊಸ್ತಿಲನ್ನು ಮುಟ್ಟಿದ ಮೇಲೂ ಬಹಳ ಕಾಲದವರೆಗೆ ಮನುಷ್ಯ ತನ್ನ ಭೂತಕಾಲದ ಅನಾಗರಿಕ ಹಂತದ ಅನೇಕ ಅಭ್ಯಾಸಗಳನ್ನು ಪೂರ್ಣವಾಗಿ ಬಿಡಲಾರದೆ ಹೋದ. ನಾಗರಿಕ ಸಮಾಜದ ಮನುಷ್ಯನ ಗ್ರಹಿಕೆಗಳು ಹಾಗೂ ನಂಬಿಕೆಗಳಲ್ಲಿ ಆದಿಮಕಾಲದ ವಿಧವಿಧವಾದ ನಂಬಿಕೆಗಳು ಹಾಗೇ ಅಂಟಿಕೊಂಡಿವೆ. ಆದ್ದರಿಂದಲೇ ನಾಗರಿಕತೆಯ ಪ್ರಾರಂಭದ ದೆಸೆಯ ವಿಷಯಗಳನ್ನು ಸರಿಯಾಗಿ ತಿಳಿದುಕೊಳ್ಳಲು ಅನಾಗರಿಕ ಅವಸ್ಥೆಯ ಸನ್ನಿವೇಶಗಳನ್ನು ವಿಶೇಷವಾಗಿ ತಿಳಿದುಕೊಳ್ಳುವ ಅವಶ್ಯಕತೆ ಇದೆ."[೧]

ಈಗ್ಗೆ ೩೫–೪೦ ವರ್ಷಗಳ ಹಿಂದೆ ನಾನು ನನ್ನ ಅಪ್ಪನ ಜೊತೆ ಪಾಲ್ಗೊಳ್ಳುತ್ತಿದ್ದ ಒಂದು ಕ್ರಿಯಾವಿಧಿ ನೆನಪಿಗೆ ಬರುತ್ತದೆ. ನವೆಂಬರ್ ತಿಂಗಳಿನ ರಾಗಿ ಹೊಲದ ಕೊಯಿಲಿನ ಸಂದರ್ಭದಲ್ಲಿ ಕೈಗೊಳ್ಳುತ್ತಿದ್ದ ಆಚರಣೆ ಅದು. ಕೊಯಿಲಿನ ಆರಂಭಕ್ಕೆ

PDF created with pdfFactory Pro trial version www.pdffactory.com

ಮೊದಲು, ಒಂದು ಸಂಜೆ ನನ್ನ ಅಪ್ಪ ಹಾಲು ಮತ್ತು ಅನ್ನದ ಎರಡು ಪಾತ್ರೆಗಳನ್ನು ಮರದ ಹೆಡಿಗೆಗೆ ತುಂಬಿಕೊಂಡು, ನಾಳೆಗೆ ಕೊಯಿಲು ಆರಂಭಿಸಬೇಕಾಗಿರುವ ಒಂದು ಹೊಲಕ್ಕೆ ಹೋಗುತ್ತಿದ್ದರು. ಒಣಗಿದ ತೆನೆಗಳಿಂದ ತುಂಬಿಕೊಂಡು ಭೂಮಿಗೆ ವಾಲಿದ ಪೈರುಗಳನ್ನು ಸರಿಸಿ ಸರಿಸಿ ಹೊಲದ ಮಧ್ಯಭಾಗಕ್ಕೆ ಹೊಕ್ಕು, ಸುಮಾರು ಇಪ್ಪತ್ತೈದು ಅಡಿ ಚದುರದ ಜಾಗದಲ್ಲಿ ಪೈರುಗಳನ್ನು ಕೊಯ್ದು ಅರಿ ಇಡುತ್ತಿದ್ದರು. ಅಲ್ಲಿಯೇ ಸುತ್ತಮುತ್ತ ಮೂರು ಕಲ್ಲುಗಳನ್ನು ಆರಿಸಿ ನೀರಿನಿಂದ ತೊಳೆದು ಸಾಲಾಗಿ ಇಡುತ್ತಿದ್ದರು. ಆ ಕಲ್ಲುಗಳಿಗೆ ಅರಿಶಿನ, ಕುಂಕುಮ ಹಚ್ಚಿ ಪೂಜಿಸುತ್ತಿದ್ದರು. ಹೊಲದ ಸಾಲಿನಲ್ಲಿ ಬೆಳೆದ ಹರಳು ಎಲೆಗಳನ್ನು ಕಿತ್ತು, ಅದರ ಮೇಲೆ ಹಾಲು ಅನ್ನ ಇಟ್ಟು ಕಲ್ಲುಗಳ ಮುಂದೆ ಇಡುತ್ತಿದ್ದರು. ಆ ಕಲ್ಲುಗಳೇ ಮೂರು ದೇವರುಗಳು! ಒಂದು ಭೂಮಿತಾಯಿ, ಎರಡು ಮಳೆರಾಯ, ಮೂರು ಬೆನವಣ್ಣ. ಸೃಷ್ಟಿಸುವ, ಪೋಷಿಸುವ ಮತ್ತು ರಕ್ಷಿಸುವ ಸಂಕೇತಗಳಾದ ಆ ದೇವರುಗಳಿಗೆ ನನ್ನ ಅಪ್ಪನ ಪ್ರಕಾರ ರೂಪಗಳಿರಲಿಲ್ಲ. ಇದು ಬಯಲುಸೀಮೆಯ ಕೆಲವು ಕೃಷಿಕರಲ್ಲಿ ಈಗಲೂ ಉಳಿದಿರುವ ಮೂಲದೈವ ಕಲ್ಪನೆಯ ಪಳೆಯುಳಿಕೆ.

ನನಗೆ ಗೊತ್ತಿದ್ದಂತೆ ನಾವು 'ಬಾಗೆ' ಕುಲದವರು. ಬಾಗೆ ಎಂಬುದು ಒಂದು ಮರದ ಹೆಸರು. ನಮ್ಮ ಹಾಗೆಯೇ ಬನ್ನಿ ಕುಲದವರು ನಮ್ಮ ಊರಿನಲ್ಲಿದ್ದರು. ಬಾಗೆ ಮತ್ತು ಬನ್ನಿ ಎರಡು ಜಾತಿಯ ಸಸ್ಯಗಳು. ಆ ಕುಲದವರು ಬಹುಶಃ ಆ ಪ್ರದೇಶದ ಮೂಲ ಕೃಷಿಕರಿದ್ದಿರಬಹುದು. ಆದರೆ ಇನ್ನೆರಡು ರೀತಿಯ ಬಳಿಗಳು ನಮ್ಮ ಊರಿನಲ್ಲಿದ್ದವು. ಅವು 'ಪೆಟ್ಟಿಗೆ' ಮತ್ತು 'ಬುಜ್ಜುಣಿಕೆ' ಕುಲಗಳು. ಪೆಟ್ಟಿಗೆ ಎಂದರೆ ವಿವರಿಸಬೇಕಾಗಿಲ್ಲ. ಬುಜ್ಜುಣಿಕೆ ಎಂದರೆ ಸ್ವಲ್ಪ ವಿವರಿಸಬೇಕಾಗುತ್ತದೆ. ಸಣ್ಣಸಣ್ಣ ಬಿದಿರು ಕಡ್ಡಿಗಳನ್ನು ಒತ್ತಟ್ಟಿಗೆ ಜೋಡಿಸಿ ಹೆಣೆದ ಕುಂಭಾಕಾರದ ಹೊಟ್ಟೆ ಮತ್ತು ಅಗಲವಾದ ಬಾಯಿ ಇರುವ ಒಂದು ಸಾಧನ. ಮೇಲೊಂದು ಮುಚ್ಚಳ ಇರುತ್ತದೆ. ಒಟ್ಟಿನಲ್ಲಿ ಇದು ಕೂಡ ಪೆಟ್ಟಿಗೆಯಂತೆಯೇ ವಸ್ತುಗಳನ್ನು, ಬಟ್ಟೆಬರೆಗಳನ್ನು ತುಂಬಿಡುವ ಅಥವಾ ಸಂಚಾರದ ಸಂದರ್ಭದಲ್ಲಿ ಹೊತ್ತೊಯ್ಯುವ ಒಂದು ಸಾಧನ. ಈ ಸಾಧನಗಳನ್ನೇ ತಮ್ಮ ಬಳಿಯನ್ನಾಗಿ ಗುರುತಿಸಿಕೊಂಡ ಈ ಪಂಗಡದವರು ಬಹುಶಃ ಒಂದು ಕಾಲಕ್ಕೆ ಅಲೆಮಾರಿ ಕೃಷಿಕರಾಗಿದ್ದು ನಂತರದಲ್ಲಿ ಒಂದು ಕಡೆ ಬಂದು ನೆಲೆಸಿದವರಿರಬೇಕು. ಅವರ ಈ ಸಾಧನಗಳ ಕುರುಹೇ ಇದಕ್ಕೆ ಸಾಕ್ಷಿ.

ಒಂದೇ ಬಳಿಗೆ ಸೇರಿದ ಕುಟುಂಬಗಳ ನಡುವೆ ಹೆಣ್ಣು ಕೊಟ್ಟು ಹೆಣ್ಣು ತರುವುದು ನಿಷೇಧ. ಬಾಗೆ ಕುಲದಿಂದ ಬನ್ನಿ ಕುಲಕ್ಕೂ ಹಾಗೇ ಬನ್ನಿ ಬಾಗೆ ಕುಲದಿಂದ ಪೆಟ್ಟಿಗೆ ಬುಜ್ಜುಣಿಕೆ ಕುಲಕ್ಕೂ ಕೊಟ್ಟು ತರುವ ಅವಕಾಶಗಳುಂಟು. ಆಯಾ ಕುಲದವರು ತಮ್ಮ ತಮ್ಮ ಕುಲಗಳನ್ನು ಸಂಕೇತಿಸುವ ವಸ್ತು ಅಥವಾ ಸಸ್ಯಗಳ ಬಗ್ಗೆ ಅಪಾರ

ಗೌರವ ಇಟ್ಟುಕೊಂಡಿರುತ್ತಿದ್ದರು. ಬಾಗೆ ಮರವನ್ನು ನಾವು ಎಂದಿಗೂ ಕಡಿಯುವ ಹಾಗಿಲ್ಲ. ಅದರ ಸೌದೆಯನ್ನು ಒಲೆಗೆ ಉರಿಸುವ ಹಾಗಿಲ್ಲ. ಮದುವೆಯ ಸಂದರ್ಭಗಳಲ್ಲಿ ಆ ಮರಕ್ಕೆ ಪೂಜೆ ಸಲ್ಲಿಸಬೇಕು. ಪೆಟ್ಟಿಗೆ ಮತ್ತು ಬುಜ್ಜುಣಿಕೆ ಕುಲದವರು ತಮ್ಮ ತಮ್ಮ ಮದುವೆ ಸಂದರ್ಭಗಳಲ್ಲಿ ತಮ್ಮ ತಮ್ಮ ಮನೆ ದೇವರ ಪ್ರತೀಕಗಳನ್ನು ಪೆಟ್ಟಿಗೆ ಅಥವಾ ಬುಜ್ಜುಣಿಕೆಯಲ್ಲಿ ಇಟ್ಟು ಹೊತ್ತು ತಂದು ಅದರ ಸಮ್ಮುಖದಲ್ಲಿ ಮದುವೆ ಕಾರ್ಯಗಳನ್ನು ನೆರವೇರಿಸುತ್ತಿದ್ದರು. ಒಂದು ಕಾಲದ ವಾಸ್ತವ ಇಂದು ಸಾಂಕೇತಿಕ ರೂಪದಲ್ಲಿ ತನ್ನ ಅಸ್ತಿತ್ವ ಉಳಿಸಿಕೊಂಡಿದೆ ಇಲ್ಲಿ. ನಾಗರಿಕತೆಯ ಹೊಸ್ತಿಲಿಗೆ ಬಂದ ಮೇಲೂ ಈ ಆಚರಣೆ ಮತ್ತು ನಿಷೇಧಗಳಿರುವುದನ್ನು ನೋಡಿದರೆ ಇವತ್ತಿನ ಅನೇಕ ಕೃಷಿಕರು ಅಂದಿನ ಬುಡಕಟ್ಟುಗಳಿಂದ ವಿಕಾಸ ಹೊಂದಿದವರೇ ಎಂಬುದು ಸ್ಪಷ್ಟ.

ಇನ್ನು ನಮ್ಮ ಸುತ್ತಮುತ್ತ ಪ್ರಚಲಿತವಿದ್ದ ಮತ್ತು ಆರಾಧಿಸಲ್ಪಡುತ್ತಿದ್ದ ದೈವಗಳ ಬಗ್ಗೆಯೂ ಒಂದಿಷ್ಟು ಹೇಳಲೇಬೇಕು. ಕೇವಲ ನಮ್ಮ ಊರಲ್ಲ, ಸುತ್ತಲೂ ಏಳೂರುಗಳಲ್ಲಿಯೂ ಬಹು ಜನಪ್ರಿಯವಾಗಿದ್ದ ದೇವತೆ ಎಂದರೆ ಚೌಡಮ್ಮ. 'ಉಜ್ಜನಿ ಚೌಡಮ್ಮ' ಎಂದು ಸಾಮಾನ್ಯವಾಗಿ ಎಲ್ಲರೂ ಕರೆಯುತ್ತಿದ್ದರು. ನಮ್ಮ ಸುತ್ತಲೂ ಹಳ್ಳಿಗಳಲ್ಲಿ ಉಜ್ಜನಿ ಒಂದು ದೊಡ್ಡ ಊರು. ವಿಜಯನಗರದ ಅರಸರ ಕಾಲದ ಶಾಸನವೂ ಊರಿನಲ್ಲಿದೆ. ಅವಶೇಷದಂತೆ ಇರುವ ಕೋಟೆ ಬಾಗಿಲು ಹಾಗೂ ಇನ್ನಿತರ ಐತಿಹಾಸಿಕ ಕುರುಹುಗಳೂ ಕಾಣಸಿಗುವುದರಿಂದ ಇದೊಂದು ಸಣ್ಣ ಪಾಳೆಯಪಟ್ಟಾಗಿತ್ತೆಂಬುದು ನಿಸ್ಸಂದೇಹ. ೧೪ನೇ ಶತಮಾನಕ್ಕೆ ಸಂಬಂಧಿಸಿದ ಶಾಸನದಲ್ಲಿ 'ಚೌಡೇಶ್ವರಿ ದೇವಿ' ಎಂಬ ಅಂಕಿತವಿರುವುದರಿಂದ ಚೌಡಮ್ಮನ ಇತಿಹಾಸವೂ ಅಷ್ಟರಮಟ್ಟಿಗೆ ಹಿಂದಕ್ಕೆ ಹೋಗುತ್ತದೆ. ಪ್ರತಿವರ್ಷ ನಡೆಯುವ ಚೌಡಮ್ಮನ ಹಬ್ಬ ಅತ್ಯಂತ ವಿಶಿಷ್ಟವಾದದ್ದು.[೨]

ಉಜ್ಜನಿಯಲ್ಲಿ ಒಕ್ಕಲಿಗರು, ಹೊಲೆಯರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ವೀರಶೈವರು, ಬ್ರಾಹ್ಮಣರು, ಅಗಸರು, ಬೆಸ್ತರು, ಅರಸುಗಳು, ಮಾದಿಗರು ಇತ್ಯಾದಿಯಾಗಿ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಒಕ್ಕಲಿಗರು, ಹೊಲೆಯರು ಮತ್ತು ಮಾದಿಗರಿಗೆ ಅವರವರದೇ ಆದ ಪ್ರತ್ಯೇಕ ವಾಸಸ್ಥಳಗಳಿವೆ. ಚೌಡಮ್ಮನ ಹಬ್ಬದಲ್ಲಿ ಈ ಎಲ್ಲರಿಗೂ ಒಂದಲ್ಲ ಒಂದು ರೀತಿಯ ನಿರ್ದಿಷ್ಟಪಡಿಸಿದ ಕಾರ್ಯವಿರುತ್ತದೆ. ಆದರೆ ಹಬ್ಬದ ವಿಶಿಷ್ಟಾಚರಣೆಗಳು ಮಾತ್ರ ನಮ್ಮನ್ನು ಬಹು ಹಿಂದಕ್ಕೆ ಕರೆದೊಯ್ಯುತ್ತವೆ.

ಉಜ್ಜನಿಯಲ್ಲಿ ಮೂರು ರೀತಿಯ ಸ್ತ್ರೀ ದೇವತೆಗಳಿರುವುದು ಈ ವಿಶಿಷ್ಟತೆಗೆ ಕಾರಣವಾಗಿದೆ. ಚೌಡಮ್ಮ, ಹೆಬ್ಬಾರಮ್ಮ ಮತ್ತು ಮಾರಮ್ಮ. ಚೌಡಮ್ಮನಿಗೆ ಏಳು ಜನ ಅಕ್ಕತಂಗಿಯರೂ ಇದ್ದಾರೆ. ನಿಡಸಾಲೆ, ಯಮನಹಳ್ಳಿ ಇತ್ಯಾದಿಯಾಗಿ ಬೇರೆ

PDF created with pdfFactory Pro trial version www.pdffactory.com

ಬೇರೆ ಊರುಗಳಲ್ಲಿ ಅವರು ತಂಗಿದ್ದಾರೆ ಎಂದು ಹೇಳಲಾಗುತ್ತಿದೆ. ಅವರಲ್ಲಿ ನಿಡಸಾಲೆ ಚೌಡಮ್ಮ ಮಾತ್ರ ಪ್ರತಿವರ್ಷದ ಹಬ್ಬದಲ್ಲಿ ಉಜ್ಜನಿಗೆ ಬಂದು ಅಕ್ಕನ ಹಬ್ಬದಲ್ಲಿ ಪಾಲ್ಗೊಂಡು ಹೋಗುತ್ತಾಳೆ. ಇಡೀ ದಕ್ಷಿಣ ಭಾರತದ ದೈವೇತಿಹಾಸದಲ್ಲಿ ಪ್ರಮುಖ ಅಂಶವಾಗಿ ಕಾಣಿಸಿಕೊಳ್ಳುವ 'ಏಳುಜನ ಅಕ್ಕ ತಂಗಿಯರು ದೇವತೆಗಳಾಗಿ' ನೆಲೆಗೊಂಡ ಪುರಾಣ ಉಜ್ಜನಿಯಲ್ಲಿಯೂ ಇದೆ. ಹಾಗೆಯೇ ವಲಸೆಗಾರರಾಗಿ ಬಂದು ನೆಲೆಗೊಂಡ ಕೆಲವು ಬುಡಕಟ್ಟುಗಳು ಆದಿಯಲ್ಲಿ ಚೌಡಮ್ಮನನ್ನು ಪ್ರತಿಷ್ಠಾಪಿಸಿರಬೇಕು ಎಂಬ ಅನುಮಾನವೂ ಬರುತ್ತದೆ. ಯಾಕೆಂದರೆ ಈ ಏಳು ದೇವತೆಯರು ಅರ್ಥಾತ್ ಸಪ್ತಮಾತೃಕೆಯರು ವಲಸೆಗಾರ ಹಾಗೂ ಪಶುಪಾಲಕ ಬುಡಕಟ್ಟುಗಳ ಆರಾಧ್ಯ ದೈವಗಳಾಗಿದ್ದವು ಎಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.[೩] ಹಾಗಾದರೆ ಉಜ್ಜನಿಯಲ್ಲಿರುವ ಈಗಿನ ಕೃಷಿಕರು ಹಿಂದೆ ವಲಸೆಗಾರರಾಗಿ ಅಥವಾ ಪಶುಪಾಲಕರಾಗಿ ಬಂದು ನೆಲೆಗೊಂಡರೇ ಎಂಬುದನ್ನು ಇನ್ನೂ ಸಂಶೋಧಿಸಬೇಕಾಗುತ್ತದೆ.

ಹೆಬ್ಬಾರಮ್ಮ ಮುಖ್ಯವಾಗಿ ಹೊಲೆಯರ ದೇವತೆ. ಹೆಬ್ಬಾರಮ್ಮನ ಗುಡಿಯೂ ಹೊಲಗೇರಿಯಲ್ಲಿದೆ. ಈ ದೇವತೆಗೆ ಸಂಬಂಧಿಸಿದ ಪುರಾಣ ಹೆಚ್ಚುಕಡಿಮೆ ಮಾರಮ್ಮನ ಪುರಾಣವನ್ನು ಹೋಲುತ್ತದೆ. ಆದ್ದರಿಂದಲೇ ಇಲ್ಲಿ ಇರುವ ಮಾರಮ್ಮನಿಗೆ ಹೆಚ್ಚು ಪ್ರಾಶಸ್ತ್ಯವಿಲ್ಲ. ಉಜ್ಜನಿಯ ವಿಶಿಷ್ಟತೆ ಏನು ಎಂದರೆ, ಹೆಬ್ಬಾರಮ್ಮನ ಭಕ್ತರಾದ ಹೊಲೆಯರು ಚೌಡಮ್ಮನ ಹಬ್ಬದಲ್ಲಿ ಪ್ರಧಾನಪಾತ್ರ ವಹಿಸುವುದು. ಹದಿನೆಂಟು ದಿನಗಳ ಕಾಲ ನಿಗದಿಪಡಿಸಿದ ಆರು ಜನ ಹೊಲೆಯರು ಜನಿವಾರ ಹಾಕಿ ಶಾಸ್ತ್ರೋಕ್ತವಾಗಿ ಬ್ರಾಹ್ಮಣರಾಗುತ್ತಾರೆ. ಬ್ರಾಹ್ಮಣ ಪುರೋಹಿತ ಈ ಶಾಸ್ತ್ರವನ್ನು ನಡೆಸಿಕೊಡುತ್ತಾನೆ. ಹೀಗೆ ನೇಮನಿಯಮಗಳನ್ನು ಪಾಲಿಸಿದ ಹೊಲೆಯರು ಚೌಡಮ್ಮನ ಕೊಂಡದಲ್ಲಿ ಹೆಬ್ಬಾರೆ ಹೊತ್ತು ಓಡಲು ಅರ್ಹರಾಗುತ್ತಾರೆ. ಹಾಗೆ ಕೊಂಡದಲ್ಲಿ ಓಡುವ ಇತರೆ ದೇವತೆಗಳ ವಿವರ ನೋಡಿ. ಉಜ್ಜನಿ ಚೌಡಮ್ಮ, ನಿಡಸಾಲೆ ಚೌಡಮ್ಮ, ಕರಗ, ದೂಪುಂಡಿಗೆ ಹಾಗೂ ಕೊನೆಯಲ್ಲಿ ಆರು ಜನ ಹೆಬ್ಬಾರೆ ಹೊತ್ತ ಗುಡ್ಡರು. ಸವರ್ಣೀಯ ಗುಡ್ಡರು ಆ ಬೃಹತ್ ಕೆಂಡದ ರಾಶಿಯನ್ನು ಹಾದು ದೇವಸ್ಥಾನದ ಒಳಕ್ಕೆ ಪ್ರವೇಶಿಸುತ್ತಾರೆ. ಆದರೆ ಹೆಬ್ಬಾರೆ ಗುಡ್ಡರನ್ನು ಹೊರಗೆ ತಡೆಯಲಾಗುತ್ತದೆ. ಆ ಸಂದರ್ಭದಲ್ಲಿ ಹೆಬ್ಬಾರೆ ಗುಡ್ಡರು ಆವೇಶಭರಿತರಾಗಿ ಒಳನುಗ್ಗುವುದು, ಸವರ್ಣೀಯರು ತಡೆಯುವುದು ಇದೇ ತೆರನಾದ 'ಅಭಿನಯ' ನಡೆದು ಚೌಡಮ್ಮನ ಗುಡಿಯ ತೀರ್ಥವನ್ನು ಸಿಂಪಡಿಸಿದ ನಂತರ ಅವರು ಸಾವಧಾನಕ್ಕೆ ಬರುತ್ತಾರೆ.

ಹೆಬ್ಬಾರಮ್ಮ ಮತ್ತು ಚೌಡಮ್ಮಗಳ ಇಲ್ಲಿಯ ಸಂಬಂಧ ವಲಸೆ ಬಂದವರು ಮತ್ತು ಮೂಲವಾಗಿ ಇದ್ದವರ ನಡುವಿನ ಒಂದು ಕಾಲದ ಸಂಘರ್ಷವಾಗಿ ಮತ್ತು

ಇಂದು ಅದು ಹಬ್ಬದ ರೂಪದ ಸಾಮರಸ್ಯವಾಗಿ ನಮಗೆ ಕಾಣುತ್ತಿದೆಯೇ? ಆದರೆ ಚೌಡಮ್ಮ ಮತ್ತು ಹೆಬ್ಬಾರಮ್ಮ ಇಬ್ಬರೂ ಕೊಂಡ ಹಾಯುವುದರಿಂದ ಒಂದು ಕಾಲಕ್ಕೆ ಈ ಇಬ್ಬರೂ 'ಸತಿ'ಯರಾದ ಮಹಿಳೆಯರಿರಬಹುದೇ? ಈ ಎಲ್ಲಾ ದೇವರ ಪ್ರತೀಕಗಳಿಗಿಂತ ಪ್ರಪ್ರಥಮವಾಗಿ ಕೊಂಡದಲ್ಲಿ ಓಡುವ ಕರಗ ಏನನ್ನು ಸಂಕೇತಿಸುತ್ತದೆ? ಬಹುಶಃ 'ಕರಗ' ಚೌಡಮ್ಮ ಮತ್ತು ಹೆಬ್ಬಾರಮ್ಮನಿಗಿಂತ ಪುರಾತನವಾದ ದೈವೀ ಕಲ್ಪನೆ. ಸಮೃದ್ಧಿಯನ್ನು ಹಾರೈಸುವ ಆ ಮೂಲಕ ಸೃಷ್ಟಿಗೆ ಕಾರಣವಾದ ಸ್ತ್ರೀಯ ಯೋನಿಯನ್ನು ಸಂಕೇತಿಸುವ ಕರಗ ಶಿಲಾಯುಗದಷ್ಟು ಹಿಂದಿನ ಕಲ್ಪನೆಗೆ ನಮ್ಮನ್ನು ಕೊಂಡೊಯ್ಯುತ್ತದೆ. ನಮ್ಮ ಬಯಲು ಸೀಮೆಯ ಅನೇಕ ಗ್ರಾಮದೇವತೆಯರ ಹಬ್ಬದಲ್ಲಿ ಈ ಕರಗ ಮುಂಚೂಣಿಯಲ್ಲಿ ಇದ್ದೇ ಇರಬೇಕು. ಉಜ್ಜನಿಯಲ್ಲಿ 'ಕರಗದ ಪಾಲು' ಮತ್ತು 'ಕರಡಿ ಪಾಲು' ಎಂಬ ಎರಡು ಪ್ರತ್ಯೇಕ ಬಳಿಗಳಿದ್ದು, ಆ ಕಥೆಗಳು ವಲಸೆಗಾರರಾಗಿ ಉಜ್ಜನಿಗೆ ಬಂದು ನೆಲೆಸಿದವರ ಕಥೆಗಳನ್ನೇ ಹೇಳುತ್ತವೆ.

ಈ ಪ್ರದೇಶದ ಮಲ್ಲಪ್ಪನಗುಡ್ಡ, ಅಯ್ಯನಗುಡ್ಡ, ಕಂಬದಗುಡ್ಡಗಳಲ್ಲಿ ಇರುವ ಗುಹೆಗಳು ಒಂದು ಕಾಲಕ್ಕೆ ಅಲ್ಲಿದ್ದ ತಾಂತ್ರಿಕ ಪಂಥದ ಪ್ರಚಾರತೆಯನ್ನು ಹೇಳುತ್ತದೆ. ಉಜ್ಜನಿ ಮತ್ತು ಹುಲಿಯೂರುದುರ್ಗದ ನಡುವೆ ಇರುವ ಹೇಮಗಿರಿ ಬೆಟ್ಟದಲ್ಲಿನ 'ಕಾಲಭೈರವನ' ಗುಹೆ ಕಾಳಾಮುಖ ಪಂಥದ ಅಸ್ತಿತ್ವವನ್ನು ಹೇಳುತ್ತದಲ್ಲದೆ, ಇಂದಿಗೂ ಬಹುಜನಪ್ರಿಯವಾಗಿರುವ ಅಲ್ಲಿನ ಜಾತ್ರೆ ಅಂಥ ಅನೇಕ ಸಾಂಕೇತಿಕ ಆಚರಣೆಗಳ ಆಗರವಾಗಿದೆ. ನಾವೆಲ್ಲಾ ಚಿಕ್ಕಂದಿನಲ್ಲಿ ಆ ಬೆಟ್ಟ ಏರಿ, ಭೈರವನ ದರ್ಶನ ಪಡೆದು, ಅನೇಕ ಗುಹೆಗಳನ್ನು ಬಗ್ಗಿ ಬಗ್ಗಿ ನೋಡಿ, ಕತ್ತಲೆಗೆ ಹೆದರಿ, ಹಿರಿಯರು ಹೇಳುತ್ತಿದ್ದ ರಾತ್ರಿಯಲ್ಲಿ ಓಡಾಡುವ ನಿಶಾಚರ ಸಿದ್ಧರನ್ನು ನೆನಪಿಸಿಕೊಂಡು ಭಯದಿಂದ ಓಡೋಡಿ ಜಾತ್ರೆ ಸೇರಿದ ಪ್ರಸಂಗಗಳೂ ಇವೆ.

ನಮ್ಮ ಮನೆಯಲ್ಲಿ ನಡೆಯುತ್ತಿದ್ದ ಮತ್ತೊಂದು ಪ್ರಸಂಗವನ್ನು ಈಗಲೇ ಹೇಳಿ ಬಿಡುತ್ತೇನೆ. ನಾವು ನಂಜನಗೂಡಿನ ನಂಜುಂಡನ ಪಂಥಕ್ಕೆ ಸೇರಿದವರು ಎಂದು ನಮ್ಮ ಹಿರಿಯರ ನಂಬಿಕೆ. ಯಾಕೆಂದರೆ ಮಲೆಮಾದೇಶ್ವರ, ಮಂಟೇಸ್ವಾಮಿ, ಭೈರವ, ತಿರುಪತಿವೆಂಕಟರಮಣ, ಓದೇಶ್ವರ(ವೈದ್ಯನಾಥೇಶ್ವರ) ಇತ್ಯಾದಿಯಾಗಿ ಅನೇಕ ದೈವ ಪಂಥಗಳು ನಮ್ಮಲ್ಲಿ ರೂಢಿಯಲ್ಲಿವೆ. ಮೊದಲಿಗೆ ಆಕಾರವಿಲ್ಲದ ದೈವವನ್ನು, ಆನಂತರ ಗ್ರಾಮದೇವತೆಯರನ್ನೂ ಆರಾಧಿಸುತ್ತಿದ್ದ ಜನ, ನಂತರದಲ್ಲಿ ಈ ಗಂಡು ದೈವಗಳ ಪಂಥಗಳಿಗೆ ಸೇರಿದ್ದು ಒಂದು ಚಾರಿತ್ರಿಕ ಕಾಲದಲ್ಲಿಯೇ. ಮಧ್ಯಕಾಲೀನ ಕರ್ನಾಟಕ ಅಂಥ ಒಂದು ಚಾರಿತ್ರಿಕಘಟ್ಟ. ಶಂಕರಾಚಾರ್ಯ ರಾಮಾನುಚಾರ್ಯ ಮತ್ತು ಮಧ್ವಾಚಾರ್ಯರು ತಮ್ಮ ವೈದಿಕ ಮೌಲ್ಯಗಳ ಪುನರುತ್ಥಾನಕ್ಕೆ ಪ್ರಯತ್ನಪಟ್ಟ ಸಂದರ್ಭಗಳಲ್ಲಿಯೇ, ಅನೇಕ ದೇಸಿ ಪಂಥಗಳು ಕೂಡ ತಮ್ಮ ತಮ್ಮ ಪರಂಪರೆಯ

PDF created with pdfFactory Pro trial version www.pdffactory.com

ಉಳಿವಿಗಾಗಿ ಹೋರಾಟ ನಡೆಸುತ್ತಿದ್ದವು. ಈ ಸಂದರ್ಭದಲ್ಲಿಯೇ ಶೈವ ಮತ್ತು ವೈಷ್ಣವ ಪಂಥಗಳು ತಮ್ಮ ತಮ್ಮ ಜನಪ್ರಿಯತೆಗಾಗಿ ಅನೇಕ ಹೊಸ ಹೊಸ ಪಂಥಗಳನ್ನು ಹುಟ್ಟುಹಾಕಿದವು. ಆದರೆ ದೇಸಿ ಪಂಥಗಳನ್ನು ಮುನ್ನಡೆಸಿದ ಮಲೆಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಭೈರವ ಹಾಗೂ ತಿರುಪತಿ ವೆಂಕಟರಮಣ ಹೆಚ್ಚು ಜನಪ್ರಿಯರಾದರು. ತಿರುಪತಿಯ ದಾಸಯ್ಯಗಳು, ಚುಂಚನಗಿರಿಯ ಜೋಗಪ್ಪಗಳು, ಮಾದಪ್ಪನ ಕಂಸಾಳೆ ಗುಡ್ಡರು ಹಾಗೂ ಮಂಟೆಸ್ವಾಮಿಯ ನೀಲಗಾರರು ಒಂದು ರೀತಿಯಲ್ಲಿ ದೇಸಿ ಪುರೋಹಿತರಾಗಿ ಸ್ಥಳೀಯ ಜೀವನಕ್ರಮಗಳ ಚೌಕಟ್ಟಿನಲ್ಲಿಯೇ ತಮ್ಮ ತಮ್ಮ ಪಂಥಕ್ಕಾಗಿ ಭಕ್ತರನ್ನು ಸಂಪಾದಿಸಿದರು. ಉತ್ತರಕರ್ನಾಟಕದ ಯಲ್ಲಮ್ಮ, ಮೈಲಾರಲಿಂಗ ಹಾಗೂ ಅನೇಕ ಸೂಫಿ ಪಂಥಗಳೂ ಇದನ್ನೇ ಮಾಡಿದ್ದು. ಇಂಥ ಸನ್ನಿವೇಶದಲ್ಲಿ ನಮ್ಮ ಮನೆತನ, ಹಾಗೆಯೇ ನಮ್ಮೂರಿನ ಇನ್ನೂ ಹತ್ತಾರು ಮನೆತನಗಳು ನಂಜನಗೂಡಿನ ನಂಜುಂಡನನ್ನು ತಮ್ಮ ಇಷ್ಟದೈವವಾಗಿ ಇಟ್ಟುಕೊಂಡಿದ್ದು ಒಂದು ಆಶ್ಚರ್ಯ. ಆದರೇನಂತೆ, ಭೈರವ ನಮಗೆ ದೂರವಲ್ಲ. ಉದಾಹರಣೆಗೆ ನನ್ನ ಹೆಸರೇ ಭೈರವನ ಮೂಲದಿಂದ ನಿಷ್ಪತ್ತಿಗೊಂಡಿದ್ದು. ಭೈರವಲಿಂಗ 'ಬೋರಲಿಂಗ'ವಾಯಿತು ಅಷ್ಟೇ. ಅದಿರಲಿ, ಈಗ ನಾನು ನನ್ನ ಕುಟುಂಬದಲ್ಲಿ ನಡೆಯುತ್ತಿದ್ದ ಆ ವಿಶಿಷ್ಟ ಆಚರಣೆಯ ವಿಷಯಕ್ಕೆ ಬರುತ್ತೇನೆ.

ವರ್ಷಕ್ಕೆ ಒಂದುಬಾರಿ ನಾವು 'ಭಂಗಿಸೇವೆ' ಎಂಬ ಒಂದು ಸಂಪ್ರದಾಯವನ್ನು ತಪ್ಪದೆ ನಡೆಸುತ್ತಿದ್ದೆವು. ಇದು ಒಂದು ರೀತಿಯಲ್ಲಿ ಚುಂಚನಗಿರಿಯ ಭೈರವನಿಗೂ ತಿರುಪತಿಯ ವೆಂಕಟರಮಣನಿಗೂ ಒಪ್ಪಿಸುವ ಹರಕೆಯ ರೂಪದ ಆಚರಣೆ. ಭೈರವನ ಪ್ರತಿನಿಧಿಯಾದ ಜೋಗಪ್ಪನನ್ನೂ, ವೆಂಕಟರಮಣನ ಪ್ರತಿನಿಧಿಯಾದ ದಾಸಪ್ಪನನ್ನೂ, ನಾವು ಮನೆಗೆ ಅಹ್ವಾನಿಸುತ್ತಿದ್ದೆವು. ಅವರು ಬಂದು ನಡುಮನೆಯಲ್ಲಿ ಹಾಸಿದ ಬಿಳಿವಸ್ತ್ರದ ಮೇಲೆ ತಮ್ಮ ತಮ್ಮ ದೇವರುಗಳನ್ನು ಇಟ್ಟು, ವಿಧ ವಿಧವಾದ ಹೂಗಳಿಂದ ಅಲಂಕರಿಸುತ್ತಿದ್ದರು. ಆ ದೇವರುಗಳ ಮುಂದೆ ಹರಡಿದ ಬಾಳೆ ಎಲೆ ಮೇಲೆ 'ಎಡೆ' ಏರ್ಪಡಿಸಲಾಗುತ್ತಿತ್ತು. ಆ ಎಡೆಯಲ್ಲಿ ಅನ್ನ, ಮಾಂಸದ ಅಡುಗೆ, ಹೆಂಡ ಹಾಗೂ ಭಂಗಿ ಕೊಳವೆ ಕಡ್ಡಾಯವಾಗಿ ಇರಲೇಬೇಕು. ಅದೊಂದು ರೀತಿಯಲ್ಲಿ ವಾಮಾಚಾರದ ಆಚರಣೆಯಂತಿರುತ್ತಿತ್ತು. ದಾಸಪ್ಪ ಜೋಗಪ್ಪ ಇಬ್ಬರೂ ತಮ್ಮ ತಮ್ಮ ದೈವಗಳ ಬಗ್ಗೆ ಹೊಗಳಿಕೆಗಳನ್ನು ಮಾಡಿದ ನಂತರ ಹೆಂಡದ ಸೇವನೆಯೂ, ಬಾಡಿನ ಊಟವೂ ಆಗುತ್ತಿತ್ತು. ವೆಂಕಟರಮಣ ಮತ್ತು ಭೈರವನ ಈ ಸಮಾಗಮ ಅತ್ಯಂತ ಕುತೂಹಲಕಾರಿ. ಜನಸಾಮಾನ್ಯರು ತಮ್ಮಲ್ಲಿ ತಾವೇ ಏರ್ಪಡಿಸಿಕೊಂಡ ಈ ಶೈವ–ವೈಷ್ಣವ ಸಾಮರಸ್ಯ ವೈದಿಕ ಮೂಲದ

ಆಚಾರ್ಯರುಗಳಿಗೆ ಗೊತ್ತಿರಲಿಲ್ಲವೆಂದೇ ಕಾಣುತ್ತದೆ.[೪] ತಮ್ಮ ತಮ್ಮ ಪಂಥಗಳ ಉನ್ನತಿಗಾಗಿ ಬೊಬ್ಬೆ ಹಾಕುತ್ತಿದ್ದ ದೊಡ್ಡ ದೊಡ್ಡ ಪಂಡಿತರುಗಳ ಚಾಣಾಕ್ಷತನವನ್ನು ಈ ರೀತಿಯಲ್ಲಿ ಹೆಂಡ ಮತ್ತು ಬಾಡಿನ ವಾಸನೆಯಲ್ಲಿ ಐಕ್ಯಗೊಳಿಸಿದ ನಮ್ಮ ಜನ ನಿಜಕ್ಕೂ ಅಭಿನಂದನಾರ್ಹರು.

ಉಜ್ಜನಿ ಚೌಡಮ್ಮನ ಬಗ್ಗೆ ಈ ಹಿಂದೆ ಹೇಳಿದೆ. ನಾವೆಲ್ಲ ಅಷ್ಟು ವಿಜೃಂಭಣೆಯಿಂದ ಆರಾಧಿಸುತ್ತಿದ್ದ ಚೌಡಮ್ಮ ನಮ್ಮ ಮನೆದೇವರಲ್ಲ. ನಮ್ಮ ಭಾಗದಲ್ಲಿ ಚೌಡಮ್ಮನ ಒಕ್ಕಲು ಹೆಚ್ಚಾಗಿದೆಯಾದರೂ ನಮ್ಮ ಮನೆದೇವರು ಚೌಡಮ್ಮನಾಗಿರಲಿಲ್ಲ. ನಮ್ಮೂರಿಂದ ಸುಮಾರು ಇಪ್ಪತ್ತು. ಕಿ.ಮೀ. ದೂರದಲ್ಲಿರುವ ಶಿಂಷಾ ನದಿಯನ್ನು ದಾಟಿ, ಆ ಕಡೆ ಹೋದರೆ ನಾಗಮಂಗಲ ತಾಲೂಕಿನಲ್ಲಿ ಇರುವ ತೂಬಿನಕೆರೆ 'ಪಟಲದಮ್ಮ' ನಮ್ಮ ಮನೆದೇವರು. ಈಗಲೂ ವರ್ಷಕ್ಕೊಂದು ಸಲ ಆ ಹಬ್ಬಕ್ಕೆ ನಾವು ಹೋಗಲೇಬೇಕು. ಅಂದರೆ ನಮ್ಮ ಪೂರ್ವಜರು ಒಂದಾನೊಂದು ಕಾಲಕ್ಕೆ ಅಲ್ಲಿಂದ ಇಲ್ಲಿಗೆ(ಕುಣಿಗಲ್ ತಾಲೂಕಿನ ಉಜ್ಜನಿ ಪಕ್ಕದ ಹಿತ್ತಲಪುರಕ್ಕೆ) ಬಂದು ಸೇರಿಕೊಂಡರು. ಹೀಗಾಗಿ ಪಟಲದಮ್ಮನೂ ಚೌಡಮ್ಮನೂ ನಮ್ಮ ಆರಾಧ್ಯ ದೇವತೆಯರಾದರೆ, ನಂಜನಗೂಡಿನ ನಂಜುಂಡ, ಚುಂಚನಗಿರಿಯ ಭೈರವ ಹಾಗೂ ಆಗಾಗ ತಿರುಪತಿ ವೆಂಕಟರಮಣ ನಮ್ಮ ನಮ್ಮ ಮುಖ್ಯ ದೇವರುಗಳಾಗಿ ನಿಂತರು.

ನಾಗಾರಾಧನೆ ಅತ್ಯಂತ ಪ್ರಾಚೀನವಾದದ್ದು ಎಂಬ ನಂಬಿಕೆ ಇದೆ. ಹಾಗೆ ನೋಡಿದರೆ ಕರಾವಳಿಯಲ್ಲಿ ಈಗಲೂ ಅತ್ಯಂತ ಜನಪ್ರಿಯವಾಗಿರುವ ನಾಗಾರಾಧನೆ ಅನೇಕ ಬುಡಕಟ್ಟುಗಳಲ್ಲಿ ಅಚ್ಚಳಿಯದ ನಂಬಿಕೆ ಉಳಿದಿದೆ. ನಮ್ಮಲ್ಲಿ ಕೂಡ ನಾಗಪ್ಪನ ಪೂಜೆ ಬಳಕೆಯಲ್ಲಿದೆ. ಅದನ್ನು 'ಮುನಿಯಪ್ಪನ ಸೇವೆ', 'ಮುನಿ ಮಾಡುವುದು' ಮುಂತಾಗಿ ಹೇಳುತ್ತಾರೆ. ಸಮೃದ್ಧವಾಗಿ ಬೆಳೆದ ಹೊಲದಲ್ಲಿ ಹಸುರಿನ ಕಾಲದಲ್ಲಿ ಈ ಸೇವೆ ಮಾಡಲಾಗುತ್ತದೆ. ಕುರಿ ಅಥವಾ ಕೋಳಿಯನ್ನು ಬಲಿ ಕೊಟ್ಟು ಮಾಡುವ ಈ ಸೇವೆಯಲ್ಲಿ ನಾಗಪ್ಪನಿಗೆ ಹಾಲಿನ ಬದಲು ಮಾಂಸಾಹಾರದ ಊಟ ಇಡಲಾಗುತ್ತದೆ. ಸಮೃದ್ಧಿ ಮತ್ತು ಸಂತಾನದ ಸಂಕೇತವಾದ ಈ 'ಮುನಿಸೇವೆ'ಯನ್ನು ಹೊಲದ ತುಂಬ ಹೊಸ ಬೆಳೆ ಬಂದಾಗ ಮಾಡುವುದರಲ್ಲಿ ಅರ್ಥವಿದೆ.

ಹೀಗೇಯೇ ಭೂತಪ್ಪ, ಮಾಯಮ್ಮ, ಮಾರಮ್ಮ, ದಂಡಿನಮ್ಮ ಮುಂತಾಗಿ ಹಲವು ದೇವದೇವತೆಯರ ಆರಾಧನೆ ನಡೆಯುತ್ತದೆ. ದವಸದಾನ್ಯಗಳನ್ನು ಹೊಕ್ಕಿ ಕಣದಲ್ಲಿ ರಾಶಿ ಮಾಡಿದಾಗ ಆರಾಧಿಸುವ ಸಮೃದ್ಧಿ ದೇವರುಗಳ ಆರಾಧನೆ ಅತ್ಯಂತ ಸಾಂಕೇತಿಕವಾಗಿ ನಡೆಯುತ್ತದೆ. ಸೂರ್ಯಗ್ರಹಣ ಮತ್ತು ಚಂದ್ರಗ್ರಹಣಗಳ ಸಂದರ್ಭದಲ್ಲಿ ಬರೆಯುವ ಮಂಡಲಗಳು ಮತ್ತು ಆರಾಧನಾ ಸ್ವರೂಪ ನಮ್ಮನ್ನು ಮಾಂತ್ರಿಕ ಲೋಕವೊಂದಕ್ಕೆ ಕರೆದೊಯ್ಯುತ್ತದೆ.

PDF created with pdfFactory Pro trial version www.pdffactory.com

ಉಜ್ಜನಿ ಚೌಡಮ್ಮನ ಗುಡಿಯಲ್ಲಿ ಹಾಗೂ ತೂಬಿನಕೆರೆ ಪಟಲದಮ್ಮನ ಗುಡಿಯಲ್ಲಿನ ಪ್ರವೇಶ ದ್ವಾರದಲ್ಲಿ ಇದ್ದ ಒಂದು ಕೆಂಪುಮುಖದ ಹಾಗೂ ಕರಿಮುಖದ ಬೃಹದಾಕಾರದ 'ಭೂತ'ಗಳು ಆಗಿನ ಕಾಲಕ್ಕೆ ನಮ್ಮ ಎದೆ ನಡುಗಿಸುತ್ತಿದ್ದವು. ಸುಮಾರು ೧೫ ಅಡಿ ಎತ್ತರ ಮತ್ತು ೩೦ ಅಡಿ ಸುತ್ತಳತೆಯ ಆ 'ರಾಕ್ಷಸರು' ನೋಡಲು ಸುಂದರ ಹಾಗೂ ಭಯಾನಕ. ಅವುಗಳಿಗೆ ಬಳಸಲಾಗಿದ್ದ ವಿವಿಧ ಬಣ್ಣಗಳು ಮತ್ತು ಅವುಗಳ ಸಂಯೋಜನೆ ಆಕರ್ಷಕ. ಆದರೆ ಒಟ್ಟಾರೆ ಮುಖಭಾವ ಕ್ರೂರ. ನನ್ನ ಅಪ್ಪ ಯಾವುದೇ ರಾಕ್ಷಸರ ಕಥೆ ಹೇಳಿದರೂ ನನ್ನ ಮುಂದೆ ದುತ್ತನೆ ಬಂದು ನಿಲ್ಲುತ್ತಿದ್ದ ಮೂರ್ತಿಗಳು ಅವೇ. ವಾಸ್ತವವಾಗಿ ಅವು ಚೌಡಮ್ಮನ ಕಾವಲು ಭಟರಷ್ಟೇ ಅಲ್ಲ, ಏಳೂರಿನ ಆಡಳಿತ ನೋಡಿಕೊಳ್ಳುತ್ತಿದ್ದ ಸೇವಕರು ಎಂಬುದು ಪ್ರತೀತಿ. ಕುದುರೆ ಏರಿ ಚೌಡಮ್ಮ ಹೊರಟರೆ, ಇವರು ಸದಾ ಕಾವಲು. ಒಂದು ಕಾಲದ ಮಾತೃಮೂಲ ಆಧಿಕಾರದ ಸಾಂಕೇತಿಕ ಚಿತ್ರ ಇದು. ಅತಿಮಾನುಷ ಶಕ್ತಿಗಳ ಆರಾಧನೆ, ದೇವಿ ಆರಾಧನೆಯ ಜೊತೆ ಜೊತೆಯಲ್ಲೇ ಬೆಳೆದು ಬಂದದ್ದಕ್ಕೆ ಇದೊಂದು ಉದಾಹರಣೆ ಕೂಡ. ಗ್ರಾಮದೇವತೆಯ ಹಬ್ಬಗಳ ಅವಿಭಾಜ್ಯ ಅಂಗವೆನಿಸಿದ 'ಸೋಮ'ಗಳ ಆರಾಧನೆ ಇದಕ್ಕೆ ಹತ್ತಿರವಾದದ್ದೆ. ಕರಿರಾಯ ಕೆಂಚರಾಯ ಎಂಬ ಸೋಮಗಳು ಸದಾ ಆಯಾ ದೇವಿಯ ಭಟರು. ದೇವಿಯ ಅನುಪಸ್ಥಿತಿಯಲ್ಲಿ ಎಲ್ಲ ಕಾರ್ಯಗಳನ್ನು ಕೈಗೊಳ್ಳುವರು ಅವರೇ. ಹೀಗೆ ಒಂದು ಗ್ರಾಮದೇವತೆಯ ಗುಡಿಯಲ್ಲಿನ ಕರಗ ಎಂಬ ಸಂಕೇತದ ಯೋನಿ ಸೂಚಕ ಆರಾಧನೆ, ಸರ್ಪದ ಮೂಲಕ ಆರಾಧಿಸುತ್ತಿದ್ದ ಲೈಂಗಿಕ ಸೂಚಕ ಆರಾಧನೆ, ಭೂತಗಳ ಮೂಲಕ ಕಾಣಲಾಗುತ್ತಿದ್ದ ಅತಿಮಾನುಷ ಶಕ್ತಿಗಳ ಆರಾಧನೆ, ಹೆಬ್ಬಾರೆ ಗುಡ್ಡರ ಮೂಲಕ ಮೂಲದ ಅಸ್ಪೃಶ್ಯರು ಮತ್ತು ವಲಸೆ ಬಂದು ಬೀಡುಬಿಟ್ಟ ಕೃಷಿಕ ಸಮುದಾಯಗಳ ನಡುವಿನ ಘರ್ಷಣೆ ಹಾಗೂ ಸಾಮರಸ್ಯಕ್ಕೆ ನಮಗೆ ಅತ್ಯಂತ ಕುತೂಹಲದ ಸಂಗತಿಗಳಾಗಿ ಕಾಣಿಸುತ್ತವೆ.

ನಾನು ಇಷ್ಟೆಲ್ಲಾ ಹೇಳಿದ್ದಕ್ಕೆ ಕಾರಣಗಳಿವೆ. ಬುಡಕಟ್ಟುಗಳ ದೈವಾರಾಧನೆ ಬಗ್ಗೆ ಹೇಳಲು ಹೊರಟ ನಾನು ಇದುವರೆಗೆ ನನ್ನೂರಿನ ದೈವಾರಾಧನೆಯ ವಿವರಗಳನ್ನು ಕೊಡುತ್ತಾ ಕೂತೆ. ನನ್ನ ದೃಷ್ಟಿಯಲ್ಲಿ ಇದರ ಅವಶ್ಯಕತೆ ಇತ್ತು. ಯಾಕೆಂದರೆ, ಇಂದಿನ ನಾಗರಿಕ ಸಮಾಜದ ಅನೇಕ ಸಮುದಾಯಗಳು ಒಂದು ಕಾಲದ ಬುಡಕಟ್ಟೊಂದರ ಕವಲುಗಳಲ್ಲದೆ ಮತ್ತೇನೂ ಅಲ್ಲ. ನಾವೆಷ್ಟೇ ಮುಂದುವರಿದಿದ್ದೇವೆ ಎಂದರೂ ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಿ, ಪರಂಪರೆಯ ಎಳೆಯಾಗಿ ಹೇಗೆ ಅವು ನಮ್ಮನ್ನು ಪ್ರಭಾವಿಸುತ್ತವೆ ಎಂಬುದನ್ನು ಈ ಮೂಲಕ ಹೇಳಲು ಪ್ರಯತ್ನಿಸಿದ್ದೇನೆ.

ಇಂದು ನಾವು ಎಷ್ಟೇ ನಾಸ್ತಿಕರು ಎಂದುಕೊಂಡರೂ ದೇವರುಗಳ ಸಂಪರ್ಕ ಕಳಚಿಕೊಂಡು ಇರಲು ಸಾಧ್ಯವೇ ಇಲ್ಲ. ನಾವು ಬೇಡವೆಂದರೂ ದೇವರುಗಳು ನಮಗೆ ಹತ್ತಿರವಾಗುತ್ತವೆ. ನಾವು ಆರಾಧಿಸಲೇಬೇಕೆಂದೇನೂ ಇಲ್ಲ. ದ್ವೇಷಿಸುವುದು ಕೂಡ ಆರಾಧನೆಯ ಇನ್ನೊಂದು ತುದಿಯೇ ತಾನೇ? ಪರಸ್ಪರ ಸಂಪರ್ಕವಂತೂ ಕಡಿದು ಹಾಕುವಂತದ್ದಲ್ಲ. ನಮ್ಮ ದೃಷ್ಟಿ ಸಕಾರಾತ್ಮಕವೋ ನಕಾರಾತ್ಮಕವೋ. ಆದರೆ ದೇವರುಗಳ ಪ್ರಭಾವದಿಂದ ನಾವು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದು ನನ್ನ ತರ್ಕ. ನನ್ನ ಈ ಮಾತಿಗೆ ಪುಷ್ಟಿಯೊದಗಿಸುವಂಥ ಖ್ಯಾತ ಚಿಂತಕ ಆಶಿಶ್‌ನಂದಿ ಅವರ ಮಾತುಗಳನ್ನು ನೋಡಿ. "ನನಗೆ ದೇವರುಗಳನ್ನು ಸಮೀಪಿಸುವ ಇಷ್ಟವಿಲ್ಲದಿದ್ದರೂ ಒತ್ತಾಯದಿಂದ ಅವರೇ ನನ್ನ ಸಮೀಪಕ್ಕೆ ಬರುತ್ತಿದ್ದಾರೆ. ಈ ದೇವ ದೇವಿಯರು, ನಾನು ಹಾಗೆ ಹೇಳಬಹುದಾದರೆ, ಅನಿವಾರ್ಯ ತರ್ಕವೆಂಬಂತೆ ನಮ್ಮ ಬದುಕಿಗೆ ಬರುತ್ತಾರೆ. ಜಾಡ್ಯದಂತೆ ಈ ಬದುಕಿಗೆ ಅಂಟುತ್ತಾರೆ, ಆವರಿಸಿ ಆಕ್ರಮಿಸಿ ನಾವು ಬಯಸದಿದ್ದರೂ ನಮ್ಮ ಬದುಕಿನಾದ್ಯಂತ ವ್ಯಾಪಿಸುತ್ತಾರೆ. ಮೇಲ್ನೋಟಕ್ಕೆ ದೇವದೇವಿಯರನ್ನು ನಿರಾಕರಿಸುವಂತೆ ಕಾಣುವ ಧರ್ಮಗಳಲ್ಲೂ ಕೂಡಾ, ದೇವತೆಗಳಿಂದ ತುಂಬಿದ ಧರ್ಮಗಳಲ್ಲಿ ಕಾಣುವ ಕೆಲವು ರೂಢಿಗಳ ಮೂಲಕ, ದೇವದೇವಿಯರು ಪ್ರವೇಶ ಮಾಡುತ್ತಾರೆ. ಅತ್ಯಂತ, ನಿಷ್ಠ ಏಕದೇವತಾವಾದಿ ಹಾಗೂ ಕಟು ಮೂರ್ತಿವಿರೋಧಿ ಧರ್ಮಗಳಲ್ಲೂ ಕೂಡಾ ದೇವತೆಗಳು ಇದ್ದಾರೆ. ದೇವರುಗಳು ನಮ್ಮ ಬದುಕನ್ನು ವ್ಯಾಪಿಸಿಕೊಂಡಿದ್ದಾರೆ ಎಂದು ಹೇಳಿದ್ದರ ಅರ್ಥವು ಒಬ್ಬ ಆಧುನಿಕಗೊಂಡ ನಗರೀಕೃತ ಸುಸಂಸ್ಕೃತ ವ್ಯಕ್ತಿಯು ಹೀಗೆ ಹೇಳುವುದಕ್ಕಿಂತ ಭಿನ್ನವಾದದ್ದು ಅಥವಾ ಒಬ್ಬ ವಿಚಾರವಾದಿಯು ದೇವರು ತನ್ನ ಭಕ್ತನ ಬದುಕನ್ನು ವ್ಯಾಪಿಸುವ ಪ್ರಕ್ರಿಯೆಯನ್ನು ಗ್ರಹಿಸುವುದಕ್ಕಿಂತ ವಿಭಿನ್ನವಾದದ್ದು. ನಾನು ಹೇಳುತ್ತಿರುವುದು ದೇವದೇವಿಯರು ಹೆಚ್ಚು ಕಮ್ಮಿ ಮನುಷ್ಯ ಅರೆಮನುಷ್ಯ ರೂಪಗಳಲ್ಲಿಯೇ ನಮ್ಮ ಬದುಕನ್ನು ಪ್ರವೇಶಿಸುತ್ತಾರೆ ಎನ್ನುವುದನ್ನು. ಪ್ರಪಂಚದ ಈ ಭಾಗದಲ್ಲಿ, ಅಂದರೆ ದಕ್ಷಿಣ ಏಶಿಯಾದಲ್ಲಿ, ದೇವರು ಮತ್ತು ಮನುಷ್ಯರು ಪರಸ್ಪರ ಅಷ್ಟೇನೂ ದೂರದವರಲ್ಲ. ಬೇರೆ ಹಲವು ಸಂಸ್ಕೃತಿಗಳಲ್ಲಿ ಕಾಣುವುದಕ್ಕಿಂತ ಭಿನ್ನವಾಗಿ ಇಲ್ಲಿ ದೇವರು ಮತ್ತು ಮಾನವರ ನಡುವೆ ಅಂತರ ಕಡಿಮೆ. ಆದ್ದರಿಂದಲೇ ಇಲ್ಲಿ ಮನುಷ್ಯ ಕೆಲವೊಮ್ಮೆ ದೇವರನ್ನು ತನಗೆ ಬೇಕಾದಂತೆ ಬಣ್ಣಿಸಿಕೊಳ್ಳಲು ಸಾಧ್ಯ. ತಪಸ್ಸಿನ ಮೂಲಕ, ವಿವಿಧ ಆಚಾರಗಳ ಮೂಲಕ ಅಥವಾ ಕೆಲವೊಮ್ಮೆ ಅಧಿಕ ಶಕ್ತಿಯ ಬೇರೊಂದು ದೇವರನ್ನು ಒಲಿಸಿಕೊಳ್ಳುವ ಮೂಲಕ ಆತ ಇದನ್ನು ಸಾಧಿಸಿಕೊಳ್ಳಬಲ್ಲ. ಅರ್ಥಾತ್ ಮಾನವರು ಯಾವತ್ತೂ ದೇವರಿಗಿಂತ ಕೆಳಗಿನ ಸ್ತರದಲ್ಲೇ ಇರುವುದು ಅನಿವಾರ್ಯವೇನೂ ಅಲ್ಲ. ಅದ್ದರಿಂದ ಇಲ್ಲಿ ದೇವರು

PDF created with pdfFactory Pro trial version www.pdffactory.com

ಮತ್ತು ಮಾನವರ ನಡುವೆ ಬೃಹತ್ ಕಂದರವೇನೂ ಇಲ್ಲ. ದೇವದೇವಿಯರು ಅದರಲ್ಲೂ ವಾಮಮಾರ್ಗದ ದೇವದೇವಿಯರು ಆಯಾ ಕಾಲದ ಸಾಮಾಜಿಕ ಚಲನೆಗಳ ಮೇಲೆ ಬೆಳಕು ಚೆಲ್ಲುತ್ತಾರೆ. ಆಯಾ ಸಮಾಜ ಸಂಸ್ಕೃತಿಯ ಭಯ ಆತಂಕಗಳನ್ನು ಪ್ರತಿನಿಧಿಸುತ್ತಾರೆ. ಧರ್ಮಶಾಸ್ತ್ರಗಳನ್ನು ಎಷ್ಟೇ ಶಿಸ್ತಿನಿಂದ ವಿಶ್ಲೇಷಿಸಿದರೂ ಅಥವಾ ಉಚ್ಚ ಸಂಸ್ಕೃತಿಯ ದೇವತೆಗಳನ್ನು ಎಷ್ಟೇ ಶಾಸ್ತ್ರೀಯವಾಗಿ ಅಭ್ಯಾಸ ಮಾಡಿದರೂ ದೊರಕದ ಒಳನೋಟಗಳು ನಮಗಿಲ್ಲಿ ಲಭ್ಯವಾಗುತ್ತವೆ. ದೇವದೇವಿಯರು ಈ ಜಗತ್ತೇನಿದೆ ಅದು, ಭೂತ ದೆವ್ವ ರಾಕ್ಷಸರ ಇನ್ನೊಂದು ಜಗತ್ತಿನೊಂದಿಗೆ ಪೂರ್ಣವಾಗಿ ಬೆಸೆದುಕೊಂಡಿದೆ. ಆ ಜಗತ್ತಿಲ್ಲದೇ ಈ ಜಗತ್ತು ಇಲ್ಲ ಎನ್ನುವಷ್ಟರಮಟ್ಟಿಗೆ ಅವುಗಳ ನಡುವೆ ಸಂಬಂಧವಿದೆ. ಇದನ್ನು ಸುರ ಅಸುರರ ಕಲ್ಪನೆಯೆನ್ನಬಹುದು. ಆದಿತ್ಯ ದೈತ್ಯರ ಕಲ್ಪನೆಯೆನ್ನಬಹುದು, ಒಟ್ಟಿನಲ್ಲಿ ದೇವತೆಗಳು ಆ ಇನ್ನೊಂದು ಜಗತ್ತಿನ ತಮ್ಮ ಪ್ರತಿದ್ವಂದ್ವಗಳೊಂದಿಗೆ ಸೇರದೇ ಸಂಪೂರ್ಣರಾಗುವುದಿಲ್ಲ. ಈ ಒಟ್ಟು ಜಗತ್ತನ್ನು ನೀವು ಬೇಕಾದರೆ ಉದ್ದ, ಅಗಲ, ಆಳಗಳಿರುವ ಒಂದು ಅವಕಾಶವೆಂದು ಕಲ್ಪಿಸಬಹುದು. ಈ ಅವಕಾಶದ ಒಂದರ್ಧದಲ್ಲಿ ದೇವದೇವಿಯರಿದ್ದಾರೆ. ಅವರಲ್ಲಿ ಮತ್ತೆ ಒಳ್ಳೆಯವರು ಕೆಟ್ಟವರು ಸದಾಚಾರದವರು ವಾಮಾಚಾರದವರು ಬೇರೆ ಬೇರೆ ಜಾಗಗಳಲ್ಲಿದ್ದಾರೆ. ಹಾಗೆಯೇ ಇನ್ನೊಂದು ಇಡಿಯ ಅರ್ಧದಲ್ಲಿ ಭೂತ ದೆವ್ವಗಳ ಜಗತ್ತಿದ್ದು ಅದು ಮೊದಲರ್ಧದೊಂದಿಗೆ ಬೇರ್ಪಡಿ ಸಲಾಗದಂತೆ ಬೆಸೆದುಕೊಂಡಿದೆ. ಹೀಗೆ ದೇವರು ಮತ್ತು ದಾನವರ ಜಗತ್ತಿನ ನಡುವೆ ಸೀಮಾರೇಖೆ ಮಸುಕಾಗಿರುವ ಕಾರಣದಿಂದಲೇ ನಮ್ಮ ಸಮಾಜದಲ್ಲಿ ಒಂದು ವಿಶಿಷ್ಟ ರೀತಿಯ ಸಹನೆ ಸಹಬಾಳ್ವೆಗಳು ಸಾಧ್ಯವಾಗಿವೆ."[೫]

ಈ ದೇವರುಗಳ ಜಗತ್ತು ಅತ್ಯಂತ ಸಂಕೀರ್ಣವಾದುದು. ಈ ಜಗತ್ತಿನ ಸಾಂಸ್ಕೃತಿಕ ಮುಖ ಒಂದಾದರೆ ಸಾಮಾಜಿಕ ಮುಖ ಇನ್ನೊಂದು. ಇವೆರಡನ್ನು ಒಟ್ಟಾಗಿ ಇಟ್ಟೇ ನಾವು ನೋಡಬೇಕಾಗುತ್ತದೆ. ದೇವರು ಸೃಷ್ಟಿಯಾದದ್ದು ಹೇಗೆ? ಇದೊಂದು ಜಟಿಲ ಪ್ರಶ್ನೆ. ಲಕ್ಷಾಂತರ ವರ್ಷಗಳ ಮಾನವನ ಇತಿಹಾಸದಲ್ಲಿ ನಿರಂತರವಾಗಿ ವಿಕಾಸ ಹೊಂದುತ್ತಾ ಬಂದ ಅವನ ಪ್ರಜೆ ಇವತ್ತಿಗೂ ಅದೇ ವಿಕಾಸದ ಹಾದಿಯಲ್ಲೇ ಇದೆ. ಮೆದುಳು ಬೆಳೆಯುತ್ತಾ ಹೋದಂತೆ ಅವನ ಪ್ರಜ್ಞೆ ಕೂಡ ಹಲವು ಹಂತಗಳಲ್ಲಿ ವಿಕಸಿಸುತ್ತಾ ನಡೆದಿದೆ. ಆದ್ದರಿಂದ ಸಾಂಸ್ಕೃತಿಕವಾಗಿ ಇವೊತ್ತು ನಮ್ಮ ಕಣ್ಣ ಮುಂದಿರುವ ಯಾವುದೇ ಅಂಶವೂ ದಿಢೀರನೆ ಅವತರಿಸಿದ್ದಂತೂ ಅಲ್ಲ. ಮಾನವಶಾಸ್ತ್ರದ ಆಳ ಅಧ್ಯಯನವಷ್ಟೇ ಇದಕ್ಕೆಲ್ಲ ಉತ್ತರಿಸಬೇಕು. ಆದರೂ ಉತ್ತರ ಅಷ್ಟು ಸುಲಭವಲ್ಲ. ಆದರೂ ಇವತ್ತಿನ ಮನುಷ್ಯ ಯಾವ ರೀತಿಯಲ್ಲೇ ಬದುಕುತ್ತಿರಲಿ, ಎಷ್ಟೇ ನಾಗರಿಕನಾಗಿ ತನ್ನ ವ್ಯವಹಾರವನ್ನು ವಿಸ್ತರಿಸಿಕೊಂಡಿರಲಿ, ದೇವರು ಇಲ್ಲವೇ ಇಲ್ಲ

ಎಂಬ ನಾಸ್ತಿಕವಾದವನ್ನು ಮಂಡಿಸುವಷ್ಟು ಪ್ರಜ್ಞಾವಂತನಾಗಿರಲಿ, ಆ ಎಲ್ಲಾ ಅನಿಸಿಕೆಗಳಿಗೆ ಒಂದು ಸುದೀರ್ಘ ಇತಿಹಾಸವಂತೂ ಇದೆ. ನಾಸ್ತಿಕವಾದ ಹುಟ್ಟುವುದು ಕೂಡ ಅಸ್ತಿತ್ವದಲ್ಲಿರುವ ಯಾವುದೋ ಒಂದರ ಆಧಾರದ ಮೇಲೆ ತಾನೇ? ಹೀಗೆಂದು ದೇವರು ಇದ್ದಾನೆ ಅಥವಾ ಇಲ್ಲ ಎಂಬ ತರ್ಕಮಂಡನೆಯ ಕಾರ್ಯವನ್ನು ನಾನಿಲ್ಲಿ ಮಾಡುತ್ತಿಲ್ಲ. ಆದರೆ ದೇವರನ್ನು ಮನುಷ್ಯನೇ ಸೃಷ್ಟಿಸಿದ ಪ್ರಕ್ರಿಯೆ ಹೇಗೆ ಆರಂಭವಾಯಿತು ಎಂಬುದೇ ಇಲ್ಲಿಯ ಪ್ರಶ್ನೆ.

ಮನುಷ್ಯ ಎರಡು ಕಾರಣಕ್ಕೆ ದೇವರನ್ನು ಕಲ್ಪಿಸಿಕೊಂಡ ಎಂಬ ವಾದಗಳಿವೆ. ಪ್ರಕೃತಿಯ ಎಲ್ಲ ವೈಚಿತ್ರ್ಯಗಳನ್ನು, ಬಿಡಿಸಲಾರದ ನಿಗೂಢಗಳನ್ನು ಗಮನಿಸಿದ ಆದಿಮ ಮನುಷ್ಯ ತನ್ನನ್ನೂ ಮೀರಿದ ಅಗೋಚರ ಶಕ್ತಿಯೊಂದಿದೆ ಎಂದು ನಂಬಿದ. ಆ ಶಕ್ತಿಯನ್ನು ಒಲಿಸಿಕೊಳ್ಳುವ ಮೂಲಕ ತನ್ನ ಒಳ್ಳೆಯದನ್ನು ಸಾಧಿಸಿಕೊಳ್ಳಬೇಕು ಎಂಬುದು ಅವನ ಉದ್ದೇಶವಾಯಿತು. ಯಾಕೆಂದರೆ ನಿಸರ್ಗದ ಒಡಲಲ್ಲಿ ಬಾಳುತ್ತಿದ್ದ ಅವನಿಗೆ ಸಹಜವಾಗಿಯೇ ನೂರೆಂಟು ಕಂಟಕಗಳು ಎದುರಾಗುತ್ತಿದ್ದವು. ಆದ್ದರಿಂದ ಅಗೋಚರ ಶಕ್ತಿಯನ್ನು ಒಲಿಸಿಕೊಳ್ಳುವ ಮೂಲಕ ತನಗೆ ಒದಗುವ ಕಂಟಕಗಳಿಂದ ಪಾರಾಗಬೇಕು ಎಂಬುದು ಅವನ ತರ್ಕವಾಗಿತ್ತು. ಹೀಗಾಗಿ ಆರಂಭದ ಅವನ ದೇವರ ಕಲ್ಪನೆಯ ಹಿಂದೆ ತಾನು ದೇವರ ಕೃಪೆಯಿಂದ ದೊಡ್ಡವನಾಗಬೇಕು, ಸಂಪಾದಿಸಬೇಕು ಎಂಬ ಸ್ವಾರ್ಥಕ್ಕಿಂತ, ತನಗೆ ಒದಗುವ ಕಷ್ಟಗಳಿಂದ ಪಾರಾಗಬೇಕು ಎಂಬ ಸಹಜ ಉದ್ದೇಶವಿತ್ತು.

ಆದ್ದರಿಂದ ಅಗೋಚರ ಶಕ್ತಿಯನ್ನು ಒಲಿಸಿಕೊಳ್ಳುವ ಬಗೆ ಹೇಗೆ? ಅವನು ಎರಡು ರೀತಿಯಲ್ಲಿ ದೈವವನ್ನು ಅಥವಾ ಆ ಶಕ್ತಿಯನ್ನು ಗೆಲ್ಲುವ ಪ್ರಯತ್ನ ಮಾಡಿದ.

೧. ಮಾಟದ ಮೂಲಕ ನಿಯಂತ್ರಿಸುವುದು

೨. ಆರಾಧನೆಯ ಮೂಲಕ ಒಲಿಸಿಕೊಳ್ಳುವುದು.

ಮಾಟದ ಮೂಲಕ ಅಗೋಚರ ಶಕ್ತಿಯನ್ನು ನಿಯಂತ್ರಿಸಿ ತನ್ನ ಕಂಟಕಗಳನ್ನು ದೂರ ಮಾಡಿಕೊಳ್ಳುವ ಕಲ್ಪನೆ ಆದಿಮಾನವನದ್ದು. ಈ ಮಾಂತ್ರಿಕತೆಯೇ ಮುಂದೆ ವಿಜ್ಞಾನವಾಗಿ ಬೆಳೆಯಿತು ಎಂಬುದು ಅನೇಕ ಮಾನವಶಾಸ್ತ್ರಜ್ಞರ ವಾದ. ಮಾಂತ್ರಿಕ ಮನಸ್ಸು ವಿಜ್ಞಾನವನ್ನು ಬೆಳೆಸಿತು ಎಂಬುದು ನಿಜ. ಆದರೆ, ಈ ಮಾಂತ್ರಿಕತೆ ಪೂರಾ ವಿಜ್ಞಾನವಾಗಿ ಪರಿವರ್ತನೆಯಾಗಲಿಲ್ಲ. ಮಾಂತ್ರಿಕ ರೂಪದ ಅನೇಕ ಆಚರಣೆಗಳು ಹಾಗೇ ಉಳಿದು ಬಂದವು. ಅವು ಅನೇಕ ಆಚರಣೆಗಳ ರೂಪದಲ್ಲಿ, ಕಲೆಗಳ ರೂಪದಲ್ಲಿ, ವಿಧಿನಿಷೇಧಗಳ ರೂಪದಲ್ಲಿ ಇಂದಿಗೂ ನಮ್ಮ ಜನಪದ ಜೀವನದಲ್ಲಿ ಉಳಿದು ಬಂದಿವೆ. ಡಾ.ದೇವಿಪ್ರಸಾದ ಚಟ್ಟೋಪಾಧ್ಯಾಯ ಅವರು ಇವತ್ತಿನ ಒಂದು ವ್ರತದ ಉದಾಹರಣೆಯನ್ನು ಕೊಟ್ಟು, ಅದು ಹೇಗೆ ಮಾಂತ್ರಿಕ

PDF created with pdfFactory Pro trial version www.pdffactory.com

ಈಡೇರಬೇಕು. ಆದರೆ, ವ್ರತದ ಅರ್ಥ ಇದರಿಂದ ಪೂರ್ತಿಯಾಗಿ ಭಿನ್ನವಾಗಿದೆ. ಕರುಣೆಯ ಭಿಕ್ಷೆಯನ್ನು ಬೇಡುವ ಪ್ರಯತ್ನ ವ್ರತದಲ್ಲಿ ಸುತಾರಂ ಇಲ್ಲ. ಅದರಲ್ಲಿರುವ ಭಾವನೆ ಒಂದು ರೀತಿಯ ಆಜ್ಞೆಯ ತರಹದ್ದು. ಉದಾಹರಣೆಗೆ, ರಂಗೋಲಿಯಲ್ಲಿ ನದಿಯನ್ನು ಬಿಡಿಸುವುದು, ಅದರ ಮೇಲೆ ಹೂ ಇಡುವುದು ಮತ್ತು ಹಾಡಿನ ರೂಪದಲ್ಲಿ ಮನೋಭಿಲಾಷೆಯನ್ನು ಪ್ರಕಟಿಸುವುದು ಹೀಗೆ ಮಾಡುವುದರಿಂದ ನದಿಯ ಮನಸ್ಸಿನಲ್ಲಿ ದಯಾಭಾವ ಮೂಡುತ್ತದೆಂಬ ಭಾವನೆ ಸರ್ವಥಾ ಅಲ್ಲ. ಅಲ್ಲಿರುವ ಭಾವನೆಯೇ ಬೇರೆ. ಪ್ರಸ್ತುತ ಮನೋಭಿಲಾಷೆಯನ್ನು ಪೂರೈಸಲು ನದಿಯು ಅಸಮರ್ಥವಾಗಿದೆ. ರಂಗೋಲಿ, ಹೂವು ಮತ್ತು ಹಾಡುಗಳಿಂದ ನದಿಯನ್ನು ವಶ ಮಾಡಿಕೊಳ್ಳುವ ಆಶಯ ಇಲ್ಲಿದೆ. ಅಂದರೆ, ಮನೋಭಿಲಾಷೆಯು ಈಡೇರಿಕೆಗೆ ದಯೆಯ ಭಿಕ್ಷೆ ಬೇಡುವ ಭಾವನೆ ವ್ರತಕ್ಕೆ ಹೊರತಾದದ್ದು. ವ್ರತ ಮತ್ತು ಪೂಜೆಗಳಲ್ಲಿ ಹೂವಿನ ಪಾತ್ರ ಭಿನ್ನ ಭಿನ್ನವಾಗಿದೆ. ವ್ರತದಲ್ಲಿ ಹೂವುಗಳು ಸಾಕ್ಷಿ ಇದ್ದಂತೆ. ನದಿಯನ್ನು ಬಿಡಿಸಿ ವಶಮಾಡಿಕೊಳ್ಳುವುದಕ್ಕೆ ಹೂವುಗಳು ಸಾಕ್ಷಿ.

ಮಾಟದ ರೇಖಾ ಚಿತ್ರ

ಪ್ರಾಚೀನ ಮನುಷ್ಯನಿಗೆ ನೃತ್ಯ, ಗಾನ, ಚಿತ್ರ, ಪದ್ಮ ಎಲ್ಲ ಒಂದಕ್ಕೊಂದು ಅಂಟಿ ನಿಲ್ಲುತ್ತವೆ. ಅದೆಲ್ಲದರ ಹಿಂದೆ ಇರುವ ಮೂಲಭೂತವಾದ ಸಂಗತಿ ಎಂದರೆ ಜೀವಿಸಲು ಪ್ರಯತ್ನ. ಕೆಲಸ ಕಾರ್ಯಗಳಿಗೆ ಪ್ರೇರಣೆ. ಇವುಗಳೆಲ್ಲ ಯಾವ ನಂಬಿಕೆಯಲ್ಲಿ ಕೇಂದ್ರೀಕರಿಸಲ್ಪಟ್ಟಿದೆಯೋ ಅದನ್ನೇ ನಾವು ಮಂತ್ರ ವಿದ್ಯೆ ಎನ್ನುತ್ತೇವೆ.[೬]

ಇಂದು, ಮಾಟಮಂತ್ರದ ಮೂಲಕ ಪ್ರಕೃತಿಯನ್ನು ಒಲಿಸಿಕೊಳ್ಳುವ ಕಾರ್ಯ ನಿಂತಿದೆ ಎಂದೇನೂ ನಾವು ಹೇಳುವಂತಿಲ್ಲ. ನಮ್ಮ ನಡುವಿನ ಆಧುನಿಕ ವಿಜ್ಞಾನ ಪರೋಕ್ಷವಾಗಿ ಅದನ್ನೇ ಮಾಡುತ್ತಿದೆ. ಇದು ಮನುಷ್ಯನ ಬದುಕಿನ ಒಂದು ಆಯಾಮ. ಆರಂಭದಲ್ಲಿ ತನ್ನ ಉಳಿವು ಮತ್ತು ಅಸ್ತಿತ್ವಕ್ಕಾಗಿ ಅನುಕರಣೆಯ ಮೂಲಕ ಪ್ರಕೃತಿಯಲ್ಲಿನ ಅಗೋಚರ ಶಕ್ತಿಯನ್ನು ಒಲಿಸಿಕೊಳ್ಳಲು ಯತ್ನಿಸಿದ ಮನುಷ್ಯ, ಬರುಬರುತ್ತಾ ಆ

ಆಚರಣೆ ಎಂಬುದನ್ನು ಸೊಗಸಾಗಿ ನಿರೂಪಿಸಿದ್ದಾರೆ. ಅದರ ವಿವರವನ್ನು ಇಲ್ಲಿ ಕೊಡುವುದು ಸೂಕ್ತ ಎಂದುಕೊಂಡಿದ್ದೇನೆ. "ಎಲ್ಲಿಯವರಗೆ ಟೋಟಂ ಪಂಗಡವು ಬಿಗಿಯಾಗಿತ್ತೋ, ಅಂದರೆ ಪಂಗಡದ ವ್ಯಕ್ತಿಗಳೆಲ್ಲಾ ಸಮಾನರಾಗಿ ಎಲ್ಲಿಯವರೆಗೆ ಎಣಿಸಲ್ಪಡುತ್ತಿದ್ದರೋ, ಅಲ್ಲಿಯವರೆಗೆ ಮನುಷ್ಯ ಪೂಜೆ ಮಾಡುವುದನ್ನು ಕಲಿಯಲಿಲ್ಲ, ಪ್ರಾರ್ಥನೆ ಸಲ್ಲಿಸುತ್ತಿರಲಿಲ್ಲ. ದೇವತೆಗಳ ಪಾದಗಳಲ್ಲಿ ತಲೆ ಬಗ್ಗಿಸುವುದು, ಹರಕೆ ಕಟ್ಟುವುದು, ಇವೆಲ್ಲಾ ಅವನಿಗೆ ಗೊತ್ತಿರಲಿಲ್ಲ. ಅಂದರೆ ಅಲ್ಲಿಯವರೆಗೆ ಧರ್ಮವೆಂಬ ಹೆಸರಿನ ಯಾವುದೂ ಮನುಷ್ಯನ ಮಿದುಳಿನಲ್ಲಿ ಮನೆ ಮಾಡಿಕೊಂಡಿರಲಿಲ್ಲ. ದೇವತೆಗಳ ಜನ್ಮವೇ ಇನ್ನೂ ಆಗದಿದ್ದಾಗ ಧರ್ಮವೆಂಬುದರಲ್ಲಿ ನಂಬಿಕೆ ಹೇಗೆ ತಾನೆ ಬಂದಿತು! ಇದಕ್ಕೆ ನಮ್ಮಲ್ಲಿ ಏನು ನಿದರ್ಶನವಿದೆ? ಉತ್ತರವಾಗಿ ಎರಡು ನಿದರ್ಶನಗಳನ್ನು ನಾವು ನೋಡಬಹುದು. ಮೊದಲನೆಯದು ನಾಗರಿಕ ಮನುಷ್ಯನ ವ್ಯವಹಾರಗಳಲ್ಲಿ ಇಂದಿಗೂ ಅದರ ಛಾಯೆ ಉಳಿದು ಬಂದಿದೆ. ಎರಡನೆಯದು ಇಂದಿಗೂ ಆದಿಮ ಅನಾಗರಿಕ ಹಂತದಲ್ಲೇ ಉಳಿದಿರುವವರನ್ನು ನೋಡಿದರೆ ತಿಳಿಯುತ್ತದೆ. ಅವರ ನಂಬಿಕೆಗಳನ್ನು ತೂಗಿ ನೋಡಿದರೆ ಅವರಲ್ಲಿ ಧರ್ಮದಲ್ಲಿನ ನಂಬಿಕೆ ಎನ್ನಬಹುದಾದಂತ ಹುದ್ದು ಏನೂ ಇಲ್ಲವೆಂದು ತಿಳಿಯುತ್ತದೆ.

ನಮ್ಮ ದೇಶದ ಹಳ್ಳಿ ಹಳ್ಳಿಗಳಲ್ಲಿಯೂ ಹೆಂಗಸರು ವ್ರತ ಮಾಡುವುದುಂಟು. ಈ ವ್ರತಗಳ ಅರ್ಥವಾದರೂ ಏನು. ಸ್ವಲ್ಪ ಆಳವಾಗಿ ಪರಿಶೀಲಿಸಿದರೆ ಒಂದೊಂದು ವ್ರತದ ಹಿಂದೆಯೂ ಒಂದೊಂದು ಕಾಮನೆ ಇರುವುದು ಕಂಡುಬರುತ್ತದೆ. ಇಂತಹ ಯಾವುದೋ ಫಲ ಬೇಕು, ಅದಕ್ಕೆ ಯಾವುದೋ ಒಂದು ವ್ರತ. ಇದೇ ವ್ರತದ ಪ್ರಮುಖವಾದ ಹಿನ್ನೆಲೆ. ಬಂಗಾಳದಲ್ಲಿ ಈ ವ್ರತದ ವೇಳೆಯಲ್ಲಿ ಹಲವು ಚಿಹ್ನೆಗಳನ್ನು ಚಿತ್ರದಾಕಾರದಲ್ಲಿ ಬರೆಯುವ ಪದ್ಧತಿ ಇದೆ. ನದಿ, ಸಮುದ್ರ, ಮುಳ್ಳುಗಳಿಂದ ತುಂಬಿದ ಕಾಡು, ಕಾಡುಮೃಗಗಳು, ಹೀಗೆ ಏನೋನೋ ಚಿತ್ರಗಳನ್ನು ಬಿಡಿಸುತ್ತಾರೆ. ರಂಗೋಲಿಯಲ್ಲಿ ಹೀಗೆ ಚಿತ್ರ ಬಿಡಿಸಿ ಅವುಗಳ ಮೇಲೆ ಹೂಗಳನ್ನರಿಸುವುದು ಮತ್ತು ಹೆಂಗಸರೆಲ್ಲ ಒಟ್ಟಾಗಿ ಹಾಡುವುದು ರೂಢಿ. ಈ ಹಾಡುಗಳಲ್ಲಿ ಅವರವರ ಕಾಮನೆಗಳ ಪ್ರಸ್ತಾಪ ಬರುತ್ತದೆ. ಈ ಸಂಪ್ರದಾಯ ಹೀಗೆ ಮುಂದುವರಿದಿದೆ. ಆದರೆ ಇದರ ಅಂತರ ಅರ್ಥ ಏನು? ವ್ರತವನ್ನು ನೈಜವಾಗಿ ಅರ್ಥ ಮಾಡಿಕೊಳ್ಳುವವನಿಗೆ ಈ ವಿವರಣೆಯಿಂದ ತೃಪ್ತಿ ದೊರೆಯುವುದಿಲ್ಲ. ಏಕೆಂದರೆ ಪೂಜೆ ಮತ್ತು ವ್ರತಗಳ ನಡುವೆ ಆಕಾಶ ಭೂಮಿಯಷ್ಟು ಅಂತರವಿದೆಯೆಂಬುದು ಅವರಿಗೆ ಗೊತ್ತು. ಪೂಜೆ ಎಂದರೇನು? ದೇವರ ಪಾದದಲ್ಲಿ ಹೂವನ್ನು ಅರ್ಪಿಸುವುದು ಮತ್ತು ಅವನಿಂದ ಸ್ವಂತಕ್ಕೆ ಏನಾದರೂ ದಯೆಯನ್ನು ಪಡೆಯುವುದು ಪೂಜೆಯೆನಿಸಿಕೊಳ್ಳುತ್ತದೆ. ದೇವರು ಪ್ರಸನ್ನವಾಗಬೇಕು ಮತ್ತು ನಮ್ಮ ಮನೋಭಿಲಾಷೆ

PDF created with pdfFactory Pro trial version www.pdffactory.com

ನಿಗೂಢ ಶಕ್ತಿಯ ಆರಾಧನೆಗೂ ತೊಡಗಿದ. ಇಲ್ಲಿ ಎರಡು ವಿಚಾರಗಳು ಬಹಳ ಮುಖ್ಯವಾಗುತ್ತವೆ.

ಒಂದು ಪ್ರಕೃತಿಯ ಘಟನೆಗಳ ಅನುಕರಣಾತ್ಮಕ ಮಂತ್ರ ವಿದ್ಯೆಯ ಬೆಳವಣಿಗೆ ಮೌನವಾಗಿ, ನಂತರ ವಿಜ್ಞಾನವಾಗಿ ರೂಪ ಪಡೆದದ್ದು;.

ಎರಡು – ನಿಸರ್ಗದ ನಿಗೂಢವನ್ನು ಆರಾಧಿಸುವ ಮೂಲಕ, ಅಂಥ ಆರಾಧನೆಗೆ ಒಂದು ರೂಪ ಕೊಟ್ಟುಕೊಳ್ಳುವ ಮೂಲಕ ಧರ್ಮದ ಉಗಮವಾದದ್ದು.

ನಿಸರ್ಗದಲ್ಲಿ ಎರಡು ರೀತಿಯ ಚೈತನ್ಯಗಳಿದ್ದವು. ಒಂದು ಪೊರೆಯುವ ಚೈತನ್ಯವಾದರೆ, ಇನ್ನೊಂದು ನಾಶ ಮಾಡುವ ಚೈತನ್ಯ. ಮಳೆ ಗಾಳಿ ಬೆಂಕಿ ಇಂಥ ಚೈತನ್ಯ ಪಡೆದಿದ್ದವು. ಮನುಷ್ಯನ ಹುಟ್ಟಿಗೆ ಕಾರಣವಾಗುವ ನಿಸರ್ಗವೇ ಅವನ ಸಾವಿಗೂ ಕಾರಣವಾಗುತ್ತಿತ್ತು. ಇಂಥ ಸಂದರ್ಭದಲ್ಲಿ ಆ ಅಗೋಚರ ಶಕ್ತಿಯನ್ನು ಒಲಿಸಿಕೊಳ್ಳುವ ಅಥವಾ ನಿಯಂತ್ರಿಸುವ ಪ್ರಕ್ರಿಯೆಯಲ್ಲಿ, ಆ ಶಕ್ತಿಗೆ ಅವನೊಂದು ರೂಪ ಕೊಟ್ಟು ತನ್ನ ಕಲ್ಪನೆಯನ್ನು ವಿಸ್ತರಿಸಿದ.

ರೂಪ ಅಂದರೆ ಬರೀ ರೂಪವಲ್ಲ. ಒಂದು ಸಂಕೇತ ಎಂದು ನಾವು ಅಂದುಕೊಳ್ಳಬಹುದು. ಈಗ ಮತ್ತೆ ನಾನು ನನ್ನ ಅಪ್ಪ ಕೈಗೊಳ್ಳುತ್ತಿದ್ದ ಹೊಲ ಕೊಯ್ಯುವ ಮೊದಲಿನ ಆಚರಣೆಯನ್ನು ನೆನಪಿಸಬಯಸುತ್ತೇನೆ. ಮೂರು ಕಲ್ಲುಗಳನ್ನು ಇಟ್ಟು ಅವುಗಳಿಗೆ ಕುಂಕುಮ ಹಚ್ಚಿ ಹೂ ಇಟ್ಟು ಪೂಜಿಸುತ್ತಿದ್ದ ರೀತಿ. ಮೂರು ಕಲ್ಲುಗಳಲ್ಲಿ ಒಂದು ಭೂಮಿ ತಾಯಿ, ಇನ್ನೊಂದು ಮಳೆರಾಯ, ಮತ್ತೊಂದು ಬೆನವಣ್ಣ. ಸೃಷ್ಟಿಸುವ ಪೊರೆಯುವ ಮತ್ತು ರಕ್ಷಿಸುವ ಸಂಕೇತಗಳು ಆ ಮೂರು ಕಲ್ಲುಗಳು. ಅನಂತರದ ಸಾವಿರಾರು ವರ್ಷಗಳ ಮನುಷ್ಯನ ಇತಿಹಾಸದಲ್ಲಿ ಭೂಮಿತಾಯಿಗೆ ದೇವತೆಯ ರೂಪವೂ ಆರೋಪಿಸಲ್ಪಟ್ಟವು. ಅಥವಾ ಆ ರೀತಿಯ ದೈವಕಲ್ಪನೆಯ ಚಿಂತನೆ ವಿಕಾಸಗೊಂಡಿತು.

ಅವರು ದ್ರಾವಿಡರೋ ಆರ್ಯರೋ ಅಥವಾ ಮಂಗೋಲಿಯನ್ನರೋ– ಎಲ್ಲರ ಕಲ್ಪನೆ ಕಿಡಿ ಹೊಡೆದದ್ದು ಹೀಗೆಯೇ. ಬುಡಕಟ್ಟು ಪರಿಸರದಲ್ಲಿ ದೈವ ಅಥವಾ ದೆವ್ವಗಳು ರೂಪು ತಾಳಿದ್ದು ಹೀಗೆ. ಆರಾಧನೆ ಅಥವಾ ನಿಯಂತ್ರಣ ಆರಂಭವಾದದ್ದು ಹೀಗೆ. ಬರಬರುತ್ತಾ ದೈವಗಳು ಪೂಜೆಯನ್ನು ದೆವ್ವ ಭೂತಗಳು ನಿಯಂತ್ರಣ ರೂಪದ ಆಚರಣೆಗಳನ್ನೂ ಪಡೆಯುತ್ತಾ ಬಂದವು. ಇಂದು ನಮ್ಮ ಮುಂದಿರುವ ಅನೇಕ ಆರಾಧನೆ ಮತ್ತು ಆಚರಣೆಯ ಹಿನ್ನೆಲೆಯನ್ನು ಈ ರೀತಿಯಲ್ಲಿ ನಾವು ಅರ್ಥೈಸಬೇಕಾಗುತ್ತದೆ.

ನಿರ್ದಿಷ್ಟ ದೇವರು ಅಥವಾ ನಿರ್ದಿಷ್ಟ ಧರ್ಮ ಉದಯಿಸುವ ಮೊದಲು ಮನುಷ್ಯ ನಿಸರ್ಗದ ಅನೇಕ ಸಚರಾಚರ ಪ್ರಾಣಿ ಸಮುದಾಯಗಳಲ್ಲಿ ತಾನೂ

ಒಬ್ಬನಾಗಿ ಬದುಕುತ್ತಿದ್ದ. ಗುಂಪು ಗುಂಪುಗಳಲ್ಲಿ ವಾಸಿಸುತ್ತಿದ್ದ. ಅವರಿಗೆ, ತಮ್ಮ ತಮ್ಮ ಗುಂಪುಗಳ ಗುರುತು ಹೇಳಿಕೊಳ್ಳಲು ಏನಾದರೂ ಆಧಾರ ಬೇಕಾಗಿತ್ತು. ಆಯಾ ಪ್ರದೇಶದಲ್ಲಿ ತಮ್ಮನ್ನು ಪ್ರಭಾವಿಸಿದ ಪ್ರಾಣಿ, ಸಸ್ಯ, ನದಿ, ಬೆಟ್ಟ ಅಥವಾ ವಸ್ತುವಿನ ಹೆಸರನ್ನು ತಮ್ಮ ತಮ್ಮ ಗುಂಪಿನ ಲಾಂಛನವನ್ನಾಗಿ ಅವರು ಇಟ್ಟುಕೊಂಡರು. ಮುಂದೆ ಇದೇ ಅವರ ಕುಲಚಿಹ್ನೆಯಾಯಿತು. ಒಂದು ಮಾತನ್ನು ಇಲ್ಲಿ ಗಮನಿಸಬೇಕು, ಕುಲಚಿಹ್ನೆ ಅವರನ್ನು ಅವರು ಗುರುತಿಸಿಕೊಳ್ಳುವ ಸಾಧನವಾಗಿತ್ತೇ ಹೊರತು, ದೈವವಾಗಿರಲಿಲ್ಲ. ಆದರೆ, ಬರಬರುತ್ತಾ ಆಯಾ ಗುಂಪುಗಳಲ್ಲಿ ಬಲಾಢ್ಯ ಮತ್ತು ದುರ್ಬಲ ಎಂಬ ಗುಂಪುಗಳಾದವು. ಒಂದು ಮತ್ತೊಂದನ್ನು ನಿಯಂತ್ರಿಸ ಬಯಸಿತು. ಸಮಾಜದಲ್ಲಿ ತನ್ನ ಸ್ಥಾನವನ್ನು ಮೇಲೇರಿಸಿಕೊಂಡ ಲಾಂಛನ ಇತರರೂ ಅನುಸರಿಸಬೇಕಾದ ಅಥವಾ ಗೌರವಿಸಬೇಕಾದ ಸಂಗತಿಯಾಯಿತು. ಹೀಗೆ ಗೌರವಿಸಲ್ಪಟ್ಟ ಲಾಂಛನವೇ ಮುಂದೆ ದೈವವಾಗಿ ರೂಪು ಪಡೆದಿರಬೇಕು ಎಂಬುದು ಅನೇಕ ವಿದ್ವಾಂಸರ ಅಭಿಪ್ರಾಯ. ಆದರೆ ಭಾರತದಲ್ಲಿನ ದೈವಾವಸ್ಥೆಯನ್ನು ಗಮನಿಸಿದರೆ ಈ ರೀತಿಯಲ್ಲಿ ಟೋಟೆಂಗಳು ದೈವಗಳಾಗಿರುವ ಉದಾಹರಣೆ ತೀರಾ ವಿರಳ. ಹಳೇ ಶಿಲಾಯುಗದ ಕಾಲದಿಂದ ಆರಂಭವಾಗಿ ಹೊಸಶಿಲಾಯುಗ ಮತ್ತು ಕಂಚಿನ ಯುಗದಲ್ಲಿ ನಮಗೆ ಅನೇಕ ರೀತಿಯ ದೇವರುಗಳ ಮೂರ್ತಿಗಳು ಸಿಕ್ಕಿವೆ. ಗುಹೆಗಳಲ್ಲಿ ಮತ್ತು ಬಂಡೆಗಳ ಮೇಲೆ ಕೆತ್ತಿದ ಅನೇಕ ಆಕೃತಿಗಳು ದೊರಕಿವೆ. ದೇವರುಗಳ ಅಸ್ತಿತ್ವ ಅಷ್ಟು ಪ್ರಾಚೀನದಲ್ಲಿಯೇ ಇತ್ತು ಎಂಬುದಕ್ಕೆ ಅನೇಕ ಆಧಾರಗಳನ್ನು ಪುರಾತತ್ವಶಾಸ್ತ್ರಜ್ಞರು ನಿರೂಪಿಸಿದ್ದಾರೆ. ಹರಪ್ಪಾ ಮತ್ತು ಮೊಹೆಂಜದಾರೋ ಉತ್ಖನನದಲ್ಲಿ ಅನೇಕ ದೇವತೆಯರ ಆಕೃತಿಗಳು ಲಭ್ಯವಾಗಿವೆ. ಆದರೆ ಒಂದು ಅಂಶವನ್ನು ಇಲ್ಲಿ ಮುಖ್ಯವಾಗಿ ಗಮನಿಸಬೇಕು. ಭಾರತದ ಪ್ರಾಚೀನ ಪರಂಪರೆಯಲ್ಲಿ ಕಂಡುಬರುವ ಬಹುತೇಕ ದೇವರುಗಳಲ್ಲಿ ಪ್ರಮುಖ ಸ್ಥಾನ ಮಾತೃದೇವತೆಯರದ್ದು. ಎಲ್ಲೆಲ್ಲಿಯೂ ಮಾತೃವೇ ಮುಖ್ಯ. ಇದಕ್ಕೆ ಕಾರಣಗಳೇನು? ಬಹುಶಃ ಭಾರತದಲ್ಲಷ್ಟೇ ಅಲ್ಲ ಇಡೀ ಜಗತ್ತಿನ ದೈವಕಲ್ಪನೆಯಲ್ಲಿಯೂ ಮಾತೃವಿಗೇ ಪ್ರಥಮ ಸ್ಥಾನ.

ದೇವರುಗಳ ಸೃಷ್ಟಿಯಲ್ಲಿ ಕನಿಷ್ಠ ನಾಲ್ಕು ಹಂತಗಳನ್ನು ಗುರುತಿಸಬಹುದು ಎಂಬುದು ನನ್ನ ಅಭಿಪ್ರಾಯ. ಮನುಷ್ಯ ನಾಗರಿಕನಾಗಲು ಹವಣಿಸಿದ ಮೊದಲ ಘಟ್ಟ ಆಹಾರ ಸಂಗ್ರಹಣೆ. ಅಂದರೆ ತನಗೆ ಬೇಕಾದ ಅಗತ್ಯ ವಸ್ತುಗಳನ್ನು ಅರಸುತ್ತಾ ಕಾಡಿನಿಂದ ಕಾಡಿಗೆ ಅಲೆದ ಮೃಗೀಯ ಜೀವನ ಅದು. ಆದರೂ ಹಾಗೆ ಲಭ್ಯವಾದ ಆಹಾರವನ್ನು ಒಂದು ಕಡೆ ಕೂಡಿಡುವ, ಸಂರಕ್ಷಿಸುವ ಬುದ್ಧಿಯನ್ನು ಉಪಯೋಗಿಸಿದ್ದೇ ಅವನು ನಾಗರಿಕತೆ ಕಡೆಗೆ ಮುಖ ಮಾಡಿದ ಪ್ರಥಮ ಹಂತ. ಒಂದು ಗುಂಪಿನ ಜನ ಒಟ್ಟಾಗಿ ವಾಸಿಸುವ ಮೂಲಕ ತಮಗೊಂದು ಅಸ್ತಿತ್ವ ಕಂಡುಕೊಳ್ಳುತ್ತಿದ್ದ ಕಾಲ

PDF created with pdfFactory Pro trial version www.pdffactory.com

ಅದು. ಅಲ್ಲಿ ಯಾರು ಗಂಡ ಅಥವಾ ಯಾರು ಹೆಂಡತಿ ಎಂಬ ಕಲ್ಪನೆ ಇರಲಿಲ್ಲ. ಸಮೂಹ ಜೀವನ ಅದು. ಮಕ್ಕಳನ್ನು ಹಡೆಯಬಲ್ಲ ಶಕ್ತಿ ಪಡೆದ ಮಾತೃ ಮಾತ್ರ ಅಲ್ಲಿ ಮುಖ್ಯ. ಅವಳಿಗೇ ಅಲ್ಲಿ ಪ್ರಾಧಾನ್ಯ. ಆಹಾರ ಸಂಗ್ರಹಣೆಗಾಗಿ ಹೊರಟ ಗಂಡರು ಹಿಂತಿರುಗಿ ಬಂದಾಗ ಲಭ್ಯವಿದ್ದ ಹೆಂಗಸಿನ ಜೊತೆ ತನ್ನ ಲೈಂಗಿಕ ತೃಷೆ ತೀರಿಸಿಕೊಳ್ಳುತ್ತಿದ್ದ ಅಷ್ಟೇ. ಆದರೆ ಯಾರು ಮಗುವಿನ ತಾಯಿಯಾಗುತ್ತಾಳೋ ಅವಳಿಗೆ ವಿಶೇಷ ಸ್ಥಾನಮಾನ. ಅದರ ತಂದೆ ಯಾರು ಎಂಬುದು ಅಲ್ಲಿ ಮುಖ್ಯವೇ ಅಲ್ಲ. ಹೀಗಾಗಿ ತಾಯಿಯೇ ಸತ್ಯ. ಇಷ್ಟಲ್ಲದೆ ಗಂಡಸರು ಹೊರಗಿನಿಂದ ಸಂಗ್ರಹಿಸಿ ತಂದ ಆಹಾರಗಳನ್ನು ಸಂರಕ್ಷಿಸಿ ಇಡುವುದು, ಹೆತ್ತ ಮಕ್ಕಳನ್ನು ಪೋಷಿಸುವುದು ಮುಂತಾದಂತೆ ಇಡೀ ಸಮೂಹದ ಜವಾಬ್ದಾರಿ ತಾಯಿಯದೇ ಆಗಿತ್ತು. ಆದ್ದರಿಂದ ಮಾತೃವಿನ ಸ್ಥಾನ ನಿರ್ವಿವಾದವಾಗಿ ಪ್ರಾಮುಖ್ಯತೆ ಗಳಿಸಿತ್ತು. ಹೀಗಾಗಿ ಸೃಷ್ಟಿಗೆ ಕಾರಣವಾದ ಮತ್ತು ಪೋಷಣೆಗೆ ಅಗತ್ಯವಾದ ಮಾತೃವನ್ನು ಗೌರವಿಸಿ, ಆರಾಧಿಸಿದ್ದು ಕೂಡ ಅಷ್ಟೇ ಸಹಜ. ಮಾತೃವಿನ ಆರಾಧನೆ ಆರಂಭವಾದ ಮೊದಲ ಹಂತ ಇದು. ಆದ್ದರಿಂದ ನಾನೀಗಾಗಲೇ ಹೇಳಿದಂತೆ ದೈವಸೃಷ್ಟಿಯ ವಿವಿಧ ಹಂತಗಳನ್ನು ಹೀಗೆ ಪಟ್ಟಿ ಮಾಡಬಹುದು.

೧. ಮೇಲೆ ವಿವರಿಸಿದಂತೆ ಎಲ್ಲಕ್ಕೂ ಮಾತೃವೇ ಮೂಲ, ಅವಳೇ ಸತ್ಯ ಎಂಬ ಅನಾದಿಕಾಲದ ನಿಜಸ್ಥಿತಿಯ ಮೂಲಕ ರೂಪುಗೊಂಡ ಮಾತೃವಿನ ಆರಾಧನೆ. ಇದು ಆಹಾರ ಸಂಗ್ರಹಣೆಯ ಕಾಲದ ಮುಕ್ತ ಸ್ಥಿತಿಯಲ್ಲಿ ಆರಂಭಗೊಂಡದ್ದು.

೨. ಪ್ರಾಣಿಗಳನ್ನು ಪಳಗಿಸಿ ಪಶುಸಂಗೋಪನಾ ಕಾರ್ಯ ಕೈಗೊಂಡ ಹಂತದಿಂದ ಪುರುಷ ಪ್ರಾಧಾನ್ಯ ಹೆಚ್ಚಾಯಿತು. ಪುರುಷ ಪ್ರಾಧಾನ್ಯತೆಯ ಜೊತೆಗೇ ಪುರುಷ ದೈವಗಳ ಸೃಷ್ಟಿಯೂ ಆಯಿತು. ಆಯಾ ಸಮುದಾಯದ ವೀರರು ದೈವಗಳಾಗಿ ರೂಪಾಂತರಗೊಂಡ ಸ್ಥಿತಿಯಲ್ಲಿ ಅವರ ಆರಾಧನೆಯೂ ವಿವಿಧ ರೀತಿಯಲ್ಲಿ ಆರಂಭಗೊಂಡಿತು.

೩. ಪುರುಷ ಹೊರಗೆ ಹೋದಾಗ ಮಕ್ಕಳ ಪೋಷಣೆ ಮಾಡಿಕೊಂಡು ಇರುತ್ತಿದ್ದ. ಸ್ತ್ರೀ ಕೃಷಿಯನ್ನು ಅನ್ವೇಷಣೆ ಮಾಡಿದಳು ಎಂಬುದು ಅನೇಕರ ಅಭಿಪ್ರಾಯ. ಸ್ತ್ರೀಯ ಗರ್ಭಧಾರಣಾ ಶಕ್ತಿ ಮತ್ತು ಭೂಮಿಯ ಸಸ್ಯಧಾರಣಾ ಶಕ್ತಿಯನ್ನು ಗೌರವಿಸಿ ಮಾನ್ಯ ಮಾಡಿದ ಕೃಷಿ ಹಂತದ ಚಟುವಟಿಕೆಗಳು ಸ್ತ್ರೀಯನ್ನು ಮತ್ತೆ ದೈವಸ್ಥಾನಕ್ಕೆ ಏರಿಸಿದವು. ಗ್ರಾಮದೇವತೆಗಳ ಸೃಷ್ಟಿ ಆರಂಭವಾದದ್ದು ಹೀಗೆ.

೪. ಕೃಷಿ ಚಟುವಟಿಕೆ ಒಂದು ಆರ್ಥಿಕ ಚಟುವಟಿಕೆಯಾಗಿ ಅಭಿವೃದ್ಧಿ ಹೊಂದಿದಂತೆ ಭೂಮಾಲೀಕತ್ವವೂ ತನ್ನ ನೆಲೆ ಕಂಡುಕೊಳ್ಳತೊಡಗಿತು. ಆಸ್ತಿಯ ಒಡೆತನದ ಕಲ್ಪನೆ ಬರುತ್ತಿದ್ದಂತೆ ತಮ್ಮ ಆಸ್ತಿ ತಮ್ಮ ಮಕ್ಕಳಿಗೇ ಸೇರಬೇಕೆಂಬ ನಂಬಿಕೆ ಬಲವಾಯಿತು. ಇಲ್ಲಿಯೇ ಪಾತಿವ್ರತ್ಯ ಎಂಬ ಹೊಸ ಮೌಲ್ಯ ಇಣುಕು ಹಾಕಿತು.

ಭೂಮಿಯಂತೆಯೇ ಸ್ತ್ರೀ ಕೂಡ ಪುರುಷನ ಆಸ್ತಿಯಾಗಿ ಪರಿವರ್ತಿತಳಾದಳು. ಪುರುಷಪ್ರಾಧಾನ್ಯ ಇಲ್ಲಿ ಮತ್ತೆ ತನ್ನ ಸಾರ್ವಭೌಮತ್ವ ಸ್ಥಾಪಿಸಿತು. ಆರ್ಯರ ಮುಖಂಡತ್ವದಲ್ಲಿ ಪುರುಷಪ್ರಧಾನ ಮೌಲ್ಯ ವಿಜೃಂಭಿಸಿ, ಪುರುಷ ದೈವಗಳ ಸೃಷ್ಟಿಯೂ ಆಯಿತು. ಆ ದೈವಗಳ ಪುರಾಣಗಳು ಲಿಖಿತವಾಗಿ ದಾಖಲಾದವು. ಮಾತೃವಿನ ಸಂಕೇತದ ದೇವತೆಗಳು ಪುರುಷ ದೈವಗಳ ಅಡಿಯಾಳಾಗಿಯೋ, ನಿಕೃಷ್ಟ ಸೇವಕಿಯಾಗಿಯೋ ಇಲ್ಲವೇ ಆರ್ಯದೈವಗಳ ಹೆಂಡತಿಯರಾಗಿಯೋ ಕಾಣಿಸಿಕೊಂಡರು. ಇದು ಇವತ್ತಿನ ನಮ್ಮ ಕಣ್ಣಮುಂದಿನ ಸ್ಥಿತಿ.

ಇಷ್ಟೆಲ್ಲ ಪುರುಷಪ್ರಾಧಾನ್ಯತೆಯ ನಡುವೆಯೂ ಮಾತೃದೇವತೆಯರ ಸ್ಥಾನವೇ ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ಅಧಿಕೃತವಾಗಿ ಉಳಿದಿರುವುದೊಂದು ವಿಶೇಷ. ಆರ್ಥಿಕ ಚಟುವಟಿಕೆ ಗಂಡಸಿನದಾಗುವ ಮೂಲಕ ಆ ರಂಗದಲ್ಲಿ ಪುರುಷ ಮುಖ್ಯವಾಗಿದ್ದಾನಾದರೂ ಸಾಂಸ್ಕೃತಿಕ ಚಟುವಟಿಕೆಯಲ್ಲಿ ಸ್ತ್ರೀಯ ಪ್ರಾಧಾನ್ಯ ಕಡಿಮೆಯಂತೂ ಆಗಿಲ್ಲ. ಮನುಷ್ಯ ಸಮುದಾಯದ ಪಾಲನೆ ಪೋಷಣೆ ಮತ್ತು ರಕ್ಷಕಿಯಾಗಿ ಮಾತೃದೇವತೆ(ಬೇಟೆ ಮತ್ತು ಆಹಾರ ಸಂಗ್ರಹಣೆ ಹಂತ). ಧಾನ್ಯ ದೇವತೆಯಾಗಿ ಮಾತೃದೇವತೆ(ಕೃಷಿ ಹಂತ) ರೋಗನಿಯಂತ್ರಕಳಾಗಿ ಮಾತೃದೇವತೆ (ಗ್ರಾಮಗಳ ಹುಟ್ಟಿನ ನಂತರದ ಸ್ಥಿತಿ). ಈ ರೀತಿಯಲ್ಲಿ ಪ್ರಾಚೀನದಿಂದ ಇಲ್ಲಿಯವರೆಗೆ ಮಾತೃದೇವತೆಯ ಸ್ಥಾನವೇ ಮಿಗಿಲಾಗಿ ಪರಿಗಣಿತವಾಗುತ್ತಾ ಬಂದಿರುವುದನ್ನು ನಾವು ಕಾಣುತ್ತೇವೆ. ದಕ್ಷಿಣ ಭಾರತದ ಇಡೀ ದ್ರಾವಿಡ ಸಮುದಾಯದಲ್ಲಂತೂ ಮಾತೃಮೂಲ ಕುಟುಂಬಗಳೇ ಇತ್ತೀಚಿನವರೆಗೂ ಅಸ್ತಿತ್ವದಲ್ಲಿದ್ದ ಕಾರಣ ಮಾತೃದೇವತೆಯರ ಪ್ರಾಮುಖ್ಯವೂ ಅಷ್ಟೇ ಇತ್ತು. ಬುಡಕಟ್ಟು ಸಮುದಾಯಗಳಿಂದ ನಾಗರಿಕ ಸಮುದಾಯಗಳವರೆಗೆ ಈ ಮಾತು ನಿಜ. ಇಷ್ಟು ಪೀಠಿಕೆಯ ಹಿನ್ನೆಲೆಯಲ್ಲಿ ಬುಡಕಟ್ಟು ದೈವಗಳನ್ನು ಕುರಿತ ನನ್ನ ಗ್ರಹಿಕೆಗಳನ್ನು ಮುಂದೆ ನಿರೂಪಿಸಬಯಸುತ್ತೇನೆ.

PDF created with pdfFactory Pro trial version www.pdffactory.com

೨

ಬುಡಕಟ್ಟು ವೀರರು ಮತ್ತು ಮಾತೆಯರು

ಬುಡಕಟ್ಟು ಜನ ಎಂದು ಯಾರನ್ನು ಕರೆಯುತ್ತೇವೆ ಮತ್ತು ಯಾರು ನಿಜವಾದ ಬುಡಕಟ್ಟುಗಳು ಈ ಪ್ರಶ್ನೆ ಕೂಡ ಅಷ್ಟು ಸುಲಭದ್ದಲ್ಲ. ಈಗಾಗಲೇ ನಾವು ನೋಡಿದಂತೆ ಇವತ್ತಿನ ನಾಗರಿಕ ಹಂತದಲ್ಲಿರುವ ಅನೇಕ ಸಮುದಾಯಗಳು ಕೂಡ ಒಂದು ಕಾಲದ ಬುಡಕಟ್ಟುಗಳೇ ಎಂಬುದರಲ್ಲಿ ಸಂಶಯವಿಲ್ಲ. ಜಗತ್ತಿನ ಬಹುತೇಕ ಜನವರ್ಗಗಳಲ್ಲಿ ಇಂದಿಗೂ ಬುಡಕಟ್ಟಿನ ಅನೇಕ ರೀತಿಯ ಪಳೆಯುಳಿಕೆಗಳು ಕಂಡುಬರುತ್ತಿವೆ. ಹಾಗೆಂದು ಇವತ್ತಿನ ಸ್ಥಿತಿಯಲ್ಲಿ ಎಲ್ಲರೂ ಬುಡಕಟ್ಟುಗಳೇ ಎಂದು ತೀರ್ಮಾನಿಸುವ ಹಾಗೂ ಅಗತ್ಯವೂ ಇಲ್ಲ. ಹಾಗೆಂದು ನಮ್ಮ ಸರ್ಕಾರಗಳು ಗುರುತಿಸಿ ಅಧಿಕೃತ ಎಂದು ಪಟ್ಟಿ ಮಾಡಿರುವವರು ಮಾತ್ರ ಬುಡಕಟ್ಟುಗಳು ಎಂದು ಪರಿಗಣಿಸಬೇಕಾಗಿಯೂ ಇಲ್ಲ. ರಾಜಕಾರಣ ಪ್ರೇರಿತ ಆಡಳಿತಶಾಹಿ ಇದನ್ನೆಲ್ಲ ವೈಜ್ಞಾನಿಕವಾಗಿ ಮಾಡುವುದಿಲ್ಲ. ಆದ್ದರಿಂದ ಸರಕಾರಿ ವಿಂಗಡಣೆ ಕೂಡ ಪರಿಪೂರ್ಣವಲ್ಲ. ಇದು ಪರಿಪೂರ್ಣವಲ್ಲ ಎಂಬುದಕ್ಕೆ ಸಾಕ್ಷಿಯಾಗಿ ಕೇಂದ್ರ ಸರಕಾರ ಇತ್ತೀಚೆಗೆ ತಾನೆ ಮಹಾಶ್ವೇತಾದೇವಿ ಅವರ ನೇತೃತ್ವದಲ್ಲಿ ಅನಧಿಸೂಚಿತ ಬುಡಕಟ್ಟುಗಳನ್ನು ಪಟ್ಟಿ ಮಾಡಲು ಸಮಿತಿಯೊಂದನ್ನು ರಚಿಸಿದೆ. ಕರ್ನಾಟಕದಲ್ಲಿ ಕೂಡ ಈ ಕೊರತೆ ಇದ್ದೇ ಇದೆ. ಕಣ್ಣಿಗೆ ಕಂಡ ಜನವರ್ಗಗಳನ್ನು ಗುರುತಿಸಿ ಕಾಣದಿರುವ ಇನ್ನೂ ಎಷ್ಟೋ ಜನವರ್ಗಗಳನ್ನು ನಿರ್ಲಕ್ಷಿಸಲಾಗಿದೆ. ಸರ್ಕಾರದ ವತಿಯಿಂದಲೇ ಒಂದು ಸಮಗ್ರ ಸಮೀಕ್ಷೆ ಆಗುವ ಅಗತ್ಯವಂತೂ ಇದೆ.

ಹಾಗಾದರೆ ನಿಜವಾದ ಬುಡಕಟ್ಟು ಯಾವುದು? ಯಾವುದೇ ಒಂದು ಪ್ರದೇಶದಲ್ಲಿ ತಮ್ಮದೇ ಆದ ವಿಶಿಷ್ಟ ಜೀವನಪದ್ಧತಿ ರೂಪಿಸಿಕೊಂಡು, ತಮ್ಮದೇ ಆದ ಪರಂಪರೆಯಲ್ಲಿ ನಿರ್ದಿಷ್ಟ ಜ್ಞಾನಶಾಖೆಗಳನ್ನು ಬೆಳೆಸಿಕೊಂಡು, ಸಾಮಾಜಿಕ ಪದ್ಧತಿಗಳನ್ನು ವಿಶಿಷ್ಟವಾಗಿ

ಮತ್ತು ಅನನ್ಯವಾಗಿ ಅನುಸರಿಸುತ್ತಾ ಬರುತ್ತಿರುವ ಜನ ಸಮುದಾಯಕ್ಕೆ ಬುಡಕಟ್ಟು ಅನ್ನಬಹುದು. ಇವರು ಅರಣ್ಯದಲ್ಲೇ ಬದುಕಬೇಕು ಎಂದೇನಿಲ್ಲ. ಬಹುಶಃ ಗಿರಿಜನರು ಎಂಬ ಪದ ಗಿರಿಕಂದರ ನಿವಾಸಿಗಳು ಎಂಬ ಅರ್ಥದಲ್ಲಿಯೇ ನಿರೂಪಿತವಾಗಿರುವಂತಿದೆ. ಈ ಗಿರಿಜನರು ಎಂಬ ಪದ ಸಹ್ಯಾದ್ರಿಯ ಘಟ್ಟಗಳು ಮತ್ತು ಕರಾವಳಿಯ ಅರಣ್ಯಗಳಲ್ಲಿ ವಾಸಿಸುವ ಜನರಿಗೆ ಸರಿಯಾಗಿ ಒಪ್ಪುವ ಮಾತು. ಆರೆ ಬಯಲು ಸೀಮೆಯಲ್ಲೂ ಅನೇಕ ರೀತಿಯ ಬುಡಕಟ್ಟು ಜನರಿದ್ದಾರೆ. ಒಂದೇ ಪ್ರದೇಶಕ್ಕೆ ಸೀಮಿತವಾದವರೂ ಇದ್ದಾರೆ.

ಅಲೆಮಾರಿ ಬುಡಕಟ್ಟುಗಳೂ ಇವೆ. ಆದ್ದರಿಂದ ಬುಡಕಟ್ಟು ಎಂದರೆ ಸಮಾನವಾದ ವಿಶಿಷ್ಟಾಂಶಗಳನ್ನು ಪಡೆದ ಒಂದು ಸಮುದಾಯ ಎಂದು ನಾವು ಅರ್ಥ ಮಾಡಿಕೊಳ್ಳಬೇಕು. ಉಡಿಗೆ ತೊಡಿಗೆ, ಊಟ ಉಪಚಾರ, ಆರಾಧನೆ ಸಂಪ್ರದಾಯ, ಭಾಷೆ ಸಾಹಿತ್ಯ, ನ್ಯಾಯಪದ್ಧತಿ, ನಿಷೇಧ ರೂಪಗಳು, ರೂಪಿಸಿಕೊಂಡ ಪರಂಪರೆ ಹಾಗೂ ನಂಬಿಕೆ ಇತ್ಯಾದಿಯಾಗಿ ಎಲ್ಲವೂ ಯಾವುದೇ ಮತ್ತೊಂದು ಸಮಾಜ ಅಥವಾ ಸಮುದಾಯಕ್ಕಿಂತ ಭಿನ್ನವಾಗಿ ಒಂದು ಬುಡಕಟ್ಟಿನಲ್ಲಿ ಕಾಣಿಸಿಕೊಳ್ಳುತ್ತವೆ. ಭಿನ್ನತೆ ಅಷ್ಟೇ ಅಲ್ಲ, ಅವರ ಆಚಾರ ವಿಚಾರ ಸಂಪ್ರದಾಯಗಳು ಮತ್ತು ಪ್ರಾಚೀನದಿಂದ ಬಂದ ಪರಂಪರಾಗತ ಪದ್ಧತಿಗಳನ್ನು ಇನ್ನೂ ಅನುಸರಿಸುವ ಪ್ರಯತ್ನದಲ್ಲಿರುತ್ತವೆ. ಒಟ್ಟಾರೆ, ಪ್ರಾಚೀನತೆ–ವಿಶಿಷ್ಟತೆ–ಪ್ರತ್ಯೇಕತೆ ಈ ಮೂರು ಒಂದು ಬುಡಕಟ್ಟಿನ ಮುಖ್ಯ ಲಕ್ಷಣಗಳು. ಇಂದಿನ ದಿನಮಾನದಲ್ಲಿ ಪ್ರಾಚೀನತೆ ಇರಲೇಬೇಕಾದ ಅಂಶ ಎಂದು ತಿಳಿಯಬೇಕಾಗಿಲ್ಲ. ಯಾಕೆಂದರೆ ಹೊಸಕಾಲದ ಬದಲಾವಣೆಯ ವೇಗ ಅಷ್ಟು ತೀವ್ರವಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಬುಡಕಟ್ಟು ದೈವಗಳ ಸ್ವರೂಪವನ್ನು ನಾವೀಗ ನೋಡಬಹುದಾಗಿದೆ.

೨.೧. ಬೀರನ ಮನೆ

ಉತ್ತರ ಕನ್ನಡ ಜಿಲ್ಲೆಯಲ್ಲಿ ನನಗೆ ಅತ್ಯಂತ ಪ್ರಿಯವಾದ ಬುಡಕಟ್ಟು ಹಾಲಕ್ಕಿ ಒಕ್ಕಲಿಗ ಸಮುದಾಯ. ಅಲ್ಲಿಂದಲೇ ನನ್ನ ಈ ವ್ಯಾಖ್ಯಾನವನ್ನು ಆರಂಭಿಸುತ್ತೇನೆ. ಉತ್ತರ ಕನ್ನಡವನ್ನು ನಾನಿಲ್ಲಿ ವರ್ಣಿಸಲು ಹೋಗುವುದಿಲ್ಲ. ಅಲ್ಲಿನ ಅಭೇದ್ಯ ಅರಣ್ಯಗಳು, ನದಿ, ಸಮುದ್ರ ಇವೆಲ್ಲದರ ಸಂಗಮ ಸ್ಥಾನವಾಗಿ ರಮ್ಯ ಪ್ರಕೃತಿಯ ತಾಣವಾದ ಆ ಜಿಲ್ಲೆ ಅತ್ಯಂತ ವಿಶಿಷ್ಟವಾದದ್ದು. ಘಟ್ಟ ಮತ್ತು ಸಮುದ್ರದ ನಡುವಿನ ನದೀತಟಗಳಲ್ಲಿ ವಾಸ ಮಾಡುವ ಹಾಲಕ್ಕಿ ಒಕ್ಕಲಿಗರು ಆ ಜಿಲ್ಲೆಯ ಪ್ರಮುಖ ಬುಡಕಟ್ಟುಗಳಲ್ಲಿ ಒಂದು. ಅವರ ದೈವಗಳು ನಮಗೆ ಅನೇಕ ಬಗೆಯ ವಿಪುಲ ಮಾಹಿತಿಗಳನ್ನು ಒದಗಿಸುವ ಮೂಲಕ ಸಾಂಸ್ಕೃತಿಕ ಇತಿಹಾಸವೊಂದನ್ನು ತೆರೆದಿಡುತ್ತದೆ. ಅಂಥ ಒಂದು ಸ್ಥಳದ ಪರಿಚಯವನ್ನೀಗ ಮಾಡ ಬಯಸುತ್ತೇನೆ.

PDF created with pdfFactory Pro trial version www.pdffactory.com

ಹೊನ್ನಾವರ ತಾಲೂಕಿನ ಅಪ್ಪಿಕೇರಿ ಮತ್ತು ಶಿಕಾರು ಎಂಬ ಎರಡು ಹಾಲಕ್ಕಿ ಕೊಪ್ಪಗಳ ನಡುವೆ ಬೀರನಗುಡಿಯೊಂದಿದೆ. ಅದನ್ನು ಬ್ಯಾಟೆಬೀರನಗುಡಿ ಎಂದೂ ಕರೆಯುತ್ತಾರೆ. ಪಶ್ಚಿಮದಲ್ಲಿ ಭೋರ್ಗರೆವ ಸಮುದ್ರ. ಸಮುದ್ರದಿಂದ ಮೂರು ಕಿ.ಮೀ. ಒಳಗೆ ಒಂದು ಕುರುಚಲು ಗುಡ್ಡದ ತಪ್ಪಲಿನಲ್ಲಿ ಈ ಬೀರನಗುಡಿ ಇದೆ. ಇಲ್ಲಿ ಈ ಬೀರನಗುಡಿ ಒಂದೇ ಇದ್ದರೆ ಆಶ್ಚರ್ಯವಾಗುತ್ತಿರಲಿಲ್ಲ. ಅದೊಂದು ಸಂಕೀರ್ಣ ಬಯಲು ದೇವಾಲಯ ಎನ್ನಬಹುದು. ಬೀರನಗುಡಿಯ ಬಯಲು ವಿಶಾಲವಾಗಿದ್ದು, ಸುತ್ತಲೂ ಕರಿಯ ಕಲ್ಲುಗಳ ಮೆದು ಬಂಡೆಗಳಿವೆ. ಆ ಬಂಡೆಗಳ ನಡುವಿನ ಬಯಲಲ್ಲಿ ವಾಸ ಮಾಡುವ ದೇವರುಗಳು ಅಸಂಖ್ಯಾತ.

ಬೀರನಗುಡಿಯಲ್ಲಿ ಬ್ಯಾಟೆ ಬೀರ ಮತ್ತು ಕರಬೀರ ಎಂಬ ಇಬ್ಬರು ವೀರರಿದ್ದಾರೆ. ಅವರ ಪಕ್ಕದಲ್ಲಿ ಭೂಮಿತಾಯಿಯ ಮೂರ್ತಿ ಇದೆ. ಬೀರರು ಇಬ್ಬರೂ ಬಿಲ್ಲು ಬಾಣ ಹಿಡಿದು ಬೇಟೆಗೆ ಮತ್ತು ಸಮರಕ್ಕೆ ಸಿದ್ಧರಾದವರಂತೆ ಕಾಣುತ್ತಾರೆ. ಕುಡಿ ಮೀಸೆ, ಮುಖದ ಪೌರುಷ ಅವರು ಅಸಾಮಾನ್ಯ ವೀರರು ಎಂಬುದನ್ನು ದೃಢಪಡಿಸುತ್ತದೆ. ಭೂಮಿತಾಯಿ ಸೌಮ್ಯವಾಗಿ ಪ್ರಸನ್ನಳಾಗಿ ನಿಂತಿದ್ದಾಳೆ. ಅವಳ ಮುಖದಲ್ಲಿನ ಪ್ರಸನ್ನತೆ ಪೊರೆಯುವ, ರಕ್ಷಿಸುವ, ನೀಡುವ ಮಾತೃವಿನಂತೆಯೇ ಇದೆ. ಹೊರಗಡೆ ಒಂದು ಸಣ್ಣ ಮಾಡಿನ ಕೆಳಗೆ ಜಟ್ಟಿಗ ಎಂಬ ಮತ್ತೊಬ್ಬ ವೀರನಿದ್ದಾನೆ. ಅದರ ಆಚೆಗೆ ಅಷ್ಟು ದೂರದಲ್ಲಿ ನೆಲದಿಂದ ಮೇಲೆದ್ದು ನಿಂತ ಶಿಶ್ನರೂಪದ ಕಲ್ಲಿನ ಆಕೃತಿಯೊಂದಿದೆ. ಅದರ ಪಕ್ಕದಲ್ಲಿ ವೀರರು ಬೀರರು ಬಳಸುವ ಆಯುಧ ಎನ್ನಲಾದ ತ್ರಿಶೂಲ ರೂಪದ ಕೊಂಬುಗಳಿವೆ. ಅದರ ಪಕ್ಕದ ಇನ್ನೊಂದು ಸಣ್ಣ ಗುಡಿಯಲ್ಲಿ ಹುಲಿಯ ಚಿತ್ರವಿರುವ ಹುಲಿದೇವರು ಇದೆ. ಅದರ ಪಕ್ಕದ ಮತ್ತೊಂದು ಗುದ್ದಿಗೆಯಲ್ಲಿ ಚಿತ್ರವಿಚಿತ್ರವಾಗಿ ಕಾಣುವ ಅನೇಕ ರೀತಿಯ ಒರಟು ಕಲ್ಲಿನ ರೂಪದ ಆಕೃತಿಗಳನ್ನು ಸ್ಥಾಪಿಸಲಾಗಿದೆ. ಅವೆಲ್ಲಕ್ಕು ಒಂದೊಂದು ದೈವದ ಹೆಸರಿದೆ. ಇವೆಲ್ಲ ಸಾಲದೆಂಬಂತೆ ಹೆಣ್ಣಿನ ಯೋನಿಯಂತೆ ಕಾಣುವ ಉರುಟು ಕಲ್ಲಿನ ಸಣ್ಣ ಬಂಡೆಯೊಂದಕ್ಕೆ ಹರಿಸಿನ ಕುಂಕುಮ ಹಚ್ಚಿ ಪೂಜೆ ಮಾಡಿರುವ ಕುರುಹುಗಳಿವೆ. ಇಷ್ಟೆಲ್ಲ ದೈವಗಳ ಈ ಸಂಕೀರ್ಣ ನಿಜಕ್ಕು ನಮ್ಮನ್ನು ಯೋಚನೆಗೆ ಹಚ್ಚುತ್ತದೆ. ಮುಖ್ಯ ಸ್ಥಳವಾದ ಬೀರನಗುಡಿಯಲ್ಲಿರುವ ಬೀರರು ಮತ್ತು ಭೂಮಿತಾಯಿಗೆ ಗುನಗರ ಜನಾಂಗದ ಪೂಜಾರಿ(ಕುಂಬಾರರು) ಪೂಜೆ ಮಾಡುತ್ತಾನೆ. ಉಳಿದಂತೆ ಬಯಲಲ್ಲಿರುವ ಎಲ್ಲ ದೇವಾನುದೇವತೆಯರನ್ನು ಯಾರಾದರೂ ಹೇಗಾದರೂ ಪೂಜಿಸಬಹುದು.

ಪ್ರಾಚೀನ ನಂಬಿಕೆ ಮತ್ತು ಸಂಸ್ಕೃತಿಯನ್ನು ಉಳಿಸಿಕೊಂಡ ಬುಡಕಟ್ಟಿನ ಸಾಂಸ್ಕೃತಿಕ ಜೀವನ ಎಷ್ಟು ಸಂಕೀರ್ಣ ಎಂಬುದನ್ನು ತಿಳಿಯಬೇಕಾದರೆ ಹಾಲಕ್ಕಿ ಒಕ್ಕಲಿಗರ ದೈವಗಳನ್ನು ಕುರಿತ ಮತ್ತಷ್ಟು ನಂಬಿಕೆಗಳನ್ನು ಗಮನಿಸುವ ಅಗತ್ಯವಿದೆ.

ಸರಣ ಸರಣೆಂದೆನು ದೇವಾ
ಸರಣೋ ಸರಣಂದೆನು ದೇವರಿಗೇ
ಮೂಡಿ ಬರುವ ಸೂಲ್ಯಮ್ಮ ದೇವರಿಗೇ
ಸರಣೋ ಸರಣಂದೋ ದೇವರಿಗೇ
ಕಂದುವಲ್ಲಿ ಚಂದುರಾಗೆ ದೇವರಿಗೇ
ಸರಣೋ ಸರಣಂದೆನು ನಾ
ಕೈಯ್ಯ ಕೊಟ್ಟ ಕೈಯ್ಯಮ್ಮ ದೇವರಿಗೆ
ಕಾಲಕೊಟ್ಟ ಕಾಲಮ್ಮ ದೇವರಿಗೆ
ಸರಣೋ ಸರಣಂದೆನು ನಾ

ದೇವ ದೇವರಿಗೆಲ್ಲ ಸೂರ್ಯದೇವರೆ ಹೆಚ್ಚು ಎಂದು ಹೇಳುವ ಹಾಲಕ್ಕಿ ಒಕ್ಕಲಿಗರು ಚಂದ್ರನನ್ನು ಮತ್ತು ಚಂದ್ರನ ಬೆಳದಿಂಗಳನ್ನು ಅಪಾರವಾಗಿ ಪ್ರೀತಿಸುತ್ತಾರೆ. ಬೆಳದಿಂಗಳನ್ನು ಕುರಿತಂತೆ ಅವರಲ್ಲಿರುವ ಅಪಾರ ಜನಪದ ಸಾಹಿತ್ಯ ಚಂದ್ರನ ಬಗ್ಗೆ ಅವರಿಗಿರುವ ಅನನ್ಯ ಶ್ರದ್ಧೆಯನ್ನು ನಿರೂಪಿಸುತ್ತದೆ. ಕಣ್ಣಿಗೆ ಕಾಣುವಂಥ ದೇವರುಗಳಾದ ಇವರಿಗೆ ದಿನದ ಮೊದಲ ನಮಸ್ಕಾರ ಎಂಬುದು ಅವರ ನಡವಳಿಕೆ. ನಮ್ಮ ಹಿಂದಿನವರು ಸೂರ್ಯಾರಾಧಕರು ಮತ್ತು ಚಂದ್ರಾರಾಧಕರು ಎಂಬ ಎರಡು ವಿಭಾಗಗಳನ್ನು ಮಾಡಿ ಪ್ರಮುಖ ಜನವರ್ಗಗಳನ್ನು ಅವುಗಳಲ್ಲಿ ಗುರುತಿಸಲು ಪ್ರಯತ್ನಿಸಿದ್ದಾರೆ. ಆದರೆ ಅದ್ಯಾವ ಪೂರ್ವಪ್ರಜ್ಞೆಯೂ ಇಲ್ಲದ ಈ ಜನ ಪ್ರತಿದಿನ ತಮಗೆ ಬೆಳಕನ್ನು ಶಕ್ತಿಯನ್ನು ನೀಡುವ, ಕಣ್ಣಿಗೆ ಪ್ರತ್ಯಕ್ಷ ದೇವರಾಗಿ ಕಾಣುವ ಸೂರ್ಯಚಂದ್ರರನ್ನು ಮುಗ್ಧವಾಗಿ ಆರಾಧಿಸುತ್ತಾರೆ. ನಿಜವಾದ ಅರ್ಥದಲ್ಲಿ ಇದೇ ಅವರ ಮೂಲ ದೈವಾರಾಧನೆ. ಗಿಳಿ, ಪಾರಿವಾಳ, ನವಿಲು ಇವರ ಆರಾಧ್ಯ ಪಕ್ಷಿಗಳು. ಇವರ ಹಾಡುಗಳ ತುಂಬ ಈ ಪಕ್ಷಿಗಳು ಹಾಡುತ್ತವೆ, ಸಂಭಾಷಿಸುತ್ತವೆ, ಆತ್ಮೀಯವಾಗಿ ಮಾತಾಡುತ್ತವೆ. ಹಾಲಕ್ಕಿ ಒಕ್ಕಲಿಗರ ಈ ನಿಸರ್ಗಾರಾಧನೆ ಬುಡಕಟ್ಟುಗಳಲ್ಲಿ ರೂಪುಗೊಂಡ ಆದಿ ದೈವಾರಾಧನೆಯ ವಿವಿಧ ಸ್ಥಿತಿಗಳಿಗೆ ಸಾಕ್ಷಿಯಲ್ಲದೆ ಬೇರೇನೂ ಅಲ್ಲ.

ಭೂಮಿಯಾ ನೆನದೇನಯ್ಯ ಭೂಮಿಗೆ ನಾವ್ ಬಲದೇನಾ
ಚಾಮಿ ನಿನ್ನಲ್ಲಿ ಚರಣಂಬೋಲಾ
ಮೆಟ್ಟಿದಲ್ಲಿ ಭೊಮಿಗೆ ಚರಣಂಬೋ ದೇವಾರೇ
ಹರಿವಾಲೆ ನೀರಿಗೆ ನಾಮೇ ಶರಣಂಬೋ ದೇವಾರೇ
ಬೀಸುವಂತ ಗಾಳಿಗೇ ನಾಮೆ ಶರಣಂಬೋ ದೇವಾರೇ
ಸುತ್ತು ಮುತ್ತು ಆಕಾಶಕೆ ನಾಮೇ ಶರಣೊಬೋಲಾ

PDF created with pdfFactory Pro trial version www.pdffactory.com

ಬೆಳೆಯನ್ನು ಕೊಡುವ ಭೂಮಿತಾಯಿ, ದಾಹ ಇಂಗಿಸುವ ನೀರು, ಜೀವ ದ್ರವ್ಯವಾದ ಗಾಳಿ, ಮಳೆ ತರುವ ಆಕಾಶ ಈ ಮೂಲಭೂತ ವಸ್ತುಗಳೇ ಅವರ ದೈವಗಳು. ಪಂಚಭೂತಗಳ ಈ ದೇಸಿ ಪರಿಭಾವನೆ ಅತ್ಯಂತ ಸರಳವಾದದ್ದು. ಹಾಲಕ್ಕಿ ಜನ ಸೂರ್ಯನನನು, ಚಂದ್ರನನ್ನು, ಬೆಳ್ಳಿ, ಶುಕ್ರ ಮುಂತಾದ ನಕ್ಷತ್ರಗಳನ್ನು ಆರಾಧಿಸುವುದಷ್ಟೇ ಅಲ್ಲದೆ, ತಮ್ಮ ಪುರಾಣಗಳ ಪಾತ್ರಗಳನ್ನಾಗಿಯೂ ಅವರನ್ನು ಕಂಡಿದ್ದಾರೆ. ಒಂದು ಮರವನ್ನು ಕಡಿಯುವ ಪ್ರಸಂಗಬಂದಲ್ಲಿ ಅದನ್ನು ಪೂಜಿಸಿ, ಪ್ರಕೃತಿ ಮಾತೆಯ ಕ್ಷಮೆ ಕೇಳಿ ಮರ ಕಡಿಯುವ ಪದ್ಧತಿ ಅವರಲ್ಲಿತ್ತು. ತುಳಸಿ ಮತ್ತು ಪಂಬೆ ಅವರ ಇಷ್ಟದೈವ ರೂಪದ ಸಸ್ಯಗಳು. ಮುಂದಿನ ತುಳಸಿಕಟ್ಟೆಯಲ್ಲಿ ತುಳಸಿ ಪೂಜೆಗೊಂಡರೆ ಹಿತ್ತಲಿನಲ್ಲಿ ತುಂಬೆ ಪೂಜೆಗೊಳ್ಳುತ್ತದೆ. ಅಷ್ಟೇ ಅಲ್ಲ, ತಮ್ಮ ಬೇಸಾಯಕ್ಕೆ ಬೇಕಾದ ಗೋವನ್ನು, ಅದಕ್ಕೆ ಮೃತ್ಯು ರೂಪವಾದ ಹುಲಿಯನ್ನು, ಹಕ್ಕಿ–ಪಕ್ಷಿಗಳಾದಿಯಾಗಿ ಗಿಳಿ ಗೊರವಂಕ ನವಿಲುಗಳನ್ನು ಅವರು ಆರಾಧಿಸುತ್ತಾರೆ. ಇದೆಲ್ಲ ಏನನ್ನು ಸೂಚಿಸುತ್ತದೆಂದರೆ ಹಾಲಕ್ಕಿ ಒಕ್ಕಲಿಗರು ಮೂಲದಲ್ಲಿ ನಿಸರ್ಗಾರಾಧಕರು. ಅವರನ್ನು ತನ್ನ ಒಡಲಿನಲ್ಲಿಟ್ಟು ಪೊರೆಯುವ ಸಮಸ್ತ ನಿಸರ್ಗವೂ ಅವರಿಗೆ ದೈವ. ಆ ನಿಸರ್ಗದ ಆರಾಧನೆ ಈಗ ಪಳೆಯುಳಿಕೆಯಂತೆ ಅವರ ನಡುವೆ ಕಂಡುಬರುತ್ತಿದೆ. ಇದು ಇವರ ದೈವಾರಾಧನೆಯ ಮೊದಲ ಹಂತ.

ಈಗ ಇವರ ಆರಾಧನೆಯ ಎರಡನೆಯ ಹಂತಕ್ಕೆ ಬರೋಣ. ಬಹುಶಃ ಇವರ ಆಹಾರ ಸಂಗ್ರಾಹಕರಾಗಿದ್ದ ಕಾಲವದು. ಗಂಡಸರು ಆಹಾರ ಸಂಗ್ರಹಣೆಗೆ ಹೊರಗೆ ಹೋದಾಗಲೇ ಹೆಣ್ಣು ಒಂದೇ ಕಡೆ ಇದ್ದು ಕೃಷಿಯ ಅನ್ವೇಷಣೆ ಮಾಡಿದಳು ಎಂಬ ತರ್ಕವನ್ನು ಈಗಾಗಲೇ ನೋಡಿದ್ದೇವೆ. ಇದು ನಿಜ ಕೂಡ. ಆಹಾರ ಸಂಗ್ರಹಣೆಯ ಜೊತೆಜೊತೆಗೇ ಧಾನ್ಯ ಬೆಳೆಯುವ ಸಂಸ್ಕೃತಿಯನ್ನು ಮನುಷ್ಯ ರೂಢಿಸಿಕೊಂಡ ಮೇಲೆ ಮಾತೃಸ್ವರೂಪಿಯೂ ಆದ ಭೂಮಿಯನ್ನು, ಗರ್ಭಧರಿಸುವ ಹೆಣ್ಣನೊಡನೆ ಹೋಲಿಸಲಾಯಿತು. ಇವರಿಬ್ಬರೂ ಸಮೃದ್ಧಿಯ ಸಂಕೇತಗಳಾದರು. ಅಲ್ಲಿಂದ ಮಾತೃವಿನ ಆರಾಧನೆ ಮೊದಲಾಯಿತು. ಮಾತೃ ಎಲ್ಲಕ್ಕೂ ಮೊದಲಾದಳು. ಈ ಹಂತದಲ್ಲಿಯೇ ಮಾತೃಗಳು ದೇವತೆಯರಾಗಿ ಆರಾಧನೆಗೆ ಒಳಗಾದದ್ದು. ಇದರಲ್ಲಿ ಎರಡು ವಿಧ. ಮಧ್ಯಕಾಲೀನ ಕರ್ನಾಟಕದಲ್ಲಿ ಹುಟ್ಟಿಕೊಂಡ ಸತಿಪದ್ಧತಿಯ ಕಾರಣದಿಂದ ಕೊಂಡಕ್ಕೆ ಬಿದ್ದವರು, ಆತ್ಮಹತ್ಯೆ ಮಾಡಿಕೊಂಡವರು ಅಥವಾ ಹತ್ಯೆಗೊಳಗಾದವರು ದೇವತೆಯರಾದ ಕಥೆ ಬೇರೆ. ಇದು ಪುರುಷಪ್ರಧಾನ ಸಮಾಜ ಸೃಷ್ಟಿಸಿದ ಮೌಲ್ಯ. ಆದರೆ ಪ್ರಾಚೀನದಲ್ಲಿ, ಅಂದರೆ ಆರ್ಯರು ಈ ದೇಶಕ್ಕೆ ಬರುವ ಮೊದಲು, ಈ ನೆಲದಲ್ಲಿ ಮಾತೃವಿನ ಸ್ಥಾನ ಅತ್ಯಂತ ಪ್ರಧಾನವಾದುದಾಗಿತ್ತು. ಹಾಲಕ್ಕಿ ಜನಗಳಲ್ಲಿ ಈ ಎರಡು ರೀತಿಯ ಮಾತೃದೈವಗಳನ್ನು ನಾವು ಕಾಣುತ್ತೇವೆ.

ಕಾಡಿನ ರಕ್ಷಕರಾಗಿ, ಆ ಮೂಲಕ ತಮ್ಮನ್ನು ಪೊರೆಯುತ್ತಿದ್ದ ಮಾತೃವಿನ ರೂಪದಲ್ಲಿ ಕಾನಮ್ಮ, ದೇವಿಕಾನಮ್ಮ, ಕರಿಕಾನಮ್ಮ ಎಂಬ ನಿಸರ್ಗ ದೇವತೆಯರು ಇವರ ಸುತ್ತಮುತ್ತ ಇದ್ದಾರೆ. ಮಾಸ್ತಿ, ಅರೆಮಾಸ್ತಿ, ಹುಚ್ಚಮಾಸ್ತಿ ಎಂಬ ಹೆಸರಿನ ಮಹಾಸತಿಯರಾದವರ ಗುಡಿಗಳು ಹಾಲಕ್ಕಿ ಸಮುದಾಯದಲ್ಲಿ ಇವೆ. ಈ ಎಲ್ಲ ದೇವತೆಗಳಿಗೆ ಈಗಲೂ ಪೂಜೆ ಸಲ್ಲುತ್ತಿದೆ. ಜನಪ್ರಿಯ ಗ್ರಾಮದೇವತೆಗಳೆನಿಸಿದ ಮಾರಿಕಾಂಬೆ, ಕಾಳಿಕಾಂಬೆ, ಚೌಡಿ. ಕೋಗ್ತಿ ಮುಂತಾದ ಬೇರೆ ಬೇರೆ ರಕ್ಷಕ ದೇವತೆಯರನ್ನೂ ಇವರು ಆರಾಧಿಸುತ್ತಾರೆ. ಇದು ಇವರ ದೈವಾರಾಧನೆಯ ಎರಡನೇ ಹಂತ.

ಹಾಲಕ್ಕಿ ಒಕ್ಕಲಿಗರ ದೈವಾರಾಧನೆಯ ಮೂರನೇ ಹಂತವನ್ನು ಈಗ ನೋಡೋಣ. ಒಂದಾನೊಂದು ಕಾಲಕ್ಕೆ ಬೇಟೆ ಮತ್ತು ಪಶುಪಾಲನೆಯೂ ಇವರ ಮುಖ್ಯ ಕಸುಬಾಗಿತ್ತು. ಬಹುಶಃ ಪಶುಪಾಲನೆ ಮತ್ತು ಕೃಷಿಯನ್ನು ಒಟ್ಟಿಗೆ ಇವರು ಪಾಲಿಸಿಕೊಂಡು ಬಂದಂತೆ ಕಾಣುತ್ತದೆ. ಪಶುಪಾಲನೆ ಪ್ರಧಾನವಾದಾಗ ಪುರುಷ ಮುಖ್ಯನಾಗುತ್ತಾನೆ. ಅಂಥ ಸಂದರ್ಭದಲ್ಲಿ ಅನೇಕ ಪುರುಷ ದೇವತೆಗಳ ಉದ್ಭವವೂ

ಸೂರ್ಯಚಂದ್ರ

PDF created with pdfFactory Pro trial version www.pdffactory.com

ಆಗಿದೆ. ಬೀರರು ಮತ್ತು ಜಟ್ಟಿಗರು ಈ ಸಂದರ್ಭದ ಪ್ರಮುಖ ದೇವರುಗಳು. ಅನೇಕ ಸ್ಥಳಗಳಲ್ಲಿ ಶಿಶ್ನರೂಪದ ಜಟ್ಟಿಗ ಇದ್ದು ಅವನನ್ನು ಆರಾಧಿಸುತ್ತಾರೆ. ನಾನು ಈ ಹಿಂದೆ ಹೇಳಿದ ಅಪ್ಪಿಕೇರಿಯ ದೈವ ಸಂಕೀರ್ಣವನ್ನು ನೀವು ಮತ್ತೆ ನೆನಪಿಸಿಕೊಳ್ಳಬಹುದು. ಜಟ್ಟಿಗ ಎಂದರೆ ಜಡೆಗ ಜಟಾಧಾರಿ, ಶಿವನ ಒಂದು ರೂಪ. ಸೃಷ್ಟಿಗೆ ಕಾರಣನಾದವನು ಎಂದು ಊಹಿಸಬಹುದಾಗಿದೆ. ಜಟ್ಟಿಗ ಅಂದರೆ ಶಕ್ತಿವಂತ, ಗಟ್ಟಿಗ, ಪರಾಕ್ರಮಿ ಎಂಬ ಅರ್ಥಗಳನ್ನೂ ಕೊಡಬಹುದು. ಒಟ್ಟಿನಲ್ಲಿ ಪಶುಸಂಗೋಪನಾ ಹಂತದ ಈ ದೈವ ಅವರ ರಕ್ಷಕನಾಗಿ ಕಾರ್ಯ ನಿರ್ವಹಿಸಿದಂತಿದೆ.

ಈ ಬೀರರಲ್ಲಿ ಅನೇಕ ವಿಧವಾದ ದೈವಗಳುಂಟು. ಉದಾಹರಣೆಗೆ 'ಬ್ಯಾಟಿಬೀರ' ಎಂದರೆ ಅವರ ಬೇಟೆಗೆ ಸಹಾಯ ಮಾಡುವ ದೇವರು. 'ಗೋಳಿ ಬೀರ' ಎಂದರೆ ರೋಗ ನಿರೋಧಕ ದೇವರು ಗೋಣಿ ಚಕ್ಕೆಯನ್ನು ನೀರಿನಲ್ಲಿ ಕುದಿಸಿ ಮೈಗೆ ಲೇಪಿಸಿಕೊಂಡರೆ ಚರ್ಮರೋಗ ನಿವಾರಣೆಯಾಗುತ್ತದೆ. ಆದ್ದರಿಂದ ಆ ಗೋಳಿ(ಣಿ) ಮರದ ಕೆಳಗೆ ಇರುವವನು ಗೋಳಿ ಬೀರ. ಇದೇ ರೀತಿಯಲ್ಲಿ ಸಂತಾನಬೀರರು ಉಂಟು. ದಂಡಿನಬೀರ ಯುದ್ಧದಲ್ಲಿ ಸಹಾಯ ಮಾಡಿದವನು. ಹುಲಿಬೀರ ಹುಲಿಯನ್ನು ಕೊಂದವನು, ಹಂದಿಬೀರ ಹಂದಿಗಳಿಂದ ಬೆಳೆಯನ್ನು ರಕ್ಷಿಸಿದವನು. ಬಟ್ಟೆಬೀರ ದಾರಿಗಳನ್ನು ಕಾಯುತ್ತಾ ವೈರಿಗಳನ್ನು ತಡೆಯುವವನು. ಹೀಗೆ ನಾನಾ ರೀತಿಯ ಬೀರರೂ ಉಂಟು. ಆದ್ದರಿಂದಲೇ ಇವರ ದೇವಸ್ಥಾನಗಳಲ್ಲಿ ಹುಲಿ ಮತ್ತು ಹಂದಿಗಳ ಪ್ರತಿಮೆಗಳೂ ಉಂಟು.

ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಈ ಬೀರರು ಮತ್ತು ಜಟ್ಟಿಗರು ಬನವೊಂದರಲ್ಲಿ ನೆಲೆಸಿರುತ್ತಾರೆ. 'ಬನ' ಅಂದರೆ ಹಲವು ರೀತಿ ಹಾಲು ಉತ್ಪತ್ತಿ ಮಾಡುವ ಮರಗಿಡ ಬಳ್ಳಿಗಳು. ಆಲ, ಅರಳಿ, ಗೋಳಿ ಇತ್ಯಾದಿಯೆಲ್ಲವೂ ಈ ಪರಿವಾರದಲ್ಲಿ ಬರುತ್ತವೆ. ಅಂದರೆ ಇವೆಲ್ಲ ಸಮೃದ್ಧಿಯ ಸಂಕೇತಗಳು. ಅಂಥ ಬನದಲ್ಲಿ ಬಹುತೇಕ ಗ್ರಾಮದೇವತೆಯರ ಮೂರ್ತಿಗಳಿರುತ್ತವೆ. ಅಥವಾ ಗ್ರಾಮದೇವತೆಯೆಂದು ಹೇಳಲಾಗುವ ಚಿಹ್ನೆಯೊಂದು ಇದ್ದೇ ಇರುತ್ತದೆ. ಆ ಗ್ರಾಮದೇವತೆಯ ಪರಿವಾರದ ಸೇವಕರಾಗಿ ಈ ಬೀರರು ಮತ್ತು ಜಟ್ಟಿಗರು ಇರುತ್ತಾರೆ. ಅಥವಾ ಅವಳ ರಕ್ಷಕ ಭಂಟರಾಗಿ ಇವರು ಇರುತ್ತಾರೆ. ಬೇಟೆ ಮತ್ತು ಪಶುಪಾಲನೆಯ ಹಂತದಲ್ಲಿ ಈ ಪುರುಷ ದೈವಗಳ ಸೃಷ್ಟಿಯಾದರೂ ಅವು ಕೃಷಿಯ ಅನ್ವೇಷಕಿ ಮತ್ತು ಒಡತಿಯಾಗಿದ್ದ ಸ್ತ್ರೀಯ ಅಧೀನದಲ್ಲಿವೆ ಎಂಬುವುದೇ ಇಲ್ಲಿ ಮುಖ್ಯ ಸಂಗತಿ. ಮಾತೃಪ್ರಧಾನ ವ್ಯವಸ್ಥೆ ಈ ಜನವರ್ಗದಲ್ಲಿ ಇತ್ತೀಚಿನವರೆಗೂ ರೂಢಿಯಲ್ಲಿತ್ತು ಮತ್ತು ಆ ರೀತಿಯ ಒಂದು ಆಂತರ್ಯದ ಗೌರವ ಮಾತೃವಿಗೆ

ಈಗಲೂ ಇದೆ ಅವರ ಈ ಆರಾಧನಾ ವಿಧಾನ ಮತ್ತು ಅನುಸರಿಸುವ ಆಚರಣೆಗಳೇ ಸಾಕ್ಷಿ. ಇಷ್ಟಲ್ಲದೆ ಬನದ ಚೌಡಿ ಹಾಗೂ ಗದ್ದೆಯ ಅಂಚಿನ ಮಾಸ್ತಿಗುಡಿಗಳು ಹಾಲಕ್ಕಿ ಸಮುದಾಯಗಳಿರುವ ಎಲ್ಲ ಕೊಪ್ಪಗಳಲ್ಲಿಯೂ ವಿಶೇಷವಾಗಿ ಕಾಣಸಿಗುತ್ತವೆ. ಇವರು ಹಿಂದೊಂದು ದಿನ ಸತಿಯಾದವರು ಎಂಬುದು ನಿರ್ವಿವಾದ.

ಇನ್ನು ನಾಲ್ಕನೆಯ ಹಂತಕ್ಕೆ ಬರೋಣ. ಬರಬರುತ್ತಾ ಕಾಲ ಬದಲಾದಂತೆ ಪುರುಷಪ್ರಧಾನ ವ್ಯವಸ್ಥೆ ಸರ್ವವ್ಯಾಪಿಯಾಗಿ ತನ್ನ ಬಾಹುಗಳನ್ನು ಚಾಚಿತು. ದೈವಗಳ ಸ್ಥಾನಮಾನದಲ್ಲಿ ಏರುಪೇರಾಯಿತು. ಇದುವರೆಗೆ ದ್ರಾವಿಡ ಪರಂಪರೆಯಲ್ಲಿ ಬೆಳೆದುಬಂದ ಸಾಂಸ್ಕೃತಿಕ ಜೀವನಕ್ಕೆ ವೈದಿಕತನದ ಸ್ಪರ್ಶವಾದದ್ದು ಈ ಹಂತದ ಪ್ರಮುಖ ಲಕ್ಷಣ. ಅಂಥ ವ್ಯವಸ್ಥೆಯ ಪ್ರತಿಪಾದಕರೆನಿಸಿದ ನಮ್ಮ ದಾಸರು ಮತ್ತು ಆಚಾರ್ಯರು ಹೇಳಿಕೊಟ್ಟಂತೆ ಅಥವಾ ಅವರ ಪ್ರಚಾರ ಪ್ರಭಾವಗಳಿಗೆ ತಲೆಬಾಗಿ ತಿರುಪತಿ ವೆಂಕಟರಮಣನನ್ನೂ, ಧರ್ಮಸ್ಥಳದ ಮಂಜುನಾಥನನ್ನು, ಗೋಕರ್ಣದ ಗೋಕರ್ಣೇಶ್ವರನನ್ನು ಅವರು ದೈವವಾಗಿ ಸ್ವೀಕರಿಸಿದರು. ಮೂಲದಲ್ಲಿ ಶೈವಾರಾಧಕರಾಗಿದ್ದ, ತಮ್ಮ ಹುಟ್ಟಿನ ಪುರಾಣಗಳ ಪ್ರಕಾರ ಶಿವನಿಂದ ಉದ್ಭವಿಸಿದ ಈ ಹಾಲಕ್ಕಿಯವರು ಶಿವಸಂಬಂಧಿಯಾದ ಗೋಕರ್ಣ ಅಥವಾ ಧರ್ಮಸ್ಥಳಕ್ಕಿಂತ ದೂರದ ತಿರುಪತಿ ವೆಂಕಟರಮಣನನ್ನು ಹಚ್ಚಿಕೊಂಡಿದ್ದೇಕೆ? ಇಂದು ತಿರುಪತಿ ವೆಂಕಟರಮಣನೇ ಅವರ ಪ್ರಮುಖ ಆರಾಧ್ಯವಾಗಿರಲು ಕಾರಣವೇನು? ಇದು ಕೇವಲ ಹಾಲಕ್ಕಿ ಒಕ್ಕಲಿಗರ ಪ್ರಶ್ನೆ ಮಾತ್ರವಲ್ಲ. ಇದೇ ಉತ್ತರ ಕನ್ನಡದ ಗೊಂಡ ಬುಡಕಟ್ಟಿನ ದೈವತ್ವದ ಪ್ರಶ್ನೆಯೂ ಹೌದು. ಹಾಗೇ ಕರಾವಳಿ ಮತ್ತು ಮಲೆನಾಡಿನ, ಅಷ್ಟೇ ಏಕೆ, ಇದೇ ದಕ್ಷಿಣಭಾರತದ ಅನೇಕ ಸಮುದಾಯಗಳ ದೈವಾಂತರದ ಪ್ರಶ್ನೆಯಾಗಿ ನಮ್ಮ ಮುಂದಿದೆ. ದೈವಾರಾಧನೆಯ ಈ ಅವಸ್ಥಾಂತರದ ಅಧ್ಯಯನಕ್ಕೆ ಯೋಗ್ಯವಾದ ವಿಚಾರ. ಹಾಗೆಂದು ಹಾಲಕ್ಕಿಯವರು ತಮ್ಮ ಮೂಲದೈವಗಳನ್ನು ಮರೆತಿದ್ದಾರೆ ಎಂದು ಹೇಳುವಂತಿಲ್ಲ.

ಆದರೆ, ತಿರುಪತಿ ತಿಮ್ಮಪ್ಪ ಅವರ ಬದುಕಿನ ಪ್ರತಿ ಹಂತದಲ್ಲೂ ಪ್ರವೇಶಿಸುತ್ತಾನೆ. ಅವರ ಮನೆಗಳ ಮುಂದಿನ ಪ್ರತಿ ತುಳಸಿಕಟ್ಟೆಯಲ್ಲಿಯೂ ತಿಮ್ಮಪ್ಪನ ಮೂರ್ತಿ ಇದ್ದೇ ಇರತಕ್ಕದ್ದು. ಒಳಗಿನ ಮನೆಯಲ್ಲಿಯೂ ತಿಮ್ಮಪ್ಪನ ಪ್ರತಿಷ್ಠಾಪನೆ. ಪ್ರತಿ ಶನಿವಾರ ತಿಮ್ಮಪ್ಪನ ಪೂಜೆ. ನಾಮಧಾರಣೆ ಆಗಲೇಬೇಕು. ಹರಕೆಯ ಕಟ್ಟಿಕೊಂಡು ತಿರುಪತಿ ಯಾತ್ರೆ ಮಾಡಿ ಬರುವವರ ಸಂಖ್ಯೆಯೂ ಕಡಿಮೆಯೇನಲ್ಲ. ತಿಮ್ಮಪ್ಪನ ಜೊತೆಗಿನ ಇವರ ಬಾಂಧವ್ಯ ಅಷ್ಟು ಮುಖ್ಯ ಹಾಗೂ ಕಡ್ಡಾಯ. ಇಂಥ ಸ್ಥಿತ್ಯಂತರಕ್ಕೆ ಕಾರಣವೇನು? ಮಲೆನಾಡಿನ ಮತ್ತು ಕರಾವಳಿಯ ಅನೇಕ ಬುಡಕಟ್ಟುಗಳು ಇಂಥ ಒಂದು ಧಾರ್ಮಿಕ ಅವಸ್ಥಾಂತರಕ್ಕೆ ಒಳಗಾಗಿ ತಮ್ಮ ಆಚರಣೆ

PDF created with pdfFactory Pro trial version www.pdffactory.com

ಸಂಪ್ರದಾಯಗಳಲ್ಲಿ ತಿಮ್ಮಪ್ಪನ ಆರಾಧನೆಯನ್ನೇ ಮುಖ್ಯವಾಗಿರಿಸಿಕೊಂಡಿರುವಲ್ಲಿ ಅನೇಕ ಸಾಮಾಜಿಕ ಮತ್ತು ಐತಿಹಾಸಿಕ ಕಾರಣಗಳಿರುವಂತಿದೆ. ಶ್ರೀ ರಾಮಾನುಜಾಚಾರ್ಯರ ಪಾತ್ರ ಇಲ್ಲಿ ಬಹಳ ಮುಖ್ಯವಾಗಿದೆ. ರಾಮಾನುಜಾಚಾರ್ಯರ ವೈಷ್ಣವೀಕರಣಕ್ಕೆ ಸ್ವತಃ ಬಿಟ್ಟಿದೇವನೇ ಒಳಗಾದಾಗಿನಿಂದ ಹಿಡಿದು ವಿಜಯನಗರದ ಅರಸರದವರೆಗೆ ಅನೇಕ ದಾಸ ಪರಂಪರೆಯ ಯತಿಗಳು ಈ ಕಾರ್ಯವನ್ನು ಮಾಡುತ್ತಲೇ ಬಂದರು. ಹೆಚ್ಚೂ ಕಡಿಮೆ ಇಡೀ ಕರ್ನಾಟಕವನ್ನು ತಮ್ಮ ಆಡಳಿತದಲ್ಲಿ ಇಟ್ಟುಕೊಂಡಿದ್ದ ವಿಜಯನಗರದ ಅರಸರು ತಿರುಪತಿ ತಿಮ್ಮಪ್ಪನ ಪರಮ ಭಕ್ತರೂ ಆಗಿದ್ದರು ಎಂಬುದನ್ನು ಇಲ್ಲಿ ಸ್ಮರಿಸಬೇಕು. ತಿರುಪತಿಯ ಮಠದಲ್ಲಿ ದೀಕ್ಷೆ ಪಡೆದ ಅನೇಕ ದಾಸರು ತಮ್ಮ ದೈವದ ಮಹಿಮೆಯನ್ನು ಸಾರುತ್ತಾ ತಮ್ಮ ಪಯಣದ ಮಾರ್ಗಗಳಲ್ಲಿ ಜನಸಾಮಾನ್ಯರಿಗೂ ದಾಸ ದೀಕ್ಷೆ ನೀಡುತ್ತಾ ಬಂದರು. ಆದರೆ ಈ ದಾಸರಿಂದಲೇ ಇಷ್ಟೆಲ್ಲ ಸ್ಥಿತ್ಯಂತರವಾಯಿತು ಎಂದು ಹೇಳಿ ಮುಗಿಸಿಬಿಡುವ ಹಾಗಿಲ್ಲ. ಯಾಕೆಂದರೆ ಸ್ವತಹ ತಿಮ್ಮಪ್ಪನೇ ಮೂಲದಲ್ಲಿ ಒಂದು ಬುಡಕಟ್ಟು ದೇವತೆ ಎಂಬ ಬಲವಾದ ವಾದಗಳಿವೆ. ದೇವರ ಹೆಸರಿನಲ್ಲಿ ಜನರ ಭಾವನೆಗಳನ್ನು ಪರಿವರ್ತಿಸಲಾಗಿದೆ ಎಂದು ನಾನು ಹೇಳುತ್ತಿದ್ದೇನೆ ಅಷ್ಟೇ. ಆದರೆ ಸ್ವತಃ ದೇವರನ್ನೇ ಹಾಗೆ ಪರಿವರ್ತಿಸಲಾಗಿದೆ ಎಂಬುದು ವಿದ್ವಾಂಸರ ಅಭಿಪ್ರಾಯ. ಶ್ರೀ ಎಸ್.ಕೆ. ರಾಮಚಂದ್ರರಾವ್ ತಮ್ಮ 'ತಿರುಪತಿ ತಿಮ್ಮಪ್ಪ' ಗ್ರಂಥದಲ್ಲಿ ಇಂಥ ಅನೇಕ ಸಂಗತಿಗಳನ್ನು ಬೆಳಕಿಗೆ ತಂದಿದ್ದಾರೆ. ನಂತರದಲ್ಲಿ ಈ ಸಂಗತಿಗಳ ಮೇಲೆ ಇನ್ನೂ ಹೆಚ್ಚಿನ ಬೆಳಕು ಚೆಲ್ಲಿರುವ ಒಂದು ಲೇಖನದ ಉಲ್ಲೇಖಗಳನ್ನು ಇಲ್ಲಿ ನೀಡ ಬಯಸುತ್ತೇನೆ.

"ಬಹುಶಃ ಮೇಲಿನ ಬೆಳವಣಿಗೆಗೆ ಕರ್ನಾಟಕದಲ್ಲಿ ಶ್ರೀ ವೈಷ್ಣವ ಮತದ ಪ್ರಸಾರದ ವೈಶಿಷ್ಟ್ಯತೆಯೇ ಕಾರಣವಾಗಿರಬಹುದು. ನಮಗೆ ತಿಳಿದುಬರುವಂತೆ ಹೊಯ್ಸಳ ರಾಜ್ಯದಲ್ಲಿ ೧೨ನೇ ಶತಮಾನದ ನಂತರ ಶ್ರೀ ವೈಷ್ಣವ ಅಗ್ರಹಾರಗಳೂ ಪೂಜಾಸ್ಥಳಗಳೂ ಬೆಳೆದು ಬಂದವು. ರಾಮಾನುಜರು ಕರ್ನಾಟಕದಲ್ಲಿ ಸಂಚರಿಸಿದ ನಂತರ ಈ ಬೆಳವಣಿಗೆಯಾಯಿತು ಎಂಬ ಸಾಮಾನ್ಯ ಗ್ರಹಿಕೆಯೂ ಇದೆ. ಶ್ರೀರಂಗಂ ಶ್ರೀವೈಷ್ಣವ ಮತದ ಪ್ರಧಾನ ಕೇಂದ್ರವಾದರೂ ರಾಮಾನುಜರಿಗೆ ತಿರುಪತಿ ಕ್ಷೇತ್ರದ ಸಂಪರ್ಕವೂ ಅಷ್ಟೇ ಗಾಢವಾಗಿ ಇತ್ತು. ಹೀಗಾಗಿ ತಿರುಪತಿಯ ದೇವತೆ ಕುರಿತು ಅವರ ಕಾಲದಲ್ಲಿ ಶೈವರಿಗೂ ವೈಷ್ಣವರಿಗೂ ಕಲಹ ಉಂಟಾದಾಗ, ರಾಮಾನುಜರು ಅಲ್ಲಿ ನಿರ್ಣಾಯಕವಾಗಿ ಶ್ರೀವೈಷ್ಣವರನ್ನು ಸ್ಥಾಪಿಸಿದರು ಎಂದು ಪ್ರತೀತಿ ಇದೆ. ಈ ಘಟನೆ ನಮಗೆ ಎರಡು ಮುಖ್ಯ ಅಂಶಗಳನ್ನು ಸೂಚಿಸುತ್ತದೆ. ಮೊದಲನೆಯದಾಗಿ ತಿರುಪತಿ ದೇವತೆಗೆ ರಾಮಾನುಜರ ಕಾಲದ ನಂತರ ವೈಷ್ಣವ ಗುರುತು ಗಟ್ಟಿಯಾಯಿತು ಹಾಗೂ ಮೂಲತಃ ಅದೊಂದು ವಿವಾದಾಸ್ಪದ ಪ್ರಾದೇಶಿಕ ದೇವತೆ ಎಂಬುದು.

ಎರಡನೆಯದಾಗಿ ಶ್ರೀ ವೈಷ್ಣವ ಮತವು ಇಂಥದೇ ಪ್ರಾದೇಶಿಕ ಕ್ಷೇತ್ರಗಳನ್ನು ಒಳಗೊಳುತ್ತ ಕರ್ನಾಟಕದಲ್ಲೂ ಪ್ರಸಾರವಾಗಿರಬಹುದು. ಕರ್ನಾಟಕದ ಗುಡ್ಡಬೆಟ್ಟಗಳಲ್ಲಿ ಕಂಡುಬರುವ ರಂಗನಾಥ–ತಿಮ್ಮಪ್ಪ ದೇವರು ಮೂಲತಃ ಗುಡ್ಡಗಾಡಿನ ದೇವತೆ. ಈ ದೇವತೆಯ ಮೂರ್ತಿಗಳು ಮತ್ತೊಂದು ಪ್ರಕಾರವಾಗಿವೆ. ಈ ದೇವತೆ ನಿಂತುಕೊಂಡ ಭಂಗಿಯಲ್ಲಿ ಇದ್ದು, ೧೬–೧೭ನೇ ಶತಮಾನದ ನಂತರದ ಈ ದೇವತೆಯ ಮೂರ್ತಿ ಬಿಲ್ಲುಬಾಣ ಹಾಗೂ ಶಂಖ ಚಕ್ರಗಳನ್ನು ಹಿಡಿದಿರುತ್ತದೆ. ಈ ಭಾಗದಲ್ಲಿ ಆ ಕಾಲದಲ್ಲಿ ನಿರ್ಮಾಣವಾದ ವೆಂಕಟೇಶ್ವರ ದೇವಾಲಯಗಳಲ್ಲೂ ಇದೇ ಮೂರ್ತಿಯನ್ನು ನೋಡುತ್ತೇವೆ. ಆದರೆ ನಮಗೆ ಸಿಗುವ ಪ್ರಾಚೀನ ಎರಡು ಕೈಗಳು ಅರ್ಧಂಬರ್ಧ ಕಾಣುತ್ತಿದ್ದು ಅದಕ್ಕೆ ಚಿನ್ನದ ಶಂಖ ಚಕ್ರಗಳನ್ನು ಹಿಡಿಸಲಾಗಿದೆ. ಮೂಲತಃ ಅವುಗಳಲ್ಲಿ ವೈಷ್ಣವ ಚಿಹ್ನೆಗಳು ಇದ್ದ ಸೂಚನೆ ಇಲ್ಲ. ಬಿಳಿಗಿರಿಯ ರಂಗನ ಮೂರ್ತಿಯಲ್ಲಿ ಇದೇ ಭಂಗಿಯಲ್ಲಿ ಇದ್ದುದನ್ನು ನೋಡಬಹುದು. ಆದರೆ ಆ ಮೂರ್ತಿಗೆ ಮತ್ತೆರಡು ಕೈಗಳಲ್ಲಿ ಶಂಖ ಚಕ್ರಗಳನ್ನು ಹಿಡಿಸಲಾಗಿದೆ. ಎಂದರೆ, ತಿರುಪತಿಯ ದೇವತೆಗೆ ವೈಷ್ಣವ ಗುರುತುಗಳ ಧಾರಣೆಯಾದ ನಂತರ ಪ್ರಚಲಿತದಲ್ಲಿ ಬಂದ ಒಂದು ಮೂರ್ತಿ ಪ್ರಕಾರ ಇದಾಗಿದೆ. ರಂಗನ ಮೂರ್ತಿಗೆ ಸೊಂಟದಲ್ಲಿ ಒಂದು ಖಡ್ಗ ನೇತಾಡುತ್ತಿರುವಂತೆ ತೋರಿಸಲಾಗಿದೆ. ತಿರುಪತಿಯ ದೇವರ ಕೈಗಳಲ್ಲಿ ಶ್ರೀವೈಷ್ಣವ ನಿರೂಪಣೆಗೂ ಪೂರ್ವದಲ್ಲಿ ಮರಬಿಲ್ಲು ಹಾಗೂ ಬಾಣಗಳನ್ನೂ ಇರಿಸುವ ವಾಡಿಕೆ ಇತ್ತು ಎಂಬುದಕ್ಕೂ ಕೆಲವು ಆಧಾರಗಳಿವೆ. ಆ ದೇವತೆಯ ಪುರಾಣದಲ್ಲಿ ಹಾಗೂ ಸಂಸ್ಕೃತ ಸ್ತೋತ್ರಗಳಲ್ಲಿ ಕೂಡ ಅದೊಂದು ಬೇಟೆಯ ದೇವತೆ ಎಂಬ ಉಲ್ಲೇಖಗಳಿವೆ."[೬]

ಧರ್ಮಪಂಥಗಳನ್ನು ಮತ್ತು ಪ್ರಚುರಪಡಿಸುವ ಆತುರದಲ್ಲಿ ಇಂಥ ರೂಪಾಂತರಗಳು ಹಾಗೂ ಪರಿವರ್ತನೆಗಳು ಭಾರತದಾದ್ಯಂತ ನಡೆದಿವೆ. ಇಂಥದ್ದೇ ಅವಸ್ಥಾಂತರಕ್ಕೆ ಒಳಗಾದ ಮತ್ತೊಂದು ಪ್ರಸಿದ್ಧ ದೇವತೆ ಎಂದರೆ ಪುರಿಯ ಜಗನ್ನಾಥ. ಮೂಲತಃ ಬುಡಕಟ್ಟು ದೈವವಾಗಿದ್ದ ಪುರಿಯ ಜಗನ್ನಾಥ ಆಳುವ ವರ್ಗ ಮತ್ತು ಪುರೋಹಿತ ವರ್ಗಗಳ ಕಪಿಮುಷ್ಟಿಗೆ ಸಿಲುಕಿ ಬಡಾಠಾಕೂರನಾದದ್ದು ಒಂದು ವಿಶೇಷ ಪ್ರಸಂಗ. ಆದಿವಾಸಿಗಳ ದೀನಬಂಧು ಎಂದು ಕರೆಸಿಕೊಳ್ಳುತ್ತಿದ್ದ ಜಗನ್ನಾಥ, ಅವರ ಪ್ರೀತಿಯ ದೈವವಾಗಿ ಪೊರೆಯುತ್ತಿದ್ದ ಜಗನ್ನಾಥ ಬಡಾಠಾಕೂರನಾಗಿ ಪರಿವರ್ತನೆ ಹೊಂದುವ ಮೂಲಕ ಅವರಿಂದ ದೂರ ಸರಿದು ಬ್ರಾಹ್ಮಣರ ಪರವಾದದ್ದನ್ನು ಅಲ್ಲಿ ನಾವು ಕಾಣುತ್ತೇವೆ. ಹಾಗೆ ಆಳುವವರು ಮತ್ತು ಪುರೋಹಿತರು ಜಗನ್ನಾಥನನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡ ಪರಿಣಾಮವಾಗಿ ಅಲ್ಲಿನ ಗುಡ್ಡ ಗಾಡಿನ ಜನರ ನೆಲೆಯೇ ತತ್ತರಿಸುತ್ತದೆ. ದೇವರ ಹೆಸರಿನಲ್ಲಿ ಕೃಷಿಭೂಮಿ ಮತ್ತು

PDF created with pdfFactory Pro trial version www.pdffactory.com

ಕಾಡಿನ ಪ್ರದೇಶಗಳನ್ನು ಹೊರಗಿನವರು ಆಕ್ರಮಿಸಿಕೊಳ್ಳುತ್ತಾರೆ. ಭೂಮಾಲೀಕರ ಹಿಡಿತಕ್ಕೆ ಸಿಕ್ಕ ಜಗನ್ನಾಥ ಬಡಾಠಾಕೂರನಾಗುತ್ತಾನೆ. ಆದಿವಾಸಿಗಳಿಗೆ ದೇವಸ್ಥಾನದ ಪ್ರವೇಶವೂ ನಿರಾಕರಿಸಲ್ಪಡುತ್ತದೆ. ಈ ನಿಷೇಧದ ವೈಚಿತ್ರ್ಯದಿಂದ ರೋಸಿ ಹೋದ ಆದಿವಾಸಿಗಳು 'ದಾರು ಪ್ರತಿಮಾ ನಾ ಪೂಜಿವೆ'(ಮರದ ಕಟ್ಟಿಗೆಯನ್ನು ನಾವು ಪೂಜಿಸುವುದಿಲ್ಲ) ಎಂಬ ಚಳುವಳಿಗೂ ಇಳಿದು ತಮ್ಮ ಪ್ರೀತಿಯ ಜಗನ್ನಾಥನನ್ನು ತಿರಸ್ಕರಿಸುವ ಒಂದು ಹಂತಕ್ಕೂ ಪರಿಸ್ಥಿತಿ ಹೋಗುತ್ತದೆ. ತಿರುಪತಿ ತಿಮ್ಮಪ್ಪ ಮತ್ತು ಬಿಳಿಗಿರಿ ರಂಗಯ್ಯನವರುಗಳೂ ಈಗ ಹಾಗೇ ಸ್ಥಿತ್ಯಂತರಗೊಂಡು ಪುರೋಹಿತರ ಹಿಡಿತದಲ್ಲಿದ್ದಾ ರಾದರೂ, ಜನರು ಮಾತ್ರ ತಮ್ಮ ಪ್ರೀತಿಯ ದೈವಗಳನ್ನು ಪುರೋಹಿತರು ಹೇಳಿ ಕೊಟ್ಟಿದ್ದಕ್ಕಿಂತ ಭಿನ್ನವಾಗಿ ಆರಾಧಿಸುತ್ತಿದ್ದಾರೆ ಎಂಬುದು ಮುಖ್ಯ. ದೇವರು ಎಲ್ಲಿಂದಲೇ ಬರಲಿ ಅವನನ್ನು ತಮ್ಮ ನೆಲೆಯಲ್ಲಿ ಸ್ಥಳೀಯನನ್ನಾಗಿ ಪರಿವರ್ತಿಸಿಕೊಳ್ಳುವ ಶಕ್ತಿ ಬುಡಕಟ್ಟುಗಳಿಗಿದೆ.

ಘಟ್ಟ ಮತ್ತು ಘಟ್ಟದ ಕೆಳಗಿನ ಅನೇಕಾನೇಕ ಜನವರ್ಗಗಳಿಗೆ ತುಳಸಿ ಪವಿತ್ರತಮವಾದ ಒಂದು ಸಸ್ಯ. ಹಾಲಕ್ಕಿ ಒಕ್ಕಲಿಗರೂ ಇದಕ್ಕೆ ಹೊರತಲ್ಲ. ಇವರ ತುಳಸಿಕಟ್ಟೆ ಎಂದರೆ ಅದೊಂದು ಪರಮಪೂಜನೀಯ ಸ್ಥಳ ಎಂದೇ ಅರ್ಥ. ಪ್ರತಿ ಮನೆಯ ಮುಂದೆ ಪ್ರತಿಷ್ಠಾಪಿಸಲ್ಪಟ್ಟ ತುಳಸಿ ಕಟ್ಟೆಯೇ ಹಾಲಕ್ಕಿ ಒಕ್ಕಲಿಗರು ನಂಬಿದ ಇತರ ದೇವರಿಗೂ ಆವಾಸಸ್ಥಾನ. ಒಂದು ರೀತಿಯಲ್ಲಿ ತುಳಸಿಗೂ ವೆಂಕಟರಮಣನಿಗೂ ಅವಿನಾಭಾವ ಸಂಬಂಧ ಹಾಲಕ್ಕಿ ಮನೆಗಳಲ್ಲಿ ತುಳಸಿ ಕಟ್ಟೆಗಳಿಲ್ಲದೇ ವೆಂಟರಮಣನಿಲ್ಲ. ವೆಂಕಟರಮಣನಿಲ್ಲದೆ ತುಳಸಿಕಟ್ಟೆಯೂ ಇಲ್ಲ, ತುಳಸಿ ತಿಮ್ಮಪ್ಪನ ಹೆಂಡತಿ ಎಂಬುದು ಇವರ ನಂಬಿಕೆ. ಇವರು ವೆಂಕಟರಮಣನನ್ನು ದೈವವನ್ನಾಗಿ ಸ್ವೀಕರಿಸಿದ ಮೇಲೆ ತುಳಸಿಯನ್ನು ಜೊತೆಗೆ ಇಟ್ಟುಕೊಂಡರೋ ಅಥವಾ ತುಳಸಿ ಇವರ ಮೂಲ ಆರಾಧನೆಯ ಒಂದು ಸಸ್ಯವಾಗಿತ್ತೋ ಎಂಬುದು ಇನ್ನು ಸ್ಪಷ್ಟವಾಗಬೇಕಾದ ವಿಚಾರ.

ಒಟ್ಟಿನಲ್ಲಿ ಹಾಲಕ್ಕಿಯವರ ದೇವರ ಚರಿತ್ರೆ ತುಂಬ ಆಸಕ್ತಿದಾಯಕವಾದುದು. ಬೇಟೆ ಪಶುಪಾಲನೆ ಮತ್ತು ಕೃಷಿಯ ವಿವಿಧ ಹಂತಗಳಲ್ಲಿ ವಿಕಸನಗೊಂಡ ಅವರ ದೈವಗಳ ಆರಾಧನೆ ಅನೇಕ ಅವಸ್ಥೆಗಳನ್ನು ದಾಟಿದೆ ಎಂಬಂತೆ ಮೇಲ್ನೋಟಕ್ಕೆ ಕಂಡರೂ, ಆ ಎಲ್ಲ ಪ್ರಾಚೀನ ಅಂಶಗಳನ್ನು ಒಳಗೊಂಡು ಇಂದು ಒಂದು ಸಂಕೀರ್ಣಾವಸ್ಥೆಯಲ್ಲಿ ಕಾಣಿಸಿಕೊಳ್ಳುತ್ತಿದೆ. ಸೂರ್ಯ, ಚಂದ್ರ, ಭೂಮಿತಾಯಿ, ಬೀರ, ಜಟ್ಟಿಗ, ಮಾಸ್ತಿ, ಚೌಡಿ, ಕರಿ ಕಾನಮ್ಮ, ದೇವಿಕಾನಮ್ಮ, ಮಾಸ್ತಮ್ಮ ಹಾಗೂ ತಿರುಪತಿ ತಿಮ್ಮಪ್ಪನವರೆಗೆ ವಿಸ್ತರಿಸುತ್ತಾ ಯಾವುದನ್ನೂ ಬಿಡದೆ, ಹೊಸ ಹೊಸದಾಗಿ ಸೇರಿಸಿಕೊಳ್ಳುತ್ತಾ ಹೋಗುತ್ತಿರುವ ರೀತಿಯನ್ನು ನೋಡಿದರೆ, ಒಂದು ಪರಂಪರೆಯನ್ನು

ಸಂರಕ್ಷಿಸುತ್ತಲೇ ಹೊಸದನ್ನು ಆಹ್ವಾನಿಸಿಕೊಳ್ಳುವ ಕ್ರಿಯಾಶೀಲ ಗುಣವೊಂದು ಇಲ್ಲಿ ನಿಚ್ಚಳವಾಗಿ ಕಾಣಿಸಿಕೊಳ್ಳುತ್ತದೆ ಎಂದು ಹೇಳಬಹುದು.

೨.೨. ಜಟ್ಟಿಗನ ಬನ

ಇದೇ ಉತ್ತರ ಕನ್ನಡ ಕರಾವಳಿಯ ಭಟ್ಕಳದ ಸುತ್ತಮುತ್ತ ಇರುವ ಗೊಂಡರ ಜೀವನ ಕ್ರಮ ಮತ್ತು ಅವರ ದೈವರಾಧನೆಯ ವೈವಿಧ್ಯಗಳು ಕೂಡ ಅಧ್ಯಯನಕ್ಕೆ ಯೋಗ್ಯವಾದ ವಿಚಾರಗಳು. ಸಮುದ್ರಕ್ಕೆ ತೀರಾ ಹತ್ತಿರದಲ್ಲಿರುವ ಭಟ್ಕಳ ಮತ್ತು ಶಿರಾಲಿ ಹಾಗೂ ನಿಬಿಡಾರಣ್ಯದ ತಾಣಗಳೆನಿಸಿದ ಗೋವರ್ಧನಗಿರಿ ಮತ್ತು ಮೆಘಾನೆ ಬೆಟ್ಟಸಾಲುಗಳಿಂದ ಹಿಡಿದು ಮಾರುಕೇರಿಯವರೆಗೆ ದಟ್ಟ ಕಾಡುಗಳ ಒಡಲಲ್ಲಿ ನೆಲೆಸಿರುವ ಗೊಂಡರು ವಿಶಿಷ್ಟ ಜೀವನಕ್ಕೆ ಹೆಸರಾದವರು.

ಮಾರುಕೇರಿ ಎಂಬ ಗೊಂಡರ ಒಂದು ತಾಣದಲ್ಲಿ 'ಜಟ್ಟಿಗನ ಬನ'ವೊಂದು ಇದೆ. ಇಲ್ಲಿಂದಲೇ ಅವರ ಅನೇಕ ದೈವಗಳನ್ನು ಪರಿಚಯಿಸಲು ಪ್ರಯತ್ನಿಸುತ್ತೇನೆ. ಮಾರುಕೇರಿಯ ಜಟ್ಟಿಗನ ಬನ ಎಂದರೆ ಅದೊಂದು ಪರಿಸರ ನಿರ್ಮಿತ ಸಸ್ಯವನ. ಹಾಲುಬರುವ ಅನೇಕ ರೀತಿಯ ಮರಗಿಡ ಬಳ್ಳಿಗಳ ಸಮೂಹ ಅದು. ಅಲ್ಲಿರುವ ಮರಗಿಡ ಬಳ್ಳಿಗಳನ್ನು ಯಾರೂ ಕಡಿಯಬಾರದೆಂಬ ನಿಷೇಧವಿರುವುದರಿಂದ ನೂರಾರು ವರ್ಷಗಳಿಂದ ಬೆಳೆದ ಮರಗಳು ತಮ್ಮ ಪ್ರಾಚೀನಾವಸ್ಥೆಯನ್ನು ತೋರಲೋ ಎಂಬಂತೆ ಅಂಕುಡೊಂಕಾಗಿ ಸುಕ್ಕುಗಟ್ಟಿಬಾಗಿ ಬಿದ್ದು ವಿಚಿತ್ರಾಕಾರದಲ್ಲಿವೆ. ಅವುಗಳನ್ನು ಅಪ್ಪಿ ಹಬ್ಬಿದ ಬಳ್ಳಿಗಳು ಮಾರಿಬಲೆಯ ಹಗ್ಗದ ರೀತಿಯಲ್ಲಿ ಎಲ್ಲೆಲ್ಲೂ ಹೆಣೆದುಕೊಂಡಿವೆ. ಈ ಸೊಂಪಾದ ವನದಲ್ಲಿ ಒಂದು ಉದ್ದನೆಯ ಜಗುಲಿ ನಿರ್ಮಿಸಲಾಗಿದೆ. ಆ ಜಗುಲಿಯ ಮೇಲೆ ಹತ್ತಾರು ಜಟ್ಟಿಗನ ಕೊಂಬುಗಳಿವೆ. ಜಟ್ಟಿಗನ ಕೊಂಬು ಅಂದರೇನು? ಗೊಂಡರ ಸಾಂಸ್ಕೃತಿಕ ವೀರರನ್ನು ಜಟ್ಟಿಗರು ಎಂದು ಕರೆಯಲಾಗುತ್ತದೆ. ಅಂಥ ಹತ್ತಾರು ಜಟ್ಟಿಗರು ಅವರಲ್ಲಿ ಪೂಜೆಗೊಳ್ಳುತ್ತಿದ್ದಾರೆ. ಆ ಜಟ್ಟಿಗರ ಆಯುಧ ರೂಪದ ಮರದ ಆಕೃತಿಗಳೇ ಜಟ್ಟಿಗನ ಕೊಂಬು.

ನೇತ್ರಾಣಿ ಜಟ್ಟಿಗ, ಕುಂಟ ಜಟ್ಟಿಗ, ಗುಡಿ ಜಟ್ಟಿಗ, ಮೋಟಗಾರ ಜಟ್ಟಿಗ, ಕೋಟೆ ಜಟ್ಟಿಗ, ಹೊಗೇಡಿ ಜಟ್ಟಿಗ, ಹೊಟ್ಕಾಣಿ ಜಟ್ಟಿಗ ಮುಂತಾಗಿ ಆ ಜಟ್ಟಿಗರನ್ನು ಗುರುತಿಸಲಾಗುತ್ತದೆ. ಜಟ್ಟಿಗರ ಹೆಸರಿನಲ್ಲಿ ಹರಕೆ ಹೊತ್ತವರು ತಂದು ಸಲ್ಲಿಸುವ ಆಯುಧ ರೂಪದ ಮರದ ಕಂಬಗಳನ್ನು ಆ ಜಗುಲಿಯ ಮೇಲೆ ನೆಡಲಾಗುತ್ತದೆ. ಹಾಗೆ ಯಾಕಾಗಿ ಹರಕೆ ಹೊತ್ತು ತಂದು ಕೊಡುತ್ತಾರೆ? ಈ ಜಟ್ಟಿಗರೆಲ್ಲ ಒಂದಾನೊಂದು ಕಾಲದಲ್ಲಿ ಗೊಂಡರ ಒಳಿತಿಗಾಗಿ ಸೆಣಸಿ ಶ್ರಮಿಸಿ ದೇಹತ್ಯಾಗ ಮಾಡಿದವರು. ಅವರೆಲ್ಲ ಇಂದು ಜಟ್ಟಿಗರು ಅರ್ಥಾತ್ ಬಲಾಢ್ಯರು, ಪರಾಕ್ರಮಿಗಳು, ತ್ಯಾಗವೀರರು ಎಂಬ ಅರ್ಥದಲ್ಲಿ ಪೂಜೆಗೊಳ್ಳುತ್ತಿದ್ದಾರೆ. ಹೆಣ್ಣಿನ ರಕ್ಷಣೆ ಇರಬಹುದು,

PDF created with pdfFactory Pro trial version www.pdffactory.com

ಊರ ರಕ್ಷಣೆ ಇರಬಹುದು, ಒಟ್ಟಾರೆ ಆ ಇಡೀ ಬುಡಕಟ್ಟಿನ ರಕ್ಷಣೆ ಇರಬಹುದು. ಗೊಂಡರು ಇಂದು ಪೂರ್ಣಪ್ರಮಾಣದ ಕೃಷಿಕರು. ಅವರ ಬೆಳೆಗಳನ್ನು, ದನಕರುಗಳನ್ನು ನಾಶ ಮಾಡುತ್ತಿದ್ದ ಹುಲಿ ಮತ್ತು ಹಂದಿಗಳನ್ನು ಕೊಂದು ಅಥವಾ ಕೊಲ್ಲುವ ಕ್ರಿಯೆಯಲ್ಲಿ ಮರಣಕ್ಕೆ ತುತ್ತಾಗಿ ಸ್ವರ್ಗ ಸೇರಿದ ಸಾಹಸಿಗಳೂ ಇರಬಹುದು. ಅಂಥ ಜಟ್ಟಿಗರನ್ನೂ ತಮ್ಮ ಬುಡಕಟ್ಟಿನ ವೀರರನ್ನಾಗಿ ಪರಿಗಣಿಸಿ ಇಂದು ಗೊಂಡರು ಪೂಜಿಸುತ್ತಿದ್ದಾರೆ. ಅವರ ಆರಾಧನೆ ಅತ್ಯಂತ ಸಾಂಕೇತಿಕವಾದುದು. ಆ ವೀರರು ತಮ್ಮ ಹೋರಾಟದ ಸಂದರ್ಭದಲ್ಲಿ ಬಳಸಿರಬಹುದಾದ ಆಯುಧ ರೂಪದ ಮರದ ಕೊಂಬೆಯೇ ಅವರನ್ನು ಪ್ರತಿನಿಧಿಸುವ ಸಾಧನ. ಈಗಲೂ ಅಭೇದ್ಯ ಅರಣ್ಯಗಳ ನಡುವೆ ವಾಸಿಸುವ ಗೊಂಡರಿಗೆ ಹುಲಿ ಮತ್ತು ಹಂದಿಯ ಕಾಟ ತಪ್ಪಿದ್ದಲ್ಲ. ಅವರು ಹರಕೆ ಹೊರುತ್ತಾರೆ. ನಮ್ಮ ಹೊಲವನ್ನು ಹಂದಿ ಹಾಳು ಮಾಡದಂತೆ, ನಮ್ಮ ದನಕರುಗಳನ್ನು ಹುಲಿ ಹಿಡಿಯದಂತೆ ಕಾಪಾಡು ಎಂದು. ಹಾಗೆ ಹರಕೆ ಹೊತ್ತವರು ಅಂಥ ಒಂದು ಜಟ್ಟಿಗನ ಕೊಂಬನ್ನು ಮಾಡಿಸಿ ತಂದು ಆ ಬನದಲ್ಲಿ ಪ್ರತಿಷ್ಠಾಪಿಸುತ್ತಾರೆ. ಹಾಗೆ ಹರಕೆ ಹೊತ್ತು ಸಲ್ಲಿಸಿದ ಹತ್ತಾರು ಜಟ್ಟಿಗನ ಕೊಂಬುಗಳು ಅಲ್ಲಿವೆ.

ಅವರ ವೀರರಾದ ಜಟ್ಟಿಗರು ಹುಲಿ ಹಂದಿಗಳನ್ನು ಕೊಂದಿರಬಹುದು. ಆದರೆ ಎಲ್ಲರೂ ಆ ಕೆಲಸ ಮಾಡಲು ಸಾಧ್ಯವಿಲ್ಲವಲ್ಲ. ಆದ್ದರಿಂದ ಅವರು ಕಂಡುಕೊಂಡ ಉಪಾಯವೆಂದರೆ ಹುಲಿ ಮತ್ತು ಹಂದಿಯನ್ನು ಪೂಜಿಸುವುದು. ಇದು ಪೂಜೆಯೂ ಇರಬಹುದು, ಇಲ್ಲವೆ ಮಾಟದ ರೂಪದ ನಿಯಂತ್ರಣವೂ ಇರಬಹುದು. ಹುಲಿ ಮತ್ತು ಹಂದಿಯ ರೂಪದ ಮೂರ್ತಿಗಳನ್ನು ಮಾಡಿಸಿ, ಅಂದರೆ ಅನುಕರಿಸಿ, ಅವು ತಮ್ಮ ಸಂಪತ್ತನ್ನು ಹಾಳು ಮಾಡದಂತೆ ತಡೆಯುವ ಕ್ರಮಗಳನ್ನು ಅವರು ಕೈಗೊಳ್ಳುತ್ತಾರೆ. ದೇವಿಪ್ರಸಾದ್ ಚಟ್ಟೋಪಾಧ್ಯಾಯ ಅವರು ಹೇಳುವಂತೆ ನಾವು ಆಶಿಸಿದ್ದನ್ನು ಪಡೆಯಲು ಅಥವಾ ಹಾಗೇ ಮಾಡಲು ಅಸಹಾಯಕರಾದಾಗ, ನೃತ್ಯದ ಮೂಲಕವೋ ಅಥವಾ ಆಚರಣೆಯ ಮೂಲಕವೋ ಅದನ್ನು ಅನುಕರಿಸುತ್ತೇವೆ. ಅರ್ಥಾತ್ ಪುನರಭಿನಯಿ ಸುತ್ತೇವೆ. ಅದನ್ನೇ ಮಾಟ ಎಂದು ಕರೆಯುವುದು. ಹಾಗೆ ಮಾಡುವುದರಿಂದ ಯಾವುದು ವಾಸ್ತವದಲ್ಲಿ ಅಸಾಧ್ಯವೋ ಅದನ್ನು ಪರೋಕ್ಷ ರೂಪದಲ್ಲಿ ಸಾಧ್ಯ ಆಗಿಸುವುದು ಅವರ ಆಶಯ. ಇದು ಆದಿ ಮಾನವನ ಒಂದು ನಂಬಿಕೆ ಗೊಂಡರ ಹುಲಿ ಮತ್ತು ಹಂದಿಯ ಮೂರ್ತಿಗಳ ಅರ್ಪಣೆ ಎಂದರೆ ಇಂಥದ್ದೇ ಒಂದು ಮಾಟದ ಕ್ರಿಯೆ. ಬಹುಶಃ ಇದು ಗೊಂಡರ ಅತ್ಯಂತ ಪ್ರಾಚೀನ ಪದ್ಧತಿಗಳಲ್ಲಿ ಒಂದು ಎಂದು ಹೇಳಬಹುದು. ಹೀಗೆ ಹರಕೆ ಕಟ್ಟಿ ಅರ್ಪಿಸಿದ ನೂರಾರು ಹುಲಿ ಮತ್ತು ಹಂದಿಯ ಚಿತ್ರಗಳು ಆ ಜಟ್ಟಿಗನ ಬನದಲ್ಲಿ ಇವೆ.

ಈಗ ನೇರವಾಗಿ ಭಟ್ಕಳ ಪೇಟೆ ಮತ್ತು ಸಮುದ್ರದ ನಡುವೆ ಇರುವ ಒಂದು ವಿಶಾಲ ಬಯಲಿನ ಗೊಂಡರ ಆರಾಧ್ಯ ದೇವತೆ ಕೋಗ್ತಿ ಗುಡಿಗೆ ಹೋಗೋಣ. ವಿಶಾಲ ಬಯಲಿನ ನಡುವೆ ಒಂದು ಸುಂದರವಾದ ಕೆರೆ ಇದೆ. ಆ ಕೆರೆಯ ದಡದಲ್ಲಿ ಪೂರ್ವಾಭಿಮುಖವಾಗಿ ಕಟ್ಟಲಾಗಿರುವ ಸರಳ ದೇವಾಲಯ. ಅದೇ ಕೋಗ್ತಿ ಗುಡಿ. ಈ ದೈವವನ್ನು 'ಕೋಗ್ತಿಕಟ್ಟೆ ಮಾಸ್ತಿ' ಎಂದೂ ಕರೆಯುತ್ತಾರೆ. ವರ್ಷಕ್ಕೊಮ್ಮೆ, ಅಂದರೆ ಸಂಕ್ರಾಂತಿಯ ಮಾರನೇ ದಿನ ಇಲ್ಲಿ ಜಾತ್ರೆ ನಡೆಯುತ್ತದೆ. ಸಮಸ್ತ ಗೊಂಡರೂ ಅಲ್ಲಿ ನೆರೆಯುತ್ತಾರೆ.

ಭಟ್ಕಳ ಈಗೊಂದು 'ಮಿನಿ ದುಬಾಯ್' ಎಂದೇ ಹೆಸರು ಪಡೆದಿದೆ. ದಿನ ದಿನಕ್ಕೂ ಪಾಶ್ಚಾತ್ಯ ನಾಗರಿಕತೆಯನ್ನು ರೂಢಿಸಿಕೊಂಡು ಬೆಳೆಯುತ್ತಿರುವ ಈ ಚಿಕ್ಕ ಪಟ್ಟಣ ಅತ್ಯಾಧುನಿಕ ಕಟ್ಟಡಗಳನ್ನು ಹೊಂದಿದೆ. ಇಂಥ ಆಧುನಿಕ ಭಟ್ಕಳದಲ್ಲಿ ಗೊಂಡರ ಕೋಗ್ತಿ ಗುಡಿ ಇದೆಯಲ್ಲ ಎಂದು ಆಶ್ಚರ್ಯ ಪಡಬೇಕಾಗಿಲ್ಲ. ಹಿಂದೆ ಭಟ್ಕಳದ ಸಮುದ್ರದಂಚಿನವರೆಗೂ ದಟ್ಟಾರಣ್ಯವೇ ಇತ್ತು. ಬೆಟ್ಟಗುಡ್ಡಗಳಿಂದ ಆವೃತವಾದ ಭಟ್ಕಳ ಮತ್ತು ಮುರ್ಡೇಶ್ವರಗಳ ಸಮುದ್ರತೀರ ಇಂದಿಗೂ ಅಷ್ಟೇ ಆಕರ್ಷಕ. ಹಾಗೆ ನೋಡಿದರೆ ಇಡೀ ಉತ್ತರ ಕನ್ನಡದಲ್ಲಿ ಸಮುದ್ರದ ಅಂಚಿನವರೆಗೂ ಘಟ್ಟಗಳು ವ್ಯಾಪಿಸಿ ಬೃಹತ್ ಅರಣ್ಯವಿದ್ದ ಲಕ್ಷಣಗಳೇ ತುಂಬಿವೆ. ಹೀಗಾಗಿ ಕಾಡಿನ ವಾಸಿಗಳಾದ ಗೊಂಡರು ಸಮುದ್ರದ ಅಂಚಿನವರೆಗೂ ವಾಸವಾಗಿದ್ದರು. ಅರಣ್ಯಕ್ಕೂ ಸಮುದ್ರಕ್ಕೂ ಒಂದು ರೀತಿಯಲ್ಲಿ ನೆಂಟಸ್ತನ ಬೆಳೆಸಿದವರು ಈ ಗೊಂಡರು ಎಂದು ಹೇಳಿದರೆ ಆಶ್ಚರ್ಯವೇನಲ್ಲ. ಇದರ ಕುರುಹಾಗಿ ಭಟ್ಕಳದಿಂದ ಹತ್ತಾರು ಕಿ.ಮೀ. ಒಳಭಾಗದಲ್ಲಿ ಸಮುದ್ರದ ಮಧ್ಯೆ ಕಡುಗಪ್ಪು ನೀರಿನಿಂದಾವೃತವಾದ ನೇತ್ರಾಣಿ ಗುಡ್ಡದಲ್ಲಿಯೂ ಗೊಂಡರ ಸಾಂಸ್ಕೃತಿಕ ವೀರನೆನಿಸಿದ ಕುಂಟ ಜಟ್ಟಿಗನ ಕೊಂಬುಗಳಿವೆ. ಇವನನ್ನು ನೇತ್ರಾಣಿ ಜಟ್ಟಿಗ ಎಂದೂ ಕರೆಯುತ್ತಾರೆ. ಈಗಲೂ ಹಬ್ಬ ಜಾತ್ರೆಗಳ ಸಂದರ್ಭದಲ್ಲಿ ಆ ಭೋರ್ಗರೆಯುವ ಸಮುದ್ರವನ್ನು ಹಾದು ನೇತ್ರಾಣಿ ಗುಡ್ಡದಲ್ಲಿ ಪೂಜೆ ಸಲ್ಲಿಸಿ ಬರುವ ಗೊಂಡರೂ ಉಂಟು. ದೂರಕ್ಕೆ ನಿಗೂಢ ಪರ್ವತದಂತೆ ಕಾಣುವ ಆ ಸಾಗರದೊಳಗಿನ ಗುಡ್ಡ ಒಂದು ಕಾಲಕ್ಕೆ ಗೊಂಡರ ಪವಿತ್ರ ಸ್ಥಳವಾಗಿತ್ತೆಂದು ಹೇಳುತ್ತಾರೆ.

ಕೋಗ್ತಿ ಗುಡಿಯ ಒಳಗೆ ಏನೇನು ವಿಶೇಷಗಳಿವೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ. ಒಳಗಿನ ಹಜಾರದಲ್ಲಿ ಸಾಲುಸಾಲಾಗಿ ನಿಲ್ಲಿಸಿದ ಬಣ್ಣಬಣ್ಣದ ಮಾಸ್ತಿ ಮಹಾಸತಿಯರ ಮರದ ಮೂರ್ತಿಗಳವೆ. ಅವುಗಳೆಲ್ಲ ಭಕ್ತರು ಹರಕೆ ಹೊತ್ತ ಕಾರಣಕ್ಕಾಗಿ ಮಾಡಿಸಿ ತಂದಿಟ್ಟ ಮೂರ್ತಿಗಳು. ಗುಡಿಯ ಸುತ್ತ ಕಾಂಪೌಂಡ್ ರೀತಿಯಲ್ಲಿ ಹೊರಗೋಡೆ ನಿರ್ಮಿಸಿದ್ದು, ಆ ಗೋಡೆಯೊಳಗಿನ ಆವರಣದಲ್ಲಿ

PDF created with pdfFactory Pro trial version www.pdffactory.com

ಒಂದು ಚೌಡಿಕಟ್ಟೆ ಇದೆ. ಅಲ್ಲಿಯೂ ಅನೇಕ ರೀತಿಯ ಜಟ್ಟಿಗನ ಕೊಂಬುಗಳಿವೆ. ಈ ಜಟ್ಟಿಗರೆಲ್ಲ ಇಲ್ಲಿ ಕೋಗ್ತಿಯ ಸೇವಕರು. ಅಥವಾ ಅವಳ ಆಜ್ಞಾನುವರ್ತಿಗಳಾದ ಭಂಟರು. ತುಳಸಿ ಮತ್ತು ನಾಗರಕಲ್ಲುಗಳ ಕಟ್ಟೆಗಳೂ ಇಲ್ಲಿ ಇವೆ.

ಮಹಾಸತಿಯರಾದ ಅನೇಕಾನೇಕ ಮಾಸ್ತಿಯರು ಗೊಂಡರ ಎಲ್ಲ ಪ್ರದೇಶಗಳಲ್ಲಿ ಕಂಡು ಬರುತ್ತಾರೆ. ಆ ಎಲ್ಲಾ ಮಾಸ್ತಿಯರ ಸಂಕೇತವೇ ಈ ಕೋಗ್ತಿಕಟ್ಟೆ ಮಾಸ್ತಿ. ಹೊಸ್ ಮಾಸ್ತಿ, ಹಾದಿ ಮಾಸ್ತಿ, ವೀರ ಮಾಸ್ತಿ, ಕೊಡದ ಮಾಸ್ತಿ, ಮಹಾ ಮಾಸ್ತಿ ಮುಂತಾಗಿ ಅನೇಕ ವಿಧವಾದ ಮಾಸ್ತಿಯರನ್ನು ಇವರು ಆರಾಧಿಸುತ್ತಾರೆ. ಹರಕೆ ಮಾಡಿಕೊಂಡವರು ತಂದು ಒಪ್ಪಿಸಿದ ಮಾಸ್ತಿಯರಂತೂ ನೂರಾರು. ಸುಂದರವಾದ ಮರದ ಮೂರ್ತಿಯನ್ನು ಮಾಡಿಸಿ, ಅವುಗಳಿಗೆ ಹೊಂದುವ ವಿವಿಧ ಬಣ್ಣಗಳನ್ನು ಸಂಯೋಜಿಸಿ ಒಂದು ಸುಂದರ ದೇವಿವಿಗ್ರಹವನ್ನಾಗಿ ರೂಪಿಸಿ ಅದನ್ನು ತಂದು ಕೋಗ್ತಿಗುಡಿಗೆ ಒಪ್ಪಿಸುತ್ತಾರೆ. ಈ ಪದ್ಧತಿ ಈ ಭಾಗದಲ್ಲಿ ತುಂಬ ಜನಪ್ರಿಯ ಎನ್ನುವುದಕ್ಕೆ ಸಾಕ್ಷಿಯಾಗಿ ಭಟ್ಕಳದ ಸಮೀಪವಿರುವ ಸೋಡಿಗದ್ದೆಯ ಮಾಸ್ತಿ ಗುಡಿಗೆ ಹೋಗಬೇಕು. ಅಲ್ಲಿ ಕೇವಲ ಗೊಂಡರಷ್ಟೇ ಭಕ್ತರಲ್ಲ. ಇತರೆ ಅನೇಕ ಜನವರ್ಗಗಳು ಅಲ್ಲಿನ ಭಕ್ತರು. ಹೀಗೇ ಹರಕೆ ಕಟ್ಟಿಕೊಂಡು ಅರ್ಪಿಸಿದ ಸಾವಿರಾರು ಮಾಸ್ತಿ ವಿಗ್ರಹಗಳು ಅಲ್ಲಿನ ವಿಶಾಲ ದೇವಸ್ಥಾನದಲ್ಲಿ ಸ್ಥಾನ ಪಡೆದಿವೆ. ರಾಶಿರಾಶಿಯಾದ ಆ ಅಂದದ ಮೂರ್ತಿಗಳನ್ನು ನೋಡುವುದೇ ಒಂದು ಆನಂದ.

ಗೊಂಡರ ಆರಾಧನೆಯಲ್ಲಿ ಹೆಸರಿಸಲೇಬೇಕಾದ ಮತ್ತೊಂದು ಆಚರಣೆ ಅವರ ಮಂಡಳ ಕುಣಿತ. ಇದು ಕೋಗ್ತಿ ಜಾತ್ರೆಯಂದು ನಡೆಯುತ್ತದೆ. ಈಗಾಗಲೇ ಹೇಳಿದಂತೆ ಈ ಜಾತ್ರೆ ಸಂಕ್ರಾಂತಿಯ ಮಾರನೇ ದಿನ ನಡೆಯುತ್ತದೆ. ಮಂಡಲ ಕುಣಿತಕ್ಕೆ ಪೂರ್ವಭಾವಿಯಾಗಿ ಸಾಂಕೇತಿಕವಾಗಿ ಸಿಡಿಯಾಡುವುದು, ಮಾಸ್ತಿಯ ಮೂರ್ತಿಗಳಿಗೆ ಪೂಜೆ ಸಲ್ಲಿಸುವುದು, ದೆವ್ವ ಮೈಮೇಲೆ ಬರುವುದು ಮುಂತಾದ ಮುಖ್ಯ ಆಚರಣೆಗಳು ಅಂದು ನಡೆಯುತ್ತವೆ. ಈ ಮಂಡಲಪೂಜೆ ದೇವಾಲಯದ ಹೊರಗೆ ಬರೆದ ಮಂಡಲವನ್ನನುಸರಿಸಿ ನಡೆಯುತ್ತದೆ.

ಮಂಡಲವನ್ನು ಬರೆಯುವ ಗೆರೆಗಳನ್ನು 'ಗರಿ'ಗಳೆಂದು ಕರೆಯುತ್ತಾರೆ. ಕಪ್ಪು, ಕೆಂಪು, ಹಳದಿ, ನೀಲಿ, ಹಸಿರು ಮುಂತಾದ ಎಲ್ಲ ಬಣ್ಣಗಳ ಗರಿಯನ್ನು ಬರೆಯಲಾಗುತ್ತದೆ. ಹೀಗೆ ಮಂಡಲ ಬರೆಯುವಾಗ ಅಕ್ಕಿಹಿಟ್ಟು, ಅರಿಶಿನ, ಕುಂಕುಮ ಮೊದಲಾದವುಗಳ ಮಿಶ್ರಣವನ್ನು ಬಳಸುತ್ತಾರೆ. ಮಂಡಲದ ತ್ರಿಜ್ಯ ಸಾಧಾರಣ ಎರಡು ಅಡಿ. ಮಂಡಲವು ಒಂದೇ ಆಗಿದ್ದು ನಾಲ್ಕು ಬದಿಗಳಲ್ಲಿ ನಾಲ್ಕು ರೀತಿಯ ಚೌಕವಿರುತ್ತದೆ. ಮಂಡಲದ ಮೇಲೆ ಹಾವಿನ ಆಕಾರವೊಂದನ್ನು ಬರೆದಿರುತ್ತಾರೆ. ಅದೇ ಸಂದರ್ಭದಲ್ಲಿ ಗುಡಿಯ ಹೊರಗೆ ಬಾಗಿನಲ್ಲಿ ಒಂದು ಚೊಂಬಿನಲ್ಲಿ ಸ್ವಲ್ಪ

ನೀರನ್ನು ತುಂಬಿಸಿ ಅದಕ್ಕೆ ಹಿಂಗಾರದ ಕೊನೆಯೊಂದನ್ನಿಟ್ಟು ನೆಲದ ಮೇಲೆ ಇಟ್ಟಿರುತ್ತಾರೆ. ಕಳಶ ಎಂದು ಕರೆಯಲಾಗುವ ಇದರಲ್ಲಿ ಮಂಡಲವನ್ನು ನಿಲ್ಲಿಸಲಾಗುತ್ತಿದೆ. ಇದಕ್ಕೆ ಅಬ್ಬಲಿಗೆ ಹೂಗಳನ್ನು ಹಾಗೂ ಹಿಂಗಾರವನ್ನು ಪ್ರಭಾವಳಿಯ ರೀತಿಯಲ್ಲಿ ಕಟ್ಟಲಾಗುತ್ತದೆ. ಈ ಮಂಡಲದ ಮೇಲೆ ಚಪ್ಪರವಿರುತ್ತದೆ. ಚಪ್ಪರದ ಒಳಭಾಗಕ್ಕೆ ಮೇಲುಕಟ್ಟೊಂದನ್ನು ಕಟ್ಟಿರುತ್ತಾರೆ. ಮೇಲು ಕಟ್ಟಿನಲ್ಲಿ ತೆಂಗಿನ ಹಸಿರು ಗರಿಗಳಿಂದ ಮಾಡಿದ ಹಾವುಗಳು ಮತ್ತು ಹಕ್ಕಿಗಳನ್ನು ತೂಗುಹಾಕಲಾಗಿರುತ್ತದೆ.

ಮಂಡಲದ ಪೂಜೆಯಲ್ಲಿ ಮಂಡಲದ 'ಬಗಸ' ಮುಖ್ಯವಾಗಿರುತ್ತದೆ. ಡಕ್ಕೆ, ವಸ್ತ್ರ, ಡಕ್ಕೆಯ ಮುಚ್ಚು ಇತ್ಯಾದಿಗಳಿರುವ ಒಂದು ಕುಕ್ಕೆಯೇ ಮಂಡಲದ ಬಗಸ. ಇದು ಸಾಮಾನ್ಯವಾಗಿ ಊರಿನ ಮುಖ್ಯ ಗೌಡನ ಮನೆಯಲ್ಲಿರುತ್ತದೆ. ಹೀಗೆ ಮಂಡಲ ಪೂಜೆಯ ಸಿದ್ಧತೆಗಳೆಲ್ಲವೂ ನಡೆದ ಮೇಲೆ ಸುಮಾರು ರಾತ್ರಿ ಹತ್ತು ಗಂಟೆಯ ವೇಳೆಗೆ ಪೂಜಾರಿ ಮತ್ತು ಢಕ್ಕೆಯವರು ಬರುತ್ತಾರೆ. ಗುಡಿಯೊಳಗೆ ಪೂಜೆಯಾದ ನಂತರ ದೆವ್ವಕರೆಯುವ ಹಾಡನ್ನು ಹಾಡಲಾಗುತ್ತದೆ. ಗೊಂಡರ ದೇವತೆಗಳಾದ ಮಾಸ್ತಿ ಮತ್ತು ಜಟ್ಟಿಗರನ್ನು ಈ ಹಾಡಿನ ಮೂಲಕ ಕರೆಯಲಾಗುತ್ತದೆ. ಆಗ ಪೂಜಾರಿಗೆ ದೆವ್ವ ಮೈಮೇಲೆ ಬರುತ್ತದೆ. ಆಗ ಅವನನ್ನು ಮಂಡಲದ ಬಳಿಗೆ ಕರೆದು ತರಲಾಗುತ್ತದೆ. ಪೂಜಾರಿ ಹಿಡಿ ಅಕ್ಕಿ ಇಟ್ಟು, ತೆಂಗಿನಕಾಯಿ ಒಡೆದು, ದೂಪದ ಗಿಂಡಿ ಹಿಡಿದು ಕಳಸಕ್ಕೆ ಪ್ರದಕ್ಷಿಣೆ ಮಾಡಿ ಪೂಜೆ ಮುಗಿಸುತ್ತಾನೆ. ಅನಂತರ ಮಂಡಲದ ಪದ ಹಾಡುವವರು ಹಾಡುವುದಕ್ಕೆ ತೊಡಗುತ್ತಾರೆ. ಇವರು ಕೆಂಪುಮಡಿ ಪಂಚೆಯನ್ನು ಮೊಣಕಾಲಿನವರೆಗೆ ಉಟ್ಟಿರುತ್ತಾರೆ. ಕೊರಳಿಗೆ ದೃಷ್ಟಿಸರ, ಮಣಿಸರ, ಚಿನ್ನದ ಸರಗಳನ್ನು ಹಾಕಿರುತ್ತಾರೆ. ಕಿವಿಗೆ ದೊಡ್ಡದಾದ ಗಾಲವಂಟಿ, ಅಬ್ಬಲಿಗೆ ಹೂ, ಕಾಲಿಗೆ ಗೆಜ್ಜೆಯ ಕಡಗ ಇವಿಷ್ಟು ಇವರ ವೇಷಭೂಷಣಗಳು. ಸರ್ವೇಸಾಮಾನ್ಯವಾಗಿ ನಾಲ್ಕು ಜನರೇ ಇರುವ ಇವರು ಕಳಸದ ಇಬ್ಬದಿಗಳಲ್ಲಿ ಇಬ್ಬಿಬ್ಬರು ನಿಲ್ಲುತ್ತಾರೆ. ಈಚೆಗೆ ನಿಂತವರು ಢಕ್ಕೆ ಬಾರಿಸುತ್ತಾ, ಕಳಸದ ಸುತ್ತ ಕುಣಿಯುತ್ತ ಹಾಡಲು ಪ್ರಾರಂಭಿಸಿದಾಗ ಆ ಬದಿಯವರು ಇವರು ಎತ್ತಿಕೊಟ್ಟ ಹಾಡನ್ನು ಪುನರುಚ್ಚರಿಸುತ್ತಾರೆ. ಮೊದಲಿಗೆ ಕಳಸಕ್ಕೆ ಅಡ್ಡ ಬಿದ್ದು ಹೊನ್ನಮ್ಮ ಮಾಸ್ತಿ, ಸೋಡಿಗದ್ದೆ ಮಾಸ್ತಿ, ಕೋಗ್ತಿ ಕಟ್ಟೆ ಮಾಸ್ತಿ, ಜಟ್ಟಿಗ, ಹಾಯ್ಗಳಿ ಮೊದಲಾದ ದೇವರುಗಳ ಸುತ್ತಿ ಮಾಡುತ್ತಾರೆ. ಈ ನಾಲ್ಕು ಜನರ ಕುಣಿತದ ಜೊತೆಗೆ ಪೂಜಾರಿಯೂ ಕುಣಿಯುತ್ತಿರುತ್ತಾನೆ. ಆದರೆ ಪೂಜಾರಿಯ ಹಾವಭಾವ ಮತ್ತು ನರ್ತನ ವಿಶೇಷವಾಗಿರುತ್ತದೆ. ಅವನು ದೆವ್ವಕರೆಯುವ ರೀತಿ ಹಾಗೂ ದೇವಿಯ ಉಪಾಸನೆ ಮಾಡುವ ರೀತಿ ವಿಶಿಷ್ಟವಾಗಿರುತ್ತದೆ. ಕುಣಿಯುತ್ತಾ ಕುಣಿಯುತ್ತಾ ಆತ ಕೈಯಲ್ಲಿರುವ ಹೊಂಬಾಳೆಯ ಎಸಳುಗಳನ್ನು ಸುತ್ತು ಕಳಸದ ಮೇಲೆ ಹಾಕುತ್ತಿರುತ್ತಾನೆ.

PDF created with pdfFactory Pro trial version www.pdffactory.com

ಒಂದು ಹೊಂಬಾಳೆ ಮುಗಿದರೆ ಮತ್ತೊಂದು ಹೊಂಬಾಳೆಯಂತೆ ಕಿತ್ತು ಕಿತ್ತು ಹಾಕಿರುತ್ತಾನೆ. ಈ ಕುಣಿತ ಮುಂಜಾನೆಯವರೆಗೆ ನಡೆಯುತ್ತದೆ. ಆದರೂ ಪೂಜಾರಿಯ ಆವೇಶ ತಣ್ಣಗಾಗಿರುವುದಿಲ್ಲ. ಬೆಳಗಿನ ಜಾವ ಅವನನ್ನು ಗುಡಿಯ ಒಳಗೆ ಕರೆತಂದು ದೆವ್ವ ಬಿಡಿಸುತ್ತಾರೆ. ಆ ನಂತರವೂ ಹೊರಗೆ ಮಂಡಳ ಕುಣಿತ ಹಾಗೂ ಹಾಡುಗಾರಿಕೆ ಮುಂದುವರಿಯುತ್ತದೆ.

ಆ ಕುಣಿತ ಕೋಗ್ತಿ ಹಬ್ಬದಲ್ಲಿ ದೇವಾಲಯದ ಆವರಣದಲ್ಲಿ ನಡೆಯುತ್ತದೆ. ಇದೇ ರೀತಿ ಹರಕೆ ಕಟ್ಟಿಕೊಂಡ ಕುಟುಂಬಗಳು ಇದೇ ಸಂಕ್ರಾಂತಿಯಿಂದ ಶಿವರಾತ್ರಿಯ ನಡುವಿನ ಸಮಯದಲ್ಲಿ ತಮ್ಮ ತಮ್ಮ ಮನೆ ಮತ್ತು ಗುಡಿಗಳ ಮುಂದೆ ದೆವ್ವಕರೆಯುವ ಆಚರಣೆಯನ್ನು ಏರ್ಪಡಿಸುತ್ತಾರೆ. ಆದರೆ ಆಚರಣೆಯ ವಿಧಿವಿಧಾನಗಳು ಮಾತ್ರ ಎಲ್ಲಾ ಕಡೆಯಲ್ಲಿಯೂ ಒಂದೇ ತೆರನಾಗಿರುತ್ತವೆ.

ಈ ಆಚರಣೆಯನ್ನು ಇಷ್ಟೆಲ್ಲಾ ವಿವರಿಸಿದ್ದಕ್ಕೆ ಕಾರಣಗಳಿವೆ. ಇದು ಅನಾದಿಕಾಲದ ಹಲವು ಸಾಂಸ್ಕೃತಿಕ ವಿಶೇಷಗಳನ್ನು ತನ್ನೊಳಗೆ ಪ್ರತಿನಿಧಿಸುತ್ತಿರುವ ಒಂದು ಆಚರಣೆ. ಕಾಡಿನ ಮೂಲ ನಿವಾಸಿಗಳಾದ ಗೊಂಡರು ಒಂದು ಕಡೆ ಅನಂತ ಸಮುದ್ರದ ಅಬ್ಬರವನ್ನೂ ಮತ್ತೊಂದು ಕಡೆ ದಟ್ಟ ಕಾನನದ ನಿಗೂಢತೆಯನ್ನು ಕಂಡು ಬೆರಗಾದವರು. ಸತತ ಮಳೆ, ಬಿರುಗಾಳಿ, ಹುಲಿ, ಘಟಸರ್ಪವಾದ ಕಾಳಿಂಗ ಇಂಥೆಲ್ಲಾ ಕಷ್ಟಕಾರ್ಪಣ್ಯಗಳ ನಡುವೆ ಬದುಕು ನೀಸಿದವರು. ಇವರ ಮಂಡಲಾಚರಣೆ ಇಂಥ ಅಭೇದ್ಯ ನಿಸರ್ಗವನ್ನು ನಿಯಂತ್ರಿಸಿ ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಹಂಬಲದ ಮಾಂತ್ರಿಕ ಆಚರಣೆಯಲ್ಲದೆ ಮತ್ತೇನೂ ಅಲ್ಲ. ಮಂಡಲದ ನಡುವೆ ಇಡುವ ಕಲಶ ಅಂಥ ನಿಸರ್ಗದ ನಡುವೆಯೂ ಅವರು ಸಮೃದ್ಧಿಗಾಗಿ, ಫಲೋತ್ಪತ್ತಿಗಾಗಿ ಹಾರೈಸುವುದರ ಸಂಕೇತ. ತೆಂಗಿನ ಗರಿಗಳಿಂದ ತಯಾರಿಸಿ ಕಟ್ಟಿ ಬಿಡಲಾದ ಸರ್ಪ, ಮಂಡಲದ ಮೇಲಿನ ನಾಗಮಂಡಲದ ಮಧ್ಯೆ ಇಟ್ಟ ಕಲಶಗಳು ಫಲವಂತಿಕೆಯ ಹೆಣ್ಣು ಗಂಡಿನ ಸಂಕೇತಗಳು. ಒಂದು ಕಡೆ ಮಾಸ್ತಿ, ಮಾರಿ ಹಾಗೂ ಚಾಡಿಯರೆಂಬ ಹೆಣ್ಣು ದೇವತೆಗಳನ್ನು ಇನ್ನೊಂದು ಕಡೆ ತಮ್ಮ ವೀರತ್ವದ ಸಂಕೇತದ ಜಟ್ಟಿಗರನ್ನು ಆರಾಧಿಸುವ ಗೊಂಡರು ಪುರುಷ ಮತ್ತು ಸ್ತ್ರೀ ಇಬ್ಬರನ್ನು ಸಮಾನವಾಗಿ ಪರಿಗಣಿಸಿ ನಾಗ ಮತ್ತು ಕಲಶದ ಮೂಲಕ ಸಂಕೇತಿಸುತ್ತಾರೆ. ಕೃಷಿ ಮತ್ತು ಪಶುಸಂಗೋಪನೆ ಎರಡನ್ನೂ ಒಟ್ಟೊಟ್ಟಾಗಿ ನಿಭಾಯಿಸಿಕೊಂಡು ಬರುತ್ತಿರುವ ಗೊಂಡರು, ಕೃಷಿ ಹಂತದ ಸಮೃದ್ಧಿ ದೇವತೆಯರು ಹಾಗೂ ಪಶುಸಂಗೋಪನೆ ಹಂತದ ವೀರ ಪುರುಷರನ್ನು ಒಟ್ಟಾಗಿ ಆರಾಧಿಸುವಲ್ಲಿ ಗೊಂಡರ ಸಾಂಸ್ಕೃತಿಕ ವಿಕಸನದ ಇತಿಹಾಸವೇ ಅಡಗಿದಂತಿದೆ. ಮಂಡಲದ ಆಚರಣೆಯಲ್ಲಿ ಪೂಜಾರಿ ಕೆಂಪುವಸ್ತ್ರ ತೊಟ್ಟು ವಿವಿಧ ವೇಷಭೂಷಣಗಳಿಂದ ಅಲಂಕರಿಸಿಕೊಂಡು ದೆವ್ವ ಕರೆಯಲು ಸಿದ್ಧವಾಗುವ ರೀತಿಯೇ

ರೋಮಾಂಚಕ. ಒಬ್ಬ ಮಾಂತ್ರಿಕನ ಎಲ್ಲ ಲಕ್ಷಣಗಳೂ ಅವನಲ್ಲಿವೆ. ಅದಕ್ಕೆ ಪೂರಕವಾಗಿ ವೃತ್ತಾಕಾರದ ಸಂಕೀರ್ಣ ರೂಪದ ಗೆರೆಗಳ ಮಂಡಲವಿದೆ. ಇದು ಒಂದು ದೈವದ ಆರಾಧನೆ ಬದಲು, ಪ್ರಕೃತಿಯ ಅಗೋಚರ ಶಕ್ತಿಯಮೇಲೆ ತರುವ ಒತ್ತಾಯ. ಅದನ್ನು ವಶಪಡಿಸಿಕೊಂಡು, ಬೇಕಾದ್ದನ್ನು ಪಡೆಯುವ ಅರ್ಥಾತ್ ಎಲ್ಲಾ ರೀತಿಯ ಸಮೃದ್ಧಿಯನ್ನು ಪಡೆಯುವ ಆಶಯ ಈ ಇಡೀ ಮಾಂತ್ರಿಕಾಚರಣೆಯ ಸಾಂಕೇತಿಕತೆ ಎನ್ನಬಹುದಾಗಿದೆ.

ಈ ರೀತಿಯಲ್ಲಿ ಕೋಗ್ತಿ, ಮಾಸ್ತಿ, ಚೌಡಿ, ಮಾರಿ ಹಾಗೂ ಜಟ್ಟಿಗರನ್ನು ಆರಾಧಿಸುವ ಗೊಂಡರು ಕೂಡ ಹಾಲಕ್ಕಿ ಒಕ್ಕಲಿಗರಂತೆಯೇ ತಿರುಪತಿ ತಿಮ್ಮಪ್ಪನನ್ನೇ ಇಂದು ಪ್ರಧಾನವಾಗಿ ಪೂಜಿಸುತ್ತಿದ್ದಾರೆ. ಎಷ್ಟರಮಟ್ಟಿಗೆ ಎಂದರೆ ಜೀವನದಲ್ಲಿ ಒಮ್ಮೆಯಾದರೂ ತಿರುಪತಿಯ ಯಾತ್ರೆ ಮಾಡಬೇಕೆಂಬುದು ಇವರಲ್ಲಿನ ಪ್ರತಿಯೊಬ್ಬರ ಆಶಯ. ಯಾವುದಕ್ಕೂ ತಿಮ್ಮಪ್ಪನೇ ಮೊದಲು ಅವನೇ ಅಂತಿಮ. ತಿಮ್ಮಪ್ಪನನ್ನು ಇವರು ಹಚ್ಚಿಕೊಂಡಿರುವ ರೀತಿ ನೋಡಬೇಕೆಂದರೆ, ಹರಕೆ ಹೊತ್ತುಕೊಂಡ ಗೊಂಡರು ತಿಮ್ಮಪ್ಪನ ಹೆಸರಿನಲ್ಲಿ ಮಾಡುವ 'ಹರಿಸೇವೆ'ಯನ್ನು ನೋಡಬೇಕು. ಮದುವೆಯನ್ನು ಕೂಡ ಅಷ್ಟು ಸಂಭ್ರಮದಿಂದ ಅವರು ಮಾಡುವುದಿಲ್ಲ. ಐವತ್ತು ಸಾವಿರದಿಂದ ಒಂದು ಲಕ್ಷ ರೂಪಾಯಿ ಖರ್ಚು ಮಾಡಿ ಹರಿಸೇವೆ ಆಚರಣೆಯನ್ನು ಮಾಡುತ್ತಾರೆ. ಇದಕ್ಕಾಗಿ ಸಾಲಗಾರರಾದವರೇ ಹೆಚ್ಚು. ಯಾಕೆಂದರೆ ಇವರ್ಯಾರು ಯಥೇಚ್ಛ ಹಣ ಖರ್ಚು ಮಾಡುವಷ್ಟು ಶ್ರೀಮಂತರಂತೂ ಅಲ್ಲ. ಒಂದು ರೀತಿಯಲ್ಲಿ ಪ್ರವಾಹದಂತೆ ಬಂದ ತಿಮ್ಮಪ್ಪನ ಅನುಕರಣೆ ಮತ್ತು ಸ್ವಪ್ರತಿಷ್ಠೆ ಇವರನ್ನು ಅಷ್ಟರ ಮಟ್ಟಿಗೆ ಪ್ರಭಾವಿಸಿವೆ.

ಮೂಲದಿಂದ ಇವರೂ ಶೈವಾರಾಧಕರಾಗಿದ್ದರು ಎಂಬುದಕ್ಕೆ ಅನೇಕ ಕುರುಹುಗಳಿವೆ. ಯಾಕೆಂದರೆ ಇವರ ಪ್ರಧಾನವಾದ ಹಬ್ಬವೇ ಶಿವರಾತ್ರಿ. ಶಿವರಾತ್ರಿಯಂದು ಇವರು ಕುಣಿಯುವ ಗೊಂಡರ ಕುಣಿತ ವಿಶೇಷವಾದದ್ದು. ನಂತರ 'ಹೋಳಿ ಹಳಬು' ನೃತ್ಯ ಮಾಡಿ ಶಿವನನ್ನು ಆರಾಧಿಸುತ್ತಾರೆ. ಆದರೆ ಇವರ ಮೇಲಾದ ತಿಮ್ಮಪ್ಪನ ಪ್ರಭಾವ ಉಳಿದ ಆಚರಣೆಗಳನ್ನು ಮಸಕು ಮಾಡಿದೆ. ಆದರೂ ತಮ್ಮ ಪರಂಪರೆಯ ಬಗ್ಗೆ ಅಪಾರ ಶ್ರದ್ಧೆ ಇರುವ ಗೊಂಡರು ಮೂಲ ದೈವಾಚರಣೆಗಳನ್ನು ಬಿಟ್ಟಿಲ್ಲ.

೨.೩. ಕಾಡ್ಯನ ಮನೆ

ಮೇರರನ್ನು ಹರಿಜನರೆಂದು ಕರೆಯುತ್ತಾರಾದರೂ ನನ್ನ ದೃಷ್ಟಿಯಲ್ಲಿ ಅವರು ಬುಡಕಟ್ಟಿನ ಎಲ್ಲ ಲಕ್ಷಣಗಳೂ ಇರುವ ಒಂದು ವಿಶಿಷ್ಟ ಸಮುದಾಯ. ಇವರ ಕಾಡ್ಯನ ಬನ ತುಂಬ ವಿಶಿಷ್ಟವಾದುದು. ಕಾಡ್ಯ ಎಂದರೆ ನಾಗ ಅಥವಾ ಸರ್ಪ

PDF created with pdfFactory Pro trial version www.pdffactory.com

ಎಂದು ಹೇಳುತ್ತಾರೆ. ನಮ್ಮ ದ್ರಾವಿಡ ಪರಂಪರೆಯಲ್ಲಿ ಕಡ್ಯ ಎಂಬ ಒಂದು ಪದವಿದ್ದು ಅದರ ಅರ್ಥ ಕುಂಭ ಅಥವಾ ಮಡಕೆ. ವಾಸ್ತವವಾಗಿ ಈ ಕಾಡ್ಯನ ಆರಾಧನೆ ಫಲೋತ್ಪತ್ತಿಯ ಸಂಕೇತಗಳಾದ ಕುಂಭ ಹಾಗೂ ಸರ್ಪ ಈ ಎರಡಕ್ಕೂ ಸಂಬಂಧಿಸಿದ್ದು. ಆದ್ದರಿಂದ ನಾನಿಲ್ಲಿ ಕಾಡ್ಯ ಎಂದರೆ ಏನು ಎಂಬಿತ್ಯಾದಿ ಭಾಷಾಶಾಸ್ತ್ರದ ಸಮಸ್ಯೆಗಳಿಗೆ ತಲೆಕೆಡಿಸಿಕೊಳ್ಳುವುದಿಲ್ಲ.

ಕಾಡ್ಯನಿಗೆ ಸಂಬಂಧಿಸಿದ ಜಾಗವನ್ನು ಕಾಡ್ಯನ ಮನೆ ಎಂದು ಕರೆಯಲಾಗುತ್ತದೆ. ಇದು ಸಾಮಾನ್ಯವಾಗಿ ಜನವಸತಿಯಿಂದ ದೂರ ಹಾಗೂ ಕಾಡಿನ ಒಳಭಾಗದಲ್ಲಿ ಇರುವ ಜಾಗ. ಬೃಹದಾಕಾರವಾಗಿ ಬೆಳೆದ ಹುತ್ತವೇ ಅಲ್ಲಿ ಆಕರ್ಷಣೆ. ಆ ಹುತ್ತದ ಮೇಲೆ ಚಪ್ಪರದ ರೀತಿಯ ಮಾಡು ಇರುತ್ತದೆ. ಆ ಮಾಡಿನ ಸುತ್ತಲಿರುವ ಮರಗಳ ಬುಡದಲ್ಲಿ ಅನೇಕಾನೇಕ ಕುಂಭಗಳ ರಾಶಿಯೇ ಬಿದ್ದಿರುತ್ತದೆ. ಪ್ರತಿಯೊಂದು ಕುಂಭದ ಹೊರಮೈ ಮೇಲೆ ಸರ್ಪಾಕೃತಿಯ ಸುಂದರ ಚಿತ್ರಗಳಿರುತ್ತವೆ. ಅಂಥ ಚಿತ್ರಗಳು ಒಂದಕ್ಕಿಂತ ಹೆಚ್ಚಿರುತ್ತವೆ. ಹೆಡೆ ಎತ್ತಿದ ನಾಗಗಳ ಚಿತ್ರಗಳೇ ಹೆಚ್ಚು. ಹುತ್ತದ ಬುಡದಲ್ಲಿ ಇನ್ನೂ ಶಿಥಿಲವಾಗದ, ಒಡೆಯದ ಇಂಥ ಅನೇಕ ಕುಂಬಗಳು ಬಿದ್ದಿರುತ್ತವೆ. ಈ ಕುಂಭಗಳನ್ನು ಅವರು 'ಕಲಶ' ಎಂದು ಕರೆಯುತ್ತಾರೆ.

ಈ ಕಾಡ್ಯನ ಮನೆಯ ಪರಿಸರದಲ್ಲಿ ಬೀಡು ಬಿಟ್ಟಿರುವ ಇತರ ದೈವಗಳಿಗೂ ಕಡಿಮೆ ಇಲ್ಲ. ಬ್ರಹ್ಮ, ಯಕ್ಷ, ಉಮ್ಮಳ್ತಿ, ಬೊಬ್ಬರ್ಯ, ಗಾಮ, ಜಟ್ಟಿಗ, ಕಾನು ಪಂಜುರ್ಲಿ, ಕಲ್ಲುಡ ಇತ್ಯಾದಿ ಅನೇಕ ದೇವರುಗಳ ಆವಾಸಸ್ಥಾನ ಅದು. ಆದರೆ ಇಲ್ಲೆಲ್ಲ ಅತ್ಯಂತ ಪ್ರಮುಖವಾದದ್ದೇ ಹುತ್ತ–ಕುಂಭದ ಕಲಶ–ನಾಗಪ್ಪ. ಕಾಡ್ಯ ಎಂದರೆ ಕಾಳಿಂಗಸರ್ಪ ಎಂದೂ ಕೆಲವರು ಅಭಿಪ್ರಾಯ ಪಡುತ್ತಾರೆ. ಅಂದ ಮೇಲೆ ಇದು ನಾಗಾರಾಧನೆಯ ಒಂದು ಸ್ಥಳ ಎಂಬುದರಲ್ಲಿ ಎರಡು ಮಾತಿಲ್ಲ. ಕರಾವಳಿಯಾದ್ಯಂತ ನಾಗಾರಾಧನೆ ಸಂಕೀರ್ಣ ರೂಪದಲ್ಲಿರುವ ಒಂದು ಆಚರಣೆ. ದಕ್ಷಿಣ ಕನ್ನಡ ಜಿಲ್ಲೆಯ ಹತ್ತಾರು ಕಡೆ ನಾವು 'ನಾಗಬನ'ಗಳನ್ನು ಕಾಣಬಹುದು. ಅಲ್ಲದೆ, ಈ ನಾಗಾರಾಧನೆ ಅತ್ಯಂತ ಪ್ರಾಚೀನವಾದ ಒಂದು ಆಚರಣೆ ಎಂಬ ಅಭಿಪ್ರಾಯಗಳೂ ಇವೆ. ಹೀಗಾಗಿ ಕರಾವಳಿ ಪ್ರದೇಶದಲ್ಲಿ ಮೇಲ್ವರ್ಗವೆನಿಸಿದ ಬ್ರಾಹ್ಮಣರಿಂದ ಹಿಡಿದು ಅಸ್ಪೃಶ್ಯರೆನಿಸಿದ ಮೇರರವರೆಗೆ ಈ ಆಚರಣೆ ಇದೆ. ಆದರೆ ಇದು ಮೂಲತಃ ಯಾರದು? ಎಂಬುದೇ ಇಲ್ಲಿಯ ಪ್ರಶ್ನೆ.

ಈ ಸಂದರ್ಭದಲ್ಲಿ ಆ ಪ್ರದೇಶದಲ್ಲಿ ಪ್ರಚಲಿತವಿರುವ ಒಂದು ಜನಪದ ಕಥೆಯನ್ನು ಅವಲೋಕಿಸಬೇಕಾಗುತ್ತದೆ. "ಹೊನ್ನಿ ಎಂಬ ಮೇರರ ಬಾಲೆಯೊಬ್ಬಳಿರುತ್ತಾಳೆ. ದೊಡ್ಡವಳಾಗಿ ಮೈನೆರೆಯುತ್ತಾಳೆ. ಗಾಳಿದೇವರ ಸೋಂಕಿನಿಂದ ಬಸುರಿಯೂ ಆಗುತ್ತಾಳೆ. ಮುಂದೆ ನವಮಾಸದ ತುಂಬಿದ ಬಸುರಿಯೂ ಆಗುತ್ತಾಳೆ. ಆಗ

ಬರಗಾಲ ಬರುತ್ತದೆ. ಅನ್ನ ಬಟ್ಟೆಬರೆಗಳಿಗೆ ಪರದಾಟ ಉಂಟಾಗುತ್ತದೆ. ಹೊನ್ನಿ ತನ್ನ ಒಡೆಯರ ಮನೆಗೆ ಹೋಗಿ ತನ್ನ ಸಂಕಷ್ಟ ತೋಡಿಕೊಳ್ಳುತ್ತಾಳೆ. ಒಡೆಯರಿಗೆ ಮನಕರಗುತ್ತದೆ. ಅವಳಿಗೆ ಒಂದಿಷ್ಟು ಉಂಬಳಿ ಕೊಡುತ್ತಾರೆ. ಹೊನ್ನಿ ಸಂತೋಷದಿಂದ ಭತ್ತ ತೆಗೆದುಕೊಂಡು ಮನೆಗೆ ಬರುತ್ತಾಳೆ. ಆಗ ಮಾಯದ ಮಳೆಗಾಳಿ ಬೀಸುತ್ತದೆ. ಎಲ್ಲಿ ನೋಡಿದರೂ ನೀರೇ ನೀರು. ತುಂಬಿ ಹರಿಯುವ ಹಳ್ಳ ಹೊನ್ನಿಗೆ ಅಡ್ಡಲಾಗುತ್ತದೆ. ಆಗ ಹೊನ್ನಿ ನಾನು ಒಂದೇ ತಂದೆ ತಾಯಿಯರಿಗೆ ಹುಟ್ಟಿದ ಮಗಳಾದರೆ ಮಾಯದ ಮಳೆಗಾಳಿ ನಿಲ್ಲಬೇಕು ಎಂದು ಕೇಳಿಕೊಳ್ಳುತ್ತಾಳೆ. ಮಳೆಗಾಳಿ ನಿಲ್ಲುತ್ತದೆ. ಮನೆಗೆ ಬಂದ ಹೊನ್ನಿ ಭತ್ತ ಕುಟ್ಟಿ, ಅಕ್ಕಿ ಮಾಡಿ, ಗಂಜಿ ಬೇಯಿಸುತ್ತಾಳೆ. ಅಂಗಳದಲ್ಲಿ ಏಳು ಹೊಂಡ ಮಾಡಿ, ಗೆರೆಟೆಯಿಂದ ತಿಳಿಗಂಜಿ ಎರೆಯುತ್ತಾಳೆ. ಇದನ್ನು ಏಳು ಮಕ್ಕಳು ಉಣ್ಣುತ್ತಾರೆ. ಹೊನ್ನಿಗೆ ಗಂಜಿ ಮಿಗಲಿಲ್ಲ. ಆಗ ಅವಳು ಆ ಏಳು ಹೊಂಡಗಳನ್ನು ನೆಕ್ಕುತ್ತಾಳೆ. ಆದರೂ ಹಸಿವು ಇಂಗುವುದಿಲ್ಲ. ಮತ್ತೆ ಹೊನ್ನು ಏನಾದರೂ ದುಡಿದು ತರಬೇಕೆಂದು ಕಮ್ಮಾರನ ಮನೆಗೆ ಹೋಗುತ್ತಾಳೆ. ಒಂದೇ ಕಾಸಿಗೆ ಒಂದೇ ಹೊಡೆತಕ್ಕೆ ಏಳು ಜೋಡು ಅಗೆವ ಸಲಕರಣೆಯೊಂದನ್ನು ಮಾಡಬೇಕೆಂದು ಮಾಡಿಕೊಡಬೇಕೆಂದು ಕೇಳುತ್ತಾಳೆ. ಆತ ಅವುಗಳನ್ನು ಮಾಡಿಕೊಡುತ್ತಾನೆ. ಅವುಗಳನ್ನು ತೆಗೆದುಕೊಂಡು ಕಾಡು ಗೆಣಸನ್ನು ಹುಡುಕುತ್ತಾ ಮೂಡಣ ದಿಕ್ಕಿಗೆ ಹೋಗುತ್ತಾಳೆ. ಕಾಡು ಗೆಣಸಿನ ಬಳ್ಳಿಗಳು ಕಂಡುಬರುತ್ತವೆ. ಅವಳು ಹಾರೆ ಹಾಕಿ ಮಣ್ಣು ಕಡಿಯುತ್ತಾಳೆ. ಒಂದು ಹಾರೆ ಮಣ್ಣು ಕಡಿದಾಗ ಚಿನ್ನದ ಕಲಶ, ಎರಡನೆಯ ಹಾರೆಗೆ ತಾಮ್ರದ ಕಲಶ, ಮೂರನೆಯ ಹಾರೆಗೆ ಮಣ್ಣಿನ ಕಲಶ ಹೊರಬರುತ್ತದೆ. ಹೊನ್ನಿಗೆ ಆಶ್ಚರ್ಯವಾಗುತ್ತದೆ. ಆಕೆ ಓಡಿ ಹೋಗಿ ಒಡೆಯರಿಗೆ ವಿಷಯ ತಿಳಿಸುತ್ತಾಳೆ. ಒಡೆಯರು ಅಡಿಗಳ ಮನೆಗೆ ಹೋಗಿ ತಿಳಿಸುವಂತೆ ಹೇಳುತ್ತಾರೆ. ಆಗ ಏನಾಯಿತು? ಚಿನ್ನದ ಕಲಶವನ್ನು ಅಡಿಗಳು ತೆಗೆದುಕೊಂಡರು. ತಾಮ್ರದ ಕಳಶವನ್ನು ಒಡೆಯರು ತೆಗೆದುಕೊಂಡರು. ಮಣ್ಣಿನ ಕಲಶವನ್ನು ತನಗೆ ಇರಲೆಂದು ಹೊನ್ನಿ ಇರಿಸಿಕೊಂಡಳು.

ಅಡಿಗಳು ಚಿನ್ನದ ಕಳಶದ ನಾಗನನ್ನು ಅಶ್ವತ್ಥಕಟ್ಟೆಯಲ್ಲಿ ಪ್ರತಿಷ್ಠಾಪಿಸಿದರು. ಒಡೆಯರು ತಾಮ್ರದ ಕಳಶದ ನಾಗನನ್ನು ತಮ್ಮ ಮನೆಯ ಮುಂದೆ ಪ್ರತಿಷ್ಠಾಪಿಸಿದರು. ಹೊನ್ನಿ ಮಣ್ಣಿನ ಕಲಶದ ನಾಗನನ್ನು ಗದ್ದೆಯಲ್ಲಿ ಇಟ್ಟಳು. ಮೊದಲನೆಯ ಅಡಿಗಳ ನಾಗನಿಗೆ ನಾಗಮಂಡಲದ ಸೇವೆಯೂ, ಒಡೆಯರ ನಾಗನಿಗೆ ಪಾಣಾರಾಟದ ಸೇವೆಯೂ, ಹೊನ್ನಿಯ ನಾಗನಿಗೆ ಕಾಡ್ಯನಾಟದ ಸೇವೆಯೂ ಆರಂಭವಾಯಿತು."

ಈ ಕಥೆಯಲ್ಲಿ ನಮಗೆ ಅನೇಕ ಮಾಹಿತಿಗಳು ದೊರೆಯುತ್ತವೆ. ನಾಗಾರಾಧನೆಯ ವಿಕಾಸದ ಬಗ್ಗೆ ಅನೇಕ ಸುಳಿವುಗಳು ಇಲ್ಲಿ ಸಿಗುತ್ತವೆ. ಸ್ವತಃ ಹುತ್ತವೇ ಸೃಷ್ಟಿಗೆ

PDF created with pdfFactory Pro trial version www.pdffactory.com

ಕಾರಣವಾದ ಯೋನಿಯ ಸಂಕೇತ. ಮಣ್ಣಿನ ಕುಂಭರೂಪದ ಕಲಶವಂತೂ ಗರ್ಭಧರಿಸಿದ ಫಲವತಿಯಾದ ಹೆಣ್ಣಿನ ಸಂಕೇತ. ಅದರ ಮೇಲಣ ನಾಗ ಸೃಷ್ಟಿಗೆ ಕಾರಣವಾದ ಗಂಡಿನ ಶಕ್ತಿಯ ಸಂಕೇತ. ಹೀಗೆ, ಹುತ್ತ ಮತ್ತು ಕಳಶದಿಂದ ಆರಂಭವಾದ ನಾಗಪೂಜೆ ಮನೆ ಅಂಗಳದ 'ದೇವರ ಕಟ್ಟೆ'ಗೆ ಬಂದದ್ದು ಎರಡನೇ ಹಂತ. ಅಂದರೆ ಅಲ್ಲಿ ಹುತ್ತದ ಬುಡದಲ್ಲಿಟ್ಟ ಮಣ್ಣಿನ ಕಳಶದ ಮೈಮೇಲೆ ಕೆತ್ತಿದ ನಾಗ ತಾಮ್ರದ ರೂಪಕ್ಕೆ ಪರಿವರ್ತಿತವಾಗುತ್ತಾನೆ. ನಂತರದ ಹಂತ ಚಿನ್ನದ ನಾಗಪ್ಪ. ಬಹುಶಃ ಆರಂಭಕ್ಕೆ ಅಸ್ಪೃಶ್ಯರ ಮತ್ತು ಕಾಡಿನ ನಡುವೆ ಕಷ್ಟಪಟ್ಟು ಕೆಲಸ ಮಾಡುತ್ತಿದ್ದ ಶ್ರಮಜೀವಿಗಳಲ್ಲಿ ಮಾತ್ರ ನಾಗಾರಾಧನೆ ಇದ್ದಂತೆ ಕಾಣುತ್ತದೆ. ಯಾಕೆಂದರೆ ಕಾಳಿಂಗ ಸರ್ಪ ದಟ್ಟಾರಣ್ಯಗಳ ಕೆಲವೇ ಕೆಲವು ಕಾಡುಗಳಲ್ಲಿ ಮಾತ್ರ ಕಂಡು ಬರುವ ಒಂದು ಅಪರೂಪದ ಜೀವಿ.

ಈ ಕಥೆ ಆರಾಧನಾ ರೂಪಗಳಲ್ಲಿ ಆದ ಬದಲಾವಣೆಯ ಹಂತಗಳನ್ನು ಹೇಳುತ್ತದೆ. ಮೊದಲಿಗೆ ಕಾಡ್ಯನಾಟವಾಗಿ ಮೇರರಲ್ಲಿ ಇದ್ದದ್ದು, ನಂತರ ಪಾಣಾರರ ಆಟವಾಗಿ(ಅಂದರೆ ಭೂತಕೋಲದ ಒಂದು ಪ್ರಕಾರವಾಗಿ) ಭೂ ಮಾಲೀಕರ ಹಂತಕ್ಕೆ ಮುಟ್ಟುತ್ತದೆ. ನಂತರ ಇದೀಗ, ದಕ್ಷಿಣ ಕನ್ನಡದ ಎಲ್ಲೆಲ್ಲೂ ನಾವು ನೋಡುತ್ತಿರುವಂತೆ ಅದ್ಧೂರಿ ಮತ್ತು ವರ್ಣರಂಜಿತ ನಾಗಮಂಡಲ ಆಚರಣೆಯಾಗಿ ಬ್ರಾಹ್ಮಣ ಸಮುದಾಯಗಳಲ್ಲಿ ರೂಢಿಯಲ್ಲಿದೆ. ಇಷ್ಟಾದರೂ ನಾಗಮಂಡಲದ ಆರಾಧನೆಯ ಅನೇಕ ವಿಧಿಗಳು ಹಾಗೂ ಮಂಡಲ ಬರೆಯುವ ಕ್ರಮಗಳು ಮೂಲದ ಮೇರರ ಕಾಡ್ಯನಾಟದಿಂದ ಪ್ರೇರಿತವಾಗಿ, ಈಗಿನ ರೂಪದಲ್ಲಿ ಕಾಣಿಸಿಕೊಂಡಿದೆ ಎಂದರೆ ತಪ್ಪೇನಿಲ್ಲ.

ಗೆಡ್ಡೆಗೆಣಸಿನ ಆಹಾರಕ್ಕಾಗಿ ಹುಡುಕುತ್ತಿದ್ದ ಹೊನ್ನಿಗೆ ಮೂರು ರೀತಿಯ ನಾಗ ಕಳಶಗಳು ಸಿಕ್ಕಿದ ಕಥೆಯ ಹಿಂದಿನ ಆಶಯವೇ ಅದು ಮೂಲತಃ ಮೇರರ ಮೂಲ ಆಚರಣೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಆ ದೃಷ್ಟಿಯಲ್ಲಿ ಆ ಮೂರು ಕಳಶಗಳು ಹೊನ್ನಿಯ ಸ್ವತ್ತು. ಅದನ್ನು ಬಳುವಳಿಯಾಗಿ ಪಡೆದವರು ಒಡೆಯರು ಮತ್ತು ಅಡಿಗಳು. ಆದ್ದರಿಂದ ಇಡೀ ನಾಗಾರಾಧನೆ ಮೂಲದಲ್ಲಿ ಕೆಳವರ್ಗದಲ್ಲಿ ಮಾತ್ರ ಪ್ರಚಲಿತವಿದ್ದು ಈಗಿರುವ ಅನೇಕ ರೂಢಿಗಳು ಅವರಿಂದ ಬಂದ ಬಳುವಳಿಯಾಗಿವೆ ಎಂದು ಹೇಳಬಹುದಾಗಿದೆ.

ಇನ್ನೂ ಕಾಡ್ಯನಾಟದ ಆಚರಣಾ ವಿಧಿಯನ್ನು ನೋಡೋಣ. ಇಲ್ಲಿಯೂ ಮಂಡಲ ಚಿತ್ತಾರಕ್ಕೆ ಪ್ರಮುಖ ಪ್ರಾಶಸ್ತ್ಯ. ಕಾಡ್ಯನಾಟದ ಸಂದರ್ಭದಲ್ಲಿ ಹಾಕಲಾದ ಬೈದ್ಯರ ಹಂದರದೊಳಗೆ ಸುಮಾರು ೧೦ ಅಡಿ ವ್ಯಾಸದ ವೃತ್ತಾಕಾರದ ಮಂಡಲವನ್ನು ಪಂಚವರ್ಣದ ಹುಂಡಿಯಿಂದ ಬರೆಯಲಾಗುತ್ತದೆ. ಈ ಮಂಡಲ ರಚನೆ ಬೈದ್ಯನ

ನೇತೃತ್ವದಲ್ಲಿ ಅವನ ಸಹಯೋಗಿಗಳಿಂದ ಒಂದು ಸಾಮೂಹಿಕ ಪ್ರಯತ್ನದ ಮೂಲಕ ರೂಪುಗೊಳ್ಳುತ್ತದೆ. ಕಾಡ್ಯನಾಟದ ಆಚರಣೆಯ ಎರಡನೆಯ ಹಾಗೂ ಮೂರನೆಯ ರಾತ್ರಿ ಈ ಮಂಡಲವನ್ನು ಬರೆಯುತ್ತಾರೆ. ಮೊದಲನೆಯ ದಿನ ಚಿತ್ತಾರಗಳೆಲ್ಲವೂ ಕೇಂದ್ರ ಕಂಬದ ಕಡೆಗೆ ಮುಖ ಮಾಡಿದ್ದರೆ ಎರಡನೆಯದಿನ ಎಲ್ಲವೂ ಮಂಡಲದ ಪರಿಧಿಗೆ ಅಭಿಮುಖವಾಗಿರುತ್ತವೆ. ಮಂಡಲಕ್ಕೆ ಹಳದಿ, ಕೆಂಪು, ಕಪ್ಪು, ಹಸುರು ಹಾಗೂ ಬಿಳಿ ಬಣ್ಣದ ಹುಡಿಗಳನ್ನು ಅವರೇ ತಯಾರಿಸಿಕೊಳ್ಳುತ್ತಾರೆ. ಕಾಡ್ಯನಾಟದ ಮಂಡಲದೊಳಗೆ ಅವರು ತಮ್ಮ ಬದುಕನ್ನು ಪ್ರಭಾವಿಸಿದ ಸೂರ್ಯ, ಚಂದ್ರ, ನಕ್ಷತ್ರಗಳು, ಕಮಲದ ಹೂ, ಹೊನ್ನರುಳಿ ಮರ, ಕಾಗೆ, ಗೋವಕ್ಕಿ, ನವಿಲು, ಒನಕೆ, ಒರಳು, ಗೆರಸೆ, ಚೆನ್ನೆಮಣೆ, ದೋಣಿ, ನಾಗ(ಹಳದಿ ಬಣ್ಣ) ಕಾಡ್ಯ(ಕಪ್ಪು ಬಣ್ಣ) ಇತ್ಯಾದಿ ಚಿತ್ರಗಳನ್ನು ಬರೆದಿರುತ್ತಾರೆ. ಮಂಡಲದ ರಚನೆ ಹಾಗೂ ಆಚರಣೆಯ ಸಂದರ್ಭದಲ್ಲಿ ಕಲಶಗಳನ್ನು ಸ್ಥಾಪನೆ ಮಾಡುವ ಬಟ್ಟೆ ಎಲ್ಲವು ವೃತ್ತಾಕಾರದಲ್ಲಿಯೇ ಇರುತ್ತವೆ. ಹೀಗೆ ಮಂಡಲವನ್ನು ಬರೆದು ಅವರ ಕೇಂದ್ರದಲ್ಲಿರುವ ಮುಹೂರ್ತ ಕಂಬಕ್ಕೆ ತಾಗಿ ಕಲಶವನ್ನು ಇರಿಸಲಾಗುತ್ತದೆ. ಉಳಿದ ನಾಲ್ಕನ್ನು ಮಂಡಲ ಚಿತ್ತಾರದೊಳಗೆ ಬೈದ್ಯ ಸ್ಥಾಪಿಸುತ್ತಾನೆ. ಮಂಡಲದೊಳಗೆ ತಾವರೆ ಹೂವಿನ ಚಿತ್ರ ಬರೆಯಲಾಗುತ್ತದೆ. ಅದರ ನಡುವೆ ಕಲಶ ಹೊತ್ತ ಹೆಣ್ಣೊಬ್ಬಳನ್ನು ನಿಲ್ಲಿಸಿ ಆ ಕಲಶದ ಮೇಲೆ ಬೈದ್ಯನು ಅಕ್ಕಿ ಕಾಳನ್ನು ಎರಚುತ್ತಾನೆ. ಮಂಡಲದಲ್ಲಿ ಪ್ರಕೃತಿ ದೇವತೆಗಳ ಜೊತೆಗೆ ಕೃಷಿಸಂಬಂಧಿ ವಸ್ತುಗಳ ಚಿತ್ರಗಳನ್ನು ಬಿಡಿಸಲಾಗುತ್ತದೆ.

ಕಾಡ್ಯನಾಟದ ಎಲ್ಲ ರಾತ್ರಿಗಳಲ್ಲಿ ಅನೇಕ ವಿಧವಾದ ಕೋಲಗಳು ಜರುಗುತ್ತವೆ. ವಿಧಿವತ್ತಾದ ಅನೇಕ ಸಂಕೀರ್ಣವಾದ ಆಚರಣೆಗಳು ನೆರವೇರುತ್ತವೆ. ವಿಧವಿಧವಾದ ಹಗರಣಗಳ ಮೂಲಕ ನೆರೆದ ಜನರಿಗೆ ಮನರಂಜನೆ ಒದಗಿಸಲಾಗುತ್ತದೆ.

ಕಾಡ್ಯನಾಟವನ್ನು ಅಧ್ಯಯನ ಮಾಡಿರುವ ಶ್ರೀ ಎ.ವಿ. ನಾವಡ ದಂಪತಿಗಳ ಅಭಿಪ್ರಾಯ ಹೀಗಿದೆ–"ಕರಾವಳಿಯ ಉಪಾಸನಾ ಪಂಥದ ಮೂಲ ನಾಗನವರೆಗೆ ಇದು ಹೋಗುತ್ತದೆ. ನಾಗ ಬೆರ್ಮರ ಆರಾಧನೆ ತುಳುನಾಡಿನ ಎಲ್ಲೆಡೆಯೂ ಕಂಡು ಬರುತ್ತದೆ. ಈ ನಾಗವೇ ಬರುಬರುತ್ತಾ ಇತರ ದೇವತೆಗಳೊಂದಿಗೆ ಸಮಾವೇಶಗೊಳ್ಳುತ್ತಾನೆ. ಅನಂತಪದ್ಮನಾಭ, ಅನಂತೇಶ್ವರ, ಶಕ್ತಿ, ಗಣಪತಿ, ಯಕ್ಷ, ಬೊಬ್ಬರ್ಯರೊಂದಿಗೆ ನಾಗನ ಸಂಬಂಧವಿರುವುದನ್ನು ಗಮನಿಸಬಹುದು. ಇಲ್ಲಿಯ ನಾಡವರು ನಾಗನನ್ನು ಸ್ವಾಮಿ ಎಂದೂ, ಮೇರರು ಕಾಡ್ಯನೆಂದೂ ಪರಿಭಾವಿಸುತ್ತಾರೆ. ನಾಗಮಂಡಲ, ಬ್ರಹ್ಮಮಂಡಲ, ಪಾಣಾರಾಟ ಇತ್ಯಾದಿ ಆಚರಣೆಗಳೂ ಇಲ್ಲಿವೆ. ಹೀಗೆ ಕರಾವಳಿಯಲ್ಲಿ ನಾಗವು ಫಲೀಕರಣ ದೇವತೆಯಾಗಿ ಆರಾಧನೆಗೊಳ್ಳುತ್ತದೆ. ನಾಗ ಮತ್ತು ಯಕ್ಷ(ಯಕ್ಷಿ)ರಿಗೂ ಪರಸ್ಪರ ಸಂಬಂಧವಿದೆ. ಇವರಿಬ್ಬರೂ ಒಂದೇ

PDF created with pdfFactory Pro trial version www.pdffactory.com

ವರ್ಗಕ್ಕೆ ಸೇರಿದ ಫಲೋತ್ಪತ್ತಿ ಹಾಗೂ 'ನೀರಿನ' ಆಧಿದೇವತೆಯರು. ಪೂರ್ಣ ಕುಂಭ, ಕಲಶ ಮೊದಲಾದ ಕಲ್ಪನೆಗಳು ಈ ಯಕ್ಷಾರಾಧನೆಗೆ ಸಂಬಂಧಿಸಿದವು. ಕಾಡ್ಯನಾಟದಲ್ಲಿಯೂ ಈ ನಾಗಯಕ್ಷ ಆರಾಧನೆಯ ಬೀಜಗಳಿವೆ"[2] ಎಂದು ಹೇಳುತ್ತಾರೆ.

ನನಗಿಲ್ಲಿ ಮುಖ್ಯವಾಗುವುದು ಅವರ ಮಂಡಲದಲ್ಲಿ ಬಿಡಿಸಿದ ಪ್ರಕೃತಿ ದೈವಗಳು (ಸೂರ್ಯ, ಚಂದ್ರ, ನಕ್ಷತ್ರ) ಹಾಗೂ ಅವರ ಕೃಷಿ ಸಂಬಂಧದ ವಿವಿಧ ವಸ್ತುಗಳು. ಅಂದರೆ ನಿಸರ್ಗಾರಾಧನೆಯಿಂದ ಕೃಷಿಸಂಬಂಧಿ ಆರಾಧನೆಯವರೆಗಿನ ಅವರ ಪ್ರಾಚೀನ ಆಸಕ್ತಿಯನ್ನು ಇವು ಕಾಣಿಸುವಲ್ಲಿ ಸಫಲವಾಗಿದೆ. ಪ್ರಾಣಿ ಪಕ್ಷಿಗಳ ಚಿತ್ರಗಳೂ ಅಲ್ಲಿ ಬರುವುದರಿಂದ ಇಡೀ ನಿಸರ್ಗವನ್ನು ತಮ್ಮ ಆರಾಧನೆಯ ಕೇಂದ್ರ ಬಿಂದುವನ್ನಾಗಿ ಮಾಡಿಕೊಂಡಿದ್ದು ಅವರಿಗೆ ಆ ನಿಸರ್ಗದ ಬಗ್ಗೆ ಇರುವ ತೀವ್ರ ಬದ್ಧತೆಯನ್ನು ತೋರುತ್ತದೆ. ಉಳಿದಂತೆ ಕುಂಭ, ಕಲಶ, ನಾಗ, ಹುತ್ತ ಇವೆಲ್ಲ ಫಲಸಮೃದ್ಧಿಗಾಗಿ ಒತ್ತಾಯಿಸುವ ಮಾಂತ್ರಿಕ ಆಚರಣೆಗಳು ಎನ್ನುವುದೇ ಲೇಸು.

೨.೪. ಕಾವೆಲಿಯಕುಚ್ಚಿ ಕಾಡು

ಕೊಡಗಿನ ವಿರಾಜಪೇಟೆ ತಾಲೂಕಿನ ತುತ್ತತುದಿಯ ದಕ್ಷಿಣದಲ್ಲಿರುವ ಪ್ರದೇಶವನ್ನು 'ಕುಟ್ಟ' ಎಂದು ಕರೆಯುತ್ತಾರೆ. ಈ ಪ್ರದೇಶದ ಪ್ರಮುಖ ಜನವರ್ಗವೆಂದರೆ ಫಣಿಯರು. ಇವರ ಜೊತೆಗೆ ಯರವರು ಮತ್ತು ಕುಡಿಯರೂ ಅಲ್ಲಲ್ಲಿ ಇದ್ದಾರೆ. ಈಗ ಸದ್ಯಕ್ಕೆ ಫಣಿಯರ ದೇವರಿಗೆ ಸಂಬಂಧಿಸಿದ ಎರಡು ಹಬ್ಬಗಳನ್ನು ಪರಿಶೀಲಿಸಬಹುದು. ಈ ಹಬ್ಬಗಳ ವಿವರಣೆಯನ್ನು ಬೆಣಗಾಲಿನ ಆರ್. ನಾಗೇಶ್ ದಾಖಲಿಸಿದ್ದಾರೆ. ಆ ಹಬ್ಬಗಳ ವಿವರ ಹೀಗಿದೆ: "ಅವರ ಒಂದು ಹಬ್ಬದ ಹೆಸರು 'ಕುಳಿಯಂದರೆ.'(ಇವರ ಭಾಷೆ ಮಲೆಯಾಳಿಗೆ ಹತ್ತಿರದ ಒಂದು ಉಪಭಾಷೆ ಎಂಬುದನ್ನು ನೆನಪಿಡಬೇಕು) ಕುಳಿಯೆಂದರೆ ಅಂದರೆ 'ದೇವರಾಟ' ಎಂದು ಅರ್ಥ. ದೇವರುಗಳು ಜನರ ಮೈಮೇಲೆ ಬಂದು ಕುಣಿಯುವುದೇ ಈ ಹಬ್ಬದ ವಿಶೇಷತೆ. ಯಾವುದೇ ದೇವರಾಗಲಿ ನಮ್ಮ ದುಡಿಯ ಸದ್ದಿಗೆ ಕುಣಿಯಲೇಬೇಕು ಎಂದು ಅವರು ಹೇಳುತ್ತಾರೆ. ಈ ಹಬ್ಬವನ್ನು ಏಳು ದಿವಸಗಳ ಕಾಲ ಆಚರಿಸುತ್ತಾರೆ. ಫಣಿಯರು ಆಚರಿಸುವ ಅತಿ ದೊಡ್ಡ ಹಾಗೂ ಅತಿ ದೀರ್ಘ ಹಬ್ಬವೆಂದರೆ ಈ ಕುಳಿಯಂದರೆ. ದೇವರಿಗೆ ಊಟವನ್ನು ಕೊಡುವುದಕ್ಕಾಗಿ ಈ ಹಬ್ಬವನ್ನು ಆಚರಿಸುತ್ತಿದ್ದೇವೆ ಎಂಬುದು ಅವರ ನಂಬಿಕೆ. ಭತ್ತದ ಹುಲ್ಲಿನಲ್ಲಿ ಮೂಡೆಕಟ್ಟೆ ಇಟ್ಟಿರುವ ಭತ್ತವನ್ನು ಇಳಿಸಿಕೊಳ್ಳುತ್ತಾರೆ. ಜಿಮ್ಮಿಯ ಮೈಮೇಲೆ ದೇವರು ಬಂದು ಆ ಮೂಡೆಯಲ್ಲಿರುವ ಭತ್ತವನ್ನು ಕತ್ತಿಯಿಂದ ನಾಲ್ಕು ಭಾಗ ಮಾಡುತ್ತದೆ. ಈ ನಾಲ್ಕು ಭಾಗದ ಭತ್ತವನ್ನು ಒಂದೊಂದಕ್ಕೆ ಉಪಯೋಗಿಸುತ್ತಾರೆ. ಅವಲಕ್ಕಿಗೆ, ಅನ್ನಕ್ಕೆ, ಹಿಟ್ಟಿಗೆ ಮತ್ತು ಅಕ್ಕಿಗೆ ಎಂದು ಅದನ್ನು

ಬಳಸುತ್ತಾರೆ. ಎರಡನೆಯ ದಿನ ಮಿಂದು ಮಡಿಯುಟ್ಟು ಅಕ್ಕಿಯನ್ನು ಕುಟ್ಟಬೇಕು. ಅವಲಕ್ಕಿ ಕುಟ್ಟುವಾಗ ಬಟ್ಟೆಯನ್ನು ಧರಿಸುವಂತಿಲ್ಲ. ಕಾಡಿನ ಸೊಪ್ಪನ್ನು ಮೈಗೆ ಕಟ್ಟಿಕೊಂಡು ಬಾಯಿಗೆ ಬಟ್ಟೆಯನ್ನು ಕಟ್ಟಿಕೊಳ್ಳುತ್ತಾರೆ. ಹೆಂಗಸರು ಉಪವಾಸವಿದ್ದು ಬಾಯಿಗೆ ಬಟ್ಟೆ ಕಟ್ಟಿಕೊಂಡು, ಅದನ್ನು ಕೇರಿ ಸೋಸಿ, ಶುದ್ಧಗೊಳಿಸಬೇಕು. ಇದಾದ ನಂತರ ಅವಲಕ್ಕಿಯನ್ನು ದೇವರಿಗೆ ವಿಶೇಷ ನೈವೇದ್ಯ ಮಾಡಲು ಬಳಸಲಾಗುವುದು. ಮೂರನೇ ದಿವಸ ಒಂದು ದೊಡ್ಡ ಮರದ ಕೆಳಗೆ ಚಪ್ಪರ ಹಾಕುತ್ತಾರೆ. ಚಪ್ಪರದ ಕೆಳಗೆ ಒಂದೊಂದೇ ದೇವರು ಬಂದು ಕುಣಿಯಲು ಪ್ರಾರಂಭ ಮಾಡುತ್ತವೆ. ದೇವರು ಬಂದವರ ಜೊತೆಯಲ್ಲಿ ಬೇರೆ ಮನುಷ್ಯರೂ ಕುಣಿಯಲು ಪ್ರಾರಂಭಿಸುತ್ತಾರೆ. ಇದು ಉಳಿದ ನಾಲ್ಕು ದಿನಗಳ ಕಾಲವೂ ಸತತವಾಗಿ ಮುಂದುವರೆಯುತ್ತದೆ. ತಾವೂ ಕುಣಿದು ದೇವರನ್ನು ಕುಣಿಸಿ ತೃಪ್ತಿ ಪಡುತ್ತಾರೆ. ಕೊನೆಯ ದಿವಸ 'ಪನಾಲಿ' ಎಂಬ ವ್ಯಕ್ತಿ ಇಪ್ಪತ್ತನಾಲ್ಕು ಗಂಟೆಯೂ ಮೇಲೇಳದಂತೆ ಕುಳಿತು ಹಾಡು ಹೇಳಬೇಕು. ಆಗ ಅವನ ಮೈಮೇಲೆ ದೇವರು ಬಂದು 'ಇಡೀ ಬೆಟ್ಟಕ್ಕೆ ಬೆಂಕಿ ಬಿದ್ದು ಬೆಟ್ಟ ಹತ್ತಿ ಉರಿಯುತ್ತಿದ್ದರೂ ನಿಮ್ಮ ಕಾಲಿನ ಚರ್ಮವು ಸುಡುವುದಿಲ್ಲ. ಆ ರೀತಿ ನಿಮ್ಮನ್ನು ಸಲಹುತ್ತೇನೆ' ಎಂದು ಮಾತು ಕೊಟ್ಟಾಗ ಎಲ್ಲರಿಗೂ ತೃಪ್ತಿಯಾಗುತ್ತದೆ. ಆ ದಿನ ಮನೆ ಮನೆಯಿಂದ ಸಂಗ್ರಹಗೊಳಿಸಿದ ವಸ್ತುಗಳಿಂದ ಅಡುಗೆ ಮಾಡಿ ಏಳು ದಿವಸಗಳ ಕಾರ್ಯಕ್ರಮ ಮುಗಿಸುತ್ತಾರೆ.

ಎರಡನೇ ಹಬ್ಬದ ಸಾರಾಂಶ ಹೀಗಿದೆ–"ಈ ಹಬ್ಬದ ಹೆಸರು 'ತೈಯಕೋಳು' ಎಂದು. ಈ ಹಬ್ಬದಲ್ಲಿ ಇಡೀ ಕುಟುಂಬದವರೆಲ್ಲರೂ ಸೇರಿ ಅವರ ಕುಟುಂಬದಲ್ಲಿ ಯಾವ ಹುಡುಗನಿಗೆ 'ಮೈಹಿಡಿಯುವುದಿಲ್ಲವೋ'–ಅಂದರೆ ಮೈ ಮೇಲೆ ದೇವರು ಬರುವುದಿಲ್ಲವೋ–ಅವನಿಗೆ ಮೈಹಿಡಿಸುವ ವಿಶೇಷ ಕಾರ್ಯಕ್ರಮ ಹಾಕಿಕೊಳ್ಳುತ್ತಾರೆ. ಆ ದಿನ ಎಲ್ಲರೂ ಸ್ನಾನ ಮಾಡಿ ಬಟ್ಟೆ ಧರಿಸಿ ಮನೆಯ ಮುಂದಿನ ಜಾಗದಲ್ಲಿ ಬಾಳೆಯ ಮರದ ಪಟ್ಟಿಯಿಂದ ಮಂಟಪವನ್ನು ಕಟ್ಟುತ್ತಾರೆ. ಆ ಮಂಟಪದ ಸುತ್ತ ತೆಂಗಿನಕಾಯನ್ನು ಇಟ್ಟು, ಅಕ್ಕಿ ಎಲೆ, ಅಡಿಕೆ ಇಟ್ಟು ಪೂಜಿಸುತ್ತಾರೆ. ಅವರಲ್ಲಿ ಒಬ್ಬ ವ್ಯಕ್ತಿ ಬ್ರಾಹ್ಮಣ ಪುರೋಹಿತನ ವೇಷ ಹಾಕಿ ಬಾಳೆಯ ಪಟ್ಟಿಯೊಂದನ್ನು ಜನಿವಾರದ ರೀತಿಯಲ್ಲಿ ಹಾಕಿಕೊಳ್ಳುತ್ತಾನೆ. ಪೂಜೆ ನಡೆಯುತ್ತಿರುವ ಮಧ್ಯದಲ್ಲಿ ಬ್ರಾಹ್ಮಣ ಪೂಜಾರಿಯಾಗಿ ವೇಷ ಹಾಕಿದ್ದವನು ಭೇದಿ ಪ್ರಾರಂಭವಾದಂತೆ ನಟಿಸಿ ಓಡಿ ಹೋಗುತ್ತಾನೆ. ನಂತರ ಪೂಜೆಯನ್ನು ಜಿಮ್ಮಿಯು ಮುಂದುವರಿಸುತ್ತಾರೆ. ಬ್ರಾಹ್ಮಣ ವೇಷಧಾರಿಯು ಆಗಾಗ ಬಂದು ಓಡಿ ಹೋಗುವುದು ನಡದೇ ಇರುತ್ತದೆ. ಆಗ ಮೈಮೇಲೆ ಬರದ ಹುಡುಗರನ್ನು ಕರೆದು ಅವನಿಗೆ ಪೂಜೆ ಮಾಡಿ, ಅವರ ಕೈಯಿಂದ ಪೂಜೆ ಮಾಡಿಸಿ, ಅವರ ತಲೆಯ ಮೇಲೆ ದೇವರ ಹೆಸರೇಳಿ ಅಕ್ಕಿ

PDF created with pdfFactory Pro trial version www.pdffactory.com

ಹಾಕುತ್ತಾರೆ. ಮೊದಲು ಬೇರೆ ಬೇರೆ ದೇವರ ಹೆಸರೇಳಿ ತಲೆಗೆ ಅಕ್ಕಿ ಹಾಕುತ್ತಾರೆ. ಆದರೂ ದೇವರು ಬರುವುದಿಲ್ಲ. ಕೊನೆಯದಾಗಿ ಅವರ ಮೂಲದೇವರಾದ 'ಕಾವೆಲಿಯಕುಚ್ಚಿ'ಯ ಹೆಸರನ್ನು ಹೇಳಿದಾಗ ಅವನ ಮೇಲೆ ದೇವರು ಬರುತ್ತದೆ. ಒಂದು ಸಾರಿ ಒಬ್ಬನ ಮೇಲೆ ದೇವರು ಬಂತೆಂದರೆ ಮತ್ತೆ ಆತ ಬದುಕಿರುವವರೆಗೆ ಅವನ ಮೇಲೆ ಆಗಾಗ ಆ ದೇವರು ಬರುತ್ತಿರುತ್ತದೆ. ಹೀಗೆ ದೇವರು ಬಂದವರಿಗೆ ದೇವರು ಬರಿಸಿ ಅವರನ್ನು ಕುಣಿಸುವುದೇ ಈ ಹಬ್ಬದ ಮುಖ್ಯ ಉದ್ದೇಶ. ಈ ಹಬ್ಬವನ್ನು ರಾತ್ರಿಯ ಹೊತ್ತು ಮಾಡುವುದುರಿಂದ ದೇವರು ಬಂದ ವ್ಯಕ್ತಿಗಳನ್ನು ಬೆಳಕಿನ ತನಕ ಕುಣಿಸುತ್ತಾರೆ. ಬೆಳಿಗ್ಗೆ ಸೂರ್ಯ ಉದಯವಾದಂತೆ ಎಲ್ಲಾ ದೇವರುಗಳೂ ನಿಲ್ಲುತ್ತವೆ. ಅಲ್ಲಿಗೆ ಹಬ್ಬವೂ ಮುಗಿಯುತ್ತದೆ."[೮]

ಈ ಎರಡೂ ಹಬ್ಬಗಳೂ ತುಂಬ ಅನನ್ಯವಾದ ವಿವರಗಳನ್ನು ಒಳಗೊಂಡಿವೆ. ಸಾಮಾನ್ಯವಾಗಿ ದೇವರು ಇರುವ ಒಂದು ನಿರ್ದಿಷ್ಟ ಸ್ಥಳವಿರುತ್ತದೆ. ಆ ಸ್ಥಳಕ್ಕೆ ಹೋಗಿ ದೇವರನ್ನು ಆರಾಧಿಸುವ ಪರಿಪಾಟವೇ ಹೆಚ್ಚು. ಆದರೆ ಇಲ್ಲಿನ ಸನ್ನಿವೇಶ ತೀರಾ ವ್ಯತಿರಿಕ್ತ. ತಾವಿದ್ದಲ್ಲಿಗೇ ದೇವರನ್ನು ಬರಮಾಡಿಕೊಳ್ಳುವ ಇಲ್ಲಿನ ಕ್ರಮ ಹೆಚ್ಚು ಆಪ್ಯಾಯಮಾನ. ಅದೂ ಒಬ್ಬ ಅಥವಾ ಇಬ್ಬರ ಮೇಲೆ ದೇವರು ಬಂದು ಮಾತಾಡುವ ಮಾಮೂಲೀ ಶೈಲಿಯೂ ಇಲ್ಲಿ ಇಲ್ಲ. ಬದಲಾಗಿ ಇರುವವರ ಮೇಲೆಲ್ಲ ದೇವರ ಆವಾಹನೆಯಾಗುತ್ತದೆ. ಹಾಗಾಗಿ ಎಲ್ಲ ಮನುಷ್ಯರೂ ಇಲ್ಲಿ ದೇವರುಗಳೇ. ದೇವರಿಗೂ ಮನುಷ್ಯರಿಗೂ ಇಲ್ಲಿ ವ್ಯತ್ಯಾಸವೇ ಇಲ್ಲ. ಈ ಪ್ರಬಂಧದ ಆರಂಭದಲ್ಲಿ ಆಶೀಸ್ ನಂದಿಯವರ ಮಾತುಗಳನ್ನು ನಾನು ಉಲ್ಲೇಖಿಸಿದ್ದೆ. ದೇವರಿಗೂ ಮನುಷ್ಯರಿಗೂ ಅಂತರವಿಲ್ಲದ ಸಂಬಂಧವೊಂದು ಭಾರತದ ಪರಿಸರದಲ್ಲಿ ಏರ್ಪಡುತ್ತದೆ ಎಂಬ ರೀತಿಯಲ್ಲಿ ಅವರು ಪ್ರತಿಪಾದಿಸಿದ್ದರು. ಆ ಮಾತುಗಳಿಗೆ ಪ್ರತ್ಯಕ್ಷ ಉದಾಹರಣೆ ಫಣಿಯರ ಈ ಹಬ್ಬಾಚರಣೆ.

ಹಾಗೆ ಪ್ರತಿಯೊಬ್ಬರ ಮೇಲೂ ದೇವರ ಆವಾಹನೆ ಆಗಬೇಕಾದಲ್ಲಿ ಅವರ ಪೂರ್ವಭಾವಿ ಸಿದ್ಧತೆಗಳು ಅಷ್ಟರಮಟ್ಟಿಗೆ ಮಹತ್ವವಾಗಿಯೇ ಇವೆ. ಹುಟ್ಟಿದ ನಿರ್ವಾಣ ಅರ್ಥಾತ್ ಎಲೆಗಳ ಉಡುಗೆ ಹುಟ್ಟು ದೇವರ ನೈವೇದ್ಯದ ಅಕ್ಕಿಯನ್ನು ಅವರು ಸಿದ್ಧಪಡಿಸಬೇಕು. ಅಂದರೆ ಮನುಷ್ಯನ ಆದಿಯ ಕಾಲಕ್ಕೆ ಹಿಂತಿರುಗಿ ಅದೇ ಮುಗ್ಧತೆಯನ್ನು, ಆ ಆನಂದವನ್ನು ಮತ್ತೆ ತಂದುಕೊಳ್ಳುವ ಪ್ರಯತ್ನವಿದು. ಹೀಗೆ ತಮ್ಮದೇ ಆದ ಮಧ್ಯಂತರ ಜಗತ್ತೊಂದು ನಿರ್ಮಿಸಿಕೊಂಡು ದೇವರೊಡನೆ ಬೆರೆತು ಒಂದಾಗುವ ಆತ್ಮಸಾಕ್ಷಾತ್ಕಾರದ ಈ ಆಚರಣೆ ಅತ್ಯಂತ ಅಪೂರ್ವವಾದದ್ದು.

ಮತ್ತೊಂದು ಲೌಕಿಕದ ವಿಚಾರವೂ ಇಲ್ಲಿದೆ. ಕೊಡಗಿನ ಅರಣ್ಯಕ್ಕೆ ಬೆಂಕಿಯನ್ನು ಕಂಡರೆ ಸದಾ ಅಕ್ಕರೆ. ಅಲ್ಲಿನ ಅರಣ್ಯಕ್ಕೆ ಯಾವ ಸೂಕ್ಷ್ಮ ಸನ್ನಿವೇಶದಲ್ಲಿ

ಅಗ್ನಿಸ್ಪರ್ಶವಾಗುತ್ತದೋ ಹೇಳುವುದೇ ಕಷ್ಟ. ನಾವು ನೋಡುನೋಡುತ್ತಿದ್ದಂತೆ ನಾಗರ ಹೊಳೆ ಅಭಯಾರಣ್ಯಕ್ಕೆ ಅದೆಷ್ಟು ಸಲ ಬೆಂಕಿ ಬಿತ್ತು? ಅದರ ವಾಸ್ತವತೆಯ ಮತ್ತು ಅದರ ಬಿಸಿಯ ಅನುಭವವೂ ಫಣಿಯರಿಗಿದೆ. ಆದ್ದರಿಂದಲೇ ಅವರು ತಮ್ಮ ದೇವರಿಂದ 'ಬೆಟ್ಟಕ್ಕೆ ಬೆಂಕಿ ಬಿದ್ದು ಬೆಟ್ಟ ಹತ್ತಿ ಉರಿಯುತ್ತಿದ್ದರೂ ನಿಮ್ಮ ಕಾಲಿನ ಚರ್ಮವೂ ಸುಡುವುದಿಲ್ಲ' ಎಂಬ ಆಶ್ವಾಸನೆಯನ್ನು ಒತ್ತಾಯ ಪೂರ್ವಕವಾಗಿಯೇ ಪಡೆಯುವಲ್ಲಿ ಯಶಸ್ವಿಯಾಗುತ್ತಾರೆ.

ಫಣಿಯರ ಮತ್ತೊಂದು ಹಬ್ಬವೂ ದೇವರನ್ನು ಆವಾಹಿಸಿಕೊಳ್ಳುವ ಕ್ರಿಯೆಗೇ ಸಂಬಂಧಿಸಿದ್ದು. ಆದರೆ ದೇವರನ್ನು ಆವಾಹಿಸಿಕೊಳ್ಳದವ ಪೂರ್ಣ ಮನುಷ್ಯನಲ್ಲ ಎಂಬ ಅವರ ಭಾವನೆ ಬಲವಾಗಿರುವುದರಿಂದಲೇ ಅಥವಾ ತಾನೂ ದೇವರಾಗಿ ಮನಸೋ ಇಚ್ಛೆ ಕುಣಿಯಲಾರದವ ಎಂಥ ಮನುಷ್ಯ ಎಂಬ ಲೋಕ ದೃಷ್ಟಿಯೊಂದು ಆ ಸಮುದಾಯದಲ್ಲಿ ದರ್ಶನ ರೂಪದಲ್ಲಿ ಇರುವುದರಿಂದಲೇ, ಎಲ್ಲರಿಗೂ ದೇವರಾಗುವ ಪಾಠವನ್ನು ಕಲಿಸುತ್ತಾರೆ ಅಥವಾ ಅಂಥ ತರಬೇತಿ ನೀಡುತ್ತಾರೆ. ಆದರೆ ಅಂಥ ತರಬೇತಿಯ ಸಂದರ್ಭದಲ್ಲಿ ಬ್ರಾಹ್ಮಣ ಪೂಜಾರಿಯ ವೇಷವೊಂದನ್ನು ಬಳಸಿಕೊಳ್ಳುವ ಇವರ ಸಾಮಾಜಿಕ ಪ್ರಜ್ಞೆ ಆಶ್ಚರ್ಯ ಹುಟ್ಟಿಸುತ್ತದೆ. ಬೂಟಾಟಿಕೆ ಪೂಜೆ, ಕೃತಕ ಪೌರೋಹಿತ್ಯ, ಅವರಲ್ಲಿ ಅಸಹ್ಯದ ಭಾವನೆ ಹುಟ್ಟಿಸಿದೆ ಅಷ್ಟೇ ಅಲ್ಲ, ಅವರ ಮೂಲ ದೈವವೇ ನಿಜವಾದ ದೈವ. ಅದರೊಡನೆ ಸಂಪರ್ಕ ಬೆಳಸಬೇಕಾದವರು ತಾವು. ಈ ಮಧ್ಯವರ್ತಿಯ ಹಂಗೇಕೆ ಎಂಬ ಲೋಕಜ್ಞಾನವೂ ಅವರಿಗೆ ಚೆನ್ನಾಗಿಯೇ ಇದೆ. ಬಹುಶಃ ಒಂದು ಸಂದರ್ಭದಲ್ಲಿ ಇವರ ಮೇಲೆ ಪ್ರಭಾವ ಬೀರಲು ಯತ್ನಿಸಿರಬಹುದಾದ ಪುರೋಹಿತ ಶಾಹಿಯ ಅಣಕ ಇಲ್ಲಿರುವಂತಿದೆ. ಆ ಅಣಕವೇ ಪ್ರಬಲ ಪ್ರತಿಭಟನೆಯಾಗಿ ಆ ವ್ಯಂಗ್ಯಪೂರಿತವಾದ ಆಚರಣೆಯಲ್ಲಿ ವ್ಯಕ್ತವಾಗುತ್ತಿದೆ.

ಫಣಿಯರು ನಂಬಿರುವ ಪ್ರಕಾರ ಅವರ ಮೂಲ ದೈವದ ಹೆಸರು 'ಕಾವೆಲಿಯ ಕುಚ್ಚಿ'. ಕೇರಳದ ಇಪ್ಪಿಮಲೈ ಎಂಬ ಪರ್ವತ ಪ್ರದೇಶದಲ್ಲಿರುವ ಅಂಜಲಕಾವು ಎಂಬ ಪ್ರದೇಶದಿಂದ ಇಲ್ಲಿಗೆ ವಲಸೆ ಬಂದವರು ನಾವು ಎಂದು ಹೇಳಿಕೊಳ್ಳುವ ಫಣಿಯರು. ಅವರ ಮೂಲ ದೈವ ಅಷ್ಟು ದೂರದ ಆ ಇಪ್ಪಿಮಲೈಯಲ್ಲಿ ಇರುವುದಾದರೂ ತಾವು ಕರೆದಾಗ ಅದು ಬರುತ್ತದೆ ಎಂದು ನಂಬಿದ್ದಾರೆ. ಆದ್ದರಿಂದಲೇ ದೇವರ ಆವಾಹನೆ ಆಗದ ಹುಡುಗನಿಗೆ ಅಂತಿಮವಾಗಿ ಆವಾಹನೆ ಆಗುವುದು ಅವರ ಮೂಲ ದೈವದ ಹೆಸರೇಳಿ ಅಕ್ಕಿ ಕಾಳು ಹಾದಾಗ ಮಾತ್ರ!

ಕೊಡಗಿನ ಫಣಿಯರು, ಯರವರು, ಕುಡಿಯರು ತಮ್ಮ ಕುಣಿತಕ್ಕೆ 'ದುಡಿ'ವಾದ್ಯವನ್ನು ಬಳಸುತ್ತಾರೆ. ದುಡಿಯ ಲಯಬದ್ಧ ಶಬ್ದ ಎಂಥವರಿಗೂ ಭಾವಪರವಶತೆಯನ್ನು ತರುವಂಥದ್ದು. ಅದನ್ನು ನುಡಿಸುತ್ತಾ ಗಂಟೆಗಟ್ಟಲೆ ಹಾಡುತ್ತಾ

PDF created with pdfFactory Pro trial version www.pdffactory.com

ಹೆಂಗಸರು ಗಂಡಸರು ಮಕ್ಕಳಾದಿಯಾಗಿ ಅವರು ನರ್ತಿಸುವ ರೀತಿಯೇ ಅವರಿನ್ನೂ ತಾರತಮ್ಯರಹಿತವಾದ ಮುಗ್ಧ ಹಾಗೂ ಸಮಾನತೆಯ ಜೀವನದ ಆರಾಧಕರೂ ಎಂಬುದನ್ನು ದೃಢಪಡಿಸುತ್ತದೆ. ಕೊಡಗಿನ ಬುಡಕಟ್ಟುಗಳು ಇತ್ತೀಚೆಗೆ ಅನೇಕ ರೀತಿಯ ಶೋಷಣೆಗೆ, ದ್ವೇಷ, ವೈಷಮ್ಯಕ್ಕೆ ಹೊಳಗಾಗುತ್ತಿವೆ ಎಂಬುದು ನಿಜ. ಆದರೆ ರಾತ್ರಿಯ ಬೆಳದಿಂಗಳ ನೀರವತೆಯಲ್ಲಿ ದುಡಿಯ ಬಡಿತಕ್ಕೆ ತಮ್ಮನ್ನು ಒಪ್ಪಿಸಿಕೊಂಡು ಎಲ್ಲವನ್ನು ಮರೆತು ಅವರ ದೇವರ ಜೊತೆಯಲ್ಲಿ ಅಂತರ್ಧಾನವಾಗುವ ರೀತಿಯನ್ನು ನೋಡಿದಾಗ ಮಾತ್ರ ನಾವು ಕನಿಷ್ಠ ೫೦೦೦ ವರ್ಷಗಳಷ್ಟು ಹಿಂದಕ್ಕೆ ಹೋಗಿರುತ್ತೇವೆ ಎಂಬುದಂತೂ ಸತ್ಯ. ಆದರೆ ಆ ದರ್ಶನವನ್ನು ಕಾಣುವ ಅಂತರಂಗಶುದ್ಧಿ ಬೇಕು ಅಷ್ಟೆ.

೨.೫. ಪೋಡಿನ ದೈವ

ಮೈಸೂರು ಜಿಲ್ಲೆಯಲ್ಲಿ ಪ್ರಾಕೃತಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬಹುಪ್ರಿಯವಾದ ಎರಡು ಪರ್ವತಗಳಿವೆ. ಅವುಗಳನ್ನು ಮಲೆಮಹದೇಶ್ವರಬೆಟ್ಟ ಮತ್ತು ಬಿಳಿಗಿರಿರಂಗನಬೆಟ್ಟ ಎಂದು ಕರೆಯುತ್ತಾರೆ. ಒಂದರ ಹಿಂದೆ ಒಂದರಂತೆ ಹಬ್ಬಿ ನಿಂತಿರುವ ಈ ಬೆಟ್ಟ ಸಾಲುಗಳು ದಟ್ಟಾರಣ್ಯದಿಂದ ಆವೃತವಾಗಿವೆ. ಇಲ್ಲಿ ಅನಾದಿಕಾಲದಿಂದ ಜೀವಿಸುತ್ತಿರುವ ಸೋಲಿಗ ಸಮುದಾಯವಿದೆ. ಕಾಡಿನ ಮಕ್ಕಳಾಗಿ ನಿಸರ್ಗದ ಜೊತೆಜೊತೆಯಲ್ಲಿಯೇ ಬೆಳೆದು ಬಂದ ಸೋಲಿಗರು ಇಂದಿಗೂ ಅದೇ ಕಾಡಿನ ನಿವಾಸಿಗಳು. ಸೋಲಿಗರ ದೈವಾರಾಧನೆ ಹಲವು ಹಂತಗಳಲ್ಲಿ ನಮಗೆ ಕಾಣಸಿಗುತ್ತದೆ. ಮಾರಿಯನ್ನು ಆರಾಧಿಸುವ ಸೋಲಿಗರೂ ಇದ್ದಾರೆ, ತಮ್ಮ ಬುಡಕಟ್ಟಿನ ಮೂಲಮಾತೆ ಎಂದು ಭಾವಿಸಿರುವ ಸಂಕಮ್ಮನನ್ನು ಆರಾಧಿಸುವವರೂ ಇದ್ದಾರೆ. ಸಂಕಮ್ಮನ ಮಕ್ಕಳೆನಿಸಿದ ಕಾರಯ್ಯ ಮತ್ತು ಬಿಲ್ಲಯ್ಯರನ್ನು ತಮ್ಮ ಸಾಂಸ್ಕೃತಿಕ ನಾಯಕರಾಗಿ ಇವರು ಕಾಣುತ್ತಾರೆ. ಇವರ ಕಾಡಿನಲ್ಲಿಯೇ ಇರುವ 'ಕ್ಯಾತೆದೇವರು' ಇವರ ಮತ್ತೊಂದು ಪ್ರಮುಖ ದೈವ.

ಇವುಗಳನ್ನೆಲ್ಲ ಅವರ ಮೂಲ ದೈವಗಳೆಂದು ಪರಿಗಣಿಸಬಹುದಾದರೆ, ಅನಂತರದ ಅವಸ್ಥಾಂತರದಲ್ಲಿ ಬಿಳಿಗಿರಿ ರಂಗಯ್ಯ ಮತ್ತು ಮಲೆ ಮಾದೇಶ್ವರ ಇವರ ಆರಾಧ್ಯ ದೈವವಾದದ್ದು ಕುತೂಹಲಕಾರಿಯಾದ ವಿಚಾರ.

ಸೋಲಿಗರು ತಮ್ಮ ವಿವಿಧ ಪಂಗಡಗಳಿಗೆ(ಬಳಿ) ಹೆಸರಿಟ್ಟುಕೊಂಡಿರುವ ರೀತಿಯನ್ನು ಪರಿಶೀಲಿಸಬಹುದು. ಹೊಂಗೆಲರ ಕುಲ(ಹೊಂಗೆಮರ) ಆಲೂರು ಕುಲ(ಆಲದ ಮರ) ಬೆಲ್ಲರ ಕುಲ(ಬೆಳ್ಳಿಕುಲ–ನಕ್ಷತ್ರ) ಸೂರ್ಯಕುಲ, ಪೆನೇರು ಕುಲ(ರಾಗಿಯ ತೆನೆ) ಜೇನುಕುಲ, ಕುಂಬಳು ಕುಲ(ಕುಂಬಳ ಹೂ) ಇತ್ಯಾದಿ. ಇವರ ಕುಲಗಳಿಗೆ ಹೆಸರಿಟ್ಟುಕೊಂಡ ಬಗೆಯೇ ನಿಸರ್ಗದ ಜೊತೆಗಿನ ಅವರ

ಸಂಬಂಧವನ್ನು ಸ್ಪಷ್ಟಪಡಿಸುತ್ತದೆ. ಮರ–ಗಿಡಗಳನ್ನು ಪ್ರಕೃತಿಯ ಸೂರ್ಯ–ನಕ್ಷತ್ರಗಳನ್ನು ಕುಲದ ಗುರುತುಗಳನ್ನಾಗಿ ಇಟ್ಟುಕೊಂಡ ಇವರು ಮೂಲದಲ್ಲಿ ನಿಸರ್ಗಾರಾಧಕರು ಎಂಬುದರಲ್ಲಿ ಎರಡು ಮಾತಿಲ್ಲ.

ಮಾರಿಯನ್ನು ಇವರು ಪೂಜಿಸುವುದರ ಅರ್ಥವೇ ಇವರು ಮಾತೃಮೂಲ ಕುಟುಂಬದವರು ಎಂಬ ವಾದವನ್ನು ನಿಚ್ಚಳಗೊಳಿಸುತ್ತದೆ. ಆದರೆ ಮಲೆ ಮಹದೇಶ್ವರ ಬೆಟ್ಟದ ಸುತ್ತಮುತ್ತಲಿರುವ 'ಕೊಕ್ಕು ಬರೆ'. ಎಂಬ ಪಂಗಡದ ಸೋಲಿಗರು ಮಾರಿ ಹಬ್ಬವನ್ನು ಆಚರಿಸುವ ರೀತಿ ತುಂಬ ವಿಶಿಷ್ಟವಾದದ್ದಾಗಿದೆ. ಬಯಲು ಸೀಮೆಯಲ್ಲಿರುವಂತೆ ಕಂಬ ಪ್ರತಿಷ್ಠಾಪನೆ ಮಾಡಿ ಕಂಬ ಇಕ್ಕಿದ ದಿನದಿಂದ ಹನ್ನೊಂದು ದಿನದವರೆಗೆ ಬೆಂಕಿಯ ಸುತ್ತ ಕುಣಿಯುವ ಸಂಪ್ರದಾಯವನ್ನು ಅವರು ಆಚರಿಸಿಕೊಂಡು ಬರುತ್ತಿದ್ದಾರೆ. ಕೊಡಗು ಮತ್ತು ಮೈಸೂರು ಜಿಲ್ಲೆಯ ಸೋಲಿಗರು, ಕಾಡುಕುರುಬರು, ಮತ್ತು ಬೆಟ್ಟ ಕುರುಬರು ತಮ್ಮ ಕುಣಿತಗಳನ್ನು ಸಾಮಾನ್ಯವಾಗಿ ಬೆಂಕಿಯ ಸುತ್ತ ನಡೆಸುತ್ತಾರೆ. ಇದು ಆರ್ಯಮೂಲದ ವೈದಿಕ ಪ್ರಭಾವವಿರಬಹುದು ಎಂಬ ಅಭಿಪ್ರಾಯವನ್ನು ಒಬ್ಬಿಬ್ಬರು ವ್ಯಕ್ತಪಡಿಸಿದ್ದಾರೆ. ಆದರೆ ವಾಸ್ತವದ ಅರಿವಿಲ್ಲದ ಸಂಶೋಧಕರಿಗೆ ಈ ರೀತಿ ಅಭಿಪ್ರಾಯಗಳು ತಟ್ಟನೆ ಬಂದು ಬಿಡಬಹುದು. ಕೊಡಗು ಮತ್ತು ಮೈಸೂರು ಜಿಲ್ಲೆಯ ಅರಣ್ಯವನ್ನು ಅಲ್ಲಿ ವಾಸವಾಗಿರುವ ವಿವಿಧ ಕಾಡುಪ್ರಾಣಿಗಳನ್ನು ಅದರಲ್ಲೂ ವಿಶೇಷವಾಗಿ ಯಥೇಚ್ಛವಾಗಿ ಇರುವ ಆನೆಗಳ ಸಂತತಿಯನ್ನು ಗಮನಿಸಿದವರಿಗೆ ಈ ಜನಸಮುದಾಯಗಳ ಸದಾ ಬೆಂಕಿಯ ಜೊತೆಗೆ ಯಾಕಿರುತ್ತಾರೆ ಎಂಬ ಸತ್ಯದ ಅರಿವು ಆಗದೇ ಇರದು. ಎಲ್ಲಿ ಬೆಂಕಿ ಇರುತ್ತದೋ ಅಲ್ಲಿ ಆನೆಗಳು ಸುಳಿಯುವುದಿಲ್ಲ. ತಮ್ಮ ಪೋಡುಗಳ ಮುಂದೆ(ಸೋಲಿಗರು ತಮ್ಮ ವಾಸಸ್ಥಳವನ್ನು ಪೋಡು ಎಂದು ಕರೆದುಕೊಳ್ಳುತ್ತಾರೆ) ರಾತ್ರಿಯ ಬಹುಕಾಲದವರೆಗೆ ಕುಣಿದು ನರ್ತಿಸುವ ಪರಿಪಾಟವಿರುವ ಜನರಿಗೆ ಆನೆಯ ಕಾಟದಿಂದ ಮುಕ್ತಿ ಕೊಡುತ್ತದೆ ಈ ಬೆಂಕಿ. ಮಾರಿ ಹಬ್ಬದ ಹನ್ನೆರಡನೆಯ ದಿನ ತಂಬಿಟ್ಟಿನ ಆರತಿ ಮತ್ತು ಪ್ರಾಣಿ ಬಲಿಯನ್ನು ನೀಡಲಾಗುತ್ತದೆ. ಸೋಲಿಗರು ಮಾರಿಯನ್ನು ಮುಖ್ಯವಾಗಿ ರೋಗನಿರೋಧಕ ದೈವವನ್ನಾಗಿ ಆರಾಧಿಸುತ್ತಾರೆ.

ಸೋಲಿಗರ ಮೂಲಮಾತೆ ಎನಿಸಿಕೊಂಡಿರುವ ಸಂಕಮ್ಮ ತುಂಬ ವಿಶಿಷ್ಟವಾದ ವ್ಯಕ್ತಿತ್ವವನ್ನು ಪಡೆದ ಒಬ್ಬ ಧೀರ ಬುಡಕಟ್ಟು ಹೆಣ್ಣು. ಸಂಕಮ್ಮನ ಹಬ್ಬವನ್ನು ಸೋಲಿಗರು ವಿಜೃಂಭಣೆಯಿಂದ ಆಚರಿಸುತ್ತಾರೆ. ಸಂಕಮ್ಮನ ಮೂಲದ ವಿಚಾರದಲ್ಲಿ ಒಂದೆರಡು ವೈರುಧ್ಯಾತ್ಮಕ ಸಂಗತಿಗಳಿವೆ. ಅದೇನೆಂದರೆ ಮಲೆಮಾದೇಶ್ವರ ಮೌಖಿಕ ಮಹಾಕಾವ್ಯದಲ್ಲಿ ಸಂಕಮ್ಮ ಮಲೆಮಾದೇಶ್ವರನ ಶಿಷ್ಯೆಯಾಗಿ ಕಾಣಿಸಿಕೊಳ್ಳುತ್ತಾಳೆ. ಕೆಲವು ವಿದ್ವಾಂಸರು ಗುರುತಿಸಿರುವಂತೆ ದಕ್ಷಿಣ ಕರ್ನಾಟಕ ಭಾಗದ ಅನೇಕ ಜನ

PDF created with pdfFactory Pro trial version www.pdffactory.com

ಸಮುದಾಯಗಳ ಸಾಂಸ್ಕೃತಿಕ ವೀರನಾದ ಮಲೆ ಮಾದೇಶ್ವರನ ಕಾಲ ಸುಮಾರು ೧೪–೧೫ ನೇ ಶತಮಾನ. ಇದು ನಿಜವಾದರೆ ಈ ಸಂದರ್ಭದಲ್ಲಿ ಇದ್ದ ಸಂಕಮ್ಮ ಸೋಲಿಗ ಜನಾಂಗದ ಮೂಲಮಾತೆ ಎನಿಸಿಕೊಳ್ಳಲು ಸಾಧ್ಯವಿಲ್ಲ. ಹಾಗೆಯೇ ಸಂಕಮ್ಮನ ಮಕ್ಕಳಾದ ಕಾಡಯ್ಯ ಮತ್ತು ಬಿಲ್ಲಯ್ಯ ಅವರುಗಳು ಈ ಜನವರ್ಗದ ಮೂಲ ಸಾಂಸ್ಕೃತಿಕ ನಾಯಕರು ಎಂದು ಹೇಳಲು ಸಾಧ್ಯವಾಗುವುದಿಲ್ಲ. ಈ ದ್ವಂದ್ವಗಳ ನಿವಾರಣೆಗಾಗಿ ಮಲೆಮಾದೇಶ್ವರ ಮತ್ತು ಸೋಲಿಗ ಜನವರ್ಗದ ಜೊತೆಗಿನ ಸಂಬಂಧಗಳನ್ನು ನಿರೂಪಿಸುವ ಕಥೆಯನ್ನು ಕ್ವಚಿತ್ತಾಗಿಯಾದರೂ ಹೇಳಲೇ ಬೇಕಾಗುತ್ತದೆ.

ಸೋಲಿಗರ ಒಂದು ಪ್ರಭೇದವಾದ ಮೇಲೆ ಸೋಲಿಗರ ನೀಲಯ್ಯ ಎಂಬುವವನು ಇನ್ನೂ ಮದುವೆಯಾಗಿರುವುದಿಲ್ಲ. ಸ್ಫುರದ್ರೂಪಿಯೂ ಮಾಟಮಂತ್ರಗಳನ್ನು ಚೆನ್ನಾಗಿ ಬಲ್ಲ ಮಹಾಮಾಂತ್ರಿಕನೂ ಆದ ಈ ಮಲೆಸೋಲಿಗರ ನೀಲಯ್ಯನಿಗೆ ಅನುರೂಪಳಾದ ಹೆಣ್ಣೇ ಅವನಿಗೆ ದೊರಕಿರುವುದಿಲ್ಲ. ಆ ಮಹಾರಣ್ಯದಲ್ಲಿ ಕುರಿಕಾಯುವ ಕಾಯಕದಲ್ಲಿ ನಿರತನಾಗಿರುವ ಒಂದು ಸಂದರ್ಭದಲ್ಲಿ ಕಾಡಿನ ನಡುವೆ ದೂರದಲ್ಲಿ ಎಲ್ಲೋ ಒಂದು ಕಡೆ ಸೂಜಿಗಾತ್ರದ ಹೊಗೆ ಏಳುತ್ತಿರುವುದು ಕಾಣಿಸಿಕೊಳ್ಳುತ್ತದೆ. ಅಪಾರ ಬಾಯಾರಿಕೆಯಿಂದ ಬಳಲುತ್ತಿದ್ದ ನೀಲಯ್ಯ ಅಲ್ಲಿ ಜನವಸತಿ ಇರಬಹುದೆಂಬುದನ್ನು ಗ್ರಹಿಸಿ ಅತ್ತ ಪ್ರಯಾಣ ಬೆಳೆಸುತ್ತಾನೆ. ಅವನ ಊಹೆಯಂತೆ ಅಲ್ಲಿ ದೇವ ಸೋಲಿಗರ ಕುಟುಂಬವೊಂದು ವಾಸವಾಗಿರುತ್ತದೆ. ಆ ಪೋಡಿನ ಹತ್ತಿರ ನಿಂತು ಬಾಯಾರಿಕೆಗಾಗಿ ನೀರು ಕೇಳುತ್ತಾನೆ. ನೀರನ್ನು ತಂದುಕೊಟ್ಟ ಹೆಣ್ಣು ಕಡುಚೆಲುವೆಯಾಗಿದ್ದು ನೀಲಯ್ಯನ ಮನಸ್ಸನ್ನು ಆಕರ್ಷಿಸುತ್ತಾಳೆ. ಹಿಂತಿರುಗಿ ಬಂದ ನೀಲಯ್ಯ ಅನ್ನ ಆಹಾರಗಳನ್ನು ಬಿಟ್ಟು ಚೆಲುವೆಯಾದ ಸಂಕಮ್ಮನ ಧ್ಯಾನದಲ್ಲಿ ಇರತೊಡಗುತ್ತಾನೆ. ನೀಲಯ್ಯನ ಈ ವಿಚಿತ್ರ ಸ್ಥಿತಿಯನ್ನು ಗಮನಿಸಿದ ಅವನ ತಂದೆ–ತಾಯಂದಿರು ಅವನ ಮನದಾಳದ ಇಂಗಿತವನ್ನು ಅರ್ಥ ಮಾಡಿಕೊಂಡು ದೇವಸೋಲಿಗರ ಪೋಡಿಗೆ ಹೋಗಿ ಹೆಣ್ಣು ಕೇಳುತ್ತಾರೆ. ಆಗಿನ ಪದ್ಧತಿಯಂತೆ ಹೆಣ್ಣಿಗೆ ತೆರ ಕಟ್ಟಿ ಮದುವೆಯನ್ನು ಮಾಡಿಕೊಂಡು ಬರಲಾಗುತ್ತದೆ. ಮದುವೆಯಾದ ನಂತರ ಅನೇಕ ವರ್ಷಗಳ ಕಾಲ ನೀಲಯ್ಯನಿಗೆ ಮಕ್ಕಳಾಗುವುದಿಲ್ಲ. ಸಂಕಮ್ಮನ ವಾರಗಿತ್ತಿಯರು ಬಂಜೆ ಎಂದು ಹೀಯಾಳಿಸಲು ಮೊದಲು ಮಾಡುತ್ತಾರೆ. ಇದರಿಂದ ಕ್ರೋಧಗೊಂಡ ನೀಲಯ್ಯ ಪ್ರತ್ಯೇಕ ಸಂಸಾರ ಹೂಡಲು ನಿರ್ಧರಿಸುತ್ತಾನೆ. ಮಹಾ ಅರಣ್ಯದ ನಡುವೆ ಮರಗಿಡ ಬಳ್ಳಿಗಳ ಸಹಾಯದಿಂದಲೇ ಪುಟ್ಟ ಗುಡಿಸಲೊಂದನ್ನು ನಿರ್ಮಾಣ ಮಾಡಿ ಅದರಲ್ಲಿ ದಂಪತಿಗಳಿಬ್ಬರೂ ವಾಸ ಮಾಡುತ್ತಿರುತ್ತಾರೆ.

ಇಲ್ಲಿ ಕಥೆ ಮತ್ತೊಂದು ತಿರುವನ್ನು ಪಡೆದುಕೊಳ್ಳುತ್ತದೆ. ಕಥೆಗೆ ಅಂಥ ತಿರುವನ್ನು ಕೊಡುವ ಪ್ರಮುಖ ಘಟನೆ ಯಾವುದೆಂದರೆ ಮಲೆಸೋಲಿಗರು ಸಾಮೂಹಿಕವಾಗಿ

ಬೇಟೆಗೆ ಹೋಗುವ ಪ್ರಸಂಗ. ಬೇಟೆಯೆಂದರೆ ಇಂದು ಹೋಗಿ ನಾಳೆ ಬರುವ ಬೇಟೆಯಲ್ಲ. ಒಂಬತ್ತು ತಿಂಗಳುಗಳ ಕಾಲ ಸತತವಾಗಿ ನಡೆಯುವ ಸುದೀರ್ಘ ಬೇಟೆಯದು. ಬೇಟೆಯೆಂದರೆ ಅದು ಬೇಟೆಯೂ ಅಲ್ಲ, ವಾಸ್ತವವಾಗಿ ಕಾವ್ಯದಲ್ಲಿ ಬರುವ ವಿವರಗಳ ಪ್ರಕಾರ ಅದೊಂದು ಸುದೀರ್ಘ ಆಹಾರ ಸಂಗ್ರಹಣೆಯ ಪ್ರಯಾಣ. ಕಾಡಿನಲ್ಲಿ ಸಿಗುವ ಗೆಡ್ಡೆ–ಗೆಣಸು, ಬಿದರಕ್ಕಿ, ತುಡುವೆ, ಜೇನು ಹೆಜ್ಜೇನು–ಇತ್ಯಾದಿಯಾಗಿ ಆಹಾರ ಪರಿಕರಗಳ ಸಂಗ್ರಹದ ಬೇಟೆಯದು. ಈ ಆಹಾರ ಸಂಗ್ರಹಣೆಯ ಬಗ್ಗೆ ಮಲೆಮಾದೇಶ್ವರ ಕಾವ್ಯ ಅತ್ಯಂತ ವೈವಿಧ್ಯಮಯವಾಗಿ ವರ್ಣಿಸುತ್ತದೆ. ಇಡೀ ಪೋಡಿನ ಜನ ಒಮ್ಮೆ ಇಂಥ ಬೇಟೆಗೆ ಹೋಗಬೇಕೆಂದು ನಿರ್ಧರಿಸಿದರೆ ಮನೆಗೆ ಒಬ್ಬರಂತೆ ಕಡ್ಡಾಯವಾಗಿ ಹೊರಡಲೇಬೇಕು. ಯಾಕೆಂದರೆ ಆ ಮಹಾ ಅರಣ್ಯದಲ್ಲಿ ಒಬ್ಬಿಬ್ಬರು ಇಂತಹ ಕಾರ್ಯ ಕೈಗೊಳ್ಳಲು ಸಾಧ್ಯವೇ ಇಲ್ಲ.

ಕುಲದ ಬೇಟೆಗೆ ಹೊರಡಬೇಕೆಂಬ ಹಿರಿಯರ ಕಟ್ಟಾಜ್ಞೆಯ ಹಿನ್ನೆಲೆಯಲ್ಲಿ ನೀಲಯ್ಯನು ಬೇಟೆಗೆ ಹೊರಡಬೇಕಾಗಿದೆ. ಆದರೆ ಅವನು ಒಬ್ಬಂಟಿ. ಸಂಕಮ್ಮ ಒಬ್ಬಳನ್ನೇ ಬಿಟ್ಟು ಹೊರಡುವುದಾದರೂ ಹೇಗೆ? ಹೊರಡಲಿಲ್ಲವಾದರೆ ಕುಲದಿಂದ ಹೊರಗೆ ಹಾಕುವ ಭಯ ಅವನನ್ನು ಕಾಡುತ್ತದೆ ಸಂಕಮ್ಮನನ್ನು ಬಿಟ್ಟು ಹೋಗಲು ಅವನು ಯಾಕೆ ತಯಾರಿಲ್ಲ? ಆ ದಟ್ಟಾರಣ್ಯದಲ್ಲಿ ಅವಳು ಒಬ್ಬಳು ಹೇಗೆ ಎಂಬ ಹೆಂಡತಿಯ ಬಗೆಗಿನ ಪ್ರೀತಿಯಿಂದ ಎಂದು ತಿಳಿದರೆ ಅದು ತಪ್ಪಾಗುತ್ತದೆ. ಏಕೆಂದರೆ ಅವನು ಸಂಕಮ್ಮನನ್ನು ಒಂಬತ್ತು ತಿಂಗಳುಗಳ ಕಾಲ ಬಿಟ್ಟು ಹೋಗಲು ಹಿಂಜರಿಯುತ್ತಿರುವ ಕಾರಣವೆಂದರೆ ಕಡುಚೆಲುವೆಯಾದ ಅವಳು ತನ್ನ ಅನುಪಸ್ಥಿತಿಯಲ್ಲಿ ಯಾರಿಗಾದರೂ ಒಲಿದುಬಿಟ್ಟರೆ? ಇದು ನೀಲಯ್ಯನ ಆತಂಕ. ಅದಕ್ಕಾಗಿಯೇ ಅವನೊಂದು ಉಪಾಯ ಹುಡುಕುತ್ತಾನೆ. ತಾನೂ ಹಿಂತಿರುಗಿ ಬರುವವರೆಗೆ ಬೇರೆ ಯಾರೊಂದಿಗೂ ಅಂತಹ ಅನೈತಿಕ ಸಂಬಂಧವನ್ನು ಏರ್ಪಡಿಸಿಕೊಳ್ಳುವುದಿಲ್ಲ ಎಂದು ಭಾಷೆ ಕೊಡುವಂತೆ ಸಂಕಮ್ಮನನ್ನು ಒತ್ತಾಯಿಸುತ್ತಾನೆ. ನೀಲಯ್ಯನ ಈ ಅನುಮಾನ ಹಾಗೂ ಅವನು ಭಾಷೆ ಕೇಳುತ್ತಿರುವ ಹೀನಬುದ್ಧಿ ಸಂಕಮ್ಮನನ್ನು ಕೆರಳಿಸುತ್ತದೆ. ಅವಳ ಸ್ವಾಭಿಮಾನ ಕುಡಿಯೊಡೆಯುತ್ತದೆ. ನೀನು ಕೊಟ್ಟಿದ್ದ ತೆರವನ್ನು ಹಿಂದಕ್ಕೆ ಪಡೆದು ಈ ದಿನವೇ ತನ್ನನ್ನು ಬಿಟ್ಟು ಬಿಡುವಂತೆ ಒತ್ತಾಯಿಸುತ್ತಾಳೆಯೇ ಹೊರತು ಭಾಷೆಯನ್ನು ಕೊಡುವುದಿಲ್ಲ. ಈ ಸಂದರ್ಭದಲ್ಲಿ ನೀಲಯ್ಯ ಮತ್ತು ಸಂಕಮ್ಮರ ನಡುವೆ ನಡೆಯುವ ವಾಗ್ವಾದಗಳು ಪುರುಷ ಪ್ರಾಧಾನ್ಯತೆಯ ಅಂಕುರವನ್ನು ಹಾಗೆಯೇ ಅದನ್ನು ಧಿಕ್ಕರಿಸುವ ಸ್ತ್ರೀ ಸ್ವಾಭಿಮಾನವನ್ನೂ ಎತ್ತಿ ತೋರಿಸುತ್ತದೆ. ನೀಲಯ್ಯ ಎಷ್ಟು ಪ್ರಯತ್ನಪಟ್ಟರೂ ಸಂಕಮ್ಮಳ ಭಾಷೆ ಪಡೆಯುವಲ್ಲಿ ವಿಫಲನಾಗುತ್ತಾನೆ. ಇದರಿಂದ ರೊಚ್ಚಿಗೆದ್ದ ನೀಲಯ್ಯ ತನಗೆ ಗೊತ್ತಿರುವ ಮಾಟ ವಿದ್ಯೆಯನ್ನು ಪ್ರಯೋಗಿಸಿ ಅವಳನ್ನು ಬೆತ್ತಲು ಮಾಡಿ ಅನೇಕ ವಿಧವಾದ

PDF created with pdfFactory Pro trial version www.pdffactory.com

ಬಳ್ಳಿ ಮತ್ತು ಮುಳ್ಳುಗಳಿಂದ ಅವಳ ಕೈಕಾಲುಗಳನ್ನು ಕಟ್ಟಿಹಾಕಿ, ಅನೇಕ ರೀತಿಯ ಬಂಧನಗಳನ್ನು ವಿಧಿಸಿ ಕಾವಲು ಕಾಯಲು ಹಾವು, ಚೇಳು, ಮತ್ತು ರಾಕ್ಷಸರನ್ನು ನಿಲ್ಲಿಸಿ ಬೇಟೆಗೆ ಹೊರಟು ಹೋಗುತ್ತಾನೆ. ಅಮಾಯಕಳಾದ ಸಂಕಮ್ಮ ಹಾಹಾಕಾರ ಮಾಡುತ್ತಾ ನೆರವಿಗಾಗಿ ಕೂಗಿಕೊಳ್ಳುತ್ತಾಳೆ. ದಟ್ಟ ಕಾನನದ ಒಂಟಿ ಗುಡಿಸಲಲ್ಲಿ ಬಂಧಿತಳಾಗಿರುವ ಅವಳ ರಕ್ಷಣೆಗೆ ಯಾರು ತಾನೆ ಬರುತ್ತಾರೆ? ಕಡೆಗೆ ಅವಳು ಎಪ್ಪತ್ತೇಳು ಮಲೆಯ ಒಡೆಯನಾದ ಮಲೆಮಾದೇಶ್ವರನನ್ನು ಧ್ಯಾನಿಸುತ್ತಾಳೆ.

ಕಥೆ ಇಲ್ಲಿಂದ ಮತ್ತೊಂದು ತಿರುವನ್ನು ಪಡೆದುಕೊಳ್ಳುತ್ತದೆ. ಎಪ್ಪತ್ತೇಳು ಮಲೆಯ ಉನ್ನತ ಸ್ಥಾನದಲ್ಲಿ ಕುಂತು ಧ್ಯಾನಸ್ಥನಾಗಿದ್ದ ಮಲೆಮಾದೇಶ್ವರನ ಪ್ರಜ್ಞೆಗೆ ಸಂಕಮ್ಮನ ದುಸ್ಥಿತಿ ಅರಿವಾಗುತ್ತದೆ. ಇಂಥ ಸ್ಥಿತಿಯಲ್ಲಿರುವ ಹೆಣ್ಣುಮಗಳನ್ನು ರಕ್ಷಿಸಲೇಬೇಕೆಂದು ಅವನು ಸಂಕಲ್ಪಿಸುತ್ತಾನೆ. ತನ್ನ ಆಪ್ತಸೇವಕನಾದ ಬೇಡರ ಕಣ್ಣಯ್ಯನಿಗೆ ತನ್ನ ಪರಿವಾರದಲ್ಲಿ ಸಾಕಿರುವ ಹಲವು ವಿಧದ ಹುಲಿಗಳನ್ನು ಕೂಗಿ ಕರೆಯುವಂತೆ ಹೇಳುತ್ತಾನೆ. ಬಿಳೀಹುಲಿ, ಕರಿಹುಲಿ, ಪಟ್ಟೇಹುಲಿ, ಚುಕ್ಕೆಹುಲಿ ಮುಂತಾಗಿ ಹತ್ತಾರು ಹುಲಿಗಳು ತಮ್ಮ ಕೋರೆ ಹಲ್ಲುಗಳನ್ನು ಜಳಪಿಸುತ್ತಾ ಓಡೋಡಿ ಬರುತ್ತವೆ. ಅವುಗಳಲ್ಲಿ ಆಯ್ಕೆ ಮಾಡಿದ ಒಂದು ಹುಲಿಯ ಮೇಲೆ ಕುಂತು ಧಾವಿಸಿ ಬರುತ್ತಾನೆ.

ಮಲೆಮಾದೇಶ್ವರ ಕಾವ್ಯದ ಈ ಸಂಕಮ್ಮನ ಕಥಾಭಾಗ ಬುಡಕಟ್ಟು ಜೀವನದ ಅಧ್ಯಯನದ ದೃಷ್ಟಿಯಿಂದ ಅತ್ಯಂತ ಮುಖ್ಯವಾದದ್ದು. ಈ ಕಾವ್ಯದಲ್ಲಿ ಬರುವ ಹತ್ತಾರು ಬಗೆಯ ಮರಗಿಡ ಬಳ್ಳಿಗಳು, ಅರಣ್ಯದ ಅಪೂರ್ವ ಪರಿಸರ ಹಾಗೂ ಆ ಪರಿಸರದಲ್ಲಿ ಸೋಲಿಗ ಸಮುದಾಯ ಕೈಗೊಳ್ಳುವ ಬೇಟೆ ಮತ್ತು ಅವರ ಆಹಾರ ಸಂಗ್ರಹಣೆಯ ವಿಧಿವಿಧಾನಗಳು ಸೋಲಿಗರ ಪ್ರಾಚೀನ ಜೀವನದ ಪದ್ಧತಿಯನ್ನು ಚೆನ್ನಾಗಿ ಬಿಂಬಿಸುತ್ತದೆ. ಇಲ್ಲಿನ ಇನ್ನೊಂದು ಮುಖ್ಯ ವಿಚಾರವೆಂದರೆ ಬೇಟೆ ಎಂದರೆ ಎಲ್ಲಿಯೂ ಪ್ರಾಣಿಗಳನ್ನು ಹತ್ಯೆ ಮಾಡುವುದಲ್ಲ. ಬದಲಾಗಿ ಜೇನು, ಹೆಜ್ಜೇನು, ಬೇರು, ಗೆಡ್ಡೆ–ಗೆಣಸು, ಹಣ್ಣು ಹಂಪಲು ಮತ್ತು ಪ್ರಾಣಿಗಳ ಅವಶೇಷಗಳನ್ನು ಸಂಗ್ರಹಿಸುವ ಅಪೂರ್ವ ವಿಧಾನ. ಇವರ ಸಾಂಸ್ಕೃತಿಕ ವೀರನಾದ ಮಲೆಮಾದೇಶ್ವರ ಕೂಡ ಪ್ರಾಣಿಪ್ರಿಯ ದೈವ. ಸದಾ ಹಾವು ಮತ್ತು ಹುಲಿಗಳ ಒಡನಾಟದಲ್ಲಿ ಅವುಗಳ ಗೆಳೆಯನಾಗಿ ಕಾಲ ಕಳೆಯುವ ಒಬ್ಬ ಹೃದಯವಂತ. ಅವನ ಹುಲಿಗಳಿಗೆ ಅವನು ಇಟ್ಟಿರುವ ಹೆಸರಾದರೂ ಎಂತವು. ಕೊಳ್ಳಗಾಲ್ದ ಕುಳ್ಳು ಬರಗಾ, ಅಂಚಿತಾಳ್ದ ಕೆಂಚು ಬರಗಾ, ತಾಳು ಬೆಟ್ಟದ ತಲೆದೂಗಾ, ರಂಗನೊಡ್ಡ, ಸಿಂಗಲ್ಲು, ಬರಗಾ–ಮುಂತಾಗಿ ಅವನ ಹುಲಿಗಳಿಗೆ ಹೆಸರಿಟ್ಟಿದ್ದಾನೆ. ತನ್ನ ಕಾಡಿನಲ್ಲಿರುವ ಹತ್ತಾರು ಹುಲಿಗಳನ್ನು ಕರೆದು ಮೈಸವರಿ ಕ್ಷೇಮ ಸಮಾಚಾರ ವಿಚಾರಿಸಿ ತನಗೆ ಪ್ರಿಯವಾದ ಹನ್ನೆರಡೆಜ್ಜೆ ಕೆಂಬರಗನ ಮೇಲೆ ಕುಂತು ಮಾದಪ್ಪ ಸಂಕಮ್ಮನ ಗುಡಿಸಲಿಗೆ ಪ್ರಯಾಣ ಬೆಳೆಸುತ್ತಾನೆ.

ನೀಲಯ್ಯ ಮಹಾಮಾಟಗಾರ. ಅನೇಕ ರೀತಿಯ ಮಂಡಲಗಳನ್ನು ಬರೆದು ಕಟ್ಟು ಕಟ್ಟಳೆಗಳನ್ನು ಮಾಡಿ ಹಾವು, ಚೇಳು, ರಾಕ್ಷಸರನ್ನು ಕಾವಲಿಗಿಟ್ಟು ಕುಲದ ಬೇಟೆಗೆ ಹೋಗಿದ್ದಾನೆ. ಆ ಕಟ್ಟು ಕಟ್ಟಲೆಗಳನ್ನು ನಿರರ್ಥಕಗೊಳಿಸಿಯೇ ಒಳ ಹೋಗಬೇಕು. ಇದು ಮಾದೇಶ್ವರನಿಗೆ ಅಸಾಧ್ಯದ ವಿಚಾರವೇನೂ ಅಲ್ಲ. ಯಾಕೆಂದರೆ ಇವನು ಮೋಡಿಕಾರರ ಗುರು. ಮಂತ್ರವಿದ್ಯೆಯ ಸಕಲ ವಿವರಗಳೂ ಗೊತ್ತಿರುವ ಮಹಾಮಾಂತ್ರಿಕ. ಮೋಡಿಗೆ ಪ್ರತಿಮೋಡಿ ಮಾಡಿ ಕ್ಷಣಾರ್ಧದಲ್ಲಿ ನಿರರ್ಥಕಗೊಳಿಸಬಲ್ಲ ಮಹಾವಿದ್ಯೆಕಾರ. ನೀಲಯ್ಯನ ಎಲ್ಲಾ ಮಂಡಲಗಳನ್ನು ಕಟ್ಟುಕಟ್ಟಲೆಗಳನ್ನು ನಿರರ್ಥಕಗೊಳಿಸಿ ಸಂಕಮ್ಮಳನ್ನು ಸಮೀಪಿಸುತ್ತಾನೆ. ಅವಳ ಮೈಮೇಲಿನ ಮುಳ್ಳು ಬಳ್ಳಿಗಳನ್ನು ಇಲ್ಲವಾಗಿಸುತ್ತಾನೆ. ಬೆತ್ತಲೆ ಇರುವ ಸಂಕಮ್ಮಳಿಗೆ ವಸ್ತ್ರವನ್ನು ದಯಪಾಲಿಸುತ್ತಾನೆ. ಇಷ್ಟೆಲ್ಲ ಮಾಡಿ ಮತ್ತೇನು ಬೇಕು ಮಗಳೇ ಎಂದು ಕೇಳುವಾಗ ಮಕ್ಕಳ ಫಲ ಕೊಟ್ಟು ಹೋಗುವಂತೆ ಹಟ ಹಿಡಿಯುತ್ತಾಳೆ. ಸಂಕಮ್ಮಳ ಅಭೀಪ್ಸೆಯನ್ನು ಈಡೇರಿಸಲು ಕೊನೆಗೂ ಒಪ್ಪಿಕೊಂಡ ಮಾದೇವ ಹಾಗೆ ಹುಟ್ಟುವ ಮೊದಲ ಇಬ್ಬರು ಮಕ್ಕಳನ್ನು ತನ್ನ ಸೇವೆಗೆ ಬಿಡಬೇಕು ಎಂಬ ವಾಗ್ದಾನ ಪಡೆದು ಅವಳಿಗೆ ಮಕ್ಕಳ ಫಲವನ್ನು ಕರುಣಿಸುತ್ತಾನೆ. ಅವಳನ್ನು ಭಾಗಿಸಿ ಬೆನ್ನಿನ ಮೇಲೆ ಮಕ್ಕಳ ಫಲವನ್ನು ಬರೆದು ಕಾಡು ಬೆಂಡೆಕಾಯಿಯ ಮೂಲಕ ಪಿಂಡ ಪರಸಾದವನ್ನು ಕೊಟ್ಟನಂತೆ ಮಾದೇಶ್ವರ! ಕಾವ್ಯದಲ್ಲಿ ಬರುವ ಈ ಪ್ರತಿಮೆ ಅತ್ಯಂತ ಅರ್ಥಗರ್ಭಿತವಾಗಿದೆ. ವಾಸ್ತವಕ್ಕೆ ಹತ್ತಿರವಾಗಿದೆ.

ಸಂಕಮ್ಮ ಗರ್ಭಿಣಿಯಾಗಿ ಮಕ್ಕಳನ್ನು ಹೆರುವುದಕ್ಕೂ ನೀಲಯ್ಯನ ಒಂಬತ್ತು ತಿಂಗಳು ಕಾಲದ ಕುಲದ ಬೇಟೆ ಮುಗಿಯುವುದಕ್ಕೂ ಸರಿಹೋಗುತ್ತದೆ. ಅವನು ಬಂದು ನೋಡಿದಾಗ ಗುಡಿಸಿಲ ಬದಲು ಮಾದೇಶ್ವರನ ಕರುಣೆಯಿಂದ ಅರಮನೆ ನಿರ್ಮಾಣವಾಗಿರುತ್ತದೆ. ಕಾರಯ್ಯ–ಬಿಲ್ಲಯ್ಯ ಎಂಬ ಮಕ್ಕಳನ್ನು ಹೆತ್ತು ಆರಾಮವಾಗಿರುವ ಸಂಕಮ್ಮಳನ್ನು ನೋಡಿ ಮತ್ತಷ್ಟು ಕ್ರೋಧಗೊಳ್ಳುತ್ತಾನೆ. ಸಂಕಮ್ಮಳಿಗೆ ಅನೇಕ ರೀತಿಯ ಕಷ್ಟ ಕೋಟಲೆಗಳನ್ನು ನೀಡುತ್ತಾನೆ. ಆದರೆ ಸಂಕಮ್ಮಳ ಅರಮನೆಯ ಗೋಡೆಯ ಮೇಲೆ ಹಲ್ಲಿಯ ರೂಪದಲ್ಲಿ ಕುಳಿತುಕೊಳ್ಳುವ ಮಾದೇವ ಅವಳ ಎಲ್ಲ ರೀತಿಯ ಕಷ್ಟಗಳನ್ನು ಪರಿಹರಿಸಿ ನೀಲಯ್ಯ ಸೋಲೊಪ್ಪಿಕೊಳ್ಳುವಂತೆ ಮಾಡುವಲ್ಲಿ ಯಶಸ್ವಿ ಯಾಗುತ್ತಾನೆ.

ಇಷ್ಟು ಸುದೀರ್ಘವಾದ ಕಥೆಯನ್ನು ಹೇಳಿದ್ದಕ್ಕೆ ಕಾರಣವಿದೆ. ಬುಡಕಟ್ಟು ದೈವಗಳನ್ನು ಕುರಿತು ಚರ್ಚೆ ಮಾಡುತ್ತಿರುವ ಈ ಸಂದರ್ಭದಲ್ಲಿ, ಸೋಲಿಗರ ಮನೆ ದೇವತೆಯಾಗಿರುವ ಸಂಕಮ್ಮ; ಸೋಲಿಗರ ಆರಾಧ್ಯ ದೈವವಾಗಿರುವ ಮಲೆ ಮಾದೇಶ್ವರ ಮತ್ತು ಸೋಲಿಗರ ಸಾಂಸ್ಕೃತಿಕ ವೀರರೆನಿಸಿದ ಕಾರಯ್ಯ ಮತ್ತು

PDF created with pdfFactory Pro trial version www.pdffactory.com

ಬಿಲ್ಲಯ್ಯ ಇವರುಗಳ ಸಂಬಂಧವನ್ನು ಕಾಡಿನ ಪರಿಸರದ ಎಲ್ಲ ದಟ್ಟ ಸಾಂಸ್ಕೃತಿಕ ವಿವರಗಳನ್ನು ಉಳಿಸಿಕೊಂಡು ನಿರೂಪಿಸುವ ಈ ಕಾವ್ಯ ಒಂದು ಕಾಲದ ಬುಡಕಟ್ಟೊಂದರ ಜೀವನ ವಿಧಾನವನ್ನು ವಿಶ್ಲೇಷಿಸುತ್ತದೆ. ಕಾವ್ಯದ ಆರಂಭದಲ್ಲಿ ನೀಲಯ್ಯ ಕುರಿಗಳನ್ನು ಕಾಯುವ ಕಾಯಕವನ್ನು ಮಾಡುತ್ತಿರುತ್ತಾನೆ. ಅಂದರೆ ಆಹಾರ ಸಂಗ್ರಹಣೆಯ ಜೊತೆಗೆ ಪಶುಸಂಗೋಪನೆಯನ್ನು ಈ ಜನಾಂಗ ಅವಲಂಬಿಸಿದ್ದುದು ಈ ಮೂಲಕ ತಿಳಿದುಬರುತ್ತದೆ. ಹೀಗೆ ಪಶುಪಾಲನೆ ಹಂತದ ಮೌಲ್ಯವೆನಿಸಿದ ಪುರುಷಪ್ರಧಾನ ನೆಲೆ ನೀಲಯ್ಯನ ಮನಸ್ಸಿನಲ್ಲಿ ಮನೆ ಮಾಡಿದೆ. ಆ ಮೂಲಕ ಮಾತೃಪ್ರಧಾನ ವ್ಯವಸ್ಥೆಯಲ್ಲಿದ್ದ ಸೋಲಿಗ ಬುಡಕಟ್ಟು ಪುರುಷಪ್ರಧಾನ ವ್ಯವಸ್ಥೆಗೆ ಪರಿವರ್ತಿತವಾಗುತ್ತಿರುವ ಸಂಕೇತವಾಗಿ ನೀಲಯ್ಯ ನಮಗೆ ಕಾಣಿಸುತ್ತಾನೆ. ಆದರೆ ಹಾಗೆ ತನ್ನ ಮೇಲೆ ಅಧಿಕಾರ ಚಲಾಯಿಸಲು ಪ್ರಯತ್ನಿಸುತ್ತಿರುವ ಪುರುಷಪ್ರಾಧಾನ್ಯವನ್ನು ಧಿಕ್ಕರಿಸುವ ಮಾತೃಮೂಲ ವ್ಯವಸ್ಥೆಯ ಪ್ರತೀಕವಾಗಿ ಸಂಕಮ್ಮ ಕಂಡುಬರುತ್ತಾಳೆ. ನೀಲಯ್ಯ ಮತ್ತು ಸಂಕಮ್ಮರ ಈ ಸಾಂಸ್ಕೃತಿಕ ಘರ್ಷಣೆ ಒಂದು ಕಾಲದ ಇಡೀ ಸೋಲಿಗ ಸಮುದಾಯದ ಸಾಂಸ್ಕೃತಿಕ ಘರ್ಷಣೆಯಾಗಿಯೇ ನಮಗೆ ಕಂಡುಬರುತ್ತದೆ. ಹೆಂಡತಿ ಎನ್ನುವವಳು ತನ್ನ ಆಸ್ತಿ ಎಂಬ ನಿಯಂತ್ರಣಾವಸ್ಥೆಯನ್ನು ನೀಲಯ್ಯ ಪ್ರತಿನಿಧಿಸಿದರೆ ತಾನು ಯಾರಿಂದಲಾದರೂ ಮಕ್ಕಳ ಫಲವನ್ನು ಪಡೆಯಬಹುದು ಎನ್ನುವ ಮೂಲಕ ಪ್ರಾಚೀನದಲ್ಲಿದ್ದ ಮಾತೃಮೂಲ ಕುಟುಂಬದ ಮುಕ್ತವ್ಯವಸ್ಥೆಯ ಕಡೆಗೆ ಸಂಕಮ್ಮ ಒಲಿಯುತ್ತಾಳೆ. ಹೀಗಾಗಿ ಕಾವ್ಯದ ಈ ಭಾಗ ಒಂದು ಕಾಲದ ಪರಿವರ್ತನ ಸಮಾಜದ ಇತಿಹಾಸವನ್ನೇ ನಿರೂಪಿಸುತ್ತದೆ.

ಇಲ್ಲಿ ಬರುವ ಮೋಡಿ, ಮಾಟ ಮತ್ತು ಮಂತ್ರವಿದ್ಯೆಯ ಅನೇಕ ವಿವರಗಳು ಪ್ರಾಚೀನ ಸಮಾಜವೊಂದರ ಜೀವನಪದ್ಧತಿಯ ಕುರುಹುಗಳಾಗಿ ನಮಗೆ ಕಾಣಿಸುತ್ತವೆ. ಯಾವುದೇ ಬುಡಕಟ್ಟು ಸಮುದಾಯದ ಅವಿಭಾಜ್ಯ ಅಂಗ ಈ ಮಂತ್ರ ವಿದ್ಯೆ. ಮಹಾಮಾಟಕಾರನಾದ ನೀಲಯ್ಯ ಮತ್ತು ಮಾಟಕಾರರ ಗುರುವಾದ ಮಹದೇಶ್ವರ ಈ ಇಬ್ಬರು ಒಂದು ಕಾಲದ ಎರಡು ಸಮುದಾಯಗಳ ನಡುವೆ ನಡೆಯುತ್ತಿದ್ದಿರ ಬಹುದಾದ ಮಂತ್ರವಿದ್ಯೆಯ ಸ್ಪರ್ಧೆಯನ್ನೇ ಪ್ರತಿನಿಧಿಸುತ್ತಾರೆ. ಆರಾಧನೆಗಿಂತಲೂ ಮಂತ್ರವಿದ್ಯೆಯೇ ಬುಡಕಟ್ಟು ಸಮುದಾಯಗಳಲ್ಲಿ ಪ್ರಮುಖವಾಗಿತ್ತು ಎಂಬುದನ್ನು ಈ ಪ್ರಸಂಗ ನಿಚ್ಚಳವಾಗಿ ನಿರೂಪಿಸುತ್ತದೆ.

ಕುಲದ ಬೇಟೆಯ ವಿಚಾರವನ್ನು ಆ ಮೂಲಕ ಆಹಾರ ಸಂಗ್ರಹಣೆಯ ವಿವರಗಳು ಹಾಗೂ ಹುಲಿ ಮತ್ತು ಹಾವುಗಳಂತ ಕ್ರೂರ ಜಂತುಗಳನ್ನೇ ತಮ್ಮ ಸಹಬಾಳ್ವೆಯಲ್ಲಿ ಕೊಂಡೊಯ್ಯುತ್ತಿದ್ದ ಅಪೂರ್ವ ಪ್ರಸಂಗಗಳು ಅನಾದಿ ಕಾಲವೊಂದರ ಪ್ರಾಣಿ ಸಮೂಹದ ಜೊತೆಗಿನ ವಿಶಿಷ್ಟ ಜೀವನ ಪದ್ಧತಿಯನ್ನು ನಿರೂಪಿಸುತ್ತದೆ.

ಇಲ್ಲಿ ಪರಿಶೀಲಿಸಬೇಕಾದ ಮುಖ್ಯವಾದ ಅಂಶವೆಂದರೆ ಮಲೆಮಾದೇಶ್ವರ ಮತ್ತು ಸಂಕಮ್ಮ ಸೋಲಿಗರ ಮೂಲ ದೈವಗಳೇ ಎಂಬುದು. ಮಲೆಮಾದೇಶ್ವರ ಒಬ್ಬ ಐತಿಹಾಸಿಕ ವ್ಯಕ್ತಿಯೂ ಆಗಿರುವುದರಿಂದ ಅವನ ಕಾಲ ಸುಮಾರು ೧೪–೧೫ನೇ ಶತಮಾನವಾಗಿರ ಬಹುದು ಎಂಬ ಊಹೆ ಇರುವುದರಿಂದ ಸಂಕಮ್ಮನ ಈ ಪ್ರಸಂಗ ನಿಜವಿರಬಹುದು ಅಥವಾ ಇಲ್ಲದಿರಬಹುದು. ಆದರೆ ಅವಳು ಮಲೆ ಮಾದೇಶ್ವರನ ನಿಕಟವರ್ತಿಯಾದ ಒಬ್ಬಳು ಶರಣೆಯಾಗಿ ಬದುಕಿರುವ ಸಾಧ್ಯತೆಗಳು ಹೆಚ್ಚಿವೆ. ಆದ್ದರಿಂದ ಸೋಲಿಗರಿಗೆ ಈ ಇಬ್ಬರು ದೈವಗಳಿಗಿಂತ ಆದಿಯಲ್ಲಿ ಮೂಲ ದೈವಗಳು ಇರಲಿಲ್ಲವೇ ಎಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ. ವಾಸ್ತವವಾಗಿ ಕ್ಯಾತೆದೇವರು(ಶಿವನ ಸ್ವರೂಪಿ) ಮತ್ತು ಮಾರಮ್ಮ ಮೂಲದಲ್ಲಿ ಇವರ ದೈವವಾಗಿದ್ದವು ಎಂಬುದರಲ್ಲಿ ಅನುಮಾನವಿಲ್ಲ. ಬಹುಶಃ ಕ್ಯಾತೆದೇವರು ಇವರ ಪಶು ಸಂಗೋಪನೆಯ ಹಂತದ ದೈವವಾಗಿದ್ದರೆ ಮಾರಮ್ಮ ಅದಕ್ಕೂ ಹಿಂದಿನ ಮಾತೃಮೂಲ ಕುಟುಂಬದ ವ್ಯವಸ್ಥೆಯ ದೇವರಿರಬಹುದು. ಆದರೆ ಇವರ ಬಳಿ ಮತ್ತು ಕುಲಗಳ ವಿಚಾರ ಬಂದಾಗ ನಿಸರ್ಗದ ದೇವರುಗಳು ಮತ್ತು ಮರಗಿಡ ಬಳ್ಳಿಗಳ ಪ್ರಸ್ತಾಪವೇ ಹಂಚಿರುವುದರಿಂದ ಪ್ರಾಚೀನದಲ್ಲಿ ಇವರು ಕೂಡ ನಿಸರ್ಗದ ಆರಾಧಕರೇ.

ಮಲೆಮಾದೇಶ್ವರ ಕೇವಲ ಸೋಲಿಗರಿಗಷ್ಟೇ ದೈವವಲ್ಲ. ದಕ್ಷಿಣ ಕರ್ನಾಟಕದ ಮೈಸೂರು, ಮಂಡ್ಯ, ಬೆಂಗಳೂರು ಮುಂತಾಗಿ ಹಲವು ಪ್ರದೇಶಗಳ ಶೂದ್ರ ವರ್ಗದ ಅನೇಕ ಸಮುದಾಯಗಳು ಮಲೆಮಾದೇಶ್ವರನ ಭಕ್ತರು. ಇತ್ತೀಚೆಗೆ ವೀರಶೈವರೂ ಕೂಡ ಮಲೆಮಾದೇಶ್ವರನ ವೀರಶೈವ ದೇವರೆಂದು ಪ್ರತಿಪಾದಿಸುತ್ತಾರೆ. ಕಲ್ಯಾಣದ ಕ್ರಾಂತಿ ನಂತರದಲ್ಲಿ ಬಸವಣ್ಣ ಮತ್ತು ಅಲ್ಲಮಪ್ರಭುಗಳ ತತ್ವಾದರ್ಶನಗಳನ್ನೂ ಶೂದ್ರರ ಪಂಚಮಕಾರಗಳ ಆಸಕ್ತಿಯನ್ನು ಒಂದುಗೂಡಿಸಿ ಕೆಳವರ್ಗಗಳ ಜನಸಮುದಾಯಗಳನ್ನು ಒಂದು ಪಂಥದ ಅಡಿಯಲ್ಲಿ ತಂದ ಕೀರ್ತಿ ಮಲೆಮಾದೇಶ್ವರ, ಮಂಟೆಸ್ವಾಮಿಗೆ ಸಲ್ಲುತ್ತದೆ. ಮಲೆಮಾದೇಶ್ವರನನ್ನು ಮಾದಿಗ ಕುಲದವನೆಂದು ಪ್ರತಿಪಾದಿಸಲಾಗಿದೆ. ಇದು ನಿಜವಿರಬಹುದು ಅಥವಾ ಊಹೆಯಿರಬಹುದು. ಆದರೆ, ಶೂದ್ರಾತಿಶೂದ್ರರಿಗೆ ಒಂದು ಸ್ವಾಭಿಮಾನ ಮತ್ತು ಧಾರ್ಮಿಕವಾದ ದಿಕ್ಕು ದೆಸೆಗಳನ್ನು ತೋರಿದ ಕ್ರಾಂತಿಕಾರಕ ವ್ಯಕ್ತಿಗಳು ಇವರಾಗಿದ್ದರು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದ್ದರಿಂದಲೇ ಅನೇಕ ಜನಸಮುದಾಯಗಳು ಈ ಇಬ್ಬರು ಸಾಂಸ್ಕೃತಿಕ ವ್ಯಕ್ತಿಗಳನ್ನು ಆರಾಧ್ಯ ದೈವಗಳಾಗಿ ಕಾಣುತ್ತಿದ್ದಾರೆ. ದಕ್ಷಿಣ ತುತ್ತತುದಿಯ ಮಹಾ ಅರಣ್ಯದ ಎಪ್ಪತ್ತೇಳು ಮಲೆಗಳನ್ನೇ ತಮ್ಮ ಕ್ರಾಂತಿಯ ಸ್ಥಳವನ್ನಾಗಿ ಮಾಡಿಕೊಂಡ ಮಲೆಮಾದೇಶ್ವರ ಮೊದಲಿಗೆ ತನ್ನ ಶಿಷ್ಯರನ್ನಾಗಿ ಸ್ವೀಕರಿಸಿದ್ದು ಸೋಲಿಗರು ಮತ್ತು ಬೇಡ ಗಂಪಣದ ಸಮುದಾಯವನ್ನು. ಆದ್ದರಿಂದ ಸೋಲಿಗರು ಮಧ್ಯಕಾಲೀನ

PDF created with pdfFactory Pro trial version www.pdffactory.com

ಕರ್ನಾಟಕದ ಸಾಂಸ್ಕೃತಿಕ ಪರಿವರ್ತನೆಯ ಈ ಹಂತದಲ್ಲಿ ಮಲೆಮಾದೇಶ್ವರನ ಭಕ್ತರಾಗಿದ್ದಾರೆ. ಸಂಕಮ್ಮನ ಮಕ್ಕಳೆನ್ನಲಾದ ಕಾರಯ್ಯ ಮತ್ತು ಬಿಲ್ಲಯ್ಯ ಅವರು ಮಾದೇಶ್ವರನ ಪ್ರಥಮ ಶಿಷ್ಯರಾಗಿರಬೇಕು. ಇದು ಕಾವ್ಯದಲ್ಲಿಯೂ ಸ್ಪಷ್ಟವಾಗಿಯೇ ಬರುತ್ತದೆ. ಸೋಲಿಗರ ಸಾಂಸ್ಕೃತಿಕ ವೀರರಾದ ಇವರು ಬಹುಶಃ ಇಡೀ ಸೋಲಿಗ ಸಮುದಾಯವನ್ನೇ ಮಲೆಮಾದೇಶ್ವರನ ಭಕ್ತರಾಗುವಂತೆ ಪ್ರಭಾವ ಬೀರಿರಬಹುದು.

ಈ ನಡುವೆ ಮತ್ತೊಂದು ವಿಚಿತ್ರ ಪ್ರಸಂಗ ಸೋಲಿಗರ ಧಾರ್ಮಿಕ ಬದುಕಿನಲ್ಲಿ ನಡೆದು ಹೋಗಿದೆ. ಅದೇನೆಂದರೆ ಬಿಳಿಗಿರಿ ರಂಗಯ್ಯ ಸೋಲಿಗರ ಆರಾಧ್ಯ ದೈವವಾದ ಪ್ರಸಂಗ. ಮಲೆಮಾದೇಶ್ವರ ಬೆಟ್ಟದಿಂದ ಸುಮಾರು ದೂರದಲ್ಲಿರುವ ಮೈಸೂರು ಜಿಲ್ಲೆಯ ಮತ್ತೊಂದು ನಿಸರ್ಗ ಪರ್ವತವೆಂದರೆ ಬಿಳಿಗಿರಿ ರಂಗನ ಬೆಟ್ಟ. ಸೋಲಿಗರು ದಟ್ಟವಾಗಿರುವ ಪ್ರದೇಶವಿದು. ಮೂಲದಲ್ಲಿ ಮಾತೃವಿನ ಶಿವನ ಆರಾಧಕರಾಗಿದ್ದ ಸೋಲಿಗರು ಶ್ರೀ ವೈಷ್ಣವ ಪರಂಪರೆಯ ಬಿಳಿಗಿರಿ ರಂಗಯ್ಯನಿಗೆ ಹೇಗೆ ಮತ್ತು ಯಾವಾಗ ಭಕ್ತರಾದರು ಎಂಬುದು ಅತ್ಯಂತ ಕುತೂಹಲಕಾರಿ ವಿಚಾರ. ಅದಕ್ಕೂ ಒಂದು ಪುಟ್ಟ ಕಥೆ ಇದೆ. ಈ ಕಥೆಯನ್ನು ಸೋಲಿಗರು ಸುದೀರ್ಘ ಕಾವ್ಯವನ್ನಾಗಿಯೂ ಹಾಡುತ್ತಾರೆ. ಸೋಲಿಗರ ಮತ್ತೊಬ್ಬಳು ಚೆಲುವೆ ಕುಸುಮಾಲೆ. ಕಾಡಿನ ನಡುವಿನ ಪೋಡಿನಲ್ಲಿ ಈ ಸುಂದರ ಹೆಣ್ಣನ್ನು ಬಿಳಿಗಿರಿ ರಂಗಯ್ಯ ಕಾಣುತ್ತಾನೆ. ಅವಳ ಮೇಲೆ ಅವನಿಗೆ ಮನಸ್ಸಾಗುತ್ತದೆ. ಆದರೆ, ಕಾಡುಸೋಲಿಗರ ಬೊಮ್ಮೇಗೌಡ ಅಂದರೆ ಕುಸುಮಾಲೆಯ ತಂದೆ ಇದಕ್ಕೆ ಒಪ್ಪುವವನಲ್ಲ. ಮೊದಲನೆಯದಾಗಿ ಬಿಳಿಗಿರಿ ರಂಗಯ್ಯ ಸೋಲಿಗನಲ್ಲ. ಎರಡನೆದಾಗಿ ರಂಗಯ್ಯನಿಗೆ ಈಗಾಗಲೇ ಮದುವೆಯಾಗಿ ಇಬ್ಬರು ಮಡದಿಯರಿದ್ದಾರೆ. ಆದ್ದರಿಂದ ಹೆಣ್ಣನ್ನು ಕೇಳಿ ಪಡೆಯುವ ಪ್ರಶ್ನೆಯೇ ಬರುವುದಿಲ್ಲ ಎಂಬುದು ಬಿಳಿಗಿರಿ ರಂಗಯ್ಯನಿಗೂ ಗೊತ್ತಿದೆ. ಆದ್ದರಿಂದ ಏನು ಮಾಡುವುದು? ಮೊದಲು ಕುಸುಮಾಲೆಯ ಮನಸ್ಸನ್ನು ಕದಿಯುತ್ತಾನೆ. ನಂತರ ಅವಳನ್ನು ಅಪಹರಿಸಿ ಮದುವೆ ಮಾಡಿಕೊಳ್ಳುತ್ತಾನೆ. ಹೀಗೆ ಅಪಹರಣದ ಮೂಲಕ ರಂಗಯ್ಯ ಮತ್ತು ಕುಸುಮಾಲೆಯರು ಗಂಡ ಹೆಂಡಿರಾಗುತ್ತಾರೆ. ಇದನ್ನು ಒಪ್ಪಿಕೊಂಡ ಸೋಲಿಗ ಸಮುದಾಯದವರು ಬಿಳಿಗಿರಿ ರಂಗಯ್ಯನನ್ನು ಭಾವನನ್ನಾಗಿ ಸ್ವೀಕರಿಸುತ್ತಾರೆ. ಅಂದಿನಿಂದ ಸೋಲಿಗರಲ್ಲಿ ಅಪಹರಣ ರೂಪದ ವಿವಾಹಪದ್ಧತಿಯೇ ಬೆಳೆಯಿತು ಎಂದು ಸೋಲಿಗರು ಹೇಳುತ್ತಾರೆ. ಸೋಲಿಗರು ಇಂದು ನೆರವೇರಿಸುವ ವಿವಾಹದಲ್ಲಿಯೂ ಈ ಅಪಹರಣದ ಸಾಂಕೇತಿಕ ಆಚರಣೆಗಳು ನಡೆಯುತ್ತವೆ. ಒಂದು ಕಾಲಕ್ಕೆ ಗಂಡು ಹೆಣ್ಣನ್ನು ಅಪಹರಿಸುವ ಮೂಲಕವೇ ತನ್ನವಳಾಗಿ ಮಾಡಿಕೊಳ್ಳುವ ಅಪರೂಪದ ವಿವಾಹಪದ್ಧತಿಯೊಂದು ಸೋಲಿಗರಲ್ಲಿ ಇದ್ದುದನ್ನು ಈ ಸಾಂಕೇತಿಕ ಆಚರಣೆಗಳು ನಿಚ್ಚಳಪಡಿಸುತ್ತವೆ.

ಆದರೆ ಈ ಪದ್ಧತಿಯನ್ನು ಕುಸುಮಾಲೆ ಮತ್ತು ಬಿಳಿಗಿರಿ ರಂಗಯ್ಯನ ಸಂಬಂಧಗಳ ಜೊತೆಯಲ್ಲಿ ಬೆಸೆದಿರುವುದು ತುಂಬ ಔಚಿತ್ಯಪೂರ್ಣವಾಗಿದೆ. ಈಗಾಗಲೇ ದೈವವಾಗಿದ್ದ ಬಿಳಿಗಿರಿ ರಂಗಯ್ಯ ಸೋಲಿಗರ ಭಾವ ನೆಂಟನಾದ ಮೇಲೆ ಅವನನ್ನು ಪೂಜಿಸಲೇಬೇಕು ತಾನೇ? ಈಗ ಎಷ್ಟರ ಮಟ್ಟಿಗೆ ಸೋಲಿಗರು ಬಿಳಿಗಿರಿ ರಂಗಯ್ಯನ ಭಕ್ತರಾಗಿದ್ದಾರೆ ಎಂದರೆ ಹಾಲಕ್ಕಿ ಒಕ್ಕಲಿಗರು ಮತ್ತು ಗೊಂಡರು ತಿರುಪತಿ ವೆಂಕಟರಮಣನ ಭಕ್ತರಾದಂತೆಯೇ ಈ ಪ್ರಸಂಗ ಕೂಡ.

ಇಲ್ಲಿ ನಮ್ಮ ದೈವಗಳ ಸಂಬಂಧದಲ್ಲಿ ಉಂಟಾಗಿರುವ ಬಹುಮುಖ್ಯವಾದ ಮತ್ತು ಅಪರೂಪದ ವೈವಾಹಿಕ ಸಂಬಂಧಗಳನ್ನು ನೆನಪಿಸಿಕೊಳ್ಳುವ ಅಗತ್ಯವಿದೆ. ಮೇಲುಕೋಟೆಯ ಚೆಲುವರಾಯನಿಗೆ ವರನಂದಿ ಪ್ರೇಯಸಿಯಾಗಿ ಬರುವುದು, ನಂಜನಗೂಡು ನಂಜುಂಡನಿಗೆ ಬೆಟ್ಟದ ಚಾಮುಂಡಿ ಪ್ರೇಯಸಿಯಾಗುವುದು, ಬಿಳಿಗಿರಿ ರಂಗಯ್ಯನಿಗೆ ಕುಸುಮಾಲೆ ಪ್ರೇಯಸಿಯಾಗುವುದು, ಬೇಲೂರು ಚೆನ್ನಕೇಶವನಿಗೆ ಮಳಲಿಯ ಗಿಡ್ಡಮ್ಮ ಪ್ರೇಯಸಿಯಾಗುವುದು, ಉಜ್ಜನಿಯ ವರದರಾಜನಿಗೆ ಚೌಡಮ್ಮ ಪ್ರೇಯಸಿಯಾಗುವುದು, ತಿರುಪತಿ ವೆಂಕಟರಮಣನಿಗೆ ಅಲಮೇಲು ಮಂಗಮ್ಮ ಪ್ರೇಯಸಿಯಾಗುವುದು–ಇವೆಲ್ಲ ವಿಚಿತ್ರ ಪ್ರಸಂಗಗಳಂತೆ ಕಂಡರೂ ನಮ್ಮ ದೇವ–ದೇವಿಯರ ಜಗತ್ತಿನಲ್ಲಿ ತುಂಬ ಕುತೂಹಲಕಾರಿಯಾದ ಸಂಗತಿಗಳು. ಅದರಲ್ಲಿಯೂ ವೈದಿಕ ಸಂಪ್ರದಾಯದ ವೈಷ್ಣವ ದೇವತೆಗಳು ಗಂಡಂದಿರಾಗಿ ಸ್ಥಳೀಯ ದೇವಿಯರು ಪತ್ನಿಯರಾಗಿ ಸೇರ್ಪಡೆಗೊಂಡ ಈ ಐತಿಹಾಸಿಕ ಪ್ರಸಂಗಗಳನ್ನು ಮುಂದಿನ ಅಧ್ಯಯನಗಳಲ್ಲಿ ವಿವರಿಸಲು ಪ್ರಯತ್ನಿಸಲಾಗುವುದು. ಈಗ ಬಿಳಿಗಿರಿ ರಂಗಯ್ಯ ಮತ್ತು ಕುಸುಮಾಲೆಯ ಪ್ರಸಂಗವನ್ನು ನೋಡೋಣ. ಈ ಸಂಬಂಧದಲ್ಲಿ ವಿದ್ವಾಂಸರೊಬ್ಬರು ಹೀಗೆ ಹೇಳುತ್ತಾರೆ. "ರಂಗನಾಥನ ಮತ್ತು ಸ್ಥಾನಿಕ ಸಮುದಾಯಗಳ ಅಮ್ಮಂದಿರ ಈ ಪ್ರಣಯಸಂಬಂಧ ಕಲಹವನ್ನು ಉಂಟುಮಾಡಿದರೂ, ಅದನ್ನು ವಿಧಿಬದ್ಧವಾಗಿ ಒಪ್ಪಿಕೊಂಡು ಅದಕ್ಕೂ ಒಂದು ಸ್ಥಾನ ಕಲ್ಪಿಸಲಾಗುತ್ತದೆ. ಅಷ್ಟೇ ಅಲ್ಲ, ಅದನ್ನು ಮುಂದುವರೆಸಿಕೊಂಡು ಬರಲಾಗುತ್ತದೆ. ಎಂದರೆ ಈ ದೇವತೆಯ ವೈವಾಹಿಕ ಚೌಕಟ್ಟಿಗಿಂತ ಆತನ ಪ್ರಣಯಸಂಬಂಧವೇ ಸ್ಥಾನಿಕ ಸಂದರ್ಭದಲ್ಲಿ ಹೆಚ್ಚು ಪ್ರಸ್ತುತವಾಗಿರುವುದು. ಇದು ನೂರಾರು ವರ್ಷಗಳ ಮಾದರೀಕರಣದ ನಂತರವೂ ಸ್ಥಾನಿಕ ಸಂಸ್ಕೃತಿಗಳ ಜೊತೆಗೆ ಈ ದೇವತೆಗೆ ಇರುವ ಸಂಬಂಧದ ಗಾಢತೆಯನ್ನು ತೋರಿಸುತ್ತದೆ. ಈ ಸ್ಥಾನಿಕ ನಿರೂಪಣೆಗಳು ಕೇವಲ ತಮ್ಮ ಮತ್ತು ರಂಗಯ್ಯನ ಗಾಢ ಸಂಬಂಧವನ್ನು ದೇವಿಯರ ಮೂಲಕ ಸಾರಿಕೊಳ್ಳುವುದಲ್ಲದೇ, ರಂಗಯ್ಯನ ಕೌಟುಂಬಿಕ ಚೌಕಟ್ಟು ಕೃತಕ ಹಾಗೂ ತಮ್ಮ ದೇವಿಯ ಸಂಬಂಧವೇ ಜೀವಂತ ಎಂದು ಪ್ರತಿಪಾದಿಸುತ್ತದೆ. ಇಂಥ ಪ್ರತಿಪಾದನೆಯಲ್ಲಿ

PDF created with pdfFactory Pro trial version www.pdffactory.com

ರಂಗಯ್ಯನ ಕುರಿತಾಗಿ ಬೆಳೆದು ಬಂದ ದೇವಾಲಯ ಸಂಸ್ಕೃತಿ ಹಾಗೂ ಪ್ರತಿಮಾಶಾಸ್ತ್ರಗಳ ಕುರಿತು ವ್ಯಂಗ್ಯವೂ ಸೇರಿರುತ್ತದೆ. ಇದು ನಮಗೆ ಸ್ಪಷ್ಟವಾಗಿ ಕಾಣುವುದು ಬಿಳಿಗಿರಿ ರಂಗ–ಕುಸುಮಾಲೆ ಕಾವ್ಯದಲ್ಲಿ.

ಬಿಳಿಗಿರಿ ರಂಗಯ್ಯ ಈಗಾಗಲೇ ಉಲ್ಲೇಖಿಸಿದಂತೆ ವೆಂಕಟೇಶ್ವರ ಎಂದು ಶಾಸ್ತ್ರೀಯವಾಗಿ ಗುರುತಿಸಲ್ಪಟ್ಟಿದ್ದಾನೆ. ಈ ದೇವಾಲಯದ ೧೩–೧೪ನೇ ಶತಮಾನದಷ್ಟು ಹಿಂದಿನ ಭಾಗಗಳನ್ನೂ ಹೊಂದಿದೆ. ಈ ದೇವತೆ ಸ್ಥಾನಿಕವಾಗಿ ಸೋಲಿಗರ ಹಾಗೂ ಮಾದಿಗ ಮುಂತಾದ ಸಮಾಜಗಳ ಕುಲದೈವ. ಈತ ಒಬ್ಬ ಬೇಟೆಯಾಡುವ ದೇವತೆಯಾಗಿದ್ದು ಸದಾ ಅರಣ್ಯದಲ್ಲಿ ಓಡಾಡುತ್ತಿರುತ್ತಾನೆ. ಹಾಗಾಗಿ ಈ ದೇವತೆಗೆ ಮಾದಿಗರು ಎರಡು ವರ್ಷಕ್ಕೊಮ್ಮೆ ದೊಡ್ಡ ಪಾದುಕೆಗಳನ್ನು ಮಾಡಿ ಸಲ್ಲಿಸುತ್ತಾರೆ. ಸೋಲಿಗರು ಕೂಡ ಈತನನ್ನು ಭಾವರಂಗಯ್ಯ ಎಂದು ಗುರುತಿಸುತ್ತಾರೆ. ಏಕೆಂದರೆ ಈತ ಸೋಲಿಗರ ದೇವಿಯಾದ ರಂಗಿಯ ಜೊತೆ ಸಂಬಂಧ ಹೊಂದಿದ್ದಾನೆ ಹಾಗೂ ಕುಸುಮಾಲೆ ಆತನ ಅತ್ಯಂತ ಮೆಚ್ಚಿನ ಪ್ರೇಯಸಿ. ಬಿಳಿಗಿರಿಯ ಜಾತ್ರೆಯ ಸಮಯದಲ್ಲಿ ಸೋಲಿಗರು ತಮ್ಮ ದೇವಿಯನ್ನು ತಂದು ಕಲ್ಯಾಣಿಯ ಬಳಿ ಗುಡಿಸಲು ಹಾಕಿ ಇಡುತ್ತಾರೆ. ರಂಗ ರಾತ್ರಿ ಅವಳಲ್ಲಿಗೆ ಬರುತ್ತಾನೆ ಎಂದು ಅವರು ನಂಬುತ್ತಾರೆ. ಸೋಲಿಗರ ಹಾಡು ನಿರೂಪಿಸುವಂತೆ ಆತ ತನ್ನ ಹೆಂಡತಿಯರು, ಆಳುಕಾಳು ಹಾಗೂ ಅರಮನೆಯಿಂದ ಹೊರಗೆ ಓಡಿ ಬರಲು ಸದಾ ಹೊಂಚುತ್ತಿರುತ್ತಾನೆ. ಆದರೆ ಆತನನ್ನು ಅಲ್ಲಿ ಬಲಾತ್ಕಾರವಾಗಿ ಬಂಧಿಸಲಾಗಿದೆ. ಇದಕ್ಕೆ ಸಂಬಂಧಿಸಿದ ಹಾಡುಗಳಲ್ಲಿ ವಿಭಿನ್ನ ವಿವರಗಳು ಬರುತ್ತವೆಯಾದರೂ ಅವುಗಳ ಸಾರಾಂಶವನ್ನು ಈ ಕೆಳಗಿನಂತೆ ನೀಡಬಹುದು.

ರಂಗಯ್ಯನನ್ನು ಆತನ ಹೆಂಡತಿಯರಾದ ಲಕ್ಕಮ್ಮ ಹಾಗೂ ತೊಳಚಮ್ಮ ಸರ್ವಕಾವಲು ಹಾಕಿ ಕಾಯುತ್ತಿರುತ್ತಾರೆ. ಬೇಹುಗಾರಿಕೆಗೆ ಹನುಮಪ್ಪನನ್ನು ನೇಮಿಸಿರುತ್ತಾರೆ. ರಂಗಯ್ಯನು ತನ್ನ ಹೆಂಡತಿಯರು ನಿದ್ದೆ ಮಾಡುತ್ತಿರುವಾಗ ಸದ್ದಿಲ್ಲದೇ ಓಡಿ ಹೋಗುತ್ತಾನೆ(ಒಂದು ಪಾಠದ ಪ್ರಕಾರ ತನ್ನಂಥದೇ ಮರದ ಪ್ರತಿಮೆಯೊಂದನ್ನು ಮಾಡಿ ಹೆಂಡತಿಯ ಮಧ್ಯೆ ಮಲಗಿಸಿ ಹೋಗುತ್ತಾನೆ). ಹನುಮಂತ ಇವನನ್ನು ನೋಡಿ ಬೆನ್ನಟ್ಟುತ್ತಾನೆ. ಆದರೆ ರಂಗ ಹನುಮಂತನನ್ನು ತೇರಿಗೆ ಕಟ್ಟಿಹಾಕಿ ಈ ಸೂಳೆ ರಂಗಿಯ ಗುಡಿಸಲಿಗೆ ಹೋಗುತ್ತಾನೆ. ಮಾರನೆಯ ದಿನ ಲಕ್ಕಮ್ಮ, ತೊಳಚಮ್ಮ ರಂಗನನ್ನು ಹುಡುಕಿಕೊಂಡು ಹನುಮಂತನ ಸಹಾಯದಿಂದ ರಂಗಿಯ ಗುಡಿಸಲಿಗೆ ಹೋಗಿ ಗುಡಿಸಲನ್ನು ಒದ್ದು ಕೆಡವಿ ರಂಗನನ್ನು ವಾಪಸ್ಸು ಕರೆತರುತ್ತಾನೆ(ಒಂದು ಪಾಠದ ಪ್ರಕಾರ ಸೂಳೆ ರಂಗಿ ೯೦೦೦ ಹಣ ಕೊಡದ ಹೊರತು ವಾಪಸ್ಸು ಹೋಗುವಂತಿಲ್ಲ ಎಂದು ಆತನನ್ನು ಮನೆಯಲ್ಲಿ ಇಟ್ಟಿರುತ್ತಾಳೆ.

ಲಕ್ಕಮ್ಮ–ತೊಳಚಮ್ಮ ಆ ಹಣವನ್ನು ಕಳುಹಿಸಿ ರಂಗಯ್ಯನನ್ನು ವಾಪಸ್ಸು ಕರೆಸಿಕೊಳ್ಳುತ್ತಾರೆ). ಮನೆಯಲ್ಲಿ ಹೆಂಡಿರಿಬ್ಬರೂ ರಂಗಯ್ಯನಿಗೆ ಅರ ಕಡ್ಡಿಯಲ್ಲಿ ಹೊಡೆದು, ಸ್ನಾನ ಮಾಡಿಸುತ್ತೇವೆಂದು ಆತನ ಮೈಮೇಲೆ ಬೊಕ್ಕೆ ಏಳುವ ಹಾಗೆ ಕುದಿ ನೀರನ್ನು ಸುರಿದು ಉಪವಾಸ ಕೆಡವಿ ಹಿಂಸಿಸುತ್ತಾರೆ. ಆಗ ರಂಗಯ್ಯ ಸತ್ತವನಂತೆ ನಟಿಸುತ್ತಾನೆ. ಹೆಂಡತಿಯರು ಆತನನ್ನು ಸ್ಮಶಾನಕ್ಕೆ ಒಯ್ದು ಸುಡಲು ತಯಾರಿ ನಡೆಸುತ್ತಾರೆ. ಉಪಾಯವಿಲ್ಲದೆ ರಂಗ ಅಲ್ಲಿಂದ ಎದ್ದು ಮನೆಗೆ ಓಡಿ ಬರುತ್ತಾನೆ. ಮತ್ತೆ ಆ ರಾತ್ರಿ ಆತನಿಗೆ ಕುಸುಮಾಲೆಯ ನೆನಪು ಕಾಡುತ್ತದೆ. ಆ ರಾತ್ರಿ ಮನೆಯಿಂದ ಜಾರಿಕೊಳ್ಳುತ್ತಾನೆ. ಅಡವಿಗೆ ಬಂದು ಕುಸುಮಾಲೆಯನ್ನು ಒಲಿಸಿಕೊಂಡು ಆಕೆಯ ಮನೆಯಲ್ಲಿ ತನ್ನ ಹೆಂಡತಿಯರು, ಹನುಮಂತ ಹಾಗೂ ತನ್ನ ಮೇಲುಗಿರಿಯ ಗ್ಯಾನವನ್ನು ಮರೆತು ಮಲಗಿರುತ್ತಾನೆ.

ಈ ಹಾಡುಗಳಲ್ಲಿ ರಂಗಯ್ಯನ ಮನಸ್ಸು ಸೋಲಿಗರ ಪ್ರೇಯಸಿಯ ಕಡೆಗೆ ಸೆಳೆಯುತ್ತಿದ್ದರೂ, ಅದಕ್ಕೆ ತಡೆಯಾಗಿ ಆತನ ಹೆಂಡತಿ ಹಾಗೂ ಅರಮನೆಯ ವ್ಯವಸ್ಥೆ ನಿಂತಿದೆ. ಅಲ್ಲಿಂದ ತಪ್ಪಿಸಿಕೊಂಡು ಬರುವುದಕ್ಕೆ ಅವನು ಮಾಡುವ ಉಪಾಯ ಎಂದರೆ, ತನ್ನ ಪ್ರತಿಮೆಯೊಂದನ್ನು ತಯಾರಿಸಿ ಹೆಂಡತಿಯರನ್ನು ವಂಚಿಸುವುದು, ರಂಗಯ್ಯ ಮೂಲತಃ ದಾಸಯ್ಯನಂತೆ ಜಂಗಮನಾದ ದೇವತೆಯಾಗಿದ್ದು, ಮನೆಯೊಳಗೆ ಬಂಧಿಯಾದಾಗ ಸೂಳೆ ರಂಗಿಯ ಮನೆಗೆ ಹೋಗದಿದ್ದರೆ ದಾಸನಾದುದಕ್ಕೆ ಫಲವೇನು ಎಂದು ಚಿಂತಿಸುತ್ತಾನೆ. ತಾನು ಮನೆಯೊಳಗಿಲ್ಲ ಎಂಬ ಸಂಗತಿಯನ್ನು ಮುಚ್ಚಿಡಲು ಆತನಿಗೆ ಪ್ರತಿಮೆ ಒಂದು ಉಪಾಯವಾಗಿ ಬರುತ್ತದೆ. ಅಂದರೆ ಈ ಹಾಡುಗಳು ರಂಗನ ಮೂರ್ತಿಯನ್ನು ಸುಳ್ಳುಬೊಂಬೆ ಅಥವಾ ಮಾಯದ ರೂಪ ಎಂದು ಸೂಚಿಸುತ್ತವೆ ಹಾಗೂ ನಿಜವಾದ ರಂಗ ತಮ್ಮ ಜೊತೆಗೆ ಇದ್ದಾನೆ ಎಂದು ಪ್ರತಿಪಾದಿಸುತ್ತವೆ. ಈ ಹಾಡಿನಲ್ಲಿ ಆತನು ಬೊಂಬೆಯ ಉಲ್ಲೇಖ ಬರುವಾಗ ಮಲಗಿದ ಭಂಗಿಯ ಹಾಗೂ ಜೊತೆಗೆ ಲಕ್ಕಮ್ಮ ಹಾಗೂ ತೊಳಚಮ್ಮ ನೋಡಿದಂತೆ ರಂಗನಾಥ–ತಿಮ್ಮಪ್ಪನ ಮುಖ್ಯವಾದ ಎರಡು ರೂಪಗಳಲ್ಲಿ ಒಂದು ಶಯನ ಮೂರ್ತಿಯಾಗಿದ್ದು, ಜೊತೆ ಆತನ ಹೆಂಡತಿಯನ್ನು ತೋರಿಸುತ್ತಾರೆ. ಇಲ್ಲಿ ಅವಳೂ ಅದರ ಒಂದು ಭಾಗವಾಗಿದ್ದಾಳೆ. ಈ ಹಾಡು ಅಂಥದ್ದೇನಾದರೂ ಮೂರ್ತಿ ವಿವರಗಳನ್ನು ಸೂಚಿಸಬಹುದೇ? ಒಟ್ಟಿನಲ್ಲಿ ಈ ಹಾಡು ಕೇವಲ ಒಂದು ವಿಧಿ ಆಚರಣೆ ಆಗಿರದೆ, ಸಾಂಸ್ಕೃತಿಕ ಟೀಕೆಯ ಧ್ವನಿಗಳನ್ನು ಹೊತ್ತಿದೆ ಎಂಬುದು ಸ್ಪಷ್ಟವಾಗಿದೆ."[೯]

ಈ ರೀತಿಯ ಶ್ರೀ ವೈಷ್ಣವ ಪ್ರಭಾವ ಮತ್ತು ತಿರುಪತಿ ಹಾಗೂ ಇತರೆ ವೈಷ್ಣವ ದೇವರುಗಳ ಭಕ್ತರಾದ ವಿವರಣೆಗಳನ್ನು ಹಾಗೂ ಅದರಲ್ಲಿ ರಾಮಾನುಜಾಚಾರ್ಯರ

PDF created with pdfFactory Pro trial version www.pdffactory.com

ಪಾತ್ರವನ್ನು ಈಗಾಗಲೇ ವಿವರಿಸಿರುವುದರಿಂದ ಇಲ್ಲಿಗೆ ಸೋಲಿಗರ ದೇವರ ವಿಚಾರವನ್ನು ತಾತ್ಕಾಲಿಕವಾಗಿ ನಿಲ್ಲಿಸಬಹುದೆಂದು ಕಾಣುತ್ತದೆ.

೨.೬. ಮರದ ಮೇಲಿನ ದೇವರು

ಬೆಂಗಳೂರು ನಗರದಿಂದ ಕೇವಲ ನಲವತ್ತು ಕಿ.ಮೀ. ದೂರದಲ್ಲಿರುವ ಸಾವನದುರ್ಗ ಎಂಬ ಬೆಟ್ಟ ಪ್ರದೇಶ ಬುಡಕಟ್ಟುಗಳ ಒಂದು ಮೂಲ ತಾಣ. ಸಾವನದುರ್ಗ, ಉತ್ತರಿದುರ್ಗ, ಹುಲಿಯೂರುದುರ್ಗ, ಕೃಷ್ಣಗಿರಿ, ರಾಮಗಿರಿ–ಮುಂತಾಗಿ ಏಳು ದುರ್ಗಗಳಲ್ಲಿ ಪಾಳೇಗಾರ ದೊರೆ ಕೆಂಪೇಗೌಡ ಆಳುತ್ತಿದ್ದನೆಂಬ ಇತಿಹಾಸವಿದೆ. ಮೈಸೂರು ಕಡೆಯಿಂದ ಬೆಂಗಳೂರಿಗೆ ಬರುವ ಹೆದ್ದಾರಿಯಲ್ಲಿ ರಾಮನಗರ ಸಿಗುತ್ತದೆ. ರಾಮನಗರದ ಆಸುಪಾಸುಗಳಲ್ಲಿ ಭೂಮಿಯಿಂದ ಬೃಹದಾಕಾರವಾಗಿ ಎದ್ದು ನಿಂತ ವಿವಿಧಾಕೃತಿಯ ಬಂಡೆ ಬೆಟ್ಟಗಳಿವೆ. ಚಿತ್ರವಿಚಿತ್ರ ಆಕಾರದ ಈ ಬಂಡೆಗಳ ನಡುವೆ ಅಲ್ಲಲ್ಲಿ ಕೃಷಿ ಭೂಮಿಯೂ ಹಿಂದೆ ಮಹಾ ಅರಣ್ಯಗಳಿದ್ದ ಚಹರೆಗಳೂ ಕಾಣಸಿಗುತ್ತವೆ. ಸಾವನದುರ್ಗದ ಆಸುಪಾಸಿನಲ್ಲಿ ಈಗಲೂ ಒಂದಿಷ್ಟು ಒಳ್ಳೆಯ ಅರಣ್ಯವಿದೆ. ಸಾವನದುರ್ಗದಿಂದ ಮಾಗಡಿಯವರೆಗೆ ಇರುವ ಹಳ್ಳ–ಕೊಳ್ಳ, ಬೆಟ್ಟ–ದಿನ್ನೆ ಮುಂತಾದ ವೈವಿಧ್ಯಗಳ ನಡುವೆ ಇರುವ ಕುರುಚಲು ಕಾಡಿನಲ್ಲಿ ಅಥವಾ ಹೆಬ್ಬಂಡೆಗಳ ಪದತಲದಲ್ಲಿ "ಇಲ್ಲುಗ ಪೂಜಾರಿಗಳು" ಎಂಬ ವಿಶಿಷ್ಟ ಜನ ಸಮುದಾಯವಿದೆ. ಸದ್ಯಕ್ಕೆ ರಾಮನಗರ, ಮಾಗಡಿ, ಕುಣಿಗಲ್ ತಾಲೂಕಿನ ಇಂಥ ವಿಶಿಷ್ಟ ಬಂಡೆ ಬೆಟ್ಟಗಳ ನಡುವೆ ಇವರು ಕಾಣಸಿಗುತ್ತಾರೆ. ಈ ಸೀಮಿತ ಪ್ರದೇಶದಲ್ಲಿರುವ ಇವರ ಸಂಖ್ಯೆ ಸುಮಾರು ನಾಲ್ಕು ಸಾವಿರವಿರಬಹುದು ಅಷ್ಟೆ. ಇವರ ಬಗ್ಗೆ ಅಧ್ಯಯನ ಮಾಡಿರುವ ಸಿದ್ಧಗಂಗಯ್ಯ ಕಂಬಾಳು(ನಿಸರ್ಗಪ್ರಿಯ) ಅವರು ಹೇಳುವ ಮಾತುಗಳನ್ನು ಇಲ್ಲಿ ನೀಡುವುದು ಸೂಕ್ತ ಎಂದುಕೊಂಡಿದ್ದೇನೆ. ೧೯೮೧ರಲ್ಲಿ ಕ್ಷೇತ್ರಕಾರ್ಯ ನಡೆಸಿದಾಗ ರಾಮನಗರ ತಾಲ್ಲೂಕು ಬಸವಲಿಂಗನ ದೊಡ್ಡಿ ಹುಚ್ಚಯ್ಯ(ವಯಸ್ಸು ೮೫ ಇರಬಹುದು)ನ ಹೇಳಿಕೆಯಿಂದ ಪಡೆದ ಮಾಹಿತಿ–

"ಸೋಮಿ ನಾವ್ ಅಪ್ಪನ ಕಾಲ್ದಾಗಿನಿಂದ ಕಾಡಜನ. ಕಾಡಪೂಜಾರಿಗಳೂಂತ ಆದಿಸಿಂದ ಹೇಳ್ತಾರೆ. ನಾವ್ ವಟ್ಟೆ ಪಾಡಿಗೆ ಇಲಿಯಿಡುಕೊಂಡು ತಿಂತೀವಲ್ಲ ಅದ್ಕೆ 'ಇಲಿಗ್ರು' 'ಇಲಿಗ್ರೂ' ಅಂತ ಜನ ಕೂಗತದ. ಇಲಿಗ್ರು ಅಂದರೆ ನಮ್ಮನ್ನ ಬೈದಂಗೆ ಅಂತ ತಿಳ್ಕುಳಿ. ಬಡ ಜನ ಏನಂದ್ರು ಸುಮ್ಕಿರತೀವಿ. ನಾ ಚಿಕ್ಕೋನಾಗಿದ್ದಾಗ ಯಾರ್ಸಾಮಿ ನಮ್ಮ ಗವೀ ಅತ್ರ ಬತ್ತಿದ್ದೋರು. ಅಪ್ಪನ ಕಾಲ್ದಾಗೆ ಬಟ್ಟೆ ಇಕ್ಕಿದ ಜನ ಕಂಡರೆ ದಿಗಿಲು ಬಿದ್ದು ಓಡಿ ಕಾಡಿನಾಗೆ ಮಕ್ಕೋಳತಿದ್ದು. ನನ ಕಣ ಮುಂದೇನೇ ಕಾಡು ಬಟಾ ಬಯಲಾಗಿ ಹೋಯ್ತು. ಕಾಡವಾಗೆ ಜೇನು, ಕಡ್ಡಿಜೇನು, ಹೆಜ್ಜೇನು ಯಾವ್ದೂ ಸಿಗದಂಗಾಯ್ತು. ಬೆಂಕಿ ಬಿದ್ದು ಕಾಡಗೆಣಸ್ತು ನಾಶವಾಯ್ತು. ಇನ್ನೇನು ತಿನ್ನಾನ ಇಲಿ ಹಿಡಕೊಂಡೇ ತಿಂದೋ ಅದ್ಕೆ ಇಲಿಗ್ರು ಅಂತ ಕರೀತಾರೆ."

ಇಲ್ಲುಗರು ಕೆಂದು ಬಣ್ಣದ ನಸು ಗುಂಗುರು ಕೂದಲಿನ ಮೊಂಡೆನಿಸುವ ಮೂಗಿನ ವರಟು ಜನಾಂಗ. ರಾಮನಗರದ ಬಳಿಯಿರುವ ಮೆಟ್ಟಾರೆ ಕಾಡಿನಲ್ಲಿ ವಾಸಿಸುವ ಈ ಜನರಲ್ಲಿ ಇವರ ಮೂಲ ಬಣ್ಣ ಆಕಾರಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಉಳಿದೆಡೆಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಗಳನ್ನು ಕಾಣಬಹುದು. ಒಟ್ಟಾರೆ ಇಲ್ಲಿಗರ ರೂಪಲಕ್ಷಣ ಒಂದೇ ಒಂದೇತೆರನಾಗಿರುತ್ತದೆ.

ಮಾಗಡಿ, ರಾಮನಗರ, ಸುತ್ತಲ ಬೆಟ್ಟ ಗುಡ್ಡಗಳಲ್ಲಿ ೧೨ನೇ ಶತಮಾನದಲ್ಲಿ ಶ್ರೀ ರಾಮಾನುಜಾಚಾರ್ಯರು ಹಲವು ಕಾಲ ನೆಲೆಯಾಗಿದ್ದರೆಂದು ತಿಳಿದುಬರುತ್ತದೆ. ಶೈವದೊರೆ ಕಾಂಚೀಪುರದ ರಾಜ ರಾಮಾನುಜಾಚಾರ್ಯರ ತಲೆ ಕತ್ತರಿಸಿ ತಂದವರಿಗೆ ಸುವರ್ಣ ನಾಣ್ಯಗಳನ್ನು ಬಹುಮಾನವಾಗಿ ಸಾರಿದ್ದ. ಆಚಾರ್ಯರ ತಲೆಯನ್ನು ಉಳಿಸಿಕೊಳ್ಳಲು ಅವರ ಭಕ್ತರು ರಾಮಾನುಜಾಚಾರ್ಯರಂತೆ ವೇಷ ಧರಿಸಿ ಅವರನ್ನು ಗೌಪ್ಯ ಮಾಡಿ ರಾಜನ ದಂಡನೆಗೆ ತಲೆತೆತ್ತರು. ಆ ಸಂದರ್ಭದಲ್ಲಿ ತಲೆಮರೆಸಿಕೊಳ್ಳಲು ರಾಮನಗರ, ಮಾಗಡಿ ಪ್ರಾಂತ್ಯದ ಬೆಟ್ಟಗುಡ್ಡಗಳಲ್ಲಿ ಆಚಾರ್ಯರು ವಾಸಿಸುತ್ತಿದ್ದರು ಅಥವಾ ಅವರ ಶಿಷ್ಯರಿದ್ದರು. ಇವರು ಕಾಡಿನಂಚಿನಲ್ಲಿದ್ದ ಒಕ್ಕಲಿಗರ ಮೇಲೆ ವೈಷ್ಣವಮತದ ಧಾರ್ಮಿಕ ಆಚರಣೆಗಳನ್ನು ತೆಳುವಾಗಿ ಹೊದಿಸಿದರೆಂದು ಕಾಣುತ್ತದೆ. ಒಕ್ಕಲಿಗರ ಮೂಲಕವಾಗಿಯೋ, ನೇರವಾಗಿಯೋ, ಇಲ್ಲಿಗರ ಮೇಲೆ ವೈಷ್ಣವ ದೈವದ ಪ್ರಭಾವ ಬೀರಿದ್ದು ವಿಷ್ಣು ಆರಾಧನೆಗೆ ತೊಡಗಿರಬೇಕು. ನಂತರ ಉತ್ತರ ದೇಶದಿಂದ ಕೊಳ್ಳೇಗಾಲದ ಕಡೆಗೆ ಬಂದ ಮಾದೇಶ್ವರರೆಂಬ ಶೈವ ಸಂಪ್ರದಾಯದ ಜಂಗಮರು, ಇಲ್ಲಿಗರ ಮೇಲೆ ಶಿವಾಚಾರದ ಪ್ರಭಾವ ಬೀರಿದರು. ಹೀಗಾಗಿ ಕೆಲವು ಇಲ್ಲಿಗರು ವಿಷ್ಣು ಸಂಪ್ರದಾಯವನ್ನು ಅನುಸರಿಸಿ ಹಣೆಗೆ ನಾಮವನ್ನು, ಉಳಿದವರು ಹಣೆಗೆ ವಿಭೂತಿ ಧರಿಸಿ ಶೈವಸಂಪ್ರದಾಯವನ್ನು ಅನುಸರಿಸುತ್ತಿದ್ದಾರೆ. ವಿಷ್ಣು ಸಂಪ್ರದಾಯದ ನಾಮ ಧರಿಸುವವರಿಗೆ, ಒಕ್ಕಲಿಗರ ಗೋಮಿನ ದೇಶಾಭಾಗದ ದಾಸಯ್ಯಗಳು ಗುರುಗಳಾದರೆ, ಶೈವ ಸಂಪ್ರದಾಯದ ವಿಭೂತಿದಾರಿಗಳಿಗೆ 'ಅಯ್ಯನವರು' ಗುರುಗಳಾಗಿರುತ್ತಾರೆ. ಇಲ್ಲಿಗರಿಗೆ ಹರನಾಗಲಿ, ಹರಿಯಾಗಲಿ, ಯಾರು ಏನು ಎಂಬ ವ್ಯತ್ಯಾಸ ತಿಳಿದಿಲ್ಲ. ವಿಷ್ಣು ಸಂಪ್ರದಾಯದವರು, ಎಳೆಯಮ್ಮ, ಬರೆಯಮ್ಮ ಮತ್ತು ಮಾದೇಶ್ವರನ ಒಕ್ಕಲು. ನಾಮ ಧರಿಸುವವರನ್ನು ಮುಳ್ಳು ಕುಲದವರೆಂತಲೂ ವಿಭೂತಿದಾರಿಗಳನ್ನು ಛತ್ರಿಕುಲದವರು, ಬೆಳ್ಳಿಕುಳಿಯಾದ ಬೆಳ್ಳಿ ಕುಲದವರೆಂತಲೂ ಕರೆಯುತ್ತಾರೆ.

ಲಕ್ಷ್ಮೀಪುರದ ಬಳಿ ಇರುವ ಇಲ್ಲಿಗರ ಪ್ರೇತವನವನ್ನು ನೋಡಿಬರಲೆಂದು ಹೋಗಿದ್ದಾಗ ಸಂದರ್ಶಕನಿಗೆ ಆಶ್ಚರ್ಯಕರವಾದ ಮಾಹಿತಿಯೊಂದು ದೊರೆಯಿತು. ತೊಂಬತ್ತು ವರ್ಷದ ಮುದುಕಿಯೊಬ್ಬಳು ಹದಿವಯಸ್ಸಿನ ಹುಡುಗಿಯ ಜೊತೆ

PDF created with pdfFactory Pro trial version www.pdffactory.com

ಮುರುಕು ಜೋಪಡಿಯಲ್ಲಿ ವಾಸಿಸುತ್ತಿದ್ದಾಳೆ. ಈ ಜೋಪಡಿ ಇಲ್ಲಿಗರ ಪ್ರೇತವನಕ್ಕೆ ಹೊಂದಿಕೊಂಡಿದೆ. ಒಂಟಿ ಗುಡಿಸಲ ಬಗ್ಗೆ ವಿಚಾರಿಸಿದಾಗ ಆ ಮುದುಕಿ ಮಠಕಯ್ಯನ ದೊಡ್ಡಿಯವಳೆಂದು, ಸಾಯುವ ಸ್ಥಿತಿಯಲ್ಲಿರುವಳೆಂದು, ಮಠಕಯ್ಯನದೊಡ್ಡಿ ಈ ಪ್ರೇತವನಕ್ಕೆ ಮೂರು ಮೈಲಿಗಳಾಗಿತ್ತವೆಂದೂ ಸತ್ತ ನಂತರ ಈ ಮುದುಕಿಯ ಅಂತಿಮ ಆಸೆಯಂತೆ ಆಕೆಯ ತಾಯಿಯನ್ನು ಕಲ್ಲು ಸೇವೆ ಮಾಡಿದ ಕಲ್ಲು ಗೂಡಿನಲ್ಲೇ ಇರಿಸಿ ಸಂಸ್ಕಾರ ಮಾಡಬೇಕೆಂದು, ಸತ್ತ ನಂತರ ಶವವನ್ನು ಮೂರು ಮೈಲಿ ದೂರ ಹೊರಬೇಕಾಗಿ ಬಂದಾಗ ಉದಾಸೀನದಿಂದ ಮಕ್ಕಳು ಮುದುಕಿಗೆ ಇಷ್ಟವಿಲ್ಲದ ಬೇರೆ ಸ್ಥಳದಲ್ಲಿ ಸಂಸ್ಕಾರ ಮಾಡಿ ಬಿಡುತ್ತಾರೆಂಬ ಅಪನಂಬಿಕೆ ಸಾವಿನ ಹೊಸ್ತಿಲಲ್ಲಿರುವ ಮುದುಕಿಗೆ ಸುಳಿದು, ಸಾಯುವ ಮನ್ನವೇ, ಪ್ರೇತವನದ ಹತ್ತಿರ ಬಂದು, ಜೋಪಡಿಯೊಂದರಲ್ಲಿ ಸೂರ್ಯಾಸ್ತಮಾನಗಳನ್ನು ಎಣಿಸುತ್ತಾ ಸಾವನ್ನು ಎದುರು ನೋಡುತ್ತಿರುವಳೆಂದು ತಿಳಿದುಬಂತು.

ಸತ್ತ ಮೇಲೆ ದೇವರಾಗುತ್ತಾರೆಂದು ನಂಬಿಕೆ ಹೊಂದುವ ಈ ಜನರು ವರ್ಷಕ್ಕೊಮ್ಮೆ ಯುಗಾದಿ ಹಬ್ಬದಲ್ಲಿ ಹಿರೀಕರಿಗೆ ಎಡೆಯಾಕಲು ಪ್ರೇತವನಕ್ಕೆ ಬರಬೇಕು. ಹಿರೀಕರ ಆರಾಧನೆಯನ್ನು ಇವರು ಬಿಡಲಾರರು. ಇದೀಗ ಇವರು ಆರಾಧಿಸುವ ಕೆಲವು ಶಕ್ತಿದೇವತೆಗಳು ಎಂದೋ ಒಂದು ಕಾಲದಲ್ಲಿ ಈ ಜನಾಂಗದ ಕುಲಸಂಜಾತರೇ ಆಗಿರುತ್ತಾರೆ. ಕೆಲವರು ಆಲೇ ಮರದ ಬುಡದಲ್ಲಿ ಆಕಾರವಿಲ್ಲದ ಗುಂಡುಗಳನ್ನೇ ಸಾಲಾಗಿರಿಸಿ ಹಿರೀಕರು ಎಂದು ಆರಾಧಿಸುತ್ತಿದ್ದಾರೆ.

ಇಲ್ಲಿಗರು ಆರಾಧನೆಯಲ್ಲಿ ತಮ್ಮ ಬದುಕಿನ ಅತಿ ಹೆಚ್ಚು ಭಾಗವನ್ನು ಮೀಸಲಿಡಬಯಸುವ ಮೂಲನಿವಾಸಿಗಳು. ನಯವಿಲ್ಲದ ಒರಟೊರಟು ಭಾವದಿಂದ ಇವರು ಆಚರಿಸುವ ಆರಾಧನೆ ಪೂಜೆಗಳಿಂದಾಗಿಯೇ ಈ ಜನಾಂಗವನ್ನು ಇಲ್ಲಿಗರೆಂದು ಕರೆದಿರಬಹುದು. ಕಾಡು ಎಂಬ ಪದಕ್ಕೆ ಅರಣ್ಯ, ಒರಟು, ಕ್ರೂರ, ಎಂಬ ಅರ್ಥಗಳೂ ಇವೆ ಈ ಎಲ್ಲಾ ಅರ್ಥಗಳಿಗೂ ಇವರು ಅನ್ವಯಿಸುತ್ತಾರೆ."[೧೦]

ಇಲ್ಲಿಗರ ದೈವಾರಾಧನೆಯ ಪ್ರಥಮ ಹಂತ ಅವರ ಹಿರೀಕರ ಪೂಜೆಯೇ ಆಗಿದೆ. ತೀರಿಕೊಂಡ ಹಿರಿಯರ ಹೆಸರಿನಲ್ಲಿ ಒಂದೊಂದು ಕಲ್ಲನ್ನು ಇಟ್ಟು ಒಂದೊಕ್ಕೊಂದು ಒಂದೊಂದು ಹೆಸರನ್ನಿಟ್ಟು ಪೂಜಿಸುತ್ತಾರೆ. ಅದರಲ್ಲಿಯೂ ಈ ಕಲ್ಲುಗಳನ್ನು ಹಾಲು ಮತ್ತು ಅಂಟಿನ ಅಂಶವಿರುವ ಆಲೇಮರದ ಕೆಳಗಡೆ ಇಡುವುದನ್ನು ನೋಡಿದಾಗ ಈ ಹಿರಿಯರ ಪೂಜೆಯನ್ನು ಸಮೃದ್ಧಿಯ ಫಲಾಪೇಕ್ಷೆಯಿಂದಲೇ ಮಾಡುತ್ತಾರೆಂದು ಊಹಿಸಬಹುದಾಗಿದೆ. ಅಲ್ಲದೆ ಸಾಮಾನ್ಯವಾಗಿ ಹಿರಿಯರ ಪೂಜೆಯನ್ನು ಮಹಾನವಮಿ ಅಥವಾ ಅದರ ಹಿಂದು–ಮುಂದಿನ ದಿನಗಳಲ್ಲಿ ಮಾಡುವುದು ಇತರೆ ಜನಾಂಗಗಳಲ್ಲಿ ವಾಡಿಕೆ. ಅವರ ಅಕ್ಕಪಕ್ಕದಲ್ಲೇ ಇರುವ

ಬಹುಸಂಖ್ಯಾತ ಒಕ್ಕಲಿಗರೂ ಕೂಡ ಮಹಾನವಮಿಯಲ್ಲೇ ಪಿತೃಪೂಜೆ ಮಾಡುತ್ತಾರೆ. ಆದರೆ ಇಲ್ಲಿಗರು ಈ ಪೂಜೆಯನ್ನು ಯುಗಾದಿಯಲ್ಲಿ ಮಾಡುವುದನ್ನು ನೋಡಿದರೆ ವಸಂತ ಮಾಸದ ಹೊಸ ಚಿಗುರುಗಳಂತೆ ತಮ್ಮ ಹಿರಿಯರ ಆರ್ಶೀವಾದದಿಂದ ಹೊಸ ಜೀವನಕ್ಕೆ ಅಡಿಯಿಡುವ ಆಶಯವನ್ನು ಇಲ್ಲಿ ಕಟ್ಟಿಕೊಂಡಿರಬೇಕು ಎನಿಸುತ್ತದೆ.

ಇವರ ದೈವಗಳ ಎರಡನೇ ಹಂತ ಮಾತೃದೇವತಾಪೂಜೆ. ಎಳೆಯಮ್ಮ, ಬರೆಯಮ್ಮ, ಕಾಳಮ್ಮ, ಮದ್ದೂರಮ್ಮ, ಮುಂತಾದವು ಇವರ ಮಾತೃದೇವತೆಯರು. ಗೌರಿಪೂಜೆಯನ್ನೂ ಮಾಡುವ ಸಂಪ್ರದಾಯವಿದೆ. ಗೌರಿಹಬ್ಬದಲ್ಲಿ ಮಾಡುವ ಹುತ್ತದ ಪೂಜೆ ಮತ್ತು ಹುತ್ತಕ್ಕೆ ಹಾಲೆರೆಯುವ ಸಂಪ್ರದಾಯವನ್ನು ನೋಡಿದರೆ, ಒಂದು ಕಾಲಕ್ಕೆ ಇವರು ನಾಗಾರಾಧಕರೂ ಇರಬಹುದು ಎಂದೆನಿಸುತ್ತದೆ. ಇಲ್ಲಿ ನಾಗ ಮತ್ತು ಹುತ್ತವನ್ನು ಬೇರ್ಪಡಿಸುವ ಸಂದರ್ಭವೇ ಇಲ್ಲ. ಈ ಹುತ್ತವೇ ಮಾತೃವಿನ ಜನನ ಸ್ಥಾನ ಎಂಬ ನಂಬಿಕೆ ಸರ್ವೇ ಸಾಮಾನ್ಯ. ಹೀಗಾಗಿ ಗೌರಿಹಬ್ಬದಲ್ಲಿ ಇವರು ನಡೆಸುವ ಹುತ್ತದ ಪೂಜೆಗೆ ಹೆಚ್ಚಿನ ಅರ್ಥವಿದೆ.

ಇವರ ದೈವಾರಾಧನೆಯ ಮೂರನೆಯ ಹಂತ ವೆಂಕಟರಮಣ ಮತ್ತು ಮಾದೇಶ್ವರ. ಮಾಗಡಿಯ ರಂಗನಾಥನೂ ಇವರ ದೈವವೇ. ನಾವು ಈಗಾಗಲೇ ಚರ್ಚಿಸಿದಂತೆ ವೈಷ್ಣವ ಶೈವ ಪ್ರಭಾವದ ಈ ಅಂಶಗಳು ತೀರಾ ಪ್ರಾಚೀನವಲ್ಲ ಎಂಬುದು ನೆನಪಿಡಬೇಕು. ಇಲ್ಲಿಗರ ಬಹುಮುಖ್ಯವಾದ ಆರಾಧನೆಯ ವಿಶಿಷ್ಟತೆ ಎಂದರೆ ಅವರು ತಮ್ಮ ಪೂಜಾಸಾಮಗ್ರಿಗಳನ್ನು ನೆಲದ ಮೇಲೆ ಇಡದಿರುವುದು. ಒಂದು ರೀತಿಯಲ್ಲಿ ಒಂದು ದೈವದ ಅವತಾರವೆಂದೇ ನಂಬಿದ 'ಆಲೆಯ ಮರದ' ಇವರ ಪೂಜಾಸಾಮಗ್ರಿಗಳು ಸದಾ ಇರುತ್ತವೆ. ಅವರ ಪೂಜಾರಿ ಅರ್ಥಾತ್ ಕಣಿ ಹೇಳುವ ನಿರ್ದಿಷ್ಟ ವ್ಯಕ್ತಿ ಆ ದೇವರುಗಳನ್ನು ಹೊರತೆಗೆದು ಪೂಜಿಸುತ್ತಾನೆ. ಅವರ ಹಿರಿಯರನ್ನು ಕುರಿತ ಶ್ರದ್ಧೆ ಮತ್ತು ಭಕ್ತಿಗೆ ಮತ್ತೊಂದು ಉದಾಹರಣೆ ಎಂದರೆ ಪ್ರಾಯದ ಹುಡುಗರ ಮೇಲೆ ದೈವ ಮೈತುಂಬುವ ಸಂಪ್ರದಾಯ. ಹಿರೀಕ ದೈವಗಳ ಮುಂದೆ ಹತ್ತು ಜನ ಪ್ರಾಯದ ಹುಡುಗರು ಒಬ್ಬರ ಮೇಲೆ ಒಬ್ಬರು ಹೆಗಲ ಮೇಲೆ ಕೈ ಹಾಕಿಕೊಂಡು ಸಾಲತೆಕ್ಕೆಯಲ್ಲಿ ನಿಂತಿರುತ್ತಾರೆ. ಪೂಜೆ ನಡೆಯುವಾಗ ಅಲಲೋ, ಕಲಲೋ ಎಂದು ಉನ್ಮಾದದಿಂದ ಕಾಕುಹಾಕುತ್ತಾ ಎಡಕ್ಕೂ, ಬಲಕ್ಕೂ, ತೊನೆಯುತ್ತಾ, ತೂಗುತ್ತಾ ವಾಲಾಡುತ್ತಿರುತ್ತಾರೆ. ಬಲಿಮೇಕೆಯ ಕುತ್ತಿಗೆ ಕತ್ತರಿಸುವಾಗ ತೆಕ್ಕೆಯೊಳಗಿರುವ ಪ್ರಾಯದ ಹುಡುಗರ ಕಾಕು, ಚೀತ್ಕಾರ ತಾರಕಕ್ಕೇರುತ್ತದೆ. ಹಿರೀಕರಿಗೆ ಬಲಿ ಹಾಕಿದ ಮೇಕೆ ರುಂಡ ಮುಂಡಗಳಿಂದ ದೊದದೊದನೆ ಸುರಿಯುವ ರಕ್ತವನ್ನು ಇಬ್ಬರು ಹರಿವಾಣವೊಂದಕ್ಕೆ ಶೇಖರವಾಗುವಂತೆ ನೋಡಿಕೊಂಡು ಹರಿವಾಣ ಹಿಡಿದು ನಿಲ್ಲುತ್ತಾರೆ. ಹತ್ತು ಜನ ಪ್ರಾಯದ ಹುಡುಗರಲ್ಲಿ ಕನಿಷ್ಠ ಮೂರು ಜನರಿಗೆ ಹಿರೀಕರು

PDF created with pdfFactory Pro trial version www.pdffactory.com

ಮೈತುಂಬಿ ಬರುತ್ತಾರೆ. ಹಿರೀಕ ದೈವಗಳ ಆವಾಹನೆಗೀಡಾದ ಹರೆಯದ ಈ ಹುಡುಗರು ಒಂದೇ ನೆಗೆತಕ್ಕೆ ಹಾರಿ ರಕ್ತದ ಹರಿವಾಣಕ್ಕೆ ಬಾಯಿ ಹಾಕಿ ರಕ್ತ ಹೀರುತ್ತಾರೆ ಅಥವಾ ನಾಲಗೆ ಚಾಚಿ ನೆಕ್ಕುತ್ತಾರೆ. ಇಂಥದೊಂದು ವಿಶೇಷ ಸಂದರ್ಭದಲ್ಲಿ ಮಾತ್ರ ಹಿರೀಕರು ಪ್ರಾಯದ ಹುಡುಗರ ಮೈಮೇಲೆ ಬರುತ್ತಾರೆ. ಉಳಿದಂತೆ ಕಣಿ ಹೇಳುವಾತನ ಮೇಲೆ ಆವಾಹನೆಗೊಳ್ಳುತ್ತಾರೆ.

ಇಲ್ಲಿಗರು ಕರಗದಮ್ಮಾ ಎಂದು ಕರೆಯಲಾಗುವ ಶಕ್ತಿದೇವತೆಯೊಂದನ್ನು ಆರಾಧಿಸುವ ಪರಿಪಾಟವಿದೆ ಎಂದು ಸಿದ್ಧಗಂಗಯ್ಯ ಕಂಬಾಳು ಗುರುತಿಸುತ್ತಾರೆ. ಈಕೆಯನ್ನು ರತ್ನಗಿರಿಯಮ್ಮ ಎಂದು ಕರೆಯಲಾಗುತ್ತದಂತೆ. ಕುಂಬವನ್ನು ಅಲಂಕರಿಸಿ, ಅದರಲ್ಲಿ ಈ ರತ್ನಗಿರಿಯಮ್ಮನ ಕಣ್ಣು ಮತ್ತು ಬಾಯಿಯನ್ನು ಅಂಟಿಸಲಾಗುತ್ತದೆ. ಆಗ ಕುಂಭವೇ ಒಂದು ದೇವತೆಯ ರೂಪ ಪಡೆಯುತ್ತದೆ. ಈ ದೇವತೆಯನ್ನು ಪೂಜಾರಿ ಕಣಿ ಹೇಳುವ ಸಂದರ್ಭದಲ್ಲಿ ಪೂಜಿಸಲಾಗುತ್ತದೆ. ಕಣಿ ಹೇಳುವವ ಆಕೆಯ ಮಹಿಮೆಯನ್ನು ವಿವರಿಸಿ ಹೇಳುತ್ತಾನೆ. ಇದೇ ರೀತಿ ಇವರು ಮಾದಮ್ಮ ಮತ್ತು ಏಳು ಮಕದಮ್ಮ ಎಂಬ ದೇವರನ್ನು ಆರಾಧಿಸುತ್ತಾರೆ. ಮಲೆಮಾದೇಶ್ವರನ ಆರಾಧನಾ ಸಂದರ್ಭದಲ್ಲಿ ಇವರು ತಮ್ಮ ಬಿಲ್ಲಯ್ಯ ನ ವಂಶದವರೆಂದು ಕರೆದುಕೊಳ್ಳುವ ಪ್ರಸಂಗ ಇವರ ಮೂಲವನ್ನು ಮಲೆಮಾದೇಶ್ವರನ ಬೆಟ್ಟದ ತಪ್ಪಲಿಗೆ ಕೊಂಡೊಯ್ಯುತ್ತದೆ. ಇದಕ್ಕೆ ಪೂರಕವಾಗಿ ಇವರನ್ನು 'ಕಾಡು ಸೋಲಿಗ'ರೆಂದು ಕರೆಯುವ ರೂಢಿಯೂ ಇರುವುದನ್ನು ನೋಡಿದಾಗ ಇವರು ಸೋಲಿಗರ ಒಂದು ಉಪಪಂಗಡವಿರಬಹುದೇ ಎಂಬ ಅನುಮಾನ ಸಹಜವಾಗಿಯೇ ಬರುತ್ತದೆ.

ಇಲ್ಲಿಗರಲ್ಲಿ ಕಣಿ ಹೇಳುವ ಪೂಜಾರಿಗೆ ಮಹತ್ವದ ಸ್ಥಾನ. ಆಲೇಮರದ ಮೇಲಿಟ್ಟ ದೇವರನ್ನು ಕೆಳಗಿಳಿಸಿ ಅದಕ್ಕೆ ಪೂಜೆ ಸಲ್ಲಿಸಿ ಮೈದುಂಬುವ ಪೂಜಾರಿ ಆವೇಶದಿಂದ ಪ್ರಾಸಬದ್ಧವಾಗಿ ದೇವರ ಆವಾಹನೆಗೆ ತೊಡಗುತ್ತಾನೆ. ಪಕ್ಕದಲ್ಲಿರುವ ಮತ್ತೊಬ್ಬ ತಮಟೆಯೊಂದನ್ನು ಲಯಬದ್ಧವಾಗಿ ಬಡಿಯುತ್ತಾ ಅವನ ಅವಾಹನೆಗೆ ಪೂರಕ ವಾತಾವರಣ ನಿರ್ಮಾಣ ಮಾಡುತ್ತಾನೆ. ಜನರಿಗೆ ಕಷ್ಟ ಬಂದಾಗ ರಾತ್ರಿ ಸಮಯದಲ್ಲಿ ಜನ ಗುಂಪುಗೂಡಿ ಕಣಿಯನ್ನು ಕೇಳತೊಡಗುತ್ತಾರೆ. ಕಷ್ಟಗಳನ್ನು ವಿವರಿಸಿ ಹೇಳುವ ಭಕ್ತರ ಮುಂದೆ ಅವರವರ ಆಯಾ ಕಷ್ಟಗಳಿಗೆ ತಕ್ಕಂತೆ ಶಾಂತಿಯನ್ನು ಸೂಚಿಸಲಾಗುತ್ತದೆ. ಕಣಿ ಹೇಳುವವನು ಸಾಮಾನ್ಯವಾಗಿ ತಮ್ಮ ಹಿರೀಕರ ಧ್ಯಾನದಿಂದ ಆರಂಭಿಸಿ ಮಾತೃದೇವತೆಗಳನ್ನು ನೆನೆದು ಇಷ್ಟದೈವಗಳನ್ನು ಸ್ತುತಿಸಿ, ಮಾದಮ್ಮನ ಪೂಜೆಯ ಮೂಲಕ ಮುಕ್ತಾಯಗೊಳಿಸುತ್ತಾನೆ. ಇಂಥ ಕಣಿ ಹೇಳುವ ಅನೇಕ ಪೂಜಾರಿಗಳು ಇಲ್ಲಿಗರಲ್ಲಿ ಇದ್ದಾರೆ. ಆದ್ದರಿಂದಲೇ ಇರಬಹುದು ಇವರನ್ನು 'ಕಾಡುಪೂಜಾರಿ'ಗಳು ಎಂದು ಕರೆಯಲಾಗುತ್ತದೆ.

ಈ ಹಿಂದೆ ಕೊಡಗಿನ ಫಣಿಯರ ಸಂದರ್ಭದಲ್ಲಿ ದೇವರ ಆವಾಹನೆಯನ್ನು ಕುರಿತು ಸಾಕಷ್ಟು ಚರ್ಚಿಸಲಾಗಿದೆ. ತಮ್ಮ ಇಷ್ಟ ದೈವಗಳನ್ನು ಆವಾಹಿಸಿಕೊಂಡು ತಾನೂ ದೇವರಾಗುವ, ಆ ಮೂಲಕ ತಮ್ಮ ಜನಸಮುದಾಯದ ಒಳಿತನ್ನು ಆಶಿಸುವ ಒಬ್ಬ ಮಾಂತ್ರಿಕನಾಗಿ ಕೂಡ ಈ ಕಣಿ ಹೇಳುವವ ಬದಲಾಗುತ್ತಾನೆ. ಪೂಜಾರಿಯ ಆವೇಶ ಭರಿತ ನರ್ತನ ಬೇಡುವುದಕ್ಕಿಂತ ಆದೇಶಿಸುವ ರೀತಿಯಲ್ಲಿರುತ್ತದೆ. ಕಣಿ ಕೇಳುವ ಜನ ಕೂಡ ಪೂಜಾರಿಯ ಮೂಲಕ ದೇವರಿಗೆ ಆದೇಶಿಸುವ ಕೆಲಸವನ್ನೇ ಮಾಡುತ್ತಾರೆಂದರೆ ಅದು ತಪ್ಪೇನೂ ಆಗಲಾರದು.

೨.೭. ಮಿಂಚೇರಿಯ ಹುಲಿ ಸಮಾಧಿ

ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಯ ನಡುವಿನ ಕುರಚಲು ಪ್ರದೇಶದ ಕಾಡಿನಲ್ಲಿ ವಾಸವಾಗಿರುವ ಮ್ಯಾಸಬೇಡರ ತಾಣ ಮತ್ತೊಂದು ವಿಶಿಷ್ಟ ಪ್ರದೇಶ. ಅಪೂರ್ವವಾದ ಶಿಲಾಪದರುಗಳಿಂದ ಹಾಗೂ ಪ್ರಾಚೀನವೆನಿಸಿದ ಹಲವು ರೀತಿಯ ಭೂಪದರುಗಳಿಂದ ಕೂಡಿರುವ ಈ ಪ್ರದೇಶ ಮೇಲ್ನೋಟಕ್ಕೆ ಬರಡಾಗಿ ಕಾಣುತ್ತದೆ. ನೋಡಿದಷ್ಟು ದೂರವೂ ಒಣಭೂಮಿಯ ಬರಡು ನೆಲ. ಆದರೂ ಇಲ್ಲಿ ಅನೇಕ ರಾಜರ ಮತ್ತು ಪಾಳೇಗಾರರ ಆಡಳಿತ ನಡೆದಿದೆ. ಬೇಟೆಗಾರರು ಮತ್ತು ಪಶುಪಾಲಕರ ಪ್ರಮುಖ ನೆಲೆಯಾದ ಚಿತ್ರದುರ್ಗ ಮತ್ತು ಬಳ್ಳಾರಿಗಳ ನಡುವಿನ ಈ ಭೂಪ್ರದೇಶ ಬುಡಕಟ್ಟು ಜೀವನದ ದೃಷ್ಟಿಯಿಂದ ಅತ್ಯಂತ ಮುಖ್ಯವಾದದ್ದು. ಕೃಷ್ಣಮೂರ್ತಿ ಹನೂರರು ಮ್ಯಾಸಬೇಡರ ಹುಟ್ಟಿನ ಬಗ್ಗೆ ಅವರು ಹೇಳುವ ಕಥೆಯೊಂದನ್ನು ಸಂಗ್ರಹಿಸಿದ್ದಾರೆ. ಇವರ ದೈವಾರಾಧನೆಯ ವಿವಿಧ ಹಂತಗಳನ್ನು ಈ ಕಥೆಯ ಮೂಲಕವೇ ಗುರುತಿಸುವ ಪ್ರಯತ್ನವನ್ನು ಮಾಡಬಹುದಾಗಿದೆ. ಆದ್ದರಿಂದ ಈ ಕಥೆಯನ್ನು ಇಲ್ಲಿ ನೀಡುವುದು ಸೂಕ್ತ ಎಂಬ ಭಾವನೆ ನನ್ನದು. "ಮ್ಯಾಸಬೇಡ ಬುಡಕಟ್ಟಿನ ಮೂಲಪುರುಷನ ಹುಟ್ಟು ಬ್ರಹ್ಮ, ವಿಷ್ಣು, ಮಹೇಶ್ವರರಿಂದಲೇ ಆಯಿತು. ಈ ತ್ರಿಮೂರ್ತಿಗಳು ಪ್ರಪಂಚದ ಮೇಲೆ ಬರುತ್ತಿದ್ದರು. ಆಗ ಭೂಮಿಯ ಮೇಲೆ ಬರೀ ಅರಣ್ಯವೇ ಇದ್ದಿತು. ನರಮನುಷ್ಯರ ಸುಳಿವೂ ಇರಲಿಲ್ಲ. ತ್ರಿಮೂರ್ತಿಗಳು ಪ್ರಪಂಚದ ಮೇಲೆ ಬರುತ್ತಾ ಮೊಳಕಾಲ್ಮೂರು ಬಳಿಯ ಬಿ.ಜಿ.(ಬೊಮ್ಮಗೊಂಡನಕೆರೆ) ಕೆರೆಯ ಬಳಿ ಕಮರದ ಕಾನಿನಲ್ಲಿ ಬಂದು ಸರೋವರದ ಮುಂದೆ ಇಳಿದರು. ಆಗ ಬೆಳಗಾಗುತ್ತಲಿತ್ತು. ಮೂರು ಜನವೂ ಮುಖಮಾರ್ಜನ ಮಾಡಿ ಬ್ರಹ್ಮ, ವಿಷ್ಣು, ಇಬ್ಬರೂ ಹಣೆಗೆ ನಾಮ ಇಟ್ಟುಕೊಂಡರು. ಹಾಗೆ ನಾಮವಿಡುವಾಗ ಅದರ ಶುದ್ಧಿಗೆ ಗೋವಿನ ಮೂತ್ರ ಬೇಕಾಯಿತು. ಆಗ ಬ್ರಹ್ಮ ಒಂದು ಒಂಟಿಕೊಂಬಿನ ಬಲ್ಲಾವನ್ನು, ಪಂಪಾದ್ರಿ ಎಂಬ ಬಸವನನ್ನು ಸೃಷ್ಟಿಸಿದ. ಗೋವಿನ ಮೂತ್ರದ ಒಂದು ಹನಿಯನ್ನು ತೆಗೆದು ಬ್ರಹ್ಮ, ವಿಷ್ಣು, ಮಹೇಶ್ವರರು ವಿಭೂತಿಯನ್ನು ಧರಿಸಿಕೊಂಡರು. ಮಹೇಶ್ವರನು

PDF created with pdfFactory Pro trial version www.pdffactory.com

ವಿಭೂತಿ ಧರಿಸುವಾಗ ವಿಭೂತಿಯ ಒಂದು ಧೂಳು ಬ್ರಹ್ಮನು ಸೃಷ್ಟಿಸಿದ ಒಂಟಿಕೊಂಬಿನ ಬಲ್ಲಾವಿನ ಕಾಲಗೊರಸಿನಲ್ಲಿ ಬಿದ್ದು ಅಲ್ಲಿ ಸಿಕ್ಕಿಹಾಕಿಕೊಂಡಿತು. ತ್ರಿಮೂರ್ತಿಗಳು ಆ ಸರೋವರವನ್ನು ಬಿಟ್ಟು ಹೋಗುವಾಗ ಅವರು ಸೃಷ್ಟಿಸಿದ ಒಂಟಿಕೊಂಬಿನ ಬಲ್ಲಾವನ್ನು, ಪಂಪಾದ್ರಿ ಬಸವನನ್ನು ನೋಡಿಕೊಳ್ಳುವವರಾರು ಎಂಬ ಯೋಚನೆ ಬರಲು, ಬ್ರಹ್ಮನು ಆ ಎರಡೂ ಜೀವರಾಶಿಗಳನ್ನು ಸಲಹುವವನು ಅವುಗಳಿಂದಲೇ ಹುಟ್ಟುವನು, ಚಿಂತೆ ಮಾಡಬೇಕಿಲ್ಲ ಎಂದ. ದಿನದಿನವೂ ಒಂಟಿಕೊಂಬಿನ ಬಲ್ಲಾವು ಮತ್ತು ಪಂಪಾದ್ರಿ ಬಸವ ಕಾಡಿನಲ್ಲಿ ಮೇಯ್ದು ಸರೋವರದಲ್ಲಿ ನೀರು ಕುಡಿದುಕೊಂಡಿದ್ದವು. ಹೀಗಿರಲು ಬಲ್ಲಾವಿನ ಕಾಲಿನ ಗೊರಸಿನಲ್ಲಿ ಸಿಕ್ಕಿಹಾಕಿಕೊಂಡಿದ್ದ ವಿಭೂತಿಯ ಧೂಳು ಒಂಬತ್ತು ತಿಂಗಳು, ಒಂಬತ್ತು ದಿನ, ಒಂಬತ್ತು ಘಳಿಗೆಯಲ್ಲಿ ಬೆಳೆದು ಗರ್ಭ ಒಡೆದು ಗಂಡು ಶಿಶುವಿನ ಜನನವಾಯಿತು. ಅದು ಕೊಳದ ತಡಿಯಲ್ಲಿ ಅಳುತ್ತಿರಲು ಆ ದಿನವೇ ವಾಯುಮಾರ್ಗದಲ್ಲಿ ಹೋಗುತ್ತಿದ್ದ ಶಿವಪಾರ್ವತಿಯರಿಗೆ ಕೇಳಿಸಿತು. ಪಾರ್ವತಿಯು ಬಂದು ಶಿಶುವಿನ ಹೊಕ್ಕುಳುರಿ ಕುಯ್ದು ಹಣೆಗೆ ಸುಟಿಗೆ ಹಾಕಿ ಮಗುವನ್ನು ಕೊಳದ ತಡಿಯಲ್ಲೇ ಮಲಗಿಸಿ ಅದಕ್ಕೆ 'ಚೆಟ್ಲು ಮಲ್ಲನಾಯಕ' ಎಂದು ಹೆಸರಿಟ್ಟರು. ಆ ಮಗುವು ಗಿಡ ಮರಗಳ ಮಧ್ಯದ ಕಾಡಿನಲ್ಲಿ, ಹುಟ್ಟಿದುದರಿಂದ ಅದಕ್ಕೆ ಚೆಟ್ಲು ಗೆಟ್ಲು ಮಲ್ಲನಾಯಕ ಎಂದು ಹೆಸರಾಯಿತು. ಆ ಶಿಶುವು ಮಲಗಿದ್ದ ಜಾಗದಲ್ಲಿಯೇ ಒಂದು ಮರವಿದ್ದು ಆ ಮರದಲ್ಲಿ ತುಡಬೆ ಜೇನು ಕಟ್ಟಿತ್ತು. ಆ ಜೇನುಗೂಡಿನಿಂದ ಜೇನು ತೊಟ್ಟಾಗಿ ಶಿಶುವಿನ ಬಾಯಿಗೆ ಬಿದ್ದು ಮಗುವು ಅಳುವುದನ್ನು ನಿಲ್ಲಿಸಿಬಿಟ್ಟಿತು. ಶಿಶು ಚೆಟ್ಲಗೊಟ್ಲು ಮಲ್ಲನಾಯಕನು ಬೆಳೆದು ಆ ಒಂಟಿಕೊಂಬಿನ ಬಲ್ಲಾವನ್ನು, ಪಂಪಾದ್ರಿ ಬಸವನನ್ನು ಸಾಕಿಕೊಂಡು ಕಾಲ ಮಾಡಿದ. ಆಗಾಗ ದೇವಲೋಕದಿಂದ ಗಂಧರ್ವ ಕನ್ಯೆಯರು ಕಮರದ ಕಾನಿನ ಸರೋವರದ ಕಡೆ ಬಂದು ನೀರಾಟವಾಡಿ ಹೋಗುತ್ತಿದ್ದರು. ಆಗ ಒಬ್ಬಳು ಗಂಧರ್ವ ಕನ್ಯೆ ಚೆಟ್ಲುಗೊಟ್ಲು ಮಲ್ಲನಾಯಕನನ್ನು ಕಂಡು ಮೋಹಗೊಂಡು ಲಗ್ನವಾಗಿ ಅಲ್ಲೇ ಇದ್ದುಬಿಟ್ಟಳು. ಇವರಿಬ್ಬರಿಗೂ ಹುಟ್ಟಿದ ಒಬ್ಬಳೇ ಹೆಣ್ಣು ಮಗಳು ಚಂಚುಲಕ್ಷ್ಮಿ. ಈಕೆ ಬೆಳೆದು ಕಾಡಿನಲ್ಲಿ ಇರುವಾಗ್ಗೆ ವಿಷ್ಣುವು, ನರಸಿಂಹನ ಅವತಾರ ತಾಳಿ ಹಿರಣ್ಯಕಶಿಪುವನ್ನು ಕೊಂದು ತನ್ನ ಪ್ರತಾಪ ಹಾಗೂ ಕೋಪವನ್ನು ತಾಳಲಾರದೆ ಬರುತ್ತಿರಬೇಕಾದರೆ, ಅವನ ಅಸಂತೋಷವನ್ನು ಚಂಚುಲಕ್ಷ್ಮಿ ತಡೆದಳು. ತಡೆದು, ಚಂಚುಲಕ್ಷ್ಮಿ ತನ್ನ ವಂಶಕ್ಕೆ ದೇವತೆಯಾಗಿ ನಿಲ್ಲಬೇಕೆಂದು ಕೇಳಿಕೊಂಡಳು. ನರಸಿಂಹನು ಚಂಚುಲಕ್ಷ್ಮಿಯನ್ನು ವಿವಾಹವಾಗಿ ಸ್ವಲ್ಪಕಾಲ ಅವಳೊಂದಿಗೆ ಸಂಸಾರ ಹೂಡಿ ದೇವಲೋಕಕ್ಕೆ ಹೋದನು. ಚಂಚುಲಕ್ಷ್ಮಿ ಮತ್ತು ನರಸಿಂಹನಿಗೆ ಹುಟ್ಟಿದ ಮೂವರು ಮಕ್ಕಳೇ ಪೆದ್ದಪ್ಪನಾಯಕ,

ಕೋರಿಮರಮಂಚನಾಯಕ, ಕೋರಿ ಪಾಪನಾಯಕ ಇವರೇ ಬೇಡ ನಾಯಕರ ಮೂಲಪುರುಷರೆನಿಸಿಕೊಂಡರು."[೧೧]

ಮ್ಯಾಸಬೇಡರ ಕುಲಮೂಲದ ಈ ಕಥೆ ಅವರ ದೈವಾರಾಧನೆಯ ವಿವಿಧ ಘಟ್ಟಗಳನ್ನು ವಿವರಿಸುತ್ತದೆ. ತಮ್ಮ ಹುಟ್ಟನ್ನು ತ್ರಿಮೂರ್ತಿಗಳ ಮೂಲದಿಂದ ಗುರುತಿಸುವುದಲ್ಲದೆ, ನರಸಿಂಹ ಹಾಗೂ ಚಂಚುಲಕ್ಷ್ಮಿಯರ ಸಂಬಂಧದಿಂದಾಗಿ ಹುಟ್ಟಿದ ಮೂವರೇ ನಾಯಕರೇ ತಮ್ಮ ಹಿರಿಯರು ಎಂದು ಹೇಳಿಕೊಳ್ಳುವ ಇಲ್ಲಿನ ಮನೋಭಾವ ಹಲವು ಪ್ರಭಾವಗಳಿಂದ ರೂಪಿತವಾಗಿದೆ ಎನ್ನದೇ ವಿಧಿಯಿಲ್ಲ. ಒಂಟಿ ಕೊಂಬಿನ ಬಲ್ಲಾವಿನ ಕಾಲಗೊರಸಿನಲ್ಲಿ ಸಿಕ್ಕಿಕೊಂಡ ವಿಭೂತಿಯ ಕಣದಿಂದ ಹುಟ್ಟುವ ಶಿಶು ತನ್ನ ಪಾಡಿಗೆ ತಾನು ನಿಸರ್ಗದಲ್ಲಿ ಬೆಳೆಯುವ ರೀತಿಯಂತೂ ತುಂಬ ಸೊಗಸಾಗಿದೆ. ಸ್ವತಃ ಪಾರ್ವತಿಯೇ ಆ ಮಗುವನ್ನು ಸಲಹುತ್ತಾಳೆ. ನಿಸರ್ಗ ಕಾಪಾಡುತ್ತದೆ. ಹೀಗೆ ಬೆಳೆದ ಮಲ್ಲನಾಯಕನಿಗೆ ಗಂಧರ್ವಕನ್ಯೆಯ ಸಂಬಂಧವನ್ನು ಕಲ್ಪಿಸಲಾಗಿದೆ. ಅವರ ಮಗಳಾದ ಚಂಚುಲಕ್ಷ್ಮಿಯು ವಿಷ್ಣುವಿನ ಅವತಾರನಾದ ನರಸಿಂಹನನ್ನು ವರಿಸುತ್ತಾಳೆ. ವೈದಿಕ ಪ್ರಭಾವಕ್ಕೆ ಒಳಗಾದ ಮತ್ತು ಅವರ ವೈಭವಯುತ ಪುರಾಣಗಳನ್ನು ತಿಳಿದ ಅವೈದಿಕ ಕೀಳರಿಮೆಯಿಂದ ಕಟ್ಟಿಕೊಂಡ ಕಥೆ ಇದಾಗಿದೆ. ಗಂಧರ್ವ ಕನ್ಯೆ ಚಂಚುಲಕ್ಷ್ಮಿಯರ ಪ್ರವೇಶ ಮಾತೃಮೂಲ ಕುಟುಂಬದ ಎಳೆಗಳನ್ನು ಹುಡುಕಲು ಸಹಾಯ ಮಾಡುತ್ತವೆ. ಇವರು ಕೂಡ ಮಾರಿಯನ್ನು ಆರಾಧಿಸುವುದರಿಂದ ಪಶುಪಾಲನೆಗೂ ಮೊದಲನೇ ಹಂತದಲ್ಲಿ ಇವರಲ್ಲಿಯೂ ಮಾತೃಮೂಲ ಕುಟುಂಬಗಳೇ ಇದ್ದವು ಎಂಬುದನ್ನು ಊಹಿಸಬಹುದಾಗಿದೆ.

ಮಧ್ಯಕರ್ನಾಟಕದ ಕುರುಚಲು ಕಾಡಿನ ಈ ಪ್ರದೇಶಕ್ಕೆ ಮ್ಯಾಸಬೇಡರು ಶ್ರೀ ಶೈಲದ ಕಡೆಯಿಂದ ಆಗಮಿಸಿರಬೇಕೆಂಬ ಊಹೆ ನಿಜವೇ ಇರಬಹುದು. ತೆಲುಗು ಮತ್ತು ಕನ್ನಡ ಎರಡೂ ಭಾಷೆಗಳನ್ನು ಆಡುವ ಮ್ಯಾಸಬೇಡರು ಪ್ರಮುಖವಾಗಿ ಪಶುಪಾಲಕರು. ಇಲ್ಲಿಯವರೆಗೆ ನಾವು ನೋಡಿದಂತೆ, ಪಶುಪಾಲನೆಯ ಹಂತದಲ್ಲಿ ಉದ್ಭವಗೊಂಡ ಅನೇಕ ಪುರುಷ ದೈವಗಳ ಆರಾಧನೆ ಇವರಲ್ಲಿಯೂ ಆರಂಭವಾಗಿದೆ. ಓಬಳದೇವರು, ಗಾದ್ರಿಪಾಲನಾಯಕ, ಸೂರಲಿಂಗ, ರಾಜದೇವರು, ಬೋರೇದೇವರು, ದೋಸೆ ದೇವರು, ಬೋರುವ(ಬೈರವ) ಬೊಮ್ಮದೇವರು, ದಡ್ಡಿ ಸೂರನಾಯಕ ಮುಂತಾಗಿ ಹನ್ನೆರೆಡು ವಿಧದ ದೇವರನ್ನು ಇವರು ಆರಾಧಿಸುತ್ತಾರೆ.

ತಮ್ಮ ಹುಟ್ಟನ್ನು ಮತ್ತು ತಮ್ಮ ಕುಲಮೂಲವನ್ನು ವೈಷ್ಣವ ಧರ್ಮದ ಜೊತೆಗೆ ಈಗ ಗುರುತಿಸಿಕೊಳ್ಳುತ್ತಿದ್ದಾರಾದರೂ ಮೂಲದಲ್ಲಿ ಇವರು ಶೈವಾರಾಧಕರಾಗಿದ್ದರು ಎಂಬುದಕ್ಕೆ ಅವರ ಬೋರೇದೇವರು, ಬೋರುವ ಮತ್ತು ಬೊಮ್ಮ ದೇವರುಗಳೇ ಸಾಕ್ಷಿ. ಗಾದ್ರಿಪಾಲನಾಯಕ ಮತ್ತು ದಡ್ಡಿ ಸೂರನಾಯಕ ಇವರು ಸಮುದಾಯದ

PDF created with pdfFactory Pro trial version www.pdffactory.com

ಸಾಂಸ್ಕೃತಿಕ ನಾಯಕರು. ಇವರು ಸಾಂಸ್ಕೃತಿಕ ವೀರನಾದ ಸೂರನಾಯಕ ತದನಂತರದಲ್ಲಿ ಸೂರಲಿಂಗೇಶ್ವರ ಆಗಿದ್ದಾನೆ. ಇವರ ಸಾಂಸ್ಕೃತಿಕ ವೀರನಾದ ಗಾದ್ರಿಪಾಲನಾಯಕ ಹೆಚ್ಚು ಪ್ರಸಿದ್ಧ ದೈವವಾಗಿದ್ದು ಅವನು ಹುಲಿಯೊಂದಿಗೆ ಹೋರಾಡಿ ಸತ್ತ ಕತೆ ಜನಜನಿತವಾದದ್ದು. ಇವರ ಪ್ರಮುಖ ಜಾತ್ರೆಗಳು ನಡೆಯುವ ಮೊಳಕಾಲ್ಮೂರಿನ ಕಂಪಳ ದೇವರ ಹಟ್ಟಿ, ಹಾಗೂ ಹೊಳಲ್ಕೆರೆ ತಾಲ್ಲೂಕಿನ ಮಿಂಚೇರಿ ಬಹುಮುಖ್ಯವಾದ ಸ್ಥಳಗಳು. ಈ ಮಿಂಚೇರಿಯ ಕಾಡಿನಲ್ಲಿ ಇರುವ ಗಾದ್ರಿ ಪಾಲನಾಯಕನ ಸಮಾಧಿ ಮ್ಯಾಸಬೇಡರಿಗೆ ಅತ್ಯಂತ ಪವಿತ್ರವಾದ ಸ್ಥಳ. ಗಾದ್ರಿಪಾಲನಾಯಕನ ಜೊತೆಯಲ್ಲಿಯೇ ಸತ್ತ ಹುಲಿಯ ಸಮಾಧಿಯೂ ಇದೆ. ಗಾದ್ರಿಪಾಲನಾಯಕ ಮತ್ತು ಹುಲಿ ಇವರ ದೈವಗಳಾಗಿ ಇಂದು ಪರಿವರ್ತಿತವಾಗಿವೆ. ಇಂಥ ಕತೆಯ ಉಲ್ಲೇಖ ಇಲ್ಲಿ ಅಗತ್ಯವೆಂದು ನಾನು ಭಾವಿಸುತ್ತೇನೆ.

ಮ್ಯಾಸಬೇಡರ ಸಾಂಸ್ಕೃತಿಕ ನಾಯಕ ಗಾದ್ರಿಪಾಲ. ಇವನು ಒಬ್ಬ ದನಗಾಹಿ, ಬಳ್ಳಾರಿ, ಚಿತ್ರದುರ್ಗದ ನಡುವಿನ ಸಂಡೂರು ಅರಣ್ಯಗಳಿಂದಾವೃತವಾದ ಜರಿಮಲೆ ಸೀಮೆ ಇವನ ಪಶುಪಾಲನೆಯ ಸ್ಥಳ. ಅದು ಹುಲಿಗಳ ಆವಾಸಸ್ಥಾನ. ಹುಲಿಗಳು ಮನುಷ್ಯರ ಹಸುಗಳನ್ನು ಕೊಲ್ಲುವುದು, ಮನುಷ್ಯರು ಹುಲಿಗಳ ಸಂತತಿಯನ್ನು ನಾಶ ಮಾಡುವುದು ನಡದೇ ಇರುತ್ತದೆ. ಇಂಥಾ ಒಂದು ಪರಸ್ಪರ ಸಾಂಪ್ರದಾಯಿಕ ದ್ವೇಷವನ್ನು ಹೋಗಲಾಡಿಸಿ ಪರಸ್ಪರ ಪ್ರೀತಿಯ ಒಪ್ಪಂದಕ್ಕೆ ಬರುವುದು ಗಾದ್ರಿಪಾಲನಾಯಕ ಕಾವ್ಯದ ಮೊದಲ ಘಟ್ಟ. ಈ ಒಪ್ಪಂದದಂತೆ ಗಾದ್ರಿಪಾಲನ ಪಶುಗಳ ರಕ್ಷಣೆಯ ಕೆಲಸವನ್ನು ಹುಲಿಯೇ ವಹಿಸಿಕೊಳ್ಳುತ್ತದೆ. ಹಾಗೆಯೇ ಹುಲಿಮರಿಗಳ ರಕ್ಷಣೆಯನ್ನು ಗಾದ್ರಿಪಾಲ ವಹಿಸಿಕೊಳ್ಳುತ್ತಾನೆ. ಈ ಒಪ್ಪಂದ ಪರಸ್ಪರರಲ್ಲಿ ಸುಖ ಶಾಂತಿ ನೆಮ್ಮದಿಗಳನ್ನು ತರುತ್ತದೆ. ಅಷ್ಟರಲ್ಲಿ ಗಾದ್ರಿಪಾಲನನ್ನು ನೋಡುವುದಕ್ಕಾಗಿ ಇಬ್ಬರು ಹೊರಗಿನ ಜನ ಬರುತ್ತಾರೆ. ಅವರ ಕೈಲಿ ಕೋವಿ ಇರುತ್ತದೆ(ಈ ಕೋವಿ ಆಧುನಿಕತೆಯ ಸಂಕೇತವೂ, ನಾಗರಿಕ ಜನರ ನಾಶಪ್ರವೃತ್ತಿಯ ಪ್ರತೀಕವೂ ಹೌದು). ಗಾದ್ರಿಪಾಲ ಮನೆಯಲ್ಲಿ ಇರುವುದಿಲ್ಲ. ಆದರೆ ಹುಲಿ ಮರಿಗಳಿರುತ್ತವೆ. ತಮ್ಮ ಕೋವಿಗಳಿಂದ ಹುಲಿಮರಿಗಳನ್ನು ಅವರು ಕೊಂದು ಬಿಡುತ್ತಾರೆ. ತನ್ನ ಮರಿಗಳ ರೋದನ ಕೇಳಿ ದೂರದಲ್ಲಿ ಹಸುಗಳನ್ನು ಮೇಯಿಸುತ್ತಿದ್ದ ಹುಲಿ ಓಡಿಬರುತ್ತದೆ. ತನ್ನ ಮರಿಗಳು ಸತ್ತು ಬಿದ್ದಿರುವುದನ್ನು ನೋಡುತ್ತದೆ. ಈ ಮನುಷ್ಯರೇ ಹೀಗೆ. ಮಾತಿಗೆ ತಪ್ಪುವವರು ಎಂದು ತಿಳಿದ ಹುಲಿ ಈ ಸಾವು ಗಾದ್ರಿಪಾಲನಿಂದಲೇ ಸಂಭವಿಸಿದೆ ಎಂದು ಭಾವಿಸುತ್ತದೆ. ಗಾದ್ರಿಪಾಲನಿಗೂ ಹುಲಿಗೂ ಏಳುದಿನಗಳ ಕಾಲ ಯುದ್ಧ ನಡೆದು ಕಡೆಗೆ ಯಾರೂ ಸೋಲದೆ ಇಬ್ಬರೂ ಸಾವನ್ನಪ್ಪುತ್ತಾರೆ. ಈ ದುರಂತ ಕಥೆ ಪ್ರಕೃತಿಯನ್ನು ಮನುಷ್ಯ ನಾಶ ಮಾಡುವ ಅಹಂಕಾರ ಮತ್ತು ತನಗೆ

ಎಲ್ಲವನ್ನು ನೀಡುವ ಪ್ರಕೃತಿಗೆ ಮೋಸ ಮಾಡುವುದರಿಂದ ಎಂಥ ದುರಂತ ಸಂಭವಿಸುತ್ತದೆ ಎಂಬ ಆಶಯವನ್ನು ಹೊತ್ತಿದೆ. ಈ ನಿಸರ್ಗದಲ್ಲಿ ಪ್ರಾಣಿ ಪ್ರಪಂಚಕ್ಕೆ ಕೂಡ ಮನುಷ್ಯನಷ್ಟೇ ನಿರ್ಭಿಡೆಯಿಂದ ಬದುಕಲು ಹಕ್ಕಿದೆ. ಅದನ್ನು ಮುರಿದಲ್ಲಿ ದುರಂತ ಸಂಭವಿಸುತ್ತದೆ ಎಂಬುದನ್ನು ಈ ಕಥೆ ಸಾರುತ್ತದೆ. ಕೋವಿ ಹಿಡಿದ ಮನುಷ್ಯನ ಆಧುನೀಕರಣಗೊಂಡ ಕಲುಷಿತ ಮನಸ್ಸು ನಿಸರ್ಗದ ನೆಮ್ಮದಿಯನ್ನು ಕಲಕುವ ಮೂಲಕ ಪ್ರಾಣಿಗಳು ಮತ್ತು ಮುಗ್ಧ ಮನುಷ್ಯರ ನಡುವಿನ ಸಂಬಂಧಕ್ಕೆ ಇತಿಶ್ರೀ ಹಾಡುವ ಸತ್ಯವನ್ನು ಹೇಳ ಹೊರಟ ಈ ದುರಂತ ಕಥೆ ಮ್ಯಾಸಬೇಡರ ಲೋಕದೃಷ್ಟಿಯನ್ನು ಅನನ್ಯವಾಗಿ ಚಿತ್ರಿಸುತ್ತದೆ.

ಮೂಲತಃ ಬೇಟೆಗಾರರೂ ಅನಂತರದಲ್ಲಿ ಪಶುಪಾಲಕರೂ ಆಗಿ ಜೀವನ ನಿರ್ವಹಿಸಿದ ಈ ಬುಡಕಟ್ಟು ವಿಜಯನಗರ ಸಾಮ್ರಾಜ್ಯದ ಸಂದರ್ಭದಲ್ಲಿ ಪ್ರಧಾನವಾಗಿ ಸೈನಿಕ ವೃತ್ತಿಯನ್ನು ಕೈಗೊಂಡಿದೆ. ನಿಪುಣ ಬೇಟೆಗಾರರೂ ಆದ ಇವರು ಸೈನ್ಯಕ್ಕೆ ಹೇಳಿ ಮಾಡಿಸಿದವರೂ ಹೌದು. ವಿಜಯನಗರ ಪತನಾನಂತರ ಅನೇಕ ಸಣ್ಣಪುಟ್ಟ ಪಾಳೆಯ ಪಟ್ಟುಗಳು ತಲೆ ಎತ್ತಿದವು. ಅಂಥ ಹಲವು ಪಾಳೆಪಟ್ಟುಗಳ ನಾಯಕರಾಗಿಯೂ ಇವರು ರಾಜ್ಯವನ್ನು ಆಳಿರಬಹುದು. ಆ ನಂತರದಲ್ಲಿ ಕಾಡಿನಲ್ಲೇ ಉಳಿದವರನ್ನು ಮ್ಯಾಸನಾಯಕರೆಂದೂ. ಊರಿನಲ್ಲಿ ಉಳಿದವರನ್ನು ಊರನಾಯಕರೆಂದೂ ಕರೆದಿರುವಂತೆ ಕಾಣುತ್ತದೆ. ಬಹುಶಃ ಸೈನಿಕರಾಗುವ ಮೂಲಕ ಆಳುವ ಜನರಿಗೆ ಹತ್ತಿರವಾದ ಇವರು ಹಲವು ಸಂದರ್ಭದಲ್ಲಿ ವೈಷ್ಣವೀಕರಣಗೊಂಡಿದ್ದಲ್ಲದೆ ತಮ್ಮ ಕುಲಮೂಲಕ್ಕೆ ವೈದಿಕ ಪುರಾಣಗಳ ಸಹಾಯವನ್ನು ಪಡೆದಂತೆ ಕಾಣುತ್ತದೆ. ಆದ್ದರಿಂದಲೇ ಇವರಲ್ಲಿ ಶೈವ ಮತ್ತು ವೈಷ್ಣವ ಎರಡೂ ಪಂಥಗಳ ಆರಾಧನೆ ರೂಢಿಯಲ್ಲಿದೆ. ಆದರೆ ಇವೆಲ್ಲವನ್ನು ಮೀರಿ ಗಾದ್ರಿಪಾಲನಾಯಕನಂಥ ಒಬ್ಬ ನಿಸರ್ಗದ ವೀರನನ್ನು ದೈವವನ್ನಾಗಿ ಪೂಜಿಸುತ್ತಿರುವುದು ಅವರ ಅನನ್ಯ ಲೋಕದೃಷ್ಟಿಯ ಸಂಕೇತವಾಗಿದೆ. ಆದ್ದರಿಂದಲೇ ಮಿಂಚೇರಿ, ಗಂಜಿಗಟ್ಟೆ ಹಾಗೂ ನನ್ನೀವಾಳದ ಜಾತ್ರೆಗಳು ಅವರ ಹಿರಿಯರ ಆರಾಧನೆಯ ಸಂಕೇತಗಳಾಗಿಯೇ ಉಳಿದಿವೆ.

೨.೮. ಗೊಲ್ಲರ ಹಟ್ಟಿ

ಕರ್ನಾಟಕದ ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳಲ್ಲಿ ವಿಶೇಷವಾಗಿ ಕಂಡುಬರುವ ಕಾಡುಗೊಲ್ಲರದು ಅತ್ಯಂತ ವಿಶಿಷ್ಟವಾದ ಜೀವನ. ಯಾವುದೇ ಇತರ ಸಮುದಾಯಗಳ ಜೊತೆಗೆ ತಮ್ಮನ್ನು ಗುರುತಿಸಿಕೊಳ್ಳಲು ಇಷ್ಟಪಡದ ಇವರ ವಾಸಸ್ಥಳಗಳು ಊರ ಸಂಸ್ಕೃತಿಯಿಂದ ಸದಾ ದೂರ. ತಮ್ಮದೇ ಆದ ಗುಡಿಸಲುಗಳ ಸಮೂಹವನ್ನು 'ಹಟ್ಟಿ' ಎಂದು ಕರೆದುಕೊಳ್ಳುವ ಇವರು ಒಂದು ನಿರ್ದಿಷ್ಟ ಜಾಗದಲ್ಲಿ

PDF created with pdfFactory Pro trial version www.pdffactory.com

ನಿಗದಿಮಾಡಿದ ಪ್ರದೇಶದಲ್ಲಿ ವಾಸಿಸುವಂಥವರು. ಇದು ಒಂದು ರೀತಿಯಲ್ಲಿ ನಿಷೇಧಿತ ಪ್ರದೇಶ. ಹಟ್ಟಿಯ ಯಜಮಾನನ ಅಪ್ಪಣೆ ಇಲ್ಲದೆ ಯಾರೂ ಪ್ರವೇಶ ಮಾಡುವಂಥ ಸ್ಥಿತಿಯೂ ಒಂದು ಕಾಲಕ್ಕಿತ್ತು. ಹಟ್ಟಿ ಎಂದು ಕರೆದುಕೊಳ್ಳುವ ಆ ಗುಡಿಸಲುಗಳ ಸಮೂಹದ ನಡುವೆ ಜುಂಜಪ್ಪನ ಅಥವಾ ಎತ್ತಪ್ಪನ ಅಥವಾ ಅವರ ಕ್ಯಾತಯ್ಯ–ಪಾತಯ್ಯರ ಗುಡಿಗಳಿರುತ್ತವೆ. ಗುಡಿ ಎಂದರೆ ಚಕ್ರಾಕಾರದ ಮೋಟುಗೋಡೆಯ ಮೇಲೆ ಮೇಲ್ಮುಖವಾಗಿ ಕಟ್ಟಿದ ಎತ್ತರದ ಸೂರು. ಇಂಥ ಒಂದು ಪುಟ್ಟ ಗುಡಿಸಲಿನ ಒಳಗೆ ದೇವರ ವಾಸ. ನಿರ್ದಿಷ್ಟಪಡಿಸಿದ ಪೂಜಾರಿಯಷ್ಟೇ ಒಳಗಡೆ ಪ್ರವೇಶ ಮಾಡಬಹುದು. ಆ ಗುಡಿಯ ಸುತ್ತ ತೀವ್ರತರವಾದ ಮುಳ್ಳಿನ ಹೆಬ್ಬೇಲಿ. ಆ ಬೇಲಿಯನ್ನು ಭೇದಿಸಿ ಯಾರೂ ಒಳಗೆ ಹೋಗುವ ಹಾಗಿಲ್ಲ. ಅಂದರೆ ಇದರ ಅರ್ಥ ಇಷ್ಟೆ. ಕಾಡುಗೊಲ್ಲರ ದೇವರು ಅವರ ದೃಷ್ಟಿಯಲ್ಲಿ ಅತ್ಯಂತ ಪವಿತ್ರವಾದದ್ದು. ಆದ್ದರಿಂದ ಇತರೆ ನಾಗರಿಕರ ಜನರ ಸೋಂಕು ಅದಕ್ಕೆ ತಟ್ಟಬಾರದು. ಇದು ದೇವರನ್ನು ಕುರಿತ ಅವರ ಪವಿತ್ರ ಕಲ್ಪನೆ. ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಯ ಅನೇಕಾನೇಕ ಕಾಡುಗೊಲ್ಲರ ಹಟ್ಟಿಗಳಲ್ಲಿ ಈ ದೃಶ್ಯ ಸರ್ವೇಸಾಮಾನ್ಯ. ಇಷ್ಟೆಲ್ಲಾ ಕಟ್ಟುನಿಟ್ಟನ್ನು ಪಾಲಿಸುವ ಈ ಜನ ಅತ್ಯಂತ ಮುಗ್ಧರು. ಸ್ನೇಹಶೀಲರು, ಕಷ್ಟಜೀವಿಗಳು. ದೇವರು ಮತ್ತು ಪಾವಿತ್ರ್ಯದ ವಿಚಾರ ಬಂದಾಗ ಅಷ್ಟೇ ನಿಷ್ಠುರರು. ಬಹುಶಃ ಇಡೀ ಕರ್ನಾಟಕದಲ್ಲಿ ಎಲ್ಲಿಯೂ ಇಷ್ಟು ಕಟ್ಟುನಿಟ್ಟಿನ ಸಂಪ್ರದಾಯಗಳನ್ನು ಕಟಿಬದ್ಧವಾಗಿ ಆಚರಿಸುವ ಬುಡಕಟ್ಟು ಇನ್ನೊಂದಿಲ್ಲ. ಒಂದು ಹೆಣ್ಣು ಹಡೆದಾಗ ಅವಳು ಸೂತಕದವಳು ಎಂಬುದು ಇವರ ಕಲ್ಪನೆ. ಆದ್ದರಿಂದಲೇ ಅವಳು ಹಡೆಯುವ ಸಂದರ್ಭಕ್ಕೆ ಹಟ್ಟಿಯ ಹೊರಗೆ ದೂರದಲ್ಲಿ ಗುಡಿಸಲು ಕಟ್ಟುತ್ತಾರೆ. ಅದರಲ್ಲಿ ಆ ಹೆಣ್ಣು ಒಬ್ಬಳೇ ವಾಸಿಸಬೇಕು. ತನ್ನ ಹೆರಿಗೆಯ ಕರ್ಮವನ್ನು ತೀರಿಸಿಕೊಳ್ಳಬೇಕು. ಈ ಕಟ್ಟುನಿಟ್ಟು ಕೂಡ ಮತ್ತಾವುದೇ ಜನಸಮುದಾಯದಲ್ಲಿ ಇಲ್ಲದಿರುವ ವಿಶಿಷ್ಟ ಪದ್ಧತಿಯಾಗಿದೆ.

ಕಾಡುಗೊಲ್ಲರು ಇಷ್ಟೆಲ್ಲಾ ಕಟ್ಟುನಿಟ್ಟಿನ ನಡುವೆ ಬಾಳಿ ಬದುಕಿದ್ದರೂ ಅವರ ಮೇಲೆ ಆಗಿರುವ ವೈದಿಕ ಪ್ರಭಾವ ನಮ್ಮನ್ನು ಬೆಚ್ಚಿ ಬೀಳಿಸುತ್ತದೆ. ಮಹಾಭಾರತದ ಕೃಷ್ಣ ಇವರ ಮೂಲ ಪುರುಷ ಎಂಬುದು ಇವರ ನಂಬಿಕೆ. ಕಾಡುಗೊಲ್ಲರಲ್ಲಿ ಗಂಡ ಸತ್ತವರು ಬಳೆ ಒಡೆಯುವುದಿಲ್ಲ ಮತ್ತು ಕುಂಕುಮ ಅಳಿಸುವುದಿಲ್ಲ. ತಾವು ವಿಧವೆಯರೆಂದು ತಿಳಿಯುವುದಿಲ್ಲ. ಕೃಷ್ಣನೇ ಅವರೆಲ್ಲರ ಪರೋಕ್ಷ ಪುರುಷ ದೈವ ಹಾಗೂ ಪತಿ. ಆದ್ದರಿಂದ ಚಿಕ್ಕ ವಯಸ್ಸಿನಲ್ಲಿ ಗಂಡ ತೀರಿಕೊಂಡರೂ ತಾವು ವಿಧವೆಯರಾಗಿದ್ದೇವೆಂಬ ಭಾವನೆ ಅವರಲ್ಲಿ ಬರುವುದಿಲ್ಲ. ಇದು ಅವರ ಪೌರಾಣಿಕವಾದ ಕಲ್ಪನೆ ಮತ್ತು ಆ ಕಲ್ಪನೆಯನ್ನು ನೇರವಾಗಿ ತಮ್ಮ ಜೀವನಕ್ಕೆ

ಆವಾಹಿಸಿಕೊಂಡಿರುವ ರೀತಿ. ಬಹುಶಃ ಕೃಷ್ಣ ಮೂಲತಃ ಗೊಲ್ಲನೇ ಆದ್ದರಿಂದ ಇದು ವೈದಿಕ ಕಲ್ಪನೆ ಎಂದು ಅರ್ಥೈಸುವುದು ಕೂಡ ತಪ್ಪಾಗಬಹುದು.

ಇಂಥ ಒಂದು ಕಲ್ಪನೆಯ ನಡುವೆಯೂ ಅವರು ಮೂಲದಲ್ಲಿ ವೈದಿಕರೋ ಅಥವಾ ಶೈವರೋ ಎಂಬುದನ್ನು ಖಚಿತವಾಗಿ ಹೇಳುವ ಪುರಾಣಗಳಿವೆ. ಅವರ ಪುರಾಣ ಮೂಲದಲ್ಲಿ ಶೈವರು ಎಂಬುದನ್ನು ಸಾರಿ ಹೇಳುತ್ತದೆ. "ಕಾಡುಗೊಲ್ಲರ ಎರಡು ಪ್ರಮುಖ ಮಹಾಕಾವ್ಯಗಳು ಜನಪ್ರಿಯವಾಗಿವೆ. ಜುಂಜಪ್ಪನ ಕಾವ್ಯ ಮತ್ತು ಎತ್ತಪ್ಪನ ಕಾವ್ಯ. ಈ ಎರಡೂ ಕಾವ್ಯಗಳಲ್ಲಿಯೂ ಶಿವ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತಾನೆ.

ಕಾಡುಗೊಲ್ಲರ ಮೂಲದೈವಗಳಾದ ಚಿತ್ರದೇವರು ಮತ್ತು ಕಾಟುಮದೇವರ ಕಥೆ ಶಿವನಿಂದಲೇ ಆರಂಭವಾಗುತ್ತದೆ. ಜುಂಜಪ್ಪ ಮತ್ತು ಎತ್ತಪ್ಪ ಕಾಡುಗೊಲ್ಲರ ಐತಿಹಾಸಿಕ ಪುರುಷರು. ಪ್ರಮುಖ ಪಶುಪಾಲಕರಾದ ಇವರು, ಸಮುದಾಯಗಳಿಗಾಗಿ ಪ್ರಾಣ ತೆತ್ತವರಾಗಿದ್ದಾರೆ. ಆದ್ದರಿಂದಲೇ ಇಂದು ಈ ಇಬ್ಬರು ಸಾಂಸ್ಕೃತಿಕ ವೀರರು ಕಾಡುಗೊಲ್ಲರ ಬಹುಮುಖ್ಯ ದೈವಗಳಾಗಿ ಪರಿಗಣಿತರಾಗಿದ್ದಾರೆ. ಈ ದೈವಗಳನ್ನು ಕುರಿತು ಕಾಡುಗೊಲ್ಲ ಕಲಾವಿದರು ಕಟ್ಟಿರುವ ಕಾವ್ಯ ಅನನ್ಯವಾದದ್ದು. ಈ ಕಾವ್ಯವನ್ನು ಗಣೆವಾದನದ (ಉದ್ದನೆಯ ಬಿದಿರು ಕೊಳಲು) ಹಿನ್ನಲೆಯಲ್ಲಿ ಸುಶ್ರಾವ್ಯವಾಗಿ ಹಾಡಲಾಗುತ್ತದೆ. ಒಬ್ಬ ಹಾಡುವವನು ಮತ್ತೊಬ್ಬ ಗಣೆ ಊದುವವನು. ಹಿಮ್ಮೇಳಗಾರನೂ ಇರಬಹುದು ಅಥವಾ ಇಲ್ಲದಿರಬಹುದು. ಒಬ್ಬನೇ ಕಲಾವಿದ ಮಂತ್ರದಂತೆ ಪಟಿಸುತ್ತ ವಚನ ರೂಪದಲ್ಲಿ ಹಾಡುವ ಸಂಪ್ರದಾಯವೂ ಉಂಟು. ಇದು ರಾಗಕ್ಕಿಂತ ಸಾಹಿತ್ಯಕ್ಕೆ ಹೆಚ್ಚು ಒತ್ತು ಕೊಡುತ್ತದೆ. ಇದಲ್ಲದೆ ತ್ರಿಪದಿಯ ರೂಪದಲ್ಲಿ ಹೆಂಗಸರು ಹಾಡುವ ಜುಂಜಪ್ಪನ ಕಾವ್ಯವೂ ಉಂಟು. ಒಟ್ಟಿನಲ್ಲಿ ಕಾಡುಗೊಲ್ಲರಲ್ಲಿ ಅಪೂರ್ವ ಕಲಾವಿದರಿದ್ದಾರೆ. ಅವರ ದೈವವನ್ನು ಮತ್ತು ಪರಂಪರೆಯ ನಡವಳಿಕೆಯನ್ನು ಪವಿತ್ರ ಭಾವನೆಯಿಂದ ಕಾಣುವ ಅವರು ತಮ್ಮ ಮೌಖಿಕ ಸಂಪ್ರದಾಯದಲ್ಲಿ ಬಹುದೊಡ್ಡ ಕಾವ್ಯವೊಂದನ್ನು ಬೆಳೆಸಿಕೊಂಡು ಬಂದಿದ್ದಾರೆ. ಜುಂಜಪ್ಪನ ಕುರಿತ ಈ ಮಹಾಕಾವ್ಯ ಅವರ ಪಶುಪಾಲಕ ಜೀವನದ ಇತಿಹಾಸವನ್ನೂ ಹೇಳುತ್ತದಲ್ಲದೆ ಅವರ ದೈವಗಳನ್ನು ಕುರಿತ ಇತಿಹಾಸವನ್ನು ನಿರೂಪಿಸುತ್ತದೆ. ಆದ್ದರಿಂದ ಜುಂಜಪ್ಪನ ಕಾವ್ಯದ ಸಂಕ್ಷಿಪ್ತ ಕಥಾಭಾಗವನ್ನು ಇಲ್ಲಿ ನೀಡುವುದು ಸೂಕ್ತ ಎಂದು ನಾನು ಭಾವಿಸಿದ್ದೇನೆ. ಇಲ್ಲಿ ಜುಂಜಪ್ಪನ ಕಾವ್ಯ ಪ್ರಾತಿನಿಧಿಕ ಎಂದು ಭಾವಿಸಿ ಈ ಕಥೆಯನ್ನು ನಿರೂಪಿಸುತ್ತೇನೆ. ಆದರೆ ಇದೊಂದೇ ಅವರ ಕಥೆಯಲ್ಲ. ಜುಂಜಪ್ಪನ ಕಾವ್ಯವಲ್ಲದೆ ಎತ್ತಯ್ಯನ ಕಾವ್ಯ, ಚಿತ್ರದೇವರ ಕಾವ್ಯ, ಕಾಟಮದೇವರ ಕಾವ್ಯ, ಕ್ಯಾತೇದೇವರ ಕಾವ್ಯ, ಪಾತೇದೇವರಕಾವ್ಯ, ಗೌರಸಂದ್ರದ ಮಾರಮ್ಮನ ಕಾವ್ಯ, ಬೊಮ್ಮಲಿಂಗನ ಕಾವ್ಯ ಮುಂತಾಗಿ ಅವರ ಆರಾಧ್ಯ ದೇವರುಗಳ

PDF created with pdfFactory Pro trial version www.pdffactory.com

ಕಾವ್ಯಗಳು ವೈವಿಧ್ಯಮಯವಾಗಿ ರೂಪಿತವಾಗಿವೆ. ಆದರೆ ಜುಂಜಪ್ಪನ ಕಾವ್ಯ ಅತ್ಯಂತ ಪ್ರಾತಿನಿಧಿಕ ಪುರಾಣವಾಗಿದ್ದು ಕಾಡುಗೊಲ್ಲರ ದೈವಿಕ ಶ್ರದ್ಧೆಯನ್ನು ಸಾರುವಂಥಾದ್ದಾಗಿದೆ.

"ಕರ್ನಾಟಕದ ಪಶುಸಂಗೋಪನಾ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದ ಪ್ರಮುಖ ಜನವರ್ಗಗಳೆಂದರೆ ಗೊಲ್ಲರು ಮತ್ತು ಕುರುಬರು. ಗೊಲ್ಲರಲ್ಲಿ ಊರುಗೊಲ್ಲರು ಮತ್ತು ಕಾಡುಗೊಲ್ಲರು ಎರಡು ಪ್ರಮುಖ ಪ್ರಭೇದಗಳಿವೆ. ಕುರುಬರಲ್ಲಿಯೂ ಈ ಪ್ರಭೇದಗಳಿವೆ. ಊರುಗಳ ನಿರ್ಮಾಣ ಹಂತದಲ್ಲಿಯೇ ಊರು ಸೇರಿರಬಹುದಾದ ಅಥವಾ ಕ್ರಮೇಣ ಊರುಗಳ ಆಕರ್ಷಣೆಗೆ ಒಳಗಾಗಿ ಒಂದು ಕಡೆ ನೆಲೆ ನಿಂತಿರಬಹುದಾದ ಈ ಊರುಗೊಲ್ಲರು ಮತ್ತು ಊರುಕುರುಬರು ಈಗಲೂ ಪಶುಸಂಗೋಪನಾ ವೃತ್ತಿಯನ್ನೇ ಅವಲಂಬಿಸಿದ್ದರೂ ಬೇಸಾಯದಲ್ಲಿ ಹಿಂದೆ ಬಿದ್ದಿಲ್ಲ. ಹಾಗೆಯೇ ಊರು ಸೇರಿದ ಕಾರಣಕ್ಕಾಗಿ ತಮ್ಮೊಡನೆ ಬಾಳುವ ಇತರೆ ಜನವರ್ಗಗಳ ಸಂಸ್ಕೃತಿಯ ಜೊತೆ ಬೆರೆತಿದ್ದಾರೆ ಕೂಡ. ಹೀಗಾಗಿ ಇವರಲ್ಲಿ 'ವಿಶಿಷ್ಟ ಜೀವನ ವಿಧಾನ ಮತ್ತು ಸಂಸ್ಕೃತಿ'ಯನ್ನು ಗುರುತಿಸುವುದು ಕಷ್ಟಸಾಧ್ಯ. ಆದರೆ ಕಾಡುಕುರುಬರು ಮತ್ತು ಕಾಡುಗೊಲ್ಲರ ಜೀವನವಿಧಾನ ಮತ್ತು ಸಂಸ್ಕೃತಿ ಇಂದಿಗೂ ವಿಶಿಷ್ಟವಾದುದೇ.

ಕರ್ನಾಟಕದ ಒಳನಾಡಿನ ಮಧ್ಯಭಾಗವೆನ್ನಬಹುದಾದ ತುಮಕೂರು, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳ ಕೆಲವು ಭಾಗಗಳಲ್ಲಿ ವಿಶೇಷವಾಗಿ ಕಂಡುಬರುವ ಈ ಕಾಡುಗೊಲ್ಲರು ತಮ್ಮ ವಾಸಕ್ಕಾಗಿ ಆಯ್ಕೆ ಮಾಡಿಕೊಂಡಿರುವ ಭೂಪ್ರದೇಶಗಳು ಕೂಡ ಅಷ್ಟೇ ವಿಶಿಷ್ಟವಾಗಿವೆ. ಕುರುಚಲು ಕಾಡುಗಳ, ಸಾಮಾನ್ಯ ಗುಡ್ಡಬೆಟ್ಟಗಳ, ಹುಲ್ಲುಗಾವಲುಗಳೇ ಪ್ರಧಾನವಾದ ಈ ಪ್ರದೇಶ ಇವರ ವೃತ್ತಿಗೆ ಪೂರಕವಾದದ್ದು. ಊರುಗಳ ಸಂಸ್ಕೃತಿಗೆ ಪರ್ಯಾಯವಾಗಿ ತಮ್ಮದೇ 'ಹಟ್ಟಿ'ಗಳ ಸಂಸ್ಕೃತಿಯನ್ನು ಪೋಷಿಸುತ್ತಾ, ಯಾವ ಕಾರಣಕ್ಕೂ ಊರಿನ ಕಲಾಪಗಳ ಜೊತೆ ಒಂದಾಗದ ಇವರು ಊರಿನ ಜನರನ್ನು ಮೈಲಿಗೆಯವರು ಎಂದೇ ಕರೆಯುತ್ತಾರೆ. ಜುಂಜಪ್ಪನ ಕಾವ್ಯವನ್ನು ಅವಲೋಕಿಸಿ ಹೇಳುವುದಾದರೆ ಬಹುಶಃ ಮೊದಲಿಗೆ ಪೂರಾ ಅಲೆಮಾರಿಗಳಾಗಿಯೇ ಜೀವನ ಸಾಗಿಸುತ್ತಿದ್ದ ಇವರು ಕ್ರಮೇಣ 'ಹಟ್ಟಿ'ಗಳನ್ನು ಕಟ್ಟಿಕೊಂಡಂತೆ ಕಾಣುತ್ತದೆ.

ಈ ಕಾವ್ಯದಲ್ಲಿ ಎರಡು ಅಂಶಗಳು ಮುಖ್ಯವಾಗುತ್ತವೆ. ಒಂದು ಕಡೆ ಈ ಗೊಲ್ಲರನ್ನು ಸಹಿಸದ ಬೇಟೆಗಾರ ಸಮೂಹ, ಮತ್ತೊಂದು ಕಡೆ ಇವರ ಇವರ ಹುಲ್ಲುಗಾವಲುಗಳನ್ನು ಕ್ರಮೇಣ ಬೇಸಾಯ ಭೂಮಿಯನ್ನಾಗಿ ಪರಿವರ್ತಿಸುತ್ತಾ ಬಂದ ಕೃಷಿ ವರ್ಗಗಳು. ಈ ಇಬ್ಬರ ನಡುವೆ ತಮ್ಮ ಅಸ್ತಿತ್ವಕ್ಕಾಗಿ ಪರದಾಡುವಂತೆ

ಕಂಡುಬರುವುದು ಒಂದು ಘಟ್ಟವಾದರೆ, ತಮ್ಮದೇ ಕುಲದ ಇತರೆ ಬೆಡಗುಗಳ ಅಸೂಯೆಯನ್ನು ಗೆಲ್ಲುವುದು ಮತ್ತೊಂದು ಘಟ್ಟ. ಮಾರನವರ ಗೊಲ್ಲರ ದನಗಳು ಬೆಳೆದು ಹೆಚ್ಚಾಗುವುದನ್ನು ಕಂಬೇರ ಗೊಲ್ಲರು ಸಹಿಸುವುದಿಲ್ಲ. ಜುಂಜಪ್ಪನಿಗೂ ಜುಂಜಪ್ಪನ ಸೋದರ ಮಾವಂದಿರಿಗೂ ಸದಾ ನಡೆಯುವ ಹೋರಾಟ ಇಂಥದ್ದೇ.

ಜುಂಜಪ್ಪನ ಕಾವ್ಯ ಈ ಎರಡು ಪಾತಳಿಗಳಲ್ಲಿ ಹರಿಯುತ್ತಾ ಹೋಗುತ್ತದೆ. ಕೇವಲ ದನಗಳನ್ನು ನಂಬಿಕೊಂಡು, ಅವುಗಳನ್ನು ಮೇಯಿಸುವ ಕಾಯಕಕ್ಕಾಗಿ ಕಾಡುಮೇಡು ಅಲೆಯುವ ಅಲೆಮಾರಿ ಜನವರ್ಗವೊಂದರ ಅತಂತ್ರ ಸ್ಥಿತಿಯ ಪ್ರತೀಕವಾಗಿ ಜುಂಜಪ್ಪ ಕಾಣಿಸಿಕೊಳ್ಳುತ್ತಾನೆ. ಅನೇಕ ಸಂದರ್ಭಗಳಲ್ಲಿ ವ್ಯಕ್ತಗೊಳಿಸುವ ಜುಂಜಪ್ಪನ ಅನಾಥತೆ ಕಾಡಿನ ಮಕ್ಕಳ ಕಡುಬಡತನವನ್ನು ನಿವೇದಿಸುತ್ತದೆ. ಮದುವೆಯಾದರೂ ಹೆಂಡತಿಯೊಡನೆ ಕೂಡಿ ಬಾಳಲಾಗದ ಜುಂಜಪ್ಪ ತನ್ನ ತಾತ ದೇವರದೈಮಾರನ ಸ್ಥಿತಿ. ಈ ಅಲೆಮಾರಿಗಳ ಸುಖವಿಲ್ಲದ ಬದುಕನ್ನು ಚಿತ್ರಿಸುತ್ತದೆ. ಬಹುಶಃ ಈ ಸ್ಥಿತಿಯೇ ಹೆಣ್ಣು ಮಕ್ಕಳನ್ನು ಅನುಮಾನಿಸುವ ಮಾನಸಿಕ ಕ್ಲೇಶಕ್ಕೂ ಒಳಗು ಮಾಡುತ್ತದೆ. ತನ್ನ ತಂದೆಯ ಅನುಪಸ್ಥಿತಿಯಲ್ಲಿ ಮಕ್ಕಳನ್ನು ಹೆತ್ತ ಜುಂಜಪ್ಪನ ತಾಯಿಯನ್ನು ಸ್ವತಃ ಜುಂಜಪ್ಪನೇ ಅನುಮಾನಿಸಿ ಹಲವು ಪರೀಕ್ಷೆಗಳಿಗೆ ಒಡ್ಡುತ್ತಾನೆ. ಹೆರಿಗೆಯಾದ ಹೆಣ್ಣು ಮಗಳು ಮೂರುತಿಂಗಳ ಕಾಲ ಪ್ರತ್ಯೇಕವಾಗಿ ಒಂಟಿ ಗುಡಿಸಲಲ್ಲಿ ಬಾಳಬೇಕಾದ ದಾರುಣ ಸ್ಥಿತಿ ಕಾಡುಗೊಲ್ಲರಲ್ಲಿ ಇಂದಿಗೂ ರೂಢಿಯಲ್ಲಿದೆ.

ಈ ಕಾವ್ಯದ ಮತ್ತೊಂದು ಪ್ರಮುಖ ಅಂಶವೆಂದರೆ ಕಾಡುಗೊಲ್ಲರು ತಮ್ಮ ದನ ಕರುಗಳಿಗೆ ನೀಡುವ ಪ್ರಾಧಾನ್ಯತೆ. ದನಗಳೇ ಅವರ ಸರ್ವಸ್ವ. ಅವೇ ಅವರ ಮೂಲದೈವಗಳು. ನೂರಾರು ರಾಸುಗಳನ್ನು ನೂರಾರು ಹೆಸರುಗಳಲ್ಲಿ ಗುರುತಿಸಿ ತಮ್ಮ 'ಗಣೆ' ಊದಿ ಕರೆಯುವ ಪರಿಯಂತೂ ಮೋಹಕವಾದದ್ದು. ಜುಂಜಪ್ಪನ ಕಾವ್ಯದ ಬಹುಭಾಗವನ್ನು ಆಕ್ರಮಿಸಿಕೊಂಡಿರುವ ಜುಂಜಪ್ಪನ ನೆಚ್ಚಿನ ಹೋರಿ 'ಬಡಮೈಲ' ಕಾಡುಗೊಲ್ಲರು ತಮ್ಮ ದನಗಳಲ್ಲಿ ಇಟ್ಟ ನಂಬಿಕೆಗೆ ಪ್ರೀತಿಗೆ ಒಂದು ಪ್ರತೀಕ. ಕಷ್ಟಗಳಿಂದ ಪೊರೆಯಬಲ್ಲ, ಗೊಲ್ಲನ ಅನುಪಸ್ಥಿತಿಯಲ್ಲಿ ಇತರೆ ದನಗಳ ಹಿಂಡನ್ನು ನಿಯಂತ್ರಿಸಬಲ್ಲ ಈ ಬಡಮೈಲ ಎಂಬ ಹೋರಿ ಅನೀತಿಯವರಿಗೆ, ಅಸೂಯೆಯವರಿಗೆ, ಕುತಂತ್ರಿಗಳಿಗೆ ಸಿಂಹಸ್ವಪ್ನ. ಹೋರಿಯ ರೂಪದ ಈ ಪ್ರತಿಮೆ ಜುಂಜಪ್ಪ ಆತ್ಮವಿಶ್ವಾಸದ ಮತ್ತೊಂದು ರೂಪ. ಕಡೆಗಣಿಸಿ ಬಿಸಾಡಿದ ಹಸುವಿನ ಕರುವೊಂದನ್ನು ಅಸಾಮಾನ್ಯವಾಗಿ ಬೆಳೆಸಿ ವೈರಿಗಳ ಹುಟ್ಟಡಗಿಸುವ ಜುಂಜಪ್ಪನ ಛಲವಾಗಲೀ, ಇಷ್ಟಾಗಿಯೂ ಅದನ್ನು 'ಬಡಮೈಲ' ಎಂದೇ ಕರೆಯುವ 'ಧ್ವನಿ'ಯಾಗಲಿ ಈ ಕಾವ್ಯದ ಒಂದು ಪ್ರಮುಖ ಅಂಶ. ಸ್ವತಃ ಜುಂಜಪ್ಪ ಕೂಡ ಎಷ್ಟೇ ಪರಾಕ್ರಮಿಯಾದರೂ ಒಬ್ಬ ಬಡವ ಎನ್ನುವ ಮಾತು ಸುಳ್ಳಲ್ಲ. ಅವನು ಅನೇಕ

PDF created with pdfFactory Pro trial version www.pdffactory.com

ಹುಲ್ಲುಗಾವಲುಗಳನ್ನು ಗೆಲ್ಲುತ್ತಾನೆ. ಚೇಳೂರ ದೊರೆಗಳನ್ನು ಗೆಲ್ಲುತ್ತಾನೆ. ಶ್ರೀಮಂತರಾದ ತನ್ನ ಸೋದರ ಮಾವಂದಿರ ಕುತಂತ್ರವನ್ನು ಬಯಲು ಮಾಡುತ್ತಾನೆ. ಇಷ್ಟೆಲ್ಲದರ ನಡುವೆಯೂ ಅವನೊಬ್ಬ ಅನಾಥನಂತೆಯೇ ಗೋಚರಿಸುತ್ತಾನೆ. ಆದರೆ ಅವನ ಛಲ, ಆತ್ಮವಿಶ್ವಾಸ ಹಾಗೂ ತಾಳ್ಮೆ ಹಾಗೂ ವೃತ್ತಿಯಲ್ಲಿನ ಪ್ರಾಮಾಣಿಕತೆ ಅವನನ್ನು ನಾಯಕನನ್ನಾಗಿಸಿವೆ. ಕಾಡುಗೊಲ್ಲರು ತಮ್ಮನ್ನು ಜುಂಜಪ್ಪನ ಜೊತೆಗೆ ಸಮೀಕರಿಸಿಕೊಳ್ಳುತ್ತಾರೆ. ಆದ್ದರಿಂದಲೇ ಅವನೊಬ್ಬ ಸಾಂಸ್ಕೃತಿಕ ವೀರನಾಗಿ ನಮ್ಮ ಮುಂದಿದ್ದಾನೆ.

ಬಹುಶಃ ಮೂಲದಲ್ಲಿ ಶೈವರಾಗಿದ್ದ ಕಾಡುಗೊಲ್ಲರು ನಂತರದ ಅವಸ್ಥಾಂತರಗಳಲ್ಲಿ ವೈಷ್ಣವರಾಗಿರುವಂತೆ ಕಾಣುತ್ತದೆ. ಇವರ ದೈವಗಳಾದ 'ಸಿತ್ತರುಲಿಂಗ' ಮತ್ತು 'ಕಾಟಮುಲಿಂಗ'(ಚಿತ್ರದೇವರು, ಕಾಟುಮದೇವರು) ಶಿವನ ಅಪೇಕ್ಷೆಯಂತೆ ಭೂಲೋಕಕ್ಕೆ ಬಂದವರು. ಇವರು ಭೂಮಿಗೆ ಬಂದಾಗ ಇವರ ಬಂಗಾರದ ರಥವನ್ನು ಕಸಿದುಕೊಳ್ಳಲು ಯತ್ನಿಸುವ ಬ್ರಾಹ್ಮಣನಿಗೆ ಇವರು ಕಲಿಸುವ ಪಾಠ ತುಂಬ ಮಾರ್ಮಿಕವಾಗಿದೆ. ಈ ಇಬ್ಬರು ದೇವರ ನಂತರ ಕಾಡುಗೊಲ್ಲರ ದೈವವಾಗಿ ಪೂಜಿಸಲ್ಪಡುತ್ತಿರುವ ಜುಂಜಪ್ಪ ಕೂಡ ವೀರಭದ್ರನ ಅವತಾರ ಎಂದೇ ಅವರು ನಂಬುತ್ತಾರೆ. ಹಾಗೆಯೇ ಜುಂಜಪ್ಪನನ್ನು ಶ್ರೀಕೃಷ್ಣನ ವ್ಯಕ್ತಿತ್ವದ ಸಂವಾದಿ ರೂಪವಾಗಿ ಕೂಡ ಕಾಣುತ್ತಾರೆ. ಅವನ ಸೋದರ ಮಾವಂದಿರನ್ನು ಅವನು ನಾಶ ಮಾಡುವ ಆಶಯ ಮಹಾಭಾರತದ ಕೃಷ್ಣನನ್ನೇ ನೆನಪಿಸುತ್ತದೆ. ಈಗಿನ ಕಾಡುಗೊಲ್ಲರು ಸಂಪೂರ್ಣವಾಗಿ ವೈಷ್ಣವೀಕರಣಕ್ಕೊಳಗೊಂಡಿದ್ದು ವೆಂಕಟರಮಣನನ್ನು ಪೂಜಿಸುತ್ತಾರೆ ಹಾಗೆಯೇ ಬೆಟ್ಟದ ರಂಗಸ್ವಾಮಿ ಕೂಡ ಇವರ ದೇವರು. ಕಾವ್ಯದಲ್ಲಿ ಬರುವ ಗೌರಸಂದ್ರದ ಮಾರಿಯ ಪಾತ್ರವಂತೂ ಅನೇಕ ಸಂದರ್ಭಗಳಲ್ಲಿ ಜುಂಜಪ್ಪನ ರಕ್ಷಣೆಗಾಗಿಯೇ ಬರುವಂತಿದೆ. ಹಾಗೆಯೇ ಇವತ್ತಿಗೂ ಕೂಡ ಕಾಡುಗೊಲ್ಲರು ಮಾರಿಯ ಆರಾಧನೆಯನ್ನು ಅಷ್ಟೇ ನಿಷ್ಠೆಯಿಂದ ಮಾಡುತ್ತಾರೆ. ಒಟ್ಟಿನಲ್ಲಿ ಕಾಡುಗೊಲ್ಲರ ಈ ಕಾವ್ಯ ಅವರ ಸಂಕೀರ್ಣವಾದ ಆರಾಧನಾ ಪದ್ಧತಿಗಳನ್ನು, ಅವರ ಜೀವನ ವೈವಿಧ್ಯವನ್ನು ಹಾಗೆಯೇ ಒಂದು ಜನವರ್ಗದ ಆಶೋತ್ತರಗಳನ್ನು ಬಿಂಬಿಸುವ ಒಂದು ಅತ್ಯಂತ ಮಹತ್ವದ ಸಾಂಸ್ಕೃತಿಕ ಪುರಾಣವಾಗಿ ನಮ್ಮನ್ನು ಸೆಳೆಯುತ್ತದೆ."

ಕಾಡುಗೊಲ್ಲರ ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡಿರುವ ಕಾಳೇಗೌಡ ನಾಗವಾರ ಅವರು ಅವರ ದೈವಾರಾಧನೆಯ ಒಳವಿವರಗಳನ್ನು ಹೀಗೆ ದಾಖಲಿಸುತ್ತಾರೆ. "ಹಂಚಿಹುಲ್ಲು ಬಾದೆಹುಲ್ಲು ಮತ್ತು ಸೋಗೆಗರಿಗಳಲ್ಲಿ ತಾವು ವಾಸ ಮಾಡುವ ಗುಡಿಸಲುಗಳನ್ನು ನಿರ್ಮಿಸುವ ಕಾಡುಗೊಲ್ಲರು ತಮ್ಮ

ದೇವಾಲಯಕ್ಕಾಗಿ ಒಂದು ಪುಟ್ಟ ಗುಡಿಸಲು ಕಟ್ಟಿರುತ್ತಾರೆ; ಇದನ್ನು ಗುಬ್ಬ ಎಂದು ಕರೆಯಲಾಗುತ್ತದೆ. ಪ್ರಸ್ತುತ ಹಟ್ಟಿಯಲ್ಲಿ ಈ ಬಗೆಯ ಮೂರು ಗುಬ್ಬಗಳು ಇದ್ದು, ಅವುಗಳಲ್ಲಿ ಜುಂಜಪ್ಪ, ಚಿತ್ತದೇವರು, ಎತ್ತಪ್ಪ ಮತ್ತು ಕಣತಿ ತಮ್ಮಪ್ಪ ದೇವರುಗಳಿವೆ. ಬೀಗ ಹಾಕಲಾಗಿರುವ ಪೆಟ್ಟಿಗೆಯಲ್ಲಿ ಜುಂಜಪ್ಪನು ಬಳಸುತ್ತಿದ್ದನೆನ್ನಲಾದ ವಸ್ತುಗಳನ್ನು ಯಾರೊಬ್ಬರಿಗೂ ತೋರಿಸದಂತೆ ಇಡುತ್ತಾರೆ. ಈ ಗುಬ್ಬಗಳ ಸುತ್ತಲೂ ಮುಳ್ಳಿನ ಬೇಲಿಯನ್ನು ಹಾಕಲಾಗಿದೆ. ಜುಂಜಪ್ಪನ ಗುಬ್ಬದ ಬಾಗಿಲಿನ ಹಿತ್ತಾಳೆ ತಗಡಿನಲ್ಲಿ ಜುಂಜಪ್ಪನ ಪುರಾಣದಲ್ಲಿ ಕಾಣಿಸಿಕೊಳ್ಳುವ ಆತನ ಬಡಮೈಲ ಎಂಬ ಹೋರಿಯ ಚಿತ್ರ ಮತ್ತು ಎತ್ತಯ್ಯನ ಪುರಾಣದಲ್ಲಿನ ಸೀಳುತಲೆ ಚಿಕ್ಕರಂಭೆ ಎಂಬ ಪ್ರಖ್ಯಾತ ಹಸುವಿನ ಚಿತ್ರಗಳು ಇವೆ. ಜುಂಜಪ್ಪನು ನಿಜರೂಪದಲ್ಲಿ ಕಂಡರೆ, ನೋಡಿದವರು ಸುಟ್ಟು ಹೋಗುವರೆಂದು, ಆತನು ಸರ್ಪದ ರೂಪದಲ್ಲಿ ಕಾಣಿಸಿಕೊಳ್ಳುತ್ತಾನೆಂದು ಈ ಜನ ನಂಬುತ್ತಾರೆ. ತನ್ನ ಸೋದರ ಮಾವಂದಿರ ವಿರುದ್ಧ ಜುಂಜಪ್ಪನು ಹೋರಾಡಿ ಚಿಕ್ಕವಯಸ್ಸಿನಲ್ಲೇ ಮಡಿಯುತ್ತಾನೆ. ಅತ್ಯಂತ ಸಾಹಸಿಯೂ, ನಿಯಮಬದ್ಧನೂ, ನ್ಯಾಯಪಕ್ಷಪಾತಿಯೂ ಆದವನು ಅವಿವಾಹಿತ ನಾಗಿದ್ದು ದನಗಾಹಿ ಬದುಕಿನ ಕಷ್ಟಗಳನ್ನೆಲ್ಲ ಸಂಪೂರ್ಣವಾಗಿ ಅನುಭವಿಸಿ ಮೇಲೇರುತ್ತಾನೆ. ಜುಂಜಪ್ಪನ ಇಷ್ಟೇಲ್ಲ ಯಶಸ್ಸನ್ನು ಕಂಡು ಸಹಿಸಲಾರದೆ, ಕರುಬಿದ ಆತನ ಸೋದರಮಾವಂದಿರು ಅನೇಕ ರೀತಿಯಲ್ಲಿ ಕಿರುಕುಳಗಳನ್ನು ನೀಡಿ, ಕೊನೆಗೆ ಪ್ರೀತಿಯಿಂದಲೆಂಬಂತೆ ಮನೆಗೆ ಔತಣಕ್ಕೆ ಆಹ್ವಾನಿಸಿ ಉಗ್ರವಾದ ವಿಷವಿಕ್ಕಿ ಕೊಲ್ಲುತ್ತಾರೆ. ವಿಷವುಂಡ ಜುಂಜಪ್ಪ ಘೋರಯಾತನೆಯೊಡನೆ ತಾನು ಸಾಯುವ ಮುನ್ನ ಸೋದರ ಮಾವಂದಿರು ಮತ್ತು ಅವರ ವಾಸಸ್ಥಾನದ ಇಡೀ ಕಂಬೇರಹಟ್ಟಿಯನ್ನು ನಾಶ ಮಾಡುತ್ತಾನೆ. ಹೀಗೆ ಜುಂಜಪ್ಪನು ಕಾಡುಗೊಲ್ಲರ ಬದುಕಿನಲ್ಲಿ ಸಾಂಸ್ಕೃತಿಕ ವೀರನೂ ಪುರಾಣದ ದೇವತೆಯಾಗಿ ಒಟ್ಟಿಗೇ ಪೂಜಿಸಲ್ಪಡುತ್ತಿದ್ದಾನೆ. ಜುಂಜಪ್ಪ ಮತ್ತು ಆತನ ತಂದೆ ಕೆಂಗುರಿ ಮಲ್ಲಪ್ಪನು ವಾಸಿಸುತ್ತಿದ್ದ ಕಳುವಾರಹಳ್ಳಿ ಹಟ್ಟಿಯು, ಇಲ್ಲಿ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡಿರುವ ಬೇವಿನಹಳ್ಳಿ ಗೊಲ್ಲರಹಟ್ಟಿಯ ಸಮೀಪದಲ್ಲಿಯೇ ಇದೆ. ಜುಂಜಪ್ಪ ನಾಶ ಮಾಡಿದ 'ಕಂಬೇರಹಾಳು' ಪ್ರದೇಶವನ್ನು ಕೂಡ ಸ್ಪಷ್ಟವಾಗಿ ಗುರುತಿಸಲಾಗುತ್ತದೆ. ಜೊತೆಗೆ ಕಳೂರಹಳ್ಳಿ ಎಂದು ಈಗ ಕರೆಯಲಾಗುವ ಊರಿನ ಎಲ್ಲೆಯಲ್ಲಿ ಜುಂಜಪ್ಪನ ಗುಡ್ಡೆ(ಸಮಾಧಿ) ಇದೆ. ಈತನ ಹೆಸರಿನ ೯೮ ಗದ್ದುಗೆಗಳು ಕಾಡುಗೊಲ್ಲರು ವಾಸಿಸುವ ಬೇರೆ ಬೇರೆ ಪ್ರದೇಶಗಳಲ್ಲಿ ಇದ್ದರೂ ಸಹ ಅವುಗಳಲ್ಲೆಲ್ಲ ಈ ಸಮಾಧಿಗಳನ್ನು ಅತ್ಯಂತ ಗೌರವಗಳಿಂದ ಪೂಜಿಸುತ್ತಾರೆ. ಇಲ್ಲಿನ ಪೂಜೆ ಪುನಸ್ಕಾರಗಳಿಗೆಲ್ಲ ಈಗಿನ ಹಕ್ಕುದಾರರಾಗಿರುವ ಬೇವಿನಹಳ್ಳಿ ಗೊಲ್ಲರಹಟ್ಟಿಯ ಗೊಲ್ಲರು ದೀವಳಿಗೆಯಲ್ಲಿ ಜುಂಜಪ್ಪನ ಹಬ್ಬದ ಸಮಯದಲ್ಲಿ ಪ್ರತಿವರ್ಷ ಕಾರ್ತೀಕ

PDF created with pdfFactory Pro trial version www.pdffactory.com

ಮಾಸದಲ್ಲಿ ಅಮಾವಾಸ್ಯೆಯ ನಂತರ ಬರುವ ಮೊದಲ ಸೋಮವಾರದಂದು ಜುಂಜಪ್ಪನ ಗುಡ್ಡೆಯಲ್ಲಿ ನಡೆಯುವ ವಿಶೇಷಪೂಜೆಗಾಗಿ ಕಾಡುಗೊಲ್ಲರ ಎಲ್ಲ ನೆಲೆಗಳಿಂದಲೂ ಬರುವ ಜನರು ಅಸಂಖ್ಯ ಪ್ರಮಾಣದಲ್ಲಿ ನೆರೆಯುತ್ತಾರೆ.

ಜುಂಜಪ್ಪನ ತಂದೆಯಾದ ಕೆಂಗುರಿ ಮಲ್ಲಪ್ಪನಿಗೆ ಕಳೂರಹಳ್ಳಿಯ ಕುಂಚಟಿಗರ ಕುಲದ ಅಳುವಿರವರ ಒಕ್ಕಲಿಗನಾದ ಹೊನ್ನಹಟ್ಟಿ ಅಲೇಗೌಡನು ಆಶ್ರಯವಿತ್ತು, ಆತನ ಅಲೆಮಾರಿ ಬದುಕಿಗೊಂದು ನೆಲೆಯನ್ನು ಒದಗಿಸುತ್ತಾನೆ. ಕೆಂಗುರಿ ಮಲ್ಲಪ್ಪನು ಇಲ್ಲಿ ಬಂದು ನೆಲೆಯೂರಿದ ಮೇಲೆ ಆತ ಮತ್ತು ಅಲೇಗೌಡನ ಪರಸ್ಪರ ಕೃತಜ್ಞತೆಯ ಭಾವದಿಂದ ತುಂಬಿದವರಾಗಿ ಗೌರವಾದರಗಳೊಡನೆ ಬದುಕುತ್ತಾರೆ. ಈ ನಡುವೆ ಕೆಂಗುರಿ ಮಲ್ಲಪ್ಪನ ಮಗನಾದ ಕಲಿವೀರ ಜುಂಜಪ್ಪನು ಬೆಳಗುವ ನಕ್ಷತ್ರದಂತೆ ಕೀರ್ತಿವಂತನಾಗಿ ಬೆಳೆದು, ಸುತ್ತೆಲ್ಲರ ಗಮನ ಸೆಳೆದು, ಹದುನಾರರ ಹರೆಯದಲಿದ್ದಾಗಲೇ ಥಟ್ಟನೆ ಮೃತಪಟ್ಟಾಗ, ಲೋಕಾಶ್ಚರ್ಯಕ್ಕೆ ಒಳಗಾಗಿ ದೇವತೆಯೆಂದು ಪೂಜಿಸಲ್ಪಡುತ್ತಾನೆ. ಕೆಂಗುರಿ ಮಲ್ಲಪ್ಪ ಮತ್ತು ಜುಂಜಪ್ಪನಿಗೆ ಆಶ್ರಯದಾತನೂ, ಅಭಿಮಾನಿಯೂ ಆಗಿದ್ದ ಹೊನ್ನಹಟ್ಟಿ ಅಲೇಗೌಡನು ಕಳೂರಹಳ್ಳಿಯಲ್ಲಿ ಜುಂಜಪ್ಪನ ಗುಡಿ ಕಟ್ಟಿಸಿ, ಪೂಜಾದಿ ನಿತ್ಯನೇಮಗಳೆಲ್ಲವೂ ನಿರಂತರವಾಗಿ ಸಲ್ಲುವಂತೆ ವ್ಯವಸ್ಥೆ ಮಾಡುತ್ತಾನೆ. ಕ್ರಮೇಣ ಜುಂಜಪ್ಪ ದೇವರು ಇನ್ನಷ್ಟು ಪ್ರಸಿದ್ಧನಾಗಿ ಗೊಲ್ಲರೂ ಸೇರಿದಂತೆ ಎಲ್ಲ ಜಾತಿಯ ಭಕ್ತಾದಿಗಳ ಸಂಖ್ಯೆ ದಿನೇದಿನೇ ಹೆಚ್ಚಾಗತೊಡಗುತ್ತದೆ. ದೇವರು ಮತ್ತು ಪೂಜಾದಿಗಳ ಒಡೆತನ ಮಾತ್ರ ಕಳೂರಹಳ್ಳಿ ಕುಂಚಟಿಗರ ಕುಲದ ಹೊನ್ನಹಳ್ಳಿ ವಂಶಸ್ಥರಲ್ಲೇ ಇರುತ್ತದೆ. ಈ ಒಡೆತನವು ನಮ್ಮದಾಗಬೇಕೆಂದು ಗೊಲ್ಲರು ತೀರ್ಮಾನಿಸುತ್ತಾರೆ. ಸುಮಾರು ೧೫೦ ವರ್ಷಗಳ ಹಿಂದೆ ಬೇವಿನಹಳ್ಳಿ ಗೊಲ್ಲರ ಹಟ್ಟಿಯ ಕಾಡುಗೊಲ್ಲರು ಪಕ್ಕದ ಕಳೂರಹಳ್ಳಿಯ ಎಲ್ಲೆಯಲ್ಲಿರುವ ಜುಂಜಪ್ಪ ಮತ್ತು ಕರಿಯಮ್ಮ ದೇವತೆಯನ್ನು ಗದ್ದಲದ ನಡುವೆ ಗುಟ್ಟಾಗಿ ಅಪಹರಿಸಿ, ಒಡವೆ–ವಸ್ತ್ರಗಳ ಸಮೇತ ತಮ್ಮ ಹಟ್ಟಿಗೆ ತರುತ್ತಾರೆ. ಈ ಬಗ್ಗೆ ಅನೇಕ ವರ್ಷಗಳ ಕಾಲ ಕೋರ್ಟಿನಲ್ಲಿ ವ್ಯಾಜ್ಯ ನಡೆಯುತ್ತದೆ.

"ಜುಂಜಪ್ಪ ನಮ್ಮವನು, ಒಡವೆಗಳು ನಮ್ಮವೇ ಆತ ಈಗ ನಮ್ಮಲ್ಲಿಯೇ ಇದ್ದಾನೆ"– ಎಂಬೆಲ್ಲ ಗೊಲ್ಲರ ಬೇಡಿಕೆಗಳ ಮತ್ತು ಸುಳ್ಳುಸಾಕ್ಷ್ಯಗಳ ಮೇರೆಗೆ ೩೧–೫–೧೮೮೬ರಂದು ನ್ಯಾಯಾಲಯದ ತೀರ್ಪು ಗೊಲ್ಲರ ಪರವಾಗಿ ಹೊರಬೀಳುತ್ತದೆ; ಜೊತೆಗೆ ಜುಂಜಪ್ಪನ ಸಮಾಧಿಯ ಮೇಲಿನ ಮೊದಲ ಪೂಜೆ ಮಾತ್ರ ಯಥಾಪ್ರಕಾರ ಅಳುವಿನೋರ ಒಕ್ಕಲಿಗರಲ್ಲೇ ಉಳಿಯುತ್ತದೆ(ಈ ಎಲ್ಲ ವಿರಸದ ಪ್ರಕರಣ ನಡೆದು ಸುಮಾರು ನೂರು ವರ್ಷಗಳೇ ಆಗಿರುವುದರಿಂದ ಬೇವಿನಹಳ್ಳಿ ಗೊಲ್ಲರಹಟ್ಟಿ ಮತ್ತು ಕಳೂರಹಳ್ಳಿಯ ಜನರ ನಡುವೆ ಯಾವುದೇ ಹಳೆಯ ಮನಸ್ತಾಪ ಅಥವಾ

ಕಹಿ ಈಗ ಉಳಿದಿಲ್ಲ. ಅಲ್ಲದೆ, ದೇವರನ್ನು ಉದ್ದೇಶಪೂರ್ವಕವಾಗಿ ಕದ್ದು ತಂದುದ್ದರ ಬಗ್ಗೆ ಈ ಎರಡು ಗುಂಪುಗಳ ಹೇಳಿಕೆಗಳು ಮಾತ್ರ ಒಂದೇ ಆಗಿವೆ.).

ಪಕ್ಕದ ಕಳೂರಹಳ್ಳಿ ಗ್ರಾಮದ ಹೊನ್ನಹಟ್ಟಿ ಅಲೇಗೌಡನು ಕಟ್ಟಿಸಿದ ಜುಂಜಪ್ಪನ ಗುಡಿ ಇದ್ದ ಸ್ಥಳವನ್ನು ಈಗಲೂ ಕಾಣಬಹುದಾಗಿದೆ. ಗುಡಿಯು ಬಿದ್ದು ಹೋಗಿದ್ದು, ತೇರಿನ ಎರಡು ಕಬ್ಬಿಣದ ಗಾಲಿಗಳು ಅಲ್ಲಿವೆ. ಗುಡಿಯ ಪಕ್ಕದಲ್ಲೇ ಅಲೇಗೌಡರ ವಂಶಸ್ಥರು ಈಗಲೂ ವಾಸಿಸುತ್ತಿದ್ದಾರೆ: ಜುಂಜಪ್ಪನ ಗುಡ್ಡೆ(ಸಮಾಧಿ)ಯಲ್ಲಿ ಬೆಳಗಿನ ಪೂಜೆಯನ್ನು ಇವರೇ ನೆರವೇರಿಸುತ್ತಾರೆ, ಮಧ್ಯಾಹ್ನದ ಪೂಜೆಯು ಗೊಲ್ಲರದಾಗಿದೆ.

ಕಳೂರಹಳ್ಳಿಯಲ್ಲಿ ಗೊಲ್ಲರು ಈಗ ಒಂದು ಕುಳವೂ ಇಲ್ಲ. ಅಲ್ಲಿ ಒಲೆಹೂಡಿ ಅಡಿಗೆ ಮಾಡಿದಲ್ಲಿ ತಾವೆಲ್ಲ ಸುಟ್ಟುಹೋಗುತ್ತೇವೆನ್ನುವ ನಂಬಿಕೆ ಈ ಜನರಲ್ಲಿ ಪ್ರಬಲವಾಗಿದೆ. ಈ ಊರಿನ ಹೊಲಗಳಿರುವ ಬಯಲಲ್ಲಿ ಹುಣಸೆಮರದ ಕೆಳಗೆ ಜುಂಜಪ್ಪನ ತಾಯಿ ಚೆನ್ನಮ್ಮನ ಸಮಾಧಿ ಇದೆ. ಈ ಸಮಾಧಿ ಇರುವ ಹೊಲವನ್ನು 'ದೇವರ ಹೊಲ' ಎಂದು ಕರೆಯಲಾಗುತ್ತದೆ. ಜುಂಜಪ್ಪನ 'ಗುಡ್ಡೆ'ಯ ಎದುರಿಗೆ ಅವನ ಬಸವನ ಸಮಾಧಿ ಇದೆ. ಹಿಂಭಾಗಕ್ಕೆ ಸುಮಾರು ಎರಡು ಫರ್ಲಾಂಗ್ ದೂರದಲ್ಲಿ ಜುಂಜಪ್ಪನ ತಂದೆ ಕೆಂಗುರಿ ಮಲ್ಲಪ್ಪನ ಸಮಾಧಿ ಇದೆ. ಕಲ್ಲನಕುಂಟೆ ಚಿತ್ರದೇವರ ಪೌಳಿಯಿಂದ ಜುಂಜಪ್ಪನ ಗುಡ್ಡೆಗೆ ಬರುವ ದಾರಿಯಲ್ಲಿ ಜುಂಜಪ್ಪನ ಜೂಲುನಾಯಿಯ ಸಮಾಧಿ ಇದೆ. ಇದರ ಮೇಲೆ ದಾರಿಯಲ್ಲಿ ಹೋಗುವವರೆಲ್ಲ ತಲಾ ಒಂದೊಂದು ಕಲ್ಲನ್ನು ನೆನಪಿಗಾಗಿ ಎಸೆಯುತ್ತಾ ಹೊರಟು ಅದು ದೊಡ್ಡದಾಗಿ ಬೆಳೆಯುತ್ತಿದೆ. ಜುಂಜಪ್ಪನ 'ಗುಡ್ಡೆ'ಯ ಸುತ್ತಲೂ ದನಕರು ಮತ್ತು ಹೋರಿಗಳನ್ನು ವಾದ್ಯ ಸಮೇತ ಸುತ್ತು ಹಾಕಿಸುವುದು ವಾಡಿಕೆಯಾಗಿದೆ. ಹೀಗೆ ಮಾಡುವುದರಿಂದ ಅವುಗಳಿಗೆ ಯಾವುದೇ ಬಗೆಯ ಆಪತ್ತು ಅಥವಾ ರೋಗರುಜಿನಗಳು ತಟ್ಟುವುದಿಲ್ಲವೆಂದು ಅವರು ನಂಬಿದ್ದಾರೆ."

೨.೯. ಬೆಳದಿಂಗಳ ಸಿರಿ

ಏಪ್ರಿಲ್ ತಿಂಗಳಿನ ಚೆಲ್ಲಿದ ತಿಂಗಳು ಬೆಳಕಿನಲ್ಲಿ ನಡೆಯುವ ಹಿರಿಯಡ್ಕದ 'ಸಿರಿ' ಜಾತ್ರೆ ಇಡೀ ದಕ್ಷಿಣ ಭಾರತದಲ್ಲಿಯೇ ವೈಶಿಷ್ಟ್ಯಪೂರ್ಣವಾದದ್ದು. ಸಾವಿರಾರು ಹೆಂಗಸರು ಸಾಮೂಹಿಕವಾಗಿ ದೈವಾವೇಶಕ್ಕೆ ಒಳಗಾಗುವ ಮತ್ತು ಇಡೀ ರಾತ್ರಿ ಕುಣಿದು, ತನ್ನ ಮನದಾಳದ ಎಲ್ಲ ದುಗುಡವನ್ನು ಹೊರಚೆಲ್ಲುವ ರಾತ್ರಿ ಅದು. ದಕ್ಷಿಣ ಭಾರತದಲ್ಲೇನು ಬಹುಶಃ ಇಡೀ ದೇಶದಲ್ಲಿ ಈ ರೀತಿ ಆಚರಣೆ ಇರಲಾರದು. ಬಹುತೇಕ ಕೆಳವರ್ಗದ ಜನ ಮತ್ತು ಬುಡಕಟ್ಟು ವರ್ಗ ಮಾತ್ರ ಆಚರಿಸುವ ಈ ಸಿರಿ ದಕ್ಷಿಣ ಕನ್ನಡದ ಕೆಲವೆಡೆ ಈಗಲೂ ಆಚರಣೆಯಲ್ಲಿರುವ ಅಳಿಯ ಸಂತಾನದ ಮೂಲದ ಮಾತೃಪ್ರಧಾನ ಕುಟುಂಬದ ಹಿನ್ನೆಲೆಯುಳ್ಳದ್ದು. ಈ ಆಚರಣೆ ಅರ್ಥವಾಗಬೇಕಾದರೆ ಒಂದು ಕಥೆ ಹೇಳಲೇಬೇಕಾಗುತ್ತದೆ.

PDF created with pdfFactory Pro trial version www.pdffactory.com

"ತಮಿಳುನಾಡಿನ ಉತ್ತರ ಭಾಗಕ್ಕೆ ಸೇರಿದ ಲಂಕೆಲೋಕನಾಡಿನ ಸತ್ಯನಾಥಪುರದಲ್ಲಿ ಬೆರ್ಮ ಆಳ್ವ ಎಂಬ ವಯೋವೃದ್ಧನು ವಿಶಾಲವಾದ ಕೃಷಿ ಯೋಗ್ಯ ಜಮೀನು ಹಾಗೂ ಅನೇಕ ಒಕ್ಕಲುಗಳನ್ನು ಹೊಂದಿದ್ದನು. ಶ್ರೀಮಂತನಾಗಿದ್ದರೂ ಅವನಿಗೆ ಸಂತಾನ ಭಾಗ್ಯವಿರಲಿಲ್ಲ. ಮುಂದೆ ನಿಂತು ಬೆಂಬಲಿಸುವ ಗಂಡು ಸಂತಾನವಿಲ್ಲ. ಹಿಂದೆ ನಿಂತು ಬೆಂಬಲಿಸುವ ಹೆಣ್ಣು ಸಂತಾನವಿಲ್ಲ. ಪಕ್ಕದಲ್ಲಿ ನಿಲ್ಲಬಲ್ಲ ಅಳಿಯಂದಿರಿಲ್ಲ, ಕಾಲ ಕೆಳಗೆ ಓಡಾಡಿಕೊಂಡಿರುವ ಮೊಮ್ಮಕ್ಕಳಿಲ್ಲ. ಹೀಗೆ ತನ್ನ ದುಸ್ಥಿತಿಯನ್ನು ಕುರಿತು ಹಲುಬುತ್ತಾ ತನಗೆ ಮಕ್ಕಳಾದರೆ ತನ್ನ ಸಂಪತ್ತನ್ನೆಲ್ಲಾ ದಾನಧರ್ಮಗಳಿಗೆ ವಿನಿಯೋಗಿಸುವುದಾಗಿ ಹರಕೆ ಹೊರುತ್ತಾನೆ. ಒಂದು ದಿನ ಬ್ರಹ್ಮದೇವನು ಅವನ ಮನೆಯ ಬಾಗಿಲಿಗೆ ಬೇಡುವವನ ರೂಪದಲ್ಲಿ ಬರುತ್ತಾನೆ ಅವನ ನಿಜ ಸ್ವರೂಪವನ್ನು ತಿಳಿದ ಬೆರ್ಮ ಆಳ್ವನು ತನ್ನ ಮನೆ ಕೆಲಸದಾಕೆಯಲ್ಲಿ ಭಿಕ್ಷೆ ನೀಡುವಂತೆ ಆಜ್ಞಾಪಿಸುತ್ತಾನೆ. ಕೆಲಸದಾಕೆಯ ಕೈಯಿಂದ ಭಿಕ್ಷೆಯನ್ನು ನಿರಾಕರಿಸಿದ ಅವನು ಯಜಮಾನನೇ ಖುದ್ದಾಗಿ ಬಂದು ನೀಡಬೇಕೆಂದು ಒತ್ತಾಯಿಸುತ್ತಾನೆ. ಬೆರ್ಮ ಆಳ್ವನು ಬಂದಾಗ ಅವನು ಖಿನ್ನವಾಗಿರುವುದರ ಕಾರಣ ಕೇಳುತ್ತಾನೆ. ಬೆರ್ಮ ಆಳ್ವನು ತನ್ನ ವ್ಯಥೆಯ ಕಾರಣವನ್ನು ಮುಂದಿರಿಸಿದಾಗ ತಿರುಕ ರೂಪಿಯಾದ ಬ್ರಹ್ಮನು "ಮೂಲ ಸ್ಥಾನವನ್ನು ಮರೆತು ಕುಲದೈವಗಳ ಗುಡಿಗಳನ್ನು ಪಾಳಬೀಳುವಂತೆ ಮಾಡಿ ಬಾಂಧವರ ಬೇಡಿಕೆಗಳನ್ನು ಪೂರೈಸದಿರುವ ಕಾರಣ ಕುಲದೈವಗಳು ಸಂತಾನ ಫಲವನ್ನು ನೀಡಿಲ್ಲ." ಎಂಬುದಾಗಿ ತಿಳಿಸಿದ. ಸಮಸ್ಯೆಯ ಪರಿಹಾರಕ್ಕಾಗಿ ಕುಟುಂಬದ ಮೂಲಸ್ಥಾನ ಹಾಗೂ ಗುಡಿಗಳ ಜೀರ್ಣೋದ್ಧಾರ ಮಾಡುವಂತೆ ಬೆರ್ಮ ಆಳ್ವನಿಗೆ ಸೂಚಿಸಿದ.

ಬೆರ್ಮ ಆಳ್ವ ಅಪಾರ ಸಂಖ್ಯೆಯ ತನ್ನ ಒಕ್ಕಲು ಪರಿವಾರವನ್ನು ಕೂಡಿಕೊಂಡು ಲಂಕೆಲೋಕನಾಡಿಗೆ ಬಂದು ಹಾಳುಬಿದ್ದ ತನ್ನ ಕುಟುಂಬದ ದೈವಗಳ ಗುಡಿಗಳನ್ನು ನವೀಕರಿಸಿದ. ತನ್ನ ಕುಲ ದೈವವಾದ ಬೆರ್ಮರ್ ಮತ್ತು ಇತರ ದೈವಗಳಿಗೆ ಶ್ರದ್ಧಾ ಭಕ್ತಿಗಳಿಂದ ಉತ್ಸವಾಚರಣೆಗಳನ್ನು ನಡೆಸಿದ. ಬೆರ್ಮರಿಗೆ ಅಡಿಕೆ ಮರದ ಹೂಗೊಂಚಲನ್ನು ಸಮರ್ಪಿಸಿ ತನ್ನ ಈವರೆಗಿನ ಮರೆವನ್ನು ಮನ್ನಿಸಬೇಕಾಗಿ ಬೇಡಿಕೊಂಡ. ಅಷ್ಟರಲ್ಲಿ ಆ ಬಂಗಾರದ ಹಾಳೆ ಬಿಚ್ಚಿಕೊಂಡು ಅದರಲ್ಲಿ ಹೆಣ್ಣು ಶಿಶುವೊಂದು ಕಾಣಿಸಿಕೊಂಡಿತು. ಸಂತೋಷ ಹಾಗೂ ಸತ್ಯದ ಪ್ರತೀಕವಾಗಿ ಜನಿಸಿದ ಆ ಮಗುವಿಗೆ 'ಸಿರಿ' ಎಂಬುದಾಗಿ ನಾಮಕರಣ ಮಾಡಿದ.

ಲೋಕಸಾಮಾನ್ಯ ಬೆಳವಣಿಗೆಯನ್ನು ಮೀರಿ ಅತಿಶಯತೆಯನ್ನು ಮೆರೆದ ಸಿರಿಗೆ ಐದು ವರ್ಷವಾಗುತ್ತಲೇ ಮದುವೆಗೆ ಏರ್ಪಾಡು ನಡೆಸತೊಡಗಿದರು. ಕಡೆಯಂಗಡಿಯ ಕಾಂತ ಆಳ್ವನಿಗೆ ಭರ್ಮ ಆಳ್ವನು ಸಾಕಷ್ಟು ಭೂಮಿ ಕಾಣಿ

ನಗನಾಣ್ಯಗಳ ಕೊಡುಗೆಯೊಂದಿಗೆ ಸಿರಿಯನ್ನು ಮದುವೆ ಮಾಡಿಕೊಟ್ಟನು. ಆದರೆ ಕಾಂತ ಆಳ್ವನು ಈ ಹಿಂದೆಯೇ ವೇಶ್ಯೆಯೊಬ್ಬಳ ಸಂಪರ್ಕ ಇರಿಸಿಕೊಂಡಿದ್ದನು. ಸಾಧ್ವಿಯಾದ ಸಿರಿಯ ಸಹಜಸೌಂದರ್ಯ ಹಾಗೂ ಸತಿತ್ವಗಳು ವೇಶ್ಯೆಯಲ್ಲಿ ನೆಟ್ಟ ಕಾಂತ ಆಳ್ವನ ಮನಸ್ಸನ್ನು ಹಿಂದೆಗೆಸುವಲ್ಲಿ ವಿಫಲವಾದವು. ಆತ ಸಿರಿಯ ಸಕಲ ಸಂಪತ್ತನ್ನು ಆ ವೇಶ್ಯೆಗಾಗಿ ಪೋಲು ಮಾಡಿದ. ಸಿರಿಯು ಗರ್ಭವತಿಯಾದಾಗ ಆಕೆಯನ್ನು ಮೊದಲ ಹೆರಿಗೆಗಾಗಿ ತವರು ಮನೆಗೆ ಕಳುಹಿಸಿಕೊಡುವ ಸಂದರ್ಭದಲ್ಲಿ ಗೌರವಿಸಿ ಆಚರಿಸಬೇಕಾದ ಸೀಮಂತವನ್ನು ಆತ ಏರ್ಪಡಿಸಲಿಲ್ಲ. ಎಂಟನೇ ತಿಂಗಳಿಗೆ ಸಿರಿ ತವರಿಗೆ ಬಾರದೆ ಹೋದಾಗ ಬೆರ್ಮ ಆಳ್ವನೇ ಬಂದು ವಿಚಾರಿಸುತ್ತಾನೆ. ಸೀಮಂತವನ್ನು ನಡೆಸುವಂತೆ ಕಾಂತ ಆಳ್ವನನ್ನು ಒತ್ತಾಯಿಸಿ, ಸಿರಿಯ ಸೀಮಂತದ ಸೀರೆಯ ಬೆಲೆಯನ್ನು ತಾನೇ ನೀಡುತ್ತಾನೆ. ಕಾಂತ ಆಳ್ವನು ಒಂದು ಹೊಸ ಸೀರೆಯನ್ನು ಕೊಂಡುಕೊಂಡು ಅದನ್ನು ತನ್ನ ಸೂಳೆಗೆ ನೀಡಿ ಅವಳ ಒಂದು ಕಡು ಬಣ್ಣದ ಸೀರೆಯನ್ನು ಸಿರಿಗೆ ಉಡುಗೊರೆಯಾಗಿ ತರುತ್ತಾನೆ. ಗಂಡನ ತಾತ್ಸಾರ ಹಾಗೂ ಅವಜ್ಞೆಯಿಂದ ಅವಮಾನಿತಳಾದ ಸಿರಿ ಒಬ್ಬಂಟಿಯಾಗಿ ತವರಿಗೆ ಬರುತ್ತಾಳೆ. ತನ್ನಲ್ಲಿ ಹುಟ್ಟಿದ ಗಂಡು ಮಗುವಿಗೆ 'ಕುಮಾರ' ಎಂಬುದಾಗಿ ಹೆಸರಿಡುತ್ತಾಳೆ. ಹೆತ್ತ ಮಗುವನ್ನು ಕಂಡು ತನ್ನ ಮಗುವೆಂದು ಮಾನ್ಯ ಮಾಡಲು ಅದರ ತಂದೆ ಬಾರದೆ ಹೋದಾಗ ಕುಪಿತಳಾದ ಸಿರಿ 'ತನ್ನ ಗಂಡನ ಭೂಮಿ ಬಂಜರು ಬೀಳಲಿ, ಕುಟುಂಬ ನಿಸ್ಸಂತತಿಯಾಗಲಿ' ಎಂದು ಶಪಿಸುತ್ತಾಳೆ.

ಬೆರ್ಮ ಆಳ್ವನು ಮಗುವಿನ ಮುಖ ನೋಡಿದಲ್ಲಿ ಅವನು ಒಡನೆಯೇ ಸಾಯುತ್ತಾನೆ. ತಂದೆ ಮನೋರೋಗಿಯಾಗುತ್ತಾನೆ. ತಾಯಿಗೆ ದೂರದ ಊರುಗಳಲ್ಲಿ ಭಿಕ್ಷೆ ಬೇಡುವ ದುಸ್ಥಿತಿ ಬರುತ್ತದೆ! ಎಂಬುದಾಗಿ ಜೋಯಿಸರೊಬ್ಬರು ಮಗು ಹುಟ್ಟಿದ ಸಂದರ್ಭದಲ್ಲಿ ನುಡಿಯುತ್ತಾರೆ. ಒಂದು ದಿನ ಕುಮಾರನನ್ನು ಮೀಯಿಸುತ್ತಿದ್ದ ಸಿರಿ, ತುಂಡು ಬಟ್ಟೆಗಾಗಿ ಆ ಕೋಣೆಯಿಂದ ಹೊರಬರುತ್ತಾಳೆ. ಮಗು ಕುಮಾರನೊಬ್ಬನೇ ಇದ್ದ ಬಚ್ಚಲಿನ ಬಾಗಿಲ ಬಳಿ ಹಾದುಹೋಗುತ್ತಿದ್ದ ಬೆರ್ಮ ಆಳ್ವನಿಗೆ ಅಳುತ್ತಿದ್ದ ಮಗುವಿನ ದನಿ ಕೇಳಿಸುತ್ತದೆ. ಸಹಜ ಸೆಳೆತದಿಂದ ಕೋಣೆ ಒಳಗೆ ಹೋದ ಅಜ್ಜ ಮಗುವನ್ನು ಎತ್ತಿಕೊಂಡು ಪ್ರೀತಿಯಿಂದ ಎದೆಗೆ ಒತ್ತಿಕೊಳ್ಳುತ್ತಾನೆ. ಸಿರಿ ಹೊರ ಬಂದಾಗ ನೋಡುತ್ತಾಳೆ ದುಃಖದ ಆವೇಗದಲ್ಲಿ ಸಿರಿ ಮಗುವನ್ನು ಎತ್ತಿಕೊಂಡು ಗೊತ್ತು ಗುರಿಯಿಲ್ಲದೆ ಅಲೆಯ ತೊಡಗುತ್ತಾಳೆ. ಸಿರಿ ಈಗಾಗಲೇ ಗಂಡನೊಂದಿಗೆ ವಿಚ್ಛೇದನ ಮಾಡಿಕೊಂಡಿದ್ದಾಳೆ. ತನ್ನ ಬದುಕಿನ ಏಕೈಕ ಬಂಧು ಅಜ್ಜನನ್ನು ಕಳೆದುಕೊಂಡಿದ್ದಾಳೆ. ಬದುಕು ಭಾಗ್ಯಗಳೆಲ್ಲವನ್ನು ಆಕೆಯ ಗಂಡನ ವೇಶ್ಯೆ ಪೋಲು ಮಾಡಿದ್ದಾಳೆ.

PDF created with pdfFactory Pro trial version www.pdffactory.com

ಸಿರಿ ತೆಂಕನಾಡಿನತ್ತ ಸಾಗುತ್ತಿರಲು ಇಬ್ಬರು ಕ್ಷತ್ರಿಯ ವೀರರು ಆಕೆಗೆ ಎದುರಾಗುತ್ತಾರೆ. ಮೊದಲಿಗೆ ಅವರಿಬ್ಬರೂ ಈಕೆಯನ್ನು ಬಯಸಿದರೂ ಆಕೆ ಸಾಧ್ವಿ ಹೆಣ್ಣು ಎಂದು ಗುರುತಿಸಿಕೊಳ್ಳುತ್ತಾರೆ. ಆಕೆ ಅವರಿಬ್ಬರ ನೆರವನ್ನು ಯಾಚಿಸಿ ತನ್ನನ್ನು ಸಹೋದರಿಯಾಗಿ ಕಾಣಬೇಕೆಂದು ಭಿನ್ನವಿಸಿಕೊಳ್ಳುತ್ತಾಳೆ. "ನೀವು ನನಗಿಂತ ಹಿರಿಯರಾಗಿದ್ದರೆ ತಂಗಿ ಎಂದು ಕರೆಯಿರಿ. ನನಗಿಂತ ಕಿರಿಯರಾಗಿದ್ದರೆ ಅಕ್ಕ ಎಂದು ಕರೆಯಿರಿ" ಎನ್ನುತ್ತಾಳೆ. ಅವಳು ಕೊಟ್ರಪಾಡಿಯ ಕೊಡ್ಸರಾಳ್ವರನಲ್ಲಿಗೆ ಆಕೆಯನ್ನು ಕರೆತಂದು ಮದುವೆ ಯಾಗುವಂತೆ ಒತ್ತಾಯಿಸುತ್ತಾರೆ. 'ಕೈಪತ್ತಾವುನಿ' ಎಂಬ ವಿಧಿ ಪ್ರಕಾರ ಮದುವೆ ಯಾಗುವುದರಿಂದ ಆ ಹಿಂದೆ ಮದುವೆಯಾಗಿದ್ದರೂ ದೋಷ ತಟ್ಟುವುದಿಲ್ಲ ಎಂಬುದಾಗಿ ಕೊಂಡ್ಸರಾಳ್ವ ಸಮಾಧಾನ ಹೇಳುತ್ತಾನೆ. ವರದಕ್ಷಿಣೆ, ಬ್ರಾಹ್ಮಣ ಊಟೋಪಚಾರ, ಬಂಧುವರ್ಗದವರ ಅನುಮತಿ ಯಾವುದೂ ಈ ತರದ ಮದುವೆಗೆ ಬೇಕಿಲ್ಲ.

ಕೊಂಡ್ಸರಾಳ್ವನಿಗೆ ಆ ಹಿಂದೆಯೇ ಮದುವೆಯಾಗಿತ್ತು. ಕೈ ಹಿಡಿದ ಹೆಂಡತಿಗೆ ಗಂಡನ ಮದುವೆಯ ಇರಾದೆ ತಿಳಿದೊಡನೆ ತಾವು ಹೊತ್ತಿಸಿಬಿಟ್ಟ ದೀಪವನ್ನು ಹೊಸದಾಗಿ ಮನೆ ಸೇರುವ ಹೆಣ್ಣು ಸಿರಿ ಕಂಡೊಡನೆ ಅವಳ ಕಣ್ಣು ಕುರುಡಾಗಲೀ ಎಂದು ಶಾಪವೀಯುತ್ತಾಳೆ. ಕೊಂಡ್ಸರಾಳ್ವನಿಗೆ ಮದುವೆಯಾದ ಸಂಗತಿ ಹಾಗೂ ಇದೀಗ ಮರುಮದುವೆಯಿಂದ ಮೊದಲ ಹೆಂಡತಿಯ ಮನಸ್ಸು ಕುಪಿತಗೊಳ್ಳ ಬಹುದಾದನ್ನು ಸಿರಿ ತನ್ನ ಅಂತರದೃಷ್ಟಿಯಿಂದ ಅರಿತುಕೊಳ್ಳುತ್ತಾಳೆ. ಕೈ ಹಿಡಿದ ಹೆಂಡತಿ ಈ ಮರುಮದುವೆಗೆ ಸಮ್ಮತಿ ಸೂಚಿಸಿ ತನ್ನನ್ನು ಮನೆಯೊಳಗೆ ಹಿಡಿದು ಕರೆದುಕೊಂಡು ಬಾರದೆ ತಾನು ಬರಲಾರೆನೆಂದು ಸಿರಿ ಕೊಂಡ್ಸರಾಳ್ವನಿಗೆ ಹೇಳುತ್ತಾಳೆ. ಸಿರಿಯ ಪ್ರಾಮಾಣಿಕತೆ ಹಾಗೂ ರುಜುಬುದ್ಧಿ ಜೊತೆಗೆ ಅವಳ ದಯನೀಯ ಸ್ಥಿತಿಯನ್ನು ಕಂಡ ಮೊದಲ ಹೆಂಡತಿ ಸಿರಿಯನ್ನು ಮನೆಗೆ ಸ್ವಾಗತಿಸಿ ತನ್ನ ಸವತಿಯಾಗಿ ಸ್ವೀಕರಿಸುತ್ತಾಳೆ.

ಕೊಂಡ್ಸರಾಳ್ವನ ಮನೆಯಲ್ಲಿ ಸಿರಿ ಎರಡನೇ ಬಸುರಿಯಾಗುತ್ತಾಳೆ. ಹೆರಿಗೆಯ ಕಾಲಕ್ಕಿಂತ ಸ್ವಲ್ಪ ಮೊದಲು ಆಕೆ ಕಾಡಿನ ಪಕ್ಕದಲ್ಲಿರುವ ಒಂದು ಅಡಿಕೆ ಮರದ ತೋಟದೆಡೆಗೆ ಹೋಗಿ ಅಲ್ಲಿ ವೀಳೆದೆಲೆಯ ಹಾಸಿಗೆ ರಚಿಸುತ್ತಾಳೆ. ಮುಸ್ಸಂಜೆಯ ಹೊತ್ತಿಗೆ ಸಿರಿ ಅಲ್ಲಿ ಹೆಣ್ಣು ಮಗುವೊಂದಕ್ಕೆ ಜನ್ಮ ವೀಯುತ್ತಾಳೆ. ಆ ಮಗುವಿಗೆ 'ಸೊನ್ನೆ' ಎಂದು ಹೆಸರಿಡುತ್ತಾಳೆ. ಸಿರಿ ತಾನೇ ತನ್ನ ಹೆರಿಗೆಯ ಮಾಸನ್ನು ಮಣ್ಣಿನೊಳಕ್ಕೆ ಹುಗಿದಿರಿಸುತ್ತಾಳೆ. ಆದರೆ ರಾತ್ರಿ ಹೊತ್ತು ನರಿಗಳು ಮಣ್ಣನ್ನು ಕೆದಕಿ ಅದನ್ನು ಹೊರಗೆಳೆದು ತಿನ್ನುತ್ತವೆ. ಇನ್ನು ಮುಂದಕ್ಕೆ ನರಿಗಳು ಆ ಪ್ರದೇಶದ ಸಮೀಪಕ್ಕೆ ಹೋಗದಂತೆ ಶಪಿಸುತ್ತಾಳೆ. ಮುಂಜಾವದಲ್ಲಿ ಆಕೆ ಆ ಪ್ರದೇಶದಲ್ಲಿ ಭತ್ತ, ತೆಂಗು,

ಧಾನ್ಯ, ವೀಳೆಯದೆಲೆಗಳು ಸಮೃದ್ಧವಾಗಿ ಬೆಳೆಯಲಿ ಎಂದು ಹರಸುತ್ತಾಳೆ. ಅನಂತರ ಸಿರಿ ಅದೃಶ್ಯಳಾದರೂ ಆಕೆ ದೈವವಾಗಿ ಆ ಪ್ರದೇಶವನ್ನು ಸಂರಕ್ಷಿಸುತ್ತಾಳೆ ಎಂದು ನಂಬಲಾಗುತ್ತದೆ.

ಚಂದ್ರಯ್ಯ ಹೆಗ್ಗಡೆಯ ಮನೆಯಲ್ಲಿ ಸೊನ್ನೆ ಬೆಳೆದು ಮುಂದೆ ಉರ್ಕಿತೋಟದ ಗುರುಮಾರ್ಲನೊಂದಿಗೆ ಮದುವೆಯಾಗುತ್ತಾಳೆ. ತಮಗೆ ಮಕ್ಕಳಾದರೆ ಬ್ರಹ್ಮನಿಗೆ ದೊಡ್ಡ ಹರಕೆ ಮಾಡುವುದಾಗಿ ದಂಪತಿಗಳು ಮನಸ್ಸಿನಲ್ಲಿ ಸಂಕಲ್ಪಿಸಿಕೊಳ್ಳುತ್ತಾರೆ. ಸೊನ್ನೆ ಬೇಗನೇ ಬಸುರಿಯಾಗಿ 'ಅಬ್ಬಗದಾಗರ' ಎಂಬ ಅವಳಿ ಮಕ್ಕಳ ತಾಯಿಯಾಗುತ್ತಾಳೆ. ಕೌಟುಂಬಿಕ ಸುಖ–ಸಂತೋಷದ ಸಾಗರದಲ್ಲಿ ಅವರು ಬೆರ್ಮನಿಗೆ ಹೇಳಿಕೊಂಡ ಹರಕೆಯನ್ನು ಮರೆಯುತ್ತಾರೆ. ಸೊನ್ನೆ ಹಾಗೂ ಗುರುಮಾರ್ಲರಿಗೆ ಬೆರ್ಮ ಭವಿಷ್ಯ ನುಡಿಯುವವನ ರೂಪದಲ್ಲಿ ಕಾಣಿಸಿಕೊಳ್ಳುತ್ತಾನೆ. "ಆಡಿದ ಹರಕೆಯನ್ನು ಮರೆತುದಾದರೆ ಮುಂದೆ ತೀವ್ರ ವ್ಯಥೆಯನ್ನು ಅನುಭವಿಸಬೇಕಾಗಿ ಬರಬಹುದು. ಪರಮಾತ್ಮ ನೀಡಿದುದನ್ನು ಹಿಂದಕ್ಕೆ ಪಡೆಯುವ ಸಾಧ್ಯತೆಯೂ ಇದೆ. ಪರಸ್ಪರ ಜಗಳವೇ ಮಕ್ಕಳ ಪತನಕ್ಕೆ ಹೇತುವಾಗಬಹುದು" ಎನ್ನುತ್ತಾನೆ. ಈ ಮಾತುಗಳಿಂದ ಸಿಟ್ಟುಗೊಂಡ ಗುರುಮಾರ್ಲ ಭವಿಷ್ಯ ನುಡಿದವನನ್ನು ಅಬ್ಬರಿಸಿ ಹೊರಟು ಹೋಗುವಂತೆ ಸೂಚಿಸುತ್ತಾನೆ.

ಸೊನ್ನೆ ಹಾಗೂ ಗುರುಮಾರ್ಲನು ಒಂದು ದಿನ ತಮ್ಮ ಅವಳಿ ಮಕ್ಕಳಿಗೆ ಜಗಳವಾಡದಿರಿ ಎಂದು ಎಚ್ಚರಿಸಿ ಮನೆಯಿಂದ ಹೊರಟು ಹೋಗುತ್ತಾನೆ. ಆಟದ ಸಂದರ್ಭಗಳಲ್ಲಿ ಅನೇಕ ಬಾರಿ ಪರಸ್ಪರ ಜಗಳವಾಡುತ್ತಿರುವುದನ್ನು ಬಲ್ಲ ತಂದೆ–ತಾಯಂದಿರು ಹೆಣ್ಣು ಮಕ್ಕಳ ಪ್ರೀತಿಯ ಆಟದ ಚೆನ್ನಮಣೆಯನ್ನು ಭದ್ರವಾದ ಪೆಟ್ಟಿಗೆಯೊಳಗಿರಿಸಿ ಬೀಗ ಹಾಕಿ ಹೋಗುತ್ತಾರೆ. ಅಷ್ಟರಲ್ಲಿ ಬೆರ್ಮನು ಬ್ರಾಹ್ಮಣನ ರೂಪದಲ್ಲಿ ಬಂದು ಬೀಗದೊಳಗಿನ ಚೆನ್ನೆಮಣೆಯನ್ನು ಮಕ್ಕಳಿಗೆ ತೆಗೆದುಕೊಟ್ಟು ಆಟವಾಡುವಂತೆ ಸೂಚಿಸುತ್ತಾನೆ. ಆಟವಾಡುತ್ತಾ ಮಕ್ಕಳೊಳಗೆ ಜಗಳ ಹತ್ತಿತು. ಒಬ್ಬಳು ಮತ್ತೊಬ್ಬಳ ತಲೆಗೆ ಚೆನ್ನೆಮಣೆಯಿಂದ ಹೊಡೆಯುತ್ತಾಳೆ. ಆಕೆ ಕುಸಿದು ಬಿದ್ದು ತೀರಿಕೊಳ್ಳುತ್ತಾಳೆ. ತನ್ನ ಕೈಯಿಂದ ಘಟಿಸಿ ಹೋದ ಅತ್ಯಂತ ಹೇಯವಾದ ಕೃತ್ಯದಿಂದ ನೊಂದು ಹಾಗೂ ತಂದೆ ತಾಯಿಯರನ್ನು ಎದುರಿಸುವ ಭಯದಿಂದ ತತ್ತರಿಸಿ ಇನ್ನೊಬ್ಬ ಹೆಣ್ಣು ಮಗಳು ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ತಂದೆ ತಾಯಂದಿರು ಮರಳಿದಾಗ ಆ ಬ್ರಾಹ್ಮಣನು ದೇವರಿಗೆ ಹೇಳಿಕೊಂಡ ಹರಕೆಯನ್ನು ಮರೆತ ಫಲವಾಗಿ ಅವನು ನೀಡಿದುದನ್ನು ಮತ್ತೆ ಹಿಂದಕ್ಕೆ ಸೆಳೆದುಕೊಂಡುದಾಗಿ ಹೇಳುತ್ತಾನೆ".[೧೨]

PDF created with pdfFactory Pro trial version www.pdffactory.com

ಈ ಕಥೆಯ ಹಿನ್ನೆಲೆಯಲ್ಲಿ ನಡೆಯುವ ದಕ್ಷಿಣ ಕನ್ನಡದ 'ಸಿರಿ' ಎಂಬ ಈ ವಿಶಿಷ್ಟ ಆಚರಣೆಯನ್ನು ಈಗಾಗಲೇ ವಿದ್ವಾಂಸರನೇಕರು ಅಧ್ಯಯನ ಮಾಡಿದ್ದಾರೆ. ಅವರಲ್ಲಿ ಅಮೆರಿಕಾದ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಪೀಟರ್ ಜೆ ಕ್ಲಾಸ್ ಪ್ರಮುಖರು. ಇತ್ತೀಚೆಗೆ ನಮ್ಮ ನಾಡಿನ ವಿದ್ವಾಂಸರನೇಕರು ಈ ಬಗೆಗಿನ ವೈಜ್ಞಾನಿಕ ಅಧ್ಯಯನದಲ್ಲಿ ತೊಡಗಿದ್ದಾರೆ. ಜಾತ್ರೆ ನಡೆಯುವ ಹಿರಿಯಡ್ಕದ ವೀರಭದ್ರ ದೇವಸ್ಥಾನದ ಆವರಣಕ್ಕೆ ನಾವು ಹೋದಾಗ ಗುಡಿಯ ವಿಶಾಲ ಅಂಗಳದ ತುಂಬ ಮಹಿಳೆಯರ ಗುಂಪುಗಳು. ಸಾಮಾನ್ಯವಾಗಿ ಬಿಳಿ, ಕೆಂಪು ಮತ್ತು ಅರಿಶಿನ ಬಣ್ಣದ ಉಡುಪುಗಳೇ ಹೆಚ್ಚಾಗಿದ್ದ ಮಹಿಳೆಯರು ಮುಡಿಬಿಚ್ಚಿ ಕೈಯಲ್ಲಿ ಸಿಂಗಾರ(ಅಡಿಕೆ ಹೊಂಬಾಳೆ) ಹಿಡಿದು ಯಾವುದೋ ವಿಧಿಗಾಗಿ ಕಾಯುತ್ತಾ ನಿಂತಿದ್ದರು. ಇವರಲ್ಲಿ ಹರೆಯದ ಮದುವೆಯೂ ಆಗದ ತರುಣಿಯರಿಂದ ಹಿಡಿದು ಎಪ್ಪತ್ತರ ವಯಸ್ಸಿನ ವೃದ್ಧೆಯರೂ ಇದ್ದರು. ಹರೆಯದವರ ಕಣ್ಣುಗಳಲ್ಲಿ ಒಂದು ರೀತಿಯ ಅಪರಿಚಿತ ವಾತಾವರಣದ ಬೆದರಿಕೆ ಇದ್ದರೆ, ವೃದ್ಧೆಯರು ಇದೆಲ್ಲವೂ ತುಂಬ ಸಾಮಾನ್ಯ ಎನ್ನುವಂತೆ ಲೀಲಾಜಾಲವಾಗಿದ್ದರು. ಇವರ ನಡುವೆ ಅಲ್ಲಲ್ಲಿ ಕೆಂಪುವಸ್ತ್ರ ತೊಟ್ಟ ಗಂಡಸರೂ ಇದ್ದರು. ಈಗಾಗಲೇ ಇವರೆಲ್ಲರೂ ದೇವಸ್ಥಾನದ ಆವರಣದಲ್ಲಿಯ ಕಲ್ಯಾಣಿಯಲ್ಲಿ ಸ್ನಾನ ಮಾಡಿ ಮಡಿವಸ್ತ್ರ ಧರಿಸಿ ಮೈದುಂಬಲು ಬಂದು ನಿಂತ ಸಿರಿ, ಸೊನ್ನೆ, ಅಬ್ಬಗದಾರಗರು ಎಂಬುದು ಅನಂತರ ತಿಳಿಯಿತು.

ಆಚರಣೆಯ ಮೊದಲ ಹಂತದಲ್ಲಿ ಸಿರಿಯ ಕಥೆಯನ್ನು ನಿಧಾನವಾಗಿ ನಿರೂಪಿಸುವ ತುಳು ಪಾಡ್ದನಗಳನ್ನು ಹಾಡತೊಡಗುವುದು. ಕಥೆಯನ್ನು ನಿರೂಪಿಸುತ್ತಾ ಹೋದಂತೆ ಸಿರಿಯ ಕಷ್ಟ–ಕಾರ್ಪಣ್ಯ, ಅವಳ ಗಂಡನ ಅನಾದಾರ, ಅವನ ಅಸಭ್ಯತೆ ಕೇಳುವವರ ಮನ ತುಂಬುತ್ತಾ ಹೋಗುತ್ತದೆ. ಮೈ ಅದುರ ತೊಡಗುತ್ತದೆ. ಹಾಗೇ ಇಡೀ ದೇಹ ತೂಗತೊಡಗುತ್ತದೆ. ಕ್ರಮೇಣವಾಗಿ ಆವೇಶ ಹೆಚ್ಚುತ್ತಾ ಹೋದಂತೆ ಪಾಡ್ದನ ಗೌಣವಾಗಿ ಕಿರುಚಾಟ ಹೆಚ್ಚಾಗುತ್ತದೆ. ನಾಲಗೆ ಮತ್ತು ತುಟಿಯ ನಡುವೆ ಟಿಸ್ ಟಿಸ್... ಶಬ್ದದೊಡನೆ ಏಕಾಏಕಿ ಕೂಗಿಕೊಳ್ಳುವ ಕುಣಿಯುವ ಅವಸ್ಥೆಗೆ ತಲುಪುತ್ತಿದ್ದಂತೆ ಇನ್ನೇನು ಬೀಳುವ ಸ್ಥಿತಿಗೆ ಬಂದ ಮಹಿಳೆಯರನ್ನು ಸಂಬಂಧಿಕರು ಅಥವಾ ಬೆಂಗಾವಲಿಗೆ ಬಂದವರು ಹಿಡಿಯುತ್ತಾರೆ. ಹಿಡಿದಷ್ಟು ತಡೆದಷ್ಟು ಆವೇಶ ಹೆಚ್ಚುತ್ತದೆ. ದೈವಾವೇಶಕ್ಕೆ ಒಳಗಾದವರು ಹೊಸಬರಾದರೆ, ವೃದ್ಧೆಯರು ಅಥವಾ ಗುಂಪಿನ ನಡುವೆ ಅಲ್ಲಲ್ಲಿ ಕಂಡುಬರುವ ಕೆಂಪುವಸ್ತ್ರದ ಗಂಡಸರು ಅಥವಾ 'ಕುಮಾರ'ರು ಸಿರಿಯ ಮೊದಲ ಗಂಡನ ಮಗ) ಹೊಸಬಳನ್ನು ಪ್ರಶ್ನಿಸುತ್ತಾಳೆ ಯಾರು ನೀನು? ಸಿರಿಯೋ, ಸೊನ್ನೆಯೋ; ಅಬಗ್ಗವೋ, ದಾರಗವೋ? ಹೇಳು ಎಂದು ಒತ್ತಾಯಿಸುತ್ತಾರೆ. ಬಡಪೆಟ್ಟಿಗೆ ಹೇಳದಿದ್ದರೆ ಬೆದರಿಸಿ ಕೇಳುತ್ತಾರೆ. ಅವಳು

ಯಾವುದಾದರೊಂದು ಹೆಸರೇಳುತ್ತಾಳೆ. ಅಲ್ಲಿಗೆ ಇವಳು ಇಂಥವಳೇ ಎಂದು ನಿರ್ದಿಷ್ಟಪಡಿಸಲಾಗುತ್ತದೆ. ಮುಂದಿನ ವರ್ಷದಿಂದ ಖಾಯಂ ಆಗಿ ಬರುವಂತೆ ಪ್ರಯಾಣ ಮಾಡಲಾಗುತ್ತದೆ. ಆವೇಶ ಬಂದು ಕೂಗಿ ಬಾಗಿ ಸುಸ್ತಾಗಿ ಕೆಲವರು ಹಾಗೇ ನೆಲಕ್ಕೆ ಒರಗುತ್ತಾರೆ. ಮತ್ತೆ ಸಿರಿ ಐತಿಹ್ಯದ ಪಾಡ್ದನವನ್ನು ಹಾಡಲಾಗುತ್ತದೆ. ಹಾಡುತ್ತಾ ಹೋದಂತೆ ಬಸವಳಿದು ಬಿದ್ದ ಹೆಣ್ಣು ಮತ್ತೆ ಜೀವ ತುಂಬಿಕೊಳ್ಳ ತೊಡಗುತ್ತಾಳೆ. ಮತ್ತೆ ಅದೇ ರೀತಿಯ ಆವೇಶಕ್ಕೆ ಒಳಗಾಗುತ್ತಾಳೆ. ಕೈಯಲ್ಲಿರುವ ಹಿಂಗಾರದ ಅಕ್ಕಿ ಉದುರುವವರೆಗೆ ದೇಹವನ್ನು ನುಲಿಯುತ್ತಾಳೆ. ವಿಕಾರವಾಗಿ, ಆದರೆ ಅದರಲ್ಲಿಯೂ ಲಯಬದ್ಧವಾಗಿ ಕಿರುಚುತ್ತಾ ತನ್ನ ಆಚರಣೆಯನ್ನು ಮುಂದುವರೆಸುತ್ತಾಳೆ.

ಈ ತೆರನಾದ ಆವೇಶಭರಿತ ಅಸ್ಪಷ್ಟ ನರ್ತನ ದೇವಸ್ಥಾನದ ಆವರಣದಲ್ಲಿ ಇಡೀ ರಾತ್ರಿ ನಡೆಯುತ್ತದೆ. ಸಾವಿರಾರು ಹೆಂಗಸರು ಅದೇ ದೈವತ್ವದ ನಿಶೆಯಲ್ಲಿ ಒರಳುತ್ತಾರೆ. ಇದೇನಿದು? ಯಾವ ಪಾಪಕ್ಕಾಗಿ ಅನ್ನಿಸುವ ಮಟ್ಟಿಗೆ ಅವರ ಬಗೆಗೆ ಕನಿಕರ ಮೂಡುತ್ತದೆ. ಇಂಥ ಸಂಪ್ರದಾಯಗಳು ಇನ್ನೂ ಈ ದೇಶದಲ್ಲಿ ಇವೆಯಲ್ಲಾ ಅನ್ನಿಸಿ ಮನಸ್ಸು ಮುದುಡುತ್ತದೆ. ಆದರೂ ಈ ಆಚರಣೆಯ ಹಿಂದಿನ ಕ್ರೂರ ಸತ್ಯ ನಮ್ಮನ್ನು ಕಲಕುತ್ತದೆ. ಪುರುಷಪ್ರಧಾನ ಸಮಾಜದಲ್ಲಿನ ಹೆಣ್ಣಿನ ಗೋಳಿನ ಪ್ರಕಟಣೆಗೆ ಈ ಆಚರಣೆ ಮಾಧ್ಯಮವಾಗಿದೆ ಎಂಬ ಕಟುಸತ್ಯದ ಅರಿವಾದಾಗ ಈ ಆಚರಣೆ ಕೇವಲ ಮೂಢನಂಬಿಕೆಯಾಗಿರದೆ ಸಾಮಾಜಿಕ ವ್ಯವಸ್ಥೆಯೊಂದರ ಪ್ರತೀಕವಾಗಿದೆ ಅನ್ನಿಸದೆ ಇರದು.

ಮೇಲಿನ ಕಥೆಯನ್ನೇ ನೋಡಿ. ತನ್ನ ತಂದೆಯ ಪ್ರೀತಿಯ ಪುತ್ತಳಿಯಾದ 'ಸಿರಿ' ಸಿರಿವಂತನಾದ ಗಂಡನನ್ನು ಕೂಡಿ ಸುಖದಿಂದ ಇರಲಾಗದೆ ಎಲ್ಲರ ಪ್ರೇಮದಿಂದ ವಂಚಿತಳಾದಳು. ಎರಡನೇ ಗಂಡನ ಮನೆಯಲ್ಲಿಯೂ ತನ್ನ ಹೆರಿಗೆಯನ್ನು ತಾನೇ ಮಾಡಿಕೊಳ್ಳಬೇಕಾದ ಪ್ರಸಂಗ ಬರುತ್ತದೆ. ಅನಂತರ 'ಸಿರಿ'ಯ ಮಗಳಾದ ಸೊನ್ನೆ ಕೂಡ ಯಾವುದೋ ಮನೆಯಲ್ಲಿ ಬೆಳೆಯಬೇಕಾಗುತ್ತದೆ. ಈ ಎಲ್ಲಾ ಅಂಶಗಳು ಹೆಣ್ತನದ ಹೃದಯವನ್ನು ಕಲಕುತ್ತವೆ. ಸಿರಿಯ ಹರಕೆ ಹೊತ್ತು ಬಂದ ಸಾವಿರಾರು ಹೆಂಗಸರಲ್ಲಿ ಬಹುಪಾಲು ಜನರ ಜೀವನವೂ ಇದೇ ಆಗಿರುತ್ತದೆ ಅಥವಾ ಗಂಡನಿದ್ದು ಪರಕೀಯ ಬಾಳು ಬಾಳುತ್ತಿರುತ್ತಾರೆ. ಸಿರಿ ಬೇರಾರೂ ಅಲ್ಲದೆ ತನ್ನವಳೇ ಆಗುತ್ತಾಳೆ. ಹಾಗಾದಾಗ ಸಿರಿ–ಸೊನ್ನೆಯರು ತಾವೇ ಆಗಿ ಪರಸ್ಪರ ಸಂತೈಸತೊಡಗುತ್ತಾರೆ. ಎಷ್ಟು ವಿಚಿತ್ರವಾಗಿರುತ್ತದೆಂದರೆ ಎಲ್ಲಿಂದಲೋ ಯಾವ ಯಾವ ಊರಿನಿಂದಲೋ ಅಪರಿಚಿತರಾಗಿ ಬಂದವರು ತಮ್ಮ ವೈಯಕ್ತಿಕತೆಯನ್ನು ಮರೆತು ಅಕ್ಕ–ತಂಗಿಯರ ಸಂಬಂಧ ಕಲ್ಪಿಸಿಕೊಂಡು ಪರಸ್ಪರ ತಬ್ಬಿಕೊಂಡು ಗೋಳಾಡುತ್ತಾ ಕಾಂತಾ ಆಳ್ವನಂಥ

PDF created with pdfFactory Pro trial version www.pdffactory.com

ಅನಾಗರಿಕರ ವರ್ತನೆಯ ಪ್ರತಿ ಗಂಡನನ್ನು ಹೀಯಾಳಿಸತೊಡಗುತ್ತಾರೆ. ಸಿರಿ ಪಾಡ್ದನವರೆಲ್ಲರ ನಡುವಿನ ಬೆಸುಗೆಯಾಗಿ ಅವರೆಲ್ಲರನ್ನೂ ಒಂದುಮಾಡುತ್ತದೆ. ಒಬ್ಬಳು ಸಿರಿಯಾಗಿ ಮಾತಾಡಿದರೆ ಇನ್ನೊಬ್ಬಳು ಸೊನ್ನೆಯಾಗಿ ಮಾತನಾಡುತ್ತಾಳೆ. ಹೀಗೆ ಒಬ್ಬೊಬ್ಬರಲ್ಲಿ ಸಂವಾದ ಏರ್ಪಡುತ್ತದೆ.

ಸಿರಿ ಜಾತ್ರೆಯನ್ನು ನೋಡಲು ಬರುವ ಇತರರಿಗೂ ಕೊರತೆಯೇನಿಲ್ಲ. ಸಿರಿ ಮೈಮೇಲೆ ಬಂದವರಿಗೆ ಶ್ರದ್ಧೆಯಿಂದ ಕೈಮುಗಿಯುತ್ತ ಹಿಂಗಾರು ಕೈಗಿಟ್ಟು ಹಲವು ಪ್ರಶ್ನೆ ಕೇಳುತ್ತಾರೆ. ತನ್ನ ಮಗಳು ಋತುಮತಿಯಾದದ್ದು, ಗಂಡ ಸಿಗದಿದ್ದು, ಅವಳಿಗೆ ಬಂದ ಕಾಯಿಲೆ ಗುಣಪಡಿಸುವ ಬಗೆ ಮುಂತಾಗಿ ಕೆಲವರ ನೋವಾದರೆ, ಇನ್ನು ಕೆಲವರಿಗೆ ಗಂಡ ಹೊಡೆದದ್ದು, ಕೈ ಮುರಿದದ್ದು, ಇತ್ಯಾದಿಗಳನ್ನು ಸಿರಿಗೆ ಒಪ್ಪಿಸುತ್ತಾರೆ. ಪರಿಹಾರ ಬೇಡುತ್ತಾರೆ ಆಗ ದೈವಾವೇಶದ ಸಿರಿ ಪರಿಹಾರ ಹೇಳುತ್ತಾಳೆ ಅಥವಾ ಅವಳನ್ನೇ ಸಿರಿಯನ್ನಾಗಿ ಪರಿವರ್ತಿಸುತ್ತಾಳೆ.

ಕೆಳವರ್ಗದ ಭೀತಿ, ಭಯ, ನೋವು–ಸಂಕಷ್ಟಗಳನ್ನು ಹೇಳಿಕೊಳ್ಳುವುದಾದರೂ ಯಾರ ಬಳಿ? ಅದಕ್ಕೆ ಒಂದು ದಿನವಾದರೂ ಸಿರಿ ಉತ್ಸವ ನೆರವಾಗುತ್ತದೆ. ದೇವರ ಪೂಜೆಯ ಹರಕೆಯ ನೆಪದಲ್ಲಿ ನಿಟ್ಟುಸಿರು ಹೊರಹೊಮ್ಮುತ್ತದೆ. ಹಳ್ಳಿಯ ಜನ ದುಗುಡ ದುಮ್ಮಾನಗಳನ್ನು ಕಣ್ಣೀರಿನೊಂದಿಗೆ ಬೆರೆಸಿ ಅಮ್ಮ ಸಿರಿಯೇ ನಿನ್ನ ನೋವು ನನ್ನ ನೋವೂ ಹೌದು ಎಂದು ಭಾವಿಸುತ್ತಾರೆ. ಇವರಿಗೆ ಸಿರಿ ಜೊತೆಗಾತಿಯಾಗುತ್ತಾಳೆ. ಹಾಗೆಯೇ ಸಿರಿಯ ನೋವಿಗೂ ಸಾವಿರಾರು ಜೊತೆಗಾರರು ಸಿಗುತ್ತಾರೆ. ನಿಟ್ಟುಸಿರು ಇಡೀ ಉತ್ಸವದುದ್ದಕ್ಕೂ ಹೊಮ್ಮುತ್ತಲೇ ಇರುತ್ತದೆ.

ದಕ್ಷಿಣ ಕನ್ನಡದ ಬಹುತೇಕ ಕೆಳವರ್ಗಗಳ ಹಾಗೂ ಬುಡಕಟ್ಟುಗಳ ಜನರೇ ಸೇರಿ ಆಚರಿಸುವ ಈ ಆಚರಣೆ ಈ ದೇಶದ ಬಾಯಿಕಟ್ಟಿದ ಮಹಿಳೆಯರಿಗೆ ಧ್ವನಿಯಾಗಲು ಒಂದು ಅವಕಾಶ ಮಾಡಿಕೊಡುತ್ತದೆ. ಇಡೀ ವರ್ಷ ಮನೆಯಲ್ಲಿ ಅಸಹಾಯಕರಾಗಿ ಮೂಕವೇದನೆ ಅನುಭವಿಸಿದ ಅವರು ವರ್ಷದ ಒಂದು ನಿರ್ದಿಷ್ಟ ದಿನದಲ್ಲಿ ತಮ್ಮ ಅಳಲನ್ನು ತೋಡಿಕೊಳ್ಳುವ ಮೂಲಕ ಪುರುಷ ಸಮಾಜದ ಕ್ರೌರ್ಯವನ್ನು ಬಯಲಿಗೆಳೆಯುತ್ತಾರೆ.

ದಕ್ಷಿಣ ಕನ್ನಡದ ಖ್ಯಾತ ಜಾನಪದ ವಿದ್ವಾಂಸ ಡಾ.ಅಮೃತ ಸೋಮೇಶ್ವರ ಈ ಆರಾಧನೆಯ ಬಗ್ಗೆ ಹೀಗೆ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

"ಹುಣ್ಣಿಮೆ, ಅಮಾವಾಸ್ಯೆಗಳಂಥ ನಿಸರ್ಗದ ಸಂಧಿ ಸ್ಥಿತಿಗಳಿಗೂ ಮನಸ್ಸಿನ ಸ್ಥಿತ್ಯಂತರಗಳಿಗೂ ಸಂಬಂಧವಿದೆಯಷ್ಟೇ? ಅನೇಕ ಆಚರಣೆಗಳು ಈ ದಿನಗಳಿಗೆ ಸಂಬಂಧಿಸಿ ಜರುಗುವುದನ್ನು ಗಮನಿಸಬಹುದು. ಸಿರಿ ಜಾತ್ರೆಯ ವೇಳೆ ಸಿರಿಗಳಿಗೂ ಕುಮಾರನಿಗೂ ಆರಾಧನೆ ಸಲ್ಲುತ್ತದೆ(ಅಕ್ಕೆ ಸಿರಿ ಅಥವಾ ಅಕ್ಕೆರಸು ಪೊಂಜೆದಿ,

ಸೊನ್ನೆಗಿಂಡೆ, ಅಬ್ಬಗದಾರಗ ಇವರು ಸಿರಿಗಳು. ಅಕ್ಕೆ ಸಿರಿಯ ಮಗ ಕೋಟಿಪೂಂಜ ಕುಮಾರನೆಂದೇ ಪ್ರಸಿದ್ಧನಾಗಿದ್ದಾನೆ. ನೂರಾರು ಸ್ತ್ರೀಯರಿಗೆ ಸಿರಿ ಬಳಗದ ಶಕ್ತಿಗಳೂ, ಕೆಲವರು ಪುರುಷರಿಗೆ ಕುಮಾರನೂ ಮೈದುಂಬಿ ಬರುವುದು ಈ ಉತ್ಸವದ ವಿಶೇಷವಾಗಿದೆ. ಸಾಮಾನ್ಯವಾಗಿ ಒಂದು ದೈವ ಶಕ್ತಿಯು ಏಕಕಾಲದಲ್ಲಿ ಹಲವರ ಮೇಲೆ ಆವೇಶಗೊಳ್ಳುವ ಪದ್ಧತಿ ಕಡಿಮೆ.(ವಿಷ್ಣುಮೂರ್ತಿ ದೈವದ ಒತ್ತೆಕೋಲದಲ್ಲಿ ಮಾತ್ರ ಅಂಥ ವಾಡಿಕೆ ಇದೆ.).

ಸಾಮಾನ್ಯವಾಗಿ ಬ್ರಾಹ್ಮಣೇತರ ವರ್ಗದವರು ಮಾತ್ರ ಸಿರಿಬಳಗದಿಂದ ಆವೇಶಕ್ಕೆ ಒಳಗಾಗುತ್ತಾರೆ(ಆದರೆ ಮೊದಲಿಗೇ ಅಬ್ಬಗದಾರಗರು ಆವೇಶಗೊಂಡದ್ದು ನಂದಳಿಕೆ ದೇವಸ್ಥಾನದ ಬ್ರಾಹ್ಮಣ ಅರ್ಚಕರ ಹೆಂಡತಿಯ ಮೇಲೆ ಎಂಬ ಐತಿಹ್ಯವೂ ಇದೆ!). ಅಪೂರ್ವಕ್ಕೆ ಕ್ರೈಸ್ತರಿಗೂ ಮುಸ್ಲಿಮರಿಗೂ ಸಿರಿಯ 'ಸೂಕೆ' ಇರುವುದುಂಟು. ಇತರ ದೈವ ಸೇವೆಗಳಿಗೆ ಧರಿಸುವಂಥ ಯಾವುದೇ ವೇಷಭೂಷಣ ಸಿರಿ ಮತಾಚರಣೆಯಲ್ಲಿ ಇರುವುದಿಲ್ಲ.

ಆವೇಶಗೊಂಡ ಸಿರಿ ಬಳಗ ಕೈಯಲ್ಲಿ ಅಡಿಕೆಯ ಹೂವನ್ನು ಹಿಡಿದುಕೊಂಡು ಮೈಯೊಲೆಯಿಸುತ್ತ ಸಿರಿಸಂಧಿಯನ್ನು ನಿರ್ದಿಷ್ಟ ಧಾಟಿಯಲ್ಲಿ ಭಾವೋದ್ರಿಕ್ತರಾಗಿ ಹಾಡುತ್ತಾರೆ. ಆವೇಶಗೊಂಡ ಚಿಕ್ಕ ಚಿಕ್ಕ ಗುಂಪುಗಳನ್ನು ಕುಮಾರನಿಂದ ಆವೇಶಗೊಂಡ ಪಾತ್ರಿ ನಿಯಂತ್ರಿಸುತ್ತಿರುತ್ತಾರೆ. ಸಿರಿಬಳಗದೊಂದಿಗೆ ಕುಮಾರನ ಹಾಡಿನ ರೂಪದ ಸಂವಾದ ನಡೆಯುತ್ತದೆ. ಈ ಹಾಡು ಮತ್ತು ಆವೇಶ ಇಡೀ ರಾತ್ರಿ ನಡೆಯುವುದುಂಟು.

ಸಿರಿಜಾತ್ರೆಯ ಹೊರತಾಗಿಯೂ ಭಿನ್ನ ಸಂದರ್ಭಗಳಲ್ಲಿ 'ದಳಿಯ ಹಾಕುವುದು' ಎಂಬ ಕಾರ್ಯಕ್ರಮದಲ್ಲೂ ಸಿರಿಯ ಸಂಧಿ–ಹೆಚ್ಚಾಗಿ ಸಂವಾದ ರೂಪದಲ್ಲಿ ಹಾಡಲ್ಪಡುತ್ತದೆ. 'ಸಿರಿದರ್ಶನ'ದಲ್ಲಿ 'ದೈವಿಕ ಆವೇಶ'ದ ವಿಚಾರ ಏನಿದ್ದರೂ ಸುಪ್ತಮನಸ್ಸಿನ ಕೆಲವೊಂದು ಅದುಮಿಟ್ಟ ಸಂಗತಿಗಳಿಗೆ ಇಲ್ಲಿ ವ್ಯಕ್ತರೂಪ ದೊರಕಿ ಒಂದು ಬಗೆಯ ಮಾನಸಿಕ ತಾಪ ಶಮನಕ್ರಿಯೆ ಜರುಗುತ್ತದೆ ಎಂಬ ಅಂಶ ಸುಸ್ಪಷ್ಟ. ಸ್ವಚ್ಛಂದವಾಗಿ ಹಾಡಿ ಕುಣಿಯುವುದು ಆದಿಮಾನವ ಯುಗದ ಮೂಲ ಪ್ರವೃತ್ತಿ. ಈ ಸಹಜಾಪೇಕ್ಷೆ ಇಲ್ಲಿ ದೈವಿಕ ಉಪಚಾರದ ರೂಪದಲ್ಲಿ ಕಾಣಿಸಿಕೊಳ್ಳುವಂತಿದೆ. ಸಾಮಾನ್ಯ ಪರಿಸರದಲ್ಲಿ, ಕೌಟಂಬಿಕ ಜೀವನದಲ್ಲಿ ಹೀಗೆ ಹಾಡುವಂತಿಲ್ಲ; ಕುಣಿಯುವಂತಿಲ್ಲ. ತನ್ನ ಮನಸ್ಸಿನ ಅಭಿಪ್ರಾಯಗಳನ್ನು ನಿಚ್ಚಳವಾಗಿ ಪ್ರಕಟಿಸುವಂತಿಲ್ಲ. ಆದರೆ, ದೈವಾವೇಶಗೊಂಡ ವ್ಯಕ್ತಿ ಒಂದು ಬಗೆಯ ಸ್ವತಂತ್ರ. ಹಲವಾರು ಜನ ಒಟ್ಟಿಗೇ ಆವೇಶಗೊಂಡಾಗ ಮೂಲತಃ ದುರ್ಬಲ ವ್ಯಕ್ತಿತ್ವದ ಬಡಪಾಯಿಗಳಿಗೆ ಒಂದು ನೈತಿಕ ಧೈರ್ಯ ಬಂದಂತಾಗಬಹುದು. ಆವೇಶ, ವಿಚಿತ್ರವರ್ತನೆ, ಸಂಧಿಯ ಆಲಾಪನೆ ಪ್ರತಿಭಟನೆಯ ಸಂಕೇತಗಳಾಗಬಹುದು.

PDF created with pdfFactory Pro trial version www.pdffactory.com

ಸಿರಿಯ ಆವೇಶಕ್ಕೊಳಗಾದವರಲ್ಲಿ ಎಲ್ಲರೂ ಸಂಧಿ ಹಾಡುವುದಿಲ್ಲ. ಕೆಲವರು ಕೇವಲ ಲಯಬದ್ಧವಾಗಿ ಮೈಯೊಲೆಯಿಸುತ್ತಿರುತ್ತಾರೆ. ಕೆಲವರು ಕೆಲವೇ ಸೊಲ್ಲು ಹಾಡುತ್ತಾರೆ. ಕೆಲವರು ಬರೇ ನಾರಾಯಣ ನಾರಾಯಣ ಎಂದಷ್ಟೇ ಆವರ್ತಿಸುತ್ತಿರುತ್ತಾರೆ. ಅನುಭವ ಹೆಚ್ಚು ಆದಂತೆ ಸಂಧಿ ಸರಾಗವಾಗಿ ಹೊಮ್ಮುತ್ತದೆಂದು ತಿಳಿಯುತ್ತದೆ.

ಇಲ್ಲಿ ಪ್ರಕಟವಾಗುವ ಅನೇಕ ಮಾಸಿಕ ಸಮಸ್ಯೆಗಳ ಮೂಲವನ್ನು ಸಿರಿಪಾಡ್ದನದಲ್ಲಿ ಗುರುತಿಸಬಹುದಾಗಿದೆ. ಮಕ್ಕಳ ಹಂಬಲ, ಸವತಿ ಮತ್ಸರ, ಅನೈತಿಕ ಸಂಬಂಧ, ಗಂಡನಿಂದ ತಿರಸ್ಕಾರ, ಅತ್ತೆ ಸೊಸೆಯರ ಸಂಘರ್ಷ, ಅಕ್ಕ ತಂಗಿಯರ ಮೇಲಾಟ, ಒಡೆತನದ ಆಕಾಂಕ್ಷೆ–ಇತ್ಯಾದಿ ವಿಚಾರಗಳೇ ಬೇರೆ ಬೇರೆ ರೀತಿಯಲ್ಲಿ ವಿವಿಧ ಮುಖಗಳನ್ನು ಪಡೆದು ದೈವಿಕ ಮುಖವಾಡ ಧರಿಸುವ ಸಾಧ್ಯತೆ ಇದೆ. ಇಂಥ ಆವೇಶ ಪ್ರಸ್ಥಾನವನ್ನು ಮನೋವೈಜ್ಞಾನಿಕ ಪೃಥಕ್ಕರಣಕ್ಕೆ ಒಳಪಡಿಸಿದಲ್ಲಿ ಅನೇಕ ಮನೋಚೇಷ್ಟೆಗಳ ರಹಸ್ಯಗಳು ಪ್ರಕಟವಾದವು.

ಕೋಟಿ ಚೆನ್ನಯ ಸಂಧಿಯಲ್ಲಿ ಚಿತ್ರಿತವಾದ ಸಮಸ್ಯೆಗಳಿಗಿಂತ ಭಿನ್ನವೂ ಸಂಕೀರ್ಣ ಮಯವೂ ಆದ ಸಮಸ್ಯೆಗಳು ಸಿರಿ ಸಂಧಿಯಲ್ಲಿವೆ. ಮಾನವ ಸಂಬಂಧಗಳ ವಿಲಕ್ಷಣತೆಯನ್ನು, ಸೂಕ್ಷ್ಮತೆಯನ್ನು ಈ ಸಂಧಿ ಅಡಿಗಡಿಗೂ ಸ್ಪರ್ಶಿಸುತ್ತಾ ಸಾಗುತ್ತದೆ. ಮಾತೃವಂಶೀಯ ಕುಟುಂಬಪದ್ಧತಿಯ ಒಡಲಲ್ಲಿ ರೂಪುಗೊಂಡ ಹೆಣ್ಣೊಬ್ಬಳು ಅದೇ ವ್ಯವಸ್ಥೆಯ ಧಾಳಿಯನ್ನೂ, ಇತರ ಸಮಸ್ಯೆಗಳ ಹಾವಳಿಯನ್ನೂ ದಿಟ್ಟೆಯಾಗಿ ಇದಿರಿಸಿದ ಮಾರ್ಮಿಕ ವೃತ್ತಾಂತ ಈ ಸಂಧಿಯ ಮುಖ್ಯ ವಿಷಯವಾಗಿದೆ. ಅಕ್ಕೆ ಸಿರಿಯದು ಕಣ್ಣೀರ ಬಾಳ್ವೆಯಾದರೂ ಆಕೆ ಧೀರೆ. ಹೊಣೆಗೇಡಿಯಾಗಿ ದಾರಿಗೆ ಬಾರದ ವ್ಯಭಿಚಾರಿ ಗಂಡನಿಗೆ ಆಕೆ ಧೈರ್ಯದಿಂದ 'ಬರ' ಹೇಳುತ್ತಾಳೆ ಮಾತ್ರವಲ್ಲ. ಮರುಮದುವೆ ಯಾಗುತ್ತಾಳೆ. ಹಾಗಿದ್ದರೂ ಕಾರಣಿಕದ ಗರತಿ ಎಂಬ ಗೌರವಕ್ಕೆ ಪಾತ್ರಳಾಗುತ್ತಾಳೆ. "ಸಿರಿಯು ಪ್ರಬುದ್ಧ ಪುರುಷನೊಬ್ಬನ ಬೆಂಬಲವಿಲ್ಲದೆಯೂ ನೈತಿಕ ಸದ್ಗುಣಗಳನ್ನು ಮತ್ತು ಫಲವಂತಿಕೆಯನ್ನು ಕಾಯ್ದುಕೊಂಡು ಬಂದ ಸ್ತ್ರೀಯು ಐತಿಹ್ಯಕ್ಕೆ ದುಷ್ಟಾಂತವಾಗಿದ್ದಾಳೆ. ಅವಳ ಮಗ ಕುಮಾರ ಆಕೆಯ ಸದ್ಗುಣ ಮತ್ತು ಋಜುತ್ವದ ಸಾಕ್ಷಿಯಾಗಿ ನಿಲ್ಲುತ್ತಾನೆ(ಪೀಟರ್ ಜೆ. ಕ್ಲಾಸ್, ೧೯೮೭, ಪು.೩೦).

ಸಿರಿಯನ್ನು ಶಿಷ್ಟಪುರಾಣಗಳ ಸಾಧ್ವಿಯರ ಜೊತೆ ಹೋಲಿಸುವಂತಿಲ್ಲ. ಅಲ್ಲಿಯ ಪಾತಿವ್ರತ್ಯದ ಪರಿಕಲ್ಪನೆ ಬೇರೆ; ಇಲ್ಲಿಯ ಸ್ತ್ರೀ ಶಕ್ತಿಯ ಪ್ರತಿಪಾದನೆ ಬೇರೆ. ಇಲ್ಲಿಯ ನೈತಿಕತೆಯ ಕಲ್ಪನೆ, ಸ್ತ್ರೀಯ ವಿವೇಚನೆ ವಿಶಿಷ್ಟವಾದದ್ದು.

ಸಿರಿ ಸಂಧಿಯ ಕಥಾಭಿತ್ತಿ ತುಂಬ ವಿಸ್ತಾರವಾದದ್ದು. ಪುರಾಣ ಅಥವಾ ಮಹಾಕಾವ್ಯ ಸಹಜವಾದ ಹಲವು ಅತಿಮಾನುಷ ವೃತ್ತಾಂತಗಳು(ಸಿರಿಯ ಜನ್ಮ, ಆಕೆ ಪ್ರಕಟಿಸುವ

ಅಸಾಮಾನ್ಯ ಶಕ್ತಿಗಳ, ವರ, ಶಾಪ ಪ್ರಸಂಗಗಳು ಇತ್ಯಾದಿ.) ಇದರಲ್ಲಿ ಸೇರಿಕೊಂಡಿದ್ದರೂ, ಅಂಥ ಪವಾಡಗಳನ್ನು ಒಂದು ವೇಳೆ ಕಳಚಿದರೂ ಮೂಲಕಥೆ ಗಟ್ಟಿಯಾಗಿಯೇ ಉಳಿಯುತ್ತದೆ. ಇತಿಹಾಸದ ಒಂದು ಕಾಲಘಟ್ಟದಲ್ಲಿ ವಾಸ್ತವಿಕವಾಗಿ ನಡೆದುಹೋದ ಕಥೆ ಎಂಬುದರಲ್ಲಿ ಯಾವುದೇ ಸಂಶಯ ತೋರುವುದಿಲ್ಲ. ಭಿನ್ನ ಭಿನ್ನ ವ್ಯಕ್ತಿತ್ವವುಳ್ಳ ಅನೇಕ ಮಂದಿ ತಮ್ಮ ತಮ್ಮ ನಂಬಿಕೆ ಸಾಹಸ, ಸಿಟ್ಟು ಸೆಡುವು, ಸೊಕ್ಕು, ಪಂಥ ಪೌರುಷ, ಕುಹಕ, ಕರುಣೆ–ಇತ್ಯಾದಿ ಶಕ್ತಿ ದೌರ್ಬಲ್ಯಗಳಿಂದ ಜೀವಂತವೆನಿಸಿ ಈ ಹಾಡಿನುದ್ದಕ್ಕೂ ಹಾದು ಹೋಗುತ್ತಾರೆ. ಅವರ ಬಾಳ್ವೆಯ ಉತ್ಕಟತೆ, ಅವರಲ್ಲಿ ಕೆಲವರು ನೆಚ್ಚಿನ ಜೀವನಮೌಲ್ಯಗಳು ನಮ್ಮಲ್ಲಿ ಬೆರಗನ್ನು ಬಿತ್ತದೇ ಇರಲಾರವು. 'ಬೆರ್ಮರ್ ದೈವತ ಸಿರಿ ಕಥೆಯಲ್ಲಿ ಮುಖ್ಯ ಪಾತ್ರ–ಅದೃಷ್ಟ ದೇವತೆಯ ಪಾತ್ರ ವಹಿಸುತ್ತದೆ. ಶಾಪಾನುಗ್ರಹಮೂರ್ತಿಯಾದ ಈ ಬೆರ್ಮರ್ ಬ್ರಾಹ್ಮಣ ವೇಷದಲ್ಲಿ ಬರುವ ಒಂದು ಪಾತ್ರವಾಗಿಯೂ ಕಥಾಸೂತ್ರವನ್ನು ಜಗ್ಗುವುದನ್ನು ಗಮನಿಸಬಹುದು('ಬೆರ್ಮರ್' ದೇವತೆಯ ಹೆಚ್ಚಿನ ವಿಚಾರಗಳಿಗೆ ಲೀಲಾಭಟ್ ಅವರ 'ತುಳುನಾಡ ಬೆರ್ಮರ್–ಒಂದು ಟಿಪ್ಪಣಿ' ಎಂಬ ಲೇಖನ ನೋಡಬಹುದು –'ಸಿರಿ' ಸಂಪುಟ, ಪು.೨೩೬). ಒಂದು ರೀತಿಯಲ್ಲಿ ಇಡೀ ಕಥಾನಕವೇ ಬೆರ್ಮರ್ ದೇವರ ಮಹಿಮಾ ವ್ಯಾಖ್ಯಾನ ಎನ್ನಬಹುದು. ಪ್ರತ್ಯೇಕ ಇಲ್ಲವೆ ಪರೋಕ್ಷವಾದ ಬೆರ್ಮರ್ ದೇವರ ಕಣ್ಣಾಗಿನಲ್ಲೆ ನಾಲ್ಕು ತಲೆಮಾರುಗಳ ಕಥನ ನಡೆಯುತ್ತದೆ. ಬೆರ್ಮರ್ ಕ್ಷೇಮಂಕರ ದೈವತವಾಗಿರುವಂತೆಯೆ, ಸಾಂದರ್ಭಿಕವಾಗಿ(ಶಿಷ್ಟ ದೇವರುಗಳೂ ಅಷ್ಟೆ) ಶಿಕ್ಷಾಕರ್ತನಾಗಿಯೂ ಕಾಣಿಸಿಕೊಂಡಿದ್ದಾನೆ.

ಸಿರಿ ಸಂಧಿಯಲ್ಲಿ ಅಬ್ಬಗ ದಾರಗ ವೃತ್ತಾಂತದಲ್ಲಿ ವರ್ಣಿತವಾದ ಚೆನ್ನಯಾಟವು ಇಂದಿಗೂ ಸಿರಿಜಾತ್ರೆಯ ಸಂದರ್ಭದಲ್ಲಿ ಪುನರಭಿನಯಗೊಳ್ಳುತ್ತಿರುವುದು ಗಮನೀಯವಾಗಿದೆ. ಅಬ್ಬಗ ದಾರಗೆಯರಿಂದ ಆವೇಶಗೊಂಡ ಮಹಿಳೆಯರು ಚೆನ್ನಯಾಟ ಆಡುವ ವಿಧಿಯನ್ನು ನಿರ್ವಹಿಸುತ್ತಾರೆ. ಕುಮಾರನಿಂದ ಆವೇಶಿತನಾದ ಪಾತ್ರಿಯ ಉಪಸ್ಥಿತಿ ಇಲ್ಲಿ ಮುಖ್ಯವಾಗಿದೆ. ಈ ಸನ್ನಿವೇಶಕ್ಕೆ ಸಂಬಂಧಪಟ್ಟ ಸಂಧಿಯನ್ನು ಆಗ ಹಾಡಲಾಗುತ್ತದೆ.

ಪ್ರಾಚೀನ ತುಳುನಾಡಿನ ಸಾಂಸ್ಕೃತಿಕ ಬದುಕಿನ ಅನೇಕ ಮಗ್ಗುಲುಗಳ ಮಾರ್ಮಿಕ ಚಿತ್ರಣ ಈ ಸಂಧಿಯಲ್ಲಿದೆ. ಜನಪದ ವಿಜ್ಞಾನಿಗಳ, ಮಾನವಶಾಸ್ತ್ರಜ್ಞರ, ಮಾನಸ ವಿಜ್ಞಾನಿಗಳ ಕುತೂಹಲವನ್ನು ಸೆಳೆಯತಕ್ಕ ಅನೇಕ ಅಧ್ಯಯನಾಂಶಗಳು ಸಿರಿ ಆರಾಧನೆಯಲ್ಲಿಯೂ, ಅದಕ್ಕೆ ಸಂಬಂಧಪಟ್ಟ ಈ ಪೂರ್ವ ಅಖ್ಯಾಯಿಕೆಯಲ್ಲಿಯೂ ಹುದುಗಿವೆ. ಸ್ತ್ರೀವಾದಿ ಅಧ್ಯಯನಕ್ಕೊಂದು ವಿಶಿಷ್ಟ ಆಕರ–ಈ ಬೃಹತ್ ಪಠ್ಯ.

ಸಿರಿಪಾಡ್ದನ ರೂಪದ ಕಾವ್ಯವನ್ನು ಸಂಗ್ರಹಿಸಿ ಪ್ರಕಟಿಸಿರುವ ಡಾ.ಎ.ವಿ. ನಾವಡ

PDF created with pdfFactory Pro trial version www.pdffactory.com

ಅವರ ಅಭಿಪ್ರಾಯವೂ ಕೂಡ ಡಾ. ಅಮೃತ ಸೋಮೇಶ್ವರ ಅಭಿಪ್ರಾಯಕ್ಕೆ ಪೂರಕವಾಗಿಯೇ ಇದೆ.

"ಲೌಕಿಕ–ಅಲೌಕಿಕವನ್ನು ಒಂದುಗೂಡಿಸುವ, ಬದುಕಿನ ಒತ್ತಡಕ್ಕೆ ಒಳಗಾದ ನೂರಾರು ಮಹಿಳೆಯರು ಆವೇಶಗೊಳ್ಳುವ, ಅಲ್ಲಿ ಸೃಷ್ಟಿಯಾಗುವ ಪರ್ಯಾಯ ಬಂಧುತ್ವ ಹಾಗೂ ಆ ಮೂಲಕ ಪಡೆಯುವ ಸಮಾಧಾನ, ಬಿಡುಗಡೆಗಳ ಸಿರಿ ಆರಾಧನಾ ಪ್ರಪಂಚವನ್ನು ಬಹಳ ಸುಲಭವಾಗಿ ಅರ್ಥೈಸುವುದು ಆಗದು. ಅದನ್ನು ಜಾತ್ರೆಯ ಹೊರಗಿನ ಸಾಮಾಜಿಕ, ಕೌಟುಂಬಿಕ, ಸಾಂಸ್ಕೃತಿಕ, ಆರ್ಥಿಕ ಸಂದರ್ಭಗಳ ಗ್ರಹಿಕೆಯ ಹಿನ್ನೆಲೆಯಲ್ಲಿ ಕಂಡುಕೊಳ್ಳಬೇಕಾಗುತ್ತದೆ. "ಅದಕ್ಕೆ ಉತ್ಸವರೂಪದಲ್ಲಿ ನಡೆಯುವ ಮಹಿಳೆಯರ ಆವೇಶ ಮತ್ತು ಸಿರಿ ಸಂಧಿಯ ಹಾಡುವಿಕೆ ಈ ವ್ಯವಸ್ಥೆಯ ಒಂದು ಮುಖವಾದರೆ, ಸಿರಿ ಹೆಂಗಸರ ವೈಯಕ್ತಿಕ ಬದುಕಿನ ಒಂದು ಇತಿಹಾಸ, ಕುಟುಂಬ ಪದ್ಧತಿ, ಸಿರಿ ಬಳಗದ ಸದಸ್ಯೆಯಾಗಿ ನೇಮಕಗೊಳ್ಳುವ ದಲಿಯ ಸೇವೆ, ನಿತ್ಯಜೀವನದಲ್ಲಿ ಅನುಸರಿಸಬೇಕಾದ ವಿಧಿ ನಿಯಮಗಳು, ಅನುಭವ ಸಿರಿ ಹೆಂಗಸರಿಂದ ಮತ್ತು ಕುಮಾರನ ಸಹಾಯದಿಂದ ಸಿರಿ ಸಂಧಿಯನ್ನು ಕಲಿತುಕೊಳ್ಳುವ ಬಗೆ ಇವುಗಳು ಈ ವ್ಯವಸ್ಥೆಯ ಇತರ ಮುಖಗಳಾಗಿವೆ ಎನ್ನುವ ವಿಸ್ತಾರದ ಅರಿವಿರಬೇಕಾಗುತ್ತದೆ.

ಸಿರಿಪಾಡ್ದನದಲ್ಲಿ ಸಿರಿಯ ಕೌಟುಂಬಿಕ, ಸಾಮಾಜಿಕ ಸಂದರ್ಭ, ವಿಚ್ಛೇದನ, ಮರುಮದುವೆ, ಉತ್ತರಾಧಿಕಾರತ್ವ, ಸ್ತ್ರೀತ್ವ ಮತ್ತು ಪರಿಶುದ್ಧತೆಯ ಪರಿಕಲ್ಪನೆಗಳು, ಗಂಡಿನ ಮೋಸ, ಅನ್ಯಾಯ, ಪುರುಷಪ್ರಭುತ್ವದ ಹೇರಿಕೆಯ ಪ್ರಯತ್ನಗಳು, ಅದರ ವಿರುದ್ಧ ಹೆಣ್ಣಿನ ಹೋರಾಟ ಮತ್ತು ವಿಜಯಗಳು ದಾಖಲಾಗಿದೆ. ಇದರಿಂದಾಗಿ ಬಂಟ ಸಮುದಾಯದ ಮೂಲ ಹೆಣ್ಣೆಂದು ಗ್ರಹೀತಳಾದ ಸಿರಿಯೊಂದಿಗೆ ತುಳುನಾಡಿನ ಎಲ್ಲ ಮಾತೃರೂಪಿ ಕುಟುಂಬದ ಹೆಣ್ಣುಗಳು ತಮ್ಮ ಸಂಬಂಧವನ್ನು ಕಂಡುಕೊಳ್ಳುತ್ತಾರೆ. ಸಿರಿ(ಪಾಡ್ದನ) ಪುರಾಣದೊಂದಿಗೆ ಗಾಢವಾದ ಸಂಬಂಧವಿರುವ ತುಳುವ ಮಹಿಳೆಯರಿಗೆ ಸಿರಿಯ ಬದುಕು ಮತ್ತು ಹೋರಾಟಗಳು ಆದರ್ಶ ಮಾದರಿಯಾಗಿರುವಲ್ಲಿ ಸಿರಿಪಾಡ್ದನವು ಸಿರಿ ಜಾತ್ರೆಗೊಂದು ಸಂಹಿತೆಯಾಗಿ ಕಾರ್ಯನಿರ್ವಹಿಸುತ್ತದೆ. ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳ ಅನೇಕ ಶೈವ ದೇವಾಲಯಗಳಲ್ಲಿ ಸಿರಿ ಆರಾಧನೆ ವಾರ್ಷಿಕ ಜಾತ್ರೆಯ ಸ್ವರೂಪದಲ್ಲಿ ನಡೆಯುತ್ತದೆ. ಉಡುಪಿ ಜಿಲ್ಲೆಯ ಪಾಂಗಾಳ, ಕವತ್ತಾರು, ಹಿರಿಯಡಕ, ಬೊಳ್ಯೊಟ್ಟು, ನಂದಳಿಕೆ; ದಕ್ಷಿಣ ಕನ್ನಡ ಜಿಲ್ಲೆಯ ಕಂಡೇವು, ಆತ್ರಿಜಾಲ್, ಹುರುಂಬಿದೊಟ್ಟು, ಕುತ್ರೊಟ್ಟು, ನಿಡಿಗಲ್ಲ್, ಉರ್ಕಿದೊಟ್ಟು, ಜರೆಗುಡ್ಡೆಗಳು ಪ್ರಮುಖ ಸಿರಿ ಆರಾಧನಾ ಕೇಂದ್ರಗಳು. ಮಾರ್ಚ್, ಏಪ್ರಿಲ್, ಮೇ ತಿಂಗಳು ಹುಣ್ಣಿಮೆಯ ರಾತ್ರಿ ಸಿರಿಜಾತ್ರೆ ಜರುಗುವುದು.

ಬಹುತೇಕ ಸಿರಿಜಾತ್ರೆಗಳು ಶೈವ ದೇವಾಲಯಗಳಲ್ಲಿ ನಡೆಯುವುದದರೂ ಶಿಷ್ಟದೇವರಿಗೂ ಸಿರಿಗೂ ಯಾವುದೇ ಸಂಬಂಧವಿಲ್ಲ. ಈ ದೇವಾಲಯಗಳು ಮೂಲತಃ ಆಲಡೆ ಅಥವಾ ಬೆರ್ಮಸ್ಥಾನಗಳಾಗಿವೆ. ಸಿರಿಯ ಆರಾಧನೆ ಕೇಂದ್ರಗಳು ಸಂಕೀರ್ಣ ಸ್ವರೂಪದ್ದಾಗಿರುತ್ತದೆ. ಒಂದೆಡೆ ಶೈವ ದೇವಾಲಯ ಹಾಗೂ ಪರಿವಾರ ದೇವತೆಗಳು ಇನ್ನೊಂದೆಡೆ ಸ್ಥಳದ ಭೂತಗಳು, ಮತ್ತೊಂದು ಸ್ತರದಲ್ಲಿ ಸಿರಿಗುಂಡ, ಸಿರಿಬಳಗದ ಮೂರ್ತಿಗಳು. ಹೀಗಾಗಿ ಸಿರಿಜಾತ್ರೆಯ ಆವರಣ ಹಾಗೂ ಆರಾಧನೆ ಪ್ರಕ್ರಿಯೆಗಳು ಸಂಕೀರ್ಣತೆಯನ್ನು ಪಡೆದುಕೊಳ್ಳುತ್ತವೆ. ಡಾ.ಪೀಟರ್ ಜೆ.ಕ್ಲಾಸ್ ಗುರುತಿಸುವಂತೆ "ಇಲ್ಲಿನ ಶಿವಾರಾಧನೆ ಸಿರಿಯ ಆರಾಧನೆಯನ್ನು ಅತಿಕ್ರಮಿಸಿ ಜರಗುತ್ತದೆಯೇ ಹೊರತು ಸಿರಿ ಆರಾಧನೆಯ ಒಂದು ಅಂಗವಾಗಿ ನಡೆಯುತ್ತಿಲ್ಲ. ಇಷ್ಟೊಂದು ವ್ಯಾಪಕ ನೆಲೆಯಲ್ಲಿ ಆರಾಧಿಸಲಾಗುವ ಸಿರಿ ಅಧೀನ ದೈವವಾಗಿ ಆರಾಧಿಸಲ್ಪಡುವ ಸಂಗತಿ ಅನೇಕ ಪ್ರಶ್ನೆಗಳನ್ನು ಎತ್ತುತ್ತದೆ."

ಜಾತ್ರೆಯಂದು ಮುಸ್ಸಂಜೆ ಹೊತ್ತಿಗೆ ಸಿರಿಯ ಭಕ್ತರು ಹಾಗೂ ಅವರ ಬಂಧುಗಳು ಸಿರಿಗುಡಿಗೆ ಬಂದು ಕಾಣಿಕೆ ಒಪ್ಪಿಸುತ್ತಾರೆ. ಬ್ರಾಹ್ಮಣ ತಂತ್ರಿಯಿಂದ ಪೂಜೆ ಸಲ್ಲುತ್ತದೆ. ಸಿರಿ ಮತ್ತು ಕುಮಾರ ಮೈದುಂಬುವ ವ್ಯಕ್ತಿಗಳು ಅಂದು ಶೌಚದಲ್ಲಿರಬೇಕು. ಸ್ನಾನ, ಮಡಿಬಟ್ಟೆ, ನಡೆಹಾಸು, ವೇಷಭೂಷಣ, ಹಿಂಗಾರ ಹುಣ್ಣಿಮೆ ರಾತ್ರಿ, ವಾದ್ಯಮೇಳಗಳ ಮೂಲಕ ಅವರನ್ನು 'ಪ್ರತ್ಯೇಕ'ಗೊಳಿಸಲಾಗುವುದು ದೈಹಿಕ ಹಾಗೂ ಮಾನಸಿಕವಾದ ಈ ಪ್ರತ್ಯೇಕೀಕರಣ ಪೂರ್ವಸಿದ್ದತೆಗಳು ಆವೇಶಕ್ಕೆ ಪೂರಕವಾಗಿ ದುಡಿಯುತ್ತವೆ. ಪ್ರತಿಯೊಂದು ಸಿರಿ ಆರಾಧನಾ ಕೇಂದ್ರಕ್ಕೆ ಸಂಬಂಧಪಟ್ಟಂತೆ ನಿಗದಿಯಾದ ಮೂಲಕುಮಾರ ಅಥವಾ ಸ್ಥಳ ಕುಮಾರ ಮತ್ತು ಅವನ ಅಧೀನ ಕುಮಾರರು ಹಾಗೂ ಸಿರಿಗಳು ಇದ್ದು ಹೆಣ್ಣೊಬ್ಬಳು ಸಿರಿಯಾಗುವ ಪ್ರಕ್ರಿಯೆ ಹೀಗಿರುತ್ತದೆ: ಸಾಮಾನ್ಯವಾಗಿ ಹೆಣ್ಣು ಎಳೆಹರೆಯದಿಂದ ಮಧ್ಯವಯಸ್ಸಿನ(೧೪ರಿಂದ ೩೫) ಗುಂಪಿನಲ್ಲಿ ಸಿರಿ ಆಕರ್ಷಣೆಗೆ ಒಳಗಾಗುತ್ತಾಳೆ. ಒಬ್ಬಾಕೆಯಲ್ಲಿ ದೈಹಿಕ/ಮಾನಸಿಕ ಅಸ್ವಸ್ಥತೆಯ ಚಹರೆಗಳು ಕಂಡುಬಂದಾಗ ಅದು 'ದುಷ್ಟಶಕ್ತಿಯ' ಕಾಟ, ಉಪದ್ರವಗಳೆಂದು ಪರಿಹಾರೋಪಾಯಗಳನ್ನು ನಡೆಸಲಾಗುವುದು. ಆಗಲೂ ಫಲ ಕಂಡುಬಾರದಿದ್ದಲ್ಲಿ ಸಿರಿಜಾತ್ರೆಗೆ ಹೋಗಿ ಹರಕೆ ಹೇಳಿಕೊಳ್ಳುತ್ತಾರೆ. ಆದರಂತೆ ಕುಮಾರನನ್ನು ಮನೆಗೆ ಕರೆಯಿಸಿ ಅಥವಾ ಕುಮಾರನಲ್ಲಿಗೆ ಹುಡುಗಿಯನ್ನು ಕರೆದೊಯ್ದು ಅಥವಾ ವಾರ್ಷಿಕ ಸಿರಿಜಾತ್ರೆಗೆ ಕರೆತಂದು ಸೇರಿಸುತ್ತಾರೆ. ಆರಾಧನಾ ಪ್ರಕ್ರಿಯೆಯೊಳಗೆ ಆವೇಶಿತಳಾಗುವ ಹೆಣ್ಣನ್ನು ಕುಮಾರ ಸಿರಿಪಾಡ್ದನದ ಭಾಗಗಳನ್ನು ಹಾಡುವ ಮೂಲಕ ಮಧ್ಯಂತರ ಜಗತ್ತಿಗೆ ಪ್ರವೇಶಿಸುವಂತೆ ಪ್ರಚೋದಿಸಲಾಗುತ್ತದೆ. ಈ ಪ್ರವೇಶ ಸಾಧ್ಯವಾಗಿ ಆಕೆ ಸಿರಿಬಳಗದ ಯಾವುದಾದರೊಂದು ಪಾತ್ರವಾಗಿ

PDF created with pdfFactory Pro trial version www.pdffactory.com

ತನ್ನನ್ನು ಕಂಡುಕೊಳ್ಳುತ್ತಾಳೆ. ಆವೇಶದ ನಿರಂತರ ಸ್ಥಿತಿಯಲ್ಲಿ ಆಕೆಯನ್ನು ಅನುಭವಿ ಸಿರಿಗಳು ಹಾಗೂ ಕುಮಾರ 'ಬಾಯಿಬಿಡಿಸುವ' ಕಾರ್ಯ ಮಾಡುತ್ತಾರೆ. ಆಗ ಆಕೆ ತಾನು ಸಿರಿಬಳಗದ ಸೊನ್ನೆಯೋ ಆಕೆ ಸಿರಿಬಳಗದ ನಿರ್ದಿಷ್ಟ ಸದಸ್ಯೆಯಾಗಿ ನಾಮಕರಣ ಹೊಂದುತ್ತಾಳೆ. ಮತ್ತಾಕೆ ವರ್ಷ ವರ್ಷವೂ ಜಾತ್ರೆಗೆ ಬಂದು ಸೇವೆ ಸಲ್ಲಿಸಲು ನಿಬದ್ಧಳಾಗುತ್ತಾಳೆ ದೇಹ ಮತ್ತು ಮನಸ್ಸಿನ ಪರಿಶುದ್ಧ ಸ್ಥಿತಿಯಲ್ಲಿ ಮಾತ್ರ ಸಿರಿ ಮೈದುಂಬುವುದು ಸಾಧ್ಯ ಎಂಬ ಬಲವಾದ ನಂಬಿಕೆ ಇದೆ. ಹೀಗಾಗಿ ಹೆಣ್ಣೊಬ್ಬಳಿಗೆ ಸಿರಿಯಾಗುವುದು ಅವಳ ಸಚ್ಚಾರಿತ್ರ್ಯ ಮತ್ತು ಪಾವಿತ್ರ್ಯದ ಸಂಕೇತವೆಂದೂ ಭಾವಿಸಲಾಗುವುದು. ಇದರಿಂದ ಸಿರಿಯಾಗುವ ಮುನ್ನಿನ ಹಾಗೂ ಇವತ್ತಿನ ಅವಳ ಸ್ಥಾನಮಾನದಲ್ಲಿ ಬಹಳಷ್ಟು ವ್ಯತ್ಯಾಸ ಗೋಚರಿಸುತ್ತದೆ.

ಜಾತ್ರೆಯಲ್ಲಿ ತಂತ್ರಿಯಿಂದ ತೀರ್ಥಪ್ರಸಾದ ಸ್ವೀಕರಿಸಿದ ಸಿರಿಗಳು ಮತ್ತು ಕುಮಾರರು ಎದುರುಬದುರಿಗೆ ಸಾಲಾಗಿ ಅಥವಾ ಸುತ್ತುವರಿದು ನಿಲ್ಲುವರು. ಸಿರಿ ಪಾಡ್ದನದ ಹಂದರವು ಅನಾವರಣಗೊಳ್ಳುತ್ತ ಹೋದಾಗ ಲೌಕಿಕ ಜಗತ್ತಿನ ಈ ವ್ಯಕ್ತಿಗಳು ಅಲೌಕಿಕ ಜಗತ್ತನ್ನು ಪ್ರವೇಶಿಸುತ್ತಾರೆ ಹಾಗೂ ಮಧ್ಯಂತರ ಜಗತ್ತಿನ ಪಾತ್ರಗಳಾಗಿ ರೂಪಾಂತರ ಗೊಳ್ಳುತ್ತಾರೆ. ಆಗ ಅವರು ಸಿರಿ–ಕುಮಾರ, ಕುಮಾರ ಸೊನ್ನೆ, ಕುಮಾರ ಅಬ್ಬರ ದಾರಗರಾಗಿ ಪರಸ್ಪರ ಸಂಬಂಧವನ್ನು ಸ್ಥಾಪಿಸಿಕೊಂಡು ಪಾಡ್ದನದ ಮೂಲಕ ಉತ್ತಮ ಪುರುಷರಲ್ಲಿ ಸಂವಾದ ನಡೆಸುತ್ತಾರೆ. ತುಳುವ ಬಂಧುತ್ವ ವ್ಯವಸ್ಥೆಯಲ್ಲಿ ಈ ಜೋಡಿಗಳು ರಕ್ತಬಾಂಧವ್ಯ ಘಟಕವಾಗಿದ್ದು ಅವು ತಾಯಿ–ಮಗ, ಅಣ್ಣ–ತಂಗಿ, ಸೋದರಮಾವ–ಸೊಸೆಯದಾಗಿವೆ. ಮಾತೃರೂಪಿ ತುಳುವ ಸಂಸ್ಕೃತಿಯಲ್ಲಿ ತಾಯಿಯ ಬಳಗವು 'ಕುಟುಂಬ'ವೆಂದು ಪರಿಗಣಿತವಾಗುವುದರಿಂದ ಸೋದರಮಾವ ಕುಟುಂಬದ ಸದಸ್ಯನಾಗಿದ್ದು ಸೋದರಮಾವ–ಸೊಸೆಯು ಒಂದೇ ಬಳಿ ಹೊಂದಿದ್ದು ಅವರೊಳಗಿನ ವಿವಾಹ ನಿಷಿದ್ಧವಾದುದು. ಈ ತಿಳಿವಳಿಕೆ ಸಿರಿಜಾತ್ರೆಯನ್ನು ಸಂತಾನಾಪೇಕ್ಷಿ ಮೇಳವೆಂಬ ಗ್ರಹಿಕೆಯನ್ನು ಮರುವಿಮರ್ಶೆಗೆ ಒಡ್ಡಲು ಒತ್ತಾಯಿಸುತ್ತದೆ."

೨.೧೦. ಬಲೀಂದ್ರ

ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಮತ್ತು ಮಲೆನಾಡಿನ ಹಲವು ಭಾಗಗಳಲ್ಲಿ ಬುಡಕಟ್ಟುಗಳೂ ಮೊದಲ್ಗೊಂಡಂತೆ ವಿವಿಧ ಶೂದ್ರವರ್ಗ ಸಾಮೂಹಿಕವಾಗಿ ಆರಾಧಿಸುವ ಪ್ರಮುಖ ದೈವವೆಂದರೆ ಬಲೀಂದ್ರ. ಆದರೆ, ಈ ದೇವರು ಖಾಯಂ ಆಗಿ ನೆಲೆ ನಿಂತ ದೇವರಲ್ಲ. ವರ್ಷಕ್ಕೊಮ್ಮೆ ಭೂಲೋಕಕ್ಕೆ ಬಂದು ತನ್ನ ಮಕ್ಕಳನ್ನು, ಅವರು ಬೆಳೆಯುವ ಬೆಳೆಗಳನ್ನು ಹಾರೈಸಿ ಹಿಂತಿರುಗುವ ದೇವರು.

ಬಲೀಂದ್ರನ ಪೂಜೆಯನ್ನು ವಿಶೇಷವಾಗಿ ಇಲ್ಲಿ ಪ್ರಸ್ತಾಪಿಸುವುದಕ್ಕೆ ಕಾರಣಗಳಿವೆ. ನಮ್ಮ ಪುರಾಣಗಳ ಪ್ರಕಾರ ಹಿಂದೆ ಚಕ್ರಾಧಿಪತಿಯಾಗಿದ್ದ ಬಲೀಂದ್ರನನ್ನು ಬ್ರಾಹ್ಮಣ ವೇಷ ತೊಟ್ಟ ವಿಷ್ಣು ಭಿಕ್ಷೆಯ ನೆಪದಲ್ಲಿ ಪಾತಾಳಕ್ಕೆ ತುಳಿದ ಪ್ರಸಂಗ ಅತ್ಯಂತ ಜನಜನಿತವಾದುದು. ವೈದಿಕರ ಅದಿದೈವವೆನಿಸಿದ ವಿಷ್ಣು ಈ ದ್ರಾವಿಡ ಚಕ್ರಾಧಿಪತಿಯನ್ನು ಪಾತಾಳಕ್ಕೆ ತುಳಿದು ಅವನ ಭೂಮಿಯನ್ನು ಕಿತ್ತುಕೊಂಡರೂ, ಅಂದು ನಡೆದಿರಬಹುದಾದ ದೌರ್ಜನ್ಯಕ್ಕೊಂದು ಸಂಕೇತ. ಆದರೆ ಸಾಕ್ಷಾತ್ ಬಲೀಂದ್ರನೇ ನಮ್ಮ ಕುಲದ ಮೂಲಪುರುಷ ಎಂದು ನಂಬುವ, ಆರಾಧಿಸುವ ಅಸಂಖ್ಯಾತ ಜನ ಇನ್ನೂ ಇದ್ದಾರೆ ಎಂಬುದೇ ಬಹುಮುಖ್ಯವಾದ ವಿಚಾರ. ಆದ್ದರಿಂದ, ವಾಮನನ ಈ ಅವತಾರದ ಕಥೆ ಸ್ಥಳೀಯ ಬುಡಕಟ್ಟುಗಳ ಭೂಮಿಯನ್ನು ಬ್ರಾಹ್ಮಣರು ಕೈವಶಮಾಡಿಕೊಂಡಿದ್ದರ ಸಂಕೇತವೇ ಎಂಬ ಅನುಮಾನ ಕೂಡ ಬರುತ್ತದೆ. ಹೊರಗಿನಿಂದ ಬಂದ ಆರ್ಯರಿಗೂ ಸ್ಥಳೀಯ ನಿವಾಸಿಗಳಾಗಿದ್ದ ದ್ರಾವಿಡ ಬುಡಕಟ್ಟುಗಳಿಗೂ ಏರ್ಪಟ್ಟ ಸಂಘರ್ಷವೋ, ಒಪ್ಪಂದವೋ ಆಗಿರಬಹುದಾದ ಈ ಪ್ರಸಂಗ ಅತ್ಯಂತ ಕುತೂಹಲಕಾರಿ. ಅದು ಏನೇ ಇರಲಿ, ತಮ್ಮ ಪಿತೃಗಳ ಪ್ರತಿನಿಧಿಯಾಗಿ ವರ್ಷಕ್ಕೆ ಒಮ್ಮೆ ಭೂಮಿಗೆ ಬರುವ ತಮ್ಮ ಮೂಲಪುರುಷನನ್ನು ಸಮೃದ್ಧಿಯ ಸಂಕೇತವಾಗಿ ಆರಾಧಿಸುತ್ತಿರುವುದು ಗಮನಿಸಬೇಕಾದ ವಿಚಾರ.

ಬಲೀಂದ್ರನನ್ನು ಶೂದ್ರರು ತಮ್ಮ ಪಿತೃಗಳ ಪ್ರತಿನಿಧಿ ಎಂದೇ ಭಾವಿಸುತ್ತಾರೆ. ಅಷ್ಟೇ ಅಲ್ಲ ಬಲೀಂದ್ರ ಒಂದು ಕಾಲಕ್ಕೆ ಕೃಷಿ ಮಾಡುತ್ತಿದ್ದ ಹಾಲಕ್ಕಿಗೌಡ ಎಂಬುದು ಅವರ ನಂಬಿಕೆ. ವರ್ಷಕ್ಕೆ ಒಮ್ಮೆ ಅವನು ತನ್ನ ಐದು ಜನ ಸಂಗಡಿಗರೊಡನೆ ವಜ್ರದ ಕೊಡೆ ಹಿಡಿದು ಬರುತ್ತಾನೆ. ಬಂದವನೆ ತನ್ನ ಜೊತೆಗೆ ಬಂದವರನ್ನು ಭಟ್ಟರ ಮನೆಗೂ ಶೆಟ್ಟರ ಮನೆಗೂ ಕಳುಹಿಸಿ ತಾನು ಮಾತ್ರ ಹಾಲಕ್ಕಿ ಗೌಡರ ಮನೆಗೆ ಹೋಗುತ್ತೇನೆ ಎಂದು ಅಲ್ಲಿಗೆ ಬಂದನಂತೆ. ಇಂಥ ವಿಶ್ವಾಸ ಇಟ್ಟುಕೊಂಡಿರುವ ಹಾಲಕ್ಕಿ ಜನ ದೀಪಾವಳಿಯ ಸಮಯದಲ್ಲಿ ಪ್ರತಿವರ್ಷ ಭೂಮಿಗೆ ಬರುವ ಬಲೀಂದ್ರನನ್ನು ಮರೆತಾರೆಯೇ? ಅದೂ ತಮ್ಮಂಥ ಅಪ್ಪಟ ಕೃಷಿಕನಾದ ಭೂಮಿ ಪುತ್ರ ಬರುತ್ತಾನೆಂದರೆ ಅವರಿಗೆ ಎಲ್ಲಿಲ್ಲದ ಸಡಗರ ಮತ್ತು ಸಂತೋಷ.

ಈ ಬಲೀಂದ್ರನ ಹಬ್ಬವನ್ನು 'ಬೂರೆ ಹಬ್ಬ' ಎಂತಲೂ ಕರೆಯುತ್ತಾರೆ. ಕುಂಬಾರನಿಂದ ಹೊಸಗಡಿಗೆಯನ್ನು ತಂದು, ಅದಕ್ಕೆ ಚಿತ್ತಾರಗಳನ್ನು ಬರೆದು ಅಲಂಕರಿಸಿ, ಅದರೊಳಕ್ಕೆ ಹೊಸ ಅಕ್ಕಿ ಮತ್ತು ಮರದ ಚೆಕ್ಕೆ ಹಾಗೂ ಬೆಳ್ಳಿ ಅಥವಾ ಬಂಗಾರದ ನಾಣ್ಯಗಳನ್ನಿಟ್ಟು ಶುದ್ಧ ನೀರು ತುಂಬುತ್ತಾರೆ. ಕಂಠದ ಸುತ್ತ ಮಾವಿನ ಎಲೆಗಳನ್ನಿಟ್ಟು ಕಂಠದ ಮೇಲೆ ಮೊಗೆಕಾಯಿ ಅಥವಾ ತೆಂಗಿನ ಕಾಯಿಯನ್ನು ಇಡುತ್ತಾರೆ. ಗಡಿಗೆಯ ಕೊರಳಿಗೆ ಮಣಿಸರ ಹಾಗೂ ಬಂದಿಗಳನ್ನು ಇಟ್ಟು

PDF created with pdfFactory Pro trial version www.pdffactory.com

ಅಲಂಕರಿಸುವುದಲ್ಲದೇ ವಿವಿಧ ಬಗೆಯ ಹೂಮಾಲೆಯನ್ನು ಧರಿಸುತ್ತಾರೆ. ಹೀಗೆ ಅಲಂಕರಿಸಿದ ಪವಿತ್ರ ಗಡಿಗೆಯೇ ಬಲೀಂದ್ರ. ಬಲೀಂದ್ರನನ್ನು ಮೊದಲು ತುಳಸಿ ಕಟ್ಟೆಯಲ್ಲಿ ಪೂಜಿಸಿ ನಂತರ ಮನೆಯೊಳಗೆ ತರಲಾಗುತ್ತದೆ. ಒಳಗಿನ ಮನೆಯ ಅಂಗಳದಲ್ಲಿ ರಂಗೋಲಿ ಬರೆದು, ಅದರ ಮೇಲೆ ಬಾಳೆಲೆ ಇಟ್ಟು ಅದರ ಮೇಲೆ ಭತ್ತದ ಸಣ್ಣ ರಾಶಿ ಹಾಕಿ, ಭತ್ತದ ಮೇಲೆ ಬಲಿಂದ್ರನನ್ನು ಪ್ರತಿಷ್ಠಾಪಿಸುತ್ತಾರೆ. ಇದು ಮೊದಲ ದಿನದ ಆಚರಣೆಯಾದರೆ, ಎರಡನೇ ದಿನದ ಆಚರಣೆಯನ್ನೇ ಬೂರೆ ಹಬ್ಬ ಎಂದು ಇವರು ಕರೆಯುವುದು.

ಅಂದು ಮೊಗೆಕಾಯಿಯ ಕಡುಬು ಹಾಗೂ ಮೊಗೆಹಣ್ಣಿನ ಹಾಲಿನ ಪಾನೀಯದ ವಿಶೇಷ. ಆ ದಿನ ರಾತ್ರಿ ಹಾಲಕ್ಕಿ ಕೊಪ್ಪದ ಹೆಂಗಸರು ಮೊದಲು ಗೌಡನ ಮನೆಯಿಂದ ಹೊರಟು ಪ್ರತಿಮನೆಗೂ ಬೆಳಕಿನಾರತಿ ಒಯ್ಯುತ್ತಾರೆ. ಆರತಿ ತಂದ ಹೆಣ್ಣುಮಕ್ಕಳಿಗೆ ಮನೆಯವರು ಕಾಣಿಕೆ ನೀಡಿ ಸತ್ಕರಿಸುತ್ತಾರೆ. ಹೀಗೆ ಶೇಖರಿಸಿದ ಹಣದಿಂದ ಹಬ್ಬ ಮುಗಿದ ನಂತರ ಹೆಣ್ಣು ಮಕ್ಕಳೆಲ್ಲಾ ಸೇರಿ ಅವಲಕ್ಕಿ ಕೊಂಡು ತಂದು ತಿನ್ನುತ್ತಾರಂತೆ. ಬಲಿಪಾಡ್ಯದ ದಿನದ ರಾತ್ರಿ ಬಲೀಂದ್ರನಿಗೆ ಕೊನೆ ಆರತಿ ಮಾಡಿ ಪೂಜೆ ಸಲ್ಲಿಸಿ, ಬೆಳಗಿನ ಜಾವ, ಬಲೀಂದ್ರನ 'ಬುತ್ತಿಕೂಳಿ'ನೊಡನೆ ಹೊರಟು ತುಳಸಿಕಟ್ಟೆಯಲ್ಲಿ ವಿಸರ್ಜಿಸುತ್ತಾರೆ. ಆಮೇಲೆ ಹೆಂಗಸರೆಲ್ಲ ಸೇರಿ ಆ 'ಬುತ್ತಿಕೂಳ'ನ್ನು ಹಂಚಿಕೊಂಡು ಪ್ರಸಾದದ ರೀತಿಯಲ್ಲಿ ಸ್ವೀಕರಿಸುತ್ತಾರೆ.

ಇದೇ ಪಾಡ್ಯದ ದಿನ ಹಾಲಕ್ಕಿ ಸಮಾಜದ ಎಲ್ಲರೂ ವಿಶೇಷವಾಗಿ ಗೋಪೂಜೆ ಮಾಡುತ್ತಾರೆ. ದನಕರುಗಳ ಮೈತೊಳೆದು ಅವುಗಳನ್ನು ವಿಧವಿಧವಾಗಿ ಅಲಂಕರಿಸಿ, ಕೊಂಬುಗಳಿಗೆ ಬಣ್ಣ ಬಳಿದು ಚವಲಗಳನ್ನು ಕಟ್ಟುತ್ತಾರೆ. ಬಲೀಂದ್ರ ಭೂಮಿಯಿಂದ ತನ್ನ ಲೋಕಕ್ಕೆ ಹಿಂತಿರುಗುವಾಗ ಈ ಗೋವನ್ನೇ ವಾಹನ ಮಾಡಿಕೊಂಡು ಹೋಗುತ್ತಾನಂತೆ. ಹಾಗೆ ಹೋಗುವಾಗ ಹಾಲಕ್ಕಿ ಒಕ್ಕಲಿಗರ ಭೂಮಿಯಲ್ಲಿ ಹತ್ತಾರು ಬಗೆಯ ಧಾನ್ಯಗಳನ್ನು ಬಿತ್ತುತ್ತ ಹೋಗುತ್ತಾನಂತೆ.

ಲಯದ ಕಲ್ಪನೆ ಹಾಲಕ್ಕಿ ಒಕ್ಕಲಿಗರಲ್ಲಿ ಇಲ್ಲ. ಲಯಕ್ಕೆ ವಿರುದ್ಧವಾದ ಸಮೃದ್ಧಿ ಇವರ ಗುರಿ. ಆ ಸಮೃದ್ಧಿಗಾಗಿ ಆರಾಧಿಸುವುದು ಅವರ ಆಶಯ. ಬೆಂಕಿ, ಬಿರುಗಾಳಿ, ಪ್ರವಾಹಕ್ಕೆ ಇವರ ಸಮ್ಮತಿ ಇಲ್ಲ. ಅವುಗಳನ್ನು ಆಶಿಸುವುದೂ ಇಲ್ಲ. ಅವುಗಳನ್ನೇ ಆರಾಧಿಸುವ ಮೂಲಕ ನಮ್ಮ ಇಡೀ ನಾಡು ಸಮೃದ್ಧಿವಾಗಿರಲಿ, ಹಸುರಾಗಿರಲಿ, ನಗುನಗುತ್ತಾ ಇರಲಿ ಎಂಬುದು ಅವರ ಪ್ರಾರ್ಥನೆ. ಇವರ ಇಂಥ ಸಕಾರಾತ್ಮಕವಾದ ಆಶಯಗಳ ಪ್ರತೀಕವೇ ಬಲೀಂದ್ರ. ಬಲೀಂದ್ರನನ್ನು ಕರಾವಳಿಯಾದ್ಯಂತ, ಅದರಲ್ಲೂ ಉತ್ತರ ಕನ್ನಡದಲ್ಲಿ ಕೃಷಿಕರು ಆರಾಧಿಸುತ್ತಾರೆ. ಅವರ ಆರಾಧನೆಯ ಸಂದರ್ಭದಲ್ಲಿ ಹಾಡುವ ಹಲವು ರೀತಿಯ ಬಲೀಂದ್ರನ ಹಾಡುಗಳನ್ನು ಸಂಗ್ರಹಿಸಿ ಅವುಗಳ

ಅರ್ಥವನ್ನು ಕೊಟ್ಟಿದ್ದಾರೆ ಸಂಗ್ರಾಹಕ ಡಾ. ಎನ್.ಆರ್. ನಾಯಕ್. ಅದನ್ನಿಲ್ಲಿ ಅವಲೋಕಿಸೋಣ.

ಪಾತಾಳದಿಂದ ಬಂದ ಬಲೀಂದ್ರ ಹಣ್ಣಡಕೆ ಕೊನೆಯನ್ನೇರಿ, ತನ್ನ ರಾಜ್ಯದ ಸಿರಿಯನ್ನು ನೋಡುತ್ತಾನೆ. ಅಲ್ಲಿ ಹಾಲು ಹಳ್ಳ, ಮೊಸರುಗುಡ್ಡ ಬೆಳೆಯ ಸಮೃದ್ಧಿ. ಭಕ್ತರು ಮೊಗೆಹಣ್ಣು, ಕುಂಬಳಕಾಯಿ ಕಡಿದು ಮಾಡಿದ ಕಜ್ಜಾಯದ ನೈವೇದ್ಯ ಮಾಡಿರುತ್ತಾರೆ. ತುಲಸಿಯೆಡೆ ಬಂದು ಅಲ್ಲಿಂದ ಭಕ್ತರ ಮನೆಗೆ ಬರುತ್ತಾನೆ. ಅವನ ಪಟ್ಟೆದೋತರ, ಮುತ್ತಿನುಂಗುರ ಹಾಗೂ ಮೈ ಬೆಳಕು ಮನೆ ತುಂಬುತ್ತದೆ. ಮೂರುದಿನ ಉಳಿದು ಮುತ್ತಿನ ಕೊಡೆ ಹಿಡಿದು ಬಲೀಂದ್ರ ಹೊರಡುತ್ತಾನೆ. ಹೋಗುವಾಗ ಸಣ್ಣಕ್ಕಿಯ ಪಾಯಸ ಉಂಡು ಹೋಗುತ್ತಾನೆ.

ಅರಿಸಿನೆಣ್ಣೆಯನ್ನುಜ್ಜಿಕೊಂಡು ಮಿಂದು ಮಡಿಯುಟ್ಟು ಬಲೀಂದ್ರನನ್ನು ಕರೆಯಲು ಸಿದ್ಧರಾಗುತ್ತಾರೆ. ಹೆಣ್ಮಕ್ಕಳು ಪಟ್ಟೆಯುಟ್ಟು ಸಿಂಗಾರ ಮುಡಿದು, ತುಲಸಿಯ ಮುಂದಿನಿಂದ ಬಲೀಂದ್ರನನ್ನು ಮನೆಗೆ ತಂದು ನೈವೇದ್ಯ ಮಾಡುತ್ತಾರೆ. ಮುತ್ತಿನ ಕುಡಿಬಾಳೆಲೆಯಲ್ಲಿ ಹಾಲು, ತುಪ್ಪ, ಅನ್ನವನುಂಡು ಅಕ್ಕಿಯ ಕಣಜದಿಂದ ಇಳಿದು ಬಲಿ ಪಾತಾಳಕ್ಕೆ ಹೋಗುತ್ತಾನೆ. ಮೂರು ದಿನ ರಾಜ್ಯ ಸಿರಿಯನ್ನು ನೋಡಿ ರಾಜ್ಯಕ್ಕೆ ಶುಭ ಕೋರುತ್ತಾನೆ. ತನ್ನ ರಾಜ್ಯದಲ್ಲಿ ಕಟ್ಟದೆ ಕರೆಯಲಿ, ಬಿತ್ತದೆ ಬೆಳೆಯಲಿ ಕಲ್ಲುಗುಡ್ಡಗಳು ಚಿಗುರಿ ನಾಡು ಹಸುರೊಡೆಯಲಿ ಎಂದು ಹಾರೈಸಿ ಪಾತಾಳಕ್ಕಿಳಿಯುತ್ತಾನೆ.

ಮಾಳಿಗೆಯ ಒಳಗಿಂದ ಎಣ್ಣೆಯ ಬೆಳಕಿನಲ್ಲಿ ಬಲೀಂದ್ರ ಇಳಿದು ಬಂದ. ಮಕ್ಕಳೇ ಬುಟ್ಟಿಯನ್ನು ತೆಗೆದುಕೊಳ್ಳಿ. ನಮ್ಮೂರಿನಲ್ಲಿ ಮುತ್ತು ಮಾಣಿಕ್ಯ ಬೆಳೆಯುವಂತೆ ಬೀಜವನ್ನು ಬಿತ್ತುತ್ತಾ ಬರೋಣ. ಪಟ್ಟೆಯ ಹಚ್ಚಡದ ಮುತ್ತಿನುಂಗಿಲದ ಬಲೀಂದ್ರನಿಗೆ ಮುತ್ತಿನಾರತಿ ಬೆಳಗೋಣ.

ಬಲೀಂದ್ರ ಕಾಲ್ನಡಿಗೆಯಿಂದ ಬರುವುದಿಲ್ಲ. ಅವನು ಬೆಳ್ಳಿ ರಥ ಹತ್ತಿ ಬರುತ್ತಾನೆ; ಚಿನ್ನದ ರಥ ಹತ್ತಿ ಹೋಗುತ್ತಾನೆ. ಆತ ಹೋಗುವಾಗ ರಸ್ತೆಯಲ್ಲಿ ಸಿಕ್ಕಿದ ಗೋವಿಂದರಾಯನಿಗೆ, ಭಕ್ತರು ಅವನನ್ನೆದುರುಗೊಳ್ಳಲು ಸಜ್ಜಾಗಿ ಅವನನ್ನು 'ಗೋವಿಂದರಾಯ' ಎಂದು ಕರೆಯುವ ವಿಚಾರ ತಿಳಿಸುತ್ತಾನೆ.

ಬಲೀಂದ್ರನು ಬರುವಾಗ ಹಾವು ಚೇಳುಗಳೆಲ್ಲವೂ ಮಾಯವಾಗುತ್ತವೆ. ಅವನಿಗೆ ಹನ್ನೆರಡು ಸುತ್ತಿನ ಮುಂಡಾಸು, ಗರದೇವಿಗೆ ಬೆಳ್ಳಿಯ ಗಟ್ಟಿ ಹಾಗೂ ಹನ್ನೆರಡು ಮಾಳಿಗೆ ಮನೆ ಕಾರು ಬೆಳೆಗೆ ಬರುವಾಗ, ಕೇದಿಗೆ ಮಾಡುವಾಗ ಬಲೀಂದ್ರ ಬರುತ್ತಾನೆ. ಗರದೇವಿಯು ಮಕ್ಕಳ ಮದುವೆಗೆ ಎಕ್ಕೆ, ಸೀಗೆ, ಬಾಳೆ, ಕರ್ಕಿಗಳನ್ನು ನೆಡುತ್ತಾಳೆ. ಧೂಪ ಸುಟ್ಟು ಎಣ್ಣೆಯಲ್ಲಿ ದೀಪ ಹಚ್ಚುತ್ತಾಳೆ. ಗುಲಗುಂಜಿಯನ್ನು ಕಾಡಿನಲ್ಲಿ ಬೆಳೆದು ಮಕ್ಕಳಿಗೆ ಮಾಲೆ ಮಾಡುತ್ತಾಳೆ. ಹಬ್ಬದಲ್ಲಿ ಬೂರೆ ಹಬ್ಬ ಶ್ರೇಷ್ಠ.

PDF created with pdfFactory Pro trial version www.pdffactory.com

ಗರದೇವಿ ದಾಬನ್ನು ತೆಗೆದುಕೊಂಡು ಹೋಗಿ ಕರುಕಟ್ಟಿದಳು. ಬಾಳೆಲೆಯಲ್ಲಿ ಹಾಲು, ತುಪ್ಪವನ್ನು ಬಲೀಂದ್ರನಿಗೆ ಬಡಿಸಿದಳು. ಬಲೀಂದ್ರ ಹಾಲೂಟವುಂಡು 'ಹುಗ್ಗಿ' ಗುಡಿಗೆ ಹೋದನು.

ಈ ಹಾಡು ಮುಗಿದ ಮೇಲೆ ಬಲೀಂದ್ರನ ಮುಂದೆ ಎರಡು ಪಂಗಡಗಳಾಗಿ ಹಾಡಿ ಕುಣಿಯುತ್ತಾರೆ. ಪುಗಡಿ–ಪೂ ಹಾಕಿ ಕುಣಿಯುತ್ತಾರೆ.

ಚಿನ್ನದ ಭುಜದ ಬಲೀಂದ್ರನು ರಾಜನಂತೆ ಹೋಗುವಾಗ ನಾರು ಮುಡಿಯುಟ್ಟು, ಕಾಲಿಗೆ ಗೆಜ್ಜೆ, ಕೈಗೆ ಉಂಗುರ, ತಲೆಗೆ ವಜ್ರದ ಕಿರೀಟ ತೊಟ್ಟು ಕೈಯಲ್ಲಿ ಚಕ್ರ ಹಿಡಿದು, ಬೆಳ್ಳಿ ಮಂಚದಲ್ಲಿ ಕುಳಿತು ಮಾನವರಿಗೆ ವರವನ್ನು ಕೊಡುತ್ತಾನೆ. ನೀವು ಕಟ್ಟಿದ ಕೊಟ್ಟಿಗೆಗೆ, ತುಂಬಿದ ಸಭೆಗೆ ಸಿರಿ ಬರಲಿ. ನೀವು ಸುಖವಾಗಿ ಬಾಳಿರಿ. ನಾನು ನನ್ನ ರಾಜ್ಯಕ್ಕೆ ಹೋಗುತ್ತೇನೆ ಎಂದು ಮಾಳಿಗೆಯಿಂದಿಳಿದು ಹಟ್ಟಿಗೆ ಬರುತ್ತಾನೆ. ಬೆಳ್ಳಿಯ ಬಸವನನ್ನೇರಿ ರಾಜ್ಯಕ್ಕೆ ಸಿರಿಸಂಪತ್ತು ಬರಲೆಂದು ಹಾರೈಸಿ, 'ಒಡ್ಡಿ' ಗುಡಿಗೆ ಹೋಗುತ್ತಾನೆ.

ಅನಂತರ ದುಮ್ ಸಾಲೆ ಹಾಡು, ಬಿಂಬೀ ಹಾಡು, ತೋಳ್ ಚಿಲುವ ಹಾಡು, ಅಣಕು ಮದುವೆಯ ಹಾಡು ಹಾಡುತ್ತಾರೆ. ಅನಂತರ ಅಣಕು ಮದುವೆ ನಡೆಯುತ್ತದೆ. ಹಾಡು, ಕುಣಿತ, ಸಂಭಾಷಣೆ, ಅಭಿನಯಗಳಿಂದ ಕುಣಿದ ವಿಶಿಷ್ಟ ಹಾಡಿದು.

ಬಾವಿಯ ದಂಡಿಗೆಯ ಮೇಲೆ ಬಂದ ಬಲೀಂದ್ರ ತನ್ನೂರೇ ಶುಭವೆನ್ನುತ್ತಾನೆ. ಅಕ್ಕಿ ರೊಟ್ಟಿ ಬೆಲ್ಲ ತಿಂದು ತವರೂರಿಗೆ ನಡೆಯುತ್ತಾನೆ.

ಬಲ್ಲಾಳ ಬಲೀಂದ್ರನು ರಾಜ್ಯಕ್ಕೆ ಶ್ರೀಮಂತನು. ಆತ ಇಂದ್ರಲೋಕದಿಂದ ಬರುವಾಗ ಜಡಿಮಳೆ ಸುರಿಯುತ್ತದೆ. ಹುಲ್ಲ ಜಿಡ್ಡೆಗಳು ಚಿಗಿಯುತ್ತವೆ. ಬರಡು ಹಯನಾಗುತ್ತವೆ.

ಬಲೀಂದ್ರ ಜೋಟಿ ಕೊಕ್ಕೆಯ ಸಹಾಯದಿಂದ ಹಣ್ಣಡಿಕೆಯ ಕೊನೆಯಿಂದ ಕೊನೆಗೆ ಹಾರಿಬರುತ್ತಾನೆ. ಒಂದಕ್ಕಿ ಭಿತ್ತಿ ಒಂಬತ್ತು ಕಣಜವನ್ನು ಕಟ್ಟುವ ತನ್ನೂರೆ ಸಿರಿ ಎನ್ನುತ್ತಾನೆ. ಬೆಳ್ಳಿಯ ದಂಡಿಗೆ, ಸತ್ತಿಗೆ, ಗೊಂಡೆ ಹಾಗೂ ಫಲಾವಳಿಗಳುಳ್ಳ ರಥವನ್ನೇರಿ ಬಲೀಂದ್ರನು ಬರುತ್ತಾನೆ. ಬೆಳ್ಳಿಯ ಬೆತ್ತದ ಕೋಲು, ಹಸುರಂಗಿ ತೊಟ್ಟ, ನೊಸಲಿಗೊಪ್ಪುವ ಕಿರಿ ಮುಡಿಯುಳ್ಳ ಮಕ್ಕಳು ಬಲೀಂದ್ರನಿಗೆ ಆರತಿ ಬೆಳಗುತ್ತಾರೆ.

ಸಿಂಗಾರ ಕೊನೆಯ ಮೇಲೆ ನಿಂತ ಬಲೀಂದ್ರನು, ಸಿಂಗಾರದ ಏಳು ಬನಗಳು ತನಗೆನ್ನುತ್ತಾನೆ. ಅಕ್ಕಿ ಭಿತ್ತಿ ಬೆಳೆಯುವ ತನ್ನ ರಾಜ್ಯ ಶುಭವೆನ್ನುತ್ತಾನೆ. ಆತನಿಗೆ ಶ್ರೀಗಂಧ ಧೂಪಗಳ ಉಪಚಾರವಾಗುತ್ತದೆ. ಬಲೀಂದ್ರನ ಮುಂದೆ ರಂಗೋಲಿ ಬಿಡಿಸಿ, ಅವನನ್ನು ಹೂಗಳಿಂದ ಸಿಂಗರಿಸಿ ಆರತಿಯನ್ನು ಬೆಳಗುತ್ತಾರೆ. ಮುತ್ತೈದೆತನವನ್ನು ಕೊಟ್ಟು ಹರಸಲು ಬೇಡಿಕೊಳ್ಳುತ್ತಾರೆ.

ಬಾವಿಯ ದಡದಲ್ಲಿ ನಿಂತ ಬಲೀಂದ್ರನಿಗೆ ದಂಡೆಮಾಲೆಯನ್ನು ಹಾಕಿ, ಮನೆಗೆ ತಂದು ಕರ್ಪೂರದಾರತಿಯನ್ನು ಬೆಳಗುತ್ತಾರೆ. ಬೆಳ್ಳಿಯ ಬೆತ್ತವನ್ನು, ಗರುಡನನ್ನು ಹಿಡಿದು, ರಥವೇರಿ ಬಲೀಂದ್ರ ಬರುತ್ತಾನೆ. ಅವನಿಗೆ ಗಂಧ ಹಚ್ಚಿ, ದುಂಡು ಮಲ್ಲಿಗೆಯ ಮಾಲೆ ಹಾಕಿ, ಕರ್ಪೂರದಾರತಿಯನ್ನು ಬೆಳಗುತ್ತಾರೆ.

ಬಾವಿಯ ದಂಡಿಗೆಯ ಮೇಲೆ ನಿಂತ ಬಲೀಂದ್ರನನ್ನು ಹೆಂಗಸರು ತರುತ್ತಾರೆ. ಚಿನ್ನದ ಸತ್ತಿಗೆ, ಚಿನ್ನದ ದಂಡಿಗೆಯಲ್ಲಿ ಬಂದ ಬಲೀಂದ್ರನಿಗೆ ನಾರಿಯರು ಆರತಿಯನ್ನು ಬೆಳಗುತ್ತಾರೆ.

ಮುತ್ತಿನ ಸತ್ತುಗೆ, ಮುತ್ತಿನ ಗೊಂಡೆಯಿಂದ ಕೂಡಿದ ರಥವನ್ನೇರಿ ಬಲೀಂದ್ರ ಬರುತ್ತಾನೆ. ಅವನಿಗೆ ಮುತ್ತಿನಾರತಿಯನ್ನು ಬೆಳಗುತ್ತಾರೆ.

ಭಾಗ್ಯವಂತ ಬಲೀಂದ್ರ ಬರುವ ಹಾದಿಯಲ್ಲಿ ಆತನಿಗೆ ಪ್ರಿಯವಾದ ಮೂಲಂಗಿ, ಮುಡಿಯಾಳ, ಪಚ್ಚೆ ನೆಟ್ಟಿದ್ದಾರೆ. ಆತ ಬರುವ ಹಾದಿಯಲ್ಲಿ ಸಣ್ಣಕ್ಕಿ ಭತ್ತ ಬೆಳೆದಿದ್ದಾರೆ. ಆತ ಬರುವ ದಾರಿಯಲ್ಲಿ ಸಣ್ಣಕ್ಕಿ ಮುಡಿ ಇಡುವರು. ಆತ ಮನೆಗೆ ಬಂದು ಭಾಗ್ಯವನ್ನು ತಂದಿದ್ದಾನೆ.

ಬಲೀಂದ್ರನನ್ನು ಮತ್ತು ಬಲೀಂದ್ರನ ಆರಾಧನೆಯನ್ನು ಕುರಿತು ಹೊನ್ನಾವರ ತಾಲೂಕಿನ ಅಪ್ಪಿಕೇರಿಯ ಕಲಾವಿದೆ ಗಂಗೆ ಅವರೊಡನೆ ಸುದೀರ್ಘವಾಗಿ ಮಾತನಾಡುತ್ತಿದ್ದಾಗ ಗಣಪತಿ ಮತ್ತು ಬಲೀಂದ್ರ– ಈ ಇಬ್ಬರು ದೈವಗಳ ಬಗ್ಗೆ ಮತ್ತು ಆ ದೈವಗಳು ಇಷ್ಟಪಡುವ ಭಕ್ತರ ಮನೆಗಳ ಹಬ್ಬದೂಟದ ಬಗ್ಗೆ ಹೇಳಿದ ವಿನೋದಪೂರ್ಣ ಕಥೆಯನ್ನು ಇಲ್ಲಿ ಪ್ರಸ್ತಾಪಿಸಲೇಬೇಕು. ಆ ಕಥೆಯ ವಿವರ ಹೀಗಿದೆ.

ಅದಾಗ ತಾನೆ ಗಣೇಶ ಚೌತಿ ಮುಗಿದಿತ್ತು. ಬ್ರಾಹ್ಮಣರು ಮತ್ತು ಭಟ್ಟರ ಮನೆಯ ಕಡುಬು, ಕಜ್ಜಾಯ, ಹೋಳಿಗೆ ತಿಂದು ಡುಮ್ಮ ಹೊಟ್ಟೆಯ ಗಣಪತಿ ಹೊಟ್ಟೆ ಸವರುತ್ತಾ ಬರುತ್ತಿದ್ದ. ಅತ್ತ ಕಡೆಯಿಂದ ಬಲೀಂದ್ರ ಚಕ್ರವರ್ತಿ ತನ್ನ ಹಬ್ಬಕ್ಕಾಗಿ ಬರುತ್ತಿದ್ದ. ಈ ಇಬ್ಬರೂ ಚಂದಾವರದ ಕೆರೆಯ ಏರಿ ಮೇಲೆ ಭೇಟಿಯಾದರು. ಗಣಪತಿ ಬ್ರಾಹ್ಮಣರ ಮನೆಯ ಭೋಜನವನ್ನು ಪರಿಪರಿಯಾಗಿ ಹೊಗಳಿ, ಅದು ಅಜೀರ್ಣವಾದ ಪರಿಸ್ಥಿತಿಯನ್ನು ನಿವೇದಿಸಿಕೊಂಡ. ಅದಕ್ಕೆ ಬಲೀಂದ್ರ ನಕ್ಕುಬಿಟ್ಟ. ಯಾಕೆ ನಗುತ್ತೀಯ ಎಂದು ಗಣೇಶ ಕೇಳಿದ. ಅದಕ್ಕೆ ಬಲೀಂದ್ರ "ನಗದೆ ಮತ್ತೇನು ಮಾಡಬೇಕು. ಬ್ರಾಹ್ಮಣರ ಮನೆಯ ಊಟ ಎಂದರೆ ಹಾಗೇನೆ. ಅದು ಅಜೀರ್ಣ. ಹೊಟ್ಟೆಯನ್ನು ಹಾಳುಮಾಡುತ್ತದೆ. ಅದಕ್ಕಾಗಿಯೇ ನೀನು ಹೊಟ್ಟೆನೋವು ತಾಳಲಾರದೆ ಪ್ರತಿ ವರ್ಷ ನೀರಿಗೆ ಬಿದ್ದು ಸತ್ತು ಮತ್ತೆ ಹುಟ್ಟುತ್ತೀಯ. ಆದರೆ, ನನ್ನನ್ನು ನೋಡು, ನಾನು ಭಟ್ಟರ ಮನೆಗೂ ಹೋಗುವುದಿಲ್ಲ, ಶೆಟ್ಟರ ಮನೆಗೂ ಹೋಗುವುದಿಲ್ಲ.

PDF created with pdfFactory Pro trial version www.pdffactory.com

ನಾನು ನೇರವಾಗಿ ನನ್ನ ಮಕ್ಕಳಾದ ಹಾಲಕ್ಕಿ ಒಕ್ಕಲಿಗರ ಮನೆಗೆ ಹೋಗುತ್ತೇನೆ. ಅವರು ನನಗೆ ಕಡುಬು ಕಜ್ಜಾಯ ಕೊಡುವುದಿಲ್ಲ. ಬದಲಾಗಿ, ಐದು ರೀತಿಯ ಗಿಡಮೂಲಿಕೆಗಳಿಂದ ಮಾಡಿದ ಕಷಾಯ ಕೊಡುತ್ತಾರೆ. ಅದನ್ನು ಕುಡಿದರೆ ಎಂಥವರ ಆರೋಗ್ಯವೂ ವೃದ್ಧಿಸುತ್ತದೆ. ವರ್ಷಕ್ಕೊಂದು ಸಲ ಅದನ್ನು ಕುಡಿದವನ ದೇಹ ಶಕ್ತಿದಾಯಕವಾಗುತ್ತದೆ. ಆದ್ದರಿಂದ ಅದನ್ನು ನಾನೂ ಕುಡಿದು, ನನ್ನ ಮಕ್ಕಳಾದ ಹಾಲಕ್ಕಿ ಒಕ್ಕಲಿಗರಿಗೂ ಕುಡಿಸುತ್ತೇನೆ" ಎಂದು ಹೇಳಿ ಬಲೀಂದ್ರ ನೇರವಾಗಿ ಹಾಲಕ್ಕಿಗಳ ಮನೆಗೆ ಬರುತ್ತಾನಂತೆ.

ಭಟ್ಟರ ಮನೆಯ ಕಡುಬು ಕಜ್ಜಾಯಗಳನ್ನು ತಿನ್ನುವ ಗಣಪತಿ ಹೊಟ್ಟೆ ಊದಿಸಿಕೊಂಡು ಮೈಯೆಲ್ಲಾ ಅನಾರೋಗ್ಯವೇ ಆಗಿ, ಪ್ರತಿ ವರ್ಷ ನೀರಿನಲ್ಲಿ ಸತ್ತು ಮತ್ತೆ ಮಣ್ಣಿನಲ್ಲಿ ಹುಟ್ಟುತ್ತಾನೆ. ಆದರೆ ಬಲೀಂದ್ರ ಒಬ್ಬ ಯೋಗಿ. ಅವನು ಅವಧೂತನಂತೆ ಪಾತಾಳದಿಂದ ಉದ್ಭವಿಸಿ, ತನ್ನ ಮಕ್ಕಳಾದ ಹಾಲಕ್ಕಿ ಒಕ್ಕಲಿಗರ ಮನೆಯ ಆರೋಗ್ಯಪೂರ್ಣ ಕಷಾಯ ಕುಡಿದು, ಸಮೃದ್ಧಿಯನ್ನು ಹಾರೈಸಿ ಸಂತಸದಿಂದ ಹಿಂತಿರುಗುತ್ತಾನೆ. ದುಡಿಯುವ ವರ್ಗದ ಜನರು ಕಟ್ಟಿದ ಈ ಕಥೆ ಕುಂತುಣ್ಣುವ ಜನರ ವೈಭವವನ್ನು ತುಂಬಾ ಮಾರ್ಮಿಕವಾಗಿ ತಿರಸ್ಕರಿಸಿ, ತಮ್ಮ ಸರಳತೆಯೇ ಶ್ರೇಷ್ಠ ಎಂದು ಸಾರುತ್ತಾರೆ.

೩

ಮಾತೃಮೂಲ ಪರಂಪರೆ ಮತ್ತು ಮಾತೃದೇವತೆಯರು

ತಾಯಿ ಅಪ್ಪಟ ಸತ್ಯದ ಒಂದು ರೂಪ. ಆದರೆ ತಂದೆ ಸತ್ಯಕ್ಕೆ ಹತ್ತಿರಾದವನು. ಹಾಗೆಂದು ಅವನೇ ಸತ್ಯ ಎಂದು ಹೇಳುವ ಹಾಗಿಲ್ಲ. ಒಂದು ಮಗುವಿನ ತಾಯಿ ಯಾರು ಎಂಬುದು ಅದನ್ನು ಹಡೆದವಳಿಗೆ ಮಾತ್ರ ಗೊತ್ತಿರುತ್ತದೆ. ಅದರ ತಂದೆ ಎನಿಸಿಕೊಂಡವನು ಹೌದಿರಬಹುದು, ಅಲ್ಲದಿರಲೂಬಹುದು. ಅದ್ದರಿಂದ 'ತಾಯಿಯೇ ಸತ್ಯ' ಎಂಬ ಮಾತೊಂದಿದೆ. ಈ ಮಾತನ್ನು ನಾನು ಆಧುನಿಕ ಕಲ್ಪನೆಯ ಪಾತಿವ್ರತ್ಯದ ದೃಷ್ಟಿಯಿಂದ ಹೇಳುತ್ತಿಲ್ಲ. ಮಾನವನ ಇತಿಹಾಸದಲ್ಲಿ ತಂದೆ ಎನ್ನುವವನ ಸ್ಥಾನ ಎಷ್ಟು ಗೌಣವಾಗಿತ್ತು ಮತ್ತು ಈಗಲೂ ಅದು ವಾಸ್ತವ ಅಲ್ಲವೇ ಎಂಬ ಜಿಜ್ಞಾಸೆಯಿಂದ ಹೇಳುತ್ತಿದ್ದೇನೆ. ಖ್ಯಾತ ಮಾನವಶಾಸ್ತ್ರಜ್ಞ ಶ್ರೀ ವಾತ್ಸವ ಅವರು ಗುರುತಿಸುವಂತೆ "ಭಾರತೀಯ ಪರಂಪರೆ ಆರಂಭದಿಂದಲೂ ಸ್ತ್ರೀಯನ್ನು ಆರಾಧಿಸುತ್ತಾ ಬಂದಿದೆ. ತಾಯಿಯಾದವಳು ಎಂದಿಗೂ ತಂದೆಗಿಂತ ಕೀಳಾದವಳಾಗಿರಲಿಲ್ಲ. ಆದರೆ ತಂದೆ ಎಷ್ಟೋ ವೇಳೆಯವರೆಗೆ ಅವಳಿಗಿಂತ ಕಡಿಮೆ ದರ್ಜೆಯವನಾಗಿ ಬಾಳಿದ್ದಿದೆ. ಮಕ್ಕಳನ್ನು ಹೆರುವ ಮತ್ತು ಸಾಕುವ ಅವಳ ಶಕ್ತಿಗಾಗಿಯೇ ಅವಳನ್ನು ಉತ್ತುಂಗ ಸ್ಥಾನದಲ್ಲಿಟ್ಟು ಗೌರವಿಸುತ್ತಾ ಬರಲಾಗಿದೆ. ಆದ್ದರಿಂದಲೇ ಶಾಕ್ತಪಂಥ ಒಂದು ಪ್ರಮುಖ ಪಂಥವಾಗಿ ಈ ದೇಶದಲ್ಲಿ ಬೆಳೆದು ಬಂತು ಮತ್ತು ಅದು ಅದೇ ಸ್ಥಾನಮಾನದಲ್ಲಿ ಮುಂದುವರಿಯುತ್ತಿದೆ."[೧೩]

ಹೀಗೆ ಮಾತೃವಿನಿಂದ ಮೊದಲಾದ ಮಾನವ ಜೀವನ ಮಾತೃವಿನ ಆಸರೆಯಲ್ಲಿಯೇ ಸಾವಿರಾರು ವರ್ಷಗಳನ್ನು ಕಳೆದಿದೆ. ಬೇಟೆಯ ಯುಗದಲ್ಲಿ ಗಂಡಸಾದವನು ಬೇಟೆಗಾಗಿ ಹೊರಹೋದಾಗ, ಹೆಣ್ಣು ಆಹಾರ ಸಂಗ್ರಹಣೆಯಲ್ಲಿ ತೊಡಗುತ್ತಿದ್ದಳು. ತನ್ನ ಮಕ್ಕಳು ಮರಿಗಳ ಪೋಷಣೆ ಮಾಡುತ್ತಲೇ ತನಗೆ ದಕ್ಕುತ್ತಿದ್ದ ಅಗತ್ಯ ವಸ್ತುಗಳನ್ನು ಶೇಖರಿಸುವ ಕೆಲಸ ಅವಳದಾಗಿತ್ತು. ಬೇಟೆ ಎಂದೋ

PDF created with pdfFactory Pro trial version www.pdffactory.com

ಎಲ್ಲಿಯೋ ಹೋಗಿ ಮತ್ಯಾವಾಗಲೋ ಬರುತ್ತಿದ್ದ ಗಂಡುಮಕ್ಕಳ ಪಾಲಿಗೆ ಅಪರಿಚಿತನೇ. ಅಷ್ಟಲ್ಲದೇ ಅಂದಿನ ಜೀವನದಲ್ಲಿ ಇಂಥವನೇ ತಂದೆ ಎಂಬ ಪದ್ಧತಿಯೇ ಇರಲಿಲ್ಲ. ಸಮೂಹದ ಎಲ್ಲರೂ ಎಲ್ಲರಿಗೂ ಗಂಡಂದಿರೇ. ಎಲ್ಲರೂ ಎಲ್ಲರಿಗೂ ಹೆಂಡಂದಿರೇ. ಆದ್ದರಿಂದ ಯಾವ ಗರ್ಭದಲ್ಲಿ ಮಗುವಿನ ಜನನವಾಗುತ್ತದೋ ಅವಳು ಆ ಮಗುವಿನ ತಾಯಿ. ಆದರೆ ತಂದೆ ಯಾರೆಂಬುದು ಯಾರಿಗೂ ಗೊತ್ತಿಲ್ಲ. ತಾಯಿಯಾದವಳಿಗೆ ನಿರ್ದಿಷ್ಟ ಗಂಡೊಂದು ತನ್ನ ಮಗುವಿಗೆ ಹುಟ್ಟಿಗೆ ಕಾರಣ ಎಂಬುದು ಗೊತ್ತಿದ್ದರೂ ಅಂದಿನ ಸಮಾಜದಲ್ಲಿ ಅದು ನಗಣ್ಯ. ಯಾಕೆಂದರೆ ಅದು ಮಾತೃಮೂಲ ಕುಟುಂಬ. ಹೀಗೆ ಆಹಾರ ಸಂಗ್ರಹಣೆ ಮತ್ತು ಅದನ್ನು ಶೇಖರಿಸಿ ಇಡುವ ಕೆಲಸ ನಿರ್ವಹಿಸುತ್ತಿದ್ದ ಹೆಣ್ಣು ಆರ್ಥಿಕ ಚಟುವಟಿಕೆಯಲ್ಲಿಯೂ ಮುಖ್ಯವಾಗುತ್ತಿದ್ದಳು. ಯಾಕೆಂದರೆ ಬೇಟೆಯಲ್ಲಿ ತಂದ ಮಾಂಸ ತಾತ್ಕಾಲಿಕ ಹಸಿವನ್ನು ನೀಗಿಸುತ್ತಿತ್ತಾದರೆ, ಸಂಗ್ರಹಿಸಿಟ್ಟ ಆಹಾರದ ಸರಕುಗಳು ಎಲ್ಲ ಕಾಲದಲ್ಲೂ ತಲೆ ಕಾಯುತ್ತಿದ್ದವು. ಮಾತೃವಿನ ಆರಾಧನೆ ಬಹುಶಃ ಈ ಹಂತದಿಂದಲೇ ಆರಂಭವಾಯಿತೆನಿಸುತ್ತದೆ. "ಆಹಾರ ಸಂಗ್ರಹಣಾ ಹಂತದಿಂದ ಆಹಾರ ಉತ್ಪಾದನಾ ಹಂತಕ್ಕೆ ಸಾಗುವಲ್ಲಿ ಉಂಟಾಗುವ ಮೊದಲ ಬದಲಾವಣೆ ಎಂದರೆ ಆಹಾರವನ್ನು ಕೆಡದಂತೆ ಸಂಗ್ರಹಿಸುವ ಪರಿಕರಗಳನ್ನು ತಯಾರಿಸಿಕೊಳ್ಳುವುದೇ ಆಗಿದೆ. ಇದರಿಂದ ಆಹಾರ ಸಂಗ್ರಹಣೆಯ ಅಪವ್ಯಯದ ಭಯವು ಕಡಿಮೆಯಾಗಿ ಬದುಕು ಒಂದಿಷ್ಟು ಸರಾಗಗೊಳ್ಳುತ್ತದೆ. ಮಡಿಕೆ ಕುಡಿಕೆಗಳು, ಬುಟ್ಟಿಗಳು ಈ ಪ್ರಯತ್ನದಿಂದಲೇ ಹುಟ್ಟಿಕೊಳ್ಳುತ್ತವೆ. ಬಹುಮಟ್ಟಿಗೆ ಇವನ್ನು ಹೆಂಗಸರೇ ತಯಾರಿಸುತ್ತಾರೆ. ಮಡಿಕೆ ಕುಡಿಕೆಗಳು ಆಹಾರವನ್ನು ಕೆಡದಂತೆ ಕಾಪಾಡುವ ಒಂದು ಉತ್ಪಾದನಾ ಸಾಧನವಾಗಿ ರೂಪು ತಳೆಯಿತೆಂಬ ಕಾರಣದಿಂದಲೇ ಅವು ಮಾತೃದೇವತೆಗಳ ಪೂಜೆಯ ಮುಖ್ಯ ಭಾಗವೂ ಆಗುತ್ತವೆ. ಇಂದಿಗೂ ಮಾತೃದೇವತೆಯ ಹೆಸರಿನಲ್ಲೇ ನಡೆಯುವ "ಬೋಗಿಲು"ಗಳಂತಹ ಹಬ್ಬಗಳಲ್ಲಿ ಮಡಿಕೆ ಕುಡಿಕೆಗಳಿಗೆ ಪ್ರಧಾನ ಸ್ಥಾನವಿರುವುದನ್ನು ಕಾಣಬಹುದಾಗಿದೆ. ಮಡಿಕೆಗಳು ಮಾತೃದೇವತೆಗಳ ಆರಾಧನಾ ವಿಧಿಗಳಲ್ಲಿ ಪ್ರಧಾನ ಪಾತ್ರವನ್ನು ಪಡೆಯುತ್ತವಷ್ಟೇ ಅಲ್ಲದೆ ಎಷ್ಟೋ ವೇಳೆ ಸ್ವತಃ ಅವು ಮಾತೃದೇವತೆಗಳ ಪ್ರತಿ ರೂಪಗಳಾಗಿ ನೇರವಾಗಿ ಪೂಜೆಗೊಳಗಾಗುತ್ತವೆ. ಪ್ರಾಚೀನ ಕಾಲದಿಂದ ಈ ವರೆಗೂ ಮಡಿಕೆಗಳನ್ನು ತಯಾರಿಸುವ ಕುಂಬಾರರು ಮಡಿಕೆಯ ಕತ್ತಿನ ಭಾಗದಲ್ಲಿ ಅಲಂಕಾರದ ಕುಸುರಿ ಕೆಲಸವನ್ನು ಮಾಡುತ್ತಾರೆ. ಅದು ಸ್ಪಷ್ಟವಾಗಿ ಸ್ತ್ರೀತ್ವವನ್ನು ಸೂಚಿಸುವಂಥದ್ದಾಗಿರುತ್ತದೆ. ಸತ್ತವರು ಮತ್ತೆ ತಾಯಿಯ ಗರ್ಭವನ್ನು ಸೇರಿಕೊಳ್ಳುತ್ತಾರೆ ಎಂಬ ನಂಬಿಕೆಯಿಂದಾಗಿ, ಬಹು ಪ್ರಾಚೀನ ಸಮಾಜಗಳಲ್ಲಿ ಸತ್ತವರ ದೇಹಗಳನ್ನು ತಾಯಿಯ ಗರ್ಭದ ಸಂಕೇತವಾದ ಮಡಿಕೆಗಳಲ್ಲಿಟ್ಟು ಹೂಳುತ್ತಿದ್ದರು."[೧೪]

ಹೀಗೆ ಆಹಾರ ಸಂಗ್ರಹಣೆಯ ಸಮಯದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿದ ಸ್ತ್ರೀಯ ಸ್ಥಾನಮಾನ ತನ್ನ ಸೃಷ್ಟಿ ಶಕ್ತಿಯ ಜೊತೆಗೆ ಆಹಾರ ರಕ್ಷಣಾ ಶಕ್ತಿಯನ್ನು ಒಂದುಗೂಡಿಸಿಕೊಂಡು, ಆರ್ಥಿಕ ಚಟುವಟಿಕೆಯ ಆರಂಭಿಕ ಹಂತದ ಉದಯಕ್ಕೆ ಕಾರಣಳಾದಳು.ಕೊಸಾಂಬಿಯವರ ಪ್ರಕಾರ ಈ ಹಂತವೇ ಮಾತೃದೇವತೆಯ ಉಗಮಕ್ಕೂ ಕಾರಣವಾಗಿರಬಹುದು. ಹೀಗೆ ಉಗಮಗೊಂಡ ದೇವತೆಯನ್ನು ಅಲೆಮಾರಿ ಜನರು ತಮ್ಮ ಕಾರ್ಯಕಲಾಪಗಳನ್ನು ಮುಗಿಸಿಬಂದು ಸೇರುತ್ತಿದ್ದ ಕೂಡುಹಾದಿಗಳಲ್ಲಿ ಪ್ರತಿಷ್ಠಾಪಿಸುತ್ತಿದ್ದರು. ಅದಕ್ಕೆ ನರಬಲಿ ಅಥವಾ ರಕ್ತಬಲಿಯನ್ನು ನೀಡಲಾಗುತ್ತಿತ್ತು. "ಈ ಮಾತೃದೇವತಾ ಪಂಥದ ಜನಪದ ರೂಪಗಳೇ ಗ್ರಾಮದೇವತೆಗಳು" ಎಂಬುದು ದೇವಿಪ್ರಸಾದ್ ಚಟ್ಟೋಪಾಧ್ಯಾಯ ಅವರ ಅಭಿಪ್ರಾಯ.

ಗಂಡು ಹೀಗೆ ಬೇಟೆಗೆ ಹೊರಡುತ್ತಿದ್ದ ಸಂದರ್ಭದಲ್ಲಿಯೇ ಹೆಣ್ಣು ಕೃಷಿಯನ್ನು ಅನ್ವೇಷಿಸಿದಳು ಎಂಬುದನ್ನು ಮತ್ತೊಂದು ಸಿದ್ಧಾಂತ. ವಿವಿಧ ರೀತಿಯ ಸಸ್ಯಾಹಾರಗಳನ್ನು ಅವಳು ಸಂಗ್ರಹಿಸುತ್ತಿದ್ದಳಾದ್ದರಿಂದ, ಬೀಜ, ಹಣ್ಣು, ಸೊಪ್ಪು, ಗೆಡ್ಡೆ, ಗೆಣಸುಗಳನ್ನು ಕಲೆ ಹಾಕುತ್ತಿದ್ದಳಾದ್ದರಿಂದ, ಅದನ್ನು ನೆಟ್ಟು ಬೆಳೆಸುವ ಅನ್ವೇಷಣೆ ಅವಳಿಂದಲೇ ಆಗಿರುವುದು ಅತ್ಯಂತ ಸಹಜವೇ. ಹೀಗಾಗಿ "ಹೆಣ್ಣಿನ ಗರ್ಭಧಾರಣೆ ಮತ್ತು ಭೂಮಿಯ ಸಸ್ಯಧಾರಣೆ ಇವೆರಡಕ್ಕೂ ಸಾಮ್ಯತೆಯನ್ನು ಕಂಡುಕೊಂಡ ಆದಿಮಾನವ ಹೆಣ್ಣು ಮತ್ತು ಭೂಮಿ ಇವೆರಡು ಪೂಜ್ಯ ವಸ್ತುವೆಂದು ಭಾವಿಸಿದ. ಸಮೃದ್ಧಿಯ ಆಚರಣೆಯಾಗಿ ಮಾಟ ರೂಪುಗೊಂಡಿತು."[೧೫] ಎಂಬುದು ಇಲ್ಲಿ ಗಮನಿಸಬೇಕಾದ ಅಂಶ.

"ಹರಪ್ಪ ಸಂಸ್ಕೃತಿಯಲ್ಲಿ ಒಂದು ಕುತೂಹಲಕರವಾದ ಮುದ್ರೆ ದೊರೆತಿದ್ದು ಇದು ಕೃಷಿ ದೃಶ್ಯಕ್ಕೆ ಸಂಬಂಧಿಸಿದ್ದಾಗಿದೆ. ಈ ಮುದ್ರಿಕೆಯಲ್ಲಿ ಸ್ತ್ರೀಯ ವಿಗ್ರಹವಿದ್ದು ಆಕೆಯ ಗರ್ಭದಿಂದ ಒಂದು ಸಸ್ಯವು ಹುಟ್ಟುತ್ತಿರುವಂತೆ ಚಿತ್ರಿಸಲಾಗಿದೆ. ಇದು ಇನ್ನೊಂದರ ಬದಿಯಲ್ಲಿ ಸ್ತ್ರೀ ಪುರುಷರ ಚಿತ್ರಗಳಿವೆ. ಒಬ್ಬ ಮನುಷ್ಯನು ನೇಗಿಲಿನಂಥ ಆಯುಧವನ್ನು ಹಿಡಿದಿದ್ದಾನೆ. ಈ ಚಿತ್ರದಲ್ಲಿರುವ ಮನುಷ್ಯ ಉಳುಮೆ ಮಾಡುವ ರೈತನೆಂದು ಭಾವಿಸಲಾಗಿದೆ. ಗರ್ಭದಿಂದ ಸಸ್ಯವು ಹೊರಹೊಮ್ಮುತ್ತಿರುವ ಸ್ತ್ರೀ ಚಿತ್ರವನ್ನು ಮಾತೃದೇವತೆಯಂದು ಹೇಳಲಾಗಿದೆ. ಈಕೆಯನ್ನು ಶಾಕಾಂಬರಿ ಎಂದು ಗುರುತಿಸುತ್ತಾರೆ. ಹೀಗೆ ಸಸ್ಯಸಂಬಂಧಿಯಾದ ದೇವತೆಯ ಇನ್ನೊಂದು ಮುದ್ರಿಕೆಯು ಹರಪ್ಪ ಸಂಸ್ಕೃತಿಯಲ್ಲೇ ದೊರಕಿದೆ. ಈ ಚಿತ್ರ ಒಂದು ಹೆಣ್ಣಿನದಾಗಿದ್ದು ಈಕೆ ಒಂದು ವೃಕ್ಷದ ಎರಡು ಕೊಂಬೆಗಳ ಮೇಲೆ ನಿಂತಿದ್ದಾಳೆ. ಒಬ್ಬ ಭಕ್ತನು ಮರದ ಪಕ್ಕದಲ್ಲಿ ಭಾಗಿ ನಿಂತಿದ್ದಾನೆ. ಒಂದು ಮೇಕೆಯು ಭಕ್ತನ ಹಿಂದೆ ನಿಂತಿದೆ. ಇದರ

PDF created with pdfFactory Pro trial version www.pdffactory.com

ಕೆಳಭಾಗದಲ್ಲಿ ಏಳು ವಿಗ್ರಹಗಳನ್ನು ಕಾಣಬಹುದು. ಈ ಚಿತ್ರದ ಹೆಣ್ಣಿನ ವಿಗ್ರಹವನ್ನು ಮಾತೃದೇವತೆಯೆಂದು ಭಾವಿಸಲಾಗಿದೆ. ಇದರಲ್ಲಿ ಏಳು ವಿಗ್ರಹಗಳು ಕಡಿಮೆ ದರ್ಜೆಯ ಏಳು ದೇವತೆಗಳೆಂದು ಭಾವಿಸಲಾಗಿದೆ. ಇಲ್ಲಿರುವ ಮೇಕೆಗೆ ಮನುಷ್ಯನ ಮುಖವಿರುವುದರಿಂದ ಇದು ಬಲಿಗಾಗಿ ತಂದ ಪ್ರಾಣಿಯಲ್ಲವೆಂದು ವಿದ್ವಾಂಸರು ಭಾವಿಸುತ್ತಾರೆ.[೧೬]

"ಭೂಮಿಯನ್ನು ತಾಯಿ ಎಂದೂ ಮಾನವರ ಮಾತೆ ಎಂದೂ ದೇವತೆ ತಾಯಿ ಎಂದೂ, ಅರಣ್ಯ, ಪ್ರಾಣಿ, ಪಕ್ಷಿ, ಇವುಗಳ ಮಾತೃವೆಂದೂ ಪೂಜಿಸಲಾಗಿದೆ. ಸ್ತನ, ಗರ್ಭ, ಯೋನಿ ಇವುಗಳನ್ನು ಮಾತೃದೇವತೆಯ ಸಂಕೇತಗಳೆಂದು ಅವರು ಭಾವಿಸಿದ್ದರು. ಈ ಮೂರು ಅಂಗಗಳು ಮುಖ್ಯ ಮೂರು ಚಟುವಟಿಕೆಗಳನ್ನು ಮಾಡುತ್ತವೆ. ಅವು ಪಾಲನೆ, ಧಾರಣೆ ಮತ್ತು ಸೃಷ್ಟಿ. ಸಿಂಧೂ ಸಂಸ್ಕೃತಿಯಲ್ಲಿ ದೊರೆತಿರುವ ಉಗ್ರಾಕಾರದ ಕಲ್ಲುಗಳನ್ನು ಮಾತೃದೇವತೆಯ ಸೃಷ್ಟಿಯ ಅಂಗವಾದ ಯೋನಿ ಎಂದು ಭಾವಿಸಲಾಗಿದೆ."[೧೭]

ಈ ಸೃಷ್ಟಿಸಂಕೇತವಾದ ಯೋನಿಯನ್ನು ಬಹು ಹಿಂದಿನಿಂದಲೇ ಭಾರತದಲ್ಲಿ ಪೂಜಿಸಿಕೊಂಡು ಬರಲಾಗಿದೆ ಎಂಬುದಕ್ಕೆ ಹರಪ್ಪ ಮತ್ತು ಮಹೆಂಜದಾರೋಗಳಲ್ಲಿ ಸಿಕ್ಕಿರುವ ವಿಗ್ರಹಗಳೇ ಸಾಕ್ಷಿಯಾಗಿವೆ. ಅದರಲ್ಲಿಯೂ ಇಂಥ ವಿಗ್ರಹಗಳು ಕೃಷಿ ಯೋಗ್ಯ ಕಣಿವೆಗಳು ಮತ್ತು ನದಿ ಕೊಳ್ಳಗಳಲ್ಲಿ ಸಿಕ್ಕಿರುವುದು ಇನ್ನೂ ಹೆಚ್ಚಿನ ಜಿಜ್ಞಾಸೆಗೆ ನಮ್ಮನ್ನು ಒಳಪಡಿಸುತ್ತವೆ. ಕರ್ನಾಟಕದಾದ್ಯಂತ ಲಭ್ಯವಿರುವ ಲಜ್ಜಾಗೌರಿ ವಿಗ್ರಹಗಳಂತೂ ಅನಾದಿಕಾಲದಿಂದಲೂ ಪೂಜಿಸಲ್ಪಡುತ್ತಿರುವ 'ಯೋನಿ' ಶ್ರೇಷ್ಠತೆಯನ್ನು ಎತ್ತಿ ಹಿಡಿಯುತ್ತವೆ. "ಸೃಷ್ಟಿದೇವತೆಯ, ಆದಿಮಾತೆಯ ರೂಪವನ್ನು ಈ ವಿಗ್ರಹಗಳು ಪ್ರತಿನಿಧಿಸುತ್ತವೆ. ತಾನು ದಿನವೂ ನೋಡುತ್ತಿದ್ದ ಅನುಭವಿಸುತ್ತಿದ್ದ ಸೃಷ್ಟಿಯ ವ್ಯಾಪಾರಗಳನ್ನು ತನಗೆ ಪರಿಚಯವಿದ್ದ ವಾತಾವರಣದಲ್ಲಿ ಆದಿಮಾನವರು ಅರ್ಥೈಸಿಕೊಳ್ಳಲು ಯತ್ನಿಸಿದರು. ಕ್ರಮೇಣ ಮಳೆ ಬೆಳೆ ಸಮೃದ್ಧಿಯನ್ನು ಕೊಡಮಾಡುವ ಅದೃಶ್ಯ ಶಕ್ತಿಯನ್ನು ರೂಪಿಸಲು ಶ್ರಮಪಟ್ಟರು. ಸಂತತಿ ಬರಲು, ಅದು ಆಹಾರಾದಿಗಳನ್ನು ಪಡೆದು ಬೆಳೆಯಲು ಕಾರಣಳಾದ ಜನನಿಯನ್ನೇ ಬೃಹತ್ ಸೃಷ್ಟಿ ರೂಪದಲ್ಲಿ ಕಂಡರು, ಪೂಜಿಸಿದರು. ಸುಫಲತೆಗೆ ಅವಳನ್ನು ಪ್ರಾರ್ಥಿಸಿದರು. ಸೃಷ್ಟಿ–ಪುಷ್ಟಿ (ಜನನ ಹಾಗೂ ಪೋಷಣೆ)ಗೆ ಹೆಣ್ಣೇ ಕಾರಣ! ಅದರಂತೆ ಕಾಳು, ಹಣ್ಣು ಬೆಳೆಗೆ ಕಾರಣವಾದ ಭೂಮಿಯೂ ಹೆಣ್ಣು ದೇವತೆಯೇ! ಎಂಬ ಕಲ್ಪನೆ ಅವನಲ್ಲಿ ಸ್ಥಿರವಾಗಿ ಬೇರು ಬಿಟ್ಟ ಯುಗದಲ್ಲಿ ಈ ವಿಗ್ರಹಗಳ ಮೂಲವನ್ನು ಹುಡುಕಬಹುದು. ಚರಿತ್ರೆ ಹಾಗೂ ಉತ್ಖನನಗಳ ದೃಷ್ಟಿಯಿಂದ ಪ್ರಾಗೈತಿಹಾಸ ಕಾಲದಿಂದಲೂ ಇಂಥ ವಿಗ್ರಹಗಳು ಕಂಡು ಬರುತ್ತಿವೆ. ನಮ್ಮಲ್ಲಿ, ಮೂರು ಸಹಸ್ರ

ವರ್ಷಗಳಿಂದಲೂ ಸೃಷ್ಟಿಗೆ ಕಾರಣವಾದ ಭೂಮಾತೆಯ ಪೂಜೆ ಬಳಕೆಯಲ್ಲಿರುವುದನ್ನು ಗುರುತಿಸಬಹುದು. ಯೋನಿ ಹಾಗೂ ಸ್ತನಗಳಿಗೆ ಪ್ರಾಧಾನ್ಯ ಕೊಟ್ಟ ಈ ವಿಗ್ರಹಗಳು ಸುಫಲತೆ ಸಮೃದ್ಧಿಗಳ ಆರಾಧ್ಯ ದೇವತೆಯ ರೂಪಗಳಾಗಿವೆ. ಕೆಲವು ಪ್ರಾದೇಶಿಕ ಬದಲಾವಣೆಗಳನ್ನು ಹೊಂದಿದರೂ, ಇಷ್ಟ ಫಲದಾಯಿನಿಯ ರೂಪದಲ್ಲಿ ಭಾವುಕರಿಂದ ಪೂಜಿಸಲ್ಪಡುವ ಜಗಜ್ಜನನಿಯ ಪ್ರತೀಕವಾಗಿ ಮುಂದುವರೆದು ಪ್ರಾಚೀನ ಸಂಪ್ರದಾಯವನ್ನು ಪ್ರತಿನಿಧಿಸುತ್ತವೆ. ಇಂದಿಗೂ ಇದೇ ರೂಪದಲ್ಲಿ ಪೂಜಿಸಲ್ಪಡುವ ಸ್ತ್ರೀ ವಿಗ್ರಹಗಳು ಅಲ್ಲಲ್ಲಿ ಗುಡಿಯಲ್ಲಿದ್ದು, ಮಕ್ಕಳಾಗದವರು, ವ್ರತೋಪಾಸನಗಳನ್ನು ಕೈಗೊಂಡು ವಿಗ್ರಹದ ಯೋನಿ ಸ್ತನಗಳಿಗೆ ಬೆಣ್ಣೆ–ಸಿಂಧೂರಗಳ ಲೇಪದ ಅರ್ಚನೆಯ ವಿಧಾನ ಕೈಗೊಳ್ಳುತ್ತಾರೆ. ಉತ್ತರ ಕರ್ನಾಟಕದ ಕೆಲವಡೆಯಲ್ಲಿ 'ಲಜ್ಜಾಗೌರಿ' ಎಂದೇ ಈ ದೇವತೆಯನ್ನು ಗುರುತಿಸುತ್ತಾರೆ.

ಲಜ್ಜಾಗೌರಿಯ ವಿಗ್ರಹಗಳಲ್ಲಿ ಹಲವು ನದಿಕೊಳ್ಳ, ನಿರ್ಜನ ಕಣಿವೆಗಳಲ್ಲಿ ದೊರೆತಿದ್ದು, ಸಮೀಪದಲ್ಲೇ ಪ್ರಸಿದ್ಧ ಶಕ್ತಿದೇವತೆಯ ಉಪಾಸನಾ ಕೇಂದ್ರಗಳಿದ್ದದ್ದು ಕಂಡು ಬಂದಿದೆ. ಭೀಮಾನದಿ ಕೊಳ್ಳದ ಚಂದ್ರಲಾಂಬೆ, ಮಲಪ್ರಭೆಯ ಮಾಕೂಟೆಶ್ವರಿ (ಮಹಾ ಕೂಟೇಶ್ವರಿ), ಕೃಷ್ಣಾತೀರದ ಜೋಗುಳಾಂಬಾ ಇತ್ಯಾದಿ. ಇವು ತಾಂತ್ರಿಕರ ಪೂಜಾಸ್ಥಾನಗಳಾಗಿದ್ದವು. ಭಾರತದ ಪವಿತ್ರ ಸಾಹಿತ್ಯದಲ್ಲಿ ಶ್ರುತಿ, ಸ್ಮೃತಿ, ಪುರಾಣಗಳ ಬಳಿಕ ತಂತ್ರಶಾಸ್ತ್ರದ ಸ್ಥಾನ ಬರುತ್ತದೆ. ಇದರ ಉಗಮ, ವೇದಗಳಷ್ಟೇ ಹಳೆಯ ತಂತ್ರಾಗಮನಗಳಲ್ಲಿದ್ದು ಶೈವ, ವೈಷ್ಣವ, ಜೈನ, ಬೌದ್ಧಧರ್ಮಗಳೆಲ್ಲ ತಂತ್ರಶಾಸ್ತ್ರದ ಹಲವಾರು ಅಂಶಗಳನ್ನು ಹೊಂದಿದೆ. ತಾಂತ್ರಿಕರಲ್ಲಿ ಸೃಜನಶಕ್ತಿಯುಳ್ಳ ಸ್ತ್ರೀಗೆ ಉನ್ನತ ಸ್ಥಾನವಿದೆ. ಸ್ತ್ರೀ ರೂಪಿ ಶಕ್ತಿ ಪೂಜೆಗೆ ಪ್ರಾಧಾನ್ಯ. ಹೀಗಾಗಿ ಶಾಕ್ತ'ರೆನಿಸಿ ಕೊಳ್ಳುತ್ತಾರೆ. ಸ್ತ್ರೀತತ್ವಶಕ್ತಿಯು ಎಲ್ಲ ಸೃಷ್ಟಿಗೂ ಮೂಲವಾಗಿ ಯೋನಿ ರೂಪದಲ್ಲಿ ಆಕೆಯನ್ನು ಪೂಜಿಸುವುದು ಸಾಮಾನ್ಯ. ಯೋನಿರೂಪವೇ ಸೃಷ್ಟ್ಯಾತ್ಮಕ ಪರತತ್ವದ ಸಂಕೇತವಾಗಿದೆ. ಸೃಷ್ಟಿಕರ್ತೆಯಂತೆ ಲಯಕಾರಣಿಯೂ ಆಗಿದ್ದ ಶಕ್ತಿಯ ಪೂಜೆ ಭಾರತದಾದ್ಯಂತ ವಿವಿಧ ರೂಪಗಳಲ್ಲಿ ನಡೆದು ಬಂದಿತು.

ತಾಂತ್ರಿಕರ ಪೂಜಾಕ್ರಮದಲ್ಲಿ ಸ್ತ್ರೀಯರಿಗೆ ಪ್ರಧಾನ್ಯವಿದ್ದು ಕೆಲವೊಮ್ಮೆ ಶಾಕ್ತಪಂಥದ ಯೋಗಿನಿಯರೇ ತಾಂತ್ರಿಕ ವಿಧಾನಗಳು, ಮಂತ್ರಶಕ್ತಿಗಳಲ್ಲಿ ಮಿಗಿಲಾಗಿರುತ್ತಿದ್ದರು. ಹೆಣ್ಣಿನಲ್ಲಿ ದೈವಿಕತೆ ಕಂಡದ್ದು, ಜಾತಿಪಂಥ ಪದ್ಧತಿಯನ್ನು ಮೀರಿ ನಿಂತದ್ದು ಹಾಗೂ ವರ್ಗಸಮಾನತೆಯನ್ನು ಸಾಧಿಸಿದ್ದು ತಾಂತ್ರಿಕ ತತ್ವದ ಉತ್ತಮಾಂಶಗಳು. ಆದರೆ ಅವರಲ್ಲಿ ಹಲವರು ಬಾಹ್ಯಾಚರಣೆಗಳಲ್ಲೇ ಮಗ್ನರಾಗಿ, ಪಂಚ'ಮ'ಕಾರಗಳಿಗೆ ಮಹತ್ವ ನೀಡಿದ್ದು(ಮಾಂಸ, ಮತ್ಸ್ಯ, ಮುದ್ರೆ, ಮದ್ಯ ಮೈಥುನಗಳು ಪವಿತ್ರ ರೂಪದಲ್ಲಿ ಸಾಧನೆಯ ಅಂಗಗಳಾಗಿವೆ) ಇತರ ವೈದಿಕ ಮತಾನುಯಾಯಿಗಳು ಅವರನ್ನು ವಾಮಪಂಥೀಯ(ವಾಮಮಾರ್ಗಿ)ರೆಂದು ಹೀಗಳೆಯಲು ಕಾರಣವಾಯಿತು.

PDF created with pdfFactory Pro trial version www.pdffactory.com

ಶಂಕರಾಚಾರ್ಯರ ಧರ್ಮ ಸುಧಾರಣೆಯ ಕ್ರಮಗಳು ಪೂರ್ವ ಭಾರತದ ಮೇಲೆ ಅಷ್ಟೊಂದು ಪ್ರಭಾವ ಬೀರಿದಂತೆ ತೋರುವುದಿಲ್ಲ. ಅಲ್ಲಿ ಶಕ್ತಿಪೂಜೆ ಮೊದಲಿನಂತೆಯೇ ಮುಂದುವರಿದು ಅಸ್ಸಾಮದ ಕಾಮಾಖ್ಯಾ, ಜಾಗೃತ ಶಕ್ತಿ ದೇವತೆಯೆಂದು ಮುಂದುವರಿದು ಎಲ್ಲ ವರ್ಗಗಳ ಜನರ ಆರಾಧನೆಗೆ ಪಾತ್ರಳಾಗಿದ್ದಾಳೆ. ಇಲ್ಲಿ ಮುಖ್ಯವಾದದ್ದು ಈ ದೇವತೆಯ ಯೋನಿರೂಪ. ದೇವಾಲಯದ ಒಳಗಡೆ ಗುಹೆಯಲ್ಲಿ ಶಿಲೆಯೊಂದರ ಮೇಲೆ ಪ್ರತಿಷ್ಠಿತಳಾಗಿದ್ದಾಳೆ. ನೈಸರ್ಗಿಕ ಝರಿಯೊಂದು ಯೋನಿಭಾಗವನ್ನು ಸದಾ ಆರ್ದ್ರವಾಗಿಡುತ್ತದೆ. ಜ್ಯೇಷ್ಠ ಮಾಸದ ಕೊನೆಯಲ್ಲಿ ಅಥವಾ ಆಷಾಢದ ಮೊದಲಲ್ಲಿ ಬರುವ 'ಅಂಬುವಾಚಿ' ದೇವಿಯ ವಾರ್ಷಿಕ ಉತ್ಸವ ಮೊದಲಲ್ಲಿ ಆಚರಿಸಲ್ಪಡುತ್ತದೆ. ಆದಿಮಾತೆಯು ಕೃಷಿ ಸಂಬಂಧಿತ ಚಟುವಟಿಕೆಗಳನ್ನೆಲ್ಲಾ ಮೂರು ದಿನಗಳ ಕಾಲ ಸ್ಥಗಿತಗೊಳ್ಳಲು ಕಾರಣಳಾಗುತ್ತಾಳೆ! ಏಕೆಂದರೆ ಅಂಬುವಾಚಿ(ಅಂಬು=ಮಳೆ, ವಾಚಿ=ಅರಳುವುದು)ಯ ಅವಧಿಯಲ್ಲಿ ಭೂಮಿ ರಜಸ್ವಲೆಯಾಗುತ್ತಾಳೆ ಎಂದು ಆ ಜನರ ನಂಬಿಕೆ. ಆಗ ನೆಲಕ್ಕೆ ನೇಗಿಲು ಹತ್ತಕೂಡದು. ಭೂಮಿತಾಯಿಯನ್ನು ನೋಯಿಸಕೂಡದು. ಮೂರುದಿನ ಕಾಮಾಖ್ಯಾ ದೇವಾಲಯದ ಬಾಗಿಲು ಮುಚ್ಚಿರುತ್ತದೆ. ಆ ಬಳಿಕವೇ ದೇವಿಯ ದರ್ಶನ ಲಭ್ಯ. ಕೆಂಪು ಹೂ, ಕೆಂಪು ಬಟ್ಟೆ, ಕುಂಕುಮಗಳಿಂದ ದೇವಿಯನ್ನು ಅರ್ಚಿಸುತ್ತಾರೆ. ಅಪಾರ ಸಂಖ್ಯೆಯಲ್ಲಿ ಭಕ್ತಾದಿಗಳು ನೆರೆದಿದ್ದು ಕೆಂಪು ಬಟ್ಟೆಗಳ ಚೂರುಗಳ ಪ್ರಸಾದ ವಿನಿಯೋಗಕ್ಕೆ ಕಾದಿರುತ್ತಾರೆ. ಬಂಗಾಲದಲ್ಲಿ ಅಂಬುವಾಚಿಯ ಕಾಲ ವಿಶಿಷ್ಟವಾಗಿ ಆಚರಿಸಿದರೆ ಒರಿಸ್ಸಾದಲ್ಲಿಯೂ 'ರಜ ಉತ್ಸವ'ವು ಹೆಣ್ಣು ಮಕ್ಕಳ ಹಬ್ಬವಾಗಿದೆ. ಕಾಶ್ಮೀರದಲ್ಲಿಯೂ ಸೂರ್ಯಪತ್ನಿಯೆಂದು ಭೂಮಿದೇವಿಯ ಋತುಸ್ನಾನದ ಪೂಜೆಯನ್ನು ಸ್ತ್ರೀಯರೇ ಮಾಡುತ್ತಾರೆ. ಹೀಗೆ ಸೃಷ್ಟಿದೇವತೆಯ ಪೂಜೆ, ಭೂದೇವಿಯ ಪೂಜೆಯಲ್ಲಿ ಮಾರ್ಪಾಡಾಗಿ ಒಳ್ಳೆಯ ಫಸಲಿಗೆ ಆಕೆಯನ್ನು ಆರಾಧಿಸುವಲ್ಲಿ ರೂಪ ಹೊಂದಿದೆ.

ಈ ತನಕ ಲಭಿಸಿದ ಲಜ್ಜಾಗೌರಿಯ ಹೆಚ್ಚಿನ ವಿಗ್ರಹಗಳಲ್ಲಿ ಹೊಟ್ಟೆಯನ್ನು ಕುಂಭಾಕಾರದಲ್ಲಿ ಒಡಮೂಡಿಸಲಾಗಿದೆ. ಗರ್ಭಾಶಯದ ಪ್ರತೀಕವಾಗಿ ಪ್ರಾರಂಭವಾದ ಕುಂಭಪೂಜೆ ಅತ್ಯಂತ ಪ್ರಾಚೀನವಾಗಿದ್ದು ಭಾರತದ ಎಲ್ಲಾ ಮತಪಂಥಗಳಲ್ಲಿ ಪವಿತ್ರ ಅರ್ಚನೆಯ ಭಾಗವಾಗಿ ಮುಂದುವರಿದಿದೆ.

ಋಗ್ವೇದಕಾಲೀನ ಕಲ್ಪನೆಯಲ್ಲಿ ಆಕಾಶ(ದ್ಯಾ)ವೇ ತಂದೆ. ಭೂಮಿಯೇ ತಾಯಿ. ಇವರಿಬ್ಬರ ಮುಖಾಮುಖಿ ಸಮಾಗಮದಿಂದ ಭೂಮಿಯು ಗರ್ಭ ಧರಿಸಿ ಬಗೆಬಗೆಯ ಸೃಷ್ಟಿಜೀವಿಗಳಿಗೆ ಕಾರಣಳಾದಳು. ಇಲ್ಲಿ ಬರುವ 'ಉತ್ತಾನಚಮು' ಎಂಬ ಶಬ್ದವು ತೆರೆದ(ಮುಖಾಮುಖಿ) ಕುಂಭವೆಂದು ಅರ್ಥೈಸಲಾಗಿದೆ. ವಿಗ್ರಹರೂಪಿ

ಭೂಮಾತೆಯು ಕುಂಭಧಾರಿಣಿ ಎಂದು ಪೂಜೆಗೊಂಡದ್ದು ಆಶ್ಚರ್ಯವಲ್ಲ. ಪ್ರಾಗೈತಿಹಾಸಿಕ ಕಾಲದಲ್ಲೆಲ್ಲಾ ಕುಂಭಕರ್ಮವು ಹೆಣ್ಣುಮಕ್ಕಳ ಕೆಲಸವಾಗಿದ್ದು, ರೇಣುಕೆಯ ಕಥೆಯಲ್ಲಿ ಹಸಿಮಣ್ಣಿನ ಕೊಡ ಪ್ರಾತಿನಿಧಿಕವಾಗಿದೆ. ಎಲ್ಲಮ್ಮನ ಪೂಜೆಯಲ್ಲಿ ಕೊಡ ಹೊತ್ತು ಕುಣಿಯುವ ವಿಧಿ ಇದೆ. ಪೂರ್ಣಕುಂಭ(ಕಲಶ)ವು ಎಲ್ಲಾ ಉತ್ಸವಾದಿ ವಿಶೇಷ ಪ್ರಸಂಗಗಳಲ್ಲಿ ಆದ್ಯತೆ ಹೊಂದಿದೆ. ಶಕ್ತಿಪೂಜೆಗೆ ಪ್ರಾಧಾನ್ಯವಿರುವ ನವರಾತ್ರಿಯು ಘಟಸ್ಥಾಪನೆಯೊಂದಿಗೆ ಪ್ರಾರಂಭವಾಗುತ್ತದೆ. ಕುಂಭ ಅಥವಾ ಘಟದಲ್ಲಿ ಬಗೆಬಗೆಯ ಕಾಳುಗಳನ್ನು ಇಟ್ಟು ಮೊಳಕೆಯೊಡಿಸಿ ಪೂಜಿಸುವ ಕ್ರಮ ದೇಶದ ವಿವಿಧ ಭಾಗಗಳಲ್ಲಿದೆ. ವರಮಹಾಲಕ್ಷ್ಮಿಯ ಸಾಲಂಕೃತ ಕಲಶ ಪೂಜೆ, ಶ್ರಾವಣ ಮಾಸದ ವೈಶಿಷ್ಟ್ಯವಾಗಿ ಬೆಳೆದುಬಂದಿದೆ. ಮಹಾಲಕ್ಷ್ಮಿಯು ಭುವನೇಶ್ವರಿ ಅಥವಾ ಭೂಮಾತೆಯೇ!

ಬೆಂಗಳೂರಿಗೆ ಪರಿಚಿತವಿರುವ ಕರಗವು ಶಕ್ತಿಪೂಜೆಯಲ್ಲಿ ಸ್ತ್ರೀಯರ ಪ್ರಾಧಾನ್ಯವಿದ್ದ ಯುಗದ ಪಳೆಯುಳಿಕೆಯಾಗಿ ಮುಂದುವರಿದಿದೆ ಎಂಬುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಧರ್ಮರಾಯನ ಕರಗದ ಮುಖ್ಯ ಪೂಜಾರಿ ಸ್ತ್ರೀ ವೇಷವನ್ನು ತೊಡುವುದು ಮತ್ತು ದ್ರೌಪದಿಯು ಶಕ್ತಿಸ್ವರೂಪಿಣಿಯಾಗಿ ಪೂಜಿಸಲ್ಪಡುವುದು ಪ್ರಾಚೀನವಾದ ಮಹತ್ವದ ಸ್ತ್ರೀ ಕರ್ಮಕ್ಕೆ ನೀಡಿದ ಆದ್ಯತೆಯನ್ನು ಸೂಚಿಸುತ್ತದೆ. ನಮ್ಮ ದೇಶದ ಪೂಜಾ ವಿಧಾನಗಳು ಒಮ್ಮಿಂದೊಮ್ಮೆ ಕಣ್ಮರೆಯಾಗುವುದಿಲ್ಲ. ದೇವಾದಿದೇವತೆಗಳ ಸ್ವರೂಪ(ಅಲಂಕಾರ ವಿಶೇಷಗಳಿಂದ) ಅಥವಾ ಅರ್ಚಕ ವರ್ಗವು ಹಿಂದಿನ ಆಳರಸರ ಆಶ್ರಯಕ್ಕನುಗುಣವಾಗಿ ಬದಲಾದರೂ, ಸ್ಥಳ ಪುರಾಣಗಳು ಹಾಗೂ ಅರ್ಚನಾ ವಿಧಿಗಳ ಸಾಂಕೇತಿಕತೆಗಳು ಮುಂದುವರಿದೇ ಬರುತ್ತವೆ. ಇವುಗಳ ವಿಶೇಷ ಅಧ್ಯಯನ ಕೈಗೊಂಡಲ್ಲಿ ನಿಂತ ನೀರಾಗಿರದ, ಎಲ್ಲ ಕಾಲಗಳ ಬದಲಾವಣೆಗಳನ್ನು ಅರಗಿಸಿಕೊಳ್ಳಬಲ್ಲ, ಆದರೆ ಪ್ರಾಚೀನತೆಯನ್ನು ಬಿಟ್ಟು ಕೊಡದ ಭಾರತೀಯ ಪರಂಪರೆಯ ವೈಶಿಷ್ಟ್ಯಗಳನ್ನು ಅರಿಯಲು ಸಹಾಯವಾದೀತು."[೧೮]

ಕರ್ನಾಟಕ ಹಾಗೂ ತಮಿಳುನಾಡಿನಲ್ಲಿ ಬಹು ಜನಪ್ರಿಯವಾಗಿರುವ ಕರಗದ ಆಚರಣೆಯನ್ನು ನಾವು ಮತ್ತೆ ನೆನಪಿಸಿಕೊಳ್ಳಲೇಬೇಕು. ಈ ಕೃತಿಯ ಆರಂಭದ ಪುಟಗಳಲ್ಲಿ ನಾನು ನನ್ನೂರಿನ ಉಜ್ಜನಿ ಚೌಡಮ್ಮನ ಹಬ್ಬವನ್ನು ಪ್ರಸ್ತಾಪಿಸಿ, ಅಲ್ಲಿ ಎಲ್ಲಕ್ಕಿಂತ ಧೂಪುಂಡಿಗೆ ಮತ್ತು ಕರಗ ಕೊಂಡ ಹಾಯುತ್ತವೆ ಎಂದು ಹೇಳಿದ್ದೆ. ಜಲ ಮತ್ತು ಫಲದ ಸಂಕೇತವಾದ ಈ ಕರಗ, ಮೂಲದಲ್ಲಿ ಇದ್ದ 'ಕರಗದಮ್ಮ' ಅಲ್ಲದೇ ಮತ್ತೇನೂ ಅಲ್ಲ. ಅಂದರೆ ಕರ್ನಾಟಕ ಮತ್ತು ತಮಿಳುನಾಡಿನಲ್ಲಿ 'ಕರಗ'ವನ್ನು ಆದಿಶಕ್ತಿಯ ಪ್ರಾಚೀನ ರೂಪವೆಂದು ನಂಬಲಾಗಿತ್ತು. ಈ ಕರಗದ ಆರಾಧನೆಯನ್ನು

PDF created with pdfFactory Pro trial version www.pdffactory.com

ಕುರಿತು ಹಲವು ವಿದ್ವಾಂಸರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ, ಡಾ.ಚಂದ್ರಶೇಖರ ಕಂಬಾರರು "ಕರಗ ಶುದ್ಧಾಂಗವಾಗಿ ಪ್ರಾರಂಭದಲ್ಲಿ ಸಮೃದ್ಧಿ ಸೂಚಕವಾದ ಯೋನಿ ಪೂಜೆಯಾಗಿತ್ತೆಂಬುದರಲ್ಲಿ ಸಂದೇಹವಿಲ್ಲ" ಎಂದು ಹೇಳುತ್ತಾರೆ. ಡಾ. ಸಿದ್ದಲಿಂಗಯ್ಯನವರು "ಸ್ತ್ರೀಪ್ರಧಾನ ಆಚರಣೆಯೊಂದು ಪುರುಷ ಪ್ರಧಾನವಾಗಿ ನಮ್ಮ ಮುಂದಿದೆ" ಎಂದು ಕರಗದ ಇವತ್ತಿನ ಆಚರಣೆಯನ್ನು ಕುರಿತು ಹೇಳುತ್ತಾ, ಅದಕ್ಕೆ ಕಾರಣಗಳನ್ನು ಹೀಗೆ ನೀಡುತ್ತಾರೆ: "ಸಮೃದ್ಧಿ ಆಚರಣೆಗಳೆಲ್ಲವೂ ಸ್ತ್ರೀಸಂಬಂಧಿ ಆಚರಣೆಗಳಾದ್ದರಿಂದ ಅನೇಕ ಸಂಸ್ಕೃತಿಗಳಲ್ಲಿ ಗಂಡಿಗೆ ಆಚರಣೆಯ ಹಕ್ಕನ್ನು, ಆಚರಣೆಯ ಸ್ಥಳಕ್ಕೆ ಅವರ ಪ್ರವೇಶವನ್ನು ನಿರಾಕರಿಸಲಾಗಿದೆ. ಮಾನವ ಜೀವನವಿಧಾನ ಬದಲಾದಂತೆ ಕೃಷಿಯ ಮುಂದುವರಿದ ಘಟ್ಟಗಳಲ್ಲಿ ಗಂಡು ಮಹತ್ವದ ಸ್ಥಾನವನ್ನು ಗಳಿಸಿದ್ದಾನೆ. ಆಗ ಸಮೃದ್ಧಿಯ ಆಚರಣೆಗಳನ್ನು ನೆರವೇರಿಸುವ ಹೊಣೆಗಾರಿಕೆ ಅವನದಾಗುತ್ತದೆ. ಈ ತೊಡಕನ್ನು ನಿವಾರಿಸಲು ಗಂಡುಪೂಜಾರಿಯು ಸ್ತ್ರೀವೇಷಧಾರಿಯಾಗುತ್ತಾನೆ. ಆದ್ದರಿಂದ ಗಂಡು ಹೆಣ್ಣಿನಂತೆ ವರ್ತಿಸಲು ಸಾಂಸ್ಕೃತಿಕ ಕಾರಣಗಳೇ ಮುಖ್ಯ."

ಹೀಗೆ ಗಂಡುಪೂಜಾರಿಗಳು ಸ್ತ್ರೀವೇಷಧಾರಿಗಳಾಗುವ ಸಂಬಂಧ ನಮ್ಮ ಅನೇಕ ಗ್ರಾಮದೇವತೆಗಳ ಹಬ್ಬಗಳ ಸಂದರ್ಭದಲ್ಲಿಯೂ ಏರ್ಪಡುತ್ತದೆ ಎಂಬುದನ್ನು ನಾವು ಗಮನಿಸಲೇಬೇಕು. ಒಟ್ಟಿನಲ್ಲಿ ಈ ಕರಗದ ಆಚರಣೆ ದ್ರಾವಿಡ ಬುಡಕಟ್ಟುಗಳಲ್ಲಿ ಪ್ರಚಲಿತವಿದ್ದ ಫಲ ಸಮೃದ್ಧಿ ಆಚರಣೆಯ ಪಳೆಯುಳಿಕೆ ಎಂಬುದು ನಿಸ್ಸಂದೇಹವಾದ ಸಂಗತಿ.

ಹೀಗೆ ಪ್ರಾಚೀನ ಸಮಾಜಗಳಲ್ಲಿಯೇ ಆರಾಧನೆಗೊಳಪಟ್ಟ ಜಲ ಮತು ಫಲದ ಸಂಕೇತವೆನಿಸಿದ 'ಕುಂಭ–ಕಲಶ–ಕರಗ"ಗಳು ನಮ್ಮ ಬುಡಕಟ್ಟು ಸಮಾಜಗಳಲ್ಲಿ ಇಂದಿಗೂ ಪ್ರಚಲಿತದಲ್ಲಿವೆ ಎಂಬುದನ್ನು ಪ್ರತಿಪಾದಿಸುವುದೇ ಈ ಅಧ್ಯಾಯದ ಉದ್ದೇಶವಾಗಿತ್ತು. ಗೊಂಡರ ಮಂಡಲದಲ್ಲಿ ಪ್ರತಿಷ್ಠಾಪಿಸುವ 'ಕಲಶ' ಮತ್ತು ಮೇರರ ಕಾಡ್ಯನಾಟದ 'ಕಲಶಗಳು' ಹಾಗೂ ಬಲೀಂದ್ರ ಪೂಜೆಯ ಫಲಪುಷ್ಪಭರಿತ ಕಲಶ ಇವೆಲ್ಲವೂ ಇಂಥ ಸಂಕೇತಗಳೇ ಎಂಬುದು ನನ್ನ ಭಾವನೆ. ನಾನು ಈಗಾಗಲೇ ಪ್ರತಿಪಾದಿಸಿದಂತೆ ಅನಂತರದ ಹಲವು ಅವಸ್ತಾಂತರಗಳಲ್ಲಿ ಪುರುಷ ದೈವಗಳು ಅವತರಿಸಿದವು. ಈ ದೈವಾಂತರಗಳನ್ನು ಪ್ರಕೃತಿ ದೇವತೆಯರು, ಸಮೃದ್ಧಿ ದೇವತೆಯರು, ಚಟುವಟಿಕೆಯ ದೇವತೆಯರು, ಉನ್ನತ ದೇವತೆಯರು, ಜಗದಧಿಕಾರದ ದೇವತೆಯರು ಮುಂತಾಗಿ ವಿದ್ವಾಂಸರು ಹೆಸರಿಸಿದ್ದಾರೆ. ಆರಂಭದಲ್ಲಿ ಪ್ರಕೃತಿಯ ಅನುಕರಣೆ, ನಂತರದಲ್ಲಿ ಸರಳ ರೂಪದ ಕಂಬ ಮತು ಕುಂಭಗಳು, ಅನಂತರದಲ್ಲಿ ನಿರ್ದಿಷ್ಟ ರೂಪದ ಮೂರ್ತಿಗಳಾಗಿ ತಮ್ಮ ಇರುವನ್ನು ಗುರುತಿಸಿಕೊಂಡ ಈ ದೇವತೆಗಳ

ಚರಿತ್ರೆ ಸ್ತ್ರೀ ಮತ್ತು ಪುರುಷವರ್ಗಗಳ ನಡುವಿನ ಅನುಸಂಧಾನ ಹಾಗೂ ಸಾಂಸ್ಕೃತಿಕ ಘರ್ಷಣೆಯಾಗಿ ನಮ್ಮ ಕುತೂಹಲವನ್ನು ಕೆರಳಿಸುತ್ತವೆ. ಈ ಸಂದರ್ಭದಲ್ಲಿ ಪ್ರಖ್ಯಾತ ಚಿಂತಕ ಬರ್ಟ್ರೆಂಡ್ ರೆಸಲ್ ಅವರ ಕೆಲವು ಮಾತುಗಳನ್ನು ಉಲ್ಲೇಖಿಸುತ್ತಾ ಈ ಅಧ್ಯಾಯವನ್ನು ತಾತ್ಕಾಲಿಕವಾಗಿ ಮುಗಿಸಬಯಸುತ್ತೇನೆ.

"ಎಲ್ಲ ಆಧುನಿಕ ಸಮಾಜಗಳೂ ಪಿತೃಯಾಜಮಾನ್ಯ ಕುಟುಂಬಪದ್ಧತಿಯ ಮೇಲೆ ನೆಲೆಗೊಂಡಿರುವುದು ಹಾಗೂ ಈ ವ್ಯವಸ್ಥೆಯು ಸಾಧ್ಯವಾಗಲು ಸ್ತ್ರೀ ಪಾವಿತ್ರ್ಯದ ಕಲ್ಪನೆಯನ್ನು ಸೃಷ್ಟಿಸಿಕೊಂಡಿರುವುದು ಇವುಗಳನ್ನು ನೋಡಿದರೆ, ಪಿತೃತ್ವದ ಭಾವನೆಯನ್ನು ಉಂಟುಮಾಡಲು ಯಾವ ಸಹಜ ತುಡಿತಗಳು ಕಾರಣವಾಗಿವೆ ಎಂಬುದನ್ನು ವಿಚಾರಿಸುವುದು ತುಂಬಾ ಮಹತ್ವಪೂರ್ಣವೆನಿಸುತ್ತದೆ. ಅವೈಚಾರಿಕರು ಭಾವಿಸುವಂತೆ ಇದು ಅಷ್ಟೇನೂ ಸರಳವಾದ ವಿಷಯವಲ್ಲ. ಮಗುವಿನ ಬಗ್ಗೆ ತಾಯಿಯ ಭಾವನೆಯನ್ನು ಅರ್ಥ ಮಾಡಿಕೊಳ್ಳುವುದೇನೂ ಕಷ್ಟವಲ್ಲ. ಏಕೆಂದರೆ ಅವರಿಬ್ಬರಲ್ಲಿ ಕೂಸು ಮೊಲೆಯುಣ್ಣುವವರೆಗೆ ನಿಕಟವಾದ ದೈಹಿಕ ಸಂಪರ್ಕವಿದೆ. ಆದರೆ ಮಗುವಿನ ತಂದೆಯ ಸಂಬಂಧ ಪರೋಕ್ಷವಾದದ್ದು, ಕಲ್ಪನಾತ್ಮಕವಾದದ್ದು, ಊಹೆಯಿಂದಾದುದು. ಇದು ತಾಯಿಯ ಪಾತಿವ್ರತ್ಯದೊಂದಿಗೆ ಸಂಬಂಧಿಸಿದ್ದು. ಹೀಗಾಗಿ ಈ ವಿಷಯವು ಪ್ರವೃತ್ತ್ಯಾತ್ಮಕವೆನ್ನಲಾಗದಷ್ಟು ಬೌದ್ಧಿಕಕ್ಷೇತ್ರಕ್ಕೆ ಸೇರಿದೆ; ಕೊನೆಯ ಪಕ್ಷ, ಗಂಡಸಿನ ಬಗ್ಗೆ ಪಿತೃತ್ವಭಾವನೆಯನ್ನು ಅವನ ಮಕ್ಕಳಲ್ಲಿಯೇ ನಿರ್ದೇಶಿಸಬೇಕಾಗುತ್ತದೆಂಬಷ್ಟರ ಮಟ್ಟಿಗಾದರೂ ಇದು ಸತ್ಯ. ಆದರೆ ಇದು ಸದಾ ಆಗುವಂತಹುದೇನೂ ಅಲ್ಲ. ಜನರಿಗೆ ತಂದೆಯರಿರುತ್ತಾರೆಂಬ ವಿಷಯವನ್ನೇ



ಲಜ್ಜಾಗೌರಿ

PDF created with pdfFactory Pro trial version www.pdffactory.com

ಮೆಲನೀಸಿಯನ್ನರು ಅರಿಯರು, ಆದರೂ ತಾವು ತಂದೆಯರೆಂಬುದನ್ನು ತಿಳಿದವರು ಮಕ್ಕಳ ಬಗ್ಗೆ ಇಡುವಷ್ಟೇ ವಾತ್ಸಲ್ಯವನ್ನೇ ಅವರು ಇಟ್ಟಿರುತ್ತಾರೆ. ಮಾಲಿನೋವ್‌ಸ್ಕಿ ಟೋಬ್ರಿಯಂಡ್ ದ್ವೀಪವಾಸಿಗಳ ಬಗ್ಗೆ ರಚಿಸಿರುವ ಗ್ರಂಥಗಳಲ್ಲಿ ಪಿತೃತ್ವದ ಬಗ್ಗೆ ಅಪಾರವಾದ ಬೆಳಕು ಚೆಲ್ಲಲಾಗಿದೆ.

ವಾಸ್ತವವಾಗಿ ಪುರುಷನು ಮಕ್ಕಳಲ್ಲಿ ಆಸಕ್ತಿ ಇಡಲು ಎರಡು ಸ್ಪಷ್ಟ ಕಾರಣಗಳಿವೆ. ಮಗು ತನ್ನದೆಂಬ ನಂಬಿಕೆ ಅಥವಾ ಅದು ತನ್ನ ಹೆಂಡತಿಯದೆಂಬ ಅವನ ತಿಳುವಳಿಕೆ. ತಂದೆಯ ಪಾತ್ರದ ಅರಿವೇ ಇಲ್ಲದಿರುವಡೆಗಳಲ್ಲಿ ಎರಡನೇ ಕಾರಣವೇ ಪ್ರೇರಕವಾಗುವುದು.

ಟೋಬ್ರಿಯಂಡ್ ದ್ವೀಪವಾಸಿಗಳಿಗೆ ತಂದೆಯೆಂಬ ಕಲ್ಪನೆಯೇ ಇಲ್ಲದಿರುವ ವಿಷಯವೂ ಮಾಲಿನೋವ್‌ಸ್ಕಿಯ ಗ್ರಂಥಗಳಿಂದ ವಿವಾದಾತೀತವಾಗಿ ಪ್ರತಿಪಾದಿಸಲ್ಪಟ್ಟಿದೆ. ಆತನು ಕಂಡ ಒಂದು ವಿಷಯವನ್ನು ನಿದರ್ಶನವಾಗಿ ನೋಡಬಹುದು. ಯಾರಾದರೊಬ್ಬನೂ ಒಂದು ವರ್ಷವೋ ಹೆಚ್ಚು ಕಾಲವೋ ಪ್ರವಾಸ ಕೈಗೊಂಡಿದ್ದು ವಾಪಸಾದಾಗ ತನ್ನ ಹೆಂಡತಿಯು ಹೊಸ ಮಗುವನ್ನು ಪಡೆದಿದ್ದರೆ ಸಂತೋಷಿ ಸುತ್ತಾನೆಯೇ ಹೊರತು, ತನ್ನ ಹೆಂಡತಿಯ ಪಾತಿವ್ರತ್ಯದ ಬಗ್ಗೆ ಯುರೋಪಿಯನ್ನರ ಸಂಶಯಸೂಚನೆಗಳು ಅವನಿಗೆ ಅರ್ಥವಾಗುವುದೇ ಇಲ್ಲ. ಎಲ್ಲಾ ಮಾನವ ಬುಡಕಟ್ಟುಗಳೂ ಈಗ ಟೋಬ್ರಿಯಂಡ್ ದ್ವೀಪವಾಸಿಗಳಿರುವ ಸ್ಥಿತಿಯಿಂದ ಹಾದು ಬಂದವರೇ. ಏಕೆಂದರೆ ಪಿತೃತ್ವವನ್ನು ಗುರುತಿಸದಿದ್ದ ಕಾಲವೊಂದು



ಲಜ್ಜಾಗೌರಿ

ಅವರಲ್ಲಿಯೂ ಇದ್ದಿರಬೇಕೆಂಬುದು ಮಾಲಿನೋವ್‌ಸ್ಕಿಯವರ ಸಿದ್ಧಾಂತ. ಇದನ್ನು ಅಲ್ಲಗಳೆಯುವುದು ಕಷ್ಟವೆಂದು ನನಗೂ ಅನಿಸುತ್ತದೆ. ತಂದೆಯನ್ನು ಹೊಂದಿರುವ ಪ್ರಾಣಿ ಕುಟುಂಬಗಳೂ ಇದೇ ರೀತಿ ರೂಪುಗೊಂಡಿರಬೇಕು, ಬೇರೆಯ ರೀತಿಯಲ್ಲಿರಲೂ ಸಾಧ್ಯವಿಲ್ಲ. ಪಿತೃತ್ವವನ್ನು ಗುರುತಿಸಿದ ನಂತರ ಮಾನವರಲ್ಲಿ ಮಾತ್ರ ನಮಗೀಗ ಪರಿಚಿತವಾಗಿರುವಂತಹ ಪಿತೃಭಾವನೆಯುಂಟಾಗಲು ಸಾಧ್ಯ."[೧೯]

ಬರ್ಟ್ರೆಂಡ್ ರಸೆಲ್ ಅವರ ಈ ಮಾತು ಮಾತೃಮೂಲಪ್ರಧಾನವೆಂಬುದು ಕೇವಲ ಭಾರತಕ್ಕಲ್ಲ, ಇಡೀ ಪ್ರಪಂಚಕ್ಕೆ ಅನ್ವಯವಾಗುವ ಆದಿಯ ರೂಪದ ಸಹಜ ಪ್ರಕ್ರಿಯೆ ಎಂಬುದನ್ನು ಪುಷ್ಟೀಕರಿಸುತ್ತದೆ. ಮಾನವ ಚರಿತ್ರೆಯ ಬಹುಮುಖ್ಯ ಅಂಗವಾದ ಈ 'ಮಾತೃದೈವ'ದ ಕಲ್ಪನೆ ಮತ್ತಷ್ಟು ವಿವರವಾಗಿ ಅಧ್ಯಯನಕ್ಕೆ ಒಳಪಡಬೇಕಾದ ವಿಷಯವಾಗಿ ನಮ್ಮ ಮುಂದಿದೆ.

PDF created with pdfFactory Pro trial version www.pdffactory.com

ಉಲ್ಲೇಖಗಳು

೧. ದರ್ಶನ, ದೇವಿಪ್ರಸಾದ್ ಚಟ್ಟೋಪಾಧ್ಯಾಯ, ಅನು–ಡಾ.ಜಿ.ರಾಮಕೃಷ್ಣ, ಪುಟ.೧೪.

೨. ಹೆಚ್ಚಿನ ವಿವರಕ್ಕೆ ಇದೇ ಲೇಖಕನ 'ಉಜ್ಜನಿ ಚೌಡಮ್ಮ' ಪುಸ್ತಕ ನೋಡಿ.

೩. Pastoral Deities in western India – Guntner-Dietzsontneimer- ೩೪ ಮತ್ತು ಜಾತ್ರೆಗಳು: ಎಸ್.ಎಸ್. ಹಿರೇಮಠ, ಪುಟ.೨೬.

೪. ಹೆಚ್ಚಿನ ವಿವರಗಳಿಗೆ ಇದೇ ಲೇಖಕರ 'ದಾಸಪ್ಪ–ಜೋಗಪ್ಪ' ಕೃತಿ ನೋಡಿ.

೫. ನೀನಾಸಂ ಮಾತುಕತೆ, ಸಂ.೩೨ ಪುಟ.೨: ಡಾ.ಆಶೀಸ್ ನಂದಿ, ಅನು: ಕೆ.ವಿ. ಅಕ್ಷರ.

೬. ರಂಗನಾಥ–ತಿಮ್ಮಪ್ಪ, ರಾಜಾರಾಮ ಹೆಗಡೆ(ಲೇಖನ), ಕನ್ನಡ ಅಧ್ಯಯನ (ಮಳೆ ಸಂಚಿಕೆ), ೧೯೯೯, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಹೆಚ್ಚಿನ ವಿವರಗಳಿಗೆ ನೋಡಿ: ತಿರುಪತಿ ತಿಮ್ಮಪ್ಪ–ಎಸ್.ಕೆ.ರಾಮಚಂದ್ರರಾವ್.

೭. ಕಾಡ್ಯನಾಟ, ಪ್ರೊ. ಎ.ವಿ.ನಾವಡ ಮತ್ತು ಗಾಯತ್ರಿ ನಾವಡ.

೮. ಕೊಡಗಿನ ಪಣಿಯರು: ಆರ್. ನಾಗೇಶ್ ಬೆಣಗಾಲು, ಕರ್ನಾಟಕ ಬುಡಕಟ್ಟುಗಳು, ಸಂ.೧, ಪುಟ.೬೯೭.

೯. ರಂಗನಾಥ–ತಿಮ್ಮಪ್ಪ, ರಾಜರಾಮ ಹೆಗಡೆ, ಕನ್ನಡ ಅಧ್ಯಯನ(ಮಳೆ ಸಂಚಿಕೆ).

೧೦. ಇಲ್ಲಿಗರ ಸಂಸ್ಕೃತಿ, ಬಿ.ಸಿದ್ದಲಿಂಗಯ್ಯ ಕಂಬಾಳು, ಪುಟ.೮.

೧೧. ಮ್ಯಾಸಬೇಡರು, ಕೃಷ್ಣಮೂರ್ತಿ ಹನೂರು, ಕರ್ನಾಟಕದ ಬುಡಕಟ್ಟುಗಳು, ಸಂ.೧, ಪುಟ.೭೮೬.

೧೨. ತುಳುವ ದರ್ಶನ–ಪೀಟರ್ ಜೆ. ಕ್ಲಾಸ್, ಕನ್ನಡಾನುವಾದ: ಎ.ವಿ.ನಾವಡ, ಸುಭಾಶ್ಚಂದ್ರ.

೧೩. Mother Goddess: MCP. Srivatsava, page.1.

೧೪. ಪ್ರಾಚೀನ ಭಾರತದ ಚರಿತ್ರೆ, ಡಿ.ಡಿ. ಕೊಸಾಂಬಿ ಅವರ ಚಿಂತನೆಗಳು, ಮೂಲ: ಬಾಲಗೋಪಾಲ್, ಅನು: ಎಚ್.ಎಸ್.ಶ್ರೀಮತಿ.

೧೫. ಗ್ರಾಮದೇವತೆಗಳು, ಡಾ. ಸಿದ್ದಲಿಂಗಯ್ಯ, ಪುಟ.೧೭.

೧೬. Macay E.J.H. Further Excavations of mahenjadaro:PLXCIV 430 (ಉಲ್ಲೇಖ: ಗ್ರಾಮದೇವತೆಗಳು; ಸಿದ್ದಲಿಂಗಯ್ಯ)

೧೭. ಗ್ರಾಮದೇವತೆಗಳು, ಸಿದ್ಧಲಿಂಗಯ್ಯ, ಪುಟ.೨೨.

೧೮. ಮಹಿಳೆ: ಒಂದು ಅಧ್ಯಯನ, ಡಾ. ಜೋತ್ಸ್ನಾ ಕಾಮತ್, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೧೯. ಮದುವೆ ಮತ್ತು ನೀತಿ, ಮೂಲ: ಬರ್ಟ್ರಾಂಡ್ ರಸೆಲ್, ಅನು: ಪಿ.ವಿ. ನಾರಾಯಣ.

PDF created with pdfFactory Pro trial version www.pdffactory.com

ಪರಾಮರ್ಶನ ಗ್ರಂಥಗಳು

೧. ಆಶೀಶ್ ನಂದಿ(ಅನು: ಕೆ.ವಿ.ಅಕ್ಷರ), ನೀನಾಸಂ ಮಾತುಕತೆ(ಲೇಖನ), ಸಂ.೩೨, ಅಕ್ಷರ ಪ್ರಕಾಶನ, ಹೆಗ್ಗೋಡು.

೨. ಕೃಷ್ಣಮೂರ್ತಿ ಹನೂರು, ೧೯೯೫, ಮ್ಯಾಸಬೇಡರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೩. ಕಾಳೇಗೌಡ ನಾಗವಾರ, ಕಾಡುಗೊಲ್ಲರ ಹಟ್ಟಿ ಒಂದು ಅಧ್ಯಯನ(ಅಪ್ರಕಟಿತ ಪಿಎಚ್.ಡಿ. ಪ್ರಬಂಧ).

೪. ಚಂದ್ರಶೇಖರ ಕಂಬಾರ, ೧೯೮೦, ನಮ್ಮ ಜಾನಪದ, ಬೆಂಗಳೂರು

೫. ಜೊತ್ಸ್ನಾ ಕಾಮತ್, ಮಹಿಳೆ: ಒಂದು ಅಧ್ಯಯನ, ೧೯೯೯, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೬. ಪೀಟರ್ ಜೆ. ಕ್ಲಾಸ್, ೧೯೮೭, ಅನು: ಎ.ವಿ. ನಾವಡ, ಸುಭಾಶ್ಚಂದ್ರ, ತುಳುವ ದರ್ಶನ, ಆರ್.ಆರ್.ಸಿ, ಉಡುಪಿ.

೭. ನಾವಡ ಎ.ವಿ., ಗಾಯತ್ರಿ ನಾವಡ, ೧೯೯೨, ಕಾಡ್ಯನಾಟ, ಆರ್.ಸಿ.ಸಿ., ಉಡುಪಿ.

೮. ನಾಗೇಶ್ ಆರ್. ಬೆಣಗಾಲು, ೧೯೯೭, ಕೊಡಗಿನ ಪಣಿಯರು(ಲೇಖನ), ಕರ್ನಾಟಕ ಬುಡಕಟ್ಟುಗಳು, ಸಂ–೧, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು.

೯. ನಾಯಕ ಎನ್.ಆರ್., ೧೯೯೫, ಬಂದನೇ ಬಲೀಂದ್ರರಾಯ, ಹೊನ್ನಾವರ

೧೦. ಬರ್ಟ್ರೆಂಡ್ ರಸೆಲ್, ಅನು: ಪಿ.ವಿ. ನಾರಾಯಣ, ಮದುವೆ ಮತ್ತು ನೀತಿ, ಜ್ಞಾನಪಥ, ಬೆಂಗಳೂರು.

೧೧. ಬಾಲಗೋಪಾಲ್, ೧೯೯೮, ಅನು: ಎಚ್.ಎಸ್.ಶ್ರೀಮತಿ, ಪ್ರಾಚೀನ ಭಾರತದ ಚರಿತ್ರೆ(ಡಿ.ಡಿ.ಕೊಸಾಂಬಿಯವರ ಚಿಂತನೆಗಳು), ಬೆಳ್ಳಿ ಚುಕ್ಕಿ ಬುಕ್ ಟ್ರಸ್ಟ್, ಮೈಸೂರು.

೧೨. ಬೋರಲಿಂಗಯ್ಯ ಹಿ.ಚಿ., ೧೯೮೧, ದಾಸಪ್ಪ ಜೋಗಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೩. ಬೋರಲಿಂಗಯ್ಯ ಹಿ.ಚಿ., ೧೯೭೯, ಉಜ್ಜಿನಿ ಚೌಡಮ್ಮ, ದಿನಕರ ಪ್ರಕಾಶನ, ಬೆಂಗಳೂರು.

೧೪. ರಾಜಾರಾಮ ಹೆಗಡೆ, ೧೯೯೯, ರಂಗನಾಥ, ತಿಮ್ಮಪ್ಪ(ಲೇಖನ), ಕನ್ನಡ ಅಧ್ಯಯನ, ಮಳೆಸಂಚಿಕೆ, ಕನ್ನಡ ವಿ.ವಿ., ಹಂಪಿ.

೧೫. ರಾಮಕೃಷ್ಣ ಜಿ., ೧೯೯೪, ದರ್ಶನ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೧೬. ರಾಮಚಂದ್ರರಾವ್ ಎಸ್.ಕೆ., ೧೯೮೦, ತಿರುಪತಿ ತಿಮ್ಮಪ್ಪ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೧೭. ಸಿದ್ದಗಂಗಯ್ಯ ಬಿ. ಕಂಬಾಳು, ೧೯೯೫, ಇಲ್ಲಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೮. ಸಿದ್ದಲಿಂಗಯ್ಯ, ೧೯೯೭, ಗ್ರಾಮದೇವತೆಗಳು, ಮೂಲಭಾರತಿ ಪ್ರಕಾಶನ, ಬೆಂಗಳೂರು.

೧೯. ಹಿರೇಮಠ ಎಸ್.ಎಸ್., ೧೯೯೩, ಜಾತ್ರೆಗಳು, ಸಮತ ಪ್ರಕಾಶನ, ಹೊಸಪೇಟೆ.

20. Gunter Dietz sontneimar, Pestoral Dieties In Western India, Oxford University Press, Delhi.

21. Srinivatsava M.C.P., 1979, Mother Goddess, Agam Kala prakashan, Delhi.

PDF created with pdfFactory Pro trial version www.pdffactory.com

ಬುಡಕಟ್ಟು ಅಧ್ಯಯನ ಮಾಲೆ - ೧

ಬುಡಕಟ್ಟು ದೈವಾರಾಧನೆ

ಡಾ. ಹಿ.ಚಿ. ಬೋರಲಿಂಗಯ್ಯ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

PDF created with pdfFactory Pro trial version www.pdffactory.com

BUDAKATTU DYVAARAADHANE
(Tribal Worship in Karnataka-A Study)
by
Dr. H.C. Boralingaiah
Professor, Dept. of Tribal Studies
Kannada University, Hampi
Vidyaranya 583 276

Published by
Dr. S.C. Ramesh
Director, Prasaranga
Kannada University, Hampi
Vidyaranya 583 276

Page: x + 108+16 **Price:** Rs. **120/-**

www.kannadauniversity.org

First Impression: 2000
Second Impression: 2015

ISBN 978-93-83044-66-5

© ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೫

ಬೆಲೆ: ರೂ. ೧೨೦/-

ಮುಖಪುಟ: **ಕೆ.ಕೆ. ಮಕಾಳಿ**

ಅಕ್ಷರ ಸಂಯೋಜನೆ
ಸಂಜಯ್ ಗ್ರಾಫಿಕ್ಸ್, ಹಳ್ಳಿಕೆರೆ, ಕಮಲಾಪುರ

ಪುಸ್ತಕ ದೊರೆಯುವ ಸ್ಥಳ
ಸರಸ್ವತಿ ಪುಸ್ತಕ ಮಾರಾಟ ಮಳಿಗೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
ದೂರವಾಣಿ: ೦೮೩೯೪–೨೧೦೪೧೦

ಕನ್ನಡ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ
ನಂ. ೧, ಕಾನೂನು ಕಾಲೇಜಿನ ಹಳೆಯ ಕಟ್ಟಡ
ಮೈಸೂರು ಬ್ಯಾಂಕ್ ವೃತ್ತ, ಅರಮನೆ ರಸ್ತೆ
ಬೆಂಗಳೂರು ೫೬೦ ೦೦೯
ದೂರವಾಣಿ: ೦೮೦–೨೨೩೭೨೩೮೮

ಮುದ್ರಣ
ಮಯೂರ್ ಪ್ರಿಂಟ್ ಆ್ಯಡ್ಸ್, ಬೆಂಗಳೂರು

ಕನ್ನಡವೇ ಸತ್ಯ, ಕನ್ನಡವೇ ನಿತ್ಯ

ವಿದ್ಯೆಯ ಸೃಷ್ಟಿ ಕನ್ನಡ ವಿಶ್ವವಿದ್ಯಾಲಯದ ಒಂದು ಪ್ರಮುಖ ಧ್ಯೇಯ. ವಿಶ್ವದ ಜ್ಞಾನವನ್ನು ಕನ್ನಡಿಗರಿಗೆ ಮುಟ್ಟಿಸುವ ಕನ್ನಡ ಸಂಸ್ಕೃತಿಯನ್ನು ವಿಶ್ವಕ್ಕೆ ಪರಿಚಯಿಸುವ ಮಹತ್ವದ ಹೊಣೆಗಾರಿಕೆ ಕನ್ನಡ ವಿಶ್ವವಿದ್ಯಾಲಯಕ್ಕಿದೆ. ವಿದ್ಯೆಯ ಸೃಷ್ಟಿ ಮತ್ತು ಪ್ರಸರಣ ಎಂದರೆ ಅದು ಕೇವಲ ವಿಶ್ವವಿದ್ಯಾಲಯದಲ್ಲಿರುವ ಅಧ್ಯಾಪಕರಿಂದ ಮಾತ್ರ ಎಂಬ ಹಮ್ಮು ನಮ್ಮದಲ್ಲ. ಇಲ್ಲಿನ ವಿವಿಧ ವಿಭಾಗಗಳ ಒಳಗಿನ ಪ್ರತಿಭಾವಂತರ ಜೊತೆಗೆ ಕರ್ನಾಟಕದ ಎಲ್ಲ ಸಾಂಸ್ಕೃತಿಕ ಕ್ಷೇತ್ರದ ಪ್ರತಿಭಾ ಸಂಪನ್ನತೆಯನ್ನು ಬೆಸೆಯುವ ಕೊಂಡಿಯಂತೆ ಪ್ರತಿಯೊಂದು ವಿಭಾಗವೂ ಕೆಲಸ ಮಾಡುತ್ತದೆ. ಈ ಸುಂದರ ಬೆಸುಗೆ ಹೊಸ ಜ್ಞಾನದ ಸೃಷ್ಟಿಗೆ ಹಾಗೆಯೇ ಅರ್ಥಪೂರ್ಣ ಮೌಲ್ಯಗಳ ಪುನರ್‌ಸ್ಥಾಪನೆಗೆ ಕಾರಣವಾಗಿದೆ. ವಿದ್ಯೆಯ ಸೃಷ್ಟಿಗೆ ಪೂರಕವಾದ ಹಲವು ಬಗೆಯ ಜ್ಞಾನವಾಹಿನಿಗಳ ತಿಳುವಳಿಕೆ ವಿಶ್ವವಿದ್ಯಾಲಯದ ಒಳಗೆ ರೂಪುಗೊಳ್ಳುತ್ತಿದೆ. ಕನ್ನಡ ಸಂಶೋಧನೆಯ ವಿಧಿ ವಿಧಾನಗಳನ್ನು ಸೃಷ್ಟಿಸುವ ಪ್ರಯತ್ನ ಇಲ್ಲಿ ನಡೆಯುತ್ತಿದೆ. ಇವುಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಅನೇಕ ಕಮ್ಮಟ, ತರಬೇತಿ ಮುಂತಾದಂತೆ ಹತ್ತಾರು ಶಿಬಿರಗಳು ಇಲ್ಲಿ ನಡೆಯುತ್ತಿವೆ. ಈ ಎಲ್ಲ ಕುಲುಮೆಗಳಲ್ಲಿ ಪಕ್ವಗೊಂಡ ಜ್ಞಾನ ಪುಸ್ತಕದ ರೂಪದಲ್ಲಿ ಪ್ರಸಾರಾಂಗದ ಮೂಲಕ ಆಕಾರ ಪಡೆಯುತ್ತಿದೆ.

ಕನ್ನಡ ವಿಶ್ವವಿದ್ಯಾಲಯವು ಜನಸಾಮಾನ್ಯರು, ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಸಂಶೋಧಕರನ್ನು ತನ್ನ ಗುರಿಯನ್ನಾಗಿಟ್ಟುಕೊಂಡು ಹಲವು ಬಗೆಯ ಕಾರ್ಯಯೋಜನೆಗಳನ್ನು ಜಾರಿಗೆ ತಂದಿದೆ. ಜನಸಾಮಾನ್ಯರ ತಿಳುವಳಿಕೆಗಾಗಿ ನವಸಾಕ್ಷರ ಮಾಲೆ ಮತ್ತು ಮಂಟಪಮಾಲೆ ಎಂಬ ಪುಸ್ತಕಗಳು, ವಿದ್ಯಾರ್ಥಿಗಳಿಗಾಗಿ ಪಠ್ಯಪುಸ್ತಕಗಳು, ಸಂಶೋಧಕರಿಗೆ ಹಲವು ಬಗೆಯ ವಿಶ್ವಕೋಶಗಳು ಮುಂತಾದಂತೆ ವೈವಿಧ್ಯಮಯ ಜ್ಞಾನ ಸೃಷ್ಟಿ ಇಲ್ಲಿ ನಡೆಯುತ್ತಿದೆ. ಇವೆಲ್ಲವನ್ನೂ ಮೀರಿ ಮತ್ತೊಂದು ಗುರಿ ಕನ್ನಡ ವಿಶ್ವವಿದ್ಯಾಲಯಕ್ಕೆ ಇದೆ. ಅದೇನೆಂದರೆ ಕನ್ನಡ ಸಂಸ್ಕೃತಿಯ ಆಮೂಲಾಗ್ರ ಶೋಧ ನಡೆಸುವ ಮೂಲಕ ದೇಸಿ ಚಿಂತನಾಕ್ರಮವೊಂದನ್ನು ರೂಪಿಸುವುದು. ಭಾರತೀಯ ಸಂಸ್ಕೃತಿ ಎಂದು ಏಕಮುಖವಾಗಿ ಸಾರ್ವತ್ರೀಕರಿಸುವ ಸಾಂಪ್ರದಾಯಿಕ

PDF created with pdfFactory Pro trial version www.pdffactory.com

ತಿಳುವಳಿಕೆ ಯಿಂದ ಹೊರಬಂದು ಪ್ರತಿಯೊಂದು ನೆಲಕ್ಕೂ ತನ್ನದೇ ಆದ ವೈಶಿಷ್ಟ್ಯತೆ ಇದೆಯೆಂಬ ವಾಸ್ತವವಾದ ನೆಲೆಯಲ್ಲಿ ಕನ್ನಡ ನೆಲದ ಗುಣ ಹುಡುಕುವ ಕಾರ್ಯದಲ್ಲಿ ನಾವು ಈಗ ಮಗ್ನರಾಗಿದ್ದೇವೆ. ಆ ಮೂಲಕ ನಿರ್ಲಕ್ಷಿಸಲ್ಪಟ್ಟ ಕ್ಷೇತ್ರಗಳನ್ನು ಪ್ರಧಾನ ನೆಲೆಗೆ ತರುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ಈ ದೇಶದ ಅಥವಾ ನಾಡಿನ ಅಂಚಿನ ಜನಕ್ಕೆ ಕೂಡ ಒಂದು ಶ್ರೀಮಂತ ಸಂಸ್ಕೃತಿ ಇದೆಯೆಂದು, ಆ ಸಂಸ್ಕೃತಿಗೆ ತನ್ನದೇ ವಿಶಿಷ್ಟ ಪರಂಪರೆಯಿದೆಯೆಂದು, ಆ ಪರಂಪರೆಯೇ ನಾಡಿನ ವಿವೇಕ ಮತ್ತು ಜ್ಞಾನವನ್ನು ಕಾಪಾಡಿಕೊಂಡು ಬಂದಿದೆಯೆಂದು ಸ್ಪಷ್ಟ ಮಾತುಗಳಿಂದ ನಿರ್ವಚಿಸಬೇಕಾದ ಕಾಲವೊಂದು ಈಗ ಬಂದಿದೆ. ಆ ಮೂಲಕ ಕನ್ನಡ ನಾಡಿನ ಸರ್ವತೋಮುಖ ಬೆಳವಣಿಗೆಯನ್ನು ಯಾವ ಯಾವ ದಿಸೆಯಲ್ಲಿ ಸಾಧಿಸಬೇಕೆಂಬ ದೂರದೃಷ್ಟಿ ಮತ್ತು ಆಶಾವಾದ ಕೂಡ ನಮ್ಮ ಅಧ್ಯಯನಗಳ ಹಿಂದೆ ಇದೆ.

ಇಂದಿನ ಜಾಗತೀಕರಣ ಹಾಗೂ ಹಿಂಸೆಯ ವಾತಾವರಣದಲ್ಲಿ ನಲುಗುತ್ತಿರುವ ಮಾನವೀಯ ಮೌಲ್ಯಗಳನ್ನು ಹುಡುಕುವ ಮತ್ತು ಹುಟ್ಟುಹಾಕುವ ಬರಹಗಳನ್ನು ಪ್ರೋತ್ಸಾಹಿಸುವ ಕೆಲಸವೂ ಆಗಬೇಕಾಗಿದೆ. ಒಟ್ಟಾರೆಯಾಗಿ ಆಲೋಚನೆಗಳ ಮತ್ತು ಸಿದ್ಧಾಂತಗಳ ಮೌಲ್ಯೀಕರಣದ ಅಗತ್ಯವನ್ನು ಮನಗಂಡಿರುವ ಕನ್ನಡ ವಿಶ್ವವಿದ್ಯಾಲಯ ದೇಸಿ ಮತ್ತು ಸಾಂಪ್ರದಾಯಿಕ ಮೌಲ್ಯಗಳ ನಡುವೆ ಮುಖಾಮುಖಿಯೊಂದನ್ನು ಹುಟ್ಟುಹಾಕುವ ಮೂಲಕ ಸತ್ಯದ ಬೆಳಕಿನೆಡೆಗೆ ಕೊಂಡೊಯ್ಯುವ ಪ್ರಯತ್ನವನ್ನು ಮಾಡುತ್ತದೆಯೆಂಬ ಆಶಯ ನನ್ನದಾಗಿದೆ.

ಬುಡಕಟ್ಟು ಅಧ್ಯಯನ ವಿಭಾಗದಲ್ಲಿ 'ಬುಡಕಟ್ಟು ಮಹಾಕಾವ್ಯಮಾಲೆ'ಯ ನಂತರ ಕೈಗೊಂಡ 'ಬುಡಕಟ್ಟು ಅಧ್ಯಯನ ಮಾಲೆ'ಯ ಸರಣಿ ಪುಸ್ತಕಗಳು ಅತ್ಯಂತ ವಿಶಿಷ್ಟವಾಗಿ ಪ್ರಕಟವಾದವು. ಸಂಶೋಧಕರಿಗೆ ಈ ಪುಸ್ತಕಗಳು ಆಕರಗ್ರಂಥಗಳಾಗಿ ಪರಿಗಣಿಸಲ್ಪಟ್ಟವು. ಈ ಮಾಲೆಯ ಪುಸ್ತಕಗಳಲ್ಲಿ ಒಂದು 'ಬುಡಕಟ್ಟು ದೈವಾರಾಧನೆ'. ಈ ಕೃತಿ ಇದೀಗ ಪುನರ್ ಮುದ್ರಣಗೊಳ್ಳುತ್ತಿರುವ ಅವಕಾಶ ಪಡೆದಿದೆ. ಈ ಕೃತಿಯನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಡಾ. ಸ.ಚಿ. ರಮೇಶ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಬಿ. ಸುಜ್ಞಾನಮೂರ್ತಿ ಅವರಿಗೆ ಆಭಾರಿಯಾಗಿದ್ದೇನೆ.

ಡಾ. ಹಿ.ಚಿ. ಬೋರಲಿಂಗಯ್ಯ
ಕುಲಪತಿ

ದೇಸಿಯೊಳ್ ಪುಗುವುದು ಪೊಕ್ಕು ಮಾರ್ಗದೊಳೆ ತಳ್ವುದು

ಕನ್ನಡ ವಿಶ್ವವಿದ್ಯಾಲಯ ಪ್ರಥಮ ಗುರಿ 'ಕನ್ನಡ ಸಂಸ್ಕೃತಿಯ' ಶೋಧ, ವಿಮರ್ಶೆ ಮತ್ತು ಪ್ರಸಾರ. ಅಂತಿಮ ಗುರಿ ಸುತ್ತಲಿನ ಸಂಸ್ಕೃತಿಗಳ ವಿವೇಕಪೂರ್ಣ ವಿನಿಯೋಗ. ಆದಿಕವಿ ಪಂಪ, ಸಾಹಿತ್ಯಕ್ಕೆ ಅನ್ವಯಿಸಿ ಹೇಳಿರುವ 'ದೇಸಿಯೊಳ್ ಪುಗುವುದು, ಪೊಕ್ಕು ಮಾರ್ಗದೊಳೆ ತಳ್ವುದು' ಎಂಬ ಮಾತು ಪರ್ಯಾಯವಾಗಿ ಇದನ್ನೇ ಧ್ವನಿಸುತ್ತದೆ.

ಸಂಸ್ಕೃತಿ ಎನ್ನುವುದು ಸಮೂಹಸಮ್ಮತ ಜೀವನಪದ್ಧತಿಯಾಗಿದೆ. ಕನ್ನಡಿಗರ ಇಂತಹ ಪದ್ಧತಿಗೆ ಸಾವಿರ ಸಾವಿರ ವರ್ಷಗಳ ಇತಿಹಾಸವಿದೆ. ತನ್ನ ಆಯುರ್ಮಾನದಲ್ಲಿ ಆರ್ಯ-ಆಂಗ್ಲ ಸಂಸ್ಕೃತಿಗಳನ್ನು ಜೀರ್ಣಿಸಿಕೊಳ್ಳುತ್ತ ಬಂದ ಕನ್ನಡ ಸಮಾಜ, ಉದ್ದಕ್ಕೂ ದ್ವಿಭಾಷಾ ಸಂದರ್ಭದಲ್ಲಿ, ಬದುಕುಮಾಡಿದೆ. ಹಿಂದಿನದು ಕನ್ನಡ-ಸಂಸ್ಕೃತ ದ್ವಿಭಾಷಾ ಸಂದರ್ಭ, ಇಂದಿನದು ಕನ್ನಡ-ಇಂಗ್ಲಿಷ್ ದ್ವಿಭಾಷಾ ಸಂದರ್ಭ. ಗ್ರಂಥಸ್ಥ ಭಾಷೆಯಾದ ಸಂಸ್ಕೃತಕ್ಕಿಂತ ಜೀವಂತ ಭಾಷೆಯಾದ ಇಂಗ್ಲಿಷ್ ಬೆಳಕಾಗುತ್ತಲೇ ಬೆಂಕಿಯಾಗಬಹುದೇ? ಎಂಬ ಭಯ ನಮ್ಮಲ್ಲಿ ಹುಟ್ಟಿದೆ. ಹೆಚ್ಚಿನದಾಗಿ ಆಂಗ್ಲ ಜೀವನಶೈಲಿ ನಮ್ಮ ಜೀವನಾಡಿಗಳನ್ನು ದಿನೇ ದಿನೇ ನಿಯಂತ್ರಿಸತೊಡಗಿ, ಒಂದು ಬಗೆಯ ಅತಿರೇಕ ಸೃಷ್ಟಿಯಾಗುತ್ತಲಿದೆ.

ಗಾಂಧೀಜಿಯವರು ಈ ಅತಿರೇಕವನ್ನು ಬಹಳ ಹಿಂದೆಯೇ ಊಹಿಸಿ, 'ಸ್ವದೇಶೀ ಚಳುವಳಿ'ಯನ್ನು ಕೈಗೆತ್ತಿಕೊಂಡಿದ್ದರು. ಈ ಮತ್ತು ಇಂಥ ದೇಶೀ ಚಿಂತನೆಗಳ ಆದರ್ಶದಲ್ಲಿ ಕನ್ನಡ ವಿಶ್ವವಿದ್ಯಾಲಯ ಮೊದಲು ಮಾಡಬೇಕಾದ ಕೆಲಸವೆಂದರೆ ವಿಸ್ಮೃತಿಯ ಸಾಗದಲ್ಲಿ ಮುಳುಗಿ ಹೋಗಿರುವ ನಮ್ಮ ಪಾರಂಪರಿಕ ಕ್ರಿಯೆ, ಪ್ರಕ್ರಿಯೆ ರೂಪದ 'ಸ್ವದೇಶೀ ಸತ್ಯ'ಗಳನ್ನು ಶೋಧಿಸುವುದು; ಬಳಿಕ ಅಲ್ಲಿ ಸೇರಿಕೊಂಡಿರುವ ದೋಷಗಳನ್ನು ದೂರ ಸರಿಸಿ ಗುಣಾಂಶಗಳನ್ನು ಗುರುತಿಸುವ, ಜೊತೆಗೆ ಪೂರ್ಣ ಬದುಕಿಗೆ ಅವಶ್ಯವಿರುವ ಕೊರತೆಗಳನ್ನು ಅನ್ಯಸಂಸ್ಕೃತಿಯಿಂದ ಎಚ್ಚರವಹಿಸಿ ತುಂಬಿಕೊಳ್ಳುವ ಕೆಲಸ ನಮ್ಮಲ್ಲಿ ನಡೆಯಬೇಕಾಗಿದೆ. ಒಟ್ಟಾರೆ ಅನ್ಯಸಂಸ್ಕೃತಿಗಳ ಸಹಯೋಗದಲ್ಲಿಯೂ 'ಕನ್ನಡವು ಕನ್ನಡವ ಕನ್ನಡಿಸುತಿರಬೇಕು' ಎಂಬಂತೆ ನಾವು

PDF created with pdfFactory Pro trial version www.pdffactory.com

ಕನ್ನಡವನ್ನು ಸ್ಥಾನಿಕದಲ್ಲಿ ಬದುಕಿಸಬೇಕಾಗಿದೆ. ಜಾಗತಿಕದಲ್ಲಿ ಬೆಳೆಸಬೇಕಾಗಿದೆ. ಹಾಗೆ ಮಾಡಿದಾಗ ಮಾತ್ರ ಕನ್ನಡತ್ವವನ್ನು ನಾಶ ಮಾಡಿಕೊಂಡು ಜಾಗತಿಕವಾಗುವುದು ತಪ್ಪಿ, ಕನ್ನಡವೂ ಜಾಗತಿಕವಾಗುತ್ತದೆ. ಜಾಗತಿಕವಾಗುವುದೆಂದರೆ ಸ್ಥಾನಿಕದ ನಿರಾಕರಣೆಯಲ್ಲವೆಂಬ ಸತ್ಯ ಸ್ಥಾಪನೆಗೊಳ್ಳುತ್ತದೆ.

ಹೆಗಲ ಮೇಲೆ ಈ ಹೊಣೆಯನ್ನು ಹೊತ್ತು ಅಸ್ತಿತ್ವಕ್ಕೆ ಬಂದಿರುವ ಕನ್ನಡ ವಿಶ್ವವಿದ್ಯಾಲಯ 'ಎಲ್ಲ ರಸ್ತೆಗಳು ರೋಮ್‌ದ ಕಡೆಗೆ' ಎಂಬಂತೆ ಕನ್ನಡದ ಎಲ್ಲ ಹಾದಿಗಳು ಹಂಪಿಯ ಕಡೆಗೆ ಕೇಂದ್ರೀಕರಣಗೊಳ್ಳುವ ಮತ್ತು ಇಲ್ಲಿಂದಲೇ ಜಗತ್ತಿನ ಅಂಚಿನತ್ತ ವಿಕೇಂದ್ರೀಕರಣಗೊಳ್ಳುವ ವಾತಾವರಣವನ್ನು ನಿರ್ಮಾಣ ಮಾಡಬೇಕಾಗಿದೆ. ಈ ರೀತಿ ಐತಿಹಾಸಿಕ ಪರಂಪರೆ ಮತ್ತು ಭೌಗೋಳಿಕ ಪರಿಸರಗಳಲ್ಲಿ ಶ್ರಮಿಸ ಬೇಕಾಗಿರುವ ಕನ್ನಡ ವಿಶ್ವವಿದ್ಯಾಲಯ "ಎಂದೆಂದಿಗೂ ನೀ ಕನ್ನಡವಾಗಿರು" ಎಂಬ ಪ್ರಜ್ಞೆ ಕನ್ನಡಿಗರಲ್ಲಿ ಜಾಗೃತವಾಗಿರುವಂತೆಯೂ ನೋಡಿಕೊಳ್ಳಬೇಕಾಗಿದೆ.

ಈ ಎಲ್ಲ ನೆಲೆಗಳಲ್ಲಿ ಸೃಷ್ಟಿಯಾಗುವ ತನ್ನ ಶೋಧನೆ-ಚಿಂತನೆಗಳನ್ನು ದಾಖಲಿಸ ಬೇಕೆಂಬ ಮತ್ತು ಸಂವಹನಗೊಳಿಸಬೇಕೆಂಬ ತೀವ್ರ ಹಂಬಲದಿಂದ ಈ ವಿಶ್ವವಿದ್ಯಾಲಯ 'ಪ್ರಸಾರಾಂಗ' ಹೆಸರಿನ ಪ್ರಸಾರ ಮಾಧ್ಯಮ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತಂದಿದೆ. ಶ್ರವ್ಯ, ದೃಶ್ಯ, ವಾಚನ ಸಾಮಗ್ರಿಗಳ ಉತ್ಪಾದನೆ-ವಿತರಣೆ ಇತ್ಯಾದಿ ಕಾರ್ಯಗಳನ್ನು ಕೈಗೆತ್ತಿಕೊಂಡಿರುವ ಇದು, ವಾಚನ ಸಾಮಗ್ರಿಯಾಗಿರುವ ಪುಸ್ತಕಗಳ ಉತ್ಪಾದನೆಗೆ ವಿಶೇಷ ಕಾಳಜಿ ವಹಿಸಿದೆ. ಆಂತರಿಕ ಸತ್ವ, ಬಾಹ್ಯ ಸೌಂದರ್ಯಗಳಿಂದ ಕೂಡಿರುವ ವಿಶಿಷ್ಟ "ಪುಸ್ತಕ ಸಂಸ್ಕೃತಿ'ಯನ್ನು ಅಸ್ತಿತ್ವಕ್ಕೆ ತರುತ್ತಲಿರುವ ಈ ಪ್ರಸಾರಾಂಗದ ಇತ್ತೀಚಿನ ಪ್ರಕಟಣೆ 'ಬುಡಕಟ್ಟು ದೈವಾರಾಧನೆ'.

"ಬುಡಕಟ್ಟು ಅಧ್ಯಯನ ವಿಭಾಗ" ನಮ್ಮ ವಿಶ್ವವಿದ್ಯಾಲಯದ ವಿಶಿಷ್ಟ ಘಟಕ. ಇದಕ್ಕೆ ಅರ್ಥ ತುಂಬುವ ದಿಸೆಯಲ್ಲಿ ಅಸ್ತಿತ್ವಕ್ಕೆ ಬಂದಿರುವ ಬುಡಕಟ್ಟು ಅಧ್ಯಯನ ಮಾಲೆಯ ಭಾಗವಾಗಿ ಪ್ರಕಟವಾಗುತ್ತಲಿರುವ 'ಬುಡಕಟ್ಟು ದೈವರಾಧನೆ' ಪುಸ್ತಕ ರಚನೆಗಾಗಿ ಡಾ.ಹಿ.ಚಿ.ಬೋರಲಿಂಗಯ್ಯ ಅವರಿಗೆ ನಮ್ಮ ಧನ್ಯವಾದಗಳು ಸಲ್ಲುತ್ತವೆ.

ಡಾ. ಎಂ.ಎಂ. ಕಲಬುರ್ಗಿ
ಕುಲಪತಿ

ಬುಡಕಟ್ಟು ಅಧ್ಯಯನ ಮಾಲೆಯನ್ನು ಕುರಿತು

ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗವು ತನ್ನ ಆರಂಭದ ನಾಲ್ಕು ವರ್ಷಗಳಲ್ಲಿ ಸಂಸ್ಕೃತಿಯ ಬಹುಮುಖ್ಯ ಮೌಖಿಕ ಆಕರಗಳೆನಿಸಿದ ಬುಡಕಟ್ಟು ಮಹಾಕಾವ್ಯಗಳನ್ನು ಹೊರತಂದಿದೆ. ಬಹುಶಃ ಭಾರತೀಯ ಭಾಷೆಗಳಲ್ಲಿಯೇ ಇದೊಂದು ವಿಕ್ರಮ ಎನ್ನುವ ಹಾಗೆ ಒಟ್ಟು ಒಂಬತ್ತು ಮಹಾಕಾವ್ಯಗಳನ್ನು ನಾವು ಪ್ರಕಟಿಸಿದ್ದೇವೆ.

ಕುಲಪತಿ ಡಾ. ಎಂ.ಎಂ. ಕಲಬುರ್ಗಿ ಅವರು ವಿಭಾಗದ ಇದುವರೆಗಿನ ಸಂಗ್ರಹ ಸಂಪಾದನಾ ಕಾರ್ಯವನ್ನು ಮೆಚ್ಚಿ, ಇನ್ನು ಮುಂದೆ ಅಧ್ಯಯನಕ್ಕೆ ಹೆಚ್ಚು ಒತ್ತು ಕೊಡಿ ಎಂದು ಸೂಚಿಸಿದರು. ಅವರ ಸೂಚನೆಯನ್ನು ವಿಭಾಗ ಉತ್ಸಾಹದಿಂದ ಒಪ್ಪಿತು. ಯಾಕೆಂದರೆ ಕರ್ನಾಟಕದಲ್ಲಿ ಇದುವರೆಗೆ ಬುಡಕಟ್ಟುಗಳನ್ನು ಕುರಿತಾದ ಮಾಹಿತಿ ಸಂಗ್ರಹಣೆ ಆಗಿದೆಯೇ ಹೊರತು, ಅಧ್ಯಯನ ಆಗಿಲ್ಲ ಎಂಬ ಕೊರಗು ನಮ್ಮನ್ನು ಕಾಡುತ್ತಿತ್ತು. ಆದ್ದರಿಂದ ಬುಡಕಟ್ಟು ಸಂಸ್ಕೃತಿಯ ವಿವಿಧ ಮುಖಗಳನ್ನು ಕುರಿತ ಪ್ರಾಥಮಿಕ ಮಟ್ಟದ ಪರಿಶೋಧನೆ ಮತ್ತು ಅಧ್ಯಯನವನ್ನು ಈ ಮಾಲಿಕೆ ಮೂಲಕ ಕೈಗೊಂಡಿದ್ದೇವೆ. 'ಪ್ರಾಥಮಿಕ' ಎಂದು ಯಾಕೆ ಹೇಳುತ್ತಿದ್ದೇನೆಂದರೆ ಇದು ಪ್ರಪ್ರಥಮವಾಗಿ ಕೈಗೊಳ್ಳಲಾಗುತ್ತಿರುವ ಮೊದಲ ಹಂತದ ಸಂಶೋಧನೆ ಎಂಬ ದೃಷ್ಟಿಯಿಂದ. ಆಳವಾದ ಹಾಗೂ ವಿಸ್ತೃತ ರೂಪದ ಸಂಶೋಧನೆಗಳಿಗೆ ನಮ್ಮ ಈ ಪುಟ್ಟ ಗ್ರಂಥಗಳು ಮಾರ್ಗಸೂಚಿಯಾಗುತ್ತವೆ ಎಂಬ ನಂಬಿಕೆ ನನ್ನದು.

ಕನ್ನಡ ವಿಶ್ವವಿದ್ಯಾಲಯದ ಮೂಲ ಧ್ಯೇಯವೆನಿಸಿದ ದೇಸಿ ಸಂಸ್ಕೃತಿಯ ಹುಡುಕಾಟದ ಧೋರಣೆಗೆ ಪೂರಕವಾಗಿಯೇ ನಮ್ಮ ಈ ಅಧ್ಯಯನಗಳು ಹೊರಬರುತ್ತಿವೆ. ನಮ್ಮದು ದೇಶಿಯಲ್ಲಿ ದೇಸಿ ಎಂದರೂ ತಪ್ಪಾಗಲಾರದು!

ಈ ಸಂಬಂಧದಲ್ಲಿ ಪ್ರೋತ್ಸಾಹಿಸಿದ ಸರ್ವರಿಗೂ ವಿಭಾಗದ ಪರವಾಗಿ ಕೃತಜ್ಞತೆಗಳು ಸಲ್ಲುತ್ತವೆ.

ಗಿರಿಸೀಮೆ

ಡಾ. ಹಿ.ಚಿ. ಬೋರಲಿಂಗಯ್ಯ

PDF created with pdfFactory Pro trial version www.pdffactory.com

ಪರಿವಿಡಿ

ಕನ್ನಡವೇ ಸತ್ಯ, ಕನ್ನಡವೇ ನಿತ್ಯ / 3
ದೇಸಿಯೊಳ್ ಪುಗುವುದು
ಪೊಕ್ಕು ಮಾರ್ಗದೊಳೆ ತಳ್ಳುದು / 5
ಬುಡಕಟ್ಟು ಅಧ್ಯಯನ ಮಾಲೆಯನ್ನು ಕುರಿತು / 7
೧. ದೈವ: ಒಂದು ಪೀಠಿಕೆ / ೧
೨. ಬುಡಕಟ್ಟು ವೀರರು ಮತ್ತು ಮಾತೆಯರು / ೧೮
೨.೧. ಬೀರನ ಮನೆ / ೧೯
೨.೨. ಜಟ್ಟಿಗನ ಬನ / ೨೯
೨.೩. ಕಾಡ್ಯನ ಮನೆ / ೩೫
೨.೪. ಕಾವೆಲಿಯಕುಚ್ಚಿ ಕಾಡು / ೪೦
೨.೫. ಪೋಡಿನ ದೈವ / ೪೪
೨.೬. ಮರದ ಮೇಲಿನ ದೇವರು / ೫೬
೨.೭. ಮಿಂಚೇರಿಯ ಹುಲಿ ಸಮಾಧಿ / ೬೧
೨.೮. ಗೊಲ್ಲರ ಹಟ್ಟಿ / ೬೫
೨.೯. ಬೆಳದಿಂಗಳ ಸಿರಿ / ೭೩
೨.೧೦. ಬಲೀಂದ್ರ / ೮೬
೩. ಮಾತೃಮೂಲ ಪರಂಪರೆ ಮತ್ತು ಮಾತೃದೇವತೆಯರು / ೯೩
ಅನುಬಂಧ
ಅ. ಉಲ್ಲೇಖಗಳು / ೧೦೪
ಆ. ಪರಾಮರ್ಶನ ಗ್ರಂಥಗಳು / ೧೦೬
ಇ. ಛಾಯಾಚಿತ್ರಗಳು / ೧೦೯

PDF created with pdfFactory Pro trial version www.pdffactory.com

೧

ದೈವ : ಒಂದು ಪೀಠಿಕೆ

ನಮ್ಮ ದೇವ–ದೇವತೆಯರನ್ನು ಕುರಿತ ಗಂಭೀರ ಚರ್ಚೆಗಿಂತ ಮೊದಲು ಚಿಕ್ಕಂದಿನಲ್ಲಿ ನಾನು ಕಂಡ ದೈವಸಂಬಂಧಿಯಾದ ಕೆಲವು ಘಟನೆಗಳನ್ನು ವಿವರಿಸುವುದು ಸೂಕ್ತ ಎಂದುಕೊಂಡಿದ್ದೇನೆ. ಯಾಕೆಂದರೆ ಬಾಲ್ಯದಲ್ಲಿ ಕಂಡುಂಡು ಅನುಭವಿಸಿದ ಆ ಘಟನೆಗಳು ಈಗ ನಾನು ಮಂಡಿಸಬೇಕಿರುವ ಚರ್ಚೆಗಳಿಗೆ ಪೀಠಿಕೆಯಾಗಬಲ್ಲವು ಎಂಬ ನಂಬಿಕೆ ನನಗಿದೆ. ನಾನು ಹುಟ್ಟಿ ಬೆಳೆದ ಊರು ಮತ್ತು ಪರಿಸರ ಒಂದು ಬುಡಕಟ್ಟಿನ ಹಂತವನ್ನು ದಾಟಿದ ಕೃಷಿ ಸಮಾಜ ವ್ಯವಸ್ಥೆಗೆ ಸೇರಿದ್ದಾಗಿತ್ತಾದರೂ, ಇಂದು ಆ ಬಾಲ್ಯವನ್ನು ಮೆಲುಕು ಹಾಕುವಾಗ, ಎಷ್ಟೆಲ್ಲ ಬುಡಕಟ್ಟಿನ ಅಂಶಗಳು ಅಂದು ನಮ್ಮ ನಡುವೆ ಇದ್ದವು ಎಂಬುದು ಹೊಳೆಯುತ್ತಾ ಹೋದಂತೆ ಆಶ್ಚರ್ಯವಾಗುತ್ತದೆ. ಈ ಸಂದರ್ಭದಲ್ಲಿ ಖ್ಯಾತ ಚಿಂತಕ ಡಾ. ದೇವಿಪ್ರಸಾದ್ ಚಟ್ಟೋಪಾಧ್ಯಾಯ ಅವರ ಒಂದು ಮಾತು ನೆನಪಿಗೆ ಬರುತ್ತದೆ. "ಅನಾಗರಿಕ ವ್ಯವಸ್ಥೆಯನ್ನು ದಾಟಿ ನಾಗರಿಕತೆಯ ಹೊಸ್ತಿಲನ್ನು ಮುಟ್ಟಿದ ಮೇಲೂ ಬಹಳ ಕಾಲದವರೆಗೆ ಮನುಷ್ಯ ತನ್ನ ಭೂತಕಾಲದ ಅನಾಗರಿಕ ಹಂತದ ಅನೇಕ ಅಭ್ಯಾಸಗಳನ್ನು ಪೂರ್ಣವಾಗಿ ಬಿಡಲಾರದೆ ಹೋದ. ನಾಗರಿಕ ಸಮಾಜದ ಮನುಷ್ಯನ ಗ್ರಹಿಕೆಗಳು ಹಾಗೂ ನಂಬಿಕೆಗಳಲ್ಲಿ ಆದಿಮಕಾಲದ ವಿಧವಿಧವಾದ ನಂಬಿಕೆಗಳು ಹಾಗೇ ಅಂಟಿಕೊಂಡಿವೆ. ಆದ್ದರಿಂದಲೇ ನಾಗರಿಕತೆಯ ಪ್ರಾರಂಭದ ದೆಸೆಯ ವಿಷಯಗಳನ್ನು ಸರಿಯಾಗಿ ತಿಳಿದುಕೊಳ್ಳಲು ಅನಾಗರಿಕ ಅವಸ್ಥೆಯ ಸನ್ನಿವೇಶಗಳನ್ನು ವಿಶೇಷವಾಗಿ ತಿಳಿದುಕೊಳ್ಳುವ ಅವಶ್ಯಕತೆ ಇದೆ."[೧]

ಈಗ್ಗೆ ೩೫–೪೦ ವರ್ಷಗಳ ಹಿಂದೆ ನಾನು ನನ್ನ ಅಪ್ಪನ ಜೊತೆ ಪಾಲ್ಗೊಳ್ಳುತ್ತಿದ್ದ ಒಂದು ಕ್ರಿಯಾವಿಧಿ ನೆನಪಿಗೆ ಬರುತ್ತದೆ. ನವೆಂಬರ್ ತಿಂಗಳಿನ ರಾಗಿ ಹೊಲದ ಕೊಯಿಲಿನ ಸಂದರ್ಭದಲ್ಲಿ ಕೈಗೊಳ್ಳುತ್ತಿದ್ದ ಆಚರಣೆ ಅದು. ಕೊಯಿಲಿನ ಆರಂಭಕ್ಕೆ

PDF created with pdfFactory Pro trial version www.pdffactory.com

ಮೊದಲು, ಒಂದು ಸಂಜೆ ನನ್ನ ಅಪ್ಪ ಹಾಲು ಮತ್ತು ಅನ್ನದ ಎರಡು ಪಾತ್ರೆಗಳನ್ನು ಮರದ ಹೆಡಿಗೆಗೆ ತುಂಬಿಕೊಂಡು, ನಾಳೆಗೆ ಕೊಯಿಲು ಆರಂಭಿಸಬೇಕಾಗಿರುವ ಒಂದು ಹೊಲಕ್ಕೆ ಹೋಗುತ್ತಿದ್ದರು. ಒಣಗಿದ ತೆನೆಗಳಿಂದ ತುಂಬಿಕೊಂಡು ಭೂಮಿಗೆ ವಾಲಿದ ಪೈರುಗಳನ್ನು ಸರಿಸಿ ಸರಿಸಿ ಹೊಲದ ಮಧ್ಯಭಾಗಕ್ಕೆ ಹೊಕ್ಕು, ಸುಮಾರು ಇಪ್ಪತ್ತೈದು ಅಡಿ ಚದುರದ ಜಾಗದಲ್ಲಿ ಪೈರುಗಳನ್ನು ಕೊಯ್ದು ಅರಿ ಇಡುತ್ತಿದ್ದರು. ಅಲ್ಲಿಯೇ ಸುತ್ತಮುತ್ತ ಮೂರು ಕಲ್ಲುಗಳನ್ನು ಆರಿಸಿ ನೀರಿನಿಂದ ತೊಳೆದು ಸಾಲಾಗಿ ಇಡುತ್ತಿದ್ದರು. ಆ ಕಲ್ಲುಗಳಿಗೆ ಅರಿಶಿನ, ಕುಂಕುಮ ಹಚ್ಚಿ ಪೂಜಿಸುತ್ತಿದ್ದರು. ಹೊಲದ ಸಾಲಿನಲ್ಲಿ ಬೆಳೆದ ಹರಳು ಎಲೆಗಳನ್ನು ಕಿತ್ತು, ಅದರ ಮೇಲೆ ಹಾಲು ಅನ್ನ ಇಟ್ಟು ಕಲ್ಲುಗಳ ಮುಂದೆ ಇಡುತ್ತಿದ್ದರು. ಆ ಕಲ್ಲುಗಳೇ ಮೂರು ದೇವರುಗಳು! ಒಂದು ಭೂಮಿತಾಯಿ, ಎರಡು ಮಳೆರಾಯ, ಮೂರು ಬೆನವಣ್ಣ. ಸೃಷ್ಟಿಸುವ, ಪೋಷಿಸುವ ಮತ್ತು ರಕ್ಷಿಸುವ ಸಂಕೇತಗಳಾದ ಆ ದೇವರುಗಳಿಗೆ ನನ್ನ ಅಪ್ಪನ ಪ್ರಕಾರ ರೂಪಗಳಿರಲಿಲ್ಲ. ಇದು ಬಯಲುಸೀಮೆಯ ಕೆಲವು ಕೃಷಿಕರಲ್ಲಿ ಈಗಲೂ ಉಳಿದಿರುವ ಮೂಲದೈವ ಕಲ್ಪನೆಯ ಪಳೆಯುಳಿಕೆ.

ನನಗೆ ಗೊತ್ತಿದ್ದಂತೆ ನಾವು 'ಬಾಗೆ' ಕುಲದವರು. ಬಾಗೆ ಎಂಬುದು ಒಂದು ಮರದ ಹೆಸರು. ನಮ್ಮ ಹಾಗೆಯೇ ಬನ್ನಿ ಕುಲದವರು ನಮ್ಮ ಊರಿನಲ್ಲಿದ್ದರು. ಬಾಗೆ ಮತ್ತು ಬನ್ನಿ ಎರಡು ಜಾತಿಯ ಸಸ್ಯಗಳು. ಆ ಕುಲದವರು ಬಹುಶಃ ಆ ಪ್ರದೇಶದ ಮೂಲ ಕೃಷಿಕರಿದ್ದಿರಬಹುದು. ಆದರೆ ಇನ್ನೆರಡು ರೀತಿಯ ಬಳಿಗಳು ನಮ್ಮ ಊರಿನಲ್ಲಿದ್ದವು. ಅವು 'ಪೆಟ್ಟಿಗೆ' ಮತ್ತು 'ಬುಜ್ಜುಣಿಕೆ' ಕುಲಗಳು. ಪೆಟ್ಟಿಗೆ ಎಂದರೆ ವಿವರಿಸಬೇಕಾಗಿಲ್ಲ. ಬುಜ್ಜುಣಿಕೆ ಎಂದರೆ ಸ್ವಲ್ಪ ವಿವರಿಸಬೇಕಾಗುತ್ತದೆ. ಸಣ್ಣಸಣ್ಣ ಬಿದಿರು ಕಡ್ಡಿಗಳನ್ನು ಒತ್ತಟ್ಟಿಗೆ ಜೋಡಿಸಿ ಹೆಣೆದ ಕುಂಭಾಕಾರದ ಹೊಟ್ಟೆ ಮತ್ತು ಅಗಲವಾದ ಬಾಯಿ ಇರುವ ಒಂದು ಸಾಧನ. ಮೇಲೊಂದು ಮುಚ್ಚಳ ಇರುತ್ತದೆ. ಒಟ್ಟಿನಲ್ಲಿ ಇದು ಕೂಡ ಪೆಟ್ಟಿಗೆಯಂತೆಯೇ ವಸ್ತುಗಳನ್ನು, ಬಟ್ಟೆಬರೆಗಳನ್ನು ತುಂಬಿಡುವ ಅಥವಾ ಸಂಚಾರದ ಸಂದರ್ಭದಲ್ಲಿ ಹೊತ್ತೊಯ್ಯುವ ಒಂದು ಸಾಧನ. ಈ ಸಾಧನಗಳನ್ನೇ ತಮ್ಮ ಬಳಿಯನ್ನಾಗಿ ಗುರುತಿಸಿಕೊಂಡ ಈ ಪಂಗಡದವರು ಬಹುಶಃ ಒಂದು ಕಾಲಕ್ಕೆ ಅಲೆಮಾರಿ ಕೃಷಿಕರಾಗಿದ್ದು ನಂತರದಲ್ಲಿ ಒಂದು ಕಡೆ ಬಂದು ನೆಲೆಸಿದವರಿರಬೇಕು. ಅವರ ಈ ಸಾಧನಗಳ ಕುರುಹೇ ಇದಕ್ಕೆ ಸಾಕ್ಷಿ.

ಒಂದೇ ಬಳಿಗೆ ಸೇರಿದ ಕುಟುಂಬಗಳ ನಡುವೆ ಹೆಣ್ಣು ಕೊಟ್ಟು ಹೆಣ್ಣು ತರುವುದು ನಿಷೇಧ. ಬಾಗೆ ಕುಲದಿಂದ ಬನ್ನಿ ಕುಲಕ್ಕೂ ಹಾಗೇ ಬನ್ನಿ ಬಾಗೆ ಕುಲದಿಂದ ಪೆಟ್ಟಿಗೆ ಬುಜ್ಜುಣಿಕೆ ಕುಲಕ್ಕೂ ಕೊಟ್ಟು ತರುವ ಅವಕಾಶಗಳುಂಟು. ಆಯಾ ಕುಲದವರು ತಮ್ಮ ತಮ್ಮ ಕುಲಗಳನ್ನು ಸಂಕೇತಿಸುವ ವಸ್ತು ಅಥವಾ ಸಸ್ಯಗಳ ಬಗ್ಗೆ ಅಪಾರ

ಗೌರವ ಇಟ್ಟುಕೊಂಡಿರುತ್ತಿದ್ದರು. ಬಾಗೆ ಮರವನ್ನು ನಾವು ಎಂದಿಗೂ ಕಡಿಯುವ ಹಾಗಿಲ್ಲ. ಅದರ ಸೌದೆಯನ್ನು ಒಲೆಗೆ ಉರಿಸುವ ಹಾಗಿಲ್ಲ. ಮದುವೆಯ ಸಂದರ್ಭಗಳಲ್ಲಿ ಆ ಮರಕ್ಕೆ ಪೂಜೆ ಸಲ್ಲಿಸಬೇಕು. ಪೆಟ್ಟಿಗೆ ಮತ್ತು ಬುಜ್ಜುಣಿಕೆ ಕುಲದವರು ತಮ್ಮ ತಮ್ಮ ಮದುವೆ ಸಂದರ್ಭಗಳಲ್ಲಿ ತಮ್ಮ ತಮ್ಮ ಮನೆ ದೇವರ ಪ್ರತೀಕಗಳನ್ನು ಪೆಟ್ಟಿಗೆ ಅಥವಾ ಬುಜ್ಜುಣಿಕೆಯಲ್ಲಿ ಇಟ್ಟು ಹೊತ್ತು ತಂದು ಅದರ ಸಮ್ಮುಖದಲ್ಲಿ ಮದುವೆ ಕಾರ್ಯಗಳನ್ನು ನೆರವೇರಿಸುತ್ತಿದ್ದರು. ಒಂದು ಕಾಲದ ವಾಸ್ತವ ಇಂದು ಸಾಂಕೇತಿಕ ರೂಪದಲ್ಲಿ ತನ್ನ ಅಸ್ತಿತ್ವ ಉಳಿಸಿಕೊಂಡಿದೆ ಇಲ್ಲಿ. ನಾಗರಿಕತೆಯ ಹೊಸ್ತಿಲಿಗೆ ಬಂದ ಮೇಲೂ ಈ ಆಚರಣೆ ಮತ್ತು ನಿಷೇಧಗಳಿರುವುದನ್ನು ನೋಡಿದರೆ ಇವತ್ತಿನ ಅನೇಕ ಕೃಷಿಕರು ಅಂದಿನ ಬುಡಕಟ್ಟುಗಳಿಂದ ವಿಕಾಸ ಹೊಂದಿದವರೇ ಎಂಬುದು ಸ್ಪಷ್ಟ.

ಇನ್ನು ನಮ್ಮ ಸುತ್ತಮುತ್ತ ಪ್ರಚಲಿತವಿದ್ದ ಮತ್ತು ಆರಾಧಿಸಲ್ಪಡುತ್ತಿದ್ದ ದೈವಗಳ ಬಗ್ಗೆಯೂ ಒಂದಿಷ್ಟು ಹೇಳಲೇಬೇಕು. ಕೇವಲ ನಮ್ಮ ಊರಲ್ಲ, ಸುತ್ತಲೂ ಏಳೂರುಗಳಲ್ಲಿಯೂ ಬಹು ಜನಪ್ರಿಯವಾಗಿದ್ದ ದೇವತೆ ಎಂದರೆ ಚೌಡಮ್ಮ. 'ಉಜ್ಜನಿ ಚೌಡಮ್ಮ' ಎಂದು ಸಾಮಾನ್ಯವಾಗಿ ಎಲ್ಲರೂ ಕರೆಯುತ್ತಿದ್ದರು. ನಮ್ಮ ಸುತ್ತಲೂ ಹಳ್ಳಿಗಳಲ್ಲಿ ಉಜ್ಜನಿ ಒಂದು ದೊಡ್ಡ ಊರು. ವಿಜಯನಗರದ ಅರಸರ ಕಾಲದ ಶಾಸನವೂ ಊರಿನಲ್ಲಿದೆ. ಅವಶೇಷದಂತೆ ಇರುವ ಕೋಟೆ ಬಾಗಿಲು ಹಾಗೂ ಇನ್ನಿತರ ಐತಿಹಾಸಿಕ ಕುರುಹುಗಳೂ ಕಾಣಸಿಗುವುದರಿಂದ ಇದೊಂದು ಸಣ್ಣ ಪಾಳೆಯಪಟ್ಟಾಗಿತ್ತೆಂಬುದು ನಿಸ್ಸಂದೇಹ. ೧೪ನೇ ಶತಮಾನಕ್ಕೆ ಸಂಬಂಧಿಸಿದ ಶಾಸನದಲ್ಲಿ 'ಚೌಡೇಶ್ವರಿ ದೇವಿ' ಎಂಬ ಅಂಕಿತವಿರುವುದರಿಂದ ಚೌಡಮ್ಮನ ಇತಿಹಾಸವೂ ಅಷ್ಟರಮಟ್ಟಿಗೆ ಹಿಂದಕ್ಕೆ ಹೋಗುತ್ತದೆ. ಪ್ರತಿವರ್ಷ ನಡೆಯುವ ಚೌಡಮ್ಮನ ಹಬ್ಬ ಅತ್ಯಂತ ವಿಶಿಷ್ಟವಾದದ್ದು.[೨]

ಉಜ್ಜನಿಯಲ್ಲಿ ಒಕ್ಕಲಿಗರು, ಹೊಲೆಯರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ವೀರಶೈವರು, ಬ್ರಾಹ್ಮಣರು, ಅಗಸರು, ಬೆಸ್ತರು, ಅರಸುಗಳು, ಮಾದಿಗರು ಇತ್ಯಾದಿಯಾಗಿ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಒಕ್ಕಲಿಗರು, ಹೊಲೆಯರು ಮತ್ತು ಮಾದಿಗರಿಗೆ ಅವರವರದೇ ಆದ ಪ್ರತ್ಯೇಕ ವಾಸಸ್ಥಳಗಳಿವೆ. ಚೌಡಮ್ಮನ ಹಬ್ಬದಲ್ಲಿ ಈ ಎಲ್ಲರಿಗೂ ಒಂದಲ್ಲ ಒಂದು ರೀತಿಯ ನಿರ್ದಿಷ್ಟಪಡಿಸಿದ ಕಾರ್ಯವಿರುತ್ತದೆ. ಆದರೆ ಹಬ್ಬದ ವಿಶಿಷ್ಟಾಚರಣೆಗಳು ಮಾತ್ರ ನಮ್ಮನ್ನು ಬಹು ಹಿಂದಕ್ಕೆ ಕರೆದೊಯ್ಯುತ್ತವೆ.

ಉಜ್ಜನಿಯಲ್ಲಿ ಮೂರು ರೀತಿಯ ಸ್ತ್ರೀ ದೇವತೆಗಳಿರುವುದು ಈ ವಿಶಿಷ್ಟತೆಗೆ ಕಾರಣವಾಗಿದೆ. ಚೌಡಮ್ಮ, ಹೆಬ್ಬಾರಮ್ಮ ಮತ್ತು ಮಾರಮ್ಮ. ಚೌಡಮ್ಮನಿಗೆ ಏಳು ಜನ ಅಕ್ಕತಂಗಿಯರೂ ಇದ್ದಾರೆ. ನಿಡಸಾಲೆ, ಯಮನಹಳ್ಳಿ ಇತ್ಯಾದಿಯಾಗಿ ಬೇರೆ

PDF created with pdfFactory Pro trial version www.pdffactory.com

ಬೇರೆ ಊರುಗಳಲ್ಲಿ ಅವರು ತಂಗಿದ್ದಾರೆ ಎಂದು ಹೇಳಲಾಗುತ್ತಿದೆ. ಅವರಲ್ಲಿ ನಿಡಸಾಲೆ ಚೌಡಮ್ಮ ಮಾತ್ರ ಪ್ರತಿವರ್ಷದ ಹಬ್ಬದಲ್ಲಿ ಉಜ್ಜನಿಗೆ ಬಂದು ಅಕ್ಕನ ಹಬ್ಬದಲ್ಲಿ ಪಾಲ್ಗೊಂಡು ಹೋಗುತ್ತಾಳೆ. ಇಡೀ ದಕ್ಷಿಣ ಭಾರತದ ದೈವೇತಿಹಾಸದಲ್ಲಿ ಪ್ರಮುಖ ಅಂಶವಾಗಿ ಕಾಣಿಸಿಕೊಳ್ಳುವ 'ಏಳುಜನ ಅಕ್ಕ ತಂಗಿಯರು ದೇವತೆಗಳಾಗಿ' ನೆಲೆಗೊಂಡ ಪುರಾಣ ಉಜ್ಜನಿಯಲ್ಲಿಯೂ ಇದೆ. ಹಾಗೆಯೇ ವಲಸೆಗಾರರಾಗಿ ಬಂದು ನೆಲೆಗೊಂಡ ಕೆಲವು ಬುಡಕಟ್ಟುಗಳು ಆದಿಯಲ್ಲಿ ಚೌಡಮ್ಮನನ್ನು ಪ್ರತಿಷ್ಠಾಪಿಸಿರಬೇಕು ಎಂಬ ಅನುಮಾನವೂ ಬರುತ್ತದೆ. ಯಾಕೆಂದರೆ ಈ ಏಳು ದೇವತೆಯರು ಅರ್ಥಾತ್ ಸಪ್ತಮಾತೃಕೆಯರು ವಲಸೆಗಾರ ಹಾಗೂ ಪಶುಪಾಲಕ ಬುಡಕಟ್ಟುಗಳ ಆರಾಧ್ಯ ದೈವಗಳಾಗಿದ್ದವು ಎಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.[೩] ಹಾಗಾದರೆ ಉಜ್ಜನಿಯಲ್ಲಿರುವ ಈಗಿನ ಕೃಷಿಕರು ಹಿಂದೆ ವಲಸೆಗಾರರಾಗಿ ಅಥವಾ ಪಶುಪಾಲಕರಾಗಿ ಬಂದು ನೆಲೆಗೊಂಡರೇ ಎಂಬುದನ್ನು ಇನ್ನೂ ಸಂಶೋಧಿಸಬೇಕಾಗುತ್ತದೆ.

ಹೆಬ್ಬಾರಮ್ಮ ಮುಖ್ಯವಾಗಿ ಹೊಲೆಯರ ದೇವತೆ. ಹೆಬ್ಬಾರಮ್ಮನ ಗುಡಿಯೂ ಹೊಲಗೇರಿಯಲ್ಲಿದೆ. ಈ ದೇವತೆಗೆ ಸಂಬಂಧಿಸಿದ ಪುರಾಣ ಹೆಚ್ಚುಕಡಿಮೆ ಮಾರಮ್ಮನ ಪುರಾಣವನ್ನು ಹೋಲುತ್ತದೆ. ಆದ್ದರಿಂದಲೇ ಇಲ್ಲಿ ಇರುವ ಮಾರಮ್ಮನಿಗೆ ಹೆಚ್ಚು ಪ್ರಾಶಸ್ತ್ಯವಿಲ್ಲ. ಉಜ್ಜನಿಯ ವಿಶಿಷ್ಟತೆ ಏನು ಎಂದರೆ, ಹೆಬ್ಬಾರಮ್ಮನ ಭಕ್ತರಾದ ಹೊಲೆಯರು ಚೌಡಮ್ಮನ ಹಬ್ಬದಲ್ಲಿ ಪ್ರಧಾನಪಾತ್ರ ವಹಿಸುವುದು. ಹದಿನೆಂಟು ದಿನಗಳ ಕಾಲ ನಿಗದಿಪಡಿಸಿದ ಆರು ಜನ ಹೊಲೆಯರು ಜನಿವಾರ ಹಾಕಿ ಶಾಸ್ತ್ರೋಕ್ತವಾಗಿ ಬ್ರಾಹ್ಮಣರಾಗುತ್ತಾರೆ. ಬ್ರಾಹ್ಮಣ ಪುರೋಹಿತ ಈ ಶಾಸ್ತ್ರವನ್ನು ನಡೆಸಿಕೊಡುತ್ತಾನೆ. ಹೀಗೆ ನೇಮನಿಯಮಗಳನ್ನು ಪಾಲಿಸಿದ ಹೊಲೆಯರು ಚೌಡಮ್ಮನ ಕೊಂಡದಲ್ಲಿ ಹೆಬ್ಬಾರೆ ಹೊತ್ತು ಓಡಲು ಅರ್ಹರಾಗುತ್ತಾರೆ. ಹಾಗೆ ಕೊಂಡದಲ್ಲಿ ಓಡುವ ಇತರೆ ದೇವತೆಗಳ ವಿವರ ನೋಡಿ. ಉಜ್ಜನಿ ಚೌಡಮ್ಮ, ನಿಡಸಾಲೆ ಚೌಡಮ್ಮ, ಕರಗ, ದೂಪುಂಡಿಗೆ ಹಾಗೂ ಕೊನೆಯಲ್ಲಿ ಆರು ಜನ ಹೆಬ್ಬಾರೆ ಹೊತ್ತ ಗುಡ್ಡರು. ಸವರ್ಣೀಯ ಗುಡ್ಡರು ಆ ಬೃಹತ್ ಕೆಂಡದ ರಾಶಿಯನ್ನು ಹಾದು ದೇವಸ್ಥಾನದ ಒಳಕ್ಕೆ ಪ್ರವೇಶಿಸುತ್ತಾರೆ. ಆದರೆ ಹೆಬ್ಬಾರೆ ಗುಡ್ಡರನ್ನು ಹೊರಗೆ ತಡೆಯಲಾಗುತ್ತದೆ. ಆ ಸಂದರ್ಭದಲ್ಲಿ ಹೆಬ್ಬಾರೆ ಗುಡ್ಡರು ಆವೇಶಭರಿತರಾಗಿ ಒಳನುಗ್ಗುವುದು, ಸವರ್ಣೀಯರು ತಡೆಯುವುದು ಇದೇ ತೆರನಾದ 'ಅಭಿನಯ' ನಡೆದು ಚೌಡಮ್ಮನ ಗುಡಿಯ ತೀರ್ಥವನ್ನು ಸಿಂಪಡಿಸಿದ ನಂತರ ಅವರು ಸಾವಧಾನಕ್ಕೆ ಬರುತ್ತಾರೆ.

ಹೆಬ್ಬಾರಮ್ಮ ಮತ್ತು ಚೌಡಮ್ಮಗಳ ಇಲ್ಲಿಯ ಸಂಬಂಧ ವಲಸೆ ಬಂದವರು ಮತ್ತು ಮೂಲವಾಗಿ ಇದ್ದವರ ನಡುವಿನ ಒಂದು ಕಾಲದ ಸಂಘರ್ಷವಾಗಿ ಮತ್ತು

ಇಂದು ಅದು ಹಬ್ಬದ ರೂಪದ ಸಾಮರಸ್ಯವಾಗಿ ನಮಗೆ ಕಾಣುತ್ತಿದೆಯೇ? ಆದರೆ ಚೌಡಮ್ಮ ಮತ್ತು ಹೆಬ್ಬಾರಮ್ಮ ಇಬ್ಬರೂ ಕೊಂಡ ಹಾಯುವುದರಿಂದ ಒಂದು ಕಾಲಕ್ಕೆ ಈ ಇಬ್ಬರೂ 'ಸತಿ'ಯರಾದ ಮಹಿಳೆಯರಿರಬಹುದೇ? ಈ ಎಲ್ಲಾ ದೇವರ ಪ್ರತೀಕಗಳಿಗಿಂತ ಪ್ರಪ್ರಥಮವಾಗಿ ಕೊಂಡದಲ್ಲಿ ಓಡುವ ಕರಗ ಏನನ್ನು ಸಂಕೇತಿಸುತ್ತದೆ? ಬಹುಶಃ 'ಕರಗ' ಚೌಡಮ್ಮ ಮತ್ತು ಹೆಬ್ಬಾರಮ್ಮನಿಗಿಂತ ಪುರಾತನವಾದ ದೈವೀ ಕಲ್ಪನೆ. ಸಮೃದ್ಧಿಯನ್ನು ಹಾರೈಸುವ ಆ ಮೂಲಕ ಸೃಷ್ಟಿಗೆ ಕಾರಣವಾದ ಸ್ತ್ರೀಯ ಯೋನಿಯನ್ನು ಸಂಕೇತಿಸುವ ಕರಗ ಶಿಲಾಯುಗದಷ್ಟು ಹಿಂದಿನ ಕಲ್ಪನೆಗೆ ನಮ್ಮನ್ನು ಕೊಂಡೊಯ್ಯುತ್ತದೆ. ನಮ್ಮ ಬಯಲು ಸೀಮೆಯ ಅನೇಕ ಗ್ರಾಮದೇವತೆಯರ ಹಬ್ಬದಲ್ಲಿ ಈ ಕರಗ ಮುಂಚೂಣಿಯಲ್ಲಿ ಇದ್ದೇ ಇರಬೇಕು. ಉಜ್ಜನಿಯಲ್ಲಿ 'ಕರಗದ ಪಾಲು' ಮತ್ತು 'ಕರಡಿ ಪಾಲು' ಎಂಬ ಎರಡು ಪ್ರತ್ಯೇಕ ಬಳಿಗಳಿದ್ದು, ಆ ಕಥೆಗಳು ವಲಸೆಗಾರರಾಗಿ ಉಜ್ಜನಿಗೆ ಬಂದು ನೆಲೆಸಿದವರ ಕಥೆಗಳನ್ನೇ ಹೇಳುತ್ತವೆ.

ಈ ಪ್ರದೇಶದ ಮಲ್ಲಪ್ಪನಗುಡ್ಡ, ಅಯ್ಯನಗುಡ್ಡ, ಕಂಬದಗುಡ್ಡಗಳಲ್ಲಿ ಇರುವ ಗುಹೆಗಳು ಒಂದು ಕಾಲಕ್ಕೆ ಅಲ್ಲಿದ್ದ ತಾಂತ್ರಿಕ ಪಂಥದ ಪ್ರಚಾರತೆಯನ್ನು ಹೇಳುತ್ತದೆ. ಉಜ್ಜನಿ ಮತ್ತು ಹುಲಿಯೂರುದುರ್ಗದ ನಡುವೆ ಇರುವ ಹೇಮಗಿರಿ ಬೆಟ್ಟದಲ್ಲಿನ 'ಕಾಲಭೈರವನ' ಗುಹೆ ಕಾಳಾಮುಖ ಪಂಥದ ಅಸ್ತಿತ್ವವನ್ನು ಹೇಳುತ್ತದಲ್ಲದೆ, ಇಂದಿಗೂ ಬಹುಜನಪ್ರಿಯವಾಗಿರುವ ಅಲ್ಲಿನ ಜಾತ್ರೆ ಅಂಥ ಅನೇಕ ಸಾಂಕೇತಿಕ ಆಚರಣೆಗಳ ಆಗರವಾಗಿದೆ. ನಾವೆಲ್ಲಾ ಚಿಕ್ಕಂದಿನಲ್ಲಿ ಆ ಬೆಟ್ಟ ಏರಿ, ಭೈರವನ ದರ್ಶನ ಪಡೆದು, ಅನೇಕ ಗುಹೆಗಳನ್ನು ಬಗ್ಗಿ ಬಗ್ಗಿ ನೋಡಿ, ಕತ್ತಲೆಗೆ ಹೆದರಿ, ಹಿರಿಯರು ಹೇಳುತ್ತಿದ್ದ ರಾತ್ರಿಯಲ್ಲಿ ಓಡಾಡುವ ನಿಶಾಚರ ಸಿದ್ಧರನ್ನು ನೆನಪಿಸಿಕೊಂಡು ಭಯದಿಂದ ಓಡೋಡಿ ಜಾತ್ರೆ ಸೇರಿದ ಪ್ರಸಂಗಗಳೂ ಇವೆ.

ನಮ್ಮ ಮನೆಯಲ್ಲಿ ನಡೆಯುತ್ತಿದ್ದ ಮತ್ತೊಂದು ಪ್ರಸಂಗವನ್ನು ಈಗಲೇ ಹೇಳಿ ಬಿಡುತ್ತೇನೆ. ನಾವು ನಂಜನಗೂಡಿನ ನಂಜುಂಡನ ಪಂಥಕ್ಕೆ ಸೇರಿದವರು ಎಂದು ನಮ್ಮ ಹಿರಿಯರ ನಂಬಿಕೆ. ಯಾಕೆಂದರೆ ಮಲೆಮಾದೇಶ್ವರ, ಮಂಟೇಸ್ವಾಮಿ, ಭೈರವ, ತಿರುಪತಿವೆಂಕಟರಮಣ, ಓದೇಶ್ವರ(ವೈದ್ಯನಾಥೇಶ್ವರ) ಇತ್ಯಾದಿಯಾಗಿ ಅನೇಕ ದೈವ ಪಂಥಗಳು ನಮ್ಮಲ್ಲಿ ರೂಢಿಯಲ್ಲಿವೆ. ಮೊದಲಿಗೆ ಆಕಾರವಿಲ್ಲದ ದೈವವನ್ನು, ಆನಂತರ ಗ್ರಾಮದೇವತೆಯರನ್ನೂ ಆರಾಧಿಸುತ್ತಿದ್ದ ಜನ, ನಂತರದಲ್ಲಿ ಈ ಗಂಡು ದೈವಗಳ ಪಂಥಗಳಿಗೆ ಸೇರಿದ್ದು ಒಂದು ಚಾರಿತ್ರಿಕ ಕಾಲದಲ್ಲಿಯೇ. ಮಧ್ಯಕಾಲೀನ ಕರ್ನಾಟಕ ಅಂಥ ಒಂದು ಚಾರಿತ್ರಿಕಘಟ್ಟ. ಶಂಕರಾಚಾರ್ಯ ರಾಮಾನುಚಾರ್ಯ ಮತ್ತು ಮಧ್ವಾಚಾರ್ಯರು ತಮ್ಮ ವೈದಿಕ ಮೌಲ್ಯಗಳ ಪುನರುತ್ಥಾನಕ್ಕೆ ಪ್ರಯತ್ನಪಟ್ಟ ಸಂದರ್ಭಗಳಲ್ಲಿಯೇ, ಅನೇಕ ದೇಸಿ ಪಂಥಗಳು ಕೂಡ ತಮ್ಮ ತಮ್ಮ ಪರಂಪರೆಯ

PDF created with pdfFactory Pro trial version www.pdffactory.com

ಉಳಿವಿಗಾಗಿ ಹೋರಾಟ ನಡೆಸುತ್ತಿದ್ದವು. ಈ ಸಂದರ್ಭದಲ್ಲಿಯೇ ಶೈವ ಮತ್ತು ವೈಷ್ಣವ ಪಂಥಗಳು ತಮ್ಮ ತಮ್ಮ ಜನಪ್ರಿಯತೆಗಾಗಿ ಅನೇಕ ಹೊಸ ಹೊಸ ಪಂಥಗಳನ್ನು ಹುಟ್ಟುಹಾಕಿದವು. ಆದರೆ ದೇಸಿ ಪಂಥಗಳನ್ನು ಮುನ್ನಡೆಸಿದ ಮಲೆಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಭೈರವ ಹಾಗೂ ತಿರುಪತಿ ವೆಂಕಟರಮಣ ಹೆಚ್ಚು ಜನಪ್ರಿಯರಾದರು. ತಿರುಪತಿಯ ದಾಸಯ್ಯಗಳು, ಚುಂಚನಗಿರಿಯ ಜೋಗಪ್ಪಗಳು, ಮಾದಪ್ಪನ ಕಂಸಾಳೆ ಗುಡ್ಡರು ಹಾಗೂ ಮಂಟೆಸ್ವಾಮಿಯ ನೀಲಗಾರರು ಒಂದು ರೀತಿಯಲ್ಲಿ ದೇಸಿ ಪುರೋಹಿತರಾಗಿ ಸ್ಥಳೀಯ ಜೀವನಕ್ರಮಗಳ ಚೌಕಟ್ಟಿನಲ್ಲಿಯೇ ತಮ್ಮ ತಮ್ಮ ಪಂಥಕ್ಕಾಗಿ ಭಕ್ತರನ್ನು ಸಂಪಾದಿಸಿದರು. ಉತ್ತರಕರ್ನಾಟಕದ ಯಲ್ಲಮ್ಮ, ಮೈಲಾರಲಿಂಗ ಹಾಗೂ ಅನೇಕ ಸೂಫಿ ಪಂಥಗಳೂ ಇದನ್ನೇ ಮಾಡಿದ್ದು. ಇಂಥ ಸನ್ನಿವೇಶದಲ್ಲಿ ನಮ್ಮ ಮನೆತನ, ಹಾಗೆಯೇ ನಮ್ಮೂರಿನ ಇನ್ನೂ ಹತ್ತಾರು ಮನೆತನಗಳು ನಂಜನಗೂಡಿನ ನಂಜುಂಡನನ್ನು ತಮ್ಮ ಇಷ್ಟದೈವವಾಗಿ ಇಟ್ಟುಕೊಂಡಿದ್ದು ಒಂದು ಆಶ್ಚರ್ಯ. ಆದರೇನಂತೆ, ಭೈರವ ನಮಗೆ ದೂರವಲ್ಲ. ಉದಾಹರಣೆಗೆ ನನ್ನ ಹೆಸರೇ ಭೈರವನ ಮೂಲದಿಂದ ನಿಷ್ಪತ್ತಿಗೊಂಡಿದ್ದು. ಭೈರವಲಿಂಗ 'ಬೋರಲಿಂಗ'ವಾಯಿತು ಅಷ್ಟೇ. ಅದಿರಲಿ, ಈಗ ನಾನು ನನ್ನ ಕುಟುಂಬದಲ್ಲಿ ನಡೆಯುತ್ತಿದ್ದ ಆ ವಿಶಿಷ್ಟ ಆಚರಣೆಯ ವಿಷಯಕ್ಕೆ ಬರುತ್ತೇನೆ.

ವರ್ಷಕ್ಕೆ ಒಂದುಬಾರಿ ನಾವು 'ಭಂಗಿಸೇವೆ' ಎಂಬ ಒಂದು ಸಂಪ್ರದಾಯವನ್ನು ತಪ್ಪದೆ ನಡೆಸುತ್ತಿದ್ದೆವು. ಇದು ಒಂದು ರೀತಿಯಲ್ಲಿ ಚುಂಚನಗಿರಿಯ ಭೈರವನಿಗೂ ತಿರುಪತಿಯ ವೆಂಕಟರಮಣನಿಗೂ ಒಪ್ಪಿಸುವ ಹರಕೆಯ ರೂಪದ ಆಚರಣೆ. ಭೈರವನ ಪ್ರತಿನಿಧಿಯಾದ ಜೋಗಪ್ಪನನ್ನೂ, ವೆಂಕಟರಮಣನ ಪ್ರತಿನಿಧಿಯಾದ ದಾಸಪ್ಪನನ್ನೂ, ನಾವು ಮನೆಗೆ ಅಹ್ವಾನಿಸುತ್ತಿದ್ದೆವು. ಅವರು ಬಂದು ನಡುಮನೆಯಲ್ಲಿ ಹಾಸಿದ ಬಿಳಿವಸ್ತ್ರದ ಮೇಲೆ ತಮ್ಮ ತಮ್ಮ ದೇವರುಗಳನ್ನು ಇಟ್ಟು, ವಿಧ ವಿಧವಾದ ಹೂಗಳಿಂದ ಅಲಂಕರಿಸುತ್ತಿದ್ದರು. ಆ ದೇವರುಗಳ ಮುಂದೆ ಹರಡಿದ ಬಾಳೆ ಎಲೆ ಮೇಲೆ 'ಎಡೆ' ಏರ್ಪಡಿಸಲಾಗುತ್ತಿತ್ತು. ಆ ಎಡೆಯಲ್ಲಿ ಅನ್ನ, ಮಾಂಸದ ಅಡುಗೆ, ಹೆಂಡ ಹಾಗೂ ಭಂಗಿ ಕೊಳವೆ ಕಡ್ಡಾಯವಾಗಿ ಇರಲೇಬೇಕು. ಅದೊಂದು ರೀತಿಯಲ್ಲಿ ವಾಮಾಚಾರದ ಆಚರಣೆಯಂತಿರುತ್ತಿತ್ತು. ದಾಸಪ್ಪ ಜೋಗಪ್ಪ ಇಬ್ಬರೂ ತಮ್ಮ ತಮ್ಮ ದೈವಗಳ ಬಗ್ಗೆ ಹೊಗಳಿಕೆಗಳನ್ನು ಮಾಡಿದ ನಂತರ ಹೆಂಡದ ಸೇವನೆಯೂ, ಬಾಡಿನ ಊಟವೂ ಆಗುತ್ತಿತ್ತು. ವೆಂಕಟರಮಣ ಮತ್ತು ಭೈರವನ ಈ ಸಮಾಗಮ ಅತ್ಯಂತ ಕುತೂಹಲಕಾರಿ. ಜನಸಾಮಾನ್ಯರು ತಮ್ಮಲ್ಲಿ ತಾವೇ ಏರ್ಪಡಿಸಿಕೊಂಡ ಈ ಶೈವ–ವೈಷ್ಣವ ಸಾಮರಸ್ಯ ವೈದಿಕ ಮೂಲದ

ಆಚಾರ್ಯರುಗಳಿಗೆ ಗೊತ್ತಿರಲಿಲ್ಲವೆಂದೇ ಕಾಣುತ್ತದೆ.[೪] ತಮ್ಮ ತಮ್ಮ ಪಂಥಗಳ ಉನ್ನತಿಗಾಗಿ ಬೊಬ್ಬೆ ಹಾಕುತ್ತಿದ್ದ ದೊಡ್ಡ ದೊಡ್ಡ ಪಂಡಿತರುಗಳ ಚಾಣಾಕ್ಷತನವನ್ನು ಈ ರೀತಿಯಲ್ಲಿ ಹೆಂಡ ಮತ್ತು ಬಾಡಿನ ವಾಸನೆಯಲ್ಲಿ ಐಕ್ಯಗೊಳಿಸಿದ ನಮ್ಮ ಜನ ನಿಜಕ್ಕೂ ಅಭಿನಂದನಾರ್ಹರು.

ಉಜ್ಜನಿ ಚೌಡಮ್ಮನ ಬಗ್ಗೆ ಈ ಹಿಂದೆ ಹೇಳಿದೆ. ನಾವೆಲ್ಲ ಅಷ್ಟು ವಿಜೃಂಭಣೆಯಿಂದ ಆರಾಧಿಸುತ್ತಿದ್ದ ಚೌಡಮ್ಮ ನಮ್ಮ ಮನೆದೇವರಲ್ಲ. ನಮ್ಮ ಭಾಗದಲ್ಲಿ ಚೌಡಮ್ಮನ ಒಕ್ಕಲು ಹೆಚ್ಚಾಗಿದೆಯಾದರೂ ನಮ್ಮ ಮನೆದೇವರು ಚೌಡಮ್ಮನಾಗಿರಲಿಲ್ಲ. ನಮ್ಮೂರಿಂದ ಸುಮಾರು ಇಪ್ಪತ್ತು. ಕಿ.ಮೀ. ದೂರದಲ್ಲಿರುವ ಶಿಂಷಾ ನದಿಯನ್ನು ದಾಟಿ, ಆ ಕಡೆ ಹೋದರೆ ನಾಗಮಂಗಲ ತಾಲೂಕಿನಲ್ಲಿ ಇರುವ ತೂಬಿನಕೆರೆ 'ಪಟಲದಮ್ಮ' ನಮ್ಮ ಮನೆದೇವರು. ಈಗಲೂ ವರ್ಷಕ್ಕೊಂದು ಸಲ ಆ ಹಬ್ಬಕ್ಕೆ ನಾವು ಹೋಗಲೇಬೇಕು. ಅಂದರೆ ನಮ್ಮ ಪೂರ್ವಜರು ಒಂದಾನೊಂದು ಕಾಲಕ್ಕೆ ಅಲ್ಲಿಂದ ಇಲ್ಲಿಗೆ(ಕುಣಿಗಲ್ ತಾಲೂಕಿನ ಉಜ್ಜನಿ ಪಕ್ಕದ ಹಿತ್ತಲಪುರಕ್ಕೆ) ಬಂದು ಸೇರಿಕೊಂಡರು. ಹೀಗಾಗಿ ಪಟಲದಮ್ಮನೂ ಚೌಡಮ್ಮನೂ ನಮ್ಮ ಆರಾಧ್ಯ ದೇವತೆಯರಾದರೆ, ನಂಜನಗೂಡಿನ ನಂಜುಂಡ, ಚುಂಚನಗಿರಿಯ ಭೈರವ ಹಾಗೂ ಆಗಾಗ ತಿರುಪತಿ ವೆಂಕಟರಮಣ ನಮ್ಮ ನಮ್ಮ ಮುಖ್ಯ ದೇವರುಗಳಾಗಿ ನಿಂತರು.

ನಾಗಾರಾಧನೆ ಅತ್ಯಂತ ಪ್ರಾಚೀನವಾದದ್ದು ಎಂಬ ನಂಬಿಕೆ ಇದೆ. ಹಾಗೆ ನೋಡಿದರೆ ಕರಾವಳಿಯಲ್ಲಿ ಈಗಲೂ ಅತ್ಯಂತ ಜನಪ್ರಿಯವಾಗಿರುವ ನಾಗಾರಾಧನೆ ಅನೇಕ ಬುಡಕಟ್ಟುಗಳಲ್ಲಿ ಅಚ್ಚಳಿಯದ ನಂಬಿಕೆ ಉಳಿದಿದೆ. ನಮ್ಮಲ್ಲಿ ಕೂಡ ನಾಗಪ್ಪನ ಪೂಜೆ ಬಳಕೆಯಲ್ಲಿದೆ. ಅದನ್ನು 'ಮುನಿಯಪ್ಪನ ಸೇವೆ', 'ಮುನಿ ಮಾಡುವುದು' ಮುಂತಾಗಿ ಹೇಳುತ್ತಾರೆ. ಸಮೃದ್ಧವಾಗಿ ಬೆಳೆದ ಹೊಲದಲ್ಲಿ ಹಸುರಿನ ಕಾಲದಲ್ಲಿ ಈ ಸೇವೆ ಮಾಡಲಾಗುತ್ತದೆ. ಕುರಿ ಅಥವಾ ಕೋಳಿಯನ್ನು ಬಲಿ ಕೊಟ್ಟು ಮಾಡುವ ಈ ಸೇವೆಯಲ್ಲಿ ನಾಗಪ್ಪನಿಗೆ ಹಾಲಿನ ಬದಲು ಮಾಂಸಾಹಾರದ ಊಟ ಇಡಲಾಗುತ್ತದೆ. ಸಮೃದ್ಧಿ ಮತ್ತು ಸಂತಾನದ ಸಂಕೇತವಾದ ಈ 'ಮುನಿಸೇವೆ'ಯನ್ನು ಹೊಲದ ತುಂಬ ಹೊಸ ಬೆಳೆ ಬಂದಾಗ ಮಾಡುವುದರಲ್ಲಿ ಅರ್ಥವಿದೆ.

ಹೀಗೇಯೇ ಭೂತಪ್ಪ, ಮಾಯಮ್ಮ, ಮಾರಮ್ಮ, ದಂಡಿನಮ್ಮ ಮುಂತಾಗಿ ಹಲವು ದೇವದೇವತೆಯರ ಆರಾಧನೆ ನಡೆಯುತ್ತದೆ. ದವಸದಾನ್ಯಗಳನ್ನು ಹೊಕ್ಕಿ ಕಣದಲ್ಲಿ ರಾಶಿ ಮಾಡಿದಾಗ ಆರಾಧಿಸುವ ಸಮೃದ್ಧಿ ದೇವರುಗಳ ಆರಾಧನೆ ಅತ್ಯಂತ ಸಾಂಕೇತಿಕವಾಗಿ ನಡೆಯುತ್ತದೆ. ಸೂರ್ಯಗ್ರಹಣ ಮತ್ತು ಚಂದ್ರಗ್ರಹಣಗಳ ಸಂದರ್ಭದಲ್ಲಿ ಬರೆಯುವ ಮಂಡಲಗಳು ಮತ್ತು ಆರಾಧನಾ ಸ್ವರೂಪ ನಮ್ಮನ್ನು ಮಾಂತ್ರಿಕ ಲೋಕವೊಂದಕ್ಕೆ ಕರೆದೊಯ್ಯುತ್ತದೆ.

PDF created with pdfFactory Pro trial version www.pdffactory.com

ಉಜ್ಜನಿ ಚೌಡಮ್ಮನ ಗುಡಿಯಲ್ಲಿ ಹಾಗೂ ತೂಬಿನಕೆರೆ ಪಟಲದಮ್ಮನ ಗುಡಿಯಲ್ಲಿನ ಪ್ರವೇಶ ದ್ವಾರದಲ್ಲಿ ಇದ್ದ ಒಂದು ಕೆಂಪುಮುಖದ ಹಾಗೂ ಕರಿಮುಖದ ಬೃಹದಾಕಾರದ 'ಭೂತ'ಗಳು ಆಗಿನ ಕಾಲಕ್ಕೆ ನಮ್ಮ ಎದೆ ನಡುಗಿಸುತ್ತಿದ್ದವು. ಸುಮಾರು ೧೫ ಅಡಿ ಎತ್ತರ ಮತ್ತು ೩೦ ಅಡಿ ಸುತ್ತಳತೆಯ ಆ 'ರಾಕ್ಷಸರು' ನೋಡಲು ಸುಂದರ ಹಾಗೂ ಭಯಾನಕ. ಅವುಗಳಿಗೆ ಬಳಸಲಾಗಿದ್ದ ವಿವಿಧ ಬಣ್ಣಗಳು ಮತ್ತು ಅವುಗಳ ಸಂಯೋಜನೆ ಆಕರ್ಷಕ. ಆದರೆ ಒಟ್ಟಾರೆ ಮುಖಭಾವ ಕ್ರೂರ. ನನ್ನ ಅಪ್ಪ ಯಾವುದೇ ರಾಕ್ಷಸರ ಕಥೆ ಹೇಳಿದರೂ ನನ್ನ ಮುಂದೆ ದುತ್ತನೆ ಬಂದು ನಿಲ್ಲುತ್ತಿದ್ದ ಮೂರ್ತಿಗಳು ಅವೇ. ವಾಸ್ತವವಾಗಿ ಅವು ಚೌಡಮ್ಮನ ಕಾವಲು ಭಟರಷ್ಟೇ ಅಲ್ಲ, ಏಳೂರಿನ ಆಡಳಿತ ನೋಡಿಕೊಳ್ಳುತ್ತಿದ್ದ ಸೇವಕರು ಎಂಬುದು ಪ್ರತೀತಿ. ಕುದುರೆ ಏರಿ ಚೌಡಮ್ಮ ಹೊರಟರೆ, ಇವರು ಸದಾ ಕಾವಲು. ಒಂದು ಕಾಲದ ಮಾತೃಮೂಲ ಆಧಿಕಾರದ ಸಾಂಕೇತಿಕ ಚಿತ್ರ ಇದು. ಅತಿಮಾನುಷ ಶಕ್ತಿಗಳ ಆರಾಧನೆ, ದೇವಿ ಆರಾಧನೆಯ ಜೊತೆ ಜೊತೆಯಲ್ಲೇ ಬೆಳೆದು ಬಂದದ್ದಕ್ಕೆ ಇದೊಂದು ಉದಾಹರಣೆ ಕೂಡ. ಗ್ರಾಮದೇವತೆಯ ಹಬ್ಬಗಳ ಅವಿಭಾಜ್ಯ ಅಂಗವೆನಿಸಿದ 'ಸೋಮ'ಗಳ ಆರಾಧನೆ ಇದಕ್ಕೆ ಹತ್ತಿರವಾದದ್ದೆ. ಕರಿರಾಯ ಕೆಂಚರಾಯ ಎಂಬ ಸೋಮಗಳು ಸದಾ ಆಯಾ ದೇವಿಯ ಭಟರು. ದೇವಿಯ ಅನುಪಸ್ಥಿತಿಯಲ್ಲಿ ಎಲ್ಲ ಕಾರ್ಯಗಳನ್ನು ಕೈಗೊಳ್ಳುವರು ಅವರೇ. ಹೀಗೆ ಒಂದು ಗ್ರಾಮದೇವತೆಯ ಗುಡಿಯಲ್ಲಿನ ಕರಗ ಎಂಬ ಸಂಕೇತದ ಯೋನಿ ಸೂಚಕ ಆರಾಧನೆ, ಸರ್ಪದ ಮೂಲಕ ಆರಾಧಿಸುತ್ತಿದ್ದ ಲೈಂಗಿಕ ಸೂಚಕ ಆರಾಧನೆ, ಭೂತಗಳ ಮೂಲಕ ಕಾಣಲಾಗುತ್ತಿದ್ದ ಅತಿಮಾನುಷ ಶಕ್ತಿಗಳ ಆರಾಧನೆ, ಹೆಬ್ಬಾರೆ ಗುಡ್ಡರ ಮೂಲಕ ಮೂಲದ ಅಸ್ಪೃಶ್ಯರು ಮತ್ತು ವಲಸೆ ಬಂದು ಬೀಡುಬಿಟ್ಟ ಕೃಷಿಕ ಸಮುದಾಯಗಳ ನಡುವಿನ ಘರ್ಷಣೆ ಹಾಗೂ ಸಾಮರಸ್ಯಕ್ಕೆ ನಮಗೆ ಅತ್ಯಂತ ಕುತೂಹಲದ ಸಂಗತಿಗಳಾಗಿ ಕಾಣಿಸುತ್ತವೆ.

ನಾನು ಇಷ್ಟೆಲ್ಲಾ ಹೇಳಿದ್ದಕ್ಕೆ ಕಾರಣಗಳಿವೆ. ಬುಡಕಟ್ಟುಗಳ ದೈವಾರಾಧನೆ ಬಗ್ಗೆ ಹೇಳಲು ಹೊರಟ ನಾನು ಇದುವರೆಗೆ ನನ್ನೂರಿನ ದೈವಾರಾಧನೆಯ ವಿವರಗಳನ್ನು ಕೊಡುತ್ತಾ ಕೂತೆ. ನನ್ನ ದೃಷ್ಟಿಯಲ್ಲಿ ಇದರ ಅವಶ್ಯಕತೆ ಇತ್ತು. ಯಾಕೆಂದರೆ, ಇಂದಿನ ನಾಗರಿಕ ಸಮಾಜದ ಅನೇಕ ಸಮುದಾಯಗಳು ಒಂದು ಕಾಲದ ಬುಡಕಟ್ಟೊಂದರ ಕವಲುಗಳಲ್ಲದೆ ಮತ್ತೇನೂ ಅಲ್ಲ. ನಾವೆಷ್ಟೇ ಮುಂದುವರಿದಿದ್ದೇವೆ ಎಂದರೂ ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಿ, ಪರಂಪರೆಯ ಎಳೆಯಾಗಿ ಹೇಗೆ ಅವು ನಮ್ಮನ್ನು ಪ್ರಭಾವಿಸುತ್ತವೆ ಎಂಬುದನ್ನು ಈ ಮೂಲಕ ಹೇಳಲು ಪ್ರಯತ್ನಿಸಿದ್ದೇನೆ.

ಇಂದು ನಾವು ಎಷ್ಟೇ ನಾಸ್ತಿಕರು ಎಂದುಕೊಂಡರೂ ದೇವರುಗಳ ಸಂಪರ್ಕ ಕಳಚಿಕೊಂಡು ಇರಲು ಸಾಧ್ಯವೇ ಇಲ್ಲ. ನಾವು ಬೇಡವೆಂದರೂ ದೇವರುಗಳು ನಮಗೆ ಹತ್ತಿರವಾಗುತ್ತವೆ. ನಾವು ಆರಾಧಿಸಲೇಬೇಕೆಂದೇನೂ ಇಲ್ಲ. ದ್ವೇಷಿಸುವುದು ಕೂಡ ಆರಾಧನೆಯ ಇನ್ನೊಂದು ತುದಿಯೇ ತಾನೇ? ಪರಸ್ಪರ ಸಂಪರ್ಕವಂತೂ ಕಡಿದು ಹಾಕುವಂತದ್ದಲ್ಲ. ನಮ್ಮ ದೃಷ್ಟಿ ಸಕಾರಾತ್ಮಕವೋ ನಕಾರಾತ್ಮಕವೋ. ಆದರೆ ದೇವರುಗಳ ಪ್ರಭಾವದಿಂದ ನಾವು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದು ನನ್ನ ತರ್ಕ. ನನ್ನ ಈ ಮಾತಿಗೆ ಪುಷ್ಟಿಯೊದಗಿಸುವಂಥ ಖ್ಯಾತ ಚಿಂತಕ ಆಶಿಶ್‌ನಂದಿ ಅವರ ಮಾತುಗಳನ್ನು ನೋಡಿ. "ನನಗೆ ದೇವರುಗಳನ್ನು ಸಮೀಪಿಸುವ ಇಷ್ಟವಿಲ್ಲದಿದ್ದರೂ ಒತ್ತಾಯದಿಂದ ಅವರೇ ನನ್ನ ಸಮೀಪಕ್ಕೆ ಬರುತ್ತಿದ್ದಾರೆ. ಈ ದೇವ ದೇವಿಯರು, ನಾನು ಹಾಗೆ ಹೇಳಬಹುದಾದರೆ, ಅನಿವಾರ್ಯ ತರ್ಕವೆಂಬಂತೆ ನಮ್ಮ ಬದುಕಿಗೆ ಬರುತ್ತಾರೆ. ಜಾಡ್ಯದಂತೆ ಈ ಬದುಕಿಗೆ ಅಂಟುತ್ತಾರೆ, ಆವರಿಸಿ ಆಕ್ರಮಿಸಿ ನಾವು ಬಯಸದಿದ್ದರೂ ನಮ್ಮ ಬದುಕಿನಾದ್ಯಂತ ವ್ಯಾಪಿಸುತ್ತಾರೆ. ಮೇಲ್ನೋಟಕ್ಕೆ ದೇವದೇವಿಯರನ್ನು ನಿರಾಕರಿಸುವಂತೆ ಕಾಣುವ ಧರ್ಮಗಳಲ್ಲೂ ಕೂಡಾ, ದೇವತೆಗಳಿಂದ ತುಂಬಿದ ಧರ್ಮಗಳಲ್ಲಿ ಕಾಣುವ ಕೆಲವು ರೂಢಿಗಳ ಮೂಲಕ, ದೇವದೇವಿಯರು ಪ್ರವೇಶ ಮಾಡುತ್ತಾರೆ. ಅತ್ಯಂತ, ನಿಷ್ಠ ಏಕದೇವತಾವಾದಿ ಹಾಗೂ ಕಟು ಮೂರ್ತಿವಿರೋಧಿ ಧರ್ಮಗಳಲ್ಲೂ ಕೂಡಾ ದೇವತೆಗಳು ಇದ್ದಾರೆ. ದೇವರುಗಳು ನಮ್ಮ ಬದುಕನ್ನು ವ್ಯಾಪಿಸಿಕೊಂಡಿದ್ದಾರೆ ಎಂದು ಹೇಳಿದ್ದರ ಅರ್ಥವು ಒಬ್ಬ ಆಧುನಿಕಗೊಂಡ ನಗರೀಕೃತ ಸುಸಂಸ್ಕೃತ ವ್ಯಕ್ತಿಯು ಹೀಗೆ ಹೇಳುವುದಕ್ಕಿಂತ ಭಿನ್ನವಾದದ್ದು ಅಥವಾ ಒಬ್ಬ ವಿಚಾರವಾದಿಯು ದೇವರು ತನ್ನ ಭಕ್ತನ ಬದುಕನ್ನು ವ್ಯಾಪಿಸುವ ಪ್ರಕ್ರಿಯೆಯನ್ನು ಗ್ರಹಿಸುವುದಕ್ಕಿಂತ ವಿಭಿನ್ನವಾದದ್ದು. ನಾನು ಹೇಳುತ್ತಿರುವುದು ದೇವದೇವಿಯರು ಹೆಚ್ಚು ಕಮ್ಮಿ ಮನುಷ್ಯ ಅರೆಮನುಷ್ಯ ರೂಪಗಳಲ್ಲಿಯೇ ನಮ್ಮ ಬದುಕನ್ನು ಪ್ರವೇಶಿಸುತ್ತಾರೆ ಎನ್ನುವುದನ್ನು. ಪ್ರಪಂಚದ ಈ ಭಾಗದಲ್ಲಿ, ಅಂದರೆ ದಕ್ಷಿಣ ಏಶಿಯಾದಲ್ಲಿ, ದೇವರು ಮತ್ತು ಮನುಷ್ಯರು ಪರಸ್ಪರ ಅಷ್ಟೇನೂ ದೂರದವರಲ್ಲ. ಬೇರೆ ಹಲವು ಸಂಸ್ಕೃತಿಗಳಲ್ಲಿ ಕಾಣುವುದಕ್ಕಿಂತ ಭಿನ್ನವಾಗಿ ಇಲ್ಲಿ ದೇವರು ಮತ್ತು ಮಾನವರ ನಡುವೆ ಅಂತರ ಕಡಿಮೆ. ಆದ್ದರಿಂದಲೇ ಇಲ್ಲಿ ಮನುಷ್ಯ ಕೆಲವೊಮ್ಮೆ ದೇವರನ್ನು ತನಗೆ ಬೇಕಾದಂತೆ ಬಣ್ಣಿಸಿಕೊಳ್ಳಲು ಸಾಧ್ಯ. ತಪಸ್ಸಿನ ಮೂಲಕ, ವಿವಿಧ ಆಚಾರಗಳ ಮೂಲಕ ಅಥವಾ ಕೆಲವೊಮ್ಮೆ ಅಧಿಕ ಶಕ್ತಿಯ ಬೇರೊಂದು ದೇವರನ್ನು ಒಲಿಸಿಕೊಳ್ಳುವ ಮೂಲಕ ಆತ ಇದನ್ನು ಸಾಧಿಸಿಕೊಳ್ಳಬಲ್ಲ. ಅರ್ಥಾತ್ ಮಾನವರು ಯಾವತ್ತೂ ದೇವರಿಗಿಂತ ಕೆಳಗಿನ ಸ್ತರದಲ್ಲೇ ಇರುವುದು ಅನಿವಾರ್ಯವೇನೂ ಅಲ್ಲ. ಅದ್ದರಿಂದ ಇಲ್ಲಿ ದೇವರು

PDF created with pdfFactory Pro trial version www.pdffactory.com

ಮತ್ತು ಮಾನವರ ನಡುವೆ ಬೃಹತ್ ಕಂದರವೇನೂ ಇಲ್ಲ. ದೇವದೇವಿಯರು ಅದರಲ್ಲೂ ವಾಮಮಾರ್ಗದ ದೇವದೇವಿಯರು ಆಯಾ ಕಾಲದ ಸಾಮಾಜಿಕ ಚಲನೆಗಳ ಮೇಲೆ ಬೆಳಕು ಚೆಲ್ಲುತ್ತಾರೆ. ಆಯಾ ಸಮಾಜ ಸಂಸ್ಕೃತಿಯ ಭಯ ಆತಂಕಗಳನ್ನು ಪ್ರತಿನಿಧಿಸುತ್ತಾರೆ. ಧರ್ಮಶಾಸ್ತ್ರಗಳನ್ನು ಎಷ್ಟೇ ಶಿಸ್ತಿನಿಂದ ವಿಶ್ಲೇಷಿಸಿದರೂ ಅಥವಾ ಉಚ್ಚ ಸಂಸ್ಕೃತಿಯ ದೇವತೆಗಳನ್ನು ಎಷ್ಟೇ ಶಾಸ್ತ್ರೀಯವಾಗಿ ಅಭ್ಯಾಸ ಮಾಡಿದರೂ ದೊರಕದ ಒಳನೋಟಗಳು ನಮಗಿಲ್ಲಿ ಲಭ್ಯವಾಗುತ್ತವೆ. ದೇವದೇವಿಯರು ಈ ಜಗತ್ತೇನಿದೆ ಅದು, ಭೂತ ದೆವ್ವ ರಾಕ್ಷಸರ ಇನ್ನೊಂದು ಜಗತ್ತಿನೊಂದಿಗೆ ಪೂರ್ಣವಾಗಿ ಬೆಸೆದುಕೊಂಡಿದೆ. ಆ ಜಗತ್ತಿಲ್ಲದೇ ಈ ಜಗತ್ತು ಇಲ್ಲ ಎನ್ನುವಷ್ಟರಮಟ್ಟಿಗೆ ಅವುಗಳ ನಡುವೆ ಸಂಬಂಧವಿದೆ. ಇದನ್ನು ಸುರ ಅಸುರರ ಕಲ್ಪನೆಯೆನ್ನಬಹುದು. ಆದಿತ್ಯ ದೈತ್ಯರ ಕಲ್ಪನೆಯೆನ್ನಬಹುದು, ಒಟ್ಟಿನಲ್ಲಿ ದೇವತೆಗಳು ಆ ಇನ್ನೊಂದು ಜಗತ್ತಿನ ತಮ್ಮ ಪ್ರತಿದ್ವಂದ್ವಗಳೊಂದಿಗೆ ಸೇರದೇ ಸಂಪೂರ್ಣರಾಗುವುದಿಲ್ಲ. ಈ ಒಟ್ಟು ಜಗತ್ತನ್ನು ನೀವು ಬೇಕಾದರೆ ಉದ್ದ, ಅಗಲ, ಆಳಗಳಿರುವ ಒಂದು ಅವಕಾಶವೆಂದು ಕಲ್ಪಿಸಬಹುದು. ಈ ಅವಕಾಶದ ಒಂದರ್ಧದಲ್ಲಿ ದೇವದೇವಿಯರಿದ್ದಾರೆ. ಅವರಲ್ಲಿ ಮತ್ತೆ ಒಳ್ಳೆಯವರು ಕೆಟ್ಟವರು ಸದಾಚಾರದವರು ವಾಮಾಚಾರದವರು ಬೇರೆ ಬೇರೆ ಜಾಗಗಳಲ್ಲಿದ್ದಾರೆ. ಹಾಗೆಯೇ ಇನ್ನೊಂದು ಇಡಿಯ ಅರ್ಧದಲ್ಲಿ ಭೂತ ದೆವ್ವಗಳ ಜಗತ್ತಿದ್ದು ಅದು ಮೊದಲರ್ಧದೊಂದಿಗೆ ಬೇರ್ಪಡಿ ಸಲಾಗದಂತೆ ಬೆಸೆದುಕೊಂಡಿದೆ. ಹೀಗೆ ದೇವರು ಮತ್ತು ದಾನವರ ಜಗತ್ತಿನ ನಡುವೆ ಸೀಮಾರೇಖೆ ಮಸುಕಾಗಿರುವ ಕಾರಣದಿಂದಲೇ ನಮ್ಮ ಸಮಾಜದಲ್ಲಿ ಒಂದು ವಿಶಿಷ್ಟ ರೀತಿಯ ಸಹನೆ ಸಹಬಾಳ್ವೆಗಳು ಸಾಧ್ಯವಾಗಿವೆ."[೫]

ಈ ದೇವರುಗಳ ಜಗತ್ತು ಅತ್ಯಂತ ಸಂಕೀರ್ಣವಾದುದು. ಈ ಜಗತ್ತಿನ ಸಾಂಸ್ಕೃತಿಕ ಮುಖ ಒಂದಾದರೆ ಸಾಮಾಜಿಕ ಮುಖ ಇನ್ನೊಂದು. ಇವೆರಡನ್ನು ಒಟ್ಟಾಗಿ ಇಟ್ಟೇ ನಾವು ನೋಡಬೇಕಾಗುತ್ತದೆ. ದೇವರು ಸೃಷ್ಟಿಯಾದದ್ದು ಹೇಗೆ? ಇದೊಂದು ಜಟಿಲ ಪ್ರಶ್ನೆ. ಲಕ್ಷಾಂತರ ವರ್ಷಗಳ ಮಾನವನ ಇತಿಹಾಸದಲ್ಲಿ ನಿರಂತರವಾಗಿ ವಿಕಾಸ ಹೊಂದುತ್ತಾ ಬಂದ ಅವನ ಪ್ರಜೆ ಇವತ್ತಿಗೂ ಅದೇ ವಿಕಾಸದ ಹಾದಿಯಲ್ಲೇ ಇದೆ. ಮೆದುಳು ಬೆಳೆಯುತ್ತಾ ಹೋದಂತೆ ಅವನ ಪ್ರಜ್ಞೆ ಕೂಡ ಹಲವು ಹಂತಗಳಲ್ಲಿ ವಿಕಸಿಸುತ್ತಾ ನಡೆದಿದೆ. ಆದ್ದರಿಂದ ಸಾಂಸ್ಕೃತಿಕವಾಗಿ ಇವೊತ್ತು ನಮ್ಮ ಕಣ್ಣ ಮುಂದಿರುವ ಯಾವುದೇ ಅಂಶವೂ ದಿಢೀರನೆ ಅವತರಿಸಿದ್ದಂತೂ ಅಲ್ಲ. ಮಾನವಶಾಸ್ತ್ರದ ಆಳ ಅಧ್ಯಯನವಷ್ಟೇ ಇದಕ್ಕೆಲ್ಲ ಉತ್ತರಿಸಬೇಕು. ಆದರೂ ಉತ್ತರ ಅಷ್ಟು ಸುಲಭವಲ್ಲ. ಆದರೂ ಇವತ್ತಿನ ಮನುಷ್ಯ ಯಾವ ರೀತಿಯಲ್ಲೇ ಬದುಕುತ್ತಿರಲಿ, ಎಷ್ಟೇ ನಾಗರಿಕನಾಗಿ ತನ್ನ ವ್ಯವಹಾರವನ್ನು ವಿಸ್ತರಿಸಿಕೊಂಡಿರಲಿ, ದೇವರು ಇಲ್ಲವೇ ಇಲ್ಲ

ಎಂಬ ನಾಸ್ತಿಕವಾದವನ್ನು ಮಂಡಿಸುವಷ್ಟು ಪ್ರಜ್ಞಾವಂತನಾಗಿರಲಿ, ಆ ಎಲ್ಲಾ ಅನಿಸಿಕೆಗಳಿಗೆ ಒಂದು ಸುದೀರ್ಘ ಇತಿಹಾಸವಂತೂ ಇದೆ. ನಾಸ್ತಿಕವಾದ ಹುಟ್ಟುವುದು ಕೂಡ ಅಸ್ತಿತ್ವದಲ್ಲಿರುವ ಯಾವುದೋ ಒಂದರ ಆಧಾರದ ಮೇಲೆ ತಾನೇ? ಹೀಗೆಂದು ದೇವರು ಇದ್ದಾನೆ ಅಥವಾ ಇಲ್ಲ ಎಂಬ ತರ್ಕಮಂಡನೆಯ ಕಾರ್ಯವನ್ನು ನಾನಿಲ್ಲಿ ಮಾಡುತ್ತಿಲ್ಲ. ಆದರೆ ದೇವರನ್ನು ಮನುಷ್ಯನೇ ಸೃಷ್ಟಿಸಿದ ಪ್ರಕ್ರಿಯೆ ಹೇಗೆ ಆರಂಭವಾಯಿತು ಎಂಬುದೇ ಇಲ್ಲಿಯ ಪ್ರಶ್ನೆ.

ಮನುಷ್ಯ ಎರಡು ಕಾರಣಕ್ಕೆ ದೇವರನ್ನು ಕಲ್ಪಿಸಿಕೊಂಡ ಎಂಬ ವಾದಗಳಿವೆ. ಪ್ರಕೃತಿಯ ಎಲ್ಲ ವೈಚಿತ್ರ್ಯಗಳನ್ನು, ಬಿಡಿಸಲಾರದ ನಿಗೂಢಗಳನ್ನು ಗಮನಿಸಿದ ಆದಿಮ ಮನುಷ್ಯ ತನ್ನನ್ನೂ ಮೀರಿದ ಅಗೋಚರ ಶಕ್ತಿಯೊಂದಿದೆ ಎಂದು ನಂಬಿದ. ಆ ಶಕ್ತಿಯನ್ನು ಒಲಿಸಿಕೊಳ್ಳುವ ಮೂಲಕ ತನ್ನ ಒಳ್ಳೆಯದನ್ನು ಸಾಧಿಸಿಕೊಳ್ಳಬೇಕು ಎಂಬುದು ಅವನ ಉದ್ದೇಶವಾಯಿತು. ಯಾಕೆಂದರೆ ನಿಸರ್ಗದ ಒಡಲಲ್ಲಿ ಬಾಳುತ್ತಿದ್ದ ಅವನಿಗೆ ಸಹಜವಾಗಿಯೇ ನೂರೆಂಟು ಕಂಟಕಗಳು ಎದುರಾಗುತ್ತಿದ್ದವು. ಆದ್ದರಿಂದ ಅಗೋಚರ ಶಕ್ತಿಯನ್ನು ಒಲಿಸಿಕೊಳ್ಳುವ ಮೂಲಕ ತನಗೆ ಒದಗುವ ಕಂಟಕಗಳಿಂದ ಪಾರಾಗಬೇಕು ಎಂಬುದು ಅವನ ತರ್ಕವಾಗಿತ್ತು. ಹೀಗಾಗಿ ಆರಂಭದ ಅವನ ದೇವರ ಕಲ್ಪನೆಯ ಹಿಂದೆ ತಾನು ದೇವರ ಕೃಪೆಯಿಂದ ದೊಡ್ಡವನಾಗಬೇಕು, ಸಂಪಾದಿಸಬೇಕು ಎಂಬ ಸ್ವಾರ್ಥಕ್ಕಿಂತ, ತನಗೆ ಒದಗುವ ಕಷ್ಟಗಳಿಂದ ಪಾರಾಗಬೇಕು ಎಂಬ ಸಹಜ ಉದ್ದೇಶವಿತ್ತು.

ಆದ್ದರಿಂದ ಅಗೋಚರ ಶಕ್ತಿಯನ್ನು ಒಲಿಸಿಕೊಳ್ಳುವ ಬಗೆ ಹೇಗೆ? ಅವನು ಎರಡು ರೀತಿಯಲ್ಲಿ ದೈವವನ್ನು ಅಥವಾ ಆ ಶಕ್ತಿಯನ್ನು ಗೆಲ್ಲುವ ಪ್ರಯತ್ನ ಮಾಡಿದ.

೧. ಮಾಟದ ಮೂಲಕ ನಿಯಂತ್ರಿಸುವುದು

೨. ಆರಾಧನೆಯ ಮೂಲಕ ಒಲಿಸಿಕೊಳ್ಳುವುದು.

ಮಾಟದ ಮೂಲಕ ಅಗೋಚರ ಶಕ್ತಿಯನ್ನು ನಿಯಂತ್ರಿಸಿ ತನ್ನ ಕಂಟಕಗಳನ್ನು ದೂರ ಮಾಡಿಕೊಳ್ಳುವ ಕಲ್ಪನೆ ಆದಿಮಾನವನದ್ದು. ಈ ಮಾಂತ್ರಿಕತೆಯೇ ಮುಂದೆ ವಿಜ್ಞಾನವಾಗಿ ಬೆಳೆಯಿತು ಎಂಬುದು ಅನೇಕ ಮಾನವಶಾಸ್ತ್ರಜ್ಞರ ವಾದ. ಮಾಂತ್ರಿಕ ಮನಸ್ಸು ವಿಜ್ಞಾನವನ್ನು ಬೆಳೆಸಿತು ಎಂಬುದು ನಿಜ. ಆದರೆ, ಈ ಮಾಂತ್ರಿಕತೆ ಪೂರಾ ವಿಜ್ಞಾನವಾಗಿ ಪರಿವರ್ತನೆಯಾಗಲಿಲ್ಲ. ಮಾಂತ್ರಿಕ ರೂಪದ ಅನೇಕ ಆಚರಣೆಗಳು ಹಾಗೇ ಉಳಿದು ಬಂದವು. ಅವು ಅನೇಕ ಆಚರಣೆಗಳ ರೂಪದಲ್ಲಿ, ಕಲೆಗಳ ರೂಪದಲ್ಲಿ, ವಿಧಿನಿಷೇಧಗಳ ರೂಪದಲ್ಲಿ ಇಂದಿಗೂ ನಮ್ಮ ಜನಪದ ಜೀವನದಲ್ಲಿ ಉಳಿದು ಬಂದಿವೆ. ಡಾ.ದೇವಿಪ್ರಸಾದ ಚಟ್ಟೋಪಾಧ್ಯಾಯ ಅವರು ಇವತ್ತಿನ ಒಂದು ವ್ರತದ ಉದಾಹರಣೆಯನ್ನು ಕೊಟ್ಟು, ಅದು ಹೇಗೆ ಮಾಂತ್ರಿಕ

PDF created with pdfFactory Pro trial version www.pdffactory.com

ಈಡೇರಬೇಕು. ಆದರೆ, ವ್ರತದ ಅರ್ಥ ಇದರಿಂದ ಪೂರ್ತಿಯಾಗಿ ಭಿನ್ನವಾಗಿದೆ. ಕರುಣೆಯ ಭಿಕ್ಷೆಯನ್ನು ಬೇಡುವ ಪ್ರಯತ್ನ ವ್ರತದಲ್ಲಿ ಸುತಾರಂ ಇಲ್ಲ. ಅದರಲ್ಲಿರುವ ಭಾವನೆ ಒಂದು ರೀತಿಯ ಆಜ್ಞೆಯ ತರಹದ್ದು. ಉದಾಹರಣೆಗೆ, ರಂಗೋಲಿಯಲ್ಲಿ ನದಿಯನ್ನು ಬಿಡಿಸುವುದು, ಅದರ ಮೇಲೆ ಹೂ ಇಡುವುದು ಮತ್ತು ಹಾಡಿನ ರೂಪದಲ್ಲಿ ಮನೋಭಿಲಾಷೆಯನ್ನು ಪ್ರಕಟಿಸುವುದು ಹೀಗೆ ಮಾಡುವುದರಿಂದ ನದಿಯ ಮನಸ್ಸಿನಲ್ಲಿ ದಯಾಭಾವ ಮೂಡುತ್ತದೆಂಬ ಭಾವನೆ ಸರ್ವಥಾ ಅಲ್ಲ. ಅಲ್ಲಿರುವ ಭಾವನೆಯೇ ಬೇರೆ. ಪ್ರಸ್ತುತ ಮನೋಭಿಲಾಷೆಯನ್ನು ಪೂರೈಸಲು ನದಿಯು ಅಸಮರ್ಥವಾಗಿದೆ. ರಂಗೋಲಿ, ಹೂವು ಮತ್ತು ಹಾಡುಗಳಿಂದ ನದಿಯನ್ನು ವಶ ಮಾಡಿಕೊಳ್ಳುವ ಆಶಯ ಇಲ್ಲಿದೆ. ಅಂದರೆ, ಮನೋಭಿಲಾಷೆಯು ಈಡೇರಿಕೆಗೆ ದಯೆಯ ಭಿಕ್ಷೆ ಬೇಡುವ ಭಾವನೆ ವ್ರತಕ್ಕೆ ಹೊರತಾದದ್ದು. ವ್ರತ ಮತ್ತು ಪೂಜೆಗಳಲ್ಲಿ ಹೂವಿನ ಪಾತ್ರ ಭಿನ್ನ ಭಿನ್ನವಾಗಿದೆ. ವ್ರತದಲ್ಲಿ ಹೂವುಗಳು ಸಾಕ್ಷಿ ಇದ್ದಂತೆ. ನದಿಯನ್ನು ಬಿಡಿಸಿ ವಶಮಾಡಿಕೊಳ್ಳುವುದಕ್ಕೆ ಹೂವುಗಳು ಸಾಕ್ಷಿ.

ಮಾಟದ ರೇಖಾ ಚಿತ್ರ

ಪ್ರಾಚೀನ ಮನುಷ್ಯನಿಗೆ ನೃತ್ಯ, ಗಾನ, ಚಿತ್ರ, ಪದ್ಮ ಎಲ್ಲ ಒಂದಕ್ಕೊಂದು ಅಂಟಿ ನಿಲ್ಲುತ್ತವೆ. ಅದೆಲ್ಲದರ ಹಿಂದೆ ಇರುವ ಮೂಲಭೂತವಾದ ಸಂಗತಿ ಎಂದರೆ ಜೀವಿಸಲು ಪ್ರಯತ್ನ. ಕೆಲಸ ಕಾರ್ಯಗಳಿಗೆ ಪ್ರೇರಣೆ. ಇವುಗಳೆಲ್ಲ ಯಾವ ನಂಬಿಕೆಯಲ್ಲಿ ಕೇಂದ್ರೀಕರಿಸಲ್ಪಟ್ಟಿದೆಯೋ ಅದನ್ನೇ ನಾವು ಮಂತ್ರ ವಿದ್ಯೆ ಎನ್ನುತ್ತೇವೆ.[೬]

ಇಂದು, ಮಾಟಮಂತ್ರದ ಮೂಲಕ ಪ್ರಕೃತಿಯನ್ನು ಒಲಿಸಿಕೊಳ್ಳುವ ಕಾರ್ಯ ನಿಂತಿದೆ ಎಂದೇನೂ ನಾವು ಹೇಳುವಂತಿಲ್ಲ. ನಮ್ಮ ನಡುವಿನ ಆಧುನಿಕ ವಿಜ್ಞಾನ ಪರೋಕ್ಷವಾಗಿ ಅದನ್ನೇ ಮಾಡುತ್ತಿದೆ. ಇದು ಮನುಷ್ಯನ ಬದುಕಿನ ಒಂದು ಆಯಾಮ. ಆರಂಭದಲ್ಲಿ ತನ್ನ ಉಳಿವು ಮತ್ತು ಅಸ್ತಿತ್ವಕ್ಕಾಗಿ ಅನುಕರಣೆಯ ಮೂಲಕ ಪ್ರಕೃತಿಯಲ್ಲಿನ ಅಗೋಚರ ಶಕ್ತಿಯನ್ನು ಒಲಿಸಿಕೊಳ್ಳಲು ಯತ್ನಿಸಿದ ಮನುಷ್ಯ, ಬರುಬರುತ್ತಾ ಆ

ಆಚರಣೆ ಎಂಬುದನ್ನು ಸೊಗಸಾಗಿ ನಿರೂಪಿಸಿದ್ದಾರೆ. ಅದರ ವಿವರವನ್ನು ಇಲ್ಲಿ ಕೊಡುವುದು ಸೂಕ್ತ ಎಂದುಕೊಂಡಿದ್ದೇನೆ. "ಎಲ್ಲಿಯವರಗೆ ಟೋಟಂ ಪಂಗಡವು ಬಿಗಿಯಾಗಿತ್ತೋ, ಅಂದರೆ ಪಂಗಡದ ವ್ಯಕ್ತಿಗಳೆಲ್ಲಾ ಸಮಾನರಾಗಿ ಎಲ್ಲಿಯವರೆಗೆ ಎಣಿಸಲ್ಪಡುತ್ತಿದ್ದರೋ, ಅಲ್ಲಿಯವರೆಗೆ ಮನುಷ್ಯ ಪೂಜೆ ಮಾಡುವುದನ್ನು ಕಲಿಯಲಿಲ್ಲ, ಪ್ರಾರ್ಥನೆ ಸಲ್ಲಿಸುತ್ತಿರಲಿಲ್ಲ. ದೇವತೆಗಳ ಪಾದಗಳಲ್ಲಿ ತಲೆ ಬಗ್ಗಿಸುವುದು, ಹರಕೆ ಕಟ್ಟುವುದು, ಇವೆಲ್ಲಾ ಅವನಿಗೆ ಗೊತ್ತಿರಲಿಲ್ಲ. ಅಂದರೆ ಅಲ್ಲಿಯವರೆಗೆ ಧರ್ಮವೆಂಬ ಹೆಸರಿನ ಯಾವುದೂ ಮನುಷ್ಯನ ಮಿದುಳಿನಲ್ಲಿ ಮನೆ ಮಾಡಿಕೊಂಡಿರಲಿಲ್ಲ. ದೇವತೆಗಳ ಜನ್ಮವೇ ಇನ್ನೂ ಆಗದಿದ್ದಾಗ ಧರ್ಮವೆಂಬುದರಲ್ಲಿ ನಂಬಿಕೆ ಹೇಗೆ ತಾನೆ ಬಂದಿತು! ಇದಕ್ಕೆ ನಮ್ಮಲ್ಲಿ ಏನು ನಿದರ್ಶನವಿದೆ? ಉತ್ತರವಾಗಿ ಎರಡು ನಿದರ್ಶನಗಳನ್ನು ನಾವು ನೋಡಬಹುದು. ಮೊದಲನೆಯದು ನಾಗರಿಕ ಮನುಷ್ಯನ ವ್ಯವಹಾರಗಳಲ್ಲಿ ಇಂದಿಗೂ ಅದರ ಛಾಯೆ ಉಳಿದು ಬಂದಿದೆ. ಎರಡನೆಯದು ಇಂದಿಗೂ ಆದಿಮ ಅನಾಗರಿಕ ಹಂತದಲ್ಲೇ ಉಳಿದಿರುವವರನ್ನು ನೋಡಿದರೆ ತಿಳಿಯುತ್ತದೆ. ಅವರ ನಂಬಿಕೆಗಳನ್ನು ತೂಗಿ ನೋಡಿದರೆ ಅವರಲ್ಲಿ ಧರ್ಮದಲ್ಲಿನ ನಂಬಿಕೆ ಎನ್ನಬಹುದಾದಂತ ಹುದ್ದು ಏನೂ ಇಲ್ಲವೆಂದು ತಿಳಿಯುತ್ತದೆ.

ನಮ್ಮ ದೇಶದ ಹಳ್ಳಿ ಹಳ್ಳಿಗಳಲ್ಲಿಯೂ ಹೆಂಗಸರು ವ್ರತ ಮಾಡುವುದುಂಟು. ಈ ವ್ರತಗಳ ಅರ್ಥವಾದರೂ ಏನು. ಸ್ವಲ್ಪ ಆಳವಾಗಿ ಪರಿಶೀಲಿಸಿದರೆ ಒಂದೊಂದು ವ್ರತದ ಹಿಂದೆಯೂ ಒಂದೊಂದು ಕಾಮನೆ ಇರುವುದು ಕಂಡುಬರುತ್ತದೆ. ಇಂತಹ ಯಾವುದೋ ಫಲ ಬೇಕು, ಅದಕ್ಕೆ ಯಾವುದೋ ಒಂದು ವ್ರತ. ಇದೇ ವ್ರತದ ಪ್ರಮುಖವಾದ ಹಿನ್ನೆಲೆ. ಬಂಗಾಳದಲ್ಲಿ ಈ ವ್ರತದ ವೇಳೆಯಲ್ಲಿ ಹಲವು ಚಿಹ್ನೆಗಳನ್ನು ಚಿತ್ರದಾಕಾರದಲ್ಲಿ ಬರೆಯುವ ಪದ್ಧತಿ ಇದೆ. ನದಿ, ಸಮುದ್ರ, ಮುಳ್ಳುಗಳಿಂದ ತುಂಬಿದ ಕಾಡು, ಕಾಡುಮೃಗಗಳು, ಹೀಗೆ ಏನೋನೋ ಚಿತ್ರಗಳನ್ನು ಬಿಡಿಸುತ್ತಾರೆ. ರಂಗೋಲಿಯಲ್ಲಿ ಹೀಗೆ ಚಿತ್ರ ಬಿಡಿಸಿ ಅವುಗಳ ಮೇಲೆ ಹೂಗಳನ್ನರಿಸುವುದು ಮತ್ತು ಹೆಂಗಸರೆಲ್ಲ ಒಟ್ಟಾಗಿ ಹಾಡುವುದು ರೂಢಿ. ಈ ಹಾಡುಗಳಲ್ಲಿ ಅವರವರ ಕಾಮನೆಗಳ ಪ್ರಸ್ತಾಪ ಬರುತ್ತದೆ. ಈ ಸಂಪ್ರದಾಯ ಹೀಗೆ ಮುಂದುವರಿದಿದೆ. ಆದರೆ ಇದರ ಅಂತರ ಅರ್ಥ ಏನು? ವ್ರತವನ್ನು ನೈಜವಾಗಿ ಅರ್ಥ ಮಾಡಿಕೊಳ್ಳುವವನಿಗೆ ಈ ವಿವರಣೆಯಿಂದ ತೃಪ್ತಿ ದೊರೆಯುವುದಿಲ್ಲ. ಏಕೆಂದರೆ ಪೂಜೆ ಮತ್ತು ವ್ರತಗಳ ನಡುವೆ ಆಕಾಶ ಭೂಮಿಯಷ್ಟು ಅಂತರವಿದೆಯೆಂಬುದು ಅವರಿಗೆ ಗೊತ್ತು. ಪೂಜೆ ಎಂದರೇನು? ದೇವರ ಪಾದದಲ್ಲಿ ಹೂವನ್ನು ಅರ್ಪಿಸುವುದು ಮತ್ತು ಅವನಿಂದ ಸ್ವಂತಕ್ಕೆ ಏನಾದರೂ ದಯೆಯನ್ನು ಪಡೆಯುವುದು ಪೂಜೆಯೆನಿಸಿಕೊಳ್ಳುತ್ತದೆ. ದೇವರು ಪ್ರಸನ್ನವಾಗಬೇಕು ಮತ್ತು ನಮ್ಮ ಮನೋಭಿಲಾಷೆ

PDF created with pdfFactory Pro trial version www.pdffactory.com

ನಿಗೂಢ ಶಕ್ತಿಯ ಆರಾಧನೆಗೂ ತೊಡಗಿದ. ಇಲ್ಲಿ ಎರಡು ವಿಚಾರಗಳು ಬಹಳ ಮುಖ್ಯವಾಗುತ್ತವೆ.

ಒಂದು ಪ್ರಕೃತಿಯ ಘಟನೆಗಳ ಅನುಕರಣಾತ್ಮಕ ಮಂತ್ರ ವಿದ್ಯೆಯ ಬೆಳವಣಿಗೆ ಮೌನವಾಗಿ, ನಂತರ ವಿಜ್ಞಾನವಾಗಿ ರೂಪ ಪಡೆದದ್ದು;.

ಎರಡು – ನಿಸರ್ಗದ ನಿಗೂಢವನ್ನು ಆರಾಧಿಸುವ ಮೂಲಕ, ಅಂಥ ಆರಾಧನೆಗೆ ಒಂದು ರೂಪ ಕೊಟ್ಟುಕೊಳ್ಳುವ ಮೂಲಕ ಧರ್ಮದ ಉಗಮವಾದದ್ದು.

ನಿಸರ್ಗದಲ್ಲಿ ಎರಡು ರೀತಿಯ ಚೈತನ್ಯಗಳಿದ್ದವು. ಒಂದು ಪೊರೆಯುವ ಚೈತನ್ಯವಾದರೆ, ಇನ್ನೊಂದು ನಾಶ ಮಾಡುವ ಚೈತನ್ಯ. ಮಳೆ ಗಾಳಿ ಬೆಂಕಿ ಇಂಥ ಚೈತನ್ಯ ಪಡೆದಿದ್ದವು. ಮನುಷ್ಯನ ಹುಟ್ಟಿಗೆ ಕಾರಣವಾಗುವ ನಿಸರ್ಗವೇ ಅವನ ಸಾವಿಗೂ ಕಾರಣವಾಗುತ್ತಿತ್ತು. ಇಂಥ ಸಂದರ್ಭದಲ್ಲಿ ಆ ಅಗೋಚರ ಶಕ್ತಿಯನ್ನು ಒಲಿಸಿಕೊಳ್ಳುವ ಅಥವಾ ನಿಯಂತ್ರಿಸುವ ಪ್ರಕ್ರಿಯೆಯಲ್ಲಿ, ಆ ಶಕ್ತಿಗೆ ಅವನೊಂದು ರೂಪ ಕೊಟ್ಟು ತನ್ನ ಕಲ್ಪನೆಯನ್ನು ವಿಸ್ತರಿಸಿದ.

ರೂಪ ಅಂದರೆ ಬರೀ ರೂಪವಲ್ಲ. ಒಂದು ಸಂಕೇತ ಎಂದು ನಾವು ಅಂದುಕೊಳ್ಳಬಹುದು. ಈಗ ಮತ್ತೆ ನಾನು ನನ್ನ ಅಪ್ಪ ಕೈಗೊಳ್ಳುತ್ತಿದ್ದ ಹೊಲ ಕೊಯ್ಯುವ ಮೊದಲಿನ ಆಚರಣೆಯನ್ನು ನೆನಪಿಸಬಯಸುತ್ತೇನೆ. ಮೂರು ಕಲ್ಲುಗಳನ್ನು ಇಟ್ಟು ಅವುಗಳಿಗೆ ಕುಂಕುಮ ಹಚ್ಚಿ ಹೂ ಇಟ್ಟು ಪೂಜಿಸುತ್ತಿದ್ದ ರೀತಿ. ಮೂರು ಕಲ್ಲುಗಳಲ್ಲಿ ಒಂದು ಭೂಮಿ ತಾಯಿ, ಇನ್ನೊಂದು ಮಳೆರಾಯ, ಮತ್ತೊಂದು ಬೆನವಣ್ಣ. ಸೃಷ್ಟಿಸುವ ಪೊರೆಯುವ ಮತ್ತು ರಕ್ಷಿಸುವ ಸಂಕೇತಗಳು ಆ ಮೂರು ಕಲ್ಲುಗಳು. ಅನಂತರದ ಸಾವಿರಾರು ವರ್ಷಗಳ ಮನುಷ್ಯನ ಇತಿಹಾಸದಲ್ಲಿ ಭೂಮಿತಾಯಿಗೆ ದೇವತೆಯ ರೂಪವೂ ಆರೋಪಿಸಲ್ಪಟ್ಟವು. ಅಥವಾ ಆ ರೀತಿಯ ದೈವಕಲ್ಪನೆಯ ಚಿಂತನೆ ವಿಕಾಸಗೊಂಡಿತು.

ಅವರು ದ್ರಾವಿಡರೋ ಆರ್ಯರೋ ಅಥವಾ ಮಂಗೋಲಿಯನ್ನರೋ– ಎಲ್ಲರ ಕಲ್ಪನೆ ಕಿಡಿ ಹೊಡೆದದ್ದು ಹೀಗೆಯೇ. ಬುಡಕಟ್ಟು ಪರಿಸರದಲ್ಲಿ ದೈವ ಅಥವಾ ದೆವ್ವಗಳು ರೂಪು ತಾಳಿದ್ದು ಹೀಗೆ. ಆರಾಧನೆ ಅಥವಾ ನಿಯಂತ್ರಣ ಆರಂಭವಾದದ್ದು ಹೀಗೆ. ಬರಬರುತ್ತಾ ದೈವಗಳು ಪೂಜೆಯನ್ನು ದೆವ್ವ ಭೂತಗಳು ನಿಯಂತ್ರಣ ರೂಪದ ಆಚರಣೆಗಳನ್ನೂ ಪಡೆಯುತ್ತಾ ಬಂದವು. ಇಂದು ನಮ್ಮ ಮುಂದಿರುವ ಅನೇಕ ಆರಾಧನೆ ಮತ್ತು ಆಚರಣೆಯ ಹಿನ್ನೆಲೆಯನ್ನು ಈ ರೀತಿಯಲ್ಲಿ ನಾವು ಅರ್ಥೈಸಬೇಕಾಗುತ್ತದೆ.

ನಿರ್ದಿಷ್ಟ ದೇವರು ಅಥವಾ ನಿರ್ದಿಷ್ಟ ಧರ್ಮ ಉದಯಿಸುವ ಮೊದಲು ಮನುಷ್ಯ ನಿಸರ್ಗದ ಅನೇಕ ಸಚರಾಚರ ಪ್ರಾಣಿ ಸಮುದಾಯಗಳಲ್ಲಿ ತಾನೂ

ಒಬ್ಬನಾಗಿ ಬದುಕುತ್ತಿದ್ದ. ಗುಂಪು ಗುಂಪುಗಳಲ್ಲಿ ವಾಸಿಸುತ್ತಿದ್ದ. ಅವರಿಗೆ, ತಮ್ಮ ತಮ್ಮ ಗುಂಪುಗಳ ಗುರುತು ಹೇಳಿಕೊಳ್ಳಲು ಏನಾದರೂ ಆಧಾರ ಬೇಕಾಗಿತ್ತು. ಆಯಾ ಪ್ರದೇಶದಲ್ಲಿ ತಮ್ಮನ್ನು ಪ್ರಭಾವಿಸಿದ ಪ್ರಾಣಿ, ಸಸ್ಯ, ನದಿ, ಬೆಟ್ಟ ಅಥವಾ ವಸ್ತುವಿನ ಹೆಸರನ್ನು ತಮ್ಮ ತಮ್ಮ ಗುಂಪಿನ ಲಾಂಛನವನ್ನಾಗಿ ಅವರು ಇಟ್ಟುಕೊಂಡರು. ಮುಂದೆ ಇದೇ ಅವರ ಕುಲಚಿಹ್ನೆಯಾಯಿತು. ಒಂದು ಮಾತನ್ನು ಇಲ್ಲಿ ಗಮನಿಸಬೇಕು, ಕುಲಚಿಹ್ನೆ ಅವರನ್ನು ಅವರು ಗುರುತಿಸಿಕೊಳ್ಳುವ ಸಾಧನವಾಗಿತ್ತೇ ಹೊರತು, ದೈವವಾಗಿರಲಿಲ್ಲ. ಆದರೆ, ಬರಬರುತ್ತಾ ಆಯಾ ಗುಂಪುಗಳಲ್ಲಿ ಬಲಾಢ್ಯ ಮತ್ತು ದುರ್ಬಲ ಎಂಬ ಗುಂಪುಗಳಾದವು. ಒಂದು ಮತ್ತೊಂದನ್ನು ನಿಯಂತ್ರಿಸ ಬಯಸಿತು. ಸಮಾಜದಲ್ಲಿ ತನ್ನ ಸ್ಥಾನವನ್ನು ಮೇಲೇರಿಸಿಕೊಂಡ ಲಾಂಛನ ಇತರರೂ ಅನುಸರಿಸಬೇಕಾದ ಅಥವಾ ಗೌರವಿಸಬೇಕಾದ ಸಂಗತಿಯಾಯಿತು. ಹೀಗೆ ಗೌರವಿಸಲ್ಪಟ್ಟ ಲಾಂಛನವೇ ಮುಂದೆ ದೈವವಾಗಿ ರೂಪು ಪಡೆದಿರಬೇಕು ಎಂಬುದು ಅನೇಕ ವಿದ್ವಾಂಸರ ಅಭಿಪ್ರಾಯ. ಆದರೆ ಭಾರತದಲ್ಲಿನ ದೈವಾವಸ್ಥೆಯನ್ನು ಗಮನಿಸಿದರೆ ಈ ರೀತಿಯಲ್ಲಿ ಟೋಟೆಂಗಳು ದೈವಗಳಾಗಿರುವ ಉದಾಹರಣೆ ತೀರಾ ವಿರಳ. ಹಳೇ ಶಿಲಾಯುಗದ ಕಾಲದಿಂದ ಆರಂಭವಾಗಿ ಹೊಸಶಿಲಾಯುಗ ಮತ್ತು ಕಂಚಿನ ಯುಗದಲ್ಲಿ ನಮಗೆ ಅನೇಕ ರೀತಿಯ ದೇವರುಗಳ ಮೂರ್ತಿಗಳು ಸಿಕ್ಕಿವೆ. ಗುಹೆಗಳಲ್ಲಿ ಮತ್ತು ಬಂಡೆಗಳ ಮೇಲೆ ಕೆತ್ತಿದ ಅನೇಕ ಆಕೃತಿಗಳು ದೊರಕಿವೆ. ದೇವರುಗಳ ಅಸ್ತಿತ್ವ ಅಷ್ಟು ಪ್ರಾಚೀನದಲ್ಲಿಯೇ ಇತ್ತು ಎಂಬುದಕ್ಕೆ ಅನೇಕ ಆಧಾರಗಳನ್ನು ಪುರಾತತ್ವಶಾಸ್ತ್ರಜ್ಞರು ನಿರೂಪಿಸಿದ್ದಾರೆ. ಹರಪ್ಪಾ ಮತ್ತು ಮೊಹೆಂಜದಾರೋ ಉತ್ಖನನದಲ್ಲಿ ಅನೇಕ ದೇವತೆಯರ ಆಕೃತಿಗಳು ಲಭ್ಯವಾಗಿವೆ. ಆದರೆ ಒಂದು ಅಂಶವನ್ನು ಇಲ್ಲಿ ಮುಖ್ಯವಾಗಿ ಗಮನಿಸಬೇಕು. ಭಾರತದ ಪ್ರಾಚೀನ ಪರಂಪರೆಯಲ್ಲಿ ಕಂಡುಬರುವ ಬಹುತೇಕ ದೇವರುಗಳಲ್ಲಿ ಪ್ರಮುಖ ಸ್ಥಾನ ಮಾತೃದೇವತೆಯರದ್ದು. ಎಲ್ಲೆಲ್ಲಿಯೂ ಮಾತೃವೇ ಮುಖ್ಯ. ಇದಕ್ಕೆ ಕಾರಣಗಳೇನು? ಬಹುಶಃ ಭಾರತದಲ್ಲಷ್ಟೇ ಅಲ್ಲ ಇಡೀ ಜಗತ್ತಿನ ದೈವಕಲ್ಪನೆಯಲ್ಲಿಯೂ ಮಾತೃವಿಗೇ ಪ್ರಥಮ ಸ್ಥಾನ.

ದೇವರುಗಳ ಸೃಷ್ಟಿಯಲ್ಲಿ ಕನಿಷ್ಠ ನಾಲ್ಕು ಹಂತಗಳನ್ನು ಗುರುತಿಸಬಹುದು ಎಂಬುದು ನನ್ನ ಅಭಿಪ್ರಾಯ. ಮನುಷ್ಯ ನಾಗರಿಕನಾಗಲು ಹವಣಿಸಿದ ಮೊದಲ ಘಟ್ಟ ಆಹಾರ ಸಂಗ್ರಹಣೆ. ಅಂದರೆ ತನಗೆ ಬೇಕಾದ ಅಗತ್ಯ ವಸ್ತುಗಳನ್ನು ಅರಸುತ್ತಾ ಕಾಡಿನಿಂದ ಕಾಡಿಗೆ ಅಲೆದ ಮೃಗೀಯ ಜೀವನ ಅದು. ಆದರೂ ಹಾಗೆ ಲಭ್ಯವಾದ ಆಹಾರವನ್ನು ಒಂದು ಕಡೆ ಕೂಡಿಡುವ, ಸಂರಕ್ಷಿಸುವ ಬುದ್ಧಿಯನ್ನು ಉಪಯೋಗಿಸಿದ್ದೇ ಅವನು ನಾಗರಿಕತೆ ಕಡೆಗೆ ಮುಖ ಮಾಡಿದ ಪ್ರಥಮ ಹಂತ. ಒಂದು ಗುಂಪಿನ ಜನ ಒಟ್ಟಾಗಿ ವಾಸಿಸುವ ಮೂಲಕ ತಮಗೊಂದು ಅಸ್ತಿತ್ವ ಕಂಡುಕೊಳ್ಳುತ್ತಿದ್ದ ಕಾಲ

PDF created with pdfFactory Pro trial version www.pdffactory.com

ಅದು. ಅಲ್ಲಿ ಯಾರು ಗಂಡ ಅಥವಾ ಯಾರು ಹೆಂಡತಿ ಎಂಬ ಕಲ್ಪನೆ ಇರಲಿಲ್ಲ. ಸಮೂಹ ಜೀವನ ಅದು. ಮಕ್ಕಳನ್ನು ಹಡೆಯಬಲ್ಲ ಶಕ್ತಿ ಪಡೆದ ಮಾತೃ ಮಾತ್ರ ಅಲ್ಲಿ ಮುಖ್ಯ. ಅವಳಿಗೇ ಅಲ್ಲಿ ಪ್ರಾಧಾನ್ಯ. ಆಹಾರ ಸಂಗ್ರಹಣೆಗಾಗಿ ಹೊರಟ ಗಂಡರು ಹಿಂತಿರುಗಿ ಬಂದಾಗ ಲಭ್ಯವಿದ್ದ ಹೆಂಗಸಿನ ಜೊತೆ ತನ್ನ ಲೈಂಗಿಕ ತೃಷೆ ತೀರಿಸಿಕೊಳ್ಳುತ್ತಿದ್ದ ಅಷ್ಟೇ. ಆದರೆ ಯಾರು ಮಗುವಿನ ತಾಯಿಯಾಗುತ್ತಾಳೋ ಅವಳಿಗೆ ವಿಶೇಷ ಸ್ಥಾನಮಾನ. ಅದರ ತಂದೆ ಯಾರು ಎಂಬುದು ಅಲ್ಲಿ ಮುಖ್ಯವೇ ಅಲ್ಲ. ಹೀಗಾಗಿ ತಾಯಿಯೇ ಸತ್ಯ. ಇಷ್ಟಲ್ಲದೆ ಗಂಡಸರು ಹೊರಗಿನಿಂದ ಸಂಗ್ರಹಿಸಿ ತಂದ ಆಹಾರಗಳನ್ನು ಸಂರಕ್ಷಿಸಿ ಇಡುವುದು, ಹೆತ್ತ ಮಕ್ಕಳನ್ನು ಪೋಷಿಸುವುದು ಮುಂತಾದಂತೆ ಇಡೀ ಸಮೂಹದ ಜವಾಬ್ದಾರಿ ತಾಯಿಯದೇ ಆಗಿತ್ತು. ಆದ್ದರಿಂದ ಮಾತೃವಿನ ಸ್ಥಾನ ನಿರ್ವಿವಾದವಾಗಿ ಪ್ರಾಮುಖ್ಯತೆ ಗಳಿಸಿತ್ತು. ಹೀಗಾಗಿ ಸೃಷ್ಟಿಗೆ ಕಾರಣವಾದ ಮತ್ತು ಪೋಷಣೆಗೆ ಅಗತ್ಯವಾದ ಮಾತೃವನ್ನು ಗೌರವಿಸಿ, ಆರಾಧಿಸಿದ್ದು ಕೂಡ ಅಷ್ಟೇ ಸಹಜ. ಮಾತೃವಿನ ಆರಾಧನೆ ಆರಂಭವಾದ ಮೊದಲ ಹಂತ ಇದು. ಆದ್ದರಿಂದ ನಾನೀಗಾಗಲೇ ಹೇಳಿದಂತೆ ದೈವಸೃಷ್ಟಿಯ ವಿವಿಧ ಹಂತಗಳನ್ನು ಹೀಗೆ ಪಟ್ಟಿ ಮಾಡಬಹುದು.

೧. ಮೇಲೆ ವಿವರಿಸಿದಂತೆ ಎಲ್ಲಕ್ಕೂ ಮಾತೃವೇ ಮೂಲ, ಅವಳೇ ಸತ್ಯ ಎಂಬ ಅನಾದಿಕಾಲದ ನಿಜಸ್ಥಿತಿಯ ಮೂಲಕ ರೂಪುಗೊಂಡ ಮಾತೃವಿನ ಆರಾಧನೆ. ಇದು ಆಹಾರ ಸಂಗ್ರಹಣೆಯ ಕಾಲದ ಮುಕ್ತ ಸ್ಥಿತಿಯಲ್ಲಿ ಆರಂಭಗೊಂಡದ್ದು.

೨. ಪ್ರಾಣಿಗಳನ್ನು ಪಳಗಿಸಿ ಪಶುಸಂಗೋಪನಾ ಕಾರ್ಯ ಕೈಗೊಂಡ ಹಂತದಿಂದ ಪುರುಷ ಪ್ರಾಧಾನ್ಯ ಹೆಚ್ಚಾಯಿತು. ಪುರುಷ ಪ್ರಾಧಾನ್ಯತೆಯ ಜೊತೆಗೇ ಪುರುಷ ದೈವಗಳ ಸೃಷ್ಟಿಯೂ ಆಯಿತು. ಆಯಾ ಸಮುದಾಯದ ವೀರರು ದೈವಗಳಾಗಿ ರೂಪಾಂತರಗೊಂಡ ಸ್ಥಿತಿಯಲ್ಲಿ ಅವರ ಆರಾಧನೆಯೂ ವಿವಿಧ ರೀತಿಯಲ್ಲಿ ಆರಂಭಗೊಂಡಿತು.

೩. ಪುರುಷ ಹೊರಗೆ ಹೋದಾಗ ಮಕ್ಕಳ ಪೋಷಣೆ ಮಾಡಿಕೊಂಡು ಇರುತ್ತಿದ್ದ. ಸ್ತ್ರೀ ಕೃಷಿಯನ್ನು ಅನ್ವೇಷಣೆ ಮಾಡಿದಳು ಎಂಬುದು ಅನೇಕರ ಅಭಿಪ್ರಾಯ. ಸ್ತ್ರೀಯ ಗರ್ಭಧಾರಣಾ ಶಕ್ತಿ ಮತ್ತು ಭೂಮಿಯ ಸಸ್ಯಧಾರಣಾ ಶಕ್ತಿಯನ್ನು ಗೌರವಿಸಿ ಮಾನ್ಯ ಮಾಡಿದ ಕೃಷಿ ಹಂತದ ಚಟುವಟಿಕೆಗಳು ಸ್ತ್ರೀಯನ್ನು ಮತ್ತೆ ದೈವಸ್ಥಾನಕ್ಕೆ ಏರಿಸಿದವು. ಗ್ರಾಮದೇವತೆಗಳ ಸೃಷ್ಟಿ ಆರಂಭವಾದದ್ದು ಹೀಗೆ.

೪. ಕೃಷಿ ಚಟುವಟಿಕೆ ಒಂದು ಆರ್ಥಿಕ ಚಟುವಟಿಕೆಯಾಗಿ ಅಭಿವೃದ್ಧಿ ಹೊಂದಿದಂತೆ ಭೂಮಾಲೀಕತ್ವವೂ ತನ್ನ ನೆಲೆ ಕಂಡುಕೊಳ್ಳತೊಡಗಿತು. ಆಸ್ತಿಯ ಒಡೆತನದ ಕಲ್ಪನೆ ಬರುತ್ತಿದ್ದಂತೆ ತಮ್ಮ ಆಸ್ತಿ ತಮ್ಮ ಮಕ್ಕಳಿಗೇ ಸೇರಬೇಕೆಂಬ ನಂಬಿಕೆ ಬಲವಾಯಿತು. ಇಲ್ಲಿಯೇ ಪಾತಿವ್ರತ್ಯ ಎಂಬ ಹೊಸ ಮೌಲ್ಯ ಇಣುಕು ಹಾಕಿತು.

ಭೂಮಿಯಂತೆಯೇ ಸ್ತ್ರೀ ಕೂಡ ಪುರುಷನ ಆಸ್ತಿಯಾಗಿ ಪರಿವರ್ತಿತಳಾದಳು. ಪುರುಷಪ್ರಾಧಾನ್ಯ ಇಲ್ಲಿ ಮತ್ತೆ ತನ್ನ ಸಾರ್ವಭೌಮತ್ವ ಸ್ಥಾಪಿಸಿತು. ಆರ್ಯರ ಮುಖಂಡತ್ವದಲ್ಲಿ ಪುರುಷಪ್ರಧಾನ ಮೌಲ್ಯ ವಿಜೃಂಭಿಸಿ, ಪುರುಷ ದೈವಗಳ ಸೃಷ್ಟಿಯೂ ಆಯಿತು. ಆ ದೈವಗಳ ಪುರಾಣಗಳು ಲಿಖಿತವಾಗಿ ದಾಖಲಾದವು. ಮಾತೃವಿನ ಸಂಕೇತದ ದೇವತೆಗಳು ಪುರುಷ ದೈವಗಳ ಅಡಿಯಾಳಾಗಿಯೋ, ನಿಕೃಷ್ಟ ಸೇವಕಿಯಾಗಿಯೋ ಇಲ್ಲವೇ ಆರ್ಯದೈವಗಳ ಹೆಂಡತಿಯರಾಗಿಯೋ ಕಾಣಿಸಿಕೊಂಡರು. ಇದು ಇವತ್ತಿನ ನಮ್ಮ ಕಣ್ಣಮುಂದಿನ ಸ್ಥಿತಿ.

ಇಷ್ಟೆಲ್ಲ ಪುರುಷಪ್ರಾಧಾನ್ಯತೆಯ ನಡುವೆಯೂ ಮಾತೃದೇವತೆಯರ ಸ್ಥಾನವೇ ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ಅಧಿಕೃತವಾಗಿ ಉಳಿದಿರುವುದೊಂದು ವಿಶೇಷ. ಆರ್ಥಿಕ ಚಟುವಟಿಕೆ ಗಂಡಸಿನದಾಗುವ ಮೂಲಕ ಆ ರಂಗದಲ್ಲಿ ಪುರುಷ ಮುಖ್ಯವಾಗಿದ್ದಾನಾದರೂ ಸಾಂಸ್ಕೃತಿಕ ಚಟುವಟಿಕೆಯಲ್ಲಿ ಸ್ತ್ರೀಯ ಪ್ರಾಧಾನ್ಯ ಕಡಿಮೆಯಂತೂ ಆಗಿಲ್ಲ. ಮನುಷ್ಯ ಸಮುದಾಯದ ಪಾಲನೆ ಪೋಷಣೆ ಮತ್ತು ರಕ್ಷಕಿಯಾಗಿ ಮಾತೃದೇವತೆ(ಬೇಟೆ ಮತ್ತು ಆಹಾರ ಸಂಗ್ರಹಣೆ ಹಂತ). ಧಾನ್ಯ ದೇವತೆಯಾಗಿ ಮಾತೃದೇವತೆ(ಕೃಷಿ ಹಂತ) ರೋಗನಿಯಂತ್ರಕಳಾಗಿ ಮಾತೃದೇವತೆ (ಗ್ರಾಮಗಳ ಹುಟ್ಟಿನ ನಂತರದ ಸ್ಥಿತಿ). ಈ ರೀತಿಯಲ್ಲಿ ಪ್ರಾಚೀನದಿಂದ ಇಲ್ಲಿಯವರೆಗೆ ಮಾತೃದೇವತೆಯ ಸ್ಥಾನವೇ ಮಿಗಿಲಾಗಿ ಪರಿಗಣಿತವಾಗುತ್ತಾ ಬಂದಿರುವುದನ್ನು ನಾವು ಕಾಣುತ್ತೇವೆ. ದಕ್ಷಿಣ ಭಾರತದ ಇಡೀ ದ್ರಾವಿಡ ಸಮುದಾಯದಲ್ಲಂತೂ ಮಾತೃಮೂಲ ಕುಟುಂಬಗಳೇ ಇತ್ತೀಚಿನವರೆಗೂ ಅಸ್ತಿತ್ವದಲ್ಲಿದ್ದ ಕಾರಣ ಮಾತೃದೇವತೆಯರ ಪ್ರಾಮುಖ್ಯವೂ ಅಷ್ಟೇ ಇತ್ತು. ಬುಡಕಟ್ಟು ಸಮುದಾಯಗಳಿಂದ ನಾಗರಿಕ ಸಮುದಾಯಗಳವರೆಗೆ ಈ ಮಾತು ನಿಜ. ಇಷ್ಟು ಪೀಠಿಕೆಯ ಹಿನ್ನೆಲೆಯಲ್ಲಿ ಬುಡಕಟ್ಟು ದೈವಗಳನ್ನು ಕುರಿತ ನನ್ನ ಗ್ರಹಿಕೆಗಳನ್ನು ಮುಂದೆ ನಿರೂಪಿಸಬಯಸುತ್ತೇನೆ.

PDF created with pdfFactory Pro trial version www.pdffactory.com

೨

ಬುಡಕಟ್ಟು ವೀರರು ಮತ್ತು ಮಾತೆಯರು

ಬುಡಕಟ್ಟು ಜನ ಎಂದು ಯಾರನ್ನು ಕರೆಯುತ್ತೇವೆ ಮತ್ತು ಯಾರು ನಿಜವಾದ ಬುಡಕಟ್ಟುಗಳು ಈ ಪ್ರಶ್ನೆ ಕೂಡ ಅಷ್ಟು ಸುಲಭದ್ದಲ್ಲ. ಈಗಾಗಲೇ ನಾವು ನೋಡಿದಂತೆ ಇವತ್ತಿನ ನಾಗರಿಕ ಹಂತದಲ್ಲಿರುವ ಅನೇಕ ಸಮುದಾಯಗಳು ಕೂಡ ಒಂದು ಕಾಲದ ಬುಡಕಟ್ಟುಗಳೇ ಎಂಬುದರಲ್ಲಿ ಸಂಶಯವಿಲ್ಲ. ಜಗತ್ತಿನ ಬಹುತೇಕ ಜನವರ್ಗಗಳಲ್ಲಿ ಇಂದಿಗೂ ಬುಡಕಟ್ಟಿನ ಅನೇಕ ರೀತಿಯ ಪಳೆಯುಳಿಕೆಗಳು ಕಂಡುಬರುತ್ತಿವೆ. ಹಾಗೆಂದು ಇವತ್ತಿನ ಸ್ಥಿತಿಯಲ್ಲಿ ಎಲ್ಲರೂ ಬುಡಕಟ್ಟುಗಳೇ ಎಂದು ತೀರ್ಮಾನಿಸುವ ಹಾಗೂ ಅಗತ್ಯವೂ ಇಲ್ಲ. ಹಾಗೆಂದು ನಮ್ಮ ಸರ್ಕಾರಗಳು ಗುರುತಿಸಿ ಅಧಿಕೃತ ಎಂದು ಪಟ್ಟಿ ಮಾಡಿರುವವರು ಮಾತ್ರ ಬುಡಕಟ್ಟುಗಳು ಎಂದು ಪರಿಗಣಿಸಬೇಕಾಗಿಯೂ ಇಲ್ಲ. ರಾಜಕಾರಣ ಪ್ರೇರಿತ ಆಡಳಿತಶಾಹಿ ಇದನ್ನೆಲ್ಲ ವೈಜ್ಞಾನಿಕವಾಗಿ ಮಾಡುವುದಿಲ್ಲ. ಆದ್ದರಿಂದ ಸರಕಾರಿ ವಿಂಗಡಣೆ ಕೂಡ ಪರಿಪೂರ್ಣವಲ್ಲ. ಇದು ಪರಿಪೂರ್ಣವಲ್ಲ ಎಂಬುದಕ್ಕೆ ಸಾಕ್ಷಿಯಾಗಿ ಕೇಂದ್ರ ಸರಕಾರ ಇತ್ತೀಚೆಗೆ ತಾನೆ ಮಹಾಶ್ವೇತಾದೇವಿ ಅವರ ನೇತೃತ್ವದಲ್ಲಿ ಅನಧಿಸೂಚಿತ ಬುಡಕಟ್ಟುಗಳನ್ನು ಪಟ್ಟಿ ಮಾಡಲು ಸಮಿತಿಯೊಂದನ್ನು ರಚಿಸಿದೆ. ಕರ್ನಾಟಕದಲ್ಲಿ ಕೂಡ ಈ ಕೊರತೆ ಇದ್ದೇ ಇದೆ. ಕಣ್ಣಿಗೆ ಕಂಡ ಜನವರ್ಗಗಳನ್ನು ಗುರುತಿಸಿ ಕಾಣದಿರುವ ಇನ್ನೂ ಎಷ್ಟೋ ಜನವರ್ಗಗಳನ್ನು ನಿರ್ಲಕ್ಷಿಸಲಾಗಿದೆ. ಸರ್ಕಾರದ ವತಿಯಿಂದಲೇ ಒಂದು ಸಮಗ್ರ ಸಮೀಕ್ಷೆ ಆಗುವ ಅಗತ್ಯವಂತೂ ಇದೆ.

ಹಾಗಾದರೆ ನಿಜವಾದ ಬುಡಕಟ್ಟು ಯಾವುದು? ಯಾವುದೇ ಒಂದು ಪ್ರದೇಶದಲ್ಲಿ ತಮ್ಮದೇ ಆದ ವಿಶಿಷ್ಟ ಜೀವನಪದ್ಧತಿ ರೂಪಿಸಿಕೊಂಡು, ತಮ್ಮದೇ ಆದ ಪರಂಪರೆಯಲ್ಲಿ ನಿರ್ದಿಷ್ಟ ಜ್ಞಾನಶಾಖೆಗಳನ್ನು ಬೆಳೆಸಿಕೊಂಡು, ಸಾಮಾಜಿಕ ಪದ್ಧತಿಗಳನ್ನು ವಿಶಿಷ್ಟವಾಗಿ

ಮತ್ತು ಅನನ್ಯವಾಗಿ ಅನುಸರಿಸುತ್ತಾ ಬರುತ್ತಿರುವ ಜನ ಸಮುದಾಯಕ್ಕೆ ಬುಡಕಟ್ಟು ಅನ್ನಬಹುದು. ಇವರು ಅರಣ್ಯದಲ್ಲೇ ಬದುಕಬೇಕು ಎಂದೇನಿಲ್ಲ. ಬಹುಶಃ ಗಿರಿಜನರು ಎಂಬ ಪದ ಗಿರಿಕಂದರ ನಿವಾಸಿಗಳು ಎಂಬ ಅರ್ಥದಲ್ಲಿಯೇ ನಿರೂಪಿತವಾಗಿರುವಂತಿದೆ. ಈ ಗಿರಿಜನರು ಎಂಬ ಪದ ಸಹ್ಯಾದ್ರಿಯ ಘಟ್ಟಗಳು ಮತ್ತು ಕರಾವಳಿಯ ಅರಣ್ಯಗಳಲ್ಲಿ ವಾಸಿಸುವ ಜನರಿಗೆ ಸರಿಯಾಗಿ ಒಪ್ಪುವ ಮಾತು. ಆರೆ ಬಯಲು ಸೀಮೆಯಲ್ಲೂ ಅನೇಕ ರೀತಿಯ ಬುಡಕಟ್ಟು ಜನರಿದ್ದಾರೆ. ಒಂದೇ ಪ್ರದೇಶಕ್ಕೆ ಸೀಮಿತವಾದವರೂ ಇದ್ದಾರೆ.

ಅಲೆಮಾರಿ ಬುಡಕಟ್ಟುಗಳೂ ಇವೆ. ಆದ್ದರಿಂದ ಬುಡಕಟ್ಟು ಎಂದರೆ ಸಮಾನವಾದ ವಿಶಿಷ್ಟಾಂಶಗಳನ್ನು ಪಡೆದ ಒಂದು ಸಮುದಾಯ ಎಂದು ನಾವು ಅರ್ಥ ಮಾಡಿಕೊಳ್ಳಬೇಕು. ಉಡಿಗೆ ತೊಡಿಗೆ, ಊಟ ಉಪಚಾರ, ಆರಾಧನೆ ಸಂಪ್ರದಾಯ, ಭಾಷೆ ಸಾಹಿತ್ಯ, ನ್ಯಾಯಪದ್ಧತಿ, ನಿಷೇಧ ರೂಪಗಳು, ರೂಪಿಸಿಕೊಂಡ ಪರಂಪರೆ ಹಾಗೂ ನಂಬಿಕೆ ಇತ್ಯಾದಿಯಾಗಿ ಎಲ್ಲವೂ ಯಾವುದೇ ಮತ್ತೊಂದು ಸಮಾಜ ಅಥವಾ ಸಮುದಾಯಕ್ಕಿಂತ ಭಿನ್ನವಾಗಿ ಒಂದು ಬುಡಕಟ್ಟಿನಲ್ಲಿ ಕಾಣಿಸಿಕೊಳ್ಳುತ್ತವೆ. ಭಿನ್ನತೆ ಅಷ್ಟೇ ಅಲ್ಲ, ಅವರ ಆಚಾರ ವಿಚಾರ ಸಂಪ್ರದಾಯಗಳು ಮತ್ತು ಪ್ರಾಚೀನದಿಂದ ಬಂದ ಪರಂಪರಾಗತ ಪದ್ಧತಿಗಳನ್ನು ಇನ್ನೂ ಅನುಸರಿಸುವ ಪ್ರಯತ್ನದಲ್ಲಿರುತ್ತವೆ. ಒಟ್ಟಾರೆ, ಪ್ರಾಚೀನತೆ–ವಿಶಿಷ್ಟತೆ–ಪ್ರತ್ಯೇಕತೆ ಈ ಮೂರು ಒಂದು ಬುಡಕಟ್ಟಿನ ಮುಖ್ಯ ಲಕ್ಷಣಗಳು. ಇಂದಿನ ದಿನಮಾನದಲ್ಲಿ ಪ್ರಾಚೀನತೆ ಇರಲೇಬೇಕಾದ ಅಂಶ ಎಂದು ತಿಳಿಯಬೇಕಾಗಿಲ್ಲ. ಯಾಕೆಂದರೆ ಹೊಸಕಾಲದ ಬದಲಾವಣೆಯ ವೇಗ ಅಷ್ಟು ತೀವ್ರವಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಬುಡಕಟ್ಟು ದೈವಗಳ ಸ್ವರೂಪವನ್ನು ನಾವೀಗ ನೋಡಬಹುದಾಗಿದೆ.

೨.೧. ಬೀರನ ಮನೆ

ಉತ್ತರ ಕನ್ನಡ ಜಿಲ್ಲೆಯಲ್ಲಿ ನನಗೆ ಅತ್ಯಂತ ಪ್ರಿಯವಾದ ಬುಡಕಟ್ಟು ಹಾಲಕ್ಕಿ ಒಕ್ಕಲಿಗ ಸಮುದಾಯ. ಅಲ್ಲಿಂದಲೇ ನನ್ನ ಈ ವ್ಯಾಖ್ಯಾನವನ್ನು ಆರಂಭಿಸುತ್ತೇನೆ. ಉತ್ತರ ಕನ್ನಡವನ್ನು ನಾನಿಲ್ಲಿ ವರ್ಣಿಸಲು ಹೋಗುವುದಿಲ್ಲ. ಅಲ್ಲಿನ ಅಭೇದ್ಯ ಅರಣ್ಯಗಳು, ನದಿ, ಸಮುದ್ರ ಇವೆಲ್ಲದರ ಸಂಗಮ ಸ್ಥಾನವಾಗಿ ರಮ್ಯ ಪ್ರಕೃತಿಯ ತಾಣವಾದ ಆ ಜಿಲ್ಲೆ ಅತ್ಯಂತ ವಿಶಿಷ್ಟವಾದದ್ದು. ಘಟ್ಟ ಮತ್ತು ಸಮುದ್ರದ ನಡುವಿನ ನದೀತಟಗಳಲ್ಲಿ ವಾಸ ಮಾಡುವ ಹಾಲಕ್ಕಿ ಒಕ್ಕಲಿಗರು ಆ ಜಿಲ್ಲೆಯ ಪ್ರಮುಖ ಬುಡಕಟ್ಟುಗಳಲ್ಲಿ ಒಂದು. ಅವರ ದೈವಗಳು ನಮಗೆ ಅನೇಕ ಬಗೆಯ ವಿಪುಲ ಮಾಹಿತಿಗಳನ್ನು ಒದಗಿಸುವ ಮೂಲಕ ಸಾಂಸ್ಕೃತಿಕ ಇತಿಹಾಸವೊಂದನ್ನು ತೆರೆದಿಡುತ್ತದೆ. ಅಂಥ ಒಂದು ಸ್ಥಳದ ಪರಿಚಯವನ್ನೀಗ ಮಾಡ ಬಯಸುತ್ತೇನೆ.

PDF created with pdfFactory Pro trial version www.pdffactory.com

ಹೊನ್ನಾವರ ತಾಲೂಕಿನ ಅಪ್ಪಿಕೇರಿ ಮತ್ತು ಶಿಕಾರು ಎಂಬ ಎರಡು ಹಾಲಕ್ಕಿ ಕೊಪ್ಪಗಳ ನಡುವೆ ಬೀರನಗುಡಿಯೊಂದಿದೆ. ಅದನ್ನು ಬ್ಯಾಟೆಬೀರನಗುಡಿ ಎಂದೂ ಕರೆಯುತ್ತಾರೆ. ಪಶ್ಚಿಮದಲ್ಲಿ ಭೋರ್ಗರೆವ ಸಮುದ್ರ. ಸಮುದ್ರದಿಂದ ಮೂರು ಕಿ.ಮೀ. ಒಳಗೆ ಒಂದು ಕುರುಚಲು ಗುಡ್ಡದ ತಪ್ಪಲಿನಲ್ಲಿ ಈ ಬೀರನಗುಡಿ ಇದೆ. ಇಲ್ಲಿ ಈ ಬೀರನಗುಡಿ ಒಂದೇ ಇದ್ದರೆ ಆಶ್ಚರ್ಯವಾಗುತ್ತಿರಲಿಲ್ಲ. ಅದೊಂದು ಸಂಕೀರ್ಣ ಬಯಲು ದೇವಾಲಯ ಎನ್ನಬಹುದು. ಬೀರನಗುಡಿಯ ಬಯಲು ವಿಶಾಲವಾಗಿದ್ದು, ಸುತ್ತಲೂ ಕರಿಯ ಕಲ್ಲುಗಳ ಮೆದು ಬಂಡೆಗಳಿವೆ. ಆ ಬಂಡೆಗಳ ನಡುವಿನ ಬಯಲಲ್ಲಿ ವಾಸ ಮಾಡುವ ದೇವರುಗಳು ಅಸಂಖ್ಯಾತ.

ಬೀರನಗುಡಿಯಲ್ಲಿ ಬ್ಯಾಟೆ ಬೀರ ಮತ್ತು ಕರಬೀರ ಎಂಬ ಇಬ್ಬರು ವೀರರಿದ್ದಾರೆ. ಅವರ ಪಕ್ಕದಲ್ಲಿ ಭೂಮಿತಾಯಿಯ ಮೂರ್ತಿ ಇದೆ. ಬೀರರು ಇಬ್ಬರೂ ಬಿಲ್ಲು ಬಾಣ ಹಿಡಿದು ಬೇಟೆಗೆ ಮತ್ತು ಸಮರಕ್ಕೆ ಸಿದ್ಧರಾದವರಂತೆ ಕಾಣುತ್ತಾರೆ. ಕುಡಿ ಮೀಸೆ, ಮುಖದ ಪೌರುಷ ಅವರು ಅಸಾಮಾನ್ಯ ವೀರರು ಎಂಬುದನ್ನು ದೃಢಪಡಿಸುತ್ತದೆ. ಭೂಮಿತಾಯಿ ಸೌಮ್ಯವಾಗಿ ಪ್ರಸನ್ನಳಾಗಿ ನಿಂತಿದ್ದಾಳೆ. ಅವಳ ಮುಖದಲ್ಲಿನ ಪ್ರಸನ್ನತೆ ಪೊರೆಯುವ, ರಕ್ಷಿಸುವ, ನೀಡುವ ಮಾತೃವಿನಂತೆಯೇ ಇದೆ. ಹೊರಗಡೆ ಒಂದು ಸಣ್ಣ ಮಾಡಿನ ಕೆಳಗೆ ಜಟ್ಟಿಗ ಎಂಬ ಮತ್ತೊಬ್ಬ ವೀರನಿದ್ದಾನೆ. ಅದರ ಆಚೆಗೆ ಅಷ್ಟು ದೂರದಲ್ಲಿ ನೆಲದಿಂದ ಮೇಲೆದ್ದು ನಿಂತ ಶಿಶ್ನರೂಪದ ಕಲ್ಲಿನ ಆಕೃತಿಯೊಂದಿದೆ. ಅದರ ಪಕ್ಕದಲ್ಲಿ ವೀರರು ಬೀರರು ಬಳಸುವ ಆಯುಧ ಎನ್ನಲಾದ ತ್ರಿಶೂಲ ರೂಪದ ಕೊಂಬುಗಳಿವೆ. ಅದರ ಪಕ್ಕದ ಇನ್ನೊಂದು ಸಣ್ಣ ಗುಡಿಯಲ್ಲಿ ಹುಲಿಯ ಚಿತ್ರವಿರುವ ಹುಲಿದೇವರು ಇದೆ. ಅದರ ಪಕ್ಕದ ಮತ್ತೊಂದು ಗುದ್ದಿಗೆಯಲ್ಲಿ ಚಿತ್ರವಿಚಿತ್ರವಾಗಿ ಕಾಣುವ ಅನೇಕ ರೀತಿಯ ಒರಟು ಕಲ್ಲಿನ ರೂಪದ ಆಕೃತಿಗಳನ್ನು ಸ್ಥಾಪಿಸಲಾಗಿದೆ. ಅವೆಲ್ಲಕ್ಕು ಒಂದೊಂದು ದೈವದ ಹೆಸರಿದೆ. ಇವೆಲ್ಲ ಸಾಲದೆಂಬಂತೆ ಹೆಣ್ಣಿನ ಯೋನಿಯಂತೆ ಕಾಣುವ ಉರುಟು ಕಲ್ಲಿನ ಸಣ್ಣ ಬಂಡೆಯೊಂದಕ್ಕೆ ಹರಿಸಿನ ಕುಂಕುಮ ಹಚ್ಚಿ ಪೂಜೆ ಮಾಡಿರುವ ಕುರುಹುಗಳಿವೆ. ಇಷ್ಟೆಲ್ಲ ದೈವಗಳ ಈ ಸಂಕೀರ್ಣ ನಿಜಕ್ಕು ನಮ್ಮನ್ನು ಯೋಚನೆಗೆ ಹಚ್ಚುತ್ತದೆ. ಮುಖ್ಯ ಸ್ಥಳವಾದ ಬೀರನಗುಡಿಯಲ್ಲಿರುವ ಬೀರರು ಮತ್ತು ಭೂಮಿತಾಯಿಗೆ ಗುನಗರ ಜನಾಂಗದ ಪೂಜಾರಿ(ಕುಂಬಾರರು) ಪೂಜೆ ಮಾಡುತ್ತಾನೆ. ಉಳಿದಂತೆ ಬಯಲಲ್ಲಿರುವ ಎಲ್ಲ ದೇವಾನುದೇವತೆಯರನ್ನು ಯಾರಾದರೂ ಹೇಗಾದರೂ ಪೂಜಿಸಬಹುದು.

ಪ್ರಾಚೀನ ನಂಬಿಕೆ ಮತ್ತು ಸಂಸ್ಕೃತಿಯನ್ನು ಉಳಿಸಿಕೊಂಡ ಬುಡಕಟ್ಟಿನ ಸಾಂಸ್ಕೃತಿಕ ಜೀವನ ಎಷ್ಟು ಸಂಕೀರ್ಣ ಎಂಬುದನ್ನು ತಿಳಿಯಬೇಕಾದರೆ ಹಾಲಕ್ಕಿ ಒಕ್ಕಲಿಗರ ದೈವಗಳನ್ನು ಕುರಿತ ಮತ್ತಷ್ಟು ನಂಬಿಕೆಗಳನ್ನು ಗಮನಿಸುವ ಅಗತ್ಯವಿದೆ.

ಸರಣ ಸರಣೆಂದೆನು ದೇವಾ
ಸರಣೋ ಸರಣಂದೆನು ದೇವರಿಗೇ
ಮೂಡಿ ಬರುವ ಸೂಲ್ಯಮ್ಮ ದೇವರಿಗೇ
ಸರಣೋ ಸರಣಂದೋ ದೇವರಿಗೇ
ಕಂದುವಲ್ಲಿ ಚಂದುರಾಗೆ ದೇವರಿಗೇ
ಸರಣೋ ಸರಣಂದೆನು ನಾ
ಕೈಯ್ಯ ಕೊಟ್ಟ ಕೈಯ್ಯಮ್ಮ ದೇವರಿಗೆ
ಕಾಲಕೊಟ್ಟ ಕಾಲಮ್ಮ ದೇವರಿಗೆ
ಸರಣೋ ಸರಣಂದೆನು ನಾ

ದೇವ ದೇವರಿಗೆಲ್ಲ ಸೂರ್ಯದೇವರೆ ಹೆಚ್ಚು ಎಂದು ಹೇಳುವ ಹಾಲಕ್ಕಿ ಒಕ್ಕಲಿಗರು ಚಂದ್ರನನ್ನು ಮತ್ತು ಚಂದ್ರನ ಬೆಳದಿಂಗಳನ್ನು ಅಪಾರವಾಗಿ ಪ್ರೀತಿಸುತ್ತಾರೆ. ಬೆಳದಿಂಗಳನ್ನು ಕುರಿತಂತೆ ಅವರಲ್ಲಿರುವ ಅಪಾರ ಜನಪದ ಸಾಹಿತ್ಯ ಚಂದ್ರನ ಬಗ್ಗೆ ಅವರಿಗಿರುವ ಅನನ್ಯ ಶ್ರದ್ಧೆಯನ್ನು ನಿರೂಪಿಸುತ್ತದೆ. ಕಣ್ಣಿಗೆ ಕಾಣುವಂಥ ದೇವರುಗಳಾದ ಇವರಿಗೆ ದಿನದ ಮೊದಲ ನಮಸ್ಕಾರ ಎಂಬುದು ಅವರ ನಡವಳಿಕೆ. ನಮ್ಮ ಹಿಂದಿನವರು ಸೂರ್ಯಾರಾಧಕರು ಮತ್ತು ಚಂದ್ರಾರಾಧಕರು ಎಂಬ ಎರಡು ವಿಭಾಗಗಳನ್ನು ಮಾಡಿ ಪ್ರಮುಖ ಜನವರ್ಗಗಳನ್ನು ಅವುಗಳಲ್ಲಿ ಗುರುತಿಸಲು ಪ್ರಯತ್ನಿಸಿದ್ದಾರೆ. ಆದರೆ ಅದ್ಯಾವ ಪೂರ್ವಪ್ರಜ್ಞೆಯೂ ಇಲ್ಲದ ಈ ಜನ ಪ್ರತಿದಿನ ತಮಗೆ ಬೆಳಕನ್ನು ಶಕ್ತಿಯನ್ನು ನೀಡುವ, ಕಣ್ಣಿಗೆ ಪ್ರತ್ಯಕ್ಷ ದೇವರಾಗಿ ಕಾಣುವ ಸೂರ್ಯಚಂದ್ರರನ್ನು ಮುಗ್ಧವಾಗಿ ಆರಾಧಿಸುತ್ತಾರೆ. ನಿಜವಾದ ಅರ್ಥದಲ್ಲಿ ಇದೇ ಅವರ ಮೂಲ ದೈವಾರಾಧನೆ. ಗಿಳಿ, ಪಾರಿವಾಳ, ನವಿಲು ಇವರ ಆರಾಧ್ಯ ಪಕ್ಷಿಗಳು. ಇವರ ಹಾಡುಗಳ ತುಂಬ ಈ ಪಕ್ಷಿಗಳು ಹಾಡುತ್ತವೆ, ಸಂಭಾಷಿಸುತ್ತವೆ, ಆತ್ಮೀಯವಾಗಿ ಮಾತಾಡುತ್ತವೆ. ಹಾಲಕ್ಕಿ ಒಕ್ಕಲಿಗರ ಈ ನಿಸರ್ಗಾರಾಧನೆ ಬುಡಕಟ್ಟುಗಳಲ್ಲಿ ರೂಪುಗೊಂಡ ಆದಿ ದೈವಾರಾಧನೆಯ ವಿವಿಧ ಸ್ಥಿತಿಗಳಿಗೆ ಸಾಕ್ಷಿಯಲ್ಲದೆ ಬೇರೇನೂ ಅಲ್ಲ.

ಭೂಮಿಯಾ ನೆನದೇನಯ್ಯ ಭೂಮಿಗೆ ನಾವ್ ಬಲದೇನಾ
ಚಾಮಿ ನಿನ್ನಲ್ಲಿ ಚರಣಂಬೋಲಾ
ಮೆಟ್ಟಿದಲ್ಲಿ ಭೊಮಿಗೆ ಚರಣಂಬೋ ದೇವಾರೇ
ಹರಿವಾಲೆ ನೀರಿಗೆ ನಾಮೇ ಶರಣಂಬೋ ದೇವಾರೇ
ಬೀಸುವಂತ ಗಾಳಿಗೇ ನಾಮೆ ಶರಣಂಬೋ ದೇವಾರೇ
ಸುತ್ತು ಮುತ್ತು ಆಕಾಶಕೆ ನಾಮೇ ಶರಣೊಬೋಲಾ

PDF created with pdfFactory Pro trial version www.pdffactory.com

ಬೆಳೆಯನ್ನು ಕೊಡುವ ಭೂಮಿತಾಯಿ, ದಾಹ ಇಂಗಿಸುವ ನೀರು, ಜೀವ ದ್ರವ್ಯವಾದ ಗಾಳಿ, ಮಳೆ ತರುವ ಆಕಾಶ ಈ ಮೂಲಭೂತ ವಸ್ತುಗಳೇ ಅವರ ದೈವಗಳು. ಪಂಚಭೂತಗಳ ಈ ದೇಸಿ ಪರಿಭಾವನೆ ಅತ್ಯಂತ ಸರಳವಾದದ್ದು. ಹಾಲಕ್ಕಿ ಜನ ಸೂರ್ಯನನನು, ಚಂದ್ರನನ್ನು, ಬೆಳ್ಳಿ, ಶುಕ್ರ ಮುಂತಾದ ನಕ್ಷತ್ರಗಳನ್ನು ಆರಾಧಿಸುವುದಷ್ಟೇ ಅಲ್ಲದೆ, ತಮ್ಮ ಪುರಾಣಗಳ ಪಾತ್ರಗಳನ್ನಾಗಿಯೂ ಅವರನ್ನು ಕಂಡಿದ್ದಾರೆ. ಒಂದು ಮರವನ್ನು ಕಡಿಯುವ ಪ್ರಸಂಗಬಂದಲ್ಲಿ ಅದನ್ನು ಪೂಜಿಸಿ, ಪ್ರಕೃತಿ ಮಾತೆಯ ಕ್ಷಮೆ ಕೇಳಿ ಮರ ಕಡಿಯುವ ಪದ್ಧತಿ ಅವರಲ್ಲಿತ್ತು. ತುಳಸಿ ಮತ್ತು ಪಂಬೆ ಅವರ ಇಷ್ಟದೈವ ರೂಪದ ಸಸ್ಯಗಳು. ಮುಂದಿನ ತುಳಸಿಕಟ್ಟೆಯಲ್ಲಿ ತುಳಸಿ ಪೂಜೆಗೊಂಡರೆ ಹಿತ್ತಲಿನಲ್ಲಿ ತುಂಬೆ ಪೂಜೆಗೊಳ್ಳುತ್ತದೆ. ಅಷ್ಟೇ ಅಲ್ಲ, ತಮ್ಮ ಬೇಸಾಯಕ್ಕೆ ಬೇಕಾದ ಗೋವನ್ನು, ಅದಕ್ಕೆ ಮೃತ್ಯು ರೂಪವಾದ ಹುಲಿಯನ್ನು, ಹಕ್ಕಿ–ಪಕ್ಷಿಗಳಾದಿಯಾಗಿ ಗಿಳಿ ಗೊರವಂಕ ನವಿಲುಗಳನ್ನು ಅವರು ಆರಾಧಿಸುತ್ತಾರೆ. ಇದೆಲ್ಲ ಏನನ್ನು ಸೂಚಿಸುತ್ತದೆಂದರೆ ಹಾಲಕ್ಕಿ ಒಕ್ಕಲಿಗರು ಮೂಲದಲ್ಲಿ ನಿಸರ್ಗಾರಾಧಕರು. ಅವರನ್ನು ತನ್ನ ಒಡಲಿನಲ್ಲಿಟ್ಟು ಪೊರೆಯುವ ಸಮಸ್ತ ನಿಸರ್ಗವೂ ಅವರಿಗೆ ದೈವ. ಆ ನಿಸರ್ಗದ ಆರಾಧನೆ ಈಗ ಪಳೆಯುಳಿಕೆಯಂತೆ ಅವರ ನಡುವೆ ಕಂಡುಬರುತ್ತಿದೆ. ಇದು ಇವರ ದೈವಾರಾಧನೆಯ ಮೊದಲ ಹಂತ.

ಈಗ ಇವರ ಆರಾಧನೆಯ ಎರಡನೆಯ ಹಂತಕ್ಕೆ ಬರೋಣ. ಬಹುಶಃ ಇವರ ಆಹಾರ ಸಂಗ್ರಾಹಕರಾಗಿದ್ದ ಕಾಲವದು. ಗಂಡಸರು ಆಹಾರ ಸಂಗ್ರಹಣೆಗೆ ಹೊರಗೆ ಹೋದಾಗಲೇ ಹೆಣ್ಣು ಒಂದೇ ಕಡೆ ಇದ್ದು ಕೃಷಿಯ ಅನ್ವೇಷಣೆ ಮಾಡಿದಳು ಎಂಬ ತರ್ಕವನ್ನು ಈಗಾಗಲೇ ನೋಡಿದ್ದೇವೆ. ಇದು ನಿಜ ಕೂಡ. ಆಹಾರ ಸಂಗ್ರಹಣೆಯ ಜೊತೆಜೊತೆಗೇ ಧಾನ್ಯ ಬೆಳೆಯುವ ಸಂಸ್ಕೃತಿಯನ್ನು ಮನುಷ್ಯ ರೂಢಿಸಿಕೊಂಡ ಮೇಲೆ ಮಾತೃಸ್ವರೂಪಿಯೂ ಆದ ಭೂಮಿಯನ್ನು, ಗರ್ಭಧರಿಸುವ ಹೆಣ್ಣನೊಡನೆ ಹೋಲಿಸಲಾಯಿತು. ಇವರಿಬ್ಬರೂ ಸಮೃದ್ಧಿಯ ಸಂಕೇತಗಳಾದರು. ಅಲ್ಲಿಂದ ಮಾತೃವಿನ ಆರಾಧನೆ ಮೊದಲಾಯಿತು. ಮಾತೃ ಎಲ್ಲಕ್ಕೂ ಮೊದಲಾದಳು. ಈ ಹಂತದಲ್ಲಿಯೇ ಮಾತೃಗಳು ದೇವತೆಯರಾಗಿ ಆರಾಧನೆಗೆ ಒಳಗಾದದ್ದು. ಇದರಲ್ಲಿ ಎರಡು ವಿಧ. ಮಧ್ಯಕಾಲೀನ ಕರ್ನಾಟಕದಲ್ಲಿ ಹುಟ್ಟಿಕೊಂಡ ಸತಿಪದ್ಧತಿಯ ಕಾರಣದಿಂದ ಕೊಂಡಕ್ಕೆ ಬಿದ್ದವರು, ಆತ್ಮಹತ್ಯೆ ಮಾಡಿಕೊಂಡವರು ಅಥವಾ ಹತ್ಯೆಗೊಳಗಾದವರು ದೇವತೆಯರಾದ ಕಥೆ ಬೇರೆ. ಇದು ಪುರುಷಪ್ರಧಾನ ಸಮಾಜ ಸೃಷ್ಟಿಸಿದ ಮೌಲ್ಯ. ಆದರೆ ಪ್ರಾಚೀನದಲ್ಲಿ, ಅಂದರೆ ಆರ್ಯರು ಈ ದೇಶಕ್ಕೆ ಬರುವ ಮೊದಲು, ಈ ನೆಲದಲ್ಲಿ ಮಾತೃವಿನ ಸ್ಥಾನ ಅತ್ಯಂತ ಪ್ರಧಾನವಾದುದಾಗಿತ್ತು. ಹಾಲಕ್ಕಿ ಜನಗಳಲ್ಲಿ ಈ ಎರಡು ರೀತಿಯ ಮಾತೃದೈವಗಳನ್ನು ನಾವು ಕಾಣುತ್ತೇವೆ.

ಕಾಡಿನ ರಕ್ಷಕರಾಗಿ, ಆ ಮೂಲಕ ತಮ್ಮನ್ನು ಪೊರೆಯುತ್ತಿದ್ದ ಮಾತೃವಿನ ರೂಪದಲ್ಲಿ ಕಾನಮ್ಮ, ದೇವಿಕಾನಮ್ಮ, ಕರಿಕಾನಮ್ಮ ಎಂಬ ನಿಸರ್ಗ ದೇವತೆಯರು ಇವರ ಸುತ್ತಮುತ್ತ ಇದ್ದಾರೆ. ಮಾಸ್ತಿ, ಅರೆಮಾಸ್ತಿ, ಹುಚ್ಚಮಾಸ್ತಿ ಎಂಬ ಹೆಸರಿನ ಮಹಾಸತಿಯರಾದವರ ಗುಡಿಗಳು ಹಾಲಕ್ಕಿ ಸಮುದಾಯದಲ್ಲಿ ಇವೆ. ಈ ಎಲ್ಲ ದೇವತೆಗಳಿಗೆ ಈಗಲೂ ಪೂಜೆ ಸಲ್ಲುತ್ತಿದೆ. ಜನಪ್ರಿಯ ಗ್ರಾಮದೇವತೆಗಳೆನಿಸಿದ ಮಾರಿಕಾಂಬೆ, ಕಾಳಿಕಾಂಬೆ, ಚೌಡಿ. ಕೋಗ್ತಿ ಮುಂತಾದ ಬೇರೆ ಬೇರೆ ರಕ್ಷಕ ದೇವತೆಯರನ್ನೂ ಇವರು ಆರಾಧಿಸುತ್ತಾರೆ. ಇದು ಇವರ ದೈವಾರಾಧನೆಯ ಎರಡನೇ ಹಂತ.

ಹಾಲಕ್ಕಿ ಒಕ್ಕಲಿಗರ ದೈವಾರಾಧನೆಯ ಮೂರನೇ ಹಂತವನ್ನು ಈಗ ನೋಡೋಣ. ಒಂದಾನೊಂದು ಕಾಲಕ್ಕೆ ಬೇಟೆ ಮತ್ತು ಪಶುಪಾಲನೆಯೂ ಇವರ ಮುಖ್ಯ ಕಸುಬಾಗಿತ್ತು. ಬಹುಶಃ ಪಶುಪಾಲನೆ ಮತ್ತು ಕೃಷಿಯನ್ನು ಒಟ್ಟಿಗೆ ಇವರು ಪಾಲಿಸಿಕೊಂಡು ಬಂದಂತೆ ಕಾಣುತ್ತದೆ. ಪಶುಪಾಲನೆ ಪ್ರಧಾನವಾದಾಗ ಪುರುಷ ಮುಖ್ಯನಾಗುತ್ತಾನೆ. ಅಂಥ ಸಂದರ್ಭದಲ್ಲಿ ಅನೇಕ ಪುರುಷ ದೇವತೆಗಳ ಉದ್ಭವವೂ

ಸೂರ್ಯಚಂದ್ರ

PDF created with pdfFactory Pro trial version www.pdffactory.com

ಆಗಿದೆ. ಬೀರರು ಮತ್ತು ಜಟ್ಟಿಗರು ಈ ಸಂದರ್ಭದ ಪ್ರಮುಖ ದೇವರುಗಳು. ಅನೇಕ ಸ್ಥಳಗಳಲ್ಲಿ ಶಿಶ್ನರೂಪದ ಜಟ್ಟಿಗ ಇದ್ದು ಅವನನ್ನು ಆರಾಧಿಸುತ್ತಾರೆ. ನಾನು ಈ ಹಿಂದೆ ಹೇಳಿದ ಅಪ್ಪಿಕೇರಿಯ ದೈವ ಸಂಕೀರ್ಣವನ್ನು ನೀವು ಮತ್ತೆ ನೆನಪಿಸಿಕೊಳ್ಳಬಹುದು. ಜಟ್ಟಿಗ ಎಂದರೆ ಜಡೆಗ ಜಟಾಧಾರಿ, ಶಿವನ ಒಂದು ರೂಪ. ಸೃಷ್ಟಿಗೆ ಕಾರಣನಾದವನು ಎಂದು ಊಹಿಸಬಹುದಾಗಿದೆ. ಜಟ್ಟಿಗ ಅಂದರೆ ಶಕ್ತಿವಂತ, ಗಟ್ಟಿಗ, ಪರಾಕ್ರಮಿ ಎಂಬ ಅರ್ಥಗಳನ್ನೂ ಕೊಡಬಹುದು. ಒಟ್ಟಿನಲ್ಲಿ ಪಶುಸಂಗೋಪನಾ ಹಂತದ ಈ ದೈವ ಅವರ ರಕ್ಷಕನಾಗಿ ಕಾರ್ಯ ನಿರ್ವಹಿಸಿದಂತಿದೆ.

ಈ ಬೀರರಲ್ಲಿ ಅನೇಕ ವಿಧವಾದ ದೈವಗಳುಂಟು. ಉದಾಹರಣೆಗೆ 'ಬ್ಯಾಟಿಬೀರ' ಎಂದರೆ ಅವರ ಬೇಟೆಗೆ ಸಹಾಯ ಮಾಡುವ ದೇವರು. 'ಗೋಳಿ ಬೀರ' ಎಂದರೆ ರೋಗ ನಿರೋಧಕ ದೇವರು ಗೋಣಿ ಚಕ್ಕೆಯನ್ನು ನೀರಿನಲ್ಲಿ ಕುದಿಸಿ ಮೈಗೆ ಲೇಪಿಸಿಕೊಂಡರೆ ಚರ್ಮರೋಗ ನಿವಾರಣೆಯಾಗುತ್ತದೆ. ಆದ್ದರಿಂದ ಆ ಗೋಳಿ(ಣಿ) ಮರದ ಕೆಳಗೆ ಇರುವವನು ಗೋಳಿ ಬೀರ. ಇದೇ ರೀತಿಯಲ್ಲಿ ಸಂತಾನಬೀರರು ಉಂಟು. ದಂಡಿನಬೀರ ಯುದ್ಧದಲ್ಲಿ ಸಹಾಯ ಮಾಡಿದವನು. ಹುಲಿಬೀರ ಹುಲಿಯನ್ನು ಕೊಂದವನು, ಹಂದಿಬೀರ ಹಂದಿಗಳಿಂದ ಬೆಳೆಯನ್ನು ರಕ್ಷಿಸಿದವನು. ಬಟ್ಟೆಬೀರ ದಾರಿಗಳನ್ನು ಕಾಯುತ್ತಾ ವೈರಿಗಳನ್ನು ತಡೆಯುವವನು. ಹೀಗೆ ನಾನಾ ರೀತಿಯ ಬೀರರೂ ಉಂಟು. ಆದ್ದರಿಂದಲೇ ಇವರ ದೇವಸ್ಥಾನಗಳಲ್ಲಿ ಹುಲಿ ಮತ್ತು ಹಂದಿಗಳ ಪ್ರತಿಮೆಗಳೂ ಉಂಟು.

ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಈ ಬೀರರು ಮತ್ತು ಜಟ್ಟಿಗರು ಬನವೊಂದರಲ್ಲಿ ನೆಲೆಸಿರುತ್ತಾರೆ. 'ಬನ' ಅಂದರೆ ಹಲವು ರೀತಿ ಹಾಲು ಉತ್ಪತ್ತಿ ಮಾಡುವ ಮರಗಿಡ ಬಳ್ಳಿಗಳು. ಆಲ, ಅರಳಿ, ಗೋಳಿ ಇತ್ಯಾದಿಯೆಲ್ಲವೂ ಈ ಪರಿವಾರದಲ್ಲಿ ಬರುತ್ತವೆ. ಅಂದರೆ ಇವೆಲ್ಲ ಸಮೃದ್ಧಿಯ ಸಂಕೇತಗಳು. ಅಂಥ ಬನದಲ್ಲಿ ಬಹುತೇಕ ಗ್ರಾಮದೇವತೆಯರ ಮೂರ್ತಿಗಳಿರುತ್ತವೆ. ಅಥವಾ ಗ್ರಾಮದೇವತೆಯೆಂದು ಹೇಳಲಾಗುವ ಚಿಹ್ನೆಯೊಂದು ಇದ್ದೇ ಇರುತ್ತದೆ. ಆ ಗ್ರಾಮದೇವತೆಯ ಪರಿವಾರದ ಸೇವಕರಾಗಿ ಈ ಬೀರರು ಮತ್ತು ಜಟ್ಟಿಗರು ಇರುತ್ತಾರೆ. ಅಥವಾ ಅವಳ ರಕ್ಷಕ ಭಂಟರಾಗಿ ಇವರು ಇರುತ್ತಾರೆ. ಬೇಟೆ ಮತ್ತು ಪಶುಪಾಲನೆಯ ಹಂತದಲ್ಲಿ ಈ ಪುರುಷ ದೈವಗಳ ಸೃಷ್ಟಿಯಾದರೂ ಅವು ಕೃಷಿಯ ಅನ್ವೇಷಕಿ ಮತ್ತು ಒಡತಿಯಾಗಿದ್ದ ಸ್ತ್ರೀಯ ಅಧೀನದಲ್ಲಿವೆ ಎಂಬುವುದೇ ಇಲ್ಲಿ ಮುಖ್ಯ ಸಂಗತಿ. ಮಾತೃಪ್ರಧಾನ ವ್ಯವಸ್ಥೆ ಈ ಜನವರ್ಗದಲ್ಲಿ ಇತ್ತೀಚಿನವರೆಗೂ ರೂಢಿಯಲ್ಲಿತ್ತು ಮತ್ತು ಆ ರೀತಿಯ ಒಂದು ಆಂತರ್ಯದ ಗೌರವ ಮಾತೃವಿಗೆ

ಈಗಲೂ ಇದೆ ಅವರ ಈ ಆರಾಧನಾ ವಿಧಾನ ಮತ್ತು ಅನುಸರಿಸುವ ಆಚರಣೆಗಳೇ ಸಾಕ್ಷಿ. ಇಷ್ಟಲ್ಲದೆ ಬನದ ಚೌಡಿ ಹಾಗೂ ಗದ್ದೆಯ ಅಂಚಿನ ಮಾಸ್ತಿಗುಡಿಗಳು ಹಾಲಕ್ಕಿ ಸಮುದಾಯಗಳಿರುವ ಎಲ್ಲ ಕೊಪ್ಪಗಳಲ್ಲಿಯೂ ವಿಶೇಷವಾಗಿ ಕಾಣಸಿಗುತ್ತವೆ. ಇವರು ಹಿಂದೊಂದು ದಿನ ಸತಿಯಾದವರು ಎಂಬುದು ನಿರ್ವಿವಾದ.

ಇನ್ನು ನಾಲ್ಕನೆಯ ಹಂತಕ್ಕೆ ಬರೋಣ. ಬರಬರುತ್ತಾ ಕಾಲ ಬದಲಾದಂತೆ ಪುರುಷಪ್ರಧಾನ ವ್ಯವಸ್ಥೆ ಸರ್ವವ್ಯಾಪಿಯಾಗಿ ತನ್ನ ಬಾಹುಗಳನ್ನು ಚಾಚಿತು. ದೈವಗಳ ಸ್ಥಾನಮಾನದಲ್ಲಿ ಏರುಪೇರಾಯಿತು. ಇದುವರೆಗೆ ದ್ರಾವಿಡ ಪರಂಪರೆಯಲ್ಲಿ ಬೆಳೆದುಬಂದ ಸಾಂಸ್ಕೃತಿಕ ಜೀವನಕ್ಕೆ ವೈದಿಕತನದ ಸ್ಪರ್ಶವಾದದ್ದು ಈ ಹಂತದ ಪ್ರಮುಖ ಲಕ್ಷಣ. ಅಂಥ ವ್ಯವಸ್ಥೆಯ ಪ್ರತಿಪಾದಕರೆನಿಸಿದ ನಮ್ಮ ದಾಸರು ಮತ್ತು ಆಚಾರ್ಯರು ಹೇಳಿಕೊಟ್ಟಂತೆ ಅಥವಾ ಅವರ ಪ್ರಚಾರ ಪ್ರಭಾವಗಳಿಗೆ ತಲೆಬಾಗಿ ತಿರುಪತಿ ವೆಂಕಟರಮಣನನ್ನೂ, ಧರ್ಮಸ್ಥಳದ ಮಂಜುನಾಥನನ್ನು, ಗೋಕರ್ಣದ ಗೋಕರ್ಣೇಶ್ವರನನ್ನು ಅವರು ದೈವವಾಗಿ ಸ್ವೀಕರಿಸಿದರು. ಮೂಲದಲ್ಲಿ ಶೈವಾರಾಧಕರಾಗಿದ್ದ, ತಮ್ಮ ಹುಟ್ಟಿನ ಪುರಾಣಗಳ ಪ್ರಕಾರ ಶಿವನಿಂದ ಉದ್ಭವಿಸಿದ ಈ ಹಾಲಕ್ಕಿಯವರು ಶಿವಸಂಬಂಧಿಯಾದ ಗೋಕರ್ಣ ಅಥವಾ ಧರ್ಮಸ್ಥಳಕ್ಕಿಂತ ದೂರದ ತಿರುಪತಿ ವೆಂಕಟರಮಣನನ್ನು ಹಚ್ಚಿಕೊಂಡಿದ್ದೇಕೆ? ಇಂದು ತಿರುಪತಿ ವೆಂಕಟರಮಣನೇ ಅವರ ಪ್ರಮುಖ ಆರಾಧ್ಯವಾಗಿರಲು ಕಾರಣವೇನು? ಇದು ಕೇವಲ ಹಾಲಕ್ಕಿ ಒಕ್ಕಲಿಗರ ಪ್ರಶ್ನೆ ಮಾತ್ರವಲ್ಲ. ಇದೇ ಉತ್ತರ ಕನ್ನಡದ ಗೊಂಡ ಬುಡಕಟ್ಟಿನ ದೈವತ್ವದ ಪ್ರಶ್ನೆಯೂ ಹೌದು. ಹಾಗೇ ಕರಾವಳಿ ಮತ್ತು ಮಲೆನಾಡಿನ, ಅಷ್ಟೇ ಏಕೆ, ಇದೇ ದಕ್ಷಿಣಭಾರತದ ಅನೇಕ ಸಮುದಾಯಗಳ ದೈವಾಂತರದ ಪ್ರಶ್ನೆಯಾಗಿ ನಮ್ಮ ಮುಂದಿದೆ. ದೈವಾರಾಧನೆಯ ಈ ಅವಸ್ಥಾಂತರದ ಅಧ್ಯಯನಕ್ಕೆ ಯೋಗ್ಯವಾದ ವಿಚಾರ. ಹಾಗೆಂದು ಹಾಲಕ್ಕಿಯವರು ತಮ್ಮ ಮೂಲದೈವಗಳನ್ನು ಮರೆತಿದ್ದಾರೆ ಎಂದು ಹೇಳುವಂತಿಲ್ಲ.

ಆದರೆ, ತಿರುಪತಿ ತಿಮ್ಮಪ್ಪ ಅವರ ಬದುಕಿನ ಪ್ರತಿ ಹಂತದಲ್ಲೂ ಪ್ರವೇಶಿಸುತ್ತಾನೆ. ಅವರ ಮನೆಗಳ ಮುಂದಿನ ಪ್ರತಿ ತುಳಸಿಕಟ್ಟೆಯಲ್ಲಿಯೂ ತಿಮ್ಮಪ್ಪನ ಮೂರ್ತಿ ಇದ್ದೇ ಇರತಕ್ಕದ್ದು. ಒಳಗಿನ ಮನೆಯಲ್ಲಿಯೂ ತಿಮ್ಮಪ್ಪನ ಪ್ರತಿಷ್ಠಾಪನೆ. ಪ್ರತಿ ಶನಿವಾರ ತಿಮ್ಮಪ್ಪನ ಪೂಜೆ. ನಾಮಧಾರಣೆ ಆಗಲೇಬೇಕು. ಹರಕೆಯ ಕಟ್ಟಿಕೊಂಡು ತಿರುಪತಿ ಯಾತ್ರೆ ಮಾಡಿ ಬರುವವರ ಸಂಖ್ಯೆಯೂ ಕಡಿಮೆಯೇನಲ್ಲ. ತಿಮ್ಮಪ್ಪನ ಜೊತೆಗಿನ ಇವರ ಬಾಂಧವ್ಯ ಅಷ್ಟು ಮುಖ್ಯ ಹಾಗೂ ಕಡ್ಡಾಯ. ಇಂಥ ಸ್ಥಿತ್ಯಂತರಕ್ಕೆ ಕಾರಣವೇನು? ಮಲೆನಾಡಿನ ಮತ್ತು ಕರಾವಳಿಯ ಅನೇಕ ಬುಡಕಟ್ಟುಗಳು ಇಂಥ ಒಂದು ಧಾರ್ಮಿಕ ಅವಸ್ಥಾಂತರಕ್ಕೆ ಒಳಗಾಗಿ ತಮ್ಮ ಆಚರಣೆ

PDF created with pdfFactory Pro trial version www.pdffactory.com

ಸಂಪ್ರದಾಯಗಳಲ್ಲಿ ತಿಮ್ಮಪ್ಪನ ಆರಾಧನೆಯನ್ನೇ ಮುಖ್ಯವಾಗಿರಿಸಿಕೊಂಡಿರುವಲ್ಲಿ ಅನೇಕ ಸಾಮಾಜಿಕ ಮತ್ತು ಐತಿಹಾಸಿಕ ಕಾರಣಗಳಿರುವಂತಿದೆ. ಶ್ರೀ ರಾಮಾನುಜಾಚಾರ್ಯರ ಪಾತ್ರ ಇಲ್ಲಿ ಬಹಳ ಮುಖ್ಯವಾಗಿದೆ. ರಾಮಾನುಜಾಚಾರ್ಯರ ವೈಷ್ಣವೀಕರಣಕ್ಕೆ ಸ್ವತಃ ಬಿಟ್ಟಿದೇವನೇ ಒಳಗಾದಾಗಿನಿಂದ ಹಿಡಿದು ವಿಜಯನಗರದ ಅರಸರದವರೆಗೆ ಅನೇಕ ದಾಸ ಪರಂಪರೆಯ ಯತಿಗಳು ಈ ಕಾರ್ಯವನ್ನು ಮಾಡುತ್ತಲೇ ಬಂದರು. ಹೆಚ್ಚೂ ಕಡಿಮೆ ಇಡೀ ಕರ್ನಾಟಕವನ್ನು ತಮ್ಮ ಆಡಳಿತದಲ್ಲಿ ಇಟ್ಟುಕೊಂಡಿದ್ದ ವಿಜಯನಗರದ ಅರಸರು ತಿರುಪತಿ ತಿಮ್ಮಪ್ಪನ ಪರಮ ಭಕ್ತರೂ ಆಗಿದ್ದರು ಎಂಬುದನ್ನು ಇಲ್ಲಿ ಸ್ಮರಿಸಬೇಕು. ತಿರುಪತಿಯ ಮಠದಲ್ಲಿ ದೀಕ್ಷೆ ಪಡೆದ ಅನೇಕ ದಾಸರು ತಮ್ಮ ದೈವದ ಮಹಿಮೆಯನ್ನು ಸಾರುತ್ತಾ ತಮ್ಮ ಪಯಣದ ಮಾರ್ಗಗಳಲ್ಲಿ ಜನಸಾಮಾನ್ಯರಿಗೂ ದಾಸ ದೀಕ್ಷೆ ನೀಡುತ್ತಾ ಬಂದರು. ಆದರೆ ಈ ದಾಸರಿಂದಲೇ ಇಷ್ಟೆಲ್ಲ ಸ್ಥಿತ್ಯಂತರವಾಯಿತು ಎಂದು ಹೇಳಿ ಮುಗಿಸಿಬಿಡುವ ಹಾಗಿಲ್ಲ. ಯಾಕೆಂದರೆ ಸ್ವತಹ ತಿಮ್ಮಪ್ಪನೇ ಮೂಲದಲ್ಲಿ ಒಂದು ಬುಡಕಟ್ಟು ದೇವತೆ ಎಂಬ ಬಲವಾದ ವಾದಗಳಿವೆ. ದೇವರ ಹೆಸರಿನಲ್ಲಿ ಜನರ ಭಾವನೆಗಳನ್ನು ಪರಿವರ್ತಿಸಲಾಗಿದೆ ಎಂದು ನಾನು ಹೇಳುತ್ತಿದ್ದೇನೆ ಅಷ್ಟೇ. ಆದರೆ ಸ್ವತಃ ದೇವರನ್ನೇ ಹಾಗೆ ಪರಿವರ್ತಿಸಲಾಗಿದೆ ಎಂಬುದು ವಿದ್ವಾಂಸರ ಅಭಿಪ್ರಾಯ. ಶ್ರೀ ಎಸ್.ಕೆ. ರಾಮಚಂದ್ರರಾವ್ ತಮ್ಮ 'ತಿರುಪತಿ ತಿಮ್ಮಪ್ಪ' ಗ್ರಂಥದಲ್ಲಿ ಇಂಥ ಅನೇಕ ಸಂಗತಿಗಳನ್ನು ಬೆಳಕಿಗೆ ತಂದಿದ್ದಾರೆ. ನಂತರದಲ್ಲಿ ಈ ಸಂಗತಿಗಳ ಮೇಲೆ ಇನ್ನೂ ಹೆಚ್ಚಿನ ಬೆಳಕು ಚೆಲ್ಲಿರುವ ಒಂದು ಲೇಖನದ ಉಲ್ಲೇಖಗಳನ್ನು ಇಲ್ಲಿ ನೀಡ ಬಯಸುತ್ತೇನೆ.

"ಬಹುಶಃ ಮೇಲಿನ ಬೆಳವಣಿಗೆಗೆ ಕರ್ನಾಟಕದಲ್ಲಿ ಶ್ರೀ ವೈಷ್ಣವ ಮತದ ಪ್ರಸಾರದ ವೈಶಿಷ್ಟ್ಯತೆಯೇ ಕಾರಣವಾಗಿರಬಹುದು. ನಮಗೆ ತಿಳಿದುಬರುವಂತೆ ಹೊಯ್ಸಳ ರಾಜ್ಯದಲ್ಲಿ ೧೨ನೇ ಶತಮಾನದ ನಂತರ ಶ್ರೀ ವೈಷ್ಣವ ಅಗ್ರಹಾರಗಳೂ ಪೂಜಾಸ್ಥಳಗಳೂ ಬೆಳೆದು ಬಂದವು. ರಾಮಾನುಜರು ಕರ್ನಾಟಕದಲ್ಲಿ ಸಂಚರಿಸಿದ ನಂತರ ಈ ಬೆಳವಣಿಗೆಯಾಯಿತು ಎಂಬ ಸಾಮಾನ್ಯ ಗ್ರಹಿಕೆಯೂ ಇದೆ. ಶ್ರೀರಂಗಂ ಶ್ರೀವೈಷ್ಣವ ಮತದ ಪ್ರಧಾನ ಕೇಂದ್ರವಾದರೂ ರಾಮಾನುಜರಿಗೆ ತಿರುಪತಿ ಕ್ಷೇತ್ರದ ಸಂಪರ್ಕವೂ ಅಷ್ಟೇ ಗಾಢವಾಗಿ ಇತ್ತು. ಹೀಗಾಗಿ ತಿರುಪತಿಯ ದೇವತೆ ಕುರಿತು ಅವರ ಕಾಲದಲ್ಲಿ ಶೈವರಿಗೂ ವೈಷ್ಣವರಿಗೂ ಕಲಹ ಉಂಟಾದಾಗ, ರಾಮಾನುಜರು ಅಲ್ಲಿ ನಿರ್ಣಾಯಕವಾಗಿ ಶ್ರೀವೈಷ್ಣವರನ್ನು ಸ್ಥಾಪಿಸಿದರು ಎಂದು ಪ್ರತೀತಿ ಇದೆ. ಈ ಘಟನೆ ನಮಗೆ ಎರಡು ಮುಖ್ಯ ಅಂಶಗಳನ್ನು ಸೂಚಿಸುತ್ತದೆ. ಮೊದಲನೆಯದಾಗಿ ತಿರುಪತಿ ದೇವತೆಗೆ ರಾಮಾನುಜರ ಕಾಲದ ನಂತರ ವೈಷ್ಣವ ಗುರುತು ಗಟ್ಟಿಯಾಯಿತು ಹಾಗೂ ಮೂಲತಃ ಅದೊಂದು ವಿವಾದಾಸ್ಪದ ಪ್ರಾದೇಶಿಕ ದೇವತೆ ಎಂಬುದು.

ಎರಡನೆಯದಾಗಿ ಶ್ರೀ ವೈಷ್ಣವ ಮತವು ಇಂಥದೇ ಪ್ರಾದೇಶಿಕ ಕ್ಷೇತ್ರಗಳನ್ನು ಒಳಗೊಳುತ್ತ ಕರ್ನಾಟಕದಲ್ಲೂ ಪ್ರಸಾರವಾಗಿರಬಹುದು. ಕರ್ನಾಟಕದ ಗುಡ್ಡಬೆಟ್ಟಗಳಲ್ಲಿ ಕಂಡುಬರುವ ರಂಗನಾಥ–ತಿಮ್ಮಪ್ಪ ದೇವರು ಮೂಲತಃ ಗುಡ್ಡಗಾಡಿನ ದೇವತೆ. ಈ ದೇವತೆಯ ಮೂರ್ತಿಗಳು ಮತ್ತೊಂದು ಪ್ರಕಾರವಾಗಿವೆ. ಈ ದೇವತೆ ನಿಂತುಕೊಂಡ ಭಂಗಿಯಲ್ಲಿ ಇದ್ದು, ೧೬–೧೭ನೇ ಶತಮಾನದ ನಂತರದ ಈ ದೇವತೆಯ ಮೂರ್ತಿ ಬಿಲ್ಲುಬಾಣ ಹಾಗೂ ಶಂಖ ಚಕ್ರಗಳನ್ನು ಹಿಡಿದಿರುತ್ತದೆ. ಈ ಭಾಗದಲ್ಲಿ ಆ ಕಾಲದಲ್ಲಿ ನಿರ್ಮಾಣವಾದ ವೆಂಕಟೇಶ್ವರ ದೇವಾಲಯಗಳಲ್ಲೂ ಇದೇ ಮೂರ್ತಿಯನ್ನು ನೋಡುತ್ತೇವೆ. ಆದರೆ ನಮಗೆ ಸಿಗುವ ಪ್ರಾಚೀನ ಎರಡು ಕೈಗಳು ಅರ್ಧಂಬರ್ಧ ಕಾಣುತ್ತಿದ್ದು ಅದಕ್ಕೆ ಚಿನ್ನದ ಶಂಖ ಚಕ್ರಗಳನ್ನು ಹಿಡಿಸಲಾಗಿದೆ. ಮೂಲತಃ ಅವುಗಳಲ್ಲಿ ವೈಷ್ಣವ ಚಿಹ್ನೆಗಳು ಇದ್ದ ಸೂಚನೆ ಇಲ್ಲ. ಬಿಳಿಗಿರಿಯ ರಂಗನ ಮೂರ್ತಿಯಲ್ಲಿ ಇದೇ ಭಂಗಿಯಲ್ಲಿ ಇದ್ದುದನ್ನು ನೋಡಬಹುದು. ಆದರೆ ಆ ಮೂರ್ತಿಗೆ ಮತ್ತೆರಡು ಕೈಗಳಲ್ಲಿ ಶಂಖ ಚಕ್ರಗಳನ್ನು ಹಿಡಿಸಲಾಗಿದೆ. ಎಂದರೆ, ತಿರುಪತಿಯ ದೇವತೆಗೆ ವೈಷ್ಣವ ಗುರುತುಗಳ ಧಾರಣೆಯಾದ ನಂತರ ಪ್ರಚಲಿತದಲ್ಲಿ ಬಂದ ಒಂದು ಮೂರ್ತಿ ಪ್ರಕಾರ ಇದಾಗಿದೆ. ರಂಗನ ಮೂರ್ತಿಗೆ ಸೊಂಟದಲ್ಲಿ ಒಂದು ಖಡ್ಗ ನೇತಾಡುತ್ತಿರುವಂತೆ ತೋರಿಸಲಾಗಿದೆ. ತಿರುಪತಿಯ ದೇವರ ಕೈಗಳಲ್ಲಿ ಶ್ರೀವೈಷ್ಣವ ನಿರೂಪಣೆಗೂ ಪೂರ್ವದಲ್ಲಿ ಮರಬಿಲ್ಲು ಹಾಗೂ ಬಾಣಗಳನ್ನೂ ಇರಿಸುವ ವಾಡಿಕೆ ಇತ್ತು ಎಂಬುದಕ್ಕೂ ಕೆಲವು ಆಧಾರಗಳಿವೆ. ಆ ದೇವತೆಯ ಪುರಾಣದಲ್ಲಿ ಹಾಗೂ ಸಂಸ್ಕೃತ ಸ್ತೋತ್ರಗಳಲ್ಲಿ ಕೂಡ ಅದೊಂದು ಬೇಟೆಯ ದೇವತೆ ಎಂಬ ಉಲ್ಲೇಖಗಳಿವೆ."[೬]

ಧರ್ಮಪಂಥಗಳನ್ನು ಮತ್ತು ಪ್ರಚುರಪಡಿಸುವ ಆತುರದಲ್ಲಿ ಇಂಥ ರೂಪಾಂತರಗಳು ಹಾಗೂ ಪರಿವರ್ತನೆಗಳು ಭಾರತದಾದ್ಯಂತ ನಡೆದಿವೆ. ಇಂಥದ್ದೇ ಅವಸ್ಥಾಂತರಕ್ಕೆ ಒಳಗಾದ ಮತ್ತೊಂದು ಪ್ರಸಿದ್ಧ ದೇವತೆ ಎಂದರೆ ಪುರಿಯ ಜಗನ್ನಾಥ. ಮೂಲತಃ ಬುಡಕಟ್ಟು ದೈವವಾಗಿದ್ದ ಪುರಿಯ ಜಗನ್ನಾಥ ಆಳುವ ವರ್ಗ ಮತ್ತು ಪುರೋಹಿತ ವರ್ಗಗಳ ಕಪಿಮುಷ್ಟಿಗೆ ಸಿಲುಕಿ ಬಡಾಠಾಕೂರನಾದದ್ದು ಒಂದು ವಿಶೇಷ ಪ್ರಸಂಗ. ಆದಿವಾಸಿಗಳ ದೀನಬಂಧು ಎಂದು ಕರೆಸಿಕೊಳ್ಳುತ್ತಿದ್ದ ಜಗನ್ನಾಥ, ಅವರ ಪ್ರೀತಿಯ ದೈವವಾಗಿ ಪೊರೆಯುತ್ತಿದ್ದ ಜಗನ್ನಾಥ ಬಡಾಠಾಕೂರನಾಗಿ ಪರಿವರ್ತನೆ ಹೊಂದುವ ಮೂಲಕ ಅವರಿಂದ ದೂರ ಸರಿದು ಬ್ರಾಹ್ಮಣರ ಪರವಾದದ್ದನ್ನು ಅಲ್ಲಿ ನಾವು ಕಾಣುತ್ತೇವೆ. ಹಾಗೆ ಆಳುವವರು ಮತ್ತು ಪುರೋಹಿತರು ಜಗನ್ನಾಥನನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡ ಪರಿಣಾಮವಾಗಿ ಅಲ್ಲಿನ ಗುಡ್ಡ ಗಾಡಿನ ಜನರ ನೆಲೆಯೇ ತತ್ತರಿಸುತ್ತದೆ. ದೇವರ ಹೆಸರಿನಲ್ಲಿ ಕೃಷಿಭೂಮಿ ಮತ್ತು

PDF created with pdfFactory Pro trial version www.pdffactory.com

ಕಾಡಿನ ಪ್ರದೇಶಗಳನ್ನು ಹೊರಗಿನವರು ಆಕ್ರಮಿಸಿಕೊಳ್ಳುತ್ತಾರೆ. ಭೂಮಾಲೀಕರ ಹಿಡಿತಕ್ಕೆ ಸಿಕ್ಕ ಜಗನ್ನಾಥ ಬಡಾಠಾಕೂರನಾಗುತ್ತಾನೆ. ಆದಿವಾಸಿಗಳಿಗೆ ದೇವಸ್ಥಾನದ ಪ್ರವೇಶವೂ ನಿರಾಕರಿಸಲ್ಪಡುತ್ತದೆ. ಈ ನಿಷೇಧದ ವೈಚಿತ್ರ್ಯದಿಂದ ರೋಸಿ ಹೋದ ಆದಿವಾಸಿಗಳು 'ದಾರು ಪ್ರತಿಮಾ ನಾ ಪೂಜಿವೆ'(ಮರದ ಕಟ್ಟಿಗೆಯನ್ನು ನಾವು ಪೂಜಿಸುವುದಿಲ್ಲ) ಎಂಬ ಚಳುವಳಿಗೂ ಇಳಿದು ತಮ್ಮ ಪ್ರೀತಿಯ ಜಗನ್ನಾಥನನ್ನು ತಿರಸ್ಕರಿಸುವ ಒಂದು ಹಂತಕ್ಕೂ ಪರಿಸ್ಥಿತಿ ಹೋಗುತ್ತದೆ. ತಿರುಪತಿ ತಿಮ್ಮಪ್ಪ ಮತ್ತು ಬಿಳಿಗಿರಿ ರಂಗಯ್ಯನವರುಗಳೂ ಈಗ ಹಾಗೇ ಸ್ಥಿತ್ಯಂತರಗೊಂಡು ಪುರೋಹಿತರ ಹಿಡಿತದಲ್ಲಿದ್ದಾ ರಾದರೂ, ಜನರು ಮಾತ್ರ ತಮ್ಮ ಪ್ರೀತಿಯ ದೈವಗಳನ್ನು ಪುರೋಹಿತರು ಹೇಳಿ ಕೊಟ್ಟಿದ್ದಕ್ಕಿಂತ ಭಿನ್ನವಾಗಿ ಆರಾಧಿಸುತ್ತಿದ್ದಾರೆ ಎಂಬುದು ಮುಖ್ಯ. ದೇವರು ಎಲ್ಲಿಂದಲೇ ಬರಲಿ ಅವನನ್ನು ತಮ್ಮ ನೆಲೆಯಲ್ಲಿ ಸ್ಥಳೀಯನನ್ನಾಗಿ ಪರಿವರ್ತಿಸಿಕೊಳ್ಳುವ ಶಕ್ತಿ ಬುಡಕಟ್ಟುಗಳಿಗಿದೆ.

ಘಟ್ಟ ಮತ್ತು ಘಟ್ಟದ ಕೆಳಗಿನ ಅನೇಕಾನೇಕ ಜನವರ್ಗಗಳಿಗೆ ತುಳಸಿ ಪವಿತ್ರತಮವಾದ ಒಂದು ಸಸ್ಯ. ಹಾಲಕ್ಕಿ ಒಕ್ಕಲಿಗರೂ ಇದಕ್ಕೆ ಹೊರತಲ್ಲ. ಇವರ ತುಳಸಿಕಟ್ಟೆ ಎಂದರೆ ಅದೊಂದು ಪರಮಪೂಜನೀಯ ಸ್ಥಳ ಎಂದೇ ಅರ್ಥ. ಪ್ರತಿ ಮನೆಯ ಮುಂದೆ ಪ್ರತಿಷ್ಠಾಪಿಸಲ್ಪಟ್ಟ ತುಳಸಿ ಕಟ್ಟೆಯೇ ಹಾಲಕ್ಕಿ ಒಕ್ಕಲಿಗರು ನಂಬಿದ ಇತರ ದೇವರಿಗೂ ಆವಾಸಸ್ಥಾನ. ಒಂದು ರೀತಿಯಲ್ಲಿ ತುಳಸಿಗೂ ವೆಂಕಟರಮಣನಿಗೂ ಅವಿನಾಭಾವ ಸಂಬಂಧ ಹಾಲಕ್ಕಿ ಮನೆಗಳಲ್ಲಿ ತುಳಸಿ ಕಟ್ಟೆಗಳಿಲ್ಲದೇ ವೆಂಟರಮಣನಿಲ್ಲ. ವೆಂಕಟರಮಣನಿಲ್ಲದೆ ತುಳಸಿಕಟ್ಟೆಯೂ ಇಲ್ಲ, ತುಳಸಿ ತಿಮ್ಮಪ್ಪನ ಹೆಂಡತಿ ಎಂಬುದು ಇವರ ನಂಬಿಕೆ. ಇವರು ವೆಂಕಟರಮಣನನ್ನು ದೈವವನ್ನಾಗಿ ಸ್ವೀಕರಿಸಿದ ಮೇಲೆ ತುಳಸಿಯನ್ನು ಜೊತೆಗೆ ಇಟ್ಟುಕೊಂಡರೋ ಅಥವಾ ತುಳಸಿ ಇವರ ಮೂಲ ಆರಾಧನೆಯ ಒಂದು ಸಸ್ಯವಾಗಿತ್ತೋ ಎಂಬುದು ಇನ್ನು ಸ್ಪಷ್ಟವಾಗಬೇಕಾದ ವಿಚಾರ.

ಒಟ್ಟಿನಲ್ಲಿ ಹಾಲಕ್ಕಿಯವರ ದೇವರ ಚರಿತ್ರೆ ತುಂಬ ಆಸಕ್ತಿದಾಯಕವಾದುದು. ಬೇಟೆ ಪಶುಪಾಲನೆ ಮತ್ತು ಕೃಷಿಯ ವಿವಿಧ ಹಂತಗಳಲ್ಲಿ ವಿಕಸನಗೊಂಡ ಅವರ ದೈವಗಳ ಆರಾಧನೆ ಅನೇಕ ಅವಸ್ಥೆಗಳನ್ನು ದಾಟಿದೆ ಎಂಬಂತೆ ಮೇಲ್ನೋಟಕ್ಕೆ ಕಂಡರೂ, ಆ ಎಲ್ಲ ಪ್ರಾಚೀನ ಅಂಶಗಳನ್ನು ಒಳಗೊಂಡು ಇಂದು ಒಂದು ಸಂಕೀರ್ಣಾವಸ್ಥೆಯಲ್ಲಿ ಕಾಣಿಸಿಕೊಳ್ಳುತ್ತಿದೆ. ಸೂರ್ಯ, ಚಂದ್ರ, ಭೂಮಿತಾಯಿ, ಬೀರ, ಜಟ್ಟಿಗ, ಮಾಸ್ತಿ, ಚೌಡಿ, ಕರಿ ಕಾನಮ್ಮ, ದೇವಿಕಾನಮ್ಮ, ಮಾಸ್ತಮ್ಮ ಹಾಗೂ ತಿರುಪತಿ ತಿಮ್ಮಪ್ಪನವರೆಗೆ ವಿಸ್ತರಿಸುತ್ತಾ ಯಾವುದನ್ನೂ ಬಿಡದೆ, ಹೊಸ ಹೊಸದಾಗಿ ಸೇರಿಸಿಕೊಳ್ಳುತ್ತಾ ಹೋಗುತ್ತಿರುವ ರೀತಿಯನ್ನು ನೋಡಿದರೆ, ಒಂದು ಪರಂಪರೆಯನ್ನು

ಸಂರಕ್ಷಿಸುತ್ತಲೇ ಹೊಸದನ್ನು ಆಹ್ವಾನಿಸಿಕೊಳ್ಳುವ ಕ್ರಿಯಾಶೀಲ ಗುಣವೊಂದು ಇಲ್ಲಿ ನಿಚ್ಚಳವಾಗಿ ಕಾಣಿಸಿಕೊಳ್ಳುತ್ತದೆ ಎಂದು ಹೇಳಬಹುದು.

೨.೨. ಜಟ್ಟಿಗನ ಬನ

ಇದೇ ಉತ್ತರ ಕನ್ನಡ ಕರಾವಳಿಯ ಭಟ್ಕಳದ ಸುತ್ತಮುತ್ತ ಇರುವ ಗೊಂಡರ ಜೀವನ ಕ್ರಮ ಮತ್ತು ಅವರ ದೈವರಾಧನೆಯ ವೈವಿಧ್ಯಗಳು ಕೂಡ ಅಧ್ಯಯನಕ್ಕೆ ಯೋಗ್ಯವಾದ ವಿಚಾರಗಳು. ಸಮುದ್ರಕ್ಕೆ ತೀರಾ ಹತ್ತಿರದಲ್ಲಿರುವ ಭಟ್ಕಳ ಮತ್ತು ಶಿರಾಲಿ ಹಾಗೂ ನಿಬಿಡಾರಣ್ಯದ ತಾಣಗಳೆನಿಸಿದ ಗೋವರ್ಧನಗಿರಿ ಮತ್ತು ಮೆಘಾನೆ ಬೆಟ್ಟಸಾಲುಗಳಿಂದ ಹಿಡಿದು ಮಾರುಕೇರಿಯವರೆಗೆ ದಟ್ಟ ಕಾಡುಗಳ ಒಡಲಲ್ಲಿ ನೆಲೆಸಿರುವ ಗೊಂಡರು ವಿಶಿಷ್ಟ ಜೀವನಕ್ಕೆ ಹೆಸರಾದವರು.

ಮಾರುಕೇರಿ ಎಂಬ ಗೊಂಡರ ಒಂದು ತಾಣದಲ್ಲಿ 'ಜಟ್ಟಿಗನ ಬನ'ವೊಂದು ಇದೆ. ಇಲ್ಲಿಂದಲೇ ಅವರ ಅನೇಕ ದೈವಗಳನ್ನು ಪರಿಚಯಿಸಲು ಪ್ರಯತ್ನಿಸುತ್ತೇನೆ. ಮಾರುಕೇರಿಯ ಜಟ್ಟಿಗನ ಬನ ಎಂದರೆ ಅದೊಂದು ಪರಿಸರ ನಿರ್ಮಿತ ಸಸ್ಯವನ. ಹಾಲುಬರುವ ಅನೇಕ ರೀತಿಯ ಮರಗಿಡ ಬಳ್ಳಿಗಳ ಸಮೂಹ ಅದು. ಅಲ್ಲಿರುವ ಮರಗಿಡ ಬಳ್ಳಿಗಳನ್ನು ಯಾರೂ ಕಡಿಯಬಾರದೆಂಬ ನಿಷೇಧವಿರುವುದರಿಂದ ನೂರಾರು ವರ್ಷಗಳಿಂದ ಬೆಳೆದ ಮರಗಳು ತಮ್ಮ ಪ್ರಾಚೀನಾವಸ್ಥೆಯನ್ನು ತೋರಲೋ ಎಂಬಂತೆ ಅಂಕುಡೊಂಕಾಗಿ ಸುಕ್ಕುಗಟ್ಟಿಬಾಗಿ ಬಿದ್ದು ವಿಚಿತ್ರಾಕಾರದಲ್ಲಿವೆ. ಅವುಗಳನ್ನು ಅಪ್ಪಿ ಹಬ್ಬಿದ ಬಳ್ಳಿಗಳು ಮಾರಿಬಲೆಯ ಹಗ್ಗದ ರೀತಿಯಲ್ಲಿ ಎಲ್ಲೆಲ್ಲೂ ಹೆಣೆದುಕೊಂಡಿವೆ. ಈ ಸೊಂಪಾದ ವನದಲ್ಲಿ ಒಂದು ಉದ್ದನೆಯ ಜಗುಲಿ ನಿರ್ಮಿಸಲಾಗಿದೆ. ಆ ಜಗುಲಿಯ ಮೇಲೆ ಹತ್ತಾರು ಜಟ್ಟಿಗನ ಕೊಂಬುಗಳಿವೆ. ಜಟ್ಟಿಗನ ಕೊಂಬು ಅಂದರೇನು? ಗೊಂಡರ ಸಾಂಸ್ಕೃತಿಕ ವೀರರನ್ನು ಜಟ್ಟಿಗರು ಎಂದು ಕರೆಯಲಾಗುತ್ತದೆ. ಅಂಥ ಹತ್ತಾರು ಜಟ್ಟಿಗರು ಅವರಲ್ಲಿ ಪೂಜೆಗೊಳ್ಳುತ್ತಿದ್ದಾರೆ. ಆ ಜಟ್ಟಿಗರ ಆಯುಧ ರೂಪದ ಮರದ ಆಕೃತಿಗಳೇ ಜಟ್ಟಿಗನ ಕೊಂಬು.

ನೇತ್ರಾಣಿ ಜಟ್ಟಿಗ, ಕುಂಟ ಜಟ್ಟಿಗ, ಗುಡಿ ಜಟ್ಟಿಗ, ಮೋಟಗಾರ ಜಟ್ಟಿಗ, ಕೋಟೆ ಜಟ್ಟಿಗ, ಹೊಗೇಡಿ ಜಟ್ಟಿಗ, ಹೊಟ್ಕಾಣಿ ಜಟ್ಟಿಗ ಮುಂತಾಗಿ ಆ ಜಟ್ಟಿಗರನ್ನು ಗುರುತಿಸಲಾಗುತ್ತದೆ. ಜಟ್ಟಿಗರ ಹೆಸರಿನಲ್ಲಿ ಹರಕೆ ಹೊತ್ತವರು ತಂದು ಸಲ್ಲಿಸುವ ಆಯುಧ ರೂಪದ ಮರದ ಕಂಬಗಳನ್ನು ಆ ಜಗುಲಿಯ ಮೇಲೆ ನೆಡಲಾಗುತ್ತದೆ. ಹಾಗೆ ಯಾಕಾಗಿ ಹರಕೆ ಹೊತ್ತು ತಂದು ಕೊಡುತ್ತಾರೆ? ಈ ಜಟ್ಟಿಗರೆಲ್ಲ ಒಂದಾನೊಂದು ಕಾಲದಲ್ಲಿ ಗೊಂಡರ ಒಳಿತಿಗಾಗಿ ಸೆಣಸಿ ಶ್ರಮಿಸಿ ದೇಹತ್ಯಾಗ ಮಾಡಿದವರು. ಅವರೆಲ್ಲ ಇಂದು ಜಟ್ಟಿಗರು ಅರ್ಥಾತ್ ಬಲಾಢ್ಯರು, ಪರಾಕ್ರಮಿಗಳು, ತ್ಯಾಗವೀರರು ಎಂಬ ಅರ್ಥದಲ್ಲಿ ಪೂಜೆಗೊಳ್ಳುತ್ತಿದ್ದಾರೆ. ಹೆಣ್ಣಿನ ರಕ್ಷಣೆ ಇರಬಹುದು,

PDF created with pdfFactory Pro trial version www.pdffactory.com

ಊರ ರಕ್ಷಣೆ ಇರಬಹುದು, ಒಟ್ಟಾರೆ ಆ ಇಡೀ ಬುಡಕಟ್ಟಿನ ರಕ್ಷಣೆ ಇರಬಹುದು. ಗೊಂಡರು ಇಂದು ಪೂರ್ಣಪ್ರಮಾಣದ ಕೃಷಿಕರು. ಅವರ ಬೆಳೆಗಳನ್ನು, ದನಕರುಗಳನ್ನು ನಾಶ ಮಾಡುತ್ತಿದ್ದ ಹುಲಿ ಮತ್ತು ಹಂದಿಗಳನ್ನು ಕೊಂದು ಅಥವಾ ಕೊಲ್ಲುವ ಕ್ರಿಯೆಯಲ್ಲಿ ಮರಣಕ್ಕೆ ತುತ್ತಾಗಿ ಸ್ವರ್ಗ ಸೇರಿದ ಸಾಹಸಿಗಳೂ ಇರಬಹುದು. ಅಂಥ ಜಟ್ಟಿಗರನ್ನೂ ತಮ್ಮ ಬುಡಕಟ್ಟಿನ ವೀರರನ್ನಾಗಿ ಪರಿಗಣಿಸಿ ಇಂದು ಗೊಂಡರು ಪೂಜಿಸುತ್ತಿದ್ದಾರೆ. ಅವರ ಆರಾಧನೆ ಅತ್ಯಂತ ಸಾಂಕೇತಿಕವಾದುದು. ಆ ವೀರರು ತಮ್ಮ ಹೋರಾಟದ ಸಂದರ್ಭದಲ್ಲಿ ಬಳಸಿರಬಹುದಾದ ಆಯುಧ ರೂಪದ ಮರದ ಕೊಂಬೆಯೇ ಅವರನ್ನು ಪ್ರತಿನಿಧಿಸುವ ಸಾಧನ. ಈಗಲೂ ಅಭೇದ್ಯ ಅರಣ್ಯಗಳ ನಡುವೆ ವಾಸಿಸುವ ಗೊಂಡರಿಗೆ ಹುಲಿ ಮತ್ತು ಹಂದಿಯ ಕಾಟ ತಪ್ಪಿದ್ದಲ್ಲ. ಅವರು ಹರಕೆ ಹೊರುತ್ತಾರೆ. ನಮ್ಮ ಹೊಲವನ್ನು ಹಂದಿ ಹಾಳು ಮಾಡದಂತೆ, ನಮ್ಮ ದನಕರುಗಳನ್ನು ಹುಲಿ ಹಿಡಿಯದಂತೆ ಕಾಪಾಡು ಎಂದು. ಹಾಗೆ ಹರಕೆ ಹೊತ್ತವರು ಅಂಥ ಒಂದು ಜಟ್ಟಿಗನ ಕೊಂಬನ್ನು ಮಾಡಿಸಿ ತಂದು ಆ ಬನದಲ್ಲಿ ಪ್ರತಿಷ್ಠಾಪಿಸುತ್ತಾರೆ. ಹಾಗೆ ಹರಕೆ ಹೊತ್ತು ಸಲ್ಲಿಸಿದ ಹತ್ತಾರು ಜಟ್ಟಿಗನ ಕೊಂಬುಗಳು ಅಲ್ಲಿವೆ.

ಅವರ ವೀರರಾದ ಜಟ್ಟಿಗರು ಹುಲಿ ಹಂದಿಗಳನ್ನು ಕೊಂದಿರಬಹುದು. ಆದರೆ ಎಲ್ಲರೂ ಆ ಕೆಲಸ ಮಾಡಲು ಸಾಧ್ಯವಿಲ್ಲವಲ್ಲ. ಆದ್ದರಿಂದ ಅವರು ಕಂಡುಕೊಂಡ ಉಪಾಯವೆಂದರೆ ಹುಲಿ ಮತ್ತು ಹಂದಿಯನ್ನು ಪೂಜಿಸುವುದು. ಇದು ಪೂಜೆಯೂ ಇರಬಹುದು, ಇಲ್ಲವೆ ಮಾಟದ ರೂಪದ ನಿಯಂತ್ರಣವೂ ಇರಬಹುದು. ಹುಲಿ ಮತ್ತು ಹಂದಿಯ ರೂಪದ ಮೂರ್ತಿಗಳನ್ನು ಮಾಡಿಸಿ, ಅಂದರೆ ಅನುಕರಿಸಿ, ಅವು ತಮ್ಮ ಸಂಪತ್ತನ್ನು ಹಾಳು ಮಾಡದಂತೆ ತಡೆಯುವ ಕ್ರಮಗಳನ್ನು ಅವರು ಕೈಗೊಳ್ಳುತ್ತಾರೆ. ದೇವಿಪ್ರಸಾದ್ ಚಟ್ಟೋಪಾಧ್ಯಾಯ ಅವರು ಹೇಳುವಂತೆ ನಾವು ಆಶಿಸಿದ್ದನ್ನು ಪಡೆಯಲು ಅಥವಾ ಹಾಗೇ ಮಾಡಲು ಅಸಹಾಯಕರಾದಾಗ, ನೃತ್ಯದ ಮೂಲಕವೋ ಅಥವಾ ಆಚರಣೆಯ ಮೂಲಕವೋ ಅದನ್ನು ಅನುಕರಿಸುತ್ತೇವೆ. ಅರ್ಥಾತ್ ಪುನರಭಿನಯಿ ಸುತ್ತೇವೆ. ಅದನ್ನೇ ಮಾಟ ಎಂದು ಕರೆಯುವುದು. ಹಾಗೆ ಮಾಡುವುದರಿಂದ ಯಾವುದು ವಾಸ್ತವದಲ್ಲಿ ಅಸಾಧ್ಯವೋ ಅದನ್ನು ಪರೋಕ್ಷ ರೂಪದಲ್ಲಿ ಸಾಧ್ಯ ಆಗಿಸುವುದು ಅವರ ಆಶಯ. ಇದು ಆದಿ ಮಾನವನ ಒಂದು ನಂಬಿಕೆ ಗೊಂಡರ ಹುಲಿ ಮತ್ತು ಹಂದಿಯ ಮೂರ್ತಿಗಳ ಅರ್ಪಣೆ ಎಂದರೆ ಇಂಥದ್ದೇ ಒಂದು ಮಾಟದ ಕ್ರಿಯೆ. ಬಹುಶಃ ಇದು ಗೊಂಡರ ಅತ್ಯಂತ ಪ್ರಾಚೀನ ಪದ್ಧತಿಗಳಲ್ಲಿ ಒಂದು ಎಂದು ಹೇಳಬಹುದು. ಹೀಗೆ ಹರಕೆ ಕಟ್ಟಿ ಅರ್ಪಿಸಿದ ನೂರಾರು ಹುಲಿ ಮತ್ತು ಹಂದಿಯ ಚಿತ್ರಗಳು ಆ ಜಟ್ಟಿಗನ ಬನದಲ್ಲಿ ಇವೆ.

ಈಗ ನೇರವಾಗಿ ಭಟ್ಕಳ ಪೇಟೆ ಮತ್ತು ಸಮುದ್ರದ ನಡುವೆ ಇರುವ ಒಂದು ವಿಶಾಲ ಬಯಲಿನ ಗೊಂಡರ ಆರಾಧ್ಯ ದೇವತೆ ಕೋಗ್ತಿ ಗುಡಿಗೆ ಹೋಗೋಣ. ವಿಶಾಲ ಬಯಲಿನ ನಡುವೆ ಒಂದು ಸುಂದರವಾದ ಕೆರೆ ಇದೆ. ಆ ಕೆರೆಯ ದಡದಲ್ಲಿ ಪೂರ್ವಾಭಿಮುಖವಾಗಿ ಕಟ್ಟಲಾಗಿರುವ ಸರಳ ದೇವಾಲಯ. ಅದೇ ಕೋಗ್ತಿ ಗುಡಿ. ಈ ದೈವವನ್ನು 'ಕೋಗ್ತಿಕಟ್ಟೆ ಮಾಸ್ತಿ' ಎಂದೂ ಕರೆಯುತ್ತಾರೆ. ವರ್ಷಕ್ಕೊಮ್ಮೆ, ಅಂದರೆ ಸಂಕ್ರಾಂತಿಯ ಮಾರನೇ ದಿನ ಇಲ್ಲಿ ಜಾತ್ರೆ ನಡೆಯುತ್ತದೆ. ಸಮಸ್ತ ಗೊಂಡರೂ ಅಲ್ಲಿ ನೆರೆಯುತ್ತಾರೆ.

ಭಟ್ಕಳ ಈಗೊಂದು 'ಮಿನಿ ದುಬಾಯ್' ಎಂದೇ ಹೆಸರು ಪಡೆದಿದೆ. ದಿನ ದಿನಕ್ಕೂ ಪಾಶ್ಚಾತ್ಯ ನಾಗರಿಕತೆಯನ್ನು ರೂಢಿಸಿಕೊಂಡು ಬೆಳೆಯುತ್ತಿರುವ ಈ ಚಿಕ್ಕ ಪಟ್ಟಣ ಅತ್ಯಾಧುನಿಕ ಕಟ್ಟಡಗಳನ್ನು ಹೊಂದಿದೆ. ಇಂಥ ಆಧುನಿಕ ಭಟ್ಕಳದಲ್ಲಿ ಗೊಂಡರ ಕೋಗ್ತಿ ಗುಡಿ ಇದೆಯಲ್ಲ ಎಂದು ಆಶ್ಚರ್ಯ ಪಡಬೇಕಾಗಿಲ್ಲ. ಹಿಂದೆ ಭಟ್ಕಳದ ಸಮುದ್ರದಂಚಿನವರೆಗೂ ದಟ್ಟಾರಣ್ಯವೇ ಇತ್ತು. ಬೆಟ್ಟಗುಡ್ಡಗಳಿಂದ ಆವೃತವಾದ ಭಟ್ಕಳ ಮತ್ತು ಮುರ್ಡೇಶ್ವರಗಳ ಸಮುದ್ರತೀರ ಇಂದಿಗೂ ಅಷ್ಟೇ ಆಕರ್ಷಕ. ಹಾಗೆ ನೋಡಿದರೆ ಇಡೀ ಉತ್ತರ ಕನ್ನಡದಲ್ಲಿ ಸಮುದ್ರದ ಅಂಚಿನವರೆಗೂ ಘಟ್ಟಗಳು ವ್ಯಾಪಿಸಿ ಬೃಹತ್ ಅರಣ್ಯವಿದ್ದ ಲಕ್ಷಣಗಳೇ ತುಂಬಿವೆ. ಹೀಗಾಗಿ ಕಾಡಿನ ವಾಸಿಗಳಾದ ಗೊಂಡರು ಸಮುದ್ರದ ಅಂಚಿನವರೆಗೂ ವಾಸವಾಗಿದ್ದರು. ಅರಣ್ಯಕ್ಕೂ ಸಮುದ್ರಕ್ಕೂ ಒಂದು ರೀತಿಯಲ್ಲಿ ನೆಂಟಸ್ತನ ಬೆಳೆಸಿದವರು ಈ ಗೊಂಡರು ಎಂದು ಹೇಳಿದರೆ ಆಶ್ಚರ್ಯವೇನಲ್ಲ. ಇದರ ಕುರುಹಾಗಿ ಭಟ್ಕಳದಿಂದ ಹತ್ತಾರು ಕಿ.ಮೀ. ಒಳಭಾಗದಲ್ಲಿ ಸಮುದ್ರದ ಮಧ್ಯೆ ಕಡುಗಪ್ಪು ನೀರಿನಿಂದಾವೃತವಾದ ನೇತ್ರಾಣಿ ಗುಡ್ಡದಲ್ಲಿಯೂ ಗೊಂಡರ ಸಾಂಸ್ಕೃತಿಕ ವೀರನೆನಿಸಿದ ಕುಂಟ ಜಟ್ಟಿಗನ ಕೊಂಬುಗಳಿವೆ. ಇವನನ್ನು ನೇತ್ರಾಣಿ ಜಟ್ಟಿಗ ಎಂದೂ ಕರೆಯುತ್ತಾರೆ. ಈಗಲೂ ಹಬ್ಬ ಜಾತ್ರೆಗಳ ಸಂದರ್ಭದಲ್ಲಿ ಆ ಭೋರ್ಗರೆಯುವ ಸಮುದ್ರವನ್ನು ಹಾದು ನೇತ್ರಾಣಿ ಗುಡ್ಡದಲ್ಲಿ ಪೂಜೆ ಸಲ್ಲಿಸಿ ಬರುವ ಗೊಂಡರೂ ಉಂಟು. ದೂರಕ್ಕೆ ನಿಗೂಢ ಪರ್ವತದಂತೆ ಕಾಣುವ ಆ ಸಾಗರದೊಳಗಿನ ಗುಡ್ಡ ಒಂದು ಕಾಲಕ್ಕೆ ಗೊಂಡರ ಪವಿತ್ರ ಸ್ಥಳವಾಗಿತ್ತೆಂದು ಹೇಳುತ್ತಾರೆ.

ಕೋಗ್ತಿ ಗುಡಿಯ ಒಳಗೆ ಏನೇನು ವಿಶೇಷಗಳಿವೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ. ಒಳಗಿನ ಹಜಾರದಲ್ಲಿ ಸಾಲುಸಾಲಾಗಿ ನಿಲ್ಲಿಸಿದ ಬಣ್ಣಬಣ್ಣದ ಮಾಸ್ತಿ ಮಹಾಸತಿಯರ ಮರದ ಮೂರ್ತಿಗಳವೆ. ಅವುಗಳೆಲ್ಲ ಭಕ್ತರು ಹರಕೆ ಹೊತ್ತ ಕಾರಣಕ್ಕಾಗಿ ಮಾಡಿಸಿ ತಂದಿಟ್ಟ ಮೂರ್ತಿಗಳು. ಗುಡಿಯ ಸುತ್ತ ಕಾಂಪೌಂಡ್ ರೀತಿಯಲ್ಲಿ ಹೊರಗೋಡೆ ನಿರ್ಮಿಸಿದ್ದು, ಆ ಗೋಡೆಯೊಳಗಿನ ಆವರಣದಲ್ಲಿ

PDF created with pdfFactory Pro trial version www.pdffactory.com

ಒಂದು ಚೌಡಿಕಟ್ಟೆ ಇದೆ. ಅಲ್ಲಿಯೂ ಅನೇಕ ರೀತಿಯ ಜಟ್ಟಿಗನ ಕೊಂಬುಗಳಿವೆ. ಈ ಜಟ್ಟಿಗರೆಲ್ಲ ಇಲ್ಲಿ ಕೋಗ್ತಿಯ ಸೇವಕರು. ಅಥವಾ ಅವಳ ಆಜ್ಞಾನುವರ್ತಿಗಳಾದ ಭಂಟರು. ತುಳಸಿ ಮತ್ತು ನಾಗರಕಲ್ಲುಗಳ ಕಟ್ಟೆಗಳೂ ಇಲ್ಲಿ ಇವೆ.

ಮಹಾಸತಿಯರಾದ ಅನೇಕಾನೇಕ ಮಾಸ್ತಿಯರು ಗೊಂಡರ ಎಲ್ಲ ಪ್ರದೇಶಗಳಲ್ಲಿ ಕಂಡು ಬರುತ್ತಾರೆ. ಆ ಎಲ್ಲಾ ಮಾಸ್ತಿಯರ ಸಂಕೇತವೇ ಈ ಕೋಗ್ತಿಕಟ್ಟೆ ಮಾಸ್ತಿ. ಹೊಸ್ ಮಾಸ್ತಿ, ಹಾದಿ ಮಾಸ್ತಿ, ವೀರ ಮಾಸ್ತಿ, ಕೊಡದ ಮಾಸ್ತಿ, ಮಹಾ ಮಾಸ್ತಿ ಮುಂತಾಗಿ ಅನೇಕ ವಿಧವಾದ ಮಾಸ್ತಿಯರನ್ನು ಇವರು ಆರಾಧಿಸುತ್ತಾರೆ. ಹರಕೆ ಮಾಡಿಕೊಂಡವರು ತಂದು ಒಪ್ಪಿಸಿದ ಮಾಸ್ತಿಯರಂತೂ ನೂರಾರು. ಸುಂದರವಾದ ಮರದ ಮೂರ್ತಿಯನ್ನು ಮಾಡಿಸಿ, ಅವುಗಳಿಗೆ ಹೊಂದುವ ವಿವಿಧ ಬಣ್ಣಗಳನ್ನು ಸಂಯೋಜಿಸಿ ಒಂದು ಸುಂದರ ದೇವಿವಿಗ್ರಹವನ್ನಾಗಿ ರೂಪಿಸಿ ಅದನ್ನು ತಂದು ಕೋಗ್ತಿಗುಡಿಗೆ ಒಪ್ಪಿಸುತ್ತಾರೆ. ಈ ಪದ್ಧತಿ ಈ ಭಾಗದಲ್ಲಿ ತುಂಬ ಜನಪ್ರಿಯ ಎನ್ನುವುದಕ್ಕೆ ಸಾಕ್ಷಿಯಾಗಿ ಭಟ್ಕಳದ ಸಮೀಪವಿರುವ ಸೋಡಿಗದ್ದೆಯ ಮಾಸ್ತಿ ಗುಡಿಗೆ ಹೋಗಬೇಕು. ಅಲ್ಲಿ ಕೇವಲ ಗೊಂಡರಷ್ಟೇ ಭಕ್ತರಲ್ಲ. ಇತರೆ ಅನೇಕ ಜನವರ್ಗಗಳು ಅಲ್ಲಿನ ಭಕ್ತರು. ಹೀಗೇ ಹರಕೆ ಕಟ್ಟಿಕೊಂಡು ಅರ್ಪಿಸಿದ ಸಾವಿರಾರು ಮಾಸ್ತಿ ವಿಗ್ರಹಗಳು ಅಲ್ಲಿನ ವಿಶಾಲ ದೇವಸ್ಥಾನದಲ್ಲಿ ಸ್ಥಾನ ಪಡೆದಿವೆ. ರಾಶಿರಾಶಿಯಾದ ಆ ಅಂದದ ಮೂರ್ತಿಗಳನ್ನು ನೋಡುವುದೇ ಒಂದು ಆನಂದ.

ಗೊಂಡರ ಆರಾಧನೆಯಲ್ಲಿ ಹೆಸರಿಸಲೇಬೇಕಾದ ಮತ್ತೊಂದು ಆಚರಣೆ ಅವರ ಮಂಡಳ ಕುಣಿತ. ಇದು ಕೋಗ್ತಿ ಜಾತ್ರೆಯಂದು ನಡೆಯುತ್ತದೆ. ಈಗಾಗಲೇ ಹೇಳಿದಂತೆ ಈ ಜಾತ್ರೆ ಸಂಕ್ರಾಂತಿಯ ಮಾರನೇ ದಿನ ನಡೆಯುತ್ತದೆ. ಮಂಡಲ ಕುಣಿತಕ್ಕೆ ಪೂರ್ವಭಾವಿಯಾಗಿ ಸಾಂಕೇತಿಕವಾಗಿ ಸಿಡಿಯಾಡುವುದು, ಮಾಸ್ತಿಯ ಮೂರ್ತಿಗಳಿಗೆ ಪೂಜೆ ಸಲ್ಲಿಸುವುದು, ದೆವ್ವ ಮೈಮೇಲೆ ಬರುವುದು ಮುಂತಾದ ಮುಖ್ಯ ಆಚರಣೆಗಳು ಅಂದು ನಡೆಯುತ್ತವೆ. ಈ ಮಂಡಲಪೂಜೆ ದೇವಾಲಯದ ಹೊರಗೆ ಬರೆದ ಮಂಡಲವನ್ನನುಸರಿಸಿ ನಡೆಯುತ್ತದೆ.

ಮಂಡಲವನ್ನು ಬರೆಯುವ ಗೆರೆಗಳನ್ನು 'ಗರಿ'ಗಳೆಂದು ಕರೆಯುತ್ತಾರೆ. ಕಪ್ಪು, ಕೆಂಪು, ಹಳದಿ, ನೀಲಿ, ಹಸಿರು ಮುಂತಾದ ಎಲ್ಲ ಬಣ್ಣಗಳ ಗರಿಯನ್ನು ಬರೆಯಲಾಗುತ್ತದೆ. ಹೀಗೆ ಮಂಡಲ ಬರೆಯುವಾಗ ಅಕ್ಕಿಹಿಟ್ಟು, ಅರಿಶಿನ, ಕುಂಕುಮ ಮೊದಲಾದವುಗಳ ಮಿಶ್ರಣವನ್ನು ಬಳಸುತ್ತಾರೆ. ಮಂಡಲದ ತ್ರಿಜ್ಯ ಸಾಧಾರಣ ಎರಡು ಅಡಿ. ಮಂಡಲವು ಒಂದೇ ಆಗಿದ್ದು ನಾಲ್ಕು ಬದಿಗಳಲ್ಲಿ ನಾಲ್ಕು ರೀತಿಯ ಚೌಕವಿರುತ್ತದೆ. ಮಂಡಲದ ಮೇಲೆ ಹಾವಿನ ಆಕಾರವೊಂದನ್ನು ಬರೆದಿರುತ್ತಾರೆ. ಅದೇ ಸಂದರ್ಭದಲ್ಲಿ ಗುಡಿಯ ಹೊರಗೆ ಬಾಗಿನಲ್ಲಿ ಒಂದು ಚೊಂಬಿನಲ್ಲಿ ಸ್ವಲ್ಪ

ನೀರನ್ನು ತುಂಬಿಸಿ ಅದಕ್ಕೆ ಹಿಂಗಾರದ ಕೊನೆಯೊಂದನ್ನಿಟ್ಟು ನೆಲದ ಮೇಲೆ ಇಟ್ಟಿರುತ್ತಾರೆ. ಕಳಶ ಎಂದು ಕರೆಯಲಾಗುವ ಇದರಲ್ಲಿ ಮಂಡಲವನ್ನು ನಿಲ್ಲಿಸಲಾಗುತ್ತಿದೆ. ಇದಕ್ಕೆ ಅಬ್ಬಲಿಗೆ ಹೂಗಳನ್ನು ಹಾಗೂ ಹಿಂಗಾರವನ್ನು ಪ್ರಭಾವಳಿಯ ರೀತಿಯಲ್ಲಿ ಕಟ್ಟಲಾಗುತ್ತದೆ. ಈ ಮಂಡಲದ ಮೇಲೆ ಚಪ್ಪರವಿರುತ್ತದೆ. ಚಪ್ಪರದ ಒಳಭಾಗಕ್ಕೆ ಮೇಲುಕಟ್ಟೊಂದನ್ನು ಕಟ್ಟಿರುತ್ತಾರೆ. ಮೇಲು ಕಟ್ಟಿನಲ್ಲಿ ತೆಂಗಿನ ಹಸಿರು ಗರಿಗಳಿಂದ ಮಾಡಿದ ಹಾವುಗಳು ಮತ್ತು ಹಕ್ಕಿಗಳನ್ನು ತೂಗುಹಾಕಲಾಗಿರುತ್ತದೆ.

ಮಂಡಲದ ಪೂಜೆಯಲ್ಲಿ ಮಂಡಲದ 'ಬಗಸ' ಮುಖ್ಯವಾಗಿರುತ್ತದೆ. ಡಕ್ಕೆ, ವಸ್ತ್ರ, ಡಕ್ಕೆಯ ಮುಚ್ಚು ಇತ್ಯಾದಿಗಳಿರುವ ಒಂದು ಕುಕ್ಕೆಯೇ ಮಂಡಲದ ಬಗಸ. ಇದು ಸಾಮಾನ್ಯವಾಗಿ ಊರಿನ ಮುಖ್ಯ ಗೌಡನ ಮನೆಯಲ್ಲಿರುತ್ತದೆ. ಹೀಗೆ ಮಂಡಲ ಪೂಜೆಯ ಸಿದ್ಧತೆಗಳೆಲ್ಲವೂ ನಡೆದ ಮೇಲೆ ಸುಮಾರು ರಾತ್ರಿ ಹತ್ತು ಗಂಟೆಯ ವೇಳೆಗೆ ಪೂಜಾರಿ ಮತ್ತು ಢಕ್ಕೆಯವರು ಬರುತ್ತಾರೆ. ಗುಡಿಯೊಳಗೆ ಪೂಜೆಯಾದ ನಂತರ ದೆವ್ವಕರೆಯುವ ಹಾಡನ್ನು ಹಾಡಲಾಗುತ್ತದೆ. ಗೊಂಡರ ದೇವತೆಗಳಾದ ಮಾಸ್ತಿ ಮತ್ತು ಜಟ್ಟಿಗರನ್ನು ಈ ಹಾಡಿನ ಮೂಲಕ ಕರೆಯಲಾಗುತ್ತದೆ. ಆಗ ಪೂಜಾರಿಗೆ ದೆವ್ವ ಮೈಮೇಲೆ ಬರುತ್ತದೆ. ಆಗ ಅವನನ್ನು ಮಂಡಲದ ಬಳಿಗೆ ಕರೆದು ತರಲಾಗುತ್ತದೆ. ಪೂಜಾರಿ ಹಿಡಿ ಅಕ್ಕಿ ಇಟ್ಟು, ತೆಂಗಿನಕಾಯಿ ಒಡೆದು, ದೂಪದ ಗಿಂಡಿ ಹಿಡಿದು ಕಳಸಕ್ಕೆ ಪ್ರದಕ್ಷಿಣೆ ಮಾಡಿ ಪೂಜೆ ಮುಗಿಸುತ್ತಾನೆ. ಅನಂತರ ಮಂಡಲದ ಪದ ಹಾಡುವವರು ಹಾಡುವುದಕ್ಕೆ ತೊಡಗುತ್ತಾರೆ. ಇವರು ಕೆಂಪುಮಡಿ ಪಂಚೆಯನ್ನು ಮೊಣಕಾಲಿನವರೆಗೆ ಉಟ್ಟಿರುತ್ತಾರೆ. ಕೊರಳಿಗೆ ದೃಷ್ಟಿಸರ, ಮಣಿಸರ, ಚಿನ್ನದ ಸರಗಳನ್ನು ಹಾಕಿರುತ್ತಾರೆ. ಕಿವಿಗೆ ದೊಡ್ಡದಾದ ಗಾಲವಂಟಿ, ಅಬ್ಬಲಿಗೆ ಹೂ, ಕಾಲಿಗೆ ಗೆಜ್ಜೆಯ ಕಡಗ ಇವಿಷ್ಟು ಇವರ ವೇಷಭೂಷಣಗಳು. ಸರ್ವೇಸಾಮಾನ್ಯವಾಗಿ ನಾಲ್ಕು ಜನರೇ ಇರುವ ಇವರು ಕಳಸದ ಇಬ್ಬದಿಗಳಲ್ಲಿ ಇಬ್ಬಿಬ್ಬರು ನಿಲ್ಲುತ್ತಾರೆ. ಈಚೆಗೆ ನಿಂತವರು ಢಕ್ಕೆ ಬಾರಿಸುತ್ತಾ, ಕಳಸದ ಸುತ್ತ ಕುಣಿಯುತ್ತ ಹಾಡಲು ಪ್ರಾರಂಭಿಸಿದಾಗ ಆ ಬದಿಯವರು ಇವರು ಎತ್ತಿಕೊಟ್ಟ ಹಾಡನ್ನು ಪುನರುಚ್ಚರಿಸುತ್ತಾರೆ. ಮೊದಲಿಗೆ ಕಳಸಕ್ಕೆ ಅಡ್ಡ ಬಿದ್ದು ಹೊನ್ನಮ್ಮ ಮಾಸ್ತಿ, ಸೋಡಿಗದ್ದೆ ಮಾಸ್ತಿ, ಕೋಗ್ತಿ ಕಟ್ಟೆ ಮಾಸ್ತಿ, ಜಟ್ಟಿಗ, ಹಾಯ್ಗಳಿ ಮೊದಲಾದ ದೇವರುಗಳ ಸುತ್ತಿ ಮಾಡುತ್ತಾರೆ. ಈ ನಾಲ್ಕು ಜನರ ಕುಣಿತದ ಜೊತೆಗೆ ಪೂಜಾರಿಯೂ ಕುಣಿಯುತ್ತಿರುತ್ತಾನೆ. ಆದರೆ ಪೂಜಾರಿಯ ಹಾವಭಾವ ಮತ್ತು ನರ್ತನ ವಿಶೇಷವಾಗಿರುತ್ತದೆ. ಅವನು ದೆವ್ವಕರೆಯುವ ರೀತಿ ಹಾಗೂ ದೇವಿಯ ಉಪಾಸನೆ ಮಾಡುವ ರೀತಿ ವಿಶಿಷ್ಟವಾಗಿರುತ್ತದೆ. ಕುಣಿಯುತ್ತಾ ಕುಣಿಯುತ್ತಾ ಆತ ಕೈಯಲ್ಲಿರುವ ಹೊಂಬಾಳೆಯ ಎಸಳುಗಳನ್ನು ಸುತ್ತು ಕಳಸದ ಮೇಲೆ ಹಾಕುತ್ತಿರುತ್ತಾನೆ.

PDF created with pdfFactory Pro trial version www.pdffactory.com

ಒಂದು ಹೊಂಬಾಳೆ ಮುಗಿದರೆ ಮತ್ತೊಂದು ಹೊಂಬಾಳೆಯಂತೆ ಕಿತ್ತು ಕಿತ್ತು ಹಾಕಿರುತ್ತಾನೆ. ಈ ಕುಣಿತ ಮುಂಜಾನೆಯವರೆಗೆ ನಡೆಯುತ್ತದೆ. ಆದರೂ ಪೂಜಾರಿಯ ಆವೇಶ ತಣ್ಣಗಾಗಿರುವುದಿಲ್ಲ. ಬೆಳಗಿನ ಜಾವ ಅವನನ್ನು ಗುಡಿಯ ಒಳಗೆ ಕರೆತಂದು ದೆವ್ವ ಬಿಡಿಸುತ್ತಾರೆ. ಆ ನಂತರವೂ ಹೊರಗೆ ಮಂಡಳ ಕುಣಿತ ಹಾಗೂ ಹಾಡುಗಾರಿಕೆ ಮುಂದುವರಿಯುತ್ತದೆ.

ಆ ಕುಣಿತ ಕೋಗ್ತಿ ಹಬ್ಬದಲ್ಲಿ ದೇವಾಲಯದ ಆವರಣದಲ್ಲಿ ನಡೆಯುತ್ತದೆ. ಇದೇ ರೀತಿ ಹರಕೆ ಕಟ್ಟಿಕೊಂಡ ಕುಟುಂಬಗಳು ಇದೇ ಸಂಕ್ರಾಂತಿಯಿಂದ ಶಿವರಾತ್ರಿಯ ನಡುವಿನ ಸಮಯದಲ್ಲಿ ತಮ್ಮ ತಮ್ಮ ಮನೆ ಮತ್ತು ಗುಡಿಗಳ ಮುಂದೆ ದೆವ್ವಕರೆಯುವ ಆಚರಣೆಯನ್ನು ಏರ್ಪಡಿಸುತ್ತಾರೆ. ಆದರೆ ಆಚರಣೆಯ ವಿಧಿವಿಧಾನಗಳು ಮಾತ್ರ ಎಲ್ಲಾ ಕಡೆಯಲ್ಲಿಯೂ ಒಂದೇ ತೆರನಾಗಿರುತ್ತವೆ.

ಈ ಆಚರಣೆಯನ್ನು ಇಷ್ಟೆಲ್ಲಾ ವಿವರಿಸಿದ್ದಕ್ಕೆ ಕಾರಣಗಳಿವೆ. ಇದು ಅನಾದಿಕಾಲದ ಹಲವು ಸಾಂಸ್ಕೃತಿಕ ವಿಶೇಷಗಳನ್ನು ತನ್ನೊಳಗೆ ಪ್ರತಿನಿಧಿಸುತ್ತಿರುವ ಒಂದು ಆಚರಣೆ. ಕಾಡಿನ ಮೂಲ ನಿವಾಸಿಗಳಾದ ಗೊಂಡರು ಒಂದು ಕಡೆ ಅನಂತ ಸಮುದ್ರದ ಅಬ್ಬರವನ್ನೂ ಮತ್ತೊಂದು ಕಡೆ ದಟ್ಟ ಕಾನನದ ನಿಗೂಢತೆಯನ್ನು ಕಂಡು ಬೆರಗಾದವರು. ಸತತ ಮಳೆ, ಬಿರುಗಾಳಿ, ಹುಲಿ, ಘಟಸರ್ಪವಾದ ಕಾಳಿಂಗ ಇಂಥೆಲ್ಲಾ ಕಷ್ಟಕಾರ್ಪಣ್ಯಗಳ ನಡುವೆ ಬದುಕು ನೀಸಿದವರು. ಇವರ ಮಂಡಲಾಚರಣೆ ಇಂಥ ಅಭೇದ್ಯ ನಿಸರ್ಗವನ್ನು ನಿಯಂತ್ರಿಸಿ ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಹಂಬಲದ ಮಾಂತ್ರಿಕ ಆಚರಣೆಯಲ್ಲದೆ ಮತ್ತೇನೂ ಅಲ್ಲ. ಮಂಡಲದ ನಡುವೆ ಇಡುವ ಕಲಶ ಅಂಥ ನಿಸರ್ಗದ ನಡುವೆಯೂ ಅವರು ಸಮೃದ್ಧಿಗಾಗಿ, ಫಲೋತ್ಪತ್ತಿಗಾಗಿ ಹಾರೈಸುವುದರ ಸಂಕೇತ. ತೆಂಗಿನ ಗರಿಗಳಿಂದ ತಯಾರಿಸಿ ಕಟ್ಟಿ ಬಿಡಲಾದ ಸರ್ಪ, ಮಂಡಲದ ಮೇಲಿನ ನಾಗಮಂಡಲದ ಮಧ್ಯೆ ಇಟ್ಟ ಕಲಶಗಳು ಫಲವಂತಿಕೆಯ ಹೆಣ್ಣು ಗಂಡಿನ ಸಂಕೇತಗಳು. ಒಂದು ಕಡೆ ಮಾಸ್ತಿ, ಮಾರಿ ಹಾಗೂ ಚಾಡಿಯರೆಂಬ ಹೆಣ್ಣು ದೇವತೆಗಳನ್ನು ಇನ್ನೊಂದು ಕಡೆ ತಮ್ಮ ವೀರತ್ವದ ಸಂಕೇತದ ಜಟ್ಟಿಗರನ್ನು ಆರಾಧಿಸುವ ಗೊಂಡರು ಪುರುಷ ಮತ್ತು ಸ್ತ್ರೀ ಇಬ್ಬರನ್ನು ಸಮಾನವಾಗಿ ಪರಿಗಣಿಸಿ ನಾಗ ಮತ್ತು ಕಲಶದ ಮೂಲಕ ಸಂಕೇತಿಸುತ್ತಾರೆ. ಕೃಷಿ ಮತ್ತು ಪಶುಸಂಗೋಪನೆ ಎರಡನ್ನೂ ಒಟ್ಟೊಟ್ಟಾಗಿ ನಿಭಾಯಿಸಿಕೊಂಡು ಬರುತ್ತಿರುವ ಗೊಂಡರು, ಕೃಷಿ ಹಂತದ ಸಮೃದ್ಧಿ ದೇವತೆಯರು ಹಾಗೂ ಪಶುಸಂಗೋಪನೆ ಹಂತದ ವೀರ ಪುರುಷರನ್ನು ಒಟ್ಟಾಗಿ ಆರಾಧಿಸುವಲ್ಲಿ ಗೊಂಡರ ಸಾಂಸ್ಕೃತಿಕ ವಿಕಸನದ ಇತಿಹಾಸವೇ ಅಡಗಿದಂತಿದೆ. ಮಂಡಲದ ಆಚರಣೆಯಲ್ಲಿ ಪೂಜಾರಿ ಕೆಂಪುವಸ್ತ್ರ ತೊಟ್ಟು ವಿವಿಧ ವೇಷಭೂಷಣಗಳಿಂದ ಅಲಂಕರಿಸಿಕೊಂಡು ದೆವ್ವ ಕರೆಯಲು ಸಿದ್ಧವಾಗುವ ರೀತಿಯೇ

ರೋಮಾಂಚಕ. ಒಬ್ಬ ಮಾಂತ್ರಿಕನ ಎಲ್ಲ ಲಕ್ಷಣಗಳೂ ಅವನಲ್ಲಿವೆ. ಅದಕ್ಕೆ ಪೂರಕವಾಗಿ ವೃತ್ತಾಕಾರದ ಸಂಕೀರ್ಣ ರೂಪದ ಗೆರೆಗಳ ಮಂಡಲವಿದೆ. ಇದು ಒಂದು ದೈವದ ಆರಾಧನೆ ಬದಲು, ಪ್ರಕೃತಿಯ ಅಗೋಚರ ಶಕ್ತಿಯಮೇಲೆ ತರುವ ಒತ್ತಾಯ. ಅದನ್ನು ವಶಪಡಿಸಿಕೊಂಡು, ಬೇಕಾದ್ದನ್ನು ಪಡೆಯುವ ಅರ್ಥಾತ್ ಎಲ್ಲಾ ರೀತಿಯ ಸಮೃದ್ಧಿಯನ್ನು ಪಡೆಯುವ ಆಶಯ ಈ ಇಡೀ ಮಾಂತ್ರಿಕಾಚರಣೆಯ ಸಾಂಕೇತಿಕತೆ ಎನ್ನಬಹುದಾಗಿದೆ.

ಈ ರೀತಿಯಲ್ಲಿ ಕೋಗ್ತಿ, ಮಾಸ್ತಿ, ಚೌಡಿ, ಮಾರಿ ಹಾಗೂ ಜಟ್ಟಿಗರನ್ನು ಆರಾಧಿಸುವ ಗೊಂಡರು ಕೂಡ ಹಾಲಕ್ಕಿ ಒಕ್ಕಲಿಗರಂತೆಯೇ ತಿರುಪತಿ ತಿಮ್ಮಪ್ಪನನ್ನೇ ಇಂದು ಪ್ರಧಾನವಾಗಿ ಪೂಜಿಸುತ್ತಿದ್ದಾರೆ. ಎಷ್ಟರಮಟ್ಟಿಗೆ ಎಂದರೆ ಜೀವನದಲ್ಲಿ ಒಮ್ಮೆಯಾದರೂ ತಿರುಪತಿಯ ಯಾತ್ರೆ ಮಾಡಬೇಕೆಂಬುದು ಇವರಲ್ಲಿನ ಪ್ರತಿಯೊಬ್ಬರ ಆಶಯ. ಯಾವುದಕ್ಕೂ ತಿಮ್ಮಪ್ಪನೇ ಮೊದಲು ಅವನೇ ಅಂತಿಮ. ತಿಮ್ಮಪ್ಪನನ್ನು ಇವರು ಹಚ್ಚಿಕೊಂಡಿರುವ ರೀತಿ ನೋಡಬೇಕೆಂದರೆ, ಹರಕೆ ಹೊತ್ತುಕೊಂಡ ಗೊಂಡರು ತಿಮ್ಮಪ್ಪನ ಹೆಸರಿನಲ್ಲಿ ಮಾಡುವ 'ಹರಿಸೇವೆ'ಯನ್ನು ನೋಡಬೇಕು. ಮದುವೆಯನ್ನು ಕೂಡ ಅಷ್ಟು ಸಂಭ್ರಮದಿಂದ ಅವರು ಮಾಡುವುದಿಲ್ಲ. ಐವತ್ತು ಸಾವಿರದಿಂದ ಒಂದು ಲಕ್ಷ ರೂಪಾಯಿ ಖರ್ಚು ಮಾಡಿ ಹರಿಸೇವೆ ಆಚರಣೆಯನ್ನು ಮಾಡುತ್ತಾರೆ. ಇದಕ್ಕಾಗಿ ಸಾಲಗಾರರಾದವರೇ ಹೆಚ್ಚು. ಯಾಕೆಂದರೆ ಇವರ್ಯಾರು ಯಥೇಚ್ಛ ಹಣ ಖರ್ಚು ಮಾಡುವಷ್ಟು ಶ್ರೀಮಂತರಂತೂ ಅಲ್ಲ. ಒಂದು ರೀತಿಯಲ್ಲಿ ಪ್ರವಾಹದಂತೆ ಬಂದ ತಿಮ್ಮಪ್ಪನ ಅನುಕರಣೆ ಮತ್ತು ಸ್ವಪ್ರತಿಷ್ಠೆ ಇವರನ್ನು ಅಷ್ಟರ ಮಟ್ಟಿಗೆ ಪ್ರಭಾವಿಸಿವೆ.

ಮೂಲದಿಂದ ಇವರೂ ಶೈವಾರಾಧಕರಾಗಿದ್ದರು ಎಂಬುದಕ್ಕೆ ಅನೇಕ ಕುರುಹುಗಳಿವೆ. ಯಾಕೆಂದರೆ ಇವರ ಪ್ರಧಾನವಾದ ಹಬ್ಬವೇ ಶಿವರಾತ್ರಿ. ಶಿವರಾತ್ರಿಯಂದು ಇವರು ಕುಣಿಯುವ ಗೊಂಡರ ಕುಣಿತ ವಿಶೇಷವಾದದ್ದು. ನಂತರ 'ಹೋಳಿ ಹಳಬು' ನೃತ್ಯ ಮಾಡಿ ಶಿವನನ್ನು ಆರಾಧಿಸುತ್ತಾರೆ. ಆದರೆ ಇವರ ಮೇಲಾದ ತಿಮ್ಮಪ್ಪನ ಪ್ರಭಾವ ಉಳಿದ ಆಚರಣೆಗಳನ್ನು ಮಸಕು ಮಾಡಿದೆ. ಆದರೂ ತಮ್ಮ ಪರಂಪರೆಯ ಬಗ್ಗೆ ಅಪಾರ ಶ್ರದ್ಧೆ ಇರುವ ಗೊಂಡರು ಮೂಲ ದೈವಾಚರಣೆಗಳನ್ನು ಬಿಟ್ಟಿಲ್ಲ.

೨.೩. ಕಾಡ್ಯನ ಮನೆ

ಮೇರರನ್ನು ಹರಿಜನರೆಂದು ಕರೆಯುತ್ತಾರಾದರೂ ನನ್ನ ದೃಷ್ಟಿಯಲ್ಲಿ ಅವರು ಬುಡಕಟ್ಟಿನ ಎಲ್ಲ ಲಕ್ಷಣಗಳೂ ಇರುವ ಒಂದು ವಿಶಿಷ್ಟ ಸಮುದಾಯ. ಇವರ ಕಾಡ್ಯನ ಬನ ತುಂಬ ವಿಶಿಷ್ಟವಾದುದು. ಕಾಡ್ಯ ಎಂದರೆ ನಾಗ ಅಥವಾ ಸರ್ಪ

PDF created with pdfFactory Pro trial version www.pdffactory.com

ಎಂದು ಹೇಳುತ್ತಾರೆ. ನಮ್ಮ ದ್ರಾವಿಡ ಪರಂಪರೆಯಲ್ಲಿ ಕಡ್ಯ ಎಂಬ ಒಂದು ಪದವಿದ್ದು ಅದರ ಅರ್ಥ ಕುಂಭ ಅಥವಾ ಮಡಕೆ. ವಾಸ್ತವವಾಗಿ ಈ ಕಾಡ್ಯನ ಆರಾಧನೆ ಫಲೋತ್ಪತ್ತಿಯ ಸಂಕೇತಗಳಾದ ಕುಂಭ ಹಾಗೂ ಸರ್ಪ ಈ ಎರಡಕ್ಕೂ ಸಂಬಂಧಿಸಿದ್ದು. ಆದ್ದರಿಂದ ನಾನಿಲ್ಲಿ ಕಾಡ್ಯ ಎಂದರೆ ಏನು ಎಂಬಿತ್ಯಾದಿ ಭಾಷಾಶಾಸ್ತ್ರದ ಸಮಸ್ಯೆಗಳಿಗೆ ತಲೆಕೆಡಿಸಿಕೊಳ್ಳುವುದಿಲ್ಲ.

ಕಾಡ್ಯನಿಗೆ ಸಂಬಂಧಿಸಿದ ಜಾಗವನ್ನು ಕಾಡ್ಯನ ಮನೆ ಎಂದು ಕರೆಯಲಾಗುತ್ತದೆ. ಇದು ಸಾಮಾನ್ಯವಾಗಿ ಜನವಸತಿಯಿಂದ ದೂರ ಹಾಗೂ ಕಾಡಿನ ಒಳಭಾಗದಲ್ಲಿ ಇರುವ ಜಾಗ. ಬೃಹದಾಕಾರವಾಗಿ ಬೆಳೆದ ಹುತ್ತವೇ ಅಲ್ಲಿ ಆಕರ್ಷಣೆ. ಆ ಹುತ್ತದ ಮೇಲೆ ಚಪ್ಪರದ ರೀತಿಯ ಮಾಡು ಇರುತ್ತದೆ. ಆ ಮಾಡಿನ ಸುತ್ತಲಿರುವ ಮರಗಳ ಬುಡದಲ್ಲಿ ಅನೇಕಾನೇಕ ಕುಂಭಗಳ ರಾಶಿಯೇ ಬಿದ್ದಿರುತ್ತದೆ. ಪ್ರತಿಯೊಂದು ಕುಂಭದ ಹೊರಮೈ ಮೇಲೆ ಸರ್ಪಾಕೃತಿಯ ಸುಂದರ ಚಿತ್ರಗಳಿರುತ್ತವೆ. ಅಂಥ ಚಿತ್ರಗಳು ಒಂದಕ್ಕಿಂತ ಹೆಚ್ಚಿರುತ್ತವೆ. ಹೆಡೆ ಎತ್ತಿದ ನಾಗಗಳ ಚಿತ್ರಗಳೇ ಹೆಚ್ಚು. ಹುತ್ತದ ಬುಡದಲ್ಲಿ ಇನ್ನೂ ಶಿಥಿಲವಾಗದ, ಒಡೆಯದ ಇಂಥ ಅನೇಕ ಕುಂಬಗಳು ಬಿದ್ದಿರುತ್ತವೆ. ಈ ಕುಂಭಗಳನ್ನು ಅವರು 'ಕಲಶ' ಎಂದು ಕರೆಯುತ್ತಾರೆ.

ಈ ಕಾಡ್ಯನ ಮನೆಯ ಪರಿಸರದಲ್ಲಿ ಬೀಡು ಬಿಟ್ಟಿರುವ ಇತರ ದೈವಗಳಿಗೂ ಕಡಿಮೆ ಇಲ್ಲ. ಬ್ರಹ್ಮ, ಯಕ್ಷ, ಉಮ್ಮಳ್ತಿ, ಬೊಬ್ಬರ್ಯ, ಗಾಮ, ಜಟ್ಟಿಗ, ಕಾನು ಪಂಜುರ್ಲಿ, ಕಲ್ಲುಡ ಇತ್ಯಾದಿ ಅನೇಕ ದೇವರುಗಳ ಆವಾಸಸ್ಥಾನ ಅದು. ಆದರೆ ಇಲ್ಲೆಲ್ಲ ಅತ್ಯಂತ ಪ್ರಮುಖವಾದದ್ದೇ ಹುತ್ತ–ಕುಂಭದ ಕಲಶ–ನಾಗಪ್ಪ. ಕಾಡ್ಯ ಎಂದರೆ ಕಾಳಿಂಗಸರ್ಪ ಎಂದೂ ಕೆಲವರು ಅಭಿಪ್ರಾಯ ಪಡುತ್ತಾರೆ. ಅಂದ ಮೇಲೆ ಇದು ನಾಗಾರಾಧನೆಯ ಒಂದು ಸ್ಥಳ ಎಂಬುದರಲ್ಲಿ ಎರಡು ಮಾತಿಲ್ಲ. ಕರಾವಳಿಯಾದ್ಯಂತ ನಾಗಾರಾಧನೆ ಸಂಕೀರ್ಣ ರೂಪದಲ್ಲಿರುವ ಒಂದು ಆಚರಣೆ. ದಕ್ಷಿಣ ಕನ್ನಡ ಜಿಲ್ಲೆಯ ಹತ್ತಾರು ಕಡೆ ನಾವು 'ನಾಗಬನ'ಗಳನ್ನು ಕಾಣಬಹುದು. ಅಲ್ಲದೆ, ಈ ನಾಗಾರಾಧನೆ ಅತ್ಯಂತ ಪ್ರಾಚೀನವಾದ ಒಂದು ಆಚರಣೆ ಎಂಬ ಅಭಿಪ್ರಾಯಗಳೂ ಇವೆ. ಹೀಗಾಗಿ ಕರಾವಳಿ ಪ್ರದೇಶದಲ್ಲಿ ಮೇಲ್ವರ್ಗವೆನಿಸಿದ ಬ್ರಾಹ್ಮಣರಿಂದ ಹಿಡಿದು ಅಸ್ಪೃಶ್ಯರೆನಿಸಿದ ಮೇರರವರೆಗೆ ಈ ಆಚರಣೆ ಇದೆ. ಆದರೆ ಇದು ಮೂಲತಃ ಯಾರದು? ಎಂಬುದೇ ಇಲ್ಲಿಯ ಪ್ರಶ್ನೆ.

ಈ ಸಂದರ್ಭದಲ್ಲಿ ಆ ಪ್ರದೇಶದಲ್ಲಿ ಪ್ರಚಲಿತವಿರುವ ಒಂದು ಜನಪದ ಕಥೆಯನ್ನು ಅವಲೋಕಿಸಬೇಕಾಗುತ್ತದೆ. "ಹೊನ್ನಿ ಎಂಬ ಮೇರರ ಬಾಲೆಯೊಬ್ಬಳಿರುತ್ತಾಳೆ. ದೊಡ್ಡವಳಾಗಿ ಮೈನೆರೆಯುತ್ತಾಳೆ. ಗಾಳಿದೇವರ ಸೋಂಕಿನಿಂದ ಬಸುರಿಯೂ ಆಗುತ್ತಾಳೆ. ಮುಂದೆ ನವಮಾಸದ ತುಂಬಿದ ಬಸುರಿಯೂ ಆಗುತ್ತಾಳೆ. ಆಗ

ಬರಗಾಲ ಬರುತ್ತದೆ. ಅನ್ನ ಬಟ್ಟೆಬರೆಗಳಿಗೆ ಪರದಾಟ ಉಂಟಾಗುತ್ತದೆ. ಹೊನ್ನಿ ತನ್ನ ಒಡೆಯರ ಮನೆಗೆ ಹೋಗಿ ತನ್ನ ಸಂಕಷ್ಟ ತೋಡಿಕೊಳ್ಳುತ್ತಾಳೆ. ಒಡೆಯರಿಗೆ ಮನಕರಗುತ್ತದೆ. ಅವಳಿಗೆ ಒಂದಿಷ್ಟು ಉಂಬಳಿ ಕೊಡುತ್ತಾರೆ. ಹೊನ್ನಿ ಸಂತೋಷದಿಂದ ಭತ್ತ ತೆಗೆದುಕೊಂಡು ಮನೆಗೆ ಬರುತ್ತಾಳೆ. ಆಗ ಮಾಯದ ಮಳೆಗಾಳಿ ಬೀಸುತ್ತದೆ. ಎಲ್ಲಿ ನೋಡಿದರೂ ನೀರೇ ನೀರು. ತುಂಬಿ ಹರಿಯುವ ಹಳ್ಳ ಹೊನ್ನಿಗೆ ಅಡ್ಡಲಾಗುತ್ತದೆ. ಆಗ ಹೊನ್ನಿ ನಾನು ಒಂದೇ ತಂದೆ ತಾಯಿಯರಿಗೆ ಹುಟ್ಟಿದ ಮಗಳಾದರೆ ಮಾಯದ ಮಳೆಗಾಳಿ ನಿಲ್ಲಬೇಕು ಎಂದು ಕೇಳಿಕೊಳ್ಳುತ್ತಾಳೆ. ಮಳೆಗಾಳಿ ನಿಲ್ಲುತ್ತದೆ. ಮನೆಗೆ ಬಂದ ಹೊನ್ನಿ ಭತ್ತ ಕುಟ್ಟಿ, ಅಕ್ಕಿ ಮಾಡಿ, ಗಂಜಿ ಬೇಯಿಸುತ್ತಾಳೆ. ಅಂಗಳದಲ್ಲಿ ಏಳು ಹೊಂಡ ಮಾಡಿ, ಗೆರೆಟೆಯಿಂದ ತಿಳಿಗಂಜಿ ಎರೆಯುತ್ತಾಳೆ. ಇದನ್ನು ಏಳು ಮಕ್ಕಳು ಉಣ್ಣುತ್ತಾರೆ. ಹೊನ್ನಿಗೆ ಗಂಜಿ ಮಿಗಲಿಲ್ಲ. ಆಗ ಅವಳು ಆ ಏಳು ಹೊಂಡಗಳನ್ನು ನೆಕ್ಕುತ್ತಾಳೆ. ಆದರೂ ಹಸಿವು ಇಂಗುವುದಿಲ್ಲ. ಮತ್ತೆ ಹೊನ್ನು ಏನಾದರೂ ದುಡಿದು ತರಬೇಕೆಂದು ಕಮ್ಮಾರನ ಮನೆಗೆ ಹೋಗುತ್ತಾಳೆ. ಒಂದೇ ಕಾಸಿಗೆ ಒಂದೇ ಹೊಡೆತಕ್ಕೆ ಏಳು ಜೋಡು ಅಗೆವ ಸಲಕರಣೆಯೊಂದನ್ನು ಮಾಡಬೇಕೆಂದು ಮಾಡಿಕೊಡಬೇಕೆಂದು ಕೇಳುತ್ತಾಳೆ. ಆತ ಅವುಗಳನ್ನು ಮಾಡಿಕೊಡುತ್ತಾನೆ. ಅವುಗಳನ್ನು ತೆಗೆದುಕೊಂಡು ಕಾಡು ಗೆಣಸನ್ನು ಹುಡುಕುತ್ತಾ ಮೂಡಣ ದಿಕ್ಕಿಗೆ ಹೋಗುತ್ತಾಳೆ. ಕಾಡು ಗೆಣಸಿನ ಬಳ್ಳಿಗಳು ಕಂಡುಬರುತ್ತವೆ. ಅವಳು ಹಾರೆ ಹಾಕಿ ಮಣ್ಣು ಕಡಿಯುತ್ತಾಳೆ. ಒಂದು ಹಾರೆ ಮಣ್ಣು ಕಡಿದಾಗ ಚಿನ್ನದ ಕಲಶ, ಎರಡನೆಯ ಹಾರೆಗೆ ತಾಮ್ರದ ಕಲಶ, ಮೂರನೆಯ ಹಾರೆಗೆ ಮಣ್ಣಿನ ಕಲಶ ಹೊರಬರುತ್ತದೆ. ಹೊನ್ನಿಗೆ ಆಶ್ಚರ್ಯವಾಗುತ್ತದೆ. ಆಕೆ ಓಡಿ ಹೋಗಿ ಒಡೆಯರಿಗೆ ವಿಷಯ ತಿಳಿಸುತ್ತಾಳೆ. ಒಡೆಯರು ಅಡಿಗಳ ಮನೆಗೆ ಹೋಗಿ ತಿಳಿಸುವಂತೆ ಹೇಳುತ್ತಾರೆ. ಆಗ ಏನಾಯಿತು? ಚಿನ್ನದ ಕಲಶವನ್ನು ಅಡಿಗಳು ತೆಗೆದುಕೊಂಡರು. ತಾಮ್ರದ ಕಳಶವನ್ನು ಒಡೆಯರು ತೆಗೆದುಕೊಂಡರು. ಮಣ್ಣಿನ ಕಲಶವನ್ನು ತನಗೆ ಇರಲೆಂದು ಹೊನ್ನಿ ಇರಿಸಿಕೊಂಡಳು.

ಅಡಿಗಳು ಚಿನ್ನದ ಕಳಶದ ನಾಗನನ್ನು ಅಶ್ವತ್ಥಕಟ್ಟೆಯಲ್ಲಿ ಪ್ರತಿಷ್ಠಾಪಿಸಿದರು. ಒಡೆಯರು ತಾಮ್ರದ ಕಳಶದ ನಾಗನನ್ನು ತಮ್ಮ ಮನೆಯ ಮುಂದೆ ಪ್ರತಿಷ್ಠಾಪಿಸಿದರು. ಹೊನ್ನಿ ಮಣ್ಣಿನ ಕಲಶದ ನಾಗನನ್ನು ಗದ್ದೆಯಲ್ಲಿ ಇಟ್ಟಳು. ಮೊದಲನೆಯ ಅಡಿಗಳ ನಾಗನಿಗೆ ನಾಗಮಂಡಲದ ಸೇವೆಯೂ, ಒಡೆಯರ ನಾಗನಿಗೆ ಪಾಣಾರಾಟದ ಸೇವೆಯೂ, ಹೊನ್ನಿಯ ನಾಗನಿಗೆ ಕಾಡ್ಯನಾಟದ ಸೇವೆಯೂ ಆರಂಭವಾಯಿತು."

ಈ ಕಥೆಯಲ್ಲಿ ನಮಗೆ ಅನೇಕ ಮಾಹಿತಿಗಳು ದೊರೆಯುತ್ತವೆ. ನಾಗಾರಾಧನೆಯ ವಿಕಾಸದ ಬಗ್ಗೆ ಅನೇಕ ಸುಳಿವುಗಳು ಇಲ್ಲಿ ಸಿಗುತ್ತವೆ. ಸ್ವತಃ ಹುತ್ತವೇ ಸೃಷ್ಟಿಗೆ

PDF created with pdfFactory Pro trial version www.pdffactory.com

ಕಾರಣವಾದ ಯೋನಿಯ ಸಂಕೇತ. ಮಣ್ಣಿನ ಕುಂಭರೂಪದ ಕಲಶವಂತೂ ಗರ್ಭಧರಿಸಿದ ಫಲವತಿಯಾದ ಹೆಣ್ಣಿನ ಸಂಕೇತ. ಅದರ ಮೇಲಣ ನಾಗ ಸೃಷ್ಟಿಗೆ ಕಾರಣವಾದ ಗಂಡಿನ ಶಕ್ತಿಯ ಸಂಕೇತ. ಹೀಗೆ, ಹುತ್ತ ಮತ್ತು ಕಳಶದಿಂದ ಆರಂಭವಾದ ನಾಗಪೂಜೆ ಮನೆ ಅಂಗಳದ 'ದೇವರ ಕಟ್ಟೆ'ಗೆ ಬಂದದ್ದು ಎರಡನೇ ಹಂತ. ಅಂದರೆ ಅಲ್ಲಿ ಹುತ್ತದ ಬುಡದಲ್ಲಿಟ್ಟ ಮಣ್ಣಿನ ಕಳಶದ ಮೈಮೇಲೆ ಕೆತ್ತಿದ ನಾಗ ತಾಮ್ರದ ರೂಪಕ್ಕೆ ಪರಿವರ್ತಿತವಾಗುತ್ತಾನೆ. ನಂತರದ ಹಂತ ಚಿನ್ನದ ನಾಗಪ್ಪ. ಬಹುಶಃ ಆರಂಭಕ್ಕೆ ಅಸ್ಪೃಶ್ಯರ ಮತ್ತು ಕಾಡಿನ ನಡುವೆ ಕಷ್ಟಪಟ್ಟು ಕೆಲಸ ಮಾಡುತ್ತಿದ್ದ ಶ್ರಮಜೀವಿಗಳಲ್ಲಿ ಮಾತ್ರ ನಾಗಾರಾಧನೆ ಇದ್ದಂತೆ ಕಾಣುತ್ತದೆ. ಯಾಕೆಂದರೆ ಕಾಳಿಂಗ ಸರ್ಪ ದಟ್ಟಾರಣ್ಯಗಳ ಕೆಲವೇ ಕೆಲವು ಕಾಡುಗಳಲ್ಲಿ ಮಾತ್ರ ಕಂಡು ಬರುವ ಒಂದು ಅಪರೂಪದ ಜೀವಿ.

ಈ ಕಥೆ ಆರಾಧನಾ ರೂಪಗಳಲ್ಲಿ ಆದ ಬದಲಾವಣೆಯ ಹಂತಗಳನ್ನು ಹೇಳುತ್ತದೆ. ಮೊದಲಿಗೆ ಕಾಡ್ಯನಾಟವಾಗಿ ಮೇರರಲ್ಲಿ ಇದ್ದದ್ದು, ನಂತರ ಪಾಣಾರರ ಆಟವಾಗಿ(ಅಂದರೆ ಭೂತಕೋಲದ ಒಂದು ಪ್ರಕಾರವಾಗಿ) ಭೂ ಮಾಲೀಕರ ಹಂತಕ್ಕೆ ಮುಟ್ಟುತ್ತದೆ. ನಂತರ ಇದೀಗ, ದಕ್ಷಿಣ ಕನ್ನಡದ ಎಲ್ಲೆಲ್ಲೂ ನಾವು ನೋಡುತ್ತಿರುವಂತೆ ಅದ್ಧೂರಿ ಮತ್ತು ವರ್ಣರಂಜಿತ ನಾಗಮಂಡಲ ಆಚರಣೆಯಾಗಿ ಬ್ರಾಹ್ಮಣ ಸಮುದಾಯಗಳಲ್ಲಿ ರೂಢಿಯಲ್ಲಿದೆ. ಇಷ್ಟಾದರೂ ನಾಗಮಂಡಲದ ಆರಾಧನೆಯ ಅನೇಕ ವಿಧಿಗಳು ಹಾಗೂ ಮಂಡಲ ಬರೆಯುವ ಕ್ರಮಗಳು ಮೂಲದ ಮೇರರ ಕಾಡ್ಯನಾಟದಿಂದ ಪ್ರೇರಿತವಾಗಿ, ಈಗಿನ ರೂಪದಲ್ಲಿ ಕಾಣಿಸಿಕೊಂಡಿದೆ ಎಂದರೆ ತಪ್ಪೇನಿಲ್ಲ.

ಗೆಡ್ಡೆಗೆಣಸಿನ ಆಹಾರಕ್ಕಾಗಿ ಹುಡುಕುತ್ತಿದ್ದ ಹೊನ್ನಿಗೆ ಮೂರು ರೀತಿಯ ನಾಗ ಕಳಶಗಳು ಸಿಕ್ಕಿದ ಕಥೆಯ ಹಿಂದಿನ ಆಶಯವೇ ಅದು ಮೂಲತಃ ಮೇರರ ಮೂಲ ಆಚರಣೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಆ ದೃಷ್ಟಿಯಲ್ಲಿ ಆ ಮೂರು ಕಳಶಗಳು ಹೊನ್ನಿಯ ಸ್ವತ್ತು. ಅದನ್ನು ಬಳುವಳಿಯಾಗಿ ಪಡೆದವರು ಒಡೆಯರು ಮತ್ತು ಅಡಿಗಳು. ಆದ್ದರಿಂದ ಇಡೀ ನಾಗಾರಾಧನೆ ಮೂಲದಲ್ಲಿ ಕೆಳವರ್ಗದಲ್ಲಿ ಮಾತ್ರ ಪ್ರಚಲಿತವಿದ್ದು ಈಗಿರುವ ಅನೇಕ ರೂಢಿಗಳು ಅವರಿಂದ ಬಂದ ಬಳುವಳಿಯಾಗಿವೆ ಎಂದು ಹೇಳಬಹುದಾಗಿದೆ.

ಇನ್ನೂ ಕಾಡ್ಯನಾಟದ ಆಚರಣಾ ವಿಧಿಯನ್ನು ನೋಡೋಣ. ಇಲ್ಲಿಯೂ ಮಂಡಲ ಚಿತ್ತಾರಕ್ಕೆ ಪ್ರಮುಖ ಪ್ರಾಶಸ್ತ್ಯ. ಕಾಡ್ಯನಾಟದ ಸಂದರ್ಭದಲ್ಲಿ ಹಾಕಲಾದ ಬೈದ್ಯರ ಹಂದರದೊಳಗೆ ಸುಮಾರು ೧೦ ಅಡಿ ವ್ಯಾಸದ ವೃತ್ತಾಕಾರದ ಮಂಡಲವನ್ನು ಪಂಚವರ್ಣದ ಹುಂಡಿಯಿಂದ ಬರೆಯಲಾಗುತ್ತದೆ. ಈ ಮಂಡಲ ರಚನೆ ಬೈದ್ಯನ

ನೇತೃತ್ವದಲ್ಲಿ ಅವನ ಸಹಯೋಗಿಗಳಿಂದ ಒಂದು ಸಾಮೂಹಿಕ ಪ್ರಯತ್ನದ ಮೂಲಕ ರೂಪುಗೊಳ್ಳುತ್ತದೆ. ಕಾಡ್ಯನಾಟದ ಆಚರಣೆಯ ಎರಡನೆಯ ಹಾಗೂ ಮೂರನೆಯ ರಾತ್ರಿ ಈ ಮಂಡಲವನ್ನು ಬರೆಯುತ್ತಾರೆ. ಮೊದಲನೆಯ ದಿನ ಚಿತ್ತಾರಗಳೆಲ್ಲವೂ ಕೇಂದ್ರ ಕಂಬದ ಕಡೆಗೆ ಮುಖ ಮಾಡಿದ್ದರೆ ಎರಡನೆಯದಿನ ಎಲ್ಲವೂ ಮಂಡಲದ ಪರಿಧಿಗೆ ಅಭಿಮುಖವಾಗಿರುತ್ತವೆ. ಮಂಡಲಕ್ಕೆ ಹಳದಿ, ಕೆಂಪು, ಕಪ್ಪು, ಹಸುರು ಹಾಗೂ ಬಿಳಿ ಬಣ್ಣದ ಹುಡಿಗಳನ್ನು ಅವರೇ ತಯಾರಿಸಿಕೊಳ್ಳುತ್ತಾರೆ. ಕಾಡ್ಯನಾಟದ ಮಂಡಲದೊಳಗೆ ಅವರು ತಮ್ಮ ಬದುಕನ್ನು ಪ್ರಭಾವಿಸಿದ ಸೂರ್ಯ, ಚಂದ್ರ, ನಕ್ಷತ್ರಗಳು, ಕಮಲದ ಹೂ, ಹೊನ್ನರುಳಿ ಮರ, ಕಾಗೆ, ಗೋವಕ್ಕಿ, ನವಿಲು, ಒನಕೆ, ಒರಳು, ಗೆರಸೆ, ಚೆನ್ನೆಮಣೆ, ದೋಣಿ, ನಾಗ(ಹಳದಿ ಬಣ್ಣ) ಕಾಡ್ಯ(ಕಪ್ಪು ಬಣ್ಣ) ಇತ್ಯಾದಿ ಚಿತ್ರಗಳನ್ನು ಬರೆದಿರುತ್ತಾರೆ. ಮಂಡಲದ ರಚನೆ ಹಾಗೂ ಆಚರಣೆಯ ಸಂದರ್ಭದಲ್ಲಿ ಕಲಶಗಳನ್ನು ಸ್ಥಾಪನೆ ಮಾಡುವ ಬಟ್ಟೆ ಎಲ್ಲವು ವೃತ್ತಾಕಾರದಲ್ಲಿಯೇ ಇರುತ್ತವೆ. ಹೀಗೆ ಮಂಡಲವನ್ನು ಬರೆದು ಅವರ ಕೇಂದ್ರದಲ್ಲಿರುವ ಮುಹೂರ್ತ ಕಂಬಕ್ಕೆ ತಾಗಿ ಕಲಶವನ್ನು ಇರಿಸಲಾಗುತ್ತದೆ. ಉಳಿದ ನಾಲ್ಕನ್ನು ಮಂಡಲ ಚಿತ್ತಾರದೊಳಗೆ ಬೈದ್ಯ ಸ್ಥಾಪಿಸುತ್ತಾನೆ. ಮಂಡಲದೊಳಗೆ ತಾವರೆ ಹೂವಿನ ಚಿತ್ರ ಬರೆಯಲಾಗುತ್ತದೆ. ಅದರ ನಡುವೆ ಕಲಶ ಹೊತ್ತ ಹೆಣ್ಣೊಬ್ಬಳನ್ನು ನಿಲ್ಲಿಸಿ ಆ ಕಲಶದ ಮೇಲೆ ಬೈದ್ಯನು ಅಕ್ಕಿ ಕಾಳನ್ನು ಎರಚುತ್ತಾನೆ. ಮಂಡಲದಲ್ಲಿ ಪ್ರಕೃತಿ ದೇವತೆಗಳ ಜೊತೆಗೆ ಕೃಷಿಸಂಬಂಧಿ ವಸ್ತುಗಳ ಚಿತ್ರಗಳನ್ನು ಬಿಡಿಸಲಾಗುತ್ತದೆ.

ಕಾಡ್ಯನಾಟದ ಎಲ್ಲ ರಾತ್ರಿಗಳಲ್ಲಿ ಅನೇಕ ವಿಧವಾದ ಕೋಲಗಳು ಜರುಗುತ್ತವೆ. ವಿಧಿವತ್ತಾದ ಅನೇಕ ಸಂಕೀರ್ಣವಾದ ಆಚರಣೆಗಳು ನೆರವೇರುತ್ತವೆ. ವಿಧವಿಧವಾದ ಹಗರಣಗಳ ಮೂಲಕ ನೆರೆದ ಜನರಿಗೆ ಮನರಂಜನೆ ಒದಗಿಸಲಾಗುತ್ತದೆ.

ಕಾಡ್ಯನಾಟವನ್ನು ಅಧ್ಯಯನ ಮಾಡಿರುವ ಶ್ರೀ ಎ.ವಿ. ನಾವಡ ದಂಪತಿಗಳ ಅಭಿಪ್ರಾಯ ಹೀಗಿದೆ–"ಕರಾವಳಿಯ ಉಪಾಸನಾ ಪಂಥದ ಮೂಲ ನಾಗನವರೆಗೆ ಇದು ಹೋಗುತ್ತದೆ. ನಾಗ ಬೆರ್ಮರ ಆರಾಧನೆ ತುಳುನಾಡಿನ ಎಲ್ಲೆಡೆಯೂ ಕಂಡು ಬರುತ್ತದೆ. ಈ ನಾಗವೇ ಬರುಬರುತ್ತಾ ಇತರ ದೇವತೆಗಳೊಂದಿಗೆ ಸಮಾವೇಶಗೊಳ್ಳುತ್ತಾನೆ. ಅನಂತಪದ್ಮನಾಭ, ಅನಂತೇಶ್ವರ, ಶಕ್ತಿ, ಗಣಪತಿ, ಯಕ್ಷ, ಬೊಬ್ಬರ್ಯರೊಂದಿಗೆ ನಾಗನ ಸಂಬಂಧವಿರುವುದನ್ನು ಗಮನಿಸಬಹುದು. ಇಲ್ಲಿಯ ನಾಡವರು ನಾಗನನ್ನು ಸ್ವಾಮಿ ಎಂದೂ, ಮೇರರು ಕಾಡ್ಯನೆಂದೂ ಪರಿಭಾವಿಸುತ್ತಾರೆ. ನಾಗಮಂಡಲ, ಬ್ರಹ್ಮಮಂಡಲ, ಪಾಣಾರಾಟ ಇತ್ಯಾದಿ ಆಚರಣೆಗಳೂ ಇಲ್ಲಿವೆ. ಹೀಗೆ ಕರಾವಳಿಯಲ್ಲಿ ನಾಗವು ಫಲೀಕರಣ ದೇವತೆಯಾಗಿ ಆರಾಧನೆಗೊಳ್ಳುತ್ತದೆ. ನಾಗ ಮತ್ತು ಯಕ್ಷ(ಯಕ್ಷಿ)ರಿಗೂ ಪರಸ್ಪರ ಸಂಬಂಧವಿದೆ. ಇವರಿಬ್ಬರೂ ಒಂದೇ

PDF created with pdfFactory Pro trial version www.pdffactory.com

ವರ್ಗಕ್ಕೆ ಸೇರಿದ ಫಲೋತ್ಪತ್ತಿ ಹಾಗೂ 'ನೀರಿನ' ಆಧಿದೇವತೆಯರು. ಪೂರ್ಣ ಕುಂಭ, ಕಲಶ ಮೊದಲಾದ ಕಲ್ಪನೆಗಳು ಈ ಯಕ್ಷಾರಾಧನೆಗೆ ಸಂಬಂಧಿಸಿದವು. ಕಾಡ್ಯನಾಟದಲ್ಲಿಯೂ ಈ ನಾಗಯಕ್ಷ ಆರಾಧನೆಯ ಬೀಜಗಳಿವೆ"[2] ಎಂದು ಹೇಳುತ್ತಾರೆ.

ನನಗಿಲ್ಲಿ ಮುಖ್ಯವಾಗುವುದು ಅವರ ಮಂಡಲದಲ್ಲಿ ಬಿಡಿಸಿದ ಪ್ರಕೃತಿ ದೈವಗಳು (ಸೂರ್ಯ, ಚಂದ್ರ, ನಕ್ಷತ್ರ) ಹಾಗೂ ಅವರ ಕೃಷಿ ಸಂಬಂಧದ ವಿವಿಧ ವಸ್ತುಗಳು. ಅಂದರೆ ನಿಸರ್ಗಾರಾಧನೆಯಿಂದ ಕೃಷಿಸಂಬಂಧಿ ಆರಾಧನೆಯವರೆಗಿನ ಅವರ ಪ್ರಾಚೀನ ಆಸಕ್ತಿಯನ್ನು ಇವು ಕಾಣಿಸುವಲ್ಲಿ ಸಫಲವಾಗಿದೆ. ಪ್ರಾಣಿ ಪಕ್ಷಿಗಳ ಚಿತ್ರಗಳೂ ಅಲ್ಲಿ ಬರುವುದರಿಂದ ಇಡೀ ನಿಸರ್ಗವನ್ನು ತಮ್ಮ ಆರಾಧನೆಯ ಕೇಂದ್ರ ಬಿಂದುವನ್ನಾಗಿ ಮಾಡಿಕೊಂಡಿದ್ದು ಅವರಿಗೆ ಆ ನಿಸರ್ಗದ ಬಗ್ಗೆ ಇರುವ ತೀವ್ರ ಬದ್ಧತೆಯನ್ನು ತೋರುತ್ತದೆ. ಉಳಿದಂತೆ ಕುಂಭ, ಕಲಶ, ನಾಗ, ಹುತ್ತ ಇವೆಲ್ಲ ಫಲಸಮೃದ್ಧಿಗಾಗಿ ಒತ್ತಾಯಿಸುವ ಮಾಂತ್ರಿಕ ಆಚರಣೆಗಳು ಎನ್ನುವುದೇ ಲೇಸು.

೨.೪. ಕಾವೆಲಿಯಕುಚ್ಚಿ ಕಾಡು

ಕೊಡಗಿನ ವಿರಾಜಪೇಟೆ ತಾಲೂಕಿನ ತುತ್ತತುದಿಯ ದಕ್ಷಿಣದಲ್ಲಿರುವ ಪ್ರದೇಶವನ್ನು 'ಕುಟ್ಟ' ಎಂದು ಕರೆಯುತ್ತಾರೆ. ಈ ಪ್ರದೇಶದ ಪ್ರಮುಖ ಜನವರ್ಗವೆಂದರೆ ಫಣಿಯರು. ಇವರ ಜೊತೆಗೆ ಯರವರು ಮತ್ತು ಕುಡಿಯರೂ ಅಲ್ಲಲ್ಲಿ ಇದ್ದಾರೆ. ಈಗ ಸದ್ಯಕ್ಕೆ ಫಣಿಯರ ದೇವರಿಗೆ ಸಂಬಂಧಿಸಿದ ಎರಡು ಹಬ್ಬಗಳನ್ನು ಪರಿಶೀಲಿಸಬಹುದು. ಈ ಹಬ್ಬಗಳ ವಿವರಣೆಯನ್ನು ಬೆಣಗಾಲಿನ ಆರ್. ನಾಗೇಶ್ ದಾಖಲಿಸಿದ್ದಾರೆ. ಆ ಹಬ್ಬಗಳ ವಿವರ ಹೀಗಿದೆ: "ಅವರ ಒಂದು ಹಬ್ಬದ ಹೆಸರು 'ಕುಳಿಯಂದರೆ.'(ಇವರ ಭಾಷೆ ಮಲೆಯಾಳಿಗೆ ಹತ್ತಿರದ ಒಂದು ಉಪಭಾಷೆ ಎಂಬುದನ್ನು ನೆನಪಿಡಬೇಕು) ಕುಳಿಯೆಂದರೆ ಅಂದರೆ 'ದೇವರಾಟ' ಎಂದು ಅರ್ಥ. ದೇವರುಗಳು ಜನರ ಮೈಮೇಲೆ ಬಂದು ಕುಣಿಯುವುದೇ ಈ ಹಬ್ಬದ ವಿಶೇಷತೆ. ಯಾವುದೇ ದೇವರಾಗಲಿ ನಮ್ಮ ದುಡಿಯ ಸದ್ದಿಗೆ ಕುಣಿಯಲೇಬೇಕು ಎಂದು ಅವರು ಹೇಳುತ್ತಾರೆ. ಈ ಹಬ್ಬವನ್ನು ಏಳು ದಿವಸಗಳ ಕಾಲ ಆಚರಿಸುತ್ತಾರೆ. ಫಣಿಯರು ಆಚರಿಸುವ ಅತಿ ದೊಡ್ಡ ಹಾಗೂ ಅತಿ ದೀರ್ಘ ಹಬ್ಬವೆಂದರೆ ಈ ಕುಳಿಯಂದರೆ. ದೇವರಿಗೆ ಊಟವನ್ನು ಕೊಡುವುದಕ್ಕಾಗಿ ಈ ಹಬ್ಬವನ್ನು ಆಚರಿಸುತ್ತಿದ್ದೇವೆ ಎಂಬುದು ಅವರ ನಂಬಿಕೆ. ಭತ್ತದ ಹುಲ್ಲಿನಲ್ಲಿ ಮೂಡೆಕಟ್ಟೆ ಇಟ್ಟಿರುವ ಭತ್ತವನ್ನು ಇಳಿಸಿಕೊಳ್ಳುತ್ತಾರೆ. ಜಿಮ್ಮಿಯ ಮೈಮೇಲೆ ದೇವರು ಬಂದು ಆ ಮೂಡೆಯಲ್ಲಿರುವ ಭತ್ತವನ್ನು ಕತ್ತಿಯಿಂದ ನಾಲ್ಕು ಭಾಗ ಮಾಡುತ್ತದೆ. ಈ ನಾಲ್ಕು ಭಾಗದ ಭತ್ತವನ್ನು ಒಂದೊಂದಕ್ಕೆ ಉಪಯೋಗಿಸುತ್ತಾರೆ. ಅವಲಕ್ಕಿಗೆ, ಅನ್ನಕ್ಕೆ, ಹಿಟ್ಟಿಗೆ ಮತ್ತು ಅಕ್ಕಿಗೆ ಎಂದು ಅದನ್ನು

ಬಳಸುತ್ತಾರೆ. ಎರಡನೆಯ ದಿನ ಮಿಂದು ಮಡಿಯುಟ್ಟು ಅಕ್ಕಿಯನ್ನು ಕುಟ್ಟಬೇಕು. ಅವಲಕ್ಕಿ ಕುಟ್ಟುವಾಗ ಬಟ್ಟೆಯನ್ನು ಧರಿಸುವಂತಿಲ್ಲ. ಕಾಡಿನ ಸೊಪ್ಪನ್ನು ಮೈಗೆ ಕಟ್ಟಿಕೊಂಡು ಬಾಯಿಗೆ ಬಟ್ಟೆಯನ್ನು ಕಟ್ಟಿಕೊಳ್ಳುತ್ತಾರೆ. ಹೆಂಗಸರು ಉಪವಾಸವಿದ್ದು ಬಾಯಿಗೆ ಬಟ್ಟೆ ಕಟ್ಟಿಕೊಂಡು, ಅದನ್ನು ಕೇರಿ ಸೋಸಿ, ಶುದ್ಧಗೊಳಿಸಬೇಕು. ಇದಾದ ನಂತರ ಅವಲಕ್ಕಿಯನ್ನು ದೇವರಿಗೆ ವಿಶೇಷ ನೈವೇದ್ಯ ಮಾಡಲು ಬಳಸಲಾಗುವುದು. ಮೂರನೇ ದಿವಸ ಒಂದು ದೊಡ್ಡ ಮರದ ಕೆಳಗೆ ಚಪ್ಪರ ಹಾಕುತ್ತಾರೆ. ಚಪ್ಪರದ ಕೆಳಗೆ ಒಂದೊಂದೇ ದೇವರು ಬಂದು ಕುಣಿಯಲು ಪ್ರಾರಂಭ ಮಾಡುತ್ತವೆ. ದೇವರು ಬಂದವರ ಜೊತೆಯಲ್ಲಿ ಬೇರೆ ಮನುಷ್ಯರೂ ಕುಣಿಯಲು ಪ್ರಾರಂಭಿಸುತ್ತಾರೆ. ಇದು ಉಳಿದ ನಾಲ್ಕು ದಿನಗಳ ಕಾಲವೂ ಸತತವಾಗಿ ಮುಂದುವರೆಯುತ್ತದೆ. ತಾವೂ ಕುಣಿದು ದೇವರನ್ನು ಕುಣಿಸಿ ತೃಪ್ತಿ ಪಡುತ್ತಾರೆ. ಕೊನೆಯ ದಿವಸ 'ಪನಾಲಿ' ಎಂಬ ವ್ಯಕ್ತಿ ಇಪ್ಪತ್ತನಾಲ್ಕು ಗಂಟೆಯೂ ಮೇಲೇಳದಂತೆ ಕುಳಿತು ಹಾಡು ಹೇಳಬೇಕು. ಆಗ ಅವನ ಮೈಮೇಲೆ ದೇವರು ಬಂದು 'ಇಡೀ ಬೆಟ್ಟಕ್ಕೆ ಬೆಂಕಿ ಬಿದ್ದು ಬೆಟ್ಟ ಹತ್ತಿ ಉರಿಯುತ್ತಿದ್ದರೂ ನಿಮ್ಮ ಕಾಲಿನ ಚರ್ಮವು ಸುಡುವುದಿಲ್ಲ. ಆ ರೀತಿ ನಿಮ್ಮನ್ನು ಸಲಹುತ್ತೇನೆ' ಎಂದು ಮಾತು ಕೊಟ್ಟಾಗ ಎಲ್ಲರಿಗೂ ತೃಪ್ತಿಯಾಗುತ್ತದೆ. ಆ ದಿನ ಮನೆ ಮನೆಯಿಂದ ಸಂಗ್ರಹಗೊಳಿಸಿದ ವಸ್ತುಗಳಿಂದ ಅಡುಗೆ ಮಾಡಿ ಏಳು ದಿವಸಗಳ ಕಾರ್ಯಕ್ರಮ ಮುಗಿಸುತ್ತಾರೆ.

ಎರಡನೇ ಹಬ್ಬದ ಸಾರಾಂಶ ಹೀಗಿದೆ–"ಈ ಹಬ್ಬದ ಹೆಸರು 'ತೈಯಕೋಳು' ಎಂದು. ಈ ಹಬ್ಬದಲ್ಲಿ ಇಡೀ ಕುಟುಂಬದವರೆಲ್ಲರೂ ಸೇರಿ ಅವರ ಕುಟುಂಬದಲ್ಲಿ ಯಾವ ಹುಡುಗನಿಗೆ 'ಮೈಹಿಡಿಯುವುದಿಲ್ಲವೋ'–ಅಂದರೆ ಮೈ ಮೇಲೆ ದೇವರು ಬರುವುದಿಲ್ಲವೋ–ಅವನಿಗೆ ಮೈಹಿಡಿಸುವ ವಿಶೇಷ ಕಾರ್ಯಕ್ರಮ ಹಾಕಿಕೊಳ್ಳುತ್ತಾರೆ. ಆ ದಿನ ಎಲ್ಲರೂ ಸ್ನಾನ ಮಾಡಿ ಬಟ್ಟೆ ಧರಿಸಿ ಮನೆಯ ಮುಂದಿನ ಜಾಗದಲ್ಲಿ ಬಾಳೆಯ ಮರದ ಪಟ್ಟಿಯಿಂದ ಮಂಟಪವನ್ನು ಕಟ್ಟುತ್ತಾರೆ. ಆ ಮಂಟಪದ ಸುತ್ತ ತೆಂಗಿನಕಾಯನ್ನು ಇಟ್ಟು, ಅಕ್ಕಿ ಎಲೆ, ಅಡಿಕೆ ಇಟ್ಟು ಪೂಜಿಸುತ್ತಾರೆ. ಅವರಲ್ಲಿ ಒಬ್ಬ ವ್ಯಕ್ತಿ ಬ್ರಾಹ್ಮಣ ಪುರೋಹಿತನ ವೇಷ ಹಾಕಿ ಬಾಳೆಯ ಪಟ್ಟಿಯೊಂದನ್ನು ಜನಿವಾರದ ರೀತಿಯಲ್ಲಿ ಹಾಕಿಕೊಳ್ಳುತ್ತಾನೆ. ಪೂಜೆ ನಡೆಯುತ್ತಿರುವ ಮಧ್ಯದಲ್ಲಿ ಬ್ರಾಹ್ಮಣ ಪೂಜಾರಿಯಾಗಿ ವೇಷ ಹಾಕಿದ್ದವನು ಭೇದಿ ಪ್ರಾರಂಭವಾದಂತೆ ನಟಿಸಿ ಓಡಿ ಹೋಗುತ್ತಾನೆ. ನಂತರ ಪೂಜೆಯನ್ನು ಜಿಮ್ಮಿಯು ಮುಂದುವರಿಸುತ್ತಾರೆ. ಬ್ರಾಹ್ಮಣ ವೇಷಧಾರಿಯು ಆಗಾಗ ಬಂದು ಓಡಿ ಹೋಗುವುದು ನಡದೇ ಇರುತ್ತದೆ. ಆಗ ಮೈಮೇಲೆ ಬರದ ಹುಡುಗರನ್ನು ಕರೆದು ಅವನಿಗೆ ಪೂಜೆ ಮಾಡಿ, ಅವರ ಕೈಯಿಂದ ಪೂಜೆ ಮಾಡಿಸಿ, ಅವರ ತಲೆಯ ಮೇಲೆ ದೇವರ ಹೆಸರೇಳಿ ಅಕ್ಕಿ

PDF created with pdfFactory Pro trial version www.pdffactory.com

ಹಾಕುತ್ತಾರೆ. ಮೊದಲು ಬೇರೆ ಬೇರೆ ದೇವರ ಹೆಸರೇಳಿ ತಲೆಗೆ ಅಕ್ಕಿ ಹಾಕುತ್ತಾರೆ. ಆದರೂ ದೇವರು ಬರುವುದಿಲ್ಲ. ಕೊನೆಯದಾಗಿ ಅವರ ಮೂಲದೇವರಾದ 'ಕಾವೆಲಿಯಕುಚ್ಚಿ'ಯ ಹೆಸರನ್ನು ಹೇಳಿದಾಗ ಅವನ ಮೇಲೆ ದೇವರು ಬರುತ್ತದೆ. ಒಂದು ಸಾರಿ ಒಬ್ಬನ ಮೇಲೆ ದೇವರು ಬಂತೆಂದರೆ ಮತ್ತೆ ಆತ ಬದುಕಿರುವವರೆಗೆ ಅವನ ಮೇಲೆ ಆಗಾಗ ಆ ದೇವರು ಬರುತ್ತಿರುತ್ತದೆ. ಹೀಗೆ ದೇವರು ಬಂದವರಿಗೆ ದೇವರು ಬರಿಸಿ ಅವರನ್ನು ಕುಣಿಸುವುದೇ ಈ ಹಬ್ಬದ ಮುಖ್ಯ ಉದ್ದೇಶ. ಈ ಹಬ್ಬವನ್ನು ರಾತ್ರಿಯ ಹೊತ್ತು ಮಾಡುವುದುರಿಂದ ದೇವರು ಬಂದ ವ್ಯಕ್ತಿಗಳನ್ನು ಬೆಳಕಿನ ತನಕ ಕುಣಿಸುತ್ತಾರೆ. ಬೆಳಿಗ್ಗೆ ಸೂರ್ಯ ಉದಯವಾದಂತೆ ಎಲ್ಲಾ ದೇವರುಗಳೂ ನಿಲ್ಲುತ್ತವೆ. ಅಲ್ಲಿಗೆ ಹಬ್ಬವೂ ಮುಗಿಯುತ್ತದೆ."[೮]

ಈ ಎರಡೂ ಹಬ್ಬಗಳೂ ತುಂಬ ಅನನ್ಯವಾದ ವಿವರಗಳನ್ನು ಒಳಗೊಂಡಿವೆ. ಸಾಮಾನ್ಯವಾಗಿ ದೇವರು ಇರುವ ಒಂದು ನಿರ್ದಿಷ್ಟ ಸ್ಥಳವಿರುತ್ತದೆ. ಆ ಸ್ಥಳಕ್ಕೆ ಹೋಗಿ ದೇವರನ್ನು ಆರಾಧಿಸುವ ಪರಿಪಾಟವೇ ಹೆಚ್ಚು. ಆದರೆ ಇಲ್ಲಿನ ಸನ್ನಿವೇಶ ತೀರಾ ವ್ಯತಿರಿಕ್ತ. ತಾವಿದ್ದಲ್ಲಿಗೇ ದೇವರನ್ನು ಬರಮಾಡಿಕೊಳ್ಳುವ ಇಲ್ಲಿನ ಕ್ರಮ ಹೆಚ್ಚು ಆಪ್ಯಾಯಮಾನ. ಅದೂ ಒಬ್ಬ ಅಥವಾ ಇಬ್ಬರ ಮೇಲೆ ದೇವರು ಬಂದು ಮಾತಾಡುವ ಮಾಮೂಲೀ ಶೈಲಿಯೂ ಇಲ್ಲಿ ಇಲ್ಲ. ಬದಲಾಗಿ ಇರುವವರ ಮೇಲೆಲ್ಲ ದೇವರ ಆವಾಹನೆಯಾಗುತ್ತದೆ. ಹಾಗಾಗಿ ಎಲ್ಲ ಮನುಷ್ಯರೂ ಇಲ್ಲಿ ದೇವರುಗಳೇ. ದೇವರಿಗೂ ಮನುಷ್ಯರಿಗೂ ಇಲ್ಲಿ ವ್ಯತ್ಯಾಸವೇ ಇಲ್ಲ. ಈ ಪ್ರಬಂಧದ ಆರಂಭದಲ್ಲಿ ಆಶೀಸ್ ನಂದಿಯವರ ಮಾತುಗಳನ್ನು ನಾನು ಉಲ್ಲೇಖಿಸಿದ್ದೆ. ದೇವರಿಗೂ ಮನುಷ್ಯರಿಗೂ ಅಂತರವಿಲ್ಲದ ಸಂಬಂಧವೊಂದು ಭಾರತದ ಪರಿಸರದಲ್ಲಿ ಏರ್ಪಡುತ್ತದೆ ಎಂಬ ರೀತಿಯಲ್ಲಿ ಅವರು ಪ್ರತಿಪಾದಿಸಿದ್ದರು. ಆ ಮಾತುಗಳಿಗೆ ಪ್ರತ್ಯಕ್ಷ ಉದಾಹರಣೆ ಫಣಿಯರ ಈ ಹಬ್ಬಾಚರಣೆ.

ಹಾಗೆ ಪ್ರತಿಯೊಬ್ಬರ ಮೇಲೂ ದೇವರ ಆವಾಹನೆ ಆಗಬೇಕಾದಲ್ಲಿ ಅವರ ಪೂರ್ವಭಾವಿ ಸಿದ್ಧತೆಗಳು ಅಷ್ಟರಮಟ್ಟಿಗೆ ಮಹತ್ವವಾಗಿಯೇ ಇವೆ. ಹುಟ್ಟಿದ ನಿರ್ವಾಣ ಅರ್ಥಾತ್ ಎಲೆಗಳ ಉಡುಗೆ ಹುಟ್ಟು ದೇವರ ನೈವೇದ್ಯದ ಅಕ್ಕಿಯನ್ನು ಅವರು ಸಿದ್ಧಪಡಿಸಬೇಕು. ಅಂದರೆ ಮನುಷ್ಯನ ಆದಿಯ ಕಾಲಕ್ಕೆ ಹಿಂತಿರುಗಿ ಅದೇ ಮುಗ್ಧತೆಯನ್ನು, ಆ ಆನಂದವನ್ನು ಮತ್ತೆ ತಂದುಕೊಳ್ಳುವ ಪ್ರಯತ್ನವಿದು. ಹೀಗೆ ತಮ್ಮದೇ ಆದ ಮಧ್ಯಂತರ ಜಗತ್ತೊಂದು ನಿರ್ಮಿಸಿಕೊಂಡು ದೇವರೊಡನೆ ಬೆರೆತು ಒಂದಾಗುವ ಆತ್ಮಸಾಕ್ಷಾತ್ಕಾರದ ಈ ಆಚರಣೆ ಅತ್ಯಂತ ಅಪೂರ್ವವಾದದ್ದು.

ಮತ್ತೊಂದು ಲೌಕಿಕದ ವಿಚಾರವೂ ಇಲ್ಲಿದೆ. ಕೊಡಗಿನ ಅರಣ್ಯಕ್ಕೆ ಬೆಂಕಿಯನ್ನು ಕಂಡರೆ ಸದಾ ಅಕ್ಕರೆ. ಅಲ್ಲಿನ ಅರಣ್ಯಕ್ಕೆ ಯಾವ ಸೂಕ್ಷ್ಮ ಸನ್ನಿವೇಶದಲ್ಲಿ

ಅಗ್ನಿಸ್ಪರ್ಶವಾಗುತ್ತದೋ ಹೇಳುವುದೇ ಕಷ್ಟ. ನಾವು ನೋಡುನೋಡುತ್ತಿದ್ದಂತೆ ನಾಗರ ಹೊಳೆ ಅಭಯಾರಣ್ಯಕ್ಕೆ ಅದೆಷ್ಟು ಸಲ ಬೆಂಕಿ ಬಿತ್ತು? ಅದರ ವಾಸ್ತವತೆಯ ಮತ್ತು ಅದರ ಬಿಸಿಯ ಅನುಭವವೂ ಫಣಿಯರಿಗಿದೆ. ಆದ್ದರಿಂದಲೇ ಅವರು ತಮ್ಮ ದೇವರಿಂದ 'ಬೆಟ್ಟಕ್ಕೆ ಬೆಂಕಿ ಬಿದ್ದು ಬೆಟ್ಟ ಹತ್ತಿ ಉರಿಯುತ್ತಿದ್ದರೂ ನಿಮ್ಮ ಕಾಲಿನ ಚರ್ಮವೂ ಸುಡುವುದಿಲ್ಲ' ಎಂಬ ಆಶ್ವಾಸನೆಯನ್ನು ಒತ್ತಾಯ ಪೂರ್ವಕವಾಗಿಯೇ ಪಡೆಯುವಲ್ಲಿ ಯಶಸ್ವಿಯಾಗುತ್ತಾರೆ.

ಫಣಿಯರ ಮತ್ತೊಂದು ಹಬ್ಬವೂ ದೇವರನ್ನು ಆವಾಹಿಸಿಕೊಳ್ಳುವ ಕ್ರಿಯೆಗೇ ಸಂಬಂಧಿಸಿದ್ದು. ಆದರೆ ದೇವರನ್ನು ಆವಾಹಿಸಿಕೊಳ್ಳದವ ಪೂರ್ಣ ಮನುಷ್ಯನಲ್ಲ ಎಂಬ ಅವರ ಭಾವನೆ ಬಲವಾಗಿರುವುದರಿಂದಲೇ ಅಥವಾ ತಾನೂ ದೇವರಾಗಿ ಮನಸೋ ಇಚ್ಛೆ ಕುಣಿಯಲಾರದವ ಎಂಥ ಮನುಷ್ಯ ಎಂಬ ಲೋಕ ದೃಷ್ಟಿಯೊಂದು ಆ ಸಮುದಾಯದಲ್ಲಿ ದರ್ಶನ ರೂಪದಲ್ಲಿ ಇರುವುದರಿಂದಲೇ, ಎಲ್ಲರಿಗೂ ದೇವರಾಗುವ ಪಾಠವನ್ನು ಕಲಿಸುತ್ತಾರೆ ಅಥವಾ ಅಂಥ ತರಬೇತಿ ನೀಡುತ್ತಾರೆ. ಆದರೆ ಅಂಥ ತರಬೇತಿಯ ಸಂದರ್ಭದಲ್ಲಿ ಬ್ರಾಹ್ಮಣ ಪೂಜಾರಿಯ ವೇಷವೊಂದನ್ನು ಬಳಸಿಕೊಳ್ಳುವ ಇವರ ಸಾಮಾಜಿಕ ಪ್ರಜ್ಞೆ ಆಶ್ಚರ್ಯ ಹುಟ್ಟಿಸುತ್ತದೆ. ಬೂಟಾಟಿಕೆ ಪೂಜೆ, ಕೃತಕ ಪೌರೋಹಿತ್ಯ, ಅವರಲ್ಲಿ ಅಸಹ್ಯದ ಭಾವನೆ ಹುಟ್ಟಿಸಿದೆ ಅಷ್ಟೇ ಅಲ್ಲ, ಅವರ ಮೂಲ ದೈವವೇ ನಿಜವಾದ ದೈವ. ಅದರೊಡನೆ ಸಂಪರ್ಕ ಬೆಳಸಬೇಕಾದವರು ತಾವು. ಈ ಮಧ್ಯವರ್ತಿಯ ಹಂಗೇಕೆ ಎಂಬ ಲೋಕಜ್ಞಾನವೂ ಅವರಿಗೆ ಚೆನ್ನಾಗಿಯೇ ಇದೆ. ಬಹುಶಃ ಒಂದು ಸಂದರ್ಭದಲ್ಲಿ ಇವರ ಮೇಲೆ ಪ್ರಭಾವ ಬೀರಲು ಯತ್ನಿಸಿರಬಹುದಾದ ಪುರೋಹಿತ ಶಾಹಿಯ ಅಣಕ ಇಲ್ಲಿರುವಂತಿದೆ. ಆ ಅಣಕವೇ ಪ್ರಬಲ ಪ್ರತಿಭಟನೆಯಾಗಿ ಆ ವ್ಯಂಗ್ಯಪೂರಿತವಾದ ಆಚರಣೆಯಲ್ಲಿ ವ್ಯಕ್ತವಾಗುತ್ತಿದೆ.

ಫಣಿಯರು ನಂಬಿರುವ ಪ್ರಕಾರ ಅವರ ಮೂಲ ದೈವದ ಹೆಸರು 'ಕಾವೆಲಿಯ ಕುಚ್ಚಿ'. ಕೇರಳದ ಇಪ್ಪಿಮಲೈ ಎಂಬ ಪರ್ವತ ಪ್ರದೇಶದಲ್ಲಿರುವ ಅಂಜಲಕಾವು ಎಂಬ ಪ್ರದೇಶದಿಂದ ಇಲ್ಲಿಗೆ ವಲಸೆ ಬಂದವರು ನಾವು ಎಂದು ಹೇಳಿಕೊಳ್ಳುವ ಫಣಿಯರು. ಅವರ ಮೂಲ ದೈವ ಅಷ್ಟು ದೂರದ ಆ ಇಪ್ಪಿಮಲೈಯಲ್ಲಿ ಇರುವುದಾದರೂ ತಾವು ಕರೆದಾಗ ಅದು ಬರುತ್ತದೆ ಎಂದು ನಂಬಿದ್ದಾರೆ. ಆದ್ದರಿಂದಲೇ ದೇವರ ಆವಾಹನೆ ಆಗದ ಹುಡುಗನಿಗೆ ಅಂತಿಮವಾಗಿ ಆವಾಹನೆ ಆಗುವುದು ಅವರ ಮೂಲ ದೈವದ ಹೆಸರೇಳಿ ಅಕ್ಕಿ ಕಾಳು ಹಾದಾಗ ಮಾತ್ರ!

ಕೊಡಗಿನ ಫಣಿಯರು, ಯರವರು, ಕುಡಿಯರು ತಮ್ಮ ಕುಣಿತಕ್ಕೆ 'ದುಡಿ'ವಾದ್ಯವನ್ನು ಬಳಸುತ್ತಾರೆ. ದುಡಿಯ ಲಯಬದ್ಧ ಶಬ್ದ ಎಂಥವರಿಗೂ ಭಾವಪರವಶತೆಯನ್ನು ತರುವಂಥದ್ದು. ಅದನ್ನು ನುಡಿಸುತ್ತಾ ಗಂಟೆಗಟ್ಟಲೆ ಹಾಡುತ್ತಾ

PDF created with pdfFactory Pro trial version www.pdffactory.com

ಹೆಂಗಸರು ಗಂಡಸರು ಮಕ್ಕಳಾದಿಯಾಗಿ ಅವರು ನರ್ತಿಸುವ ರೀತಿಯೇ ಅವರಿನ್ನೂ ತಾರತಮ್ಯರಹಿತವಾದ ಮುಗ್ಧ ಹಾಗೂ ಸಮಾನತೆಯ ಜೀವನದ ಆರಾಧಕರೂ ಎಂಬುದನ್ನು ದೃಢಪಡಿಸುತ್ತದೆ. ಕೊಡಗಿನ ಬುಡಕಟ್ಟುಗಳು ಇತ್ತೀಚೆಗೆ ಅನೇಕ ರೀತಿಯ ಶೋಷಣೆಗೆ, ದ್ವೇಷ, ವೈಷಮ್ಯಕ್ಕೆ ಹೊಳಗಾಗುತ್ತಿವೆ ಎಂಬುದು ನಿಜ. ಆದರೆ ರಾತ್ರಿಯ ಬೆಳದಿಂಗಳ ನೀರವತೆಯಲ್ಲಿ ದುಡಿಯ ಬಡಿತಕ್ಕೆ ತಮ್ಮನ್ನು ಒಪ್ಪಿಸಿಕೊಂಡು ಎಲ್ಲವನ್ನು ಮರೆತು ಅವರ ದೇವರ ಜೊತೆಯಲ್ಲಿ ಅಂತರ್ಧಾನವಾಗುವ ರೀತಿಯನ್ನು ನೋಡಿದಾಗ ಮಾತ್ರ ನಾವು ಕನಿಷ್ಠ ೫೦೦೦ ವರ್ಷಗಳಷ್ಟು ಹಿಂದಕ್ಕೆ ಹೋಗಿರುತ್ತೇವೆ ಎಂಬುದಂತೂ ಸತ್ಯ. ಆದರೆ ಆ ದರ್ಶನವನ್ನು ಕಾಣುವ ಅಂತರಂಗಶುದ್ಧಿ ಬೇಕು ಅಷ್ಟೆ.

೨.೫. ಪೋಡಿನ ದೈವ

ಮೈಸೂರು ಜಿಲ್ಲೆಯಲ್ಲಿ ಪ್ರಾಕೃತಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬಹುಪ್ರಿಯವಾದ ಎರಡು ಪರ್ವತಗಳಿವೆ. ಅವುಗಳನ್ನು ಮಲೆಮಹದೇಶ್ವರಬೆಟ್ಟ ಮತ್ತು ಬಿಳಿಗಿರಿರಂಗನಬೆಟ್ಟ ಎಂದು ಕರೆಯುತ್ತಾರೆ. ಒಂದರ ಹಿಂದೆ ಒಂದರಂತೆ ಹಬ್ಬಿ ನಿಂತಿರುವ ಈ ಬೆಟ್ಟ ಸಾಲುಗಳು ದಟ್ಟಾರಣ್ಯದಿಂದ ಆವೃತವಾಗಿವೆ. ಇಲ್ಲಿ ಅನಾದಿಕಾಲದಿಂದ ಜೀವಿಸುತ್ತಿರುವ ಸೋಲಿಗ ಸಮುದಾಯವಿದೆ. ಕಾಡಿನ ಮಕ್ಕಳಾಗಿ ನಿಸರ್ಗದ ಜೊತೆಜೊತೆಯಲ್ಲಿಯೇ ಬೆಳೆದು ಬಂದ ಸೋಲಿಗರು ಇಂದಿಗೂ ಅದೇ ಕಾಡಿನ ನಿವಾಸಿಗಳು. ಸೋಲಿಗರ ದೈವಾರಾಧನೆ ಹಲವು ಹಂತಗಳಲ್ಲಿ ನಮಗೆ ಕಾಣಸಿಗುತ್ತದೆ. ಮಾರಿಯನ್ನು ಆರಾಧಿಸುವ ಸೋಲಿಗರೂ ಇದ್ದಾರೆ, ತಮ್ಮ ಬುಡಕಟ್ಟಿನ ಮೂಲಮಾತೆ ಎಂದು ಭಾವಿಸಿರುವ ಸಂಕಮ್ಮನನ್ನು ಆರಾಧಿಸುವವರೂ ಇದ್ದಾರೆ. ಸಂಕಮ್ಮನ ಮಕ್ಕಳೆನಿಸಿದ ಕಾರಯ್ಯ ಮತ್ತು ಬಿಲ್ಲಯ್ಯರನ್ನು ತಮ್ಮ ಸಾಂಸ್ಕೃತಿಕ ನಾಯಕರಾಗಿ ಇವರು ಕಾಣುತ್ತಾರೆ. ಇವರ ಕಾಡಿನಲ್ಲಿಯೇ ಇರುವ 'ಕ್ಯಾತೆದೇವರು' ಇವರ ಮತ್ತೊಂದು ಪ್ರಮುಖ ದೈವ.

ಇವುಗಳನ್ನೆಲ್ಲ ಅವರ ಮೂಲ ದೈವಗಳೆಂದು ಪರಿಗಣಿಸಬಹುದಾದರೆ, ಅನಂತರದ ಅವಸ್ಥಾಂತರದಲ್ಲಿ ಬಿಳಿಗಿರಿ ರಂಗಯ್ಯ ಮತ್ತು ಮಲೆ ಮಾದೇಶ್ವರ ಇವರ ಆರಾಧ್ಯ ದೈವವಾದದ್ದು ಕುತೂಹಲಕಾರಿಯಾದ ವಿಚಾರ.

ಸೋಲಿಗರು ತಮ್ಮ ವಿವಿಧ ಪಂಗಡಗಳಿಗೆ(ಬಳಿ) ಹೆಸರಿಟ್ಟುಕೊಂಡಿರುವ ರೀತಿಯನ್ನು ಪರಿಶೀಲಿಸಬಹುದು. ಹೊಂಗೆಲರ ಕುಲ(ಹೊಂಗೆಮರ) ಆಲೂರು ಕುಲ(ಆಲದ ಮರ) ಬೆಲ್ಲರ ಕುಲ(ಬೆಳ್ಳಿಕುಲ–ನಕ್ಷತ್ರ) ಸೂರ್ಯಕುಲ, ಪೆನೇರು ಕುಲ(ರಾಗಿಯ ತೆನೆ) ಜೇನುಕುಲ, ಕುಂಬಳು ಕುಲ(ಕುಂಬಳ ಹೂ) ಇತ್ಯಾದಿ. ಇವರ ಕುಲಗಳಿಗೆ ಹೆಸರಿಟ್ಟುಕೊಂಡ ಬಗೆಯೇ ನಿಸರ್ಗದ ಜೊತೆಗಿನ ಅವರ

ಸಂಬಂಧವನ್ನು ಸ್ಪಷ್ಟಪಡಿಸುತ್ತದೆ. ಮರ–ಗಿಡಗಳನ್ನು ಪ್ರಕೃತಿಯ ಸೂರ್ಯ–ನಕ್ಷತ್ರಗಳನ್ನು ಕುಲದ ಗುರುತುಗಳನ್ನಾಗಿ ಇಟ್ಟುಕೊಂಡ ಇವರು ಮೂಲದಲ್ಲಿ ನಿಸರ್ಗಾರಾಧಕರು ಎಂಬುದರಲ್ಲಿ ಎರಡು ಮಾತಿಲ್ಲ.

ಮಾರಿಯನ್ನು ಇವರು ಪೂಜಿಸುವುದರ ಅರ್ಥವೇ ಇವರು ಮಾತೃಮೂಲ ಕುಟುಂಬದವರು ಎಂಬ ವಾದವನ್ನು ನಿಚ್ಚಳಗೊಳಿಸುತ್ತದೆ. ಆದರೆ ಮಲೆ ಮಹದೇಶ್ವರ ಬೆಟ್ಟದ ಸುತ್ತಮುತ್ತಲಿರುವ 'ಕೊಕ್ಕು ಬರೆ'. ಎಂಬ ಪಂಗಡದ ಸೋಲಿಗರು ಮಾರಿ ಹಬ್ಬವನ್ನು ಆಚರಿಸುವ ರೀತಿ ತುಂಬ ವಿಶಿಷ್ಟವಾದದ್ದಾಗಿದೆ. ಬಯಲು ಸೀಮೆಯಲ್ಲಿರುವಂತೆ ಕಂಬ ಪ್ರತಿಷ್ಠಾಪನೆ ಮಾಡಿ ಕಂಬ ಇಕ್ಕಿದ ದಿನದಿಂದ ಹನ್ನೊಂದು ದಿನದವರೆಗೆ ಬೆಂಕಿಯ ಸುತ್ತ ಕುಣಿಯುವ ಸಂಪ್ರದಾಯವನ್ನು ಅವರು ಆಚರಿಸಿಕೊಂಡು ಬರುತ್ತಿದ್ದಾರೆ. ಕೊಡಗು ಮತ್ತು ಮೈಸೂರು ಜಿಲ್ಲೆಯ ಸೋಲಿಗರು, ಕಾಡುಕುರುಬರು, ಮತ್ತು ಬೆಟ್ಟ ಕುರುಬರು ತಮ್ಮ ಕುಣಿತಗಳನ್ನು ಸಾಮಾನ್ಯವಾಗಿ ಬೆಂಕಿಯ ಸುತ್ತ ನಡೆಸುತ್ತಾರೆ. ಇದು ಆರ್ಯಮೂಲದ ವೈದಿಕ ಪ್ರಭಾವವಿರಬಹುದು ಎಂಬ ಅಭಿಪ್ರಾಯವನ್ನು ಒಬ್ಬಿಬ್ಬರು ವ್ಯಕ್ತಪಡಿಸಿದ್ದಾರೆ. ಆದರೆ ವಾಸ್ತವದ ಅರಿವಿಲ್ಲದ ಸಂಶೋಧಕರಿಗೆ ಈ ರೀತಿ ಅಭಿಪ್ರಾಯಗಳು ತಟ್ಟನೆ ಬಂದು ಬಿಡಬಹುದು. ಕೊಡಗು ಮತ್ತು ಮೈಸೂರು ಜಿಲ್ಲೆಯ ಅರಣ್ಯವನ್ನು ಅಲ್ಲಿ ವಾಸವಾಗಿರುವ ವಿವಿಧ ಕಾಡುಪ್ರಾಣಿಗಳನ್ನು ಅದರಲ್ಲೂ ವಿಶೇಷವಾಗಿ ಯಥೇಚ್ಛವಾಗಿ ಇರುವ ಆನೆಗಳ ಸಂತತಿಯನ್ನು ಗಮನಿಸಿದವರಿಗೆ ಈ ಜನಸಮುದಾಯಗಳ ಸದಾ ಬೆಂಕಿಯ ಜೊತೆಗೆ ಯಾಕಿರುತ್ತಾರೆ ಎಂಬ ಸತ್ಯದ ಅರಿವು ಆಗದೇ ಇರದು. ಎಲ್ಲಿ ಬೆಂಕಿ ಇರುತ್ತದೋ ಅಲ್ಲಿ ಆನೆಗಳು ಸುಳಿಯುವುದಿಲ್ಲ. ತಮ್ಮ ಪೋಡುಗಳ ಮುಂದೆ(ಸೋಲಿಗರು ತಮ್ಮ ವಾಸಸ್ಥಳವನ್ನು ಪೋಡು ಎಂದು ಕರೆದುಕೊಳ್ಳುತ್ತಾರೆ) ರಾತ್ರಿಯ ಬಹುಕಾಲದವರೆಗೆ ಕುಣಿದು ನರ್ತಿಸುವ ಪರಿಪಾಟವಿರುವ ಜನರಿಗೆ ಆನೆಯ ಕಾಟದಿಂದ ಮುಕ್ತಿ ಕೊಡುತ್ತದೆ ಈ ಬೆಂಕಿ. ಮಾರಿ ಹಬ್ಬದ ಹನ್ನೆರಡನೆಯ ದಿನ ತಂಬಿಟ್ಟಿನ ಆರತಿ ಮತ್ತು ಪ್ರಾಣಿ ಬಲಿಯನ್ನು ನೀಡಲಾಗುತ್ತದೆ. ಸೋಲಿಗರು ಮಾರಿಯನ್ನು ಮುಖ್ಯವಾಗಿ ರೋಗನಿರೋಧಕ ದೈವವನ್ನಾಗಿ ಆರಾಧಿಸುತ್ತಾರೆ.

ಸೋಲಿಗರ ಮೂಲಮಾತೆ ಎನಿಸಿಕೊಂಡಿರುವ ಸಂಕಮ್ಮ ತುಂಬ ವಿಶಿಷ್ಟವಾದ ವ್ಯಕ್ತಿತ್ವವನ್ನು ಪಡೆದ ಒಬ್ಬ ಧೀರ ಬುಡಕಟ್ಟು ಹೆಣ್ಣು. ಸಂಕಮ್ಮನ ಹಬ್ಬವನ್ನು ಸೋಲಿಗರು ವಿಜೃಂಭಣೆಯಿಂದ ಆಚರಿಸುತ್ತಾರೆ. ಸಂಕಮ್ಮನ ಮೂಲದ ವಿಚಾರದಲ್ಲಿ ಒಂದೆರಡು ವೈರುಧ್ಯಾತ್ಮಕ ಸಂಗತಿಗಳಿವೆ. ಅದೇನೆಂದರೆ ಮಲೆಮಾದೇಶ್ವರ ಮೌಖಿಕ ಮಹಾಕಾವ್ಯದಲ್ಲಿ ಸಂಕಮ್ಮ ಮಲೆಮಾದೇಶ್ವರನ ಶಿಷ್ಯೆಯಾಗಿ ಕಾಣಿಸಿಕೊಳ್ಳುತ್ತಾಳೆ. ಕೆಲವು ವಿದ್ವಾಂಸರು ಗುರುತಿಸಿರುವಂತೆ ದಕ್ಷಿಣ ಕರ್ನಾಟಕ ಭಾಗದ ಅನೇಕ ಜನ

PDF created with pdfFactory Pro trial version www.pdffactory.com

ಸಮುದಾಯಗಳ ಸಾಂಸ್ಕೃತಿಕ ವೀರನಾದ ಮಲೆ ಮಾದೇಶ್ವರನ ಕಾಲ ಸುಮಾರು ೧೪–೧೫ ನೇ ಶತಮಾನ. ಇದು ನಿಜವಾದರೆ ಈ ಸಂದರ್ಭದಲ್ಲಿ ಇದ್ದ ಸಂಕಮ್ಮ ಸೋಲಿಗ ಜನಾಂಗದ ಮೂಲಮಾತೆ ಎನಿಸಿಕೊಳ್ಳಲು ಸಾಧ್ಯವಿಲ್ಲ. ಹಾಗೆಯೇ ಸಂಕಮ್ಮನ ಮಕ್ಕಳಾದ ಕಾಡಯ್ಯ ಮತ್ತು ಬಿಲ್ಲಯ್ಯ ಅವರುಗಳು ಈ ಜನವರ್ಗದ ಮೂಲ ಸಾಂಸ್ಕೃತಿಕ ನಾಯಕರು ಎಂದು ಹೇಳಲು ಸಾಧ್ಯವಾಗುವುದಿಲ್ಲ. ಈ ದ್ವಂದ್ವಗಳ ನಿವಾರಣೆಗಾಗಿ ಮಲೆಮಾದೇಶ್ವರ ಮತ್ತು ಸೋಲಿಗ ಜನವರ್ಗದ ಜೊತೆಗಿನ ಸಂಬಂಧಗಳನ್ನು ನಿರೂಪಿಸುವ ಕಥೆಯನ್ನು ಕ್ವಚಿತ್ತಾಗಿಯಾದರೂ ಹೇಳಲೇ ಬೇಕಾಗುತ್ತದೆ.

ಸೋಲಿಗರ ಒಂದು ಪ್ರಭೇದವಾದ ಮೇಲೆ ಸೋಲಿಗರ ನೀಲಯ್ಯ ಎಂಬುವವನು ಇನ್ನೂ ಮದುವೆಯಾಗಿರುವುದಿಲ್ಲ. ಸ್ಫುರದ್ರೂಪಿಯೂ ಮಾಟಮಂತ್ರಗಳನ್ನು ಚೆನ್ನಾಗಿ ಬಲ್ಲ ಮಹಾಮಾಂತ್ರಿಕನೂ ಆದ ಈ ಮಲೆಸೋಲಿಗರ ನೀಲಯ್ಯನಿಗೆ ಅನುರೂಪಳಾದ ಹೆಣ್ಣೇ ಅವನಿಗೆ ದೊರಕಿರುವುದಿಲ್ಲ. ಆ ಮಹಾರಣ್ಯದಲ್ಲಿ ಕುರಿಕಾಯುವ ಕಾಯಕದಲ್ಲಿ ನಿರತನಾಗಿರುವ ಒಂದು ಸಂದರ್ಭದಲ್ಲಿ ಕಾಡಿನ ನಡುವೆ ದೂರದಲ್ಲಿ ಎಲ್ಲೋ ಒಂದು ಕಡೆ ಸೂಜಿಗಾತ್ರದ ಹೊಗೆ ಏಳುತ್ತಿರುವುದು ಕಾಣಿಸಿಕೊಳ್ಳುತ್ತದೆ. ಅಪಾರ ಬಾಯಾರಿಕೆಯಿಂದ ಬಳಲುತ್ತಿದ್ದ ನೀಲಯ್ಯ ಅಲ್ಲಿ ಜನವಸತಿ ಇರಬಹುದೆಂಬುದನ್ನು ಗ್ರಹಿಸಿ ಅತ್ತ ಪ್ರಯಾಣ ಬೆಳೆಸುತ್ತಾನೆ. ಅವನ ಊಹೆಯಂತೆ ಅಲ್ಲಿ ದೇವ ಸೋಲಿಗರ ಕುಟುಂಬವೊಂದು ವಾಸವಾಗಿರುತ್ತದೆ. ಆ ಪೋಡಿನ ಹತ್ತಿರ ನಿಂತು ಬಾಯಾರಿಕೆಗಾಗಿ ನೀರು ಕೇಳುತ್ತಾನೆ. ನೀರನ್ನು ತಂದುಕೊಟ್ಟ ಹೆಣ್ಣು ಕಡುಚೆಲುವೆಯಾಗಿದ್ದು ನೀಲಯ್ಯನ ಮನಸ್ಸನ್ನು ಆಕರ್ಷಿಸುತ್ತಾಳೆ. ಹಿಂತಿರುಗಿ ಬಂದ ನೀಲಯ್ಯ ಅನ್ನ ಆಹಾರಗಳನ್ನು ಬಿಟ್ಟು ಚೆಲುವೆಯಾದ ಸಂಕಮ್ಮನ ಧ್ಯಾನದಲ್ಲಿ ಇರತೊಡಗುತ್ತಾನೆ. ನೀಲಯ್ಯನ ಈ ವಿಚಿತ್ರ ಸ್ಥಿತಿಯನ್ನು ಗಮನಿಸಿದ ಅವನ ತಂದೆ–ತಾಯಂದಿರು ಅವನ ಮನದಾಳದ ಇಂಗಿತವನ್ನು ಅರ್ಥ ಮಾಡಿಕೊಂಡು ದೇವಸೋಲಿಗರ ಪೋಡಿಗೆ ಹೋಗಿ ಹೆಣ್ಣು ಕೇಳುತ್ತಾರೆ. ಆಗಿನ ಪದ್ಧತಿಯಂತೆ ಹೆಣ್ಣಿಗೆ ತೆರ ಕಟ್ಟಿ ಮದುವೆಯನ್ನು ಮಾಡಿಕೊಂಡು ಬರಲಾಗುತ್ತದೆ. ಮದುವೆಯಾದ ನಂತರ ಅನೇಕ ವರ್ಷಗಳ ಕಾಲ ನೀಲಯ್ಯನಿಗೆ ಮಕ್ಕಳಾಗುವುದಿಲ್ಲ. ಸಂಕಮ್ಮನ ವಾರಗಿತ್ತಿಯರು ಬಂಜೆ ಎಂದು ಹೀಯಾಳಿಸಲು ಮೊದಲು ಮಾಡುತ್ತಾರೆ. ಇದರಿಂದ ಕ್ರೋಧಗೊಂಡ ನೀಲಯ್ಯ ಪ್ರತ್ಯೇಕ ಸಂಸಾರ ಹೂಡಲು ನಿರ್ಧರಿಸುತ್ತಾನೆ. ಮಹಾ ಅರಣ್ಯದ ನಡುವೆ ಮರಗಿಡ ಬಳ್ಳಿಗಳ ಸಹಾಯದಿಂದಲೇ ಪುಟ್ಟ ಗುಡಿಸಲೊಂದನ್ನು ನಿರ್ಮಾಣ ಮಾಡಿ ಅದರಲ್ಲಿ ದಂಪತಿಗಳಿಬ್ಬರೂ ವಾಸ ಮಾಡುತ್ತಿರುತ್ತಾರೆ.

ಇಲ್ಲಿ ಕಥೆ ಮತ್ತೊಂದು ತಿರುವನ್ನು ಪಡೆದುಕೊಳ್ಳುತ್ತದೆ. ಕಥೆಗೆ ಅಂಥ ತಿರುವನ್ನು ಕೊಡುವ ಪ್ರಮುಖ ಘಟನೆ ಯಾವುದೆಂದರೆ ಮಲೆಸೋಲಿಗರು ಸಾಮೂಹಿಕವಾಗಿ

ಬೇಟೆಗೆ ಹೋಗುವ ಪ್ರಸಂಗ. ಬೇಟೆಯೆಂದರೆ ಇಂದು ಹೋಗಿ ನಾಳೆ ಬರುವ ಬೇಟೆಯಲ್ಲ. ಒಂಬತ್ತು ತಿಂಗಳುಗಳ ಕಾಲ ಸತತವಾಗಿ ನಡೆಯುವ ಸುದೀರ್ಘ ಬೇಟೆಯದು. ಬೇಟೆಯೆಂದರೆ ಅದು ಬೇಟೆಯೂ ಅಲ್ಲ, ವಾಸ್ತವವಾಗಿ ಕಾವ್ಯದಲ್ಲಿ ಬರುವ ವಿವರಗಳ ಪ್ರಕಾರ ಅದೊಂದು ಸುದೀರ್ಘ ಆಹಾರ ಸಂಗ್ರಹಣೆಯ ಪ್ರಯಾಣ. ಕಾಡಿನಲ್ಲಿ ಸಿಗುವ ಗೆಡ್ಡೆ–ಗೆಣಸು, ಬಿದರಕ್ಕಿ, ತುಡುವೆ, ಜೇನು ಹೆಜ್ಜೇನು–ಇತ್ಯಾದಿಯಾಗಿ ಆಹಾರ ಪರಿಕರಗಳ ಸಂಗ್ರಹದ ಬೇಟೆಯದು. ಈ ಆಹಾರ ಸಂಗ್ರಹಣೆಯ ಬಗ್ಗೆ ಮಲೆಮಾದೇಶ್ವರ ಕಾವ್ಯ ಅತ್ಯಂತ ವೈವಿಧ್ಯಮಯವಾಗಿ ವರ್ಣಿಸುತ್ತದೆ. ಇಡೀ ಪೋಡಿನ ಜನ ಒಮ್ಮೆ ಇಂಥ ಬೇಟೆಗೆ ಹೋಗಬೇಕೆಂದು ನಿರ್ಧರಿಸಿದರೆ ಮನೆಗೆ ಒಬ್ಬರಂತೆ ಕಡ್ಡಾಯವಾಗಿ ಹೊರಡಲೇಬೇಕು. ಯಾಕೆಂದರೆ ಆ ಮಹಾ ಅರಣ್ಯದಲ್ಲಿ ಒಬ್ಬಿಬ್ಬರು ಇಂತಹ ಕಾರ್ಯ ಕೈಗೊಳ್ಳಲು ಸಾಧ್ಯವೇ ಇಲ್ಲ.

ಕುಲದ ಬೇಟೆಗೆ ಹೊರಡಬೇಕೆಂಬ ಹಿರಿಯರ ಕಟ್ಟಾಜ್ಞೆಯ ಹಿನ್ನೆಲೆಯಲ್ಲಿ ನೀಲಯ್ಯನು ಬೇಟೆಗೆ ಹೊರಡಬೇಕಾಗಿದೆ. ಆದರೆ ಅವನು ಒಬ್ಬಂಟಿ. ಸಂಕಮ್ಮ ಒಬ್ಬಳನ್ನೇ ಬಿಟ್ಟು ಹೊರಡುವುದಾದರೂ ಹೇಗೆ? ಹೊರಡಲಿಲ್ಲವಾದರೆ ಕುಲದಿಂದ ಹೊರಗೆ ಹಾಕುವ ಭಯ ಅವನನ್ನು ಕಾಡುತ್ತದೆ ಸಂಕಮ್ಮನನ್ನು ಬಿಟ್ಟು ಹೋಗಲು ಅವನು ಯಾಕೆ ತಯಾರಿಲ್ಲ? ಆ ದಟ್ಟಾರಣ್ಯದಲ್ಲಿ ಅವಳು ಒಬ್ಬಳು ಹೇಗೆ ಎಂಬ ಹೆಂಡತಿಯ ಬಗೆಗಿನ ಪ್ರೀತಿಯಿಂದ ಎಂದು ತಿಳಿದರೆ ಅದು ತಪ್ಪಾಗುತ್ತದೆ. ಏಕೆಂದರೆ ಅವನು ಸಂಕಮ್ಮನನ್ನು ಒಂಬತ್ತು ತಿಂಗಳುಗಳ ಕಾಲ ಬಿಟ್ಟು ಹೋಗಲು ಹಿಂಜರಿಯುತ್ತಿರುವ ಕಾರಣವೆಂದರೆ ಕಡುಚೆಲುವೆಯಾದ ಅವಳು ತನ್ನ ಅನುಪಸ್ಥಿತಿಯಲ್ಲಿ ಯಾರಿಗಾದರೂ ಒಲಿದುಬಿಟ್ಟರೆ? ಇದು ನೀಲಯ್ಯನ ಆತಂಕ. ಅದಕ್ಕಾಗಿಯೇ ಅವನೊಂದು ಉಪಾಯ ಹುಡುಕುತ್ತಾನೆ. ತಾನೂ ಹಿಂತಿರುಗಿ ಬರುವವರೆಗೆ ಬೇರೆ ಯಾರೊಂದಿಗೂ ಅಂತಹ ಅನೈತಿಕ ಸಂಬಂಧವನ್ನು ಏರ್ಪಡಿಸಿಕೊಳ್ಳುವುದಿಲ್ಲ ಎಂದು ಭಾಷೆ ಕೊಡುವಂತೆ ಸಂಕಮ್ಮನನ್ನು ಒತ್ತಾಯಿಸುತ್ತಾನೆ. ನೀಲಯ್ಯನ ಈ ಅನುಮಾನ ಹಾಗೂ ಅವನು ಭಾಷೆ ಕೇಳುತ್ತಿರುವ ಹೀನಬುದ್ಧಿ ಸಂಕಮ್ಮನನ್ನು ಕೆರಳಿಸುತ್ತದೆ. ಅವಳ ಸ್ವಾಭಿಮಾನ ಕುಡಿಯೊಡೆಯುತ್ತದೆ. ನೀನು ಕೊಟ್ಟಿದ್ದ ತೆರವನ್ನು ಹಿಂದಕ್ಕೆ ಪಡೆದು ಈ ದಿನವೇ ತನ್ನನ್ನು ಬಿಟ್ಟು ಬಿಡುವಂತೆ ಒತ್ತಾಯಿಸುತ್ತಾಳೆಯೇ ಹೊರತು ಭಾಷೆಯನ್ನು ಕೊಡುವುದಿಲ್ಲ. ಈ ಸಂದರ್ಭದಲ್ಲಿ ನೀಲಯ್ಯ ಮತ್ತು ಸಂಕಮ್ಮರ ನಡುವೆ ನಡೆಯುವ ವಾಗ್ವಾದಗಳು ಪುರುಷ ಪ್ರಾಧಾನ್ಯತೆಯ ಅಂಕುರವನ್ನು ಹಾಗೆಯೇ ಅದನ್ನು ಧಿಕ್ಕರಿಸುವ ಸ್ತ್ರೀ ಸ್ವಾಭಿಮಾನವನ್ನೂ ಎತ್ತಿ ತೋರಿಸುತ್ತದೆ. ನೀಲಯ್ಯ ಎಷ್ಟು ಪ್ರಯತ್ನಪಟ್ಟರೂ ಸಂಕಮ್ಮಳ ಭಾಷೆ ಪಡೆಯುವಲ್ಲಿ ವಿಫಲನಾಗುತ್ತಾನೆ. ಇದರಿಂದ ರೊಚ್ಚಿಗೆದ್ದ ನೀಲಯ್ಯ ತನಗೆ ಗೊತ್ತಿರುವ ಮಾಟ ವಿದ್ಯೆಯನ್ನು ಪ್ರಯೋಗಿಸಿ ಅವಳನ್ನು ಬೆತ್ತಲು ಮಾಡಿ ಅನೇಕ ವಿಧವಾದ

PDF created with pdfFactory Pro trial version www.pdffactory.com

ಬಳ್ಳಿ ಮತ್ತು ಮುಳ್ಳುಗಳಿಂದ ಅವಳ ಕೈಕಾಲುಗಳನ್ನು ಕಟ್ಟಿಹಾಕಿ, ಅನೇಕ ರೀತಿಯ ಬಂಧನಗಳನ್ನು ವಿಧಿಸಿ ಕಾವಲು ಕಾಯಲು ಹಾವು, ಚೇಳು, ಮತ್ತು ರಾಕ್ಷಸರನ್ನು ನಿಲ್ಲಿಸಿ ಬೇಟೆಗೆ ಹೊರಟು ಹೋಗುತ್ತಾನೆ. ಅಮಾಯಕಳಾದ ಸಂಕಮ್ಮ ಹಾಹಾಕಾರ ಮಾಡುತ್ತಾ ನೆರವಿಗಾಗಿ ಕೂಗಿಕೊಳ್ಳುತ್ತಾಳೆ. ದಟ್ಟ ಕಾನನದ ಒಂಟಿ ಗುಡಿಸಲಲ್ಲಿ ಬಂಧಿತಳಾಗಿರುವ ಅವಳ ರಕ್ಷಣೆಗೆ ಯಾರು ತಾನೆ ಬರುತ್ತಾರೆ? ಕಡೆಗೆ ಅವಳು ಎಪ್ಪತ್ತೇಳು ಮಲೆಯ ಒಡೆಯನಾದ ಮಲೆಮಾದೇಶ್ವರನನ್ನು ಧ್ಯಾನಿಸುತ್ತಾಳೆ.

ಕಥೆ ಇಲ್ಲಿಂದ ಮತ್ತೊಂದು ತಿರುವನ್ನು ಪಡೆದುಕೊಳ್ಳುತ್ತದೆ. ಎಪ್ಪತ್ತೇಳು ಮಲೆಯ ಉನ್ನತ ಸ್ಥಾನದಲ್ಲಿ ಕುಂತು ಧ್ಯಾನಸ್ಥನಾಗಿದ್ದ ಮಲೆಮಾದೇಶ್ವರನ ಪ್ರಜ್ಞೆಗೆ ಸಂಕಮ್ಮನ ದುಸ್ಥಿತಿ ಅರಿವಾಗುತ್ತದೆ. ಇಂಥ ಸ್ಥಿತಿಯಲ್ಲಿರುವ ಹೆಣ್ಣುಮಗಳನ್ನು ರಕ್ಷಿಸಲೇಬೇಕೆಂದು ಅವನು ಸಂಕಲ್ಪಿಸುತ್ತಾನೆ. ತನ್ನ ಆಪ್ತಸೇವಕನಾದ ಬೇಡರ ಕಣ್ಣಯ್ಯನಿಗೆ ತನ್ನ ಪರಿವಾರದಲ್ಲಿ ಸಾಕಿರುವ ಹಲವು ವಿಧದ ಹುಲಿಗಳನ್ನು ಕೂಗಿ ಕರೆಯುವಂತೆ ಹೇಳುತ್ತಾನೆ. ಬಿಳೀಹುಲಿ, ಕರಿಹುಲಿ, ಪಟ್ಟೇಹುಲಿ, ಚುಕ್ಕೆಹುಲಿ ಮುಂತಾಗಿ ಹತ್ತಾರು ಹುಲಿಗಳು ತಮ್ಮ ಕೋರೆ ಹಲ್ಲುಗಳನ್ನು ಜಳಪಿಸುತ್ತಾ ಓಡೋಡಿ ಬರುತ್ತವೆ. ಅವುಗಳಲ್ಲಿ ಆಯ್ಕೆ ಮಾಡಿದ ಒಂದು ಹುಲಿಯ ಮೇಲೆ ಕುಂತು ಧಾವಿಸಿ ಬರುತ್ತಾನೆ.

ಮಲೆಮಾದೇಶ್ವರ ಕಾವ್ಯದ ಈ ಸಂಕಮ್ಮನ ಕಥಾಭಾಗ ಬುಡಕಟ್ಟು ಜೀವನದ ಅಧ್ಯಯನದ ದೃಷ್ಟಿಯಿಂದ ಅತ್ಯಂತ ಮುಖ್ಯವಾದದ್ದು. ಈ ಕಾವ್ಯದಲ್ಲಿ ಬರುವ ಹತ್ತಾರು ಬಗೆಯ ಮರಗಿಡ ಬಳ್ಳಿಗಳು, ಅರಣ್ಯದ ಅಪೂರ್ವ ಪರಿಸರ ಹಾಗೂ ಆ ಪರಿಸರದಲ್ಲಿ ಸೋಲಿಗ ಸಮುದಾಯ ಕೈಗೊಳ್ಳುವ ಬೇಟೆ ಮತ್ತು ಅವರ ಆಹಾರ ಸಂಗ್ರಹಣೆಯ ವಿಧಿವಿಧಾನಗಳು ಸೋಲಿಗರ ಪ್ರಾಚೀನ ಜೀವನದ ಪದ್ಧತಿಯನ್ನು ಚೆನ್ನಾಗಿ ಬಿಂಬಿಸುತ್ತದೆ. ಇಲ್ಲಿನ ಇನ್ನೊಂದು ಮುಖ್ಯ ವಿಚಾರವೆಂದರೆ ಬೇಟೆ ಎಂದರೆ ಎಲ್ಲಿಯೂ ಪ್ರಾಣಿಗಳನ್ನು ಹತ್ಯೆ ಮಾಡುವುದಲ್ಲ. ಬದಲಾಗಿ ಜೇನು, ಹೆಜ್ಜೇನು, ಬೇರು, ಗೆಡ್ಡೆ–ಗೆಣಸು, ಹಣ್ಣು ಹಂಪಲು ಮತ್ತು ಪ್ರಾಣಿಗಳ ಅವಶೇಷಗಳನ್ನು ಸಂಗ್ರಹಿಸುವ ಅಪೂರ್ವ ವಿಧಾನ. ಇವರ ಸಾಂಸ್ಕೃತಿಕ ವೀರನಾದ ಮಲೆಮಾದೇಶ್ವರ ಕೂಡ ಪ್ರಾಣಿಪ್ರಿಯ ದೈವ. ಸದಾ ಹಾವು ಮತ್ತು ಹುಲಿಗಳ ಒಡನಾಟದಲ್ಲಿ ಅವುಗಳ ಗೆಳೆಯನಾಗಿ ಕಾಲ ಕಳೆಯುವ ಒಬ್ಬ ಹೃದಯವಂತ. ಅವನ ಹುಲಿಗಳಿಗೆ ಅವನು ಇಟ್ಟಿರುವ ಹೆಸರಾದರೂ ಎಂತವು. ಕೊಳ್ಳಗಾಲ್ದ ಕುಳ್ಳು ಬರಗಾ, ಅಂಚಿತಾಳ್ದ ಕೆಂಚು ಬರಗಾ, ತಾಳು ಬೆಟ್ಟದ ತಲೆದೂಗಾ, ರಂಗನೊಡ್ಡ, ಸಿಂಗಲ್ಲು, ಬರಗಾ–ಮುಂತಾಗಿ ಅವನ ಹುಲಿಗಳಿಗೆ ಹೆಸರಿಟ್ಟಿದ್ದಾನೆ. ತನ್ನ ಕಾಡಿನಲ್ಲಿರುವ ಹತ್ತಾರು ಹುಲಿಗಳನ್ನು ಕರೆದು ಮೈಸವರಿ ಕ್ಷೇಮ ಸಮಾಚಾರ ವಿಚಾರಿಸಿ ತನಗೆ ಪ್ರಿಯವಾದ ಹನ್ನೆರಡೆಜ್ಜೆ ಕೆಂಬರಗನ ಮೇಲೆ ಕುಂತು ಮಾದಪ್ಪ ಸಂಕಮ್ಮನ ಗುಡಿಸಲಿಗೆ ಪ್ರಯಾಣ ಬೆಳೆಸುತ್ತಾನೆ.

ನೀಲಯ್ಯ ಮಹಾಮಾಟಗಾರ. ಅನೇಕ ರೀತಿಯ ಮಂಡಲಗಳನ್ನು ಬರೆದು ಕಟ್ಟು ಕಟ್ಟಳೆಗಳನ್ನು ಮಾಡಿ ಹಾವು, ಚೇಳು, ರಾಕ್ಷಸರನ್ನು ಕಾವಲಿಗಿಟ್ಟು ಕುಲದ ಬೇಟೆಗೆ ಹೋಗಿದ್ದಾನೆ. ಆ ಕಟ್ಟು ಕಟ್ಟಲೆಗಳನ್ನು ನಿರರ್ಥಕಗೊಳಿಸಿಯೇ ಒಳ ಹೋಗಬೇಕು. ಇದು ಮಾದೇಶ್ವರನಿಗೆ ಅಸಾಧ್ಯದ ವಿಚಾರವೇನೂ ಅಲ್ಲ. ಯಾಕೆಂದರೆ ಇವನು ಮೋಡಿಕಾರರ ಗುರು. ಮಂತ್ರವಿದ್ಯೆಯ ಸಕಲ ವಿವರಗಳೂ ಗೊತ್ತಿರುವ ಮಹಾಮಾಂತ್ರಿಕ. ಮೋಡಿಗೆ ಪ್ರತಿಮೋಡಿ ಮಾಡಿ ಕ್ಷಣಾರ್ಧದಲ್ಲಿ ನಿರರ್ಥಕಗೊಳಿಸಬಲ್ಲ ಮಹಾವಿದ್ಯೆಕಾರ. ನೀಲಯ್ಯನ ಎಲ್ಲಾ ಮಂಡಲಗಳನ್ನು ಕಟ್ಟುಕಟ್ಟಲೆಗಳನ್ನು ನಿರರ್ಥಕಗೊಳಿಸಿ ಸಂಕಮ್ಮಳನ್ನು ಸಮೀಪಿಸುತ್ತಾನೆ. ಅವಳ ಮೈಮೇಲಿನ ಮುಳ್ಳು ಬಳ್ಳಿಗಳನ್ನು ಇಲ್ಲವಾಗಿಸುತ್ತಾನೆ. ಬೆತ್ತಲೆ ಇರುವ ಸಂಕಮ್ಮಳಿಗೆ ವಸ್ತ್ರವನ್ನು ದಯಪಾಲಿಸುತ್ತಾನೆ. ಇಷ್ಟೆಲ್ಲ ಮಾಡಿ ಮತ್ತೇನು ಬೇಕು ಮಗಳೇ ಎಂದು ಕೇಳುವಾಗ ಮಕ್ಕಳ ಫಲ ಕೊಟ್ಟು ಹೋಗುವಂತೆ ಹಟ ಹಿಡಿಯುತ್ತಾಳೆ. ಸಂಕಮ್ಮಳ ಅಭೀಪ್ಸೆಯನ್ನು ಈಡೇರಿಸಲು ಕೊನೆಗೂ ಒಪ್ಪಿಕೊಂಡ ಮಾದೇವ ಹಾಗೆ ಹುಟ್ಟುವ ಮೊದಲ ಇಬ್ಬರು ಮಕ್ಕಳನ್ನು ತನ್ನ ಸೇವೆಗೆ ಬಿಡಬೇಕು ಎಂಬ ವಾಗ್ದಾನ ಪಡೆದು ಅವಳಿಗೆ ಮಕ್ಕಳ ಫಲವನ್ನು ಕರುಣಿಸುತ್ತಾನೆ. ಅವಳನ್ನು ಭಾಗಿಸಿ ಬೆನ್ನಿನ ಮೇಲೆ ಮಕ್ಕಳ ಫಲವನ್ನು ಬರೆದು ಕಾಡು ಬೆಂಡೆಕಾಯಿಯ ಮೂಲಕ ಪಿಂಡ ಪರಸಾದವನ್ನು ಕೊಟ್ಟನಂತೆ ಮಾದೇಶ್ವರ! ಕಾವ್ಯದಲ್ಲಿ ಬರುವ ಈ ಪ್ರತಿಮೆ ಅತ್ಯಂತ ಅರ್ಥಗರ್ಭಿತವಾಗಿದೆ. ವಾಸ್ತವಕ್ಕೆ ಹತ್ತಿರವಾಗಿದೆ.

ಸಂಕಮ್ಮ ಗರ್ಭಿಣಿಯಾಗಿ ಮಕ್ಕಳನ್ನು ಹೆರುವುದಕ್ಕೂ ನೀಲಯ್ಯನ ಒಂಬತ್ತು ತಿಂಗಳು ಕಾಲದ ಕುಲದ ಬೇಟೆ ಮುಗಿಯುವುದಕ್ಕೂ ಸರಿಹೋಗುತ್ತದೆ. ಅವನು ಬಂದು ನೋಡಿದಾಗ ಗುಡಿಸಿಲ ಬದಲು ಮಾದೇಶ್ವರನ ಕರುಣೆಯಿಂದ ಅರಮನೆ ನಿರ್ಮಾಣವಾಗಿರುತ್ತದೆ. ಕಾರಯ್ಯ–ಬಿಲ್ಲಯ್ಯ ಎಂಬ ಮಕ್ಕಳನ್ನು ಹೆತ್ತು ಆರಾಮವಾಗಿರುವ ಸಂಕಮ್ಮಳನ್ನು ನೋಡಿ ಮತ್ತಷ್ಟು ಕ್ರೋಧಗೊಳ್ಳುತ್ತಾನೆ. ಸಂಕಮ್ಮಳಿಗೆ ಅನೇಕ ರೀತಿಯ ಕಷ್ಟ ಕೋಟಲೆಗಳನ್ನು ನೀಡುತ್ತಾನೆ. ಆದರೆ ಸಂಕಮ್ಮಳ ಅರಮನೆಯ ಗೋಡೆಯ ಮೇಲೆ ಹಲ್ಲಿಯ ರೂಪದಲ್ಲಿ ಕುಳಿತುಕೊಳ್ಳುವ ಮಾದೇವ ಅವಳ ಎಲ್ಲ ರೀತಿಯ ಕಷ್ಟಗಳನ್ನು ಪರಿಹರಿಸಿ ನೀಲಯ್ಯ ಸೋಲೊಪ್ಪಿಕೊಳ್ಳುವಂತೆ ಮಾಡುವಲ್ಲಿ ಯಶಸ್ವಿ ಯಾಗುತ್ತಾನೆ.

ಇಷ್ಟು ಸುದೀರ್ಘವಾದ ಕಥೆಯನ್ನು ಹೇಳಿದ್ದಕ್ಕೆ ಕಾರಣವಿದೆ. ಬುಡಕಟ್ಟು ದೈವಗಳನ್ನು ಕುರಿತು ಚರ್ಚೆ ಮಾಡುತ್ತಿರುವ ಈ ಸಂದರ್ಭದಲ್ಲಿ, ಸೋಲಿಗರ ಮನೆ ದೇವತೆಯಾಗಿರುವ ಸಂಕಮ್ಮ; ಸೋಲಿಗರ ಆರಾಧ್ಯ ದೈವವಾಗಿರುವ ಮಲೆ ಮಾದೇಶ್ವರ ಮತ್ತು ಸೋಲಿಗರ ಸಾಂಸ್ಕೃತಿಕ ವೀರರೆನಿಸಿದ ಕಾರಯ್ಯ ಮತ್ತು

PDF created with pdfFactory Pro trial version www.pdffactory.com

ಬಿಲ್ಲಯ್ಯ ಇವರುಗಳ ಸಂಬಂಧವನ್ನು ಕಾಡಿನ ಪರಿಸರದ ಎಲ್ಲ ದಟ್ಟ ಸಾಂಸ್ಕೃತಿಕ ವಿವರಗಳನ್ನು ಉಳಿಸಿಕೊಂಡು ನಿರೂಪಿಸುವ ಈ ಕಾವ್ಯ ಒಂದು ಕಾಲದ ಬುಡಕಟ್ಟೊಂದರ ಜೀವನ ವಿಧಾನವನ್ನು ವಿಶ್ಲೇಷಿಸುತ್ತದೆ. ಕಾವ್ಯದ ಆರಂಭದಲ್ಲಿ ನೀಲಯ್ಯ ಕುರಿಗಳನ್ನು ಕಾಯುವ ಕಾಯಕವನ್ನು ಮಾಡುತ್ತಿರುತ್ತಾನೆ. ಅಂದರೆ ಆಹಾರ ಸಂಗ್ರಹಣೆಯ ಜೊತೆಗೆ ಪಶುಸಂಗೋಪನೆಯನ್ನು ಈ ಜನಾಂಗ ಅವಲಂಬಿಸಿದ್ದುದು ಈ ಮೂಲಕ ತಿಳಿದುಬರುತ್ತದೆ. ಹೀಗೆ ಪಶುಪಾಲನೆ ಹಂತದ ಮೌಲ್ಯವೆನಿಸಿದ ಪುರುಷಪ್ರಧಾನ ನೆಲೆ ನೀಲಯ್ಯನ ಮನಸ್ಸಿನಲ್ಲಿ ಮನೆ ಮಾಡಿದೆ. ಆ ಮೂಲಕ ಮಾತೃಪ್ರಧಾನ ವ್ಯವಸ್ಥೆಯಲ್ಲಿದ್ದ ಸೋಲಿಗ ಬುಡಕಟ್ಟು ಪುರುಷಪ್ರಧಾನ ವ್ಯವಸ್ಥೆಗೆ ಪರಿವರ್ತಿತವಾಗುತ್ತಿರುವ ಸಂಕೇತವಾಗಿ ನೀಲಯ್ಯ ನಮಗೆ ಕಾಣಿಸುತ್ತಾನೆ. ಆದರೆ ಹಾಗೆ ತನ್ನ ಮೇಲೆ ಅಧಿಕಾರ ಚಲಾಯಿಸಲು ಪ್ರಯತ್ನಿಸುತ್ತಿರುವ ಪುರುಷಪ್ರಾಧಾನ್ಯವನ್ನು ಧಿಕ್ಕರಿಸುವ ಮಾತೃಮೂಲ ವ್ಯವಸ್ಥೆಯ ಪ್ರತೀಕವಾಗಿ ಸಂಕಮ್ಮ ಕಂಡುಬರುತ್ತಾಳೆ. ನೀಲಯ್ಯ ಮತ್ತು ಸಂಕಮ್ಮರ ಈ ಸಾಂಸ್ಕೃತಿಕ ಘರ್ಷಣೆ ಒಂದು ಕಾಲದ ಇಡೀ ಸೋಲಿಗ ಸಮುದಾಯದ ಸಾಂಸ್ಕೃತಿಕ ಘರ್ಷಣೆಯಾಗಿಯೇ ನಮಗೆ ಕಂಡುಬರುತ್ತದೆ. ಹೆಂಡತಿ ಎನ್ನುವವಳು ತನ್ನ ಆಸ್ತಿ ಎಂಬ ನಿಯಂತ್ರಣಾವಸ್ಥೆಯನ್ನು ನೀಲಯ್ಯ ಪ್ರತಿನಿಧಿಸಿದರೆ ತಾನು ಯಾರಿಂದಲಾದರೂ ಮಕ್ಕಳ ಫಲವನ್ನು ಪಡೆಯಬಹುದು ಎನ್ನುವ ಮೂಲಕ ಪ್ರಾಚೀನದಲ್ಲಿದ್ದ ಮಾತೃಮೂಲ ಕುಟುಂಬದ ಮುಕ್ತವ್ಯವಸ್ಥೆಯ ಕಡೆಗೆ ಸಂಕಮ್ಮ ಒಲಿಯುತ್ತಾಳೆ. ಹೀಗಾಗಿ ಕಾವ್ಯದ ಈ ಭಾಗ ಒಂದು ಕಾಲದ ಪರಿವರ್ತನ ಸಮಾಜದ ಇತಿಹಾಸವನ್ನೇ ನಿರೂಪಿಸುತ್ತದೆ.

ಇಲ್ಲಿ ಬರುವ ಮೋಡಿ, ಮಾಟ ಮತ್ತು ಮಂತ್ರವಿದ್ಯೆಯ ಅನೇಕ ವಿವರಗಳು ಪ್ರಾಚೀನ ಸಮಾಜವೊಂದರ ಜೀವನಪದ್ಧತಿಯ ಕುರುಹುಗಳಾಗಿ ನಮಗೆ ಕಾಣಿಸುತ್ತವೆ. ಯಾವುದೇ ಬುಡಕಟ್ಟು ಸಮುದಾಯದ ಅವಿಭಾಜ್ಯ ಅಂಗ ಈ ಮಂತ್ರ ವಿದ್ಯೆ. ಮಹಾಮಾಟಕಾರನಾದ ನೀಲಯ್ಯ ಮತ್ತು ಮಾಟಕಾರರ ಗುರುವಾದ ಮಹದೇಶ್ವರ ಈ ಇಬ್ಬರು ಒಂದು ಕಾಲದ ಎರಡು ಸಮುದಾಯಗಳ ನಡುವೆ ನಡೆಯುತ್ತಿದ್ದಿರ ಬಹುದಾದ ಮಂತ್ರವಿದ್ಯೆಯ ಸ್ಪರ್ಧೆಯನ್ನೇ ಪ್ರತಿನಿಧಿಸುತ್ತಾರೆ. ಆರಾಧನೆಗಿಂತಲೂ ಮಂತ್ರವಿದ್ಯೆಯೇ ಬುಡಕಟ್ಟು ಸಮುದಾಯಗಳಲ್ಲಿ ಪ್ರಮುಖವಾಗಿತ್ತು ಎಂಬುದನ್ನು ಈ ಪ್ರಸಂಗ ನಿಚ್ಚಳವಾಗಿ ನಿರೂಪಿಸುತ್ತದೆ.

ಕುಲದ ಬೇಟೆಯ ವಿಚಾರವನ್ನು ಆ ಮೂಲಕ ಆಹಾರ ಸಂಗ್ರಹಣೆಯ ವಿವರಗಳು ಹಾಗೂ ಹುಲಿ ಮತ್ತು ಹಾವುಗಳಂತ ಕ್ರೂರ ಜಂತುಗಳನ್ನೇ ತಮ್ಮ ಸಹಬಾಳ್ವೆಯಲ್ಲಿ ಕೊಂಡೊಯ್ಯುತ್ತಿದ್ದ ಅಪೂರ್ವ ಪ್ರಸಂಗಗಳು ಅನಾದಿ ಕಾಲವೊಂದರ ಪ್ರಾಣಿ ಸಮೂಹದ ಜೊತೆಗಿನ ವಿಶಿಷ್ಟ ಜೀವನ ಪದ್ಧತಿಯನ್ನು ನಿರೂಪಿಸುತ್ತದೆ.

ಇಲ್ಲಿ ಪರಿಶೀಲಿಸಬೇಕಾದ ಮುಖ್ಯವಾದ ಅಂಶವೆಂದರೆ ಮಲೆಮಾದೇಶ್ವರ ಮತ್ತು ಸಂಕಮ್ಮ ಸೋಲಿಗರ ಮೂಲ ದೈವಗಳೇ ಎಂಬುದು. ಮಲೆಮಾದೇಶ್ವರ ಒಬ್ಬ ಐತಿಹಾಸಿಕ ವ್ಯಕ್ತಿಯೂ ಆಗಿರುವುದರಿಂದ ಅವನ ಕಾಲ ಸುಮಾರು ೧೪–೧೫ನೇ ಶತಮಾನವಾಗಿರ ಬಹುದು ಎಂಬ ಊಹೆ ಇರುವುದರಿಂದ ಸಂಕಮ್ಮನ ಈ ಪ್ರಸಂಗ ನಿಜವಿರಬಹುದು ಅಥವಾ ಇಲ್ಲದಿರಬಹುದು. ಆದರೆ ಅವಳು ಮಲೆ ಮಾದೇಶ್ವರನ ನಿಕಟವರ್ತಿಯಾದ ಒಬ್ಬಳು ಶರಣೆಯಾಗಿ ಬದುಕಿರುವ ಸಾಧ್ಯತೆಗಳು ಹೆಚ್ಚಿವೆ. ಆದ್ದರಿಂದ ಸೋಲಿಗರಿಗೆ ಈ ಇಬ್ಬರು ದೈವಗಳಿಗಿಂತ ಆದಿಯಲ್ಲಿ ಮೂಲ ದೈವಗಳು ಇರಲಿಲ್ಲವೇ ಎಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ. ವಾಸ್ತವವಾಗಿ ಕ್ಯಾತೆದೇವರು(ಶಿವನ ಸ್ವರೂಪಿ) ಮತ್ತು ಮಾರಮ್ಮ ಮೂಲದಲ್ಲಿ ಇವರ ದೈವವಾಗಿದ್ದವು ಎಂಬುದರಲ್ಲಿ ಅನುಮಾನವಿಲ್ಲ. ಬಹುಶಃ ಕ್ಯಾತೆದೇವರು ಇವರ ಪಶು ಸಂಗೋಪನೆಯ ಹಂತದ ದೈವವಾಗಿದ್ದರೆ ಮಾರಮ್ಮ ಅದಕ್ಕೂ ಹಿಂದಿನ ಮಾತೃಮೂಲ ಕುಟುಂಬದ ವ್ಯವಸ್ಥೆಯ ದೇವರಿರಬಹುದು. ಆದರೆ ಇವರ ಬಳಿ ಮತ್ತು ಕುಲಗಳ ವಿಚಾರ ಬಂದಾಗ ನಿಸರ್ಗದ ದೇವರುಗಳು ಮತ್ತು ಮರಗಿಡ ಬಳ್ಳಿಗಳ ಪ್ರಸ್ತಾಪವೇ ಹಂಚಿರುವುದರಿಂದ ಪ್ರಾಚೀನದಲ್ಲಿ ಇವರು ಕೂಡ ನಿಸರ್ಗದ ಆರಾಧಕರೇ.

ಮಲೆಮಾದೇಶ್ವರ ಕೇವಲ ಸೋಲಿಗರಿಗಷ್ಟೇ ದೈವವಲ್ಲ. ದಕ್ಷಿಣ ಕರ್ನಾಟಕದ ಮೈಸೂರು, ಮಂಡ್ಯ, ಬೆಂಗಳೂರು ಮುಂತಾಗಿ ಹಲವು ಪ್ರದೇಶಗಳ ಶೂದ್ರ ವರ್ಗದ ಅನೇಕ ಸಮುದಾಯಗಳು ಮಲೆಮಾದೇಶ್ವರನ ಭಕ್ತರು. ಇತ್ತೀಚೆಗೆ ವೀರಶೈವರೂ ಕೂಡ ಮಲೆಮಾದೇಶ್ವರನ ವೀರಶೈವ ದೇವರೆಂದು ಪ್ರತಿಪಾದಿಸುತ್ತಾರೆ. ಕಲ್ಯಾಣದ ಕ್ರಾಂತಿ ನಂತರದಲ್ಲಿ ಬಸವಣ್ಣ ಮತ್ತು ಅಲ್ಲಮಪ್ರಭುಗಳ ತತ್ವಾದರ್ಶನಗಳನ್ನೂ ಶೂದ್ರರ ಪಂಚಮಕಾರಗಳ ಆಸಕ್ತಿಯನ್ನು ಒಂದುಗೂಡಿಸಿ ಕೆಳವರ್ಗಗಳ ಜನಸಮುದಾಯಗಳನ್ನು ಒಂದು ಪಂಥದ ಅಡಿಯಲ್ಲಿ ತಂದ ಕೀರ್ತಿ ಮಲೆಮಾದೇಶ್ವರ, ಮಂಟೆಸ್ವಾಮಿಗೆ ಸಲ್ಲುತ್ತದೆ. ಮಲೆಮಾದೇಶ್ವರನನ್ನು ಮಾದಿಗ ಕುಲದವನೆಂದು ಪ್ರತಿಪಾದಿಸಲಾಗಿದೆ. ಇದು ನಿಜವಿರಬಹುದು ಅಥವಾ ಊಹೆಯಿರಬಹುದು. ಆದರೆ, ಶೂದ್ರಾತಿಶೂದ್ರರಿಗೆ ಒಂದು ಸ್ವಾಭಿಮಾನ ಮತ್ತು ಧಾರ್ಮಿಕವಾದ ದಿಕ್ಕು ದೆಸೆಗಳನ್ನು ತೋರಿದ ಕ್ರಾಂತಿಕಾರಕ ವ್ಯಕ್ತಿಗಳು ಇವರಾಗಿದ್ದರು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದ್ದರಿಂದಲೇ ಅನೇಕ ಜನಸಮುದಾಯಗಳು ಈ ಇಬ್ಬರು ಸಾಂಸ್ಕೃತಿಕ ವ್ಯಕ್ತಿಗಳನ್ನು ಆರಾಧ್ಯ ದೈವಗಳಾಗಿ ಕಾಣುತ್ತಿದ್ದಾರೆ. ದಕ್ಷಿಣ ತುತ್ತತುದಿಯ ಮಹಾ ಅರಣ್ಯದ ಎಪ್ಪತ್ತೇಳು ಮಲೆಗಳನ್ನೇ ತಮ್ಮ ಕ್ರಾಂತಿಯ ಸ್ಥಳವನ್ನಾಗಿ ಮಾಡಿಕೊಂಡ ಮಲೆಮಾದೇಶ್ವರ ಮೊದಲಿಗೆ ತನ್ನ ಶಿಷ್ಯರನ್ನಾಗಿ ಸ್ವೀಕರಿಸಿದ್ದು ಸೋಲಿಗರು ಮತ್ತು ಬೇಡ ಗಂಪಣದ ಸಮುದಾಯವನ್ನು. ಆದ್ದರಿಂದ ಸೋಲಿಗರು ಮಧ್ಯಕಾಲೀನ

PDF created with pdfFactory Pro trial version www.pdffactory.com

ಕರ್ನಾಟಕದ ಸಾಂಸ್ಕೃತಿಕ ಪರಿವರ್ತನೆಯ ಈ ಹಂತದಲ್ಲಿ ಮಲೆಮಾದೇಶ್ವರನ ಭಕ್ತರಾಗಿದ್ದಾರೆ. ಸಂಕಮ್ಮನ ಮಕ್ಕಳೆನ್ನಲಾದ ಕಾರಯ್ಯ ಮತ್ತು ಬಿಲ್ಲಯ್ಯ ಅವರು ಮಾದೇಶ್ವರನ ಪ್ರಥಮ ಶಿಷ್ಯರಾಗಿರಬೇಕು. ಇದು ಕಾವ್ಯದಲ್ಲಿಯೂ ಸ್ಪಷ್ಟವಾಗಿಯೇ ಬರುತ್ತದೆ. ಸೋಲಿಗರ ಸಾಂಸ್ಕೃತಿಕ ವೀರರಾದ ಇವರು ಬಹುಶಃ ಇಡೀ ಸೋಲಿಗ ಸಮುದಾಯವನ್ನೇ ಮಲೆಮಾದೇಶ್ವರನ ಭಕ್ತರಾಗುವಂತೆ ಪ್ರಭಾವ ಬೀರಿರಬಹುದು.

ಈ ನಡುವೆ ಮತ್ತೊಂದು ವಿಚಿತ್ರ ಪ್ರಸಂಗ ಸೋಲಿಗರ ಧಾರ್ಮಿಕ ಬದುಕಿನಲ್ಲಿ ನಡೆದು ಹೋಗಿದೆ. ಅದೇನೆಂದರೆ ಬಿಳಿಗಿರಿ ರಂಗಯ್ಯ ಸೋಲಿಗರ ಆರಾಧ್ಯ ದೈವವಾದ ಪ್ರಸಂಗ. ಮಲೆಮಾದೇಶ್ವರ ಬೆಟ್ಟದಿಂದ ಸುಮಾರು ದೂರದಲ್ಲಿರುವ ಮೈಸೂರು ಜಿಲ್ಲೆಯ ಮತ್ತೊಂದು ನಿಸರ್ಗ ಪರ್ವತವೆಂದರೆ ಬಿಳಿಗಿರಿ ರಂಗನ ಬೆಟ್ಟ. ಸೋಲಿಗರು ದಟ್ಟವಾಗಿರುವ ಪ್ರದೇಶವಿದು. ಮೂಲದಲ್ಲಿ ಮಾತೃವಿನ ಶಿವನ ಆರಾಧಕರಾಗಿದ್ದ ಸೋಲಿಗರು ಶ್ರೀ ವೈಷ್ಣವ ಪರಂಪರೆಯ ಬಿಳಿಗಿರಿ ರಂಗಯ್ಯನಿಗೆ ಹೇಗೆ ಮತ್ತು ಯಾವಾಗ ಭಕ್ತರಾದರು ಎಂಬುದು ಅತ್ಯಂತ ಕುತೂಹಲಕಾರಿ ವಿಚಾರ. ಅದಕ್ಕೂ ಒಂದು ಪುಟ್ಟ ಕಥೆ ಇದೆ. ಈ ಕಥೆಯನ್ನು ಸೋಲಿಗರು ಸುದೀರ್ಘ ಕಾವ್ಯವನ್ನಾಗಿಯೂ ಹಾಡುತ್ತಾರೆ. ಸೋಲಿಗರ ಮತ್ತೊಬ್ಬಳು ಚೆಲುವೆ ಕುಸುಮಾಲೆ. ಕಾಡಿನ ನಡುವಿನ ಪೋಡಿನಲ್ಲಿ ಈ ಸುಂದರ ಹೆಣ್ಣನ್ನು ಬಿಳಿಗಿರಿ ರಂಗಯ್ಯ ಕಾಣುತ್ತಾನೆ. ಅವಳ ಮೇಲೆ ಅವನಿಗೆ ಮನಸ್ಸಾಗುತ್ತದೆ. ಆದರೆ, ಕಾಡುಸೋಲಿಗರ ಬೊಮ್ಮೇಗೌಡ ಅಂದರೆ ಕುಸುಮಾಲೆಯ ತಂದೆ ಇದಕ್ಕೆ ಒಪ್ಪುವವನಲ್ಲ. ಮೊದಲನೆಯದಾಗಿ ಬಿಳಿಗಿರಿ ರಂಗಯ್ಯ ಸೋಲಿಗನಲ್ಲ. ಎರಡನೆದಾಗಿ ರಂಗಯ್ಯನಿಗೆ ಈಗಾಗಲೇ ಮದುವೆಯಾಗಿ ಇಬ್ಬರು ಮಡದಿಯರಿದ್ದಾರೆ. ಆದ್ದರಿಂದ ಹೆಣ್ಣನ್ನು ಕೇಳಿ ಪಡೆಯುವ ಪ್ರಶ್ನೆಯೇ ಬರುವುದಿಲ್ಲ ಎಂಬುದು ಬಿಳಿಗಿರಿ ರಂಗಯ್ಯನಿಗೂ ಗೊತ್ತಿದೆ. ಆದ್ದರಿಂದ ಏನು ಮಾಡುವುದು? ಮೊದಲು ಕುಸುಮಾಲೆಯ ಮನಸ್ಸನ್ನು ಕದಿಯುತ್ತಾನೆ. ನಂತರ ಅವಳನ್ನು ಅಪಹರಿಸಿ ಮದುವೆ ಮಾಡಿಕೊಳ್ಳುತ್ತಾನೆ. ಹೀಗೆ ಅಪಹರಣದ ಮೂಲಕ ರಂಗಯ್ಯ ಮತ್ತು ಕುಸುಮಾಲೆಯರು ಗಂಡ ಹೆಂಡಿರಾಗುತ್ತಾರೆ. ಇದನ್ನು ಒಪ್ಪಿಕೊಂಡ ಸೋಲಿಗ ಸಮುದಾಯದವರು ಬಿಳಿಗಿರಿ ರಂಗಯ್ಯನನ್ನು ಭಾವನನ್ನಾಗಿ ಸ್ವೀಕರಿಸುತ್ತಾರೆ. ಅಂದಿನಿಂದ ಸೋಲಿಗರಲ್ಲಿ ಅಪಹರಣ ರೂಪದ ವಿವಾಹಪದ್ಧತಿಯೇ ಬೆಳೆಯಿತು ಎಂದು ಸೋಲಿಗರು ಹೇಳುತ್ತಾರೆ. ಸೋಲಿಗರು ಇಂದು ನೆರವೇರಿಸುವ ವಿವಾಹದಲ್ಲಿಯೂ ಈ ಅಪಹರಣದ ಸಾಂಕೇತಿಕ ಆಚರಣೆಗಳು ನಡೆಯುತ್ತವೆ. ಒಂದು ಕಾಲಕ್ಕೆ ಗಂಡು ಹೆಣ್ಣನ್ನು ಅಪಹರಿಸುವ ಮೂಲಕವೇ ತನ್ನವಳಾಗಿ ಮಾಡಿಕೊಳ್ಳುವ ಅಪರೂಪದ ವಿವಾಹಪದ್ಧತಿಯೊಂದು ಸೋಲಿಗರಲ್ಲಿ ಇದ್ದುದನ್ನು ಈ ಸಾಂಕೇತಿಕ ಆಚರಣೆಗಳು ನಿಚ್ಚಳಪಡಿಸುತ್ತವೆ.

ಆದರೆ ಈ ಪದ್ಧತಿಯನ್ನು ಕುಸುಮಾಲೆ ಮತ್ತು ಬಿಳಿಗಿರಿ ರಂಗಯ್ಯನ ಸಂಬಂಧಗಳ ಜೊತೆಯಲ್ಲಿ ಬೆಸೆದಿರುವುದು ತುಂಬ ಔಚಿತ್ಯಪೂರ್ಣವಾಗಿದೆ. ಈಗಾಗಲೇ ದೈವವಾಗಿದ್ದ ಬಿಳಿಗಿರಿ ರಂಗಯ್ಯ ಸೋಲಿಗರ ಭಾವ ನೆಂಟನಾದ ಮೇಲೆ ಅವನನ್ನು ಪೂಜಿಸಲೇಬೇಕು ತಾನೇ? ಈಗ ಎಷ್ಟರ ಮಟ್ಟಿಗೆ ಸೋಲಿಗರು ಬಿಳಿಗಿರಿ ರಂಗಯ್ಯನ ಭಕ್ತರಾಗಿದ್ದಾರೆ ಎಂದರೆ ಹಾಲಕ್ಕಿ ಒಕ್ಕಲಿಗರು ಮತ್ತು ಗೊಂಡರು ತಿರುಪತಿ ವೆಂಕಟರಮಣನ ಭಕ್ತರಾದಂತೆಯೇ ಈ ಪ್ರಸಂಗ ಕೂಡ.

ಇಲ್ಲಿ ನಮ್ಮ ದೈವಗಳ ಸಂಬಂಧದಲ್ಲಿ ಉಂಟಾಗಿರುವ ಬಹುಮುಖ್ಯವಾದ ಮತ್ತು ಅಪರೂಪದ ವೈವಾಹಿಕ ಸಂಬಂಧಗಳನ್ನು ನೆನಪಿಸಿಕೊಳ್ಳುವ ಅಗತ್ಯವಿದೆ. ಮೇಲುಕೋಟೆಯ ಚೆಲುವರಾಯನಿಗೆ ವರನಂದಿ ಪ್ರೇಯಸಿಯಾಗಿ ಬರುವುದು, ನಂಜನಗೂಡು ನಂಜುಂಡನಿಗೆ ಬೆಟ್ಟದ ಚಾಮುಂಡಿ ಪ್ರೇಯಸಿಯಾಗುವುದು, ಬಿಳಿಗಿರಿ ರಂಗಯ್ಯನಿಗೆ ಕುಸುಮಾಲೆ ಪ್ರೇಯಸಿಯಾಗುವುದು, ಬೇಲೂರು ಚೆನ್ನಕೇಶವನಿಗೆ ಮಳಲಿಯ ಗಿಡ್ಡಮ್ಮ ಪ್ರೇಯಸಿಯಾಗುವುದು, ಉಜ್ಜನಿಯ ವರದರಾಜನಿಗೆ ಚೌಡಮ್ಮ ಪ್ರೇಯಸಿಯಾಗುವುದು, ತಿರುಪತಿ ವೆಂಕಟರಮಣನಿಗೆ ಅಲಮೇಲು ಮಂಗಮ್ಮ ಪ್ರೇಯಸಿಯಾಗುವುದು–ಇವೆಲ್ಲ ವಿಚಿತ್ರ ಪ್ರಸಂಗಗಳಂತೆ ಕಂಡರೂ ನಮ್ಮ ದೇವ–ದೇವಿಯರ ಜಗತ್ತಿನಲ್ಲಿ ತುಂಬ ಕುತೂಹಲಕಾರಿಯಾದ ಸಂಗತಿಗಳು. ಅದರಲ್ಲಿಯೂ ವೈದಿಕ ಸಂಪ್ರದಾಯದ ವೈಷ್ಣವ ದೇವತೆಗಳು ಗಂಡಂದಿರಾಗಿ ಸ್ಥಳೀಯ ದೇವಿಯರು ಪತ್ನಿಯರಾಗಿ ಸೇರ್ಪಡೆಗೊಂಡ ಈ ಐತಿಹಾಸಿಕ ಪ್ರಸಂಗಗಳನ್ನು ಮುಂದಿನ ಅಧ್ಯಯನಗಳಲ್ಲಿ ವಿವರಿಸಲು ಪ್ರಯತ್ನಿಸಲಾಗುವುದು. ಈಗ ಬಿಳಿಗಿರಿ ರಂಗಯ್ಯ ಮತ್ತು ಕುಸುಮಾಲೆಯ ಪ್ರಸಂಗವನ್ನು ನೋಡೋಣ. ಈ ಸಂಬಂಧದಲ್ಲಿ ವಿದ್ವಾಂಸರೊಬ್ಬರು ಹೀಗೆ ಹೇಳುತ್ತಾರೆ. "ರಂಗನಾಥನ ಮತ್ತು ಸ್ಥಾನಿಕ ಸಮುದಾಯಗಳ ಅಮ್ಮಂದಿರ ಈ ಪ್ರಣಯಸಂಬಂಧ ಕಲಹವನ್ನು ಉಂಟುಮಾಡಿದರೂ, ಅದನ್ನು ವಿಧಿಬದ್ಧವಾಗಿ ಒಪ್ಪಿಕೊಂಡು ಅದಕ್ಕೂ ಒಂದು ಸ್ಥಾನ ಕಲ್ಪಿಸಲಾಗುತ್ತದೆ. ಅಷ್ಟೇ ಅಲ್ಲ, ಅದನ್ನು ಮುಂದುವರೆಸಿಕೊಂಡು ಬರಲಾಗುತ್ತದೆ. ಎಂದರೆ ಈ ದೇವತೆಯ ವೈವಾಹಿಕ ಚೌಕಟ್ಟಿಗಿಂತ ಆತನ ಪ್ರಣಯಸಂಬಂಧವೇ ಸ್ಥಾನಿಕ ಸಂದರ್ಭದಲ್ಲಿ ಹೆಚ್ಚು ಪ್ರಸ್ತುತವಾಗಿರುವುದು. ಇದು ನೂರಾರು ವರ್ಷಗಳ ಮಾದರೀಕರಣದ ನಂತರವೂ ಸ್ಥಾನಿಕ ಸಂಸ್ಕೃತಿಗಳ ಜೊತೆಗೆ ಈ ದೇವತೆಗೆ ಇರುವ ಸಂಬಂಧದ ಗಾಢತೆಯನ್ನು ತೋರಿಸುತ್ತದೆ. ಈ ಸ್ಥಾನಿಕ ನಿರೂಪಣೆಗಳು ಕೇವಲ ತಮ್ಮ ಮತ್ತು ರಂಗಯ್ಯನ ಗಾಢ ಸಂಬಂಧವನ್ನು ದೇವಿಯರ ಮೂಲಕ ಸಾರಿಕೊಳ್ಳುವುದಲ್ಲದೇ, ರಂಗಯ್ಯನ ಕೌಟುಂಬಿಕ ಚೌಕಟ್ಟು ಕೃತಕ ಹಾಗೂ ತಮ್ಮ ದೇವಿಯ ಸಂಬಂಧವೇ ಜೀವಂತ ಎಂದು ಪ್ರತಿಪಾದಿಸುತ್ತದೆ. ಇಂಥ ಪ್ರತಿಪಾದನೆಯಲ್ಲಿ

PDF created with pdfFactory Pro trial version www.pdffactory.com

ರಂಗಯ್ಯನ ಕುರಿತಾಗಿ ಬೆಳೆದು ಬಂದ ದೇವಾಲಯ ಸಂಸ್ಕೃತಿ ಹಾಗೂ ಪ್ರತಿಮಾಶಾಸ್ತ್ರಗಳ ಕುರಿತು ವ್ಯಂಗ್ಯವೂ ಸೇರಿರುತ್ತದೆ. ಇದು ನಮಗೆ ಸ್ಪಷ್ಟವಾಗಿ ಕಾಣುವುದು ಬಿಳಿಗಿರಿ ರಂಗ–ಕುಸುಮಾಲೆ ಕಾವ್ಯದಲ್ಲಿ.

ಬಿಳಿಗಿರಿ ರಂಗಯ್ಯ ಈಗಾಗಲೇ ಉಲ್ಲೇಖಿಸಿದಂತೆ ವೆಂಕಟೇಶ್ವರ ಎಂದು ಶಾಸ್ತ್ರೀಯವಾಗಿ ಗುರುತಿಸಲ್ಪಟ್ಟಿದ್ದಾನೆ. ಈ ದೇವಾಲಯದ ೧೩–೧೪ನೇ ಶತಮಾನದಷ್ಟು ಹಿಂದಿನ ಭಾಗಗಳನ್ನೂ ಹೊಂದಿದೆ. ಈ ದೇವತೆ ಸ್ಥಾನಿಕವಾಗಿ ಸೋಲಿಗರ ಹಾಗೂ ಮಾದಿಗ ಮುಂತಾದ ಸಮಾಜಗಳ ಕುಲದೈವ. ಈತ ಒಬ್ಬ ಬೇಟೆಯಾಡುವ ದೇವತೆಯಾಗಿದ್ದು ಸದಾ ಅರಣ್ಯದಲ್ಲಿ ಓಡಾಡುತ್ತಿರುತ್ತಾನೆ. ಹಾಗಾಗಿ ಈ ದೇವತೆಗೆ ಮಾದಿಗರು ಎರಡು ವರ್ಷಕ್ಕೊಮ್ಮೆ ದೊಡ್ಡ ಪಾದುಕೆಗಳನ್ನು ಮಾಡಿ ಸಲ್ಲಿಸುತ್ತಾರೆ. ಸೋಲಿಗರು ಕೂಡ ಈತನನ್ನು ಭಾವರಂಗಯ್ಯ ಎಂದು ಗುರುತಿಸುತ್ತಾರೆ. ಏಕೆಂದರೆ ಈತ ಸೋಲಿಗರ ದೇವಿಯಾದ ರಂಗಿಯ ಜೊತೆ ಸಂಬಂಧ ಹೊಂದಿದ್ದಾನೆ ಹಾಗೂ ಕುಸುಮಾಲೆ ಆತನ ಅತ್ಯಂತ ಮೆಚ್ಚಿನ ಪ್ರೇಯಸಿ. ಬಿಳಿಗಿರಿಯ ಜಾತ್ರೆಯ ಸಮಯದಲ್ಲಿ ಸೋಲಿಗರು ತಮ್ಮ ದೇವಿಯನ್ನು ತಂದು ಕಲ್ಯಾಣಿಯ ಬಳಿ ಗುಡಿಸಲು ಹಾಕಿ ಇಡುತ್ತಾರೆ. ರಂಗ ರಾತ್ರಿ ಅವಳಲ್ಲಿಗೆ ಬರುತ್ತಾನೆ ಎಂದು ಅವರು ನಂಬುತ್ತಾರೆ. ಸೋಲಿಗರ ಹಾಡು ನಿರೂಪಿಸುವಂತೆ ಆತ ತನ್ನ ಹೆಂಡತಿಯರು, ಆಳುಕಾಳು ಹಾಗೂ ಅರಮನೆಯಿಂದ ಹೊರಗೆ ಓಡಿ ಬರಲು ಸದಾ ಹೊಂಚುತ್ತಿರುತ್ತಾನೆ. ಆದರೆ ಆತನನ್ನು ಅಲ್ಲಿ ಬಲಾತ್ಕಾರವಾಗಿ ಬಂಧಿಸಲಾಗಿದೆ. ಇದಕ್ಕೆ ಸಂಬಂಧಿಸಿದ ಹಾಡುಗಳಲ್ಲಿ ವಿಭಿನ್ನ ವಿವರಗಳು ಬರುತ್ತವೆಯಾದರೂ ಅವುಗಳ ಸಾರಾಂಶವನ್ನು ಈ ಕೆಳಗಿನಂತೆ ನೀಡಬಹುದು.

ರಂಗಯ್ಯನನ್ನು ಆತನ ಹೆಂಡತಿಯರಾದ ಲಕ್ಕಮ್ಮ ಹಾಗೂ ತೊಳಚಮ್ಮ ಸರ್ವಕಾವಲು ಹಾಕಿ ಕಾಯುತ್ತಿರುತ್ತಾರೆ. ಬೇಹುಗಾರಿಕೆಗೆ ಹನುಮಪ್ಪನನ್ನು ನೇಮಿಸಿರುತ್ತಾರೆ. ರಂಗಯ್ಯನು ತನ್ನ ಹೆಂಡತಿಯರು ನಿದ್ದೆ ಮಾಡುತ್ತಿರುವಾಗ ಸದ್ದಿಲ್ಲದೇ ಓಡಿ ಹೋಗುತ್ತಾನೆ(ಒಂದು ಪಾಠದ ಪ್ರಕಾರ ತನ್ನಂಥದೇ ಮರದ ಪ್ರತಿಮೆಯೊಂದನ್ನು ಮಾಡಿ ಹೆಂಡತಿಯ ಮಧ್ಯೆ ಮಲಗಿಸಿ ಹೋಗುತ್ತಾನೆ). ಹನುಮಂತ ಇವನನ್ನು ನೋಡಿ ಬೆನ್ನಟ್ಟುತ್ತಾನೆ. ಆದರೆ ರಂಗ ಹನುಮಂತನನ್ನು ತೇರಿಗೆ ಕಟ್ಟಿಹಾಕಿ ಈ ಸೂಳೆ ರಂಗಿಯ ಗುಡಿಸಲಿಗೆ ಹೋಗುತ್ತಾನೆ. ಮಾರನೆಯ ದಿನ ಲಕ್ಕಮ್ಮ, ತೊಳಚಮ್ಮ ರಂಗನನ್ನು ಹುಡುಕಿಕೊಂಡು ಹನುಮಂತನ ಸಹಾಯದಿಂದ ರಂಗಿಯ ಗುಡಿಸಲಿಗೆ ಹೋಗಿ ಗುಡಿಸಲನ್ನು ಒದ್ದು ಕೆಡವಿ ರಂಗನನ್ನು ವಾಪಸ್ಸು ಕರೆತರುತ್ತಾನೆ(ಒಂದು ಪಾಠದ ಪ್ರಕಾರ ಸೂಳೆ ರಂಗಿ ೯೦೦೦ ಹಣ ಕೊಡದ ಹೊರತು ವಾಪಸ್ಸು ಹೋಗುವಂತಿಲ್ಲ ಎಂದು ಆತನನ್ನು ಮನೆಯಲ್ಲಿ ಇಟ್ಟಿರುತ್ತಾಳೆ.

ಲಕ್ಕಮ್ಮ–ತೊಳಚಮ್ಮ ಆ ಹಣವನ್ನು ಕಳುಹಿಸಿ ರಂಗಯ್ಯನನ್ನು ವಾಪಸ್ಸು ಕರೆಸಿಕೊಳ್ಳುತ್ತಾರೆ). ಮನೆಯಲ್ಲಿ ಹೆಂಡಿರಿಬ್ಬರೂ ರಂಗಯ್ಯನಿಗೆ ಅರ ಕಡ್ಡಿಯಲ್ಲಿ ಹೊಡೆದು, ಸ್ನಾನ ಮಾಡಿಸುತ್ತೇವೆಂದು ಆತನ ಮೈಮೇಲೆ ಬೊಕ್ಕೆ ಏಳುವ ಹಾಗೆ ಕುದಿ ನೀರನ್ನು ಸುರಿದು ಉಪವಾಸ ಕೆಡವಿ ಹಿಂಸಿಸುತ್ತಾರೆ. ಆಗ ರಂಗಯ್ಯ ಸತ್ತವನಂತೆ ನಟಿಸುತ್ತಾನೆ. ಹೆಂಡತಿಯರು ಆತನನ್ನು ಸ್ಮಶಾನಕ್ಕೆ ಒಯ್ದು ಸುಡಲು ತಯಾರಿ ನಡೆಸುತ್ತಾರೆ. ಉಪಾಯವಿಲ್ಲದೆ ರಂಗ ಅಲ್ಲಿಂದ ಎದ್ದು ಮನೆಗೆ ಓಡಿ ಬರುತ್ತಾನೆ. ಮತ್ತೆ ಆ ರಾತ್ರಿ ಆತನಿಗೆ ಕುಸುಮಾಲೆಯ ನೆನಪು ಕಾಡುತ್ತದೆ. ಆ ರಾತ್ರಿ ಮನೆಯಿಂದ ಜಾರಿಕೊಳ್ಳುತ್ತಾನೆ. ಅಡವಿಗೆ ಬಂದು ಕುಸುಮಾಲೆಯನ್ನು ಒಲಿಸಿಕೊಂಡು ಆಕೆಯ ಮನೆಯಲ್ಲಿ ತನ್ನ ಹೆಂಡತಿಯರು, ಹನುಮಂತ ಹಾಗೂ ತನ್ನ ಮೇಲುಗಿರಿಯ ಗ್ಯಾನವನ್ನು ಮರೆತು ಮಲಗಿರುತ್ತಾನೆ.

ಈ ಹಾಡುಗಳಲ್ಲಿ ರಂಗಯ್ಯನ ಮನಸ್ಸು ಸೋಲಿಗರ ಪ್ರೇಯಸಿಯ ಕಡೆಗೆ ಸೆಳೆಯುತ್ತಿದ್ದರೂ, ಅದಕ್ಕೆ ತಡೆಯಾಗಿ ಆತನ ಹೆಂಡತಿ ಹಾಗೂ ಅರಮನೆಯ ವ್ಯವಸ್ಥೆ ನಿಂತಿದೆ. ಅಲ್ಲಿಂದ ತಪ್ಪಿಸಿಕೊಂಡು ಬರುವುದಕ್ಕೆ ಅವನು ಮಾಡುವ ಉಪಾಯ ಎಂದರೆ, ತನ್ನ ಪ್ರತಿಮೆಯೊಂದನ್ನು ತಯಾರಿಸಿ ಹೆಂಡತಿಯರನ್ನು ವಂಚಿಸುವುದು, ರಂಗಯ್ಯ ಮೂಲತಃ ದಾಸಯ್ಯನಂತೆ ಜಂಗಮನಾದ ದೇವತೆಯಾಗಿದ್ದು, ಮನೆಯೊಳಗೆ ಬಂಧಿಯಾದಾಗ ಸೂಳೆ ರಂಗಿಯ ಮನೆಗೆ ಹೋಗದಿದ್ದರೆ ದಾಸನಾದುದಕ್ಕೆ ಫಲವೇನು ಎಂದು ಚಿಂತಿಸುತ್ತಾನೆ. ತಾನು ಮನೆಯೊಳಗಿಲ್ಲ ಎಂಬ ಸಂಗತಿಯನ್ನು ಮುಚ್ಚಿಡಲು ಆತನಿಗೆ ಪ್ರತಿಮೆ ಒಂದು ಉಪಾಯವಾಗಿ ಬರುತ್ತದೆ. ಅಂದರೆ ಈ ಹಾಡುಗಳು ರಂಗನ ಮೂರ್ತಿಯನ್ನು ಸುಳ್ಳುಬೊಂಬೆ ಅಥವಾ ಮಾಯದ ರೂಪ ಎಂದು ಸೂಚಿಸುತ್ತವೆ ಹಾಗೂ ನಿಜವಾದ ರಂಗ ತಮ್ಮ ಜೊತೆಗೆ ಇದ್ದಾನೆ ಎಂದು ಪ್ರತಿಪಾದಿಸುತ್ತವೆ. ಈ ಹಾಡಿನಲ್ಲಿ ಆತನು ಬೊಂಬೆಯ ಉಲ್ಲೇಖ ಬರುವಾಗ ಮಲಗಿದ ಭಂಗಿಯ ಹಾಗೂ ಜೊತೆಗೆ ಲಕ್ಕಮ್ಮ ಹಾಗೂ ತೊಳಚಮ್ಮ ನೋಡಿದಂತೆ ರಂಗನಾಥ–ತಿಮ್ಮಪ್ಪನ ಮುಖ್ಯವಾದ ಎರಡು ರೂಪಗಳಲ್ಲಿ ಒಂದು ಶಯನ ಮೂರ್ತಿಯಾಗಿದ್ದು, ಜೊತೆ ಆತನ ಹೆಂಡತಿಯನ್ನು ತೋರಿಸುತ್ತಾರೆ. ಇಲ್ಲಿ ಅವಳೂ ಅದರ ಒಂದು ಭಾಗವಾಗಿದ್ದಾಳೆ. ಈ ಹಾಡು ಅಂಥದ್ದೇನಾದರೂ ಮೂರ್ತಿ ವಿವರಗಳನ್ನು ಸೂಚಿಸಬಹುದೇ? ಒಟ್ಟಿನಲ್ಲಿ ಈ ಹಾಡು ಕೇವಲ ಒಂದು ವಿಧಿ ಆಚರಣೆ ಆಗಿರದೆ, ಸಾಂಸ್ಕೃತಿಕ ಟೀಕೆಯ ಧ್ವನಿಗಳನ್ನು ಹೊತ್ತಿದೆ ಎಂಬುದು ಸ್ಪಷ್ಟವಾಗಿದೆ."[೯]

ಈ ರೀತಿಯ ಶ್ರೀ ವೈಷ್ಣವ ಪ್ರಭಾವ ಮತ್ತು ತಿರುಪತಿ ಹಾಗೂ ಇತರೆ ವೈಷ್ಣವ ದೇವರುಗಳ ಭಕ್ತರಾದ ವಿವರಣೆಗಳನ್ನು ಹಾಗೂ ಅದರಲ್ಲಿ ರಾಮಾನುಜಾಚಾರ್ಯರ

PDF created with pdfFactory Pro trial version www.pdffactory.com

ಪಾತ್ರವನ್ನು ಈಗಾಗಲೇ ವಿವರಿಸಿರುವುದರಿಂದ ಇಲ್ಲಿಗೆ ಸೋಲಿಗರ ದೇವರ ವಿಚಾರವನ್ನು ತಾತ್ಕಾಲಿಕವಾಗಿ ನಿಲ್ಲಿಸಬಹುದೆಂದು ಕಾಣುತ್ತದೆ.

೨.೬. ಮರದ ಮೇಲಿನ ದೇವರು

ಬೆಂಗಳೂರು ನಗರದಿಂದ ಕೇವಲ ನಲವತ್ತು ಕಿ.ಮೀ. ದೂರದಲ್ಲಿರುವ ಸಾವನದುರ್ಗ ಎಂಬ ಬೆಟ್ಟ ಪ್ರದೇಶ ಬುಡಕಟ್ಟುಗಳ ಒಂದು ಮೂಲ ತಾಣ. ಸಾವನದುರ್ಗ, ಉತ್ತರಿದುರ್ಗ, ಹುಲಿಯೂರುದುರ್ಗ, ಕೃಷ್ಣಗಿರಿ, ರಾಮಗಿರಿ–ಮುಂತಾಗಿ ಏಳು ದುರ್ಗಗಳಲ್ಲಿ ಪಾಳೇಗಾರ ದೊರೆ ಕೆಂಪೇಗೌಡ ಆಳುತ್ತಿದ್ದನೆಂಬ ಇತಿಹಾಸವಿದೆ. ಮೈಸೂರು ಕಡೆಯಿಂದ ಬೆಂಗಳೂರಿಗೆ ಬರುವ ಹೆದ್ದಾರಿಯಲ್ಲಿ ರಾಮನಗರ ಸಿಗುತ್ತದೆ. ರಾಮನಗರದ ಆಸುಪಾಸುಗಳಲ್ಲಿ ಭೂಮಿಯಿಂದ ಬೃಹದಾಕಾರವಾಗಿ ಎದ್ದು ನಿಂತ ವಿವಿಧಾಕೃತಿಯ ಬಂಡೆ ಬೆಟ್ಟಗಳಿವೆ. ಚಿತ್ರವಿಚಿತ್ರ ಆಕಾರದ ಈ ಬಂಡೆಗಳ ನಡುವೆ ಅಲ್ಲಲ್ಲಿ ಕೃಷಿ ಭೂಮಿಯೂ ಹಿಂದೆ ಮಹಾ ಅರಣ್ಯಗಳಿದ್ದ ಚಹರೆಗಳೂ ಕಾಣಸಿಗುತ್ತವೆ. ಸಾವನದುರ್ಗದ ಆಸುಪಾಸಿನಲ್ಲಿ ಈಗಲೂ ಒಂದಿಷ್ಟು ಒಳ್ಳೆಯ ಅರಣ್ಯವಿದೆ. ಸಾವನದುರ್ಗದಿಂದ ಮಾಗಡಿಯವರೆಗೆ ಇರುವ ಹಳ್ಳ–ಕೊಳ್ಳ, ಬೆಟ್ಟ–ದಿನ್ನೆ ಮುಂತಾದ ವೈವಿಧ್ಯಗಳ ನಡುವೆ ಇರುವ ಕುರುಚಲು ಕಾಡಿನಲ್ಲಿ ಅಥವಾ ಹೆಬ್ಬಂಡೆಗಳ ಪದತಲದಲ್ಲಿ "ಇಲ್ಲುಗ ಪೂಜಾರಿಗಳು" ಎಂಬ ವಿಶಿಷ್ಟ ಜನ ಸಮುದಾಯವಿದೆ. ಸದ್ಯಕ್ಕೆ ರಾಮನಗರ, ಮಾಗಡಿ, ಕುಣಿಗಲ್ ತಾಲೂಕಿನ ಇಂಥ ವಿಶಿಷ್ಟ ಬಂಡೆ ಬೆಟ್ಟಗಳ ನಡುವೆ ಇವರು ಕಾಣಸಿಗುತ್ತಾರೆ. ಈ ಸೀಮಿತ ಪ್ರದೇಶದಲ್ಲಿರುವ ಇವರ ಸಂಖ್ಯೆ ಸುಮಾರು ನಾಲ್ಕು ಸಾವಿರವಿರಬಹುದು ಅಷ್ಟೆ. ಇವರ ಬಗ್ಗೆ ಅಧ್ಯಯನ ಮಾಡಿರುವ ಸಿದ್ಧಗಂಗಯ್ಯ ಕಂಬಾಳು(ನಿಸರ್ಗಪ್ರಿಯ) ಅವರು ಹೇಳುವ ಮಾತುಗಳನ್ನು ಇಲ್ಲಿ ನೀಡುವುದು ಸೂಕ್ತ ಎಂದುಕೊಂಡಿದ್ದೇನೆ. ೧೯೮೧ರಲ್ಲಿ ಕ್ಷೇತ್ರಕಾರ್ಯ ನಡೆಸಿದಾಗ ರಾಮನಗರ ತಾಲ್ಲೂಕು ಬಸವಲಿಂಗನ ದೊಡ್ಡಿ ಹುಚ್ಚಯ್ಯ(ವಯಸ್ಸು ೮೫ ಇರಬಹುದು)ನ ಹೇಳಿಕೆಯಿಂದ ಪಡೆದ ಮಾಹಿತಿ–

"ಸೋಮಿ ನಾವ್ ಅಪ್ಪನ ಕಾಲ್ದಾಗಿನಿಂದ ಕಾಡಜನ. ಕಾಡಪೂಜಾರಿಗಳೂಂತ ಆದಿಸಿಂದ ಹೇಳ್ತಾರೆ. ನಾವ್ ವಟ್ಟೆ ಪಾಡಿಗೆ ಇಲಿಯಿಡುಕೊಂಡು ತಿಂತೀವಲ್ಲ ಅದ್ಕೆ 'ಇಲಿಗ್ರು' 'ಇಲಿಗ್ರೂ' ಅಂತ ಜನ ಕೂಗತದ. ಇಲಿಗ್ರು ಅಂದರೆ ನಮ್ಮನ್ನ ಬೈದಂಗೆ ಅಂತ ತಿಳ್ಕುಳಿ. ಬಡ ಜನ ಏನಂದ್ರು ಸುಮ್ಕಿರತೀವಿ. ನಾ ಚಿಕ್ಕೋನಾಗಿದ್ದಾಗ ಯಾರ್ಸಾಮಿ ನಮ್ಮ ಗವೀ ಅತ್ರ ಬತ್ತಿದ್ದೋರು. ಅಪ್ಪನ ಕಾಲ್ದಾಗೆ ಬಟ್ಟೆ ಇಕ್ಕಿದ ಜನ ಕಂಡರೆ ದಿಗಿಲು ಬಿದ್ದು ಓಡಿ ಕಾಡಿನಾಗೆ ಮಕ್ಕೋಳತಿದ್ದು. ನನ ಕಣ ಮುಂದೇನೇ ಕಾಡು ಬಟಾ ಬಯಲಾಗಿ ಹೋಯ್ತು. ಕಾಡವಾಗೆ ಜೇನು, ಕಡ್ಡಿಜೇನು, ಹೆಜ್ಜೇನು ಯಾವ್ದೂ ಸಿಗದಂಗಾಯ್ತು. ಬೆಂಕಿ ಬಿದ್ದು ಕಾಡಗೆಣಸ್ತು ನಾಶವಾಯ್ತು. ಇನ್ನೇನು ತಿನ್ನಾನ ಇಲಿ ಹಿಡಕೊಂಡೇ ತಿಂದೋ ಅದ್ಕೆ ಇಲಿಗ್ರು ಅಂತ ಕರೀತಾರೆ."

ಇಲ್ಲುಗರು ಕೆಂದು ಬಣ್ಣದ ನಸು ಗುಂಗುರು ಕೂದಲಿನ ಮೊಂಡೆನಿಸುವ ಮೂಗಿನ ವರಟು ಜನಾಂಗ. ರಾಮನಗರದ ಬಳಿಯಿರುವ ಮೆಟ್ಟಾರೆ ಕಾಡಿನಲ್ಲಿ ವಾಸಿಸುವ ಈ ಜನರಲ್ಲಿ ಇವರ ಮೂಲ ಬಣ್ಣ ಆಕಾರಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಉಳಿದೆಡೆಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಗಳನ್ನು ಕಾಣಬಹುದು. ಒಟ್ಟಾರೆ ಇಲ್ಲಿಗರ ರೂಪಲಕ್ಷಣ ಒಂದೇ ಒಂದೇತೆರನಾಗಿರುತ್ತದೆ.

ಮಾಗಡಿ, ರಾಮನಗರ, ಸುತ್ತಲ ಬೆಟ್ಟ ಗುಡ್ಡಗಳಲ್ಲಿ ೧೨ನೇ ಶತಮಾನದಲ್ಲಿ ಶ್ರೀ ರಾಮಾನುಜಾಚಾರ್ಯರು ಹಲವು ಕಾಲ ನೆಲೆಯಾಗಿದ್ದರೆಂದು ತಿಳಿದುಬರುತ್ತದೆ. ಶೈವದೊರೆ ಕಾಂಚೀಪುರದ ರಾಜ ರಾಮಾನುಜಾಚಾರ್ಯರ ತಲೆ ಕತ್ತರಿಸಿ ತಂದವರಿಗೆ ಸುವರ್ಣ ನಾಣ್ಯಗಳನ್ನು ಬಹುಮಾನವಾಗಿ ಸಾರಿದ್ದ. ಆಚಾರ್ಯರ ತಲೆಯನ್ನು ಉಳಿಸಿಕೊಳ್ಳಲು ಅವರ ಭಕ್ತರು ರಾಮಾನುಜಾಚಾರ್ಯರಂತೆ ವೇಷ ಧರಿಸಿ ಅವರನ್ನು ಗೌಪ್ಯ ಮಾಡಿ ರಾಜನ ದಂಡನೆಗೆ ತಲೆತೆತ್ತರು. ಆ ಸಂದರ್ಭದಲ್ಲಿ ತಲೆಮರೆಸಿಕೊಳ್ಳಲು ರಾಮನಗರ, ಮಾಗಡಿ ಪ್ರಾಂತ್ಯದ ಬೆಟ್ಟಗುಡ್ಡಗಳಲ್ಲಿ ಆಚಾರ್ಯರು ವಾಸಿಸುತ್ತಿದ್ದರು ಅಥವಾ ಅವರ ಶಿಷ್ಯರಿದ್ದರು. ಇವರು ಕಾಡಿನಂಚಿನಲ್ಲಿದ್ದ ಒಕ್ಕಲಿಗರ ಮೇಲೆ ವೈಷ್ಣವಮತದ ಧಾರ್ಮಿಕ ಆಚರಣೆಗಳನ್ನು ತೆಳುವಾಗಿ ಹೊದಿಸಿದರೆಂದು ಕಾಣುತ್ತದೆ. ಒಕ್ಕಲಿಗರ ಮೂಲಕವಾಗಿಯೋ, ನೇರವಾಗಿಯೋ, ಇಲ್ಲಿಗರ ಮೇಲೆ ವೈಷ್ಣವ ದೈವದ ಪ್ರಭಾವ ಬೀರಿದ್ದು ವಿಷ್ಣು ಆರಾಧನೆಗೆ ತೊಡಗಿರಬೇಕು. ನಂತರ ಉತ್ತರ ದೇಶದಿಂದ ಕೊಳ್ಳೇಗಾಲದ ಕಡೆಗೆ ಬಂದ ಮಾದೇಶ್ವರರೆಂಬ ಶೈವ ಸಂಪ್ರದಾಯದ ಜಂಗಮರು, ಇಲ್ಲಿಗರ ಮೇಲೆ ಶಿವಾಚಾರದ ಪ್ರಭಾವ ಬೀರಿದರು. ಹೀಗಾಗಿ ಕೆಲವು ಇಲ್ಲಿಗರು ವಿಷ್ಣು ಸಂಪ್ರದಾಯವನ್ನು ಅನುಸರಿಸಿ ಹಣೆಗೆ ನಾಮವನ್ನು, ಉಳಿದವರು ಹಣೆಗೆ ವಿಭೂತಿ ಧರಿಸಿ ಶೈವಸಂಪ್ರದಾಯವನ್ನು ಅನುಸರಿಸುತ್ತಿದ್ದಾರೆ. ವಿಷ್ಣು ಸಂಪ್ರದಾಯದ ನಾಮ ಧರಿಸುವವರಿಗೆ, ಒಕ್ಕಲಿಗರ ಗೋಮಿನ ದೇಶಾಭಾಗದ ದಾಸಯ್ಯಗಳು ಗುರುಗಳಾದರೆ, ಶೈವ ಸಂಪ್ರದಾಯದ ವಿಭೂತಿದಾರಿಗಳಿಗೆ 'ಅಯ್ಯನವರು' ಗುರುಗಳಾಗಿರುತ್ತಾರೆ. ಇಲ್ಲಿಗರಿಗೆ ಹರನಾಗಲಿ, ಹರಿಯಾಗಲಿ, ಯಾರು ಏನು ಎಂಬ ವ್ಯತ್ಯಾಸ ತಿಳಿದಿಲ್ಲ. ವಿಷ್ಣು ಸಂಪ್ರದಾಯದವರು, ಎಳೆಯಮ್ಮ, ಬರೆಯಮ್ಮ ಮತ್ತು ಮಾದೇಶ್ವರನ ಒಕ್ಕಲು. ನಾಮ ಧರಿಸುವವರನ್ನು ಮುಳ್ಳು ಕುಲದವರೆಂತಲೂ ವಿಭೂತಿದಾರಿಗಳನ್ನು ಛತ್ರಿಕುಲದವರು, ಬೆಳ್ಳಿಕುಳಿಯಾದ ಬೆಳ್ಳಿ ಕುಲದವರೆಂತಲೂ ಕರೆಯುತ್ತಾರೆ.

ಲಕ್ಷ್ಮೀಪುರದ ಬಳಿ ಇರುವ ಇಲ್ಲಿಗರ ಪ್ರೇತವನವನ್ನು ನೋಡಿಬರಲೆಂದು ಹೋಗಿದ್ದಾಗ ಸಂದರ್ಶಕನಿಗೆ ಆಶ್ಚರ್ಯಕರವಾದ ಮಾಹಿತಿಯೊಂದು ದೊರೆಯಿತು. ತೊಂಬತ್ತು ವರ್ಷದ ಮುದುಕಿಯೊಬ್ಬಳು ಹದಿವಯಸ್ಸಿನ ಹುಡುಗಿಯ ಜೊತೆ

PDF created with pdfFactory Pro trial version www.pdffactory.com

ಮುರುಕು ಜೋಪಡಿಯಲ್ಲಿ ವಾಸಿಸುತ್ತಿದ್ದಾಳೆ. ಈ ಜೋಪಡಿ ಇಲ್ಲಿಗರ ಪ್ರೇತವನಕ್ಕೆ ಹೊಂದಿಕೊಂಡಿದೆ. ಒಂಟಿ ಗುಡಿಸಲ ಬಗ್ಗೆ ವಿಚಾರಿಸಿದಾಗ ಆ ಮುದುಕಿ ಮಠಕಯ್ಯನ ದೊಡ್ಡಿಯವಳೆಂದು, ಸಾಯುವ ಸ್ಥಿತಿಯಲ್ಲಿರುವಳೆಂದು, ಮಠಕಯ್ಯನದೊಡ್ಡಿ ಈ ಪ್ರೇತವನಕ್ಕೆ ಮೂರು ಮೈಲಿಗಳಾಗಿತ್ತವೆಂದೂ ಸತ್ತ ನಂತರ ಈ ಮುದುಕಿಯ ಅಂತಿಮ ಆಸೆಯಂತೆ ಆಕೆಯ ತಾಯಿಯನ್ನು ಕಲ್ಲು ಸೇವೆ ಮಾಡಿದ ಕಲ್ಲು ಗೂಡಿನಲ್ಲೇ ಇರಿಸಿ ಸಂಸ್ಕಾರ ಮಾಡಬೇಕೆಂದು, ಸತ್ತ ನಂತರ ಶವವನ್ನು ಮೂರು ಮೈಲಿ ದೂರ ಹೊರಬೇಕಾಗಿ ಬಂದಾಗ ಉದಾಸೀನದಿಂದ ಮಕ್ಕಳು ಮುದುಕಿಗೆ ಇಷ್ಟವಿಲ್ಲದ ಬೇರೆ ಸ್ಥಳದಲ್ಲಿ ಸಂಸ್ಕಾರ ಮಾಡಿ ಬಿಡುತ್ತಾರೆಂಬ ಅಪನಂಬಿಕೆ ಸಾವಿನ ಹೊಸ್ತಿಲಲ್ಲಿರುವ ಮುದುಕಿಗೆ ಸುಳಿದು, ಸಾಯುವ ಮನ್ನವೇ, ಪ್ರೇತವನದ ಹತ್ತಿರ ಬಂದು, ಜೋಪಡಿಯೊಂದರಲ್ಲಿ ಸೂರ್ಯಾಸ್ತಮಾನಗಳನ್ನು ಎಣಿಸುತ್ತಾ ಸಾವನ್ನು ಎದುರು ನೋಡುತ್ತಿರುವಳೆಂದು ತಿಳಿದುಬಂತು.

ಸತ್ತ ಮೇಲೆ ದೇವರಾಗುತ್ತಾರೆಂದು ನಂಬಿಕೆ ಹೊಂದುವ ಈ ಜನರು ವರ್ಷಕ್ಕೊಮ್ಮೆ ಯುಗಾದಿ ಹಬ್ಬದಲ್ಲಿ ಹಿರೀಕರಿಗೆ ಎಡೆಯಾಕಲು ಪ್ರೇತವನಕ್ಕೆ ಬರಬೇಕು. ಹಿರೀಕರ ಆರಾಧನೆಯನ್ನು ಇವರು ಬಿಡಲಾರರು. ಇದೀಗ ಇವರು ಆರಾಧಿಸುವ ಕೆಲವು ಶಕ್ತಿದೇವತೆಗಳು ಎಂದೋ ಒಂದು ಕಾಲದಲ್ಲಿ ಈ ಜನಾಂಗದ ಕುಲಸಂಜಾತರೇ ಆಗಿರುತ್ತಾರೆ. ಕೆಲವರು ಆಲೇ ಮರದ ಬುಡದಲ್ಲಿ ಆಕಾರವಿಲ್ಲದ ಗುಂಡುಗಳನ್ನೇ ಸಾಲಾಗಿರಿಸಿ ಹಿರೀಕರು ಎಂದು ಆರಾಧಿಸುತ್ತಿದ್ದಾರೆ.

ಇಲ್ಲಿಗರು ಆರಾಧನೆಯಲ್ಲಿ ತಮ್ಮ ಬದುಕಿನ ಅತಿ ಹೆಚ್ಚು ಭಾಗವನ್ನು ಮೀಸಲಿಡಬಯಸುವ ಮೂಲನಿವಾಸಿಗಳು. ನಯವಿಲ್ಲದ ಒರಟೊರಟು ಭಾವದಿಂದ ಇವರು ಆಚರಿಸುವ ಆರಾಧನೆ ಪೂಜೆಗಳಿಂದಾಗಿಯೇ ಈ ಜನಾಂಗವನ್ನು ಇಲ್ಲಿಗರೆಂದು ಕರೆದಿರಬಹುದು. ಕಾಡು ಎಂಬ ಪದಕ್ಕೆ ಅರಣ್ಯ, ಒರಟು, ಕ್ರೂರ, ಎಂಬ ಅರ್ಥಗಳೂ ಇವೆ ಈ ಎಲ್ಲಾ ಅರ್ಥಗಳಿಗೂ ಇವರು ಅನ್ವಯಿಸುತ್ತಾರೆ."[೧೦]

ಇಲ್ಲಿಗರ ದೈವಾರಾಧನೆಯ ಪ್ರಥಮ ಹಂತ ಅವರ ಹಿರೀಕರ ಪೂಜೆಯೇ ಆಗಿದೆ. ತೀರಿಕೊಂಡ ಹಿರಿಯರ ಹೆಸರಿನಲ್ಲಿ ಒಂದೊಂದು ಕಲ್ಲನ್ನು ಇಟ್ಟು ಒಂದೊಕ್ಕೊಂದು ಒಂದೊಂದು ಹೆಸರನ್ನಿಟ್ಟು ಪೂಜಿಸುತ್ತಾರೆ. ಅದರಲ್ಲಿಯೂ ಈ ಕಲ್ಲುಗಳನ್ನು ಹಾಲು ಮತ್ತು ಅಂಟಿನ ಅಂಶವಿರುವ ಆಲೇಮರದ ಕೆಳಗಡೆ ಇಡುವುದನ್ನು ನೋಡಿದಾಗ ಈ ಹಿರಿಯರ ಪೂಜೆಯನ್ನು ಸಮೃದ್ಧಿಯ ಫಲಾಪೇಕ್ಷೆಯಿಂದಲೇ ಮಾಡುತ್ತಾರೆಂದು ಊಹಿಸಬಹುದಾಗಿದೆ. ಅಲ್ಲದೆ ಸಾಮಾನ್ಯವಾಗಿ ಹಿರಿಯರ ಪೂಜೆಯನ್ನು ಮಹಾನವಮಿ ಅಥವಾ ಅದರ ಹಿಂದು–ಮುಂದಿನ ದಿನಗಳಲ್ಲಿ ಮಾಡುವುದು ಇತರೆ ಜನಾಂಗಗಳಲ್ಲಿ ವಾಡಿಕೆ. ಅವರ ಅಕ್ಕಪಕ್ಕದಲ್ಲೇ ಇರುವ

ಬಹುಸಂಖ್ಯಾತ ಒಕ್ಕಲಿಗರೂ ಕೂಡ ಮಹಾನವಮಿಯಲ್ಲೇ ಪಿತೃಪೂಜೆ ಮಾಡುತ್ತಾರೆ. ಆದರೆ ಇಲ್ಲಿಗರು ಈ ಪೂಜೆಯನ್ನು ಯುಗಾದಿಯಲ್ಲಿ ಮಾಡುವುದನ್ನು ನೋಡಿದರೆ ವಸಂತ ಮಾಸದ ಹೊಸ ಚಿಗುರುಗಳಂತೆ ತಮ್ಮ ಹಿರಿಯರ ಆರ್ಶೀವಾದದಿಂದ ಹೊಸ ಜೀವನಕ್ಕೆ ಅಡಿಯಿಡುವ ಆಶಯವನ್ನು ಇಲ್ಲಿ ಕಟ್ಟಿಕೊಂಡಿರಬೇಕು ಎನಿಸುತ್ತದೆ.

ಇವರ ದೈವಗಳ ಎರಡನೇ ಹಂತ ಮಾತೃದೇವತಾಪೂಜೆ. ಎಳೆಯಮ್ಮ, ಬರೆಯಮ್ಮ, ಕಾಳಮ್ಮ, ಮದ್ದೂರಮ್ಮ, ಮುಂತಾದವು ಇವರ ಮಾತೃದೇವತೆಯರು. ಗೌರಿಪೂಜೆಯನ್ನೂ ಮಾಡುವ ಸಂಪ್ರದಾಯವಿದೆ. ಗೌರಿಹಬ್ಬದಲ್ಲಿ ಮಾಡುವ ಹುತ್ತದ ಪೂಜೆ ಮತ್ತು ಹುತ್ತಕ್ಕೆ ಹಾಲೆರೆಯುವ ಸಂಪ್ರದಾಯವನ್ನು ನೋಡಿದರೆ, ಒಂದು ಕಾಲಕ್ಕೆ ಇವರು ನಾಗಾರಾಧಕರೂ ಇರಬಹುದು ಎಂದೆನಿಸುತ್ತದೆ. ಇಲ್ಲಿ ನಾಗ ಮತ್ತು ಹುತ್ತವನ್ನು ಬೇರ್ಪಡಿಸುವ ಸಂದರ್ಭವೇ ಇಲ್ಲ. ಈ ಹುತ್ತವೇ ಮಾತೃವಿನ ಜನನ ಸ್ಥಾನ ಎಂಬ ನಂಬಿಕೆ ಸರ್ವೇ ಸಾಮಾನ್ಯ. ಹೀಗಾಗಿ ಗೌರಿಹಬ್ಬದಲ್ಲಿ ಇವರು ನಡೆಸುವ ಹುತ್ತದ ಪೂಜೆಗೆ ಹೆಚ್ಚಿನ ಅರ್ಥವಿದೆ.

ಇವರ ದೈವಾರಾಧನೆಯ ಮೂರನೆಯ ಹಂತ ವೆಂಕಟರಮಣ ಮತ್ತು ಮಾದೇಶ್ವರ. ಮಾಗಡಿಯ ರಂಗನಾಥನೂ ಇವರ ದೈವವೇ. ನಾವು ಈಗಾಗಲೇ ಚರ್ಚಿಸಿದಂತೆ ವೈಷ್ಣವ ಶೈವ ಪ್ರಭಾವದ ಈ ಅಂಶಗಳು ತೀರಾ ಪ್ರಾಚೀನವಲ್ಲ ಎಂಬುದು ನೆನಪಿಡಬೇಕು. ಇಲ್ಲಿಗರ ಬಹುಮುಖ್ಯವಾದ ಆರಾಧನೆಯ ವಿಶಿಷ್ಟತೆ ಎಂದರೆ ಅವರು ತಮ್ಮ ಪೂಜಾಸಾಮಗ್ರಿಗಳನ್ನು ನೆಲದ ಮೇಲೆ ಇಡದಿರುವುದು. ಒಂದು ರೀತಿಯಲ್ಲಿ ಒಂದು ದೈವದ ಅವತಾರವೆಂದೇ ನಂಬಿದ 'ಆಲೆಯ ಮರದ' ಇವರ ಪೂಜಾಸಾಮಗ್ರಿಗಳು ಸದಾ ಇರುತ್ತವೆ. ಅವರ ಪೂಜಾರಿ ಅರ್ಥಾತ್ ಕಣಿ ಹೇಳುವ ನಿರ್ದಿಷ್ಟ ವ್ಯಕ್ತಿ ಆ ದೇವರುಗಳನ್ನು ಹೊರತೆಗೆದು ಪೂಜಿಸುತ್ತಾನೆ. ಅವರ ಹಿರಿಯರನ್ನು ಕುರಿತ ಶ್ರದ್ಧೆ ಮತ್ತು ಭಕ್ತಿಗೆ ಮತ್ತೊಂದು ಉದಾಹರಣೆ ಎಂದರೆ ಪ್ರಾಯದ ಹುಡುಗರ ಮೇಲೆ ದೈವ ಮೈತುಂಬುವ ಸಂಪ್ರದಾಯ. ಹಿರೀಕ ದೈವಗಳ ಮುಂದೆ ಹತ್ತು ಜನ ಪ್ರಾಯದ ಹುಡುಗರು ಒಬ್ಬರ ಮೇಲೆ ಒಬ್ಬರು ಹೆಗಲ ಮೇಲೆ ಕೈ ಹಾಕಿಕೊಂಡು ಸಾಲತೆಕ್ಕೆಯಲ್ಲಿ ನಿಂತಿರುತ್ತಾರೆ. ಪೂಜೆ ನಡೆಯುವಾಗ ಅಲಲೋ, ಕಲಲೋ ಎಂದು ಉನ್ಮಾದದಿಂದ ಕಾಕುಹಾಕುತ್ತಾ ಎಡಕ್ಕೂ, ಬಲಕ್ಕೂ, ತೊನೆಯುತ್ತಾ, ತೂಗುತ್ತಾ ವಾಲಾಡುತ್ತಿರುತ್ತಾರೆ. ಬಲಿಮೇಕೆಯ ಕುತ್ತಿಗೆ ಕತ್ತರಿಸುವಾಗ ತೆಕ್ಕೆಯೊಳಗಿರುವ ಪ್ರಾಯದ ಹುಡುಗರ ಕಾಕು, ಚೀತ್ಕಾರ ತಾರಕಕ್ಕೇರುತ್ತದೆ. ಹಿರೀಕರಿಗೆ ಬಲಿ ಹಾಕಿದ ಮೇಕೆ ರುಂಡ ಮುಂಡಗಳಿಂದ ದೊದದೊದನೆ ಸುರಿಯುವ ರಕ್ತವನ್ನು ಇಬ್ಬರು ಹರಿವಾಣವೊಂದಕ್ಕೆ ಶೇಖರವಾಗುವಂತೆ ನೋಡಿಕೊಂಡು ಹರಿವಾಣ ಹಿಡಿದು ನಿಲ್ಲುತ್ತಾರೆ. ಹತ್ತು ಜನ ಪ್ರಾಯದ ಹುಡುಗರಲ್ಲಿ ಕನಿಷ್ಠ ಮೂರು ಜನರಿಗೆ ಹಿರೀಕರು

PDF created with pdfFactory Pro trial version www.pdffactory.com

ಮೈತುಂಬಿ ಬರುತ್ತಾರೆ. ಹಿರೀಕ ದೈವಗಳ ಆವಾಹನೆಗೀಡಾದ ಹರೆಯದ ಈ ಹುಡುಗರು ಒಂದೇ ನೆಗೆತಕ್ಕೆ ಹಾರಿ ರಕ್ತದ ಹರಿವಾಣಕ್ಕೆ ಬಾಯಿ ಹಾಕಿ ರಕ್ತ ಹೀರುತ್ತಾರೆ ಅಥವಾ ನಾಲಗೆ ಚಾಚಿ ನೆಕ್ಕುತ್ತಾರೆ. ಇಂಥದೊಂದು ವಿಶೇಷ ಸಂದರ್ಭದಲ್ಲಿ ಮಾತ್ರ ಹಿರೀಕರು ಪ್ರಾಯದ ಹುಡುಗರ ಮೈಮೇಲೆ ಬರುತ್ತಾರೆ. ಉಳಿದಂತೆ ಕಣಿ ಹೇಳುವಾತನ ಮೇಲೆ ಆವಾಹನೆಗೊಳ್ಳುತ್ತಾರೆ.

ಇಲ್ಲಿಗರು ಕರಗದಮ್ಮಾ ಎಂದು ಕರೆಯಲಾಗುವ ಶಕ್ತಿದೇವತೆಯೊಂದನ್ನು ಆರಾಧಿಸುವ ಪರಿಪಾಟವಿದೆ ಎಂದು ಸಿದ್ಧಗಂಗಯ್ಯ ಕಂಬಾಳು ಗುರುತಿಸುತ್ತಾರೆ. ಈಕೆಯನ್ನು ರತ್ನಗಿರಿಯಮ್ಮ ಎಂದು ಕರೆಯಲಾಗುತ್ತದಂತೆ. ಕುಂಬವನ್ನು ಅಲಂಕರಿಸಿ, ಅದರಲ್ಲಿ ಈ ರತ್ನಗಿರಿಯಮ್ಮನ ಕಣ್ಣು ಮತ್ತು ಬಾಯಿಯನ್ನು ಅಂಟಿಸಲಾಗುತ್ತದೆ. ಆಗ ಕುಂಭವೇ ಒಂದು ದೇವತೆಯ ರೂಪ ಪಡೆಯುತ್ತದೆ. ಈ ದೇವತೆಯನ್ನು ಪೂಜಾರಿ ಕಣಿ ಹೇಳುವ ಸಂದರ್ಭದಲ್ಲಿ ಪೂಜಿಸಲಾಗುತ್ತದೆ. ಕಣಿ ಹೇಳುವವ ಆಕೆಯ ಮಹಿಮೆಯನ್ನು ವಿವರಿಸಿ ಹೇಳುತ್ತಾನೆ. ಇದೇ ರೀತಿ ಇವರು ಮಾದಮ್ಮ ಮತ್ತು ಏಳು ಮಕದಮ್ಮ ಎಂಬ ದೇವರನ್ನು ಆರಾಧಿಸುತ್ತಾರೆ. ಮಲೆಮಾದೇಶ್ವರನ ಆರಾಧನಾ ಸಂದರ್ಭದಲ್ಲಿ ಇವರು ತಮ್ಮ ಬಿಲ್ಲಯ್ಯ ನ ವಂಶದವರೆಂದು ಕರೆದುಕೊಳ್ಳುವ ಪ್ರಸಂಗ ಇವರ ಮೂಲವನ್ನು ಮಲೆಮಾದೇಶ್ವರನ ಬೆಟ್ಟದ ತಪ್ಪಲಿಗೆ ಕೊಂಡೊಯ್ಯುತ್ತದೆ. ಇದಕ್ಕೆ ಪೂರಕವಾಗಿ ಇವರನ್ನು 'ಕಾಡು ಸೋಲಿಗ'ರೆಂದು ಕರೆಯುವ ರೂಢಿಯೂ ಇರುವುದನ್ನು ನೋಡಿದಾಗ ಇವರು ಸೋಲಿಗರ ಒಂದು ಉಪಪಂಗಡವಿರಬಹುದೇ ಎಂಬ ಅನುಮಾನ ಸಹಜವಾಗಿಯೇ ಬರುತ್ತದೆ.

ಇಲ್ಲಿಗರಲ್ಲಿ ಕಣಿ ಹೇಳುವ ಪೂಜಾರಿಗೆ ಮಹತ್ವದ ಸ್ಥಾನ. ಆಲೇಮರದ ಮೇಲಿಟ್ಟ ದೇವರನ್ನು ಕೆಳಗಿಳಿಸಿ ಅದಕ್ಕೆ ಪೂಜೆ ಸಲ್ಲಿಸಿ ಮೈದುಂಬುವ ಪೂಜಾರಿ ಆವೇಶದಿಂದ ಪ್ರಾಸಬದ್ಧವಾಗಿ ದೇವರ ಆವಾಹನೆಗೆ ತೊಡಗುತ್ತಾನೆ. ಪಕ್ಕದಲ್ಲಿರುವ ಮತ್ತೊಬ್ಬ ತಮಟೆಯೊಂದನ್ನು ಲಯಬದ್ಧವಾಗಿ ಬಡಿಯುತ್ತಾ ಅವನ ಅವಾಹನೆಗೆ ಪೂರಕ ವಾತಾವರಣ ನಿರ್ಮಾಣ ಮಾಡುತ್ತಾನೆ. ಜನರಿಗೆ ಕಷ್ಟ ಬಂದಾಗ ರಾತ್ರಿ ಸಮಯದಲ್ಲಿ ಜನ ಗುಂಪುಗೂಡಿ ಕಣಿಯನ್ನು ಕೇಳತೊಡಗುತ್ತಾರೆ. ಕಷ್ಟಗಳನ್ನು ವಿವರಿಸಿ ಹೇಳುವ ಭಕ್ತರ ಮುಂದೆ ಅವರವರ ಆಯಾ ಕಷ್ಟಗಳಿಗೆ ತಕ್ಕಂತೆ ಶಾಂತಿಯನ್ನು ಸೂಚಿಸಲಾಗುತ್ತದೆ. ಕಣಿ ಹೇಳುವವನು ಸಾಮಾನ್ಯವಾಗಿ ತಮ್ಮ ಹಿರೀಕರ ಧ್ಯಾನದಿಂದ ಆರಂಭಿಸಿ ಮಾತೃದೇವತೆಗಳನ್ನು ನೆನೆದು ಇಷ್ಟದೈವಗಳನ್ನು ಸ್ತುತಿಸಿ, ಮಾದಮ್ಮನ ಪೂಜೆಯ ಮೂಲಕ ಮುಕ್ತಾಯಗೊಳಿಸುತ್ತಾನೆ. ಇಂಥ ಕಣಿ ಹೇಳುವ ಅನೇಕ ಪೂಜಾರಿಗಳು ಇಲ್ಲಿಗರಲ್ಲಿ ಇದ್ದಾರೆ. ಆದ್ದರಿಂದಲೇ ಇರಬಹುದು ಇವರನ್ನು 'ಕಾಡುಪೂಜಾರಿ'ಗಳು ಎಂದು ಕರೆಯಲಾಗುತ್ತದೆ.

ಈ ಹಿಂದೆ ಕೊಡಗಿನ ಫಣಿಯರ ಸಂದರ್ಭದಲ್ಲಿ ದೇವರ ಆವಾಹನೆಯನ್ನು ಕುರಿತು ಸಾಕಷ್ಟು ಚರ್ಚಿಸಲಾಗಿದೆ. ತಮ್ಮ ಇಷ್ಟ ದೈವಗಳನ್ನು ಆವಾಹಿಸಿಕೊಂಡು ತಾನೂ ದೇವರಾಗುವ, ಆ ಮೂಲಕ ತಮ್ಮ ಜನಸಮುದಾಯದ ಒಳಿತನ್ನು ಆಶಿಸುವ ಒಬ್ಬ ಮಾಂತ್ರಿಕನಾಗಿ ಕೂಡ ಈ ಕಣಿ ಹೇಳುವವ ಬದಲಾಗುತ್ತಾನೆ. ಪೂಜಾರಿಯ ಆವೇಶ ಭರಿತ ನರ್ತನ ಬೇಡುವುದಕ್ಕಿಂತ ಆದೇಶಿಸುವ ರೀತಿಯಲ್ಲಿರುತ್ತದೆ. ಕಣಿ ಕೇಳುವ ಜನ ಕೂಡ ಪೂಜಾರಿಯ ಮೂಲಕ ದೇವರಿಗೆ ಆದೇಶಿಸುವ ಕೆಲಸವನ್ನೇ ಮಾಡುತ್ತಾರೆಂದರೆ ಅದು ತಪ್ಪೇನೂ ಆಗಲಾರದು.

೨.೭. ಮಿಂಚೇರಿಯ ಹುಲಿ ಸಮಾಧಿ

ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಯ ನಡುವಿನ ಕುರಚಲು ಪ್ರದೇಶದ ಕಾಡಿನಲ್ಲಿ ವಾಸವಾಗಿರುವ ಮ್ಯಾಸಬೇಡರ ತಾಣ ಮತ್ತೊಂದು ವಿಶಿಷ್ಟ ಪ್ರದೇಶ. ಅಪೂರ್ವವಾದ ಶಿಲಾಪದರುಗಳಿಂದ ಹಾಗೂ ಪ್ರಾಚೀನವೆನಿಸಿದ ಹಲವು ರೀತಿಯ ಭೂಪದರುಗಳಿಂದ ಕೂಡಿರುವ ಈ ಪ್ರದೇಶ ಮೇಲ್ನೋಟಕ್ಕೆ ಬರಡಾಗಿ ಕಾಣುತ್ತದೆ. ನೋಡಿದಷ್ಟು ದೂರವೂ ಒಣಭೂಮಿಯ ಬರಡು ನೆಲ. ಆದರೂ ಇಲ್ಲಿ ಅನೇಕ ರಾಜರ ಮತ್ತು ಪಾಳೇಗಾರರ ಆಡಳಿತ ನಡೆದಿದೆ. ಬೇಟೆಗಾರರು ಮತ್ತು ಪಶುಪಾಲಕರ ಪ್ರಮುಖ ನೆಲೆಯಾದ ಚಿತ್ರದುರ್ಗ ಮತ್ತು ಬಳ್ಳಾರಿಗಳ ನಡುವಿನ ಈ ಭೂಪ್ರದೇಶ ಬುಡಕಟ್ಟು ಜೀವನದ ದೃಷ್ಟಿಯಿಂದ ಅತ್ಯಂತ ಮುಖ್ಯವಾದದ್ದು. ಕೃಷ್ಣಮೂರ್ತಿ ಹನೂರರು ಮ್ಯಾಸಬೇಡರ ಹುಟ್ಟಿನ ಬಗ್ಗೆ ಅವರು ಹೇಳುವ ಕಥೆಯೊಂದನ್ನು ಸಂಗ್ರಹಿಸಿದ್ದಾರೆ. ಇವರ ದೈವಾರಾಧನೆಯ ವಿವಿಧ ಹಂತಗಳನ್ನು ಈ ಕಥೆಯ ಮೂಲಕವೇ ಗುರುತಿಸುವ ಪ್ರಯತ್ನವನ್ನು ಮಾಡಬಹುದಾಗಿದೆ. ಆದ್ದರಿಂದ ಈ ಕಥೆಯನ್ನು ಇಲ್ಲಿ ನೀಡುವುದು ಸೂಕ್ತ ಎಂಬ ಭಾವನೆ ನನ್ನದು. "ಮ್ಯಾಸಬೇಡ ಬುಡಕಟ್ಟಿನ ಮೂಲಪುರುಷನ ಹುಟ್ಟು ಬ್ರಹ್ಮ, ವಿಷ್ಣು, ಮಹೇಶ್ವರರಿಂದಲೇ ಆಯಿತು. ಈ ತ್ರಿಮೂರ್ತಿಗಳು ಪ್ರಪಂಚದ ಮೇಲೆ ಬರುತ್ತಿದ್ದರು. ಆಗ ಭೂಮಿಯ ಮೇಲೆ ಬರೀ ಅರಣ್ಯವೇ ಇದ್ದಿತು. ನರಮನುಷ್ಯರ ಸುಳಿವೂ ಇರಲಿಲ್ಲ. ತ್ರಿಮೂರ್ತಿಗಳು ಪ್ರಪಂಚದ ಮೇಲೆ ಬರುತ್ತಾ ಮೊಳಕಾಲ್ಮೂರು ಬಳಿಯ ಬಿ.ಜಿ.(ಬೊಮ್ಮಗೊಂಡನಕೆರೆ) ಕೆರೆಯ ಬಳಿ ಕಮರದ ಕಾನಿನಲ್ಲಿ ಬಂದು ಸರೋವರದ ಮುಂದೆ ಇಳಿದರು. ಆಗ ಬೆಳಗಾಗುತ್ತಲಿತ್ತು. ಮೂರು ಜನವೂ ಮುಖಮಾರ್ಜನ ಮಾಡಿ ಬ್ರಹ್ಮ, ವಿಷ್ಣು, ಇಬ್ಬರೂ ಹಣೆಗೆ ನಾಮ ಇಟ್ಟುಕೊಂಡರು. ಹಾಗೆ ನಾಮವಿಡುವಾಗ ಅದರ ಶುದ್ಧಿಗೆ ಗೋವಿನ ಮೂತ್ರ ಬೇಕಾಯಿತು. ಆಗ ಬ್ರಹ್ಮ ಒಂದು ಒಂಟಿಕೊಂಬಿನ ಬಲ್ಲಾವನ್ನು, ಪಂಪಾದ್ರಿ ಎಂಬ ಬಸವನನ್ನು ಸೃಷ್ಟಿಸಿದ. ಗೋವಿನ ಮೂತ್ರದ ಒಂದು ಹನಿಯನ್ನು ತೆಗೆದು ಬ್ರಹ್ಮ, ವಿಷ್ಣು, ಮಹೇಶ್ವರರು ವಿಭೂತಿಯನ್ನು ಧರಿಸಿಕೊಂಡರು. ಮಹೇಶ್ವರನು

PDF created with pdfFactory Pro trial version www.pdffactory.com

ವಿಭೂತಿ ಧರಿಸುವಾಗ ವಿಭೂತಿಯ ಒಂದು ಧೂಳು ಬ್ರಹ್ಮನು ಸೃಷ್ಟಿಸಿದ ಒಂಟಿಕೊಂಬಿನ ಬಲ್ಲಾವಿನ ಕಾಲಗೊರಸಿನಲ್ಲಿ ಬಿದ್ದು ಅಲ್ಲಿ ಸಿಕ್ಕಿಹಾಕಿಕೊಂಡಿತು. ತ್ರಿಮೂರ್ತಿಗಳು ಆ ಸರೋವರವನ್ನು ಬಿಟ್ಟು ಹೋಗುವಾಗ ಅವರು ಸೃಷ್ಟಿಸಿದ ಒಂಟಿಕೊಂಬಿನ ಬಲ್ಲಾವನ್ನು, ಪಂಪಾದ್ರಿ ಬಸವನನ್ನು ನೋಡಿಕೊಳ್ಳುವವರಾರು ಎಂಬ ಯೋಚನೆ ಬರಲು, ಬ್ರಹ್ಮನು ಆ ಎರಡೂ ಜೀವರಾಶಿಗಳನ್ನು ಸಲಹುವವನು ಅವುಗಳಿಂದಲೇ ಹುಟ್ಟುವನು, ಚಿಂತೆ ಮಾಡಬೇಕಿಲ್ಲ ಎಂದ. ದಿನದಿನವೂ ಒಂಟಿಕೊಂಬಿನ ಬಲ್ಲಾವು ಮತ್ತು ಪಂಪಾದ್ರಿ ಬಸವ ಕಾಡಿನಲ್ಲಿ ಮೇಯ್ದು ಸರೋವರದಲ್ಲಿ ನೀರು ಕುಡಿದುಕೊಂಡಿದ್ದವು. ಹೀಗಿರಲು ಬಲ್ಲಾವಿನ ಕಾಲಿನ ಗೊರಸಿನಲ್ಲಿ ಸಿಕ್ಕಿಹಾಕಿಕೊಂಡಿದ್ದ ವಿಭೂತಿಯ ಧೂಳು ಒಂಬತ್ತು ತಿಂಗಳು, ಒಂಬತ್ತು ದಿನ, ಒಂಬತ್ತು ಘಳಿಗೆಯಲ್ಲಿ ಬೆಳೆದು ಗರ್ಭ ಒಡೆದು ಗಂಡು ಶಿಶುವಿನ ಜನನವಾಯಿತು. ಅದು ಕೊಳದ ತಡಿಯಲ್ಲಿ ಅಳುತ್ತಿರಲು ಆ ದಿನವೇ ವಾಯುಮಾರ್ಗದಲ್ಲಿ ಹೋಗುತ್ತಿದ್ದ ಶಿವಪಾರ್ವತಿಯರಿಗೆ ಕೇಳಿಸಿತು. ಪಾರ್ವತಿಯು ಬಂದು ಶಿಶುವಿನ ಹೊಕ್ಕುಳುರಿ ಕುಯ್ದು ಹಣೆಗೆ ಸುಟಿಗೆ ಹಾಕಿ ಮಗುವನ್ನು ಕೊಳದ ತಡಿಯಲ್ಲೇ ಮಲಗಿಸಿ ಅದಕ್ಕೆ 'ಚೆಟ್ಲು ಮಲ್ಲನಾಯಕ' ಎಂದು ಹೆಸರಿಟ್ಟರು. ಆ ಮಗುವು ಗಿಡ ಮರಗಳ ಮಧ್ಯದ ಕಾಡಿನಲ್ಲಿ, ಹುಟ್ಟಿದುದರಿಂದ ಅದಕ್ಕೆ ಚೆಟ್ಲು ಗೆಟ್ಲು ಮಲ್ಲನಾಯಕ ಎಂದು ಹೆಸರಾಯಿತು. ಆ ಶಿಶುವು ಮಲಗಿದ್ದ ಜಾಗದಲ್ಲಿಯೇ ಒಂದು ಮರವಿದ್ದು ಆ ಮರದಲ್ಲಿ ತುಡಬೆ ಜೇನು ಕಟ್ಟಿತ್ತು. ಆ ಜೇನುಗೂಡಿನಿಂದ ಜೇನು ತೊಟ್ಟಾಗಿ ಶಿಶುವಿನ ಬಾಯಿಗೆ ಬಿದ್ದು ಮಗುವು ಅಳುವುದನ್ನು ನಿಲ್ಲಿಸಿಬಿಟ್ಟಿತು. ಶಿಶು ಚೆಟ್ಲಗೊಟ್ಲು ಮಲ್ಲನಾಯಕನು ಬೆಳೆದು ಆ ಒಂಟಿಕೊಂಬಿನ ಬಲ್ಲಾವನ್ನು, ಪಂಪಾದ್ರಿ ಬಸವನನ್ನು ಸಾಕಿಕೊಂಡು ಕಾಲ ಮಾಡಿದ. ಆಗಾಗ ದೇವಲೋಕದಿಂದ ಗಂಧರ್ವ ಕನ್ಯೆಯರು ಕಮರದ ಕಾನಿನ ಸರೋವರದ ಕಡೆ ಬಂದು ನೀರಾಟವಾಡಿ ಹೋಗುತ್ತಿದ್ದರು. ಆಗ ಒಬ್ಬಳು ಗಂಧರ್ವ ಕನ್ಯೆ ಚೆಟ್ಲುಗೊಟ್ಲು ಮಲ್ಲನಾಯಕನನ್ನು ಕಂಡು ಮೋಹಗೊಂಡು ಲಗ್ನವಾಗಿ ಅಲ್ಲೇ ಇದ್ದುಬಿಟ್ಟಳು. ಇವರಿಬ್ಬರಿಗೂ ಹುಟ್ಟಿದ ಒಬ್ಬಳೇ ಹೆಣ್ಣು ಮಗಳು ಚಂಚುಲಕ್ಷ್ಮಿ. ಈಕೆ ಬೆಳೆದು ಕಾಡಿನಲ್ಲಿ ಇರುವಾಗ್ಗೆ ವಿಷ್ಣುವು, ನರಸಿಂಹನ ಅವತಾರ ತಾಳಿ ಹಿರಣ್ಯಕಶಿಪುವನ್ನು ಕೊಂದು ತನ್ನ ಪ್ರತಾಪ ಹಾಗೂ ಕೋಪವನ್ನು ತಾಳಲಾರದೆ ಬರುತ್ತಿರಬೇಕಾದರೆ, ಅವನ ಅಸಂತೋಷವನ್ನು ಚಂಚುಲಕ್ಷ್ಮಿ ತಡೆದಳು. ತಡೆದು, ಚಂಚುಲಕ್ಷ್ಮಿ ತನ್ನ ವಂಶಕ್ಕೆ ದೇವತೆಯಾಗಿ ನಿಲ್ಲಬೇಕೆಂದು ಕೇಳಿಕೊಂಡಳು. ನರಸಿಂಹನು ಚಂಚುಲಕ್ಷ್ಮಿಯನ್ನು ವಿವಾಹವಾಗಿ ಸ್ವಲ್ಪಕಾಲ ಅವಳೊಂದಿಗೆ ಸಂಸಾರ ಹೂಡಿ ದೇವಲೋಕಕ್ಕೆ ಹೋದನು. ಚಂಚುಲಕ್ಷ್ಮಿ ಮತ್ತು ನರಸಿಂಹನಿಗೆ ಹುಟ್ಟಿದ ಮೂವರು ಮಕ್ಕಳೇ ಪೆದ್ದಪ್ಪನಾಯಕ,

ಕೋರಿಮರಮಂಚನಾಯಕ, ಕೋರಿ ಪಾಪನಾಯಕ ಇವರೇ ಬೇಡ ನಾಯಕರ ಮೂಲಪುರುಷರೆನಿಸಿಕೊಂಡರು."[೧೧]

ಮ್ಯಾಸಬೇಡರ ಕುಲಮೂಲದ ಈ ಕಥೆ ಅವರ ದೈವಾರಾಧನೆಯ ವಿವಿಧ ಘಟ್ಟಗಳನ್ನು ವಿವರಿಸುತ್ತದೆ. ತಮ್ಮ ಹುಟ್ಟನ್ನು ತ್ರಿಮೂರ್ತಿಗಳ ಮೂಲದಿಂದ ಗುರುತಿಸುವುದಲ್ಲದೆ, ನರಸಿಂಹ ಹಾಗೂ ಚಂಚುಲಕ್ಷ್ಮಿಯರ ಸಂಬಂಧದಿಂದಾಗಿ ಹುಟ್ಟಿದ ಮೂವರೇ ನಾಯಕರೇ ತಮ್ಮ ಹಿರಿಯರು ಎಂದು ಹೇಳಿಕೊಳ್ಳುವ ಇಲ್ಲಿನ ಮನೋಭಾವ ಹಲವು ಪ್ರಭಾವಗಳಿಂದ ರೂಪಿತವಾಗಿದೆ ಎನ್ನದೇ ವಿಧಿಯಿಲ್ಲ. ಒಂಟಿ ಕೊಂಬಿನ ಬಲ್ಲಾವಿನ ಕಾಲಗೊರಸಿನಲ್ಲಿ ಸಿಕ್ಕಿಕೊಂಡ ವಿಭೂತಿಯ ಕಣದಿಂದ ಹುಟ್ಟುವ ಶಿಶು ತನ್ನ ಪಾಡಿಗೆ ತಾನು ನಿಸರ್ಗದಲ್ಲಿ ಬೆಳೆಯುವ ರೀತಿಯಂತೂ ತುಂಬ ಸೊಗಸಾಗಿದೆ. ಸ್ವತಃ ಪಾರ್ವತಿಯೇ ಆ ಮಗುವನ್ನು ಸಲಹುತ್ತಾಳೆ. ನಿಸರ್ಗ ಕಾಪಾಡುತ್ತದೆ. ಹೀಗೆ ಬೆಳೆದ ಮಲ್ಲನಾಯಕನಿಗೆ ಗಂಧರ್ವಕನ್ಯೆಯ ಸಂಬಂಧವನ್ನು ಕಲ್ಪಿಸಲಾಗಿದೆ. ಅವರ ಮಗಳಾದ ಚಂಚುಲಕ್ಷ್ಮಿಯು ವಿಷ್ಣುವಿನ ಅವತಾರನಾದ ನರಸಿಂಹನನ್ನು ವರಿಸುತ್ತಾಳೆ. ವೈದಿಕ ಪ್ರಭಾವಕ್ಕೆ ಒಳಗಾದ ಮತ್ತು ಅವರ ವೈಭವಯುತ ಪುರಾಣಗಳನ್ನು ತಿಳಿದ ಅವೈದಿಕ ಕೀಳರಿಮೆಯಿಂದ ಕಟ್ಟಿಕೊಂಡ ಕಥೆ ಇದಾಗಿದೆ. ಗಂಧರ್ವ ಕನ್ಯೆ ಚಂಚುಲಕ್ಷ್ಮಿಯರ ಪ್ರವೇಶ ಮಾತೃಮೂಲ ಕುಟುಂಬದ ಎಳೆಗಳನ್ನು ಹುಡುಕಲು ಸಹಾಯ ಮಾಡುತ್ತವೆ. ಇವರು ಕೂಡ ಮಾರಿಯನ್ನು ಆರಾಧಿಸುವುದರಿಂದ ಪಶುಪಾಲನೆಗೂ ಮೊದಲನೇ ಹಂತದಲ್ಲಿ ಇವರಲ್ಲಿಯೂ ಮಾತೃಮೂಲ ಕುಟುಂಬಗಳೇ ಇದ್ದವು ಎಂಬುದನ್ನು ಊಹಿಸಬಹುದಾಗಿದೆ.

ಮಧ್ಯಕರ್ನಾಟಕದ ಕುರುಚಲು ಕಾಡಿನ ಈ ಪ್ರದೇಶಕ್ಕೆ ಮ್ಯಾಸಬೇಡರು ಶ್ರೀ ಶೈಲದ ಕಡೆಯಿಂದ ಆಗಮಿಸಿರಬೇಕೆಂಬ ಊಹೆ ನಿಜವೇ ಇರಬಹುದು. ತೆಲುಗು ಮತ್ತು ಕನ್ನಡ ಎರಡೂ ಭಾಷೆಗಳನ್ನು ಆಡುವ ಮ್ಯಾಸಬೇಡರು ಪ್ರಮುಖವಾಗಿ ಪಶುಪಾಲಕರು. ಇಲ್ಲಿಯವರೆಗೆ ನಾವು ನೋಡಿದಂತೆ, ಪಶುಪಾಲನೆಯ ಹಂತದಲ್ಲಿ ಉದ್ಭವಗೊಂಡ ಅನೇಕ ಪುರುಷ ದೈವಗಳ ಆರಾಧನೆ ಇವರಲ್ಲಿಯೂ ಆರಂಭವಾಗಿದೆ. ಓಬಳದೇವರು, ಗಾದ್ರಿಪಾಲನಾಯಕ, ಸೂರಲಿಂಗ, ರಾಜದೇವರು, ಬೋರೇದೇವರು, ದೋಸೆ ದೇವರು, ಬೋರುವ(ಬೈರವ) ಬೊಮ್ಮದೇವರು, ದಡ್ಡಿ ಸೂರನಾಯಕ ಮುಂತಾಗಿ ಹನ್ನೆರೆಡು ವಿಧದ ದೇವರನ್ನು ಇವರು ಆರಾಧಿಸುತ್ತಾರೆ.

ತಮ್ಮ ಹುಟ್ಟನ್ನು ಮತ್ತು ತಮ್ಮ ಕುಲಮೂಲವನ್ನು ವೈಷ್ಣವ ಧರ್ಮದ ಜೊತೆಗೆ ಈಗ ಗುರುತಿಸಿಕೊಳ್ಳುತ್ತಿದ್ದಾರಾದರೂ ಮೂಲದಲ್ಲಿ ಇವರು ಶೈವಾರಾಧಕರಾಗಿದ್ದರು ಎಂಬುದಕ್ಕೆ ಅವರ ಬೋರೇದೇವರು, ಬೋರುವ ಮತ್ತು ಬೊಮ್ಮ ದೇವರುಗಳೇ ಸಾಕ್ಷಿ. ಗಾದ್ರಿಪಾಲನಾಯಕ ಮತ್ತು ದಡ್ಡಿ ಸೂರನಾಯಕ ಇವರು ಸಮುದಾಯದ

PDF created with pdfFactory Pro trial version www.pdffactory.com

ಸಾಂಸ್ಕೃತಿಕ ನಾಯಕರು. ಇವರು ಸಾಂಸ್ಕೃತಿಕ ವೀರನಾದ ಸೂರನಾಯಕ ತದನಂತರದಲ್ಲಿ ಸೂರಲಿಂಗೇಶ್ವರ ಆಗಿದ್ದಾನೆ. ಇವರ ಸಾಂಸ್ಕೃತಿಕ ವೀರನಾದ ಗಾದ್ರಿಪಾಲನಾಯಕ ಹೆಚ್ಚು ಪ್ರಸಿದ್ಧ ದೈವವಾಗಿದ್ದು ಅವನು ಹುಲಿಯೊಂದಿಗೆ ಹೋರಾಡಿ ಸತ್ತ ಕತೆ ಜನಜನಿತವಾದದ್ದು. ಇವರ ಪ್ರಮುಖ ಜಾತ್ರೆಗಳು ನಡೆಯುವ ಮೊಳಕಾಲ್ಮೂರಿನ ಕಂಪಳ ದೇವರ ಹಟ್ಟಿ, ಹಾಗೂ ಹೊಳಲ್ಕೆರೆ ತಾಲ್ಲೂಕಿನ ಮಿಂಚೇರಿ ಬಹುಮುಖ್ಯವಾದ ಸ್ಥಳಗಳು. ಈ ಮಿಂಚೇರಿಯ ಕಾಡಿನಲ್ಲಿ ಇರುವ ಗಾದ್ರಿ ಪಾಲನಾಯಕನ ಸಮಾಧಿ ಮ್ಯಾಸಬೇಡರಿಗೆ ಅತ್ಯಂತ ಪವಿತ್ರವಾದ ಸ್ಥಳ. ಗಾದ್ರಿಪಾಲನಾಯಕನ ಜೊತೆಯಲ್ಲಿಯೇ ಸತ್ತ ಹುಲಿಯ ಸಮಾಧಿಯೂ ಇದೆ. ಗಾದ್ರಿಪಾಲನಾಯಕ ಮತ್ತು ಹುಲಿ ಇವರ ದೈವಗಳಾಗಿ ಇಂದು ಪರಿವರ್ತಿತವಾಗಿವೆ. ಇಂಥ ಕತೆಯ ಉಲ್ಲೇಖ ಇಲ್ಲಿ ಅಗತ್ಯವೆಂದು ನಾನು ಭಾವಿಸುತ್ತೇನೆ.

ಮ್ಯಾಸಬೇಡರ ಸಾಂಸ್ಕೃತಿಕ ನಾಯಕ ಗಾದ್ರಿಪಾಲ. ಇವನು ಒಬ್ಬ ದನಗಾಹಿ, ಬಳ್ಳಾರಿ, ಚಿತ್ರದುರ್ಗದ ನಡುವಿನ ಸಂಡೂರು ಅರಣ್ಯಗಳಿಂದಾವೃತವಾದ ಜರಿಮಲೆ ಸೀಮೆ ಇವನ ಪಶುಪಾಲನೆಯ ಸ್ಥಳ. ಅದು ಹುಲಿಗಳ ಆವಾಸಸ್ಥಾನ. ಹುಲಿಗಳು ಮನುಷ್ಯರ ಹಸುಗಳನ್ನು ಕೊಲ್ಲುವುದು, ಮನುಷ್ಯರು ಹುಲಿಗಳ ಸಂತತಿಯನ್ನು ನಾಶ ಮಾಡುವುದು ನಡದೇ ಇರುತ್ತದೆ. ಇಂಥಾ ಒಂದು ಪರಸ್ಪರ ಸಾಂಪ್ರದಾಯಿಕ ದ್ವೇಷವನ್ನು ಹೋಗಲಾಡಿಸಿ ಪರಸ್ಪರ ಪ್ರೀತಿಯ ಒಪ್ಪಂದಕ್ಕೆ ಬರುವುದು ಗಾದ್ರಿಪಾಲನಾಯಕ ಕಾವ್ಯದ ಮೊದಲ ಘಟ್ಟ. ಈ ಒಪ್ಪಂದದಂತೆ ಗಾದ್ರಿಪಾಲನ ಪಶುಗಳ ರಕ್ಷಣೆಯ ಕೆಲಸವನ್ನು ಹುಲಿಯೇ ವಹಿಸಿಕೊಳ್ಳುತ್ತದೆ. ಹಾಗೆಯೇ ಹುಲಿಮರಿಗಳ ರಕ್ಷಣೆಯನ್ನು ಗಾದ್ರಿಪಾಲ ವಹಿಸಿಕೊಳ್ಳುತ್ತಾನೆ. ಈ ಒಪ್ಪಂದ ಪರಸ್ಪರರಲ್ಲಿ ಸುಖ ಶಾಂತಿ ನೆಮ್ಮದಿಗಳನ್ನು ತರುತ್ತದೆ. ಅಷ್ಟರಲ್ಲಿ ಗಾದ್ರಿಪಾಲನನ್ನು ನೋಡುವುದಕ್ಕಾಗಿ ಇಬ್ಬರು ಹೊರಗಿನ ಜನ ಬರುತ್ತಾರೆ. ಅವರ ಕೈಲಿ ಕೋವಿ ಇರುತ್ತದೆ(ಈ ಕೋವಿ ಆಧುನಿಕತೆಯ ಸಂಕೇತವೂ, ನಾಗರಿಕ ಜನರ ನಾಶಪ್ರವೃತ್ತಿಯ ಪ್ರತೀಕವೂ ಹೌದು). ಗಾದ್ರಿಪಾಲ ಮನೆಯಲ್ಲಿ ಇರುವುದಿಲ್ಲ. ಆದರೆ ಹುಲಿ ಮರಿಗಳಿರುತ್ತವೆ. ತಮ್ಮ ಕೋವಿಗಳಿಂದ ಹುಲಿಮರಿಗಳನ್ನು ಅವರು ಕೊಂದು ಬಿಡುತ್ತಾರೆ. ತನ್ನ ಮರಿಗಳ ರೋದನ ಕೇಳಿ ದೂರದಲ್ಲಿ ಹಸುಗಳನ್ನು ಮೇಯಿಸುತ್ತಿದ್ದ ಹುಲಿ ಓಡಿಬರುತ್ತದೆ. ತನ್ನ ಮರಿಗಳು ಸತ್ತು ಬಿದ್ದಿರುವುದನ್ನು ನೋಡುತ್ತದೆ. ಈ ಮನುಷ್ಯರೇ ಹೀಗೆ. ಮಾತಿಗೆ ತಪ್ಪುವವರು ಎಂದು ತಿಳಿದ ಹುಲಿ ಈ ಸಾವು ಗಾದ್ರಿಪಾಲನಿಂದಲೇ ಸಂಭವಿಸಿದೆ ಎಂದು ಭಾವಿಸುತ್ತದೆ. ಗಾದ್ರಿಪಾಲನಿಗೂ ಹುಲಿಗೂ ಏಳುದಿನಗಳ ಕಾಲ ಯುದ್ಧ ನಡೆದು ಕಡೆಗೆ ಯಾರೂ ಸೋಲದೆ ಇಬ್ಬರೂ ಸಾವನ್ನಪ್ಪುತ್ತಾರೆ. ಈ ದುರಂತ ಕಥೆ ಪ್ರಕೃತಿಯನ್ನು ಮನುಷ್ಯ ನಾಶ ಮಾಡುವ ಅಹಂಕಾರ ಮತ್ತು ತನಗೆ

ಎಲ್ಲವನ್ನು ನೀಡುವ ಪ್ರಕೃತಿಗೆ ಮೋಸ ಮಾಡುವುದರಿಂದ ಎಂಥ ದುರಂತ ಸಂಭವಿಸುತ್ತದೆ ಎಂಬ ಆಶಯವನ್ನು ಹೊತ್ತಿದೆ. ಈ ನಿಸರ್ಗದಲ್ಲಿ ಪ್ರಾಣಿ ಪ್ರಪಂಚಕ್ಕೆ ಕೂಡ ಮನುಷ್ಯನಷ್ಟೇ ನಿರ್ಭಿಡೆಯಿಂದ ಬದುಕಲು ಹಕ್ಕಿದೆ. ಅದನ್ನು ಮುರಿದಲ್ಲಿ ದುರಂತ ಸಂಭವಿಸುತ್ತದೆ ಎಂಬುದನ್ನು ಈ ಕಥೆ ಸಾರುತ್ತದೆ. ಕೋವಿ ಹಿಡಿದ ಮನುಷ್ಯನ ಆಧುನೀಕರಣಗೊಂಡ ಕಲುಷಿತ ಮನಸ್ಸು ನಿಸರ್ಗದ ನೆಮ್ಮದಿಯನ್ನು ಕಲಕುವ ಮೂಲಕ ಪ್ರಾಣಿಗಳು ಮತ್ತು ಮುಗ್ಧ ಮನುಷ್ಯರ ನಡುವಿನ ಸಂಬಂಧಕ್ಕೆ ಇತಿಶ್ರೀ ಹಾಡುವ ಸತ್ಯವನ್ನು ಹೇಳ ಹೊರಟ ಈ ದುರಂತ ಕಥೆ ಮ್ಯಾಸಬೇಡರ ಲೋಕದೃಷ್ಟಿಯನ್ನು ಅನನ್ಯವಾಗಿ ಚಿತ್ರಿಸುತ್ತದೆ.

ಮೂಲತಃ ಬೇಟೆಗಾರರೂ ಅನಂತರದಲ್ಲಿ ಪಶುಪಾಲಕರೂ ಆಗಿ ಜೀವನ ನಿರ್ವಹಿಸಿದ ಈ ಬುಡಕಟ್ಟು ವಿಜಯನಗರ ಸಾಮ್ರಾಜ್ಯದ ಸಂದರ್ಭದಲ್ಲಿ ಪ್ರಧಾನವಾಗಿ ಸೈನಿಕ ವೃತ್ತಿಯನ್ನು ಕೈಗೊಂಡಿದೆ. ನಿಪುಣ ಬೇಟೆಗಾರರೂ ಆದ ಇವರು ಸೈನ್ಯಕ್ಕೆ ಹೇಳಿ ಮಾಡಿಸಿದವರೂ ಹೌದು. ವಿಜಯನಗರ ಪತನಾನಂತರ ಅನೇಕ ಸಣ್ಣಪುಟ್ಟ ಪಾಳೆಯ ಪಟ್ಟುಗಳು ತಲೆ ಎತ್ತಿದವು. ಅಂಥ ಹಲವು ಪಾಳೆಪಟ್ಟುಗಳ ನಾಯಕರಾಗಿಯೂ ಇವರು ರಾಜ್ಯವನ್ನು ಆಳಿರಬಹುದು. ಆ ನಂತರದಲ್ಲಿ ಕಾಡಿನಲ್ಲೇ ಉಳಿದವರನ್ನು ಮ್ಯಾಸನಾಯಕರೆಂದೂ. ಊರಿನಲ್ಲಿ ಉಳಿದವರನ್ನು ಊರನಾಯಕರೆಂದೂ ಕರೆದಿರುವಂತೆ ಕಾಣುತ್ತದೆ. ಬಹುಶಃ ಸೈನಿಕರಾಗುವ ಮೂಲಕ ಆಳುವ ಜನರಿಗೆ ಹತ್ತಿರವಾದ ಇವರು ಹಲವು ಸಂದರ್ಭದಲ್ಲಿ ವೈಷ್ಣವೀಕರಣಗೊಂಡಿದ್ದಲ್ಲದೆ ತಮ್ಮ ಕುಲಮೂಲಕ್ಕೆ ವೈದಿಕ ಪುರಾಣಗಳ ಸಹಾಯವನ್ನು ಪಡೆದಂತೆ ಕಾಣುತ್ತದೆ. ಆದ್ದರಿಂದಲೇ ಇವರಲ್ಲಿ ಶೈವ ಮತ್ತು ವೈಷ್ಣವ ಎರಡೂ ಪಂಥಗಳ ಆರಾಧನೆ ರೂಢಿಯಲ್ಲಿದೆ. ಆದರೆ ಇವೆಲ್ಲವನ್ನು ಮೀರಿ ಗಾದ್ರಿಪಾಲನಾಯಕನಂಥ ಒಬ್ಬ ನಿಸರ್ಗದ ವೀರನನ್ನು ದೈವವನ್ನಾಗಿ ಪೂಜಿಸುತ್ತಿರುವುದು ಅವರ ಅನನ್ಯ ಲೋಕದೃಷ್ಟಿಯ ಸಂಕೇತವಾಗಿದೆ. ಆದ್ದರಿಂದಲೇ ಮಿಂಚೇರಿ, ಗಂಜಿಗಟ್ಟೆ ಹಾಗೂ ನನ್ನೀವಾಳದ ಜಾತ್ರೆಗಳು ಅವರ ಹಿರಿಯರ ಆರಾಧನೆಯ ಸಂಕೇತಗಳಾಗಿಯೇ ಉಳಿದಿವೆ.

೨.೮. ಗೊಲ್ಲರ ಹಟ್ಟಿ

ಕರ್ನಾಟಕದ ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳಲ್ಲಿ ವಿಶೇಷವಾಗಿ ಕಂಡುಬರುವ ಕಾಡುಗೊಲ್ಲರದು ಅತ್ಯಂತ ವಿಶಿಷ್ಟವಾದ ಜೀವನ. ಯಾವುದೇ ಇತರ ಸಮುದಾಯಗಳ ಜೊತೆಗೆ ತಮ್ಮನ್ನು ಗುರುತಿಸಿಕೊಳ್ಳಲು ಇಷ್ಟಪಡದ ಇವರ ವಾಸಸ್ಥಳಗಳು ಊರ ಸಂಸ್ಕೃತಿಯಿಂದ ಸದಾ ದೂರ. ತಮ್ಮದೇ ಆದ ಗುಡಿಸಲುಗಳ ಸಮೂಹವನ್ನು 'ಹಟ್ಟಿ' ಎಂದು ಕರೆದುಕೊಳ್ಳುವ ಇವರು ಒಂದು ನಿರ್ದಿಷ್ಟ ಜಾಗದಲ್ಲಿ

PDF created with pdfFactory Pro trial version www.pdffactory.com

ನಿಗದಿಮಾಡಿದ ಪ್ರದೇಶದಲ್ಲಿ ವಾಸಿಸುವಂಥವರು. ಇದು ಒಂದು ರೀತಿಯಲ್ಲಿ ನಿಷೇಧಿತ ಪ್ರದೇಶ. ಹಟ್ಟಿಯ ಯಜಮಾನನ ಅಪ್ಪಣೆ ಇಲ್ಲದೆ ಯಾರೂ ಪ್ರವೇಶ ಮಾಡುವಂಥ ಸ್ಥಿತಿಯೂ ಒಂದು ಕಾಲಕ್ಕಿತ್ತು. ಹಟ್ಟಿ ಎಂದು ಕರೆದುಕೊಳ್ಳುವ ಆ ಗುಡಿಸಲುಗಳ ಸಮೂಹದ ನಡುವೆ ಜುಂಜಪ್ಪನ ಅಥವಾ ಎತ್ತಪ್ಪನ ಅಥವಾ ಅವರ ಕ್ಯಾತಯ್ಯ–ಪಾತಯ್ಯರ ಗುಡಿಗಳಿರುತ್ತವೆ. ಗುಡಿ ಎಂದರೆ ಚಕ್ರಾಕಾರದ ಮೋಟುಗೋಡೆಯ ಮೇಲೆ ಮೇಲ್ಮುಖವಾಗಿ ಕಟ್ಟಿದ ಎತ್ತರದ ಸೂರು. ಇಂಥ ಒಂದು ಪುಟ್ಟ ಗುಡಿಸಲಿನ ಒಳಗೆ ದೇವರ ವಾಸ. ನಿರ್ದಿಷ್ಟಪಡಿಸಿದ ಪೂಜಾರಿಯಷ್ಟೇ ಒಳಗಡೆ ಪ್ರವೇಶ ಮಾಡಬಹುದು. ಆ ಗುಡಿಯ ಸುತ್ತ ತೀವ್ರತರವಾದ ಮುಳ್ಳಿನ ಹೆಬ್ಬೇಲಿ. ಆ ಬೇಲಿಯನ್ನು ಭೇದಿಸಿ ಯಾರೂ ಒಳಗೆ ಹೋಗುವ ಹಾಗಿಲ್ಲ. ಅಂದರೆ ಇದರ ಅರ್ಥ ಇಷ್ಟೆ. ಕಾಡುಗೊಲ್ಲರ ದೇವರು ಅವರ ದೃಷ್ಟಿಯಲ್ಲಿ ಅತ್ಯಂತ ಪವಿತ್ರವಾದದ್ದು. ಆದ್ದರಿಂದ ಇತರೆ ನಾಗರಿಕರ ಜನರ ಸೋಂಕು ಅದಕ್ಕೆ ತಟ್ಟಬಾರದು. ಇದು ದೇವರನ್ನು ಕುರಿತ ಅವರ ಪವಿತ್ರ ಕಲ್ಪನೆ. ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಯ ಅನೇಕಾನೇಕ ಕಾಡುಗೊಲ್ಲರ ಹಟ್ಟಿಗಳಲ್ಲಿ ಈ ದೃಶ್ಯ ಸರ್ವೇಸಾಮಾನ್ಯ. ಇಷ್ಟೆಲ್ಲಾ ಕಟ್ಟುನಿಟ್ಟನ್ನು ಪಾಲಿಸುವ ಈ ಜನ ಅತ್ಯಂತ ಮುಗ್ಧರು. ಸ್ನೇಹಶೀಲರು, ಕಷ್ಟಜೀವಿಗಳು. ದೇವರು ಮತ್ತು ಪಾವಿತ್ರ್ಯದ ವಿಚಾರ ಬಂದಾಗ ಅಷ್ಟೇ ನಿಷ್ಠುರರು. ಬಹುಶಃ ಇಡೀ ಕರ್ನಾಟಕದಲ್ಲಿ ಎಲ್ಲಿಯೂ ಇಷ್ಟು ಕಟ್ಟುನಿಟ್ಟಿನ ಸಂಪ್ರದಾಯಗಳನ್ನು ಕಟಿಬದ್ಧವಾಗಿ ಆಚರಿಸುವ ಬುಡಕಟ್ಟು ಇನ್ನೊಂದಿಲ್ಲ. ಒಂದು ಹೆಣ್ಣು ಹಡೆದಾಗ ಅವಳು ಸೂತಕದವಳು ಎಂಬುದು ಇವರ ಕಲ್ಪನೆ. ಆದ್ದರಿಂದಲೇ ಅವಳು ಹಡೆಯುವ ಸಂದರ್ಭಕ್ಕೆ ಹಟ್ಟಿಯ ಹೊರಗೆ ದೂರದಲ್ಲಿ ಗುಡಿಸಲು ಕಟ್ಟುತ್ತಾರೆ. ಅದರಲ್ಲಿ ಆ ಹೆಣ್ಣು ಒಬ್ಬಳೇ ವಾಸಿಸಬೇಕು. ತನ್ನ ಹೆರಿಗೆಯ ಕರ್ಮವನ್ನು ತೀರಿಸಿಕೊಳ್ಳಬೇಕು. ಈ ಕಟ್ಟುನಿಟ್ಟು ಕೂಡ ಮತ್ತಾವುದೇ ಜನಸಮುದಾಯದಲ್ಲಿ ಇಲ್ಲದಿರುವ ವಿಶಿಷ್ಟ ಪದ್ಧತಿಯಾಗಿದೆ.

ಕಾಡುಗೊಲ್ಲರು ಇಷ್ಟೆಲ್ಲಾ ಕಟ್ಟುನಿಟ್ಟಿನ ನಡುವೆ ಬಾಳಿ ಬದುಕಿದ್ದರೂ ಅವರ ಮೇಲೆ ಆಗಿರುವ ವೈದಿಕ ಪ್ರಭಾವ ನಮ್ಮನ್ನು ಬೆಚ್ಚಿ ಬೀಳಿಸುತ್ತದೆ. ಮಹಾಭಾರತದ ಕೃಷ್ಣ ಇವರ ಮೂಲ ಪುರುಷ ಎಂಬುದು ಇವರ ನಂಬಿಕೆ. ಕಾಡುಗೊಲ್ಲರಲ್ಲಿ ಗಂಡ ಸತ್ತವರು ಬಳೆ ಒಡೆಯುವುದಿಲ್ಲ ಮತ್ತು ಕುಂಕುಮ ಅಳಿಸುವುದಿಲ್ಲ. ತಾವು ವಿಧವೆಯರೆಂದು ತಿಳಿಯುವುದಿಲ್ಲ. ಕೃಷ್ಣನೇ ಅವರೆಲ್ಲರ ಪರೋಕ್ಷ ಪುರುಷ ದೈವ ಹಾಗೂ ಪತಿ. ಆದ್ದರಿಂದ ಚಿಕ್ಕ ವಯಸ್ಸಿನಲ್ಲಿ ಗಂಡ ತೀರಿಕೊಂಡರೂ ತಾವು ವಿಧವೆಯರಾಗಿದ್ದೇವೆಂಬ ಭಾವನೆ ಅವರಲ್ಲಿ ಬರುವುದಿಲ್ಲ. ಇದು ಅವರ ಪೌರಾಣಿಕವಾದ ಕಲ್ಪನೆ ಮತ್ತು ಆ ಕಲ್ಪನೆಯನ್ನು ನೇರವಾಗಿ ತಮ್ಮ ಜೀವನಕ್ಕೆ

ಆವಾಹಿಸಿಕೊಂಡಿರುವ ರೀತಿ. ಬಹುಶಃ ಕೃಷ್ಣ ಮೂಲತಃ ಗೊಲ್ಲನೇ ಆದ್ದರಿಂದ ಇದು ವೈದಿಕ ಕಲ್ಪನೆ ಎಂದು ಅರ್ಥೈಸುವುದು ಕೂಡ ತಪ್ಪಾಗಬಹುದು.

ಇಂಥ ಒಂದು ಕಲ್ಪನೆಯ ನಡುವೆಯೂ ಅವರು ಮೂಲದಲ್ಲಿ ವೈದಿಕರೋ ಅಥವಾ ಶೈವರೋ ಎಂಬುದನ್ನು ಖಚಿತವಾಗಿ ಹೇಳುವ ಪುರಾಣಗಳಿವೆ. ಅವರ ಪುರಾಣ ಮೂಲದಲ್ಲಿ ಶೈವರು ಎಂಬುದನ್ನು ಸಾರಿ ಹೇಳುತ್ತದೆ. "ಕಾಡುಗೊಲ್ಲರ ಎರಡು ಪ್ರಮುಖ ಮಹಾಕಾವ್ಯಗಳು ಜನಪ್ರಿಯವಾಗಿವೆ. ಜುಂಜಪ್ಪನ ಕಾವ್ಯ ಮತ್ತು ಎತ್ತಪ್ಪನ ಕಾವ್ಯ. ಈ ಎರಡೂ ಕಾವ್ಯಗಳಲ್ಲಿಯೂ ಶಿವ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತಾನೆ.

ಕಾಡುಗೊಲ್ಲರ ಮೂಲದೈವಗಳಾದ ಚಿತ್ರದೇವರು ಮತ್ತು ಕಾಟುಮದೇವರ ಕಥೆ ಶಿವನಿಂದಲೇ ಆರಂಭವಾಗುತ್ತದೆ. ಜುಂಜಪ್ಪ ಮತ್ತು ಎತ್ತಪ್ಪ ಕಾಡುಗೊಲ್ಲರ ಐತಿಹಾಸಿಕ ಪುರುಷರು. ಪ್ರಮುಖ ಪಶುಪಾಲಕರಾದ ಇವರು, ಸಮುದಾಯಗಳಿಗಾಗಿ ಪ್ರಾಣ ತೆತ್ತವರಾಗಿದ್ದಾರೆ. ಆದ್ದರಿಂದಲೇ ಇಂದು ಈ ಇಬ್ಬರು ಸಾಂಸ್ಕೃತಿಕ ವೀರರು ಕಾಡುಗೊಲ್ಲರ ಬಹುಮುಖ್ಯ ದೈವಗಳಾಗಿ ಪರಿಗಣಿತರಾಗಿದ್ದಾರೆ. ಈ ದೈವಗಳನ್ನು ಕುರಿತು ಕಾಡುಗೊಲ್ಲ ಕಲಾವಿದರು ಕಟ್ಟಿರುವ ಕಾವ್ಯ ಅನನ್ಯವಾದದ್ದು. ಈ ಕಾವ್ಯವನ್ನು ಗಣೆವಾದನದ (ಉದ್ದನೆಯ ಬಿದಿರು ಕೊಳಲು) ಹಿನ್ನಲೆಯಲ್ಲಿ ಸುಶ್ರಾವ್ಯವಾಗಿ ಹಾಡಲಾಗುತ್ತದೆ. ಒಬ್ಬ ಹಾಡುವವನು ಮತ್ತೊಬ್ಬ ಗಣೆ ಊದುವವನು. ಹಿಮ್ಮೇಳಗಾರನೂ ಇರಬಹುದು ಅಥವಾ ಇಲ್ಲದಿರಬಹುದು. ಒಬ್ಬನೇ ಕಲಾವಿದ ಮಂತ್ರದಂತೆ ಪಟಿಸುತ್ತ ವಚನ ರೂಪದಲ್ಲಿ ಹಾಡುವ ಸಂಪ್ರದಾಯವೂ ಉಂಟು. ಇದು ರಾಗಕ್ಕಿಂತ ಸಾಹಿತ್ಯಕ್ಕೆ ಹೆಚ್ಚು ಒತ್ತು ಕೊಡುತ್ತದೆ. ಇದಲ್ಲದೆ ತ್ರಿಪದಿಯ ರೂಪದಲ್ಲಿ ಹೆಂಗಸರು ಹಾಡುವ ಜುಂಜಪ್ಪನ ಕಾವ್ಯವೂ ಉಂಟು. ಒಟ್ಟಿನಲ್ಲಿ ಕಾಡುಗೊಲ್ಲರಲ್ಲಿ ಅಪೂರ್ವ ಕಲಾವಿದರಿದ್ದಾರೆ. ಅವರ ದೈವವನ್ನು ಮತ್ತು ಪರಂಪರೆಯ ನಡವಳಿಕೆಯನ್ನು ಪವಿತ್ರ ಭಾವನೆಯಿಂದ ಕಾಣುವ ಅವರು ತಮ್ಮ ಮೌಖಿಕ ಸಂಪ್ರದಾಯದಲ್ಲಿ ಬಹುದೊಡ್ಡ ಕಾವ್ಯವೊಂದನ್ನು ಬೆಳೆಸಿಕೊಂಡು ಬಂದಿದ್ದಾರೆ. ಜುಂಜಪ್ಪನ ಕುರಿತ ಈ ಮಹಾಕಾವ್ಯ ಅವರ ಪಶುಪಾಲಕ ಜೀವನದ ಇತಿಹಾಸವನ್ನೂ ಹೇಳುತ್ತದಲ್ಲದೆ ಅವರ ದೈವಗಳನ್ನು ಕುರಿತ ಇತಿಹಾಸವನ್ನು ನಿರೂಪಿಸುತ್ತದೆ. ಆದ್ದರಿಂದ ಜುಂಜಪ್ಪನ ಕಾವ್ಯದ ಸಂಕ್ಷಿಪ್ತ ಕಥಾಭಾಗವನ್ನು ಇಲ್ಲಿ ನೀಡುವುದು ಸೂಕ್ತ ಎಂದು ನಾನು ಭಾವಿಸಿದ್ದೇನೆ. ಇಲ್ಲಿ ಜುಂಜಪ್ಪನ ಕಾವ್ಯ ಪ್ರಾತಿನಿಧಿಕ ಎಂದು ಭಾವಿಸಿ ಈ ಕಥೆಯನ್ನು ನಿರೂಪಿಸುತ್ತೇನೆ. ಆದರೆ ಇದೊಂದೇ ಅವರ ಕಥೆಯಲ್ಲ. ಜುಂಜಪ್ಪನ ಕಾವ್ಯವಲ್ಲದೆ ಎತ್ತಯ್ಯನ ಕಾವ್ಯ, ಚಿತ್ರದೇವರ ಕಾವ್ಯ, ಕಾಟಮದೇವರ ಕಾವ್ಯ, ಕ್ಯಾತೇದೇವರ ಕಾವ್ಯ, ಪಾತೇದೇವರಕಾವ್ಯ, ಗೌರಸಂದ್ರದ ಮಾರಮ್ಮನ ಕಾವ್ಯ, ಬೊಮ್ಮಲಿಂಗನ ಕಾವ್ಯ ಮುಂತಾಗಿ ಅವರ ಆರಾಧ್ಯ ದೇವರುಗಳ

PDF created with pdfFactory Pro trial version www.pdffactory.com

ಕಾವ್ಯಗಳು ವೈವಿಧ್ಯಮಯವಾಗಿ ರೂಪಿತವಾಗಿವೆ. ಆದರೆ ಜುಂಜಪ್ಪನ ಕಾವ್ಯ ಅತ್ಯಂತ ಪ್ರಾತಿನಿಧಿಕ ಪುರಾಣವಾಗಿದ್ದು ಕಾಡುಗೊಲ್ಲರ ದೈವಿಕ ಶ್ರದ್ಧೆಯನ್ನು ಸಾರುವಂಥಾದ್ದಾಗಿದೆ.

"ಕರ್ನಾಟಕದ ಪಶುಸಂಗೋಪನಾ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದ ಪ್ರಮುಖ ಜನವರ್ಗಗಳೆಂದರೆ ಗೊಲ್ಲರು ಮತ್ತು ಕುರುಬರು. ಗೊಲ್ಲರಲ್ಲಿ ಊರುಗೊಲ್ಲರು ಮತ್ತು ಕಾಡುಗೊಲ್ಲರು ಎರಡು ಪ್ರಮುಖ ಪ್ರಭೇದಗಳಿವೆ. ಕುರುಬರಲ್ಲಿಯೂ ಈ ಪ್ರಭೇದಗಳಿವೆ. ಊರುಗಳ ನಿರ್ಮಾಣ ಹಂತದಲ್ಲಿಯೇ ಊರು ಸೇರಿರಬಹುದಾದ ಅಥವಾ ಕ್ರಮೇಣ ಊರುಗಳ ಆಕರ್ಷಣೆಗೆ ಒಳಗಾಗಿ ಒಂದು ಕಡೆ ನೆಲೆ ನಿಂತಿರಬಹುದಾದ ಈ ಊರುಗೊಲ್ಲರು ಮತ್ತು ಊರುಕುರುಬರು ಈಗಲೂ ಪಶುಸಂಗೋಪನಾ ವೃತ್ತಿಯನ್ನೇ ಅವಲಂಬಿಸಿದ್ದರೂ ಬೇಸಾಯದಲ್ಲಿ ಹಿಂದೆ ಬಿದ್ದಿಲ್ಲ. ಹಾಗೆಯೇ ಊರು ಸೇರಿದ ಕಾರಣಕ್ಕಾಗಿ ತಮ್ಮೊಡನೆ ಬಾಳುವ ಇತರೆ ಜನವರ್ಗಗಳ ಸಂಸ್ಕೃತಿಯ ಜೊತೆ ಬೆರೆತಿದ್ದಾರೆ ಕೂಡ. ಹೀಗಾಗಿ ಇವರಲ್ಲಿ 'ವಿಶಿಷ್ಟ ಜೀವನ ವಿಧಾನ ಮತ್ತು ಸಂಸ್ಕೃತಿ'ಯನ್ನು ಗುರುತಿಸುವುದು ಕಷ್ಟಸಾಧ್ಯ. ಆದರೆ ಕಾಡುಕುರುಬರು ಮತ್ತು ಕಾಡುಗೊಲ್ಲರ ಜೀವನವಿಧಾನ ಮತ್ತು ಸಂಸ್ಕೃತಿ ಇಂದಿಗೂ ವಿಶಿಷ್ಟವಾದುದೇ.

ಕರ್ನಾಟಕದ ಒಳನಾಡಿನ ಮಧ್ಯಭಾಗವೆನ್ನಬಹುದಾದ ತುಮಕೂರು, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳ ಕೆಲವು ಭಾಗಗಳಲ್ಲಿ ವಿಶೇಷವಾಗಿ ಕಂಡುಬರುವ ಈ ಕಾಡುಗೊಲ್ಲರು ತಮ್ಮ ವಾಸಕ್ಕಾಗಿ ಆಯ್ಕೆ ಮಾಡಿಕೊಂಡಿರುವ ಭೂಪ್ರದೇಶಗಳು ಕೂಡ ಅಷ್ಟೇ ವಿಶಿಷ್ಟವಾಗಿವೆ. ಕುರುಚಲು ಕಾಡುಗಳ, ಸಾಮಾನ್ಯ ಗುಡ್ಡಬೆಟ್ಟಗಳ, ಹುಲ್ಲುಗಾವಲುಗಳೇ ಪ್ರಧಾನವಾದ ಈ ಪ್ರದೇಶ ಇವರ ವೃತ್ತಿಗೆ ಪೂರಕವಾದದ್ದು. ಊರುಗಳ ಸಂಸ್ಕೃತಿಗೆ ಪರ್ಯಾಯವಾಗಿ ತಮ್ಮದೇ 'ಹಟ್ಟಿ'ಗಳ ಸಂಸ್ಕೃತಿಯನ್ನು ಪೋಷಿಸುತ್ತಾ, ಯಾವ ಕಾರಣಕ್ಕೂ ಊರಿನ ಕಲಾಪಗಳ ಜೊತೆ ಒಂದಾಗದ ಇವರು ಊರಿನ ಜನರನ್ನು ಮೈಲಿಗೆಯವರು ಎಂದೇ ಕರೆಯುತ್ತಾರೆ. ಜುಂಜಪ್ಪನ ಕಾವ್ಯವನ್ನು ಅವಲೋಕಿಸಿ ಹೇಳುವುದಾದರೆ ಬಹುಶಃ ಮೊದಲಿಗೆ ಪೂರಾ ಅಲೆಮಾರಿಗಳಾಗಿಯೇ ಜೀವನ ಸಾಗಿಸುತ್ತಿದ್ದ ಇವರು ಕ್ರಮೇಣ 'ಹಟ್ಟಿ'ಗಳನ್ನು ಕಟ್ಟಿಕೊಂಡಂತೆ ಕಾಣುತ್ತದೆ.

ಈ ಕಾವ್ಯದಲ್ಲಿ ಎರಡು ಅಂಶಗಳು ಮುಖ್ಯವಾಗುತ್ತವೆ. ಒಂದು ಕಡೆ ಈ ಗೊಲ್ಲರನ್ನು ಸಹಿಸದ ಬೇಟೆಗಾರ ಸಮೂಹ, ಮತ್ತೊಂದು ಕಡೆ ಇವರ ಇವರ ಹುಲ್ಲುಗಾವಲುಗಳನ್ನು ಕ್ರಮೇಣ ಬೇಸಾಯ ಭೂಮಿಯನ್ನಾಗಿ ಪರಿವರ್ತಿಸುತ್ತಾ ಬಂದ ಕೃಷಿ ವರ್ಗಗಳು. ಈ ಇಬ್ಬರ ನಡುವೆ ತಮ್ಮ ಅಸ್ತಿತ್ವಕ್ಕಾಗಿ ಪರದಾಡುವಂತೆ

ಕಂಡುಬರುವುದು ಒಂದು ಘಟ್ಟವಾದರೆ, ತಮ್ಮದೇ ಕುಲದ ಇತರೆ ಬೆಡಗುಗಳ ಅಸೂಯೆಯನ್ನು ಗೆಲ್ಲುವುದು ಮತ್ತೊಂದು ಘಟ್ಟ. ಮಾರನವರ ಗೊಲ್ಲರ ದನಗಳು ಬೆಳೆದು ಹೆಚ್ಚಾಗುವುದನ್ನು ಕಂಬೇರ ಗೊಲ್ಲರು ಸಹಿಸುವುದಿಲ್ಲ. ಜುಂಜಪ್ಪನಿಗೂ ಜುಂಜಪ್ಪನ ಸೋದರ ಮಾವಂದಿರಿಗೂ ಸದಾ ನಡೆಯುವ ಹೋರಾಟ ಇಂಥದ್ದೇ.

ಜುಂಜಪ್ಪನ ಕಾವ್ಯ ಈ ಎರಡು ಪಾತಳಿಗಳಲ್ಲಿ ಹರಿಯುತ್ತಾ ಹೋಗುತ್ತದೆ. ಕೇವಲ ದನಗಳನ್ನು ನಂಬಿಕೊಂಡು, ಅವುಗಳನ್ನು ಮೇಯಿಸುವ ಕಾಯಕಕ್ಕಾಗಿ ಕಾಡುಮೇಡು ಅಲೆಯುವ ಅಲೆಮಾರಿ ಜನವರ್ಗವೊಂದರ ಅತಂತ್ರ ಸ್ಥಿತಿಯ ಪ್ರತೀಕವಾಗಿ ಜುಂಜಪ್ಪ ಕಾಣಿಸಿಕೊಳ್ಳುತ್ತಾನೆ. ಅನೇಕ ಸಂದರ್ಭಗಳಲ್ಲಿ ವ್ಯಕ್ತಗೊಳಿಸುವ ಜುಂಜಪ್ಪನ ಅನಾಥತೆ ಕಾಡಿನ ಮಕ್ಕಳ ಕಡುಬಡತನವನ್ನು ನಿವೇದಿಸುತ್ತದೆ. ಮದುವೆಯಾದರೂ ಹೆಂಡತಿಯೊಡನೆ ಕೂಡಿ ಬಾಳಲಾಗದ ಜುಂಜಪ್ಪ ತನ್ನ ತಾತ ದೇವರದೈಮಾರನ ಸ್ಥಿತಿ. ಈ ಅಲೆಮಾರಿಗಳ ಸುಖವಿಲ್ಲದ ಬದುಕನ್ನು ಚಿತ್ರಿಸುತ್ತದೆ. ಬಹುಶಃ ಈ ಸ್ಥಿತಿಯೇ ಹೆಣ್ಣು ಮಕ್ಕಳನ್ನು ಅನುಮಾನಿಸುವ ಮಾನಸಿಕ ಕ್ಲೇಶಕ್ಕೂ ಒಳಗು ಮಾಡುತ್ತದೆ. ತನ್ನ ತಂದೆಯ ಅನುಪಸ್ಥಿತಿಯಲ್ಲಿ ಮಕ್ಕಳನ್ನು ಹೆತ್ತ ಜುಂಜಪ್ಪನ ತಾಯಿಯನ್ನು ಸ್ವತಃ ಜುಂಜಪ್ಪನೇ ಅನುಮಾನಿಸಿ ಹಲವು ಪರೀಕ್ಷೆಗಳಿಗೆ ಒಡ್ಡುತ್ತಾನೆ. ಹೆರಿಗೆಯಾದ ಹೆಣ್ಣು ಮಗಳು ಮೂರುತಿಂಗಳ ಕಾಲ ಪ್ರತ್ಯೇಕವಾಗಿ ಒಂಟಿ ಗುಡಿಸಲಲ್ಲಿ ಬಾಳಬೇಕಾದ ದಾರುಣ ಸ್ಥಿತಿ ಕಾಡುಗೊಲ್ಲರಲ್ಲಿ ಇಂದಿಗೂ ರೂಢಿಯಲ್ಲಿದೆ.

ಈ ಕಾವ್ಯದ ಮತ್ತೊಂದು ಪ್ರಮುಖ ಅಂಶವೆಂದರೆ ಕಾಡುಗೊಲ್ಲರು ತಮ್ಮ ದನ ಕರುಗಳಿಗೆ ನೀಡುವ ಪ್ರಾಧಾನ್ಯತೆ. ದನಗಳೇ ಅವರ ಸರ್ವಸ್ವ. ಅವೇ ಅವರ ಮೂಲದೈವಗಳು. ನೂರಾರು ರಾಸುಗಳನ್ನು ನೂರಾರು ಹೆಸರುಗಳಲ್ಲಿ ಗುರುತಿಸಿ ತಮ್ಮ 'ಗಣೆ' ಊದಿ ಕರೆಯುವ ಪರಿಯಂತೂ ಮೋಹಕವಾದದ್ದು. ಜುಂಜಪ್ಪನ ಕಾವ್ಯದ ಬಹುಭಾಗವನ್ನು ಆಕ್ರಮಿಸಿಕೊಂಡಿರುವ ಜುಂಜಪ್ಪನ ನೆಚ್ಚಿನ ಹೋರಿ 'ಬಡಮೈಲ' ಕಾಡುಗೊಲ್ಲರು ತಮ್ಮ ದನಗಳಲ್ಲಿ ಇಟ್ಟ ನಂಬಿಕೆಗೆ ಪ್ರೀತಿಗೆ ಒಂದು ಪ್ರತೀಕ. ಕಷ್ಟಗಳಿಂದ ಪೊರೆಯಬಲ್ಲ, ಗೊಲ್ಲನ ಅನುಪಸ್ಥಿತಿಯಲ್ಲಿ ಇತರೆ ದನಗಳ ಹಿಂಡನ್ನು ನಿಯಂತ್ರಿಸಬಲ್ಲ ಈ ಬಡಮೈಲ ಎಂಬ ಹೋರಿ ಅನೀತಿಯವರಿಗೆ, ಅಸೂಯೆಯವರಿಗೆ, ಕುತಂತ್ರಿಗಳಿಗೆ ಸಿಂಹಸ್ವಪ್ನ. ಹೋರಿಯ ರೂಪದ ಈ ಪ್ರತಿಮೆ ಜುಂಜಪ್ಪ ಆತ್ಮವಿಶ್ವಾಸದ ಮತ್ತೊಂದು ರೂಪ. ಕಡೆಗಣಿಸಿ ಬಿಸಾಡಿದ ಹಸುವಿನ ಕರುವೊಂದನ್ನು ಅಸಾಮಾನ್ಯವಾಗಿ ಬೆಳೆಸಿ ವೈರಿಗಳ ಹುಟ್ಟಡಗಿಸುವ ಜುಂಜಪ್ಪನ ಛಲವಾಗಲೀ, ಇಷ್ಟಾಗಿಯೂ ಅದನ್ನು 'ಬಡಮೈಲ' ಎಂದೇ ಕರೆಯುವ 'ಧ್ವನಿ'ಯಾಗಲಿ ಈ ಕಾವ್ಯದ ಒಂದು ಪ್ರಮುಖ ಅಂಶ. ಸ್ವತಃ ಜುಂಜಪ್ಪ ಕೂಡ ಎಷ್ಟೇ ಪರಾಕ್ರಮಿಯಾದರೂ ಒಬ್ಬ ಬಡವ ಎನ್ನುವ ಮಾತು ಸುಳ್ಳಲ್ಲ. ಅವನು ಅನೇಕ

PDF created with pdfFactory Pro trial version www.pdffactory.com

ಹುಲ್ಲುಗಾವಲುಗಳನ್ನು ಗೆಲ್ಲುತ್ತಾನೆ. ಚೇಳೂರ ದೊರೆಗಳನ್ನು ಗೆಲ್ಲುತ್ತಾನೆ. ಶ್ರೀಮಂತರಾದ ತನ್ನ ಸೋದರ ಮಾವಂದಿರ ಕುತಂತ್ರವನ್ನು ಬಯಲು ಮಾಡುತ್ತಾನೆ. ಇಷ್ಟೆಲ್ಲದರ ನಡುವೆಯೂ ಅವನೊಬ್ಬ ಅನಾಥನಂತೆಯೇ ಗೋಚರಿಸುತ್ತಾನೆ. ಆದರೆ ಅವನ ಛಲ, ಆತ್ಮವಿಶ್ವಾಸ ಹಾಗೂ ತಾಳ್ಮೆ ಹಾಗೂ ವೃತ್ತಿಯಲ್ಲಿನ ಪ್ರಾಮಾಣಿಕತೆ ಅವನನ್ನು ನಾಯಕನನ್ನಾಗಿಸಿವೆ. ಕಾಡುಗೊಲ್ಲರು ತಮ್ಮನ್ನು ಜುಂಜಪ್ಪನ ಜೊತೆಗೆ ಸಮೀಕರಿಸಿಕೊಳ್ಳುತ್ತಾರೆ. ಆದ್ದರಿಂದಲೇ ಅವನೊಬ್ಬ ಸಾಂಸ್ಕೃತಿಕ ವೀರನಾಗಿ ನಮ್ಮ ಮುಂದಿದ್ದಾನೆ.

ಬಹುಶಃ ಮೂಲದಲ್ಲಿ ಶೈವರಾಗಿದ್ದ ಕಾಡುಗೊಲ್ಲರು ನಂತರದ ಅವಸ್ಥಾಂತರಗಳಲ್ಲಿ ವೈಷ್ಣವರಾಗಿರುವಂತೆ ಕಾಣುತ್ತದೆ. ಇವರ ದೈವಗಳಾದ 'ಸಿತ್ತರುಲಿಂಗ' ಮತ್ತು 'ಕಾಟಮುಲಿಂಗ'(ಚಿತ್ರದೇವರು, ಕಾಟುಮದೇವರು) ಶಿವನ ಅಪೇಕ್ಷೆಯಂತೆ ಭೂಲೋಕಕ್ಕೆ ಬಂದವರು. ಇವರು ಭೂಮಿಗೆ ಬಂದಾಗ ಇವರ ಬಂಗಾರದ ರಥವನ್ನು ಕಸಿದುಕೊಳ್ಳಲು ಯತ್ನಿಸುವ ಬ್ರಾಹ್ಮಣನಿಗೆ ಇವರು ಕಲಿಸುವ ಪಾಠ ತುಂಬ ಮಾರ್ಮಿಕವಾಗಿದೆ. ಈ ಇಬ್ಬರು ದೇವರ ನಂತರ ಕಾಡುಗೊಲ್ಲರ ದೈವವಾಗಿ ಪೂಜಿಸಲ್ಪಡುತ್ತಿರುವ ಜುಂಜಪ್ಪ ಕೂಡ ವೀರಭದ್ರನ ಅವತಾರ ಎಂದೇ ಅವರು ನಂಬುತ್ತಾರೆ. ಹಾಗೆಯೇ ಜುಂಜಪ್ಪನನ್ನು ಶ್ರೀಕೃಷ್ಣನ ವ್ಯಕ್ತಿತ್ವದ ಸಂವಾದಿ ರೂಪವಾಗಿ ಕೂಡ ಕಾಣುತ್ತಾರೆ. ಅವನ ಸೋದರ ಮಾವಂದಿರನ್ನು ಅವನು ನಾಶ ಮಾಡುವ ಆಶಯ ಮಹಾಭಾರತದ ಕೃಷ್ಣನನ್ನೇ ನೆನಪಿಸುತ್ತದೆ. ಈಗಿನ ಕಾಡುಗೊಲ್ಲರು ಸಂಪೂರ್ಣವಾಗಿ ವೈಷ್ಣವೀಕರಣಕ್ಕೊಳಗೊಂಡಿದ್ದು ವೆಂಕಟರಮಣನನ್ನು ಪೂಜಿಸುತ್ತಾರೆ ಹಾಗೆಯೇ ಬೆಟ್ಟದ ರಂಗಸ್ವಾಮಿ ಕೂಡ ಇವರ ದೇವರು. ಕಾವ್ಯದಲ್ಲಿ ಬರುವ ಗೌರಸಂದ್ರದ ಮಾರಿಯ ಪಾತ್ರವಂತೂ ಅನೇಕ ಸಂದರ್ಭಗಳಲ್ಲಿ ಜುಂಜಪ್ಪನ ರಕ್ಷಣೆಗಾಗಿಯೇ ಬರುವಂತಿದೆ. ಹಾಗೆಯೇ ಇವತ್ತಿಗೂ ಕೂಡ ಕಾಡುಗೊಲ್ಲರು ಮಾರಿಯ ಆರಾಧನೆಯನ್ನು ಅಷ್ಟೇ ನಿಷ್ಠೆಯಿಂದ ಮಾಡುತ್ತಾರೆ. ಒಟ್ಟಿನಲ್ಲಿ ಕಾಡುಗೊಲ್ಲರ ಈ ಕಾವ್ಯ ಅವರ ಸಂಕೀರ್ಣವಾದ ಆರಾಧನಾ ಪದ್ಧತಿಗಳನ್ನು, ಅವರ ಜೀವನ ವೈವಿಧ್ಯವನ್ನು ಹಾಗೆಯೇ ಒಂದು ಜನವರ್ಗದ ಆಶೋತ್ತರಗಳನ್ನು ಬಿಂಬಿಸುವ ಒಂದು ಅತ್ಯಂತ ಮಹತ್ವದ ಸಾಂಸ್ಕೃತಿಕ ಪುರಾಣವಾಗಿ ನಮ್ಮನ್ನು ಸೆಳೆಯುತ್ತದೆ."

ಕಾಡುಗೊಲ್ಲರ ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡಿರುವ ಕಾಳೇಗೌಡ ನಾಗವಾರ ಅವರು ಅವರ ದೈವಾರಾಧನೆಯ ಒಳವಿವರಗಳನ್ನು ಹೀಗೆ ದಾಖಲಿಸುತ್ತಾರೆ. "ಹಂಚಿಹುಲ್ಲು ಬಾದೆಹುಲ್ಲು ಮತ್ತು ಸೋಗೆಗರಿಗಳಲ್ಲಿ ತಾವು ವಾಸ ಮಾಡುವ ಗುಡಿಸಲುಗಳನ್ನು ನಿರ್ಮಿಸುವ ಕಾಡುಗೊಲ್ಲರು ತಮ್ಮ

ದೇವಾಲಯಕ್ಕಾಗಿ ಒಂದು ಪುಟ್ಟ ಗುಡಿಸಲು ಕಟ್ಟಿರುತ್ತಾರೆ; ಇದನ್ನು ಗುಬ್ಬ ಎಂದು ಕರೆಯಲಾಗುತ್ತದೆ. ಪ್ರಸ್ತುತ ಹಟ್ಟಿಯಲ್ಲಿ ಈ ಬಗೆಯ ಮೂರು ಗುಬ್ಬಗಳು ಇದ್ದು, ಅವುಗಳಲ್ಲಿ ಜುಂಜಪ್ಪ, ಚಿತ್ತದೇವರು, ಎತ್ತಪ್ಪ ಮತ್ತು ಕಣತಿ ತಮ್ಮಪ್ಪ ದೇವರುಗಳಿವೆ. ಬೀಗ ಹಾಕಲಾಗಿರುವ ಪೆಟ್ಟಿಗೆಯಲ್ಲಿ ಜುಂಜಪ್ಪನು ಬಳಸುತ್ತಿದ್ದನೆನ್ನಲಾದ ವಸ್ತುಗಳನ್ನು ಯಾರೊಬ್ಬರಿಗೂ ತೋರಿಸದಂತೆ ಇಡುತ್ತಾರೆ. ಈ ಗುಬ್ಬಗಳ ಸುತ್ತಲೂ ಮುಳ್ಳಿನ ಬೇಲಿಯನ್ನು ಹಾಕಲಾಗಿದೆ. ಜುಂಜಪ್ಪನ ಗುಬ್ಬದ ಬಾಗಿಲಿನ ಹಿತ್ತಾಳೆ ತಗಡಿನಲ್ಲಿ ಜುಂಜಪ್ಪನ ಪುರಾಣದಲ್ಲಿ ಕಾಣಿಸಿಕೊಳ್ಳುವ ಆತನ ಬಡಮೈಲ ಎಂಬ ಹೋರಿಯ ಚಿತ್ರ ಮತ್ತು ಎತ್ತಯ್ಯನ ಪುರಾಣದಲ್ಲಿನ ಸೀಳುತಲೆ ಚಿಕ್ಕರಂಭೆ ಎಂಬ ಪ್ರಖ್ಯಾತ ಹಸುವಿನ ಚಿತ್ರಗಳು ಇವೆ. ಜುಂಜಪ್ಪನು ನಿಜರೂಪದಲ್ಲಿ ಕಂಡರೆ, ನೋಡಿದವರು ಸುಟ್ಟು ಹೋಗುವರೆಂದು, ಆತನು ಸರ್ಪದ ರೂಪದಲ್ಲಿ ಕಾಣಿಸಿಕೊಳ್ಳುತ್ತಾನೆಂದು ಈ ಜನ ನಂಬುತ್ತಾರೆ. ತನ್ನ ಸೋದರ ಮಾವಂದಿರ ವಿರುದ್ಧ ಜುಂಜಪ್ಪನು ಹೋರಾಡಿ ಚಿಕ್ಕವಯಸ್ಸಿನಲ್ಲೇ ಮಡಿಯುತ್ತಾನೆ. ಅತ್ಯಂತ ಸಾಹಸಿಯೂ, ನಿಯಮಬದ್ಧನೂ, ನ್ಯಾಯಪಕ್ಷಪಾತಿಯೂ ಆದವನು ಅವಿವಾಹಿತ ನಾಗಿದ್ದು ದನಗಾಹಿ ಬದುಕಿನ ಕಷ್ಟಗಳನ್ನೆಲ್ಲ ಸಂಪೂರ್ಣವಾಗಿ ಅನುಭವಿಸಿ ಮೇಲೇರುತ್ತಾನೆ. ಜುಂಜಪ್ಪನ ಇಷ್ಟೇಲ್ಲ ಯಶಸ್ಸನ್ನು ಕಂಡು ಸಹಿಸಲಾರದೆ, ಕರುಬಿದ ಆತನ ಸೋದರಮಾವಂದಿರು ಅನೇಕ ರೀತಿಯಲ್ಲಿ ಕಿರುಕುಳಗಳನ್ನು ನೀಡಿ, ಕೊನೆಗೆ ಪ್ರೀತಿಯಿಂದಲೆಂಬಂತೆ ಮನೆಗೆ ಔತಣಕ್ಕೆ ಆಹ್ವಾನಿಸಿ ಉಗ್ರವಾದ ವಿಷವಿಕ್ಕಿ ಕೊಲ್ಲುತ್ತಾರೆ. ವಿಷವುಂಡ ಜುಂಜಪ್ಪ ಘೋರಯಾತನೆಯೊಡನೆ ತಾನು ಸಾಯುವ ಮುನ್ನ ಸೋದರ ಮಾವಂದಿರು ಮತ್ತು ಅವರ ವಾಸಸ್ಥಾನದ ಇಡೀ ಕಂಬೇರಹಟ್ಟಿಯನ್ನು ನಾಶ ಮಾಡುತ್ತಾನೆ. ಹೀಗೆ ಜುಂಜಪ್ಪನು ಕಾಡುಗೊಲ್ಲರ ಬದುಕಿನಲ್ಲಿ ಸಾಂಸ್ಕೃತಿಕ ವೀರನೂ ಪುರಾಣದ ದೇವತೆಯಾಗಿ ಒಟ್ಟಿಗೇ ಪೂಜಿಸಲ್ಪಡುತ್ತಿದ್ದಾನೆ. ಜುಂಜಪ್ಪ ಮತ್ತು ಆತನ ತಂದೆ ಕೆಂಗುರಿ ಮಲ್ಲಪ್ಪನು ವಾಸಿಸುತ್ತಿದ್ದ ಕಳುವಾರಹಳ್ಳಿ ಹಟ್ಟಿಯು, ಇಲ್ಲಿ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡಿರುವ ಬೇವಿನಹಳ್ಳಿ ಗೊಲ್ಲರಹಟ್ಟಿಯ ಸಮೀಪದಲ್ಲಿಯೇ ಇದೆ. ಜುಂಜಪ್ಪ ನಾಶ ಮಾಡಿದ 'ಕಂಬೇರಹಾಳು' ಪ್ರದೇಶವನ್ನು ಕೂಡ ಸ್ಪಷ್ಟವಾಗಿ ಗುರುತಿಸಲಾಗುತ್ತದೆ. ಜೊತೆಗೆ ಕಳೂರಹಳ್ಳಿ ಎಂದು ಈಗ ಕರೆಯಲಾಗುವ ಊರಿನ ಎಲ್ಲೆಯಲ್ಲಿ ಜುಂಜಪ್ಪನ ಗುಡ್ಡೆ(ಸಮಾಧಿ) ಇದೆ. ಈತನ ಹೆಸರಿನ ೯೮ ಗದ್ದುಗೆಗಳು ಕಾಡುಗೊಲ್ಲರು ವಾಸಿಸುವ ಬೇರೆ ಬೇರೆ ಪ್ರದೇಶಗಳಲ್ಲಿ ಇದ್ದರೂ ಸಹ ಅವುಗಳಲ್ಲೆಲ್ಲ ಈ ಸಮಾಧಿಗಳನ್ನು ಅತ್ಯಂತ ಗೌರವಗಳಿಂದ ಪೂಜಿಸುತ್ತಾರೆ. ಇಲ್ಲಿನ ಪೂಜೆ ಪುನಸ್ಕಾರಗಳಿಗೆಲ್ಲ ಈಗಿನ ಹಕ್ಕುದಾರರಾಗಿರುವ ಬೇವಿನಹಳ್ಳಿ ಗೊಲ್ಲರಹಟ್ಟಿಯ ಗೊಲ್ಲರು ದೀವಳಿಗೆಯಲ್ಲಿ ಜುಂಜಪ್ಪನ ಹಬ್ಬದ ಸಮಯದಲ್ಲಿ ಪ್ರತಿವರ್ಷ ಕಾರ್ತೀಕ

PDF created with pdfFactory Pro trial version www.pdffactory.com

ಮಾಸದಲ್ಲಿ ಅಮಾವಾಸ್ಯೆಯ ನಂತರ ಬರುವ ಮೊದಲ ಸೋಮವಾರದಂದು ಜುಂಜಪ್ಪನ ಗುಡ್ಡೆಯಲ್ಲಿ ನಡೆಯುವ ವಿಶೇಷಪೂಜೆಗಾಗಿ ಕಾಡುಗೊಲ್ಲರ ಎಲ್ಲ ನೆಲೆಗಳಿಂದಲೂ ಬರುವ ಜನರು ಅಸಂಖ್ಯ ಪ್ರಮಾಣದಲ್ಲಿ ನೆರೆಯುತ್ತಾರೆ.

ಜುಂಜಪ್ಪನ ತಂದೆಯಾದ ಕೆಂಗುರಿ ಮಲ್ಲಪ್ಪನಿಗೆ ಕಳೂರಹಳ್ಳಿಯ ಕುಂಚಟಿಗರ ಕುಲದ ಅಳುವಿರವರ ಒಕ್ಕಲಿಗನಾದ ಹೊನ್ನಹಟ್ಟಿ ಅಲೇಗೌಡನು ಆಶ್ರಯವಿತ್ತು, ಆತನ ಅಲೆಮಾರಿ ಬದುಕಿಗೊಂದು ನೆಲೆಯನ್ನು ಒದಗಿಸುತ್ತಾನೆ. ಕೆಂಗುರಿ ಮಲ್ಲಪ್ಪನು ಇಲ್ಲಿ ಬಂದು ನೆಲೆಯೂರಿದ ಮೇಲೆ ಆತ ಮತ್ತು ಅಲೇಗೌಡನ ಪರಸ್ಪರ ಕೃತಜ್ಞತೆಯ ಭಾವದಿಂದ ತುಂಬಿದವರಾಗಿ ಗೌರವಾದರಗಳೊಡನೆ ಬದುಕುತ್ತಾರೆ. ಈ ನಡುವೆ ಕೆಂಗುರಿ ಮಲ್ಲಪ್ಪನ ಮಗನಾದ ಕಲಿವೀರ ಜುಂಜಪ್ಪನು ಬೆಳಗುವ ನಕ್ಷತ್ರದಂತೆ ಕೀರ್ತಿವಂತನಾಗಿ ಬೆಳೆದು, ಸುತ್ತೆಲ್ಲರ ಗಮನ ಸೆಳೆದು, ಹದುನಾರರ ಹರೆಯದಲಿದ್ದಾಗಲೇ ಥಟ್ಟನೆ ಮೃತಪಟ್ಟಾಗ, ಲೋಕಾಶ್ಚರ್ಯಕ್ಕೆ ಒಳಗಾಗಿ ದೇವತೆಯೆಂದು ಪೂಜಿಸಲ್ಪಡುತ್ತಾನೆ. ಕೆಂಗುರಿ ಮಲ್ಲಪ್ಪ ಮತ್ತು ಜುಂಜಪ್ಪನಿಗೆ ಆಶ್ರಯದಾತನೂ, ಅಭಿಮಾನಿಯೂ ಆಗಿದ್ದ ಹೊನ್ನಹಟ್ಟಿ ಅಲೇಗೌಡನು ಕಳೂರಹಳ್ಳಿಯಲ್ಲಿ ಜುಂಜಪ್ಪನ ಗುಡಿ ಕಟ್ಟಿಸಿ, ಪೂಜಾದಿ ನಿತ್ಯನೇಮಗಳೆಲ್ಲವೂ ನಿರಂತರವಾಗಿ ಸಲ್ಲುವಂತೆ ವ್ಯವಸ್ಥೆ ಮಾಡುತ್ತಾನೆ. ಕ್ರಮೇಣ ಜುಂಜಪ್ಪ ದೇವರು ಇನ್ನಷ್ಟು ಪ್ರಸಿದ್ಧನಾಗಿ ಗೊಲ್ಲರೂ ಸೇರಿದಂತೆ ಎಲ್ಲ ಜಾತಿಯ ಭಕ್ತಾದಿಗಳ ಸಂಖ್ಯೆ ದಿನೇದಿನೇ ಹೆಚ್ಚಾಗತೊಡಗುತ್ತದೆ. ದೇವರು ಮತ್ತು ಪೂಜಾದಿಗಳ ಒಡೆತನ ಮಾತ್ರ ಕಳೂರಹಳ್ಳಿ ಕುಂಚಟಿಗರ ಕುಲದ ಹೊನ್ನಹಳ್ಳಿ ವಂಶಸ್ಥರಲ್ಲೇ ಇರುತ್ತದೆ. ಈ ಒಡೆತನವು ನಮ್ಮದಾಗಬೇಕೆಂದು ಗೊಲ್ಲರು ತೀರ್ಮಾನಿಸುತ್ತಾರೆ. ಸುಮಾರು ೧೫೦ ವರ್ಷಗಳ ಹಿಂದೆ ಬೇವಿನಹಳ್ಳಿ ಗೊಲ್ಲರ ಹಟ್ಟಿಯ ಕಾಡುಗೊಲ್ಲರು ಪಕ್ಕದ ಕಳೂರಹಳ್ಳಿಯ ಎಲ್ಲೆಯಲ್ಲಿರುವ ಜುಂಜಪ್ಪ ಮತ್ತು ಕರಿಯಮ್ಮ ದೇವತೆಯನ್ನು ಗದ್ದಲದ ನಡುವೆ ಗುಟ್ಟಾಗಿ ಅಪಹರಿಸಿ, ಒಡವೆ–ವಸ್ತ್ರಗಳ ಸಮೇತ ತಮ್ಮ ಹಟ್ಟಿಗೆ ತರುತ್ತಾರೆ. ಈ ಬಗ್ಗೆ ಅನೇಕ ವರ್ಷಗಳ ಕಾಲ ಕೋರ್ಟಿನಲ್ಲಿ ವ್ಯಾಜ್ಯ ನಡೆಯುತ್ತದೆ.

"ಜುಂಜಪ್ಪ ನಮ್ಮವನು, ಒಡವೆಗಳು ನಮ್ಮವೇ ಆತ ಈಗ ನಮ್ಮಲ್ಲಿಯೇ ಇದ್ದಾನೆ"– ಎಂಬೆಲ್ಲ ಗೊಲ್ಲರ ಬೇಡಿಕೆಗಳ ಮತ್ತು ಸುಳ್ಳುಸಾಕ್ಷ್ಯಗಳ ಮೇರೆಗೆ ೩೧–೫–೧೮೮೬ರಂದು ನ್ಯಾಯಾಲಯದ ತೀರ್ಪು ಗೊಲ್ಲರ ಪರವಾಗಿ ಹೊರಬೀಳುತ್ತದೆ; ಜೊತೆಗೆ ಜುಂಜಪ್ಪನ ಸಮಾಧಿಯ ಮೇಲಿನ ಮೊದಲ ಪೂಜೆ ಮಾತ್ರ ಯಥಾಪ್ರಕಾರ ಅಳುವಿನೋರ ಒಕ್ಕಲಿಗರಲ್ಲೇ ಉಳಿಯುತ್ತದೆ(ಈ ಎಲ್ಲ ವಿರಸದ ಪ್ರಕರಣ ನಡೆದು ಸುಮಾರು ನೂರು ವರ್ಷಗಳೇ ಆಗಿರುವುದರಿಂದ ಬೇವಿನಹಳ್ಳಿ ಗೊಲ್ಲರಹಟ್ಟಿ ಮತ್ತು ಕಳೂರಹಳ್ಳಿಯ ಜನರ ನಡುವೆ ಯಾವುದೇ ಹಳೆಯ ಮನಸ್ತಾಪ ಅಥವಾ

ಕಹಿ ಈಗ ಉಳಿದಿಲ್ಲ. ಅಲ್ಲದೆ, ದೇವರನ್ನು ಉದ್ದೇಶಪೂರ್ವಕವಾಗಿ ಕದ್ದು ತಂದುದ್ದರ ಬಗ್ಗೆ ಈ ಎರಡು ಗುಂಪುಗಳ ಹೇಳಿಕೆಗಳು ಮಾತ್ರ ಒಂದೇ ಆಗಿವೆ.).

ಪಕ್ಕದ ಕಳೂರಹಳ್ಳಿ ಗ್ರಾಮದ ಹೊನ್ನಹಟ್ಟಿ ಅಲೇಗೌಡನು ಕಟ್ಟಿಸಿದ ಜುಂಜಪ್ಪನ ಗುಡಿ ಇದ್ದ ಸ್ಥಳವನ್ನು ಈಗಲೂ ಕಾಣಬಹುದಾಗಿದೆ. ಗುಡಿಯು ಬಿದ್ದು ಹೋಗಿದ್ದು, ತೇರಿನ ಎರಡು ಕಬ್ಬಿಣದ ಗಾಲಿಗಳು ಅಲ್ಲಿವೆ. ಗುಡಿಯ ಪಕ್ಕದಲ್ಲೇ ಅಲೇಗೌಡರ ವಂಶಸ್ಥರು ಈಗಲೂ ವಾಸಿಸುತ್ತಿದ್ದಾರೆ: ಜುಂಜಪ್ಪನ ಗುಡ್ಡೆ(ಸಮಾಧಿ)ಯಲ್ಲಿ ಬೆಳಗಿನ ಪೂಜೆಯನ್ನು ಇವರೇ ನೆರವೇರಿಸುತ್ತಾರೆ, ಮಧ್ಯಾಹ್ನದ ಪೂಜೆಯು ಗೊಲ್ಲರದಾಗಿದೆ.

ಕಳೂರಹಳ್ಳಿಯಲ್ಲಿ ಗೊಲ್ಲರು ಈಗ ಒಂದು ಕುಳವೂ ಇಲ್ಲ. ಅಲ್ಲಿ ಒಲೆಹೂಡಿ ಅಡಿಗೆ ಮಾಡಿದಲ್ಲಿ ತಾವೆಲ್ಲ ಸುಟ್ಟುಹೋಗುತ್ತೇವೆನ್ನುವ ನಂಬಿಕೆ ಈ ಜನರಲ್ಲಿ ಪ್ರಬಲವಾಗಿದೆ. ಈ ಊರಿನ ಹೊಲಗಳಿರುವ ಬಯಲಲ್ಲಿ ಹುಣಸೆಮರದ ಕೆಳಗೆ ಜುಂಜಪ್ಪನ ತಾಯಿ ಚೆನ್ನಮ್ಮನ ಸಮಾಧಿ ಇದೆ. ಈ ಸಮಾಧಿ ಇರುವ ಹೊಲವನ್ನು 'ದೇವರ ಹೊಲ' ಎಂದು ಕರೆಯಲಾಗುತ್ತದೆ. ಜುಂಜಪ್ಪನ 'ಗುಡ್ಡೆ'ಯ ಎದುರಿಗೆ ಅವನ ಬಸವನ ಸಮಾಧಿ ಇದೆ. ಹಿಂಭಾಗಕ್ಕೆ ಸುಮಾರು ಎರಡು ಫರ್ಲಾಂಗ್ ದೂರದಲ್ಲಿ ಜುಂಜಪ್ಪನ ತಂದೆ ಕೆಂಗುರಿ ಮಲ್ಲಪ್ಪನ ಸಮಾಧಿ ಇದೆ. ಕಲ್ಲನಕುಂಟೆ ಚಿತ್ರದೇವರ ಪೌಳಿಯಿಂದ ಜುಂಜಪ್ಪನ ಗುಡ್ಡೆಗೆ ಬರುವ ದಾರಿಯಲ್ಲಿ ಜುಂಜಪ್ಪನ ಜೂಲುನಾಯಿಯ ಸಮಾಧಿ ಇದೆ. ಇದರ ಮೇಲೆ ದಾರಿಯಲ್ಲಿ ಹೋಗುವವರೆಲ್ಲ ತಲಾ ಒಂದೊಂದು ಕಲ್ಲನ್ನು ನೆನಪಿಗಾಗಿ ಎಸೆಯುತ್ತಾ ಹೊರಟು ಅದು ದೊಡ್ಡದಾಗಿ ಬೆಳೆಯುತ್ತಿದೆ. ಜುಂಜಪ್ಪನ 'ಗುಡ್ಡೆ'ಯ ಸುತ್ತಲೂ ದನಕರು ಮತ್ತು ಹೋರಿಗಳನ್ನು ವಾದ್ಯ ಸಮೇತ ಸುತ್ತು ಹಾಕಿಸುವುದು ವಾಡಿಕೆಯಾಗಿದೆ. ಹೀಗೆ ಮಾಡುವುದರಿಂದ ಅವುಗಳಿಗೆ ಯಾವುದೇ ಬಗೆಯ ಆಪತ್ತು ಅಥವಾ ರೋಗರುಜಿನಗಳು ತಟ್ಟುವುದಿಲ್ಲವೆಂದು ಅವರು ನಂಬಿದ್ದಾರೆ."

೨.೯. ಬೆಳದಿಂಗಳ ಸಿರಿ

ಏಪ್ರಿಲ್ ತಿಂಗಳಿನ ಚೆಲ್ಲಿದ ತಿಂಗಳು ಬೆಳಕಿನಲ್ಲಿ ನಡೆಯುವ ಹಿರಿಯಡ್ಕದ 'ಸಿರಿ' ಜಾತ್ರೆ ಇಡೀ ದಕ್ಷಿಣ ಭಾರತದಲ್ಲಿಯೇ ವೈಶಿಷ್ಟ್ಯಪೂರ್ಣವಾದದ್ದು. ಸಾವಿರಾರು ಹೆಂಗಸರು ಸಾಮೂಹಿಕವಾಗಿ ದೈವಾವೇಶಕ್ಕೆ ಒಳಗಾಗುವ ಮತ್ತು ಇಡೀ ರಾತ್ರಿ ಕುಣಿದು, ತನ್ನ ಮನದಾಳದ ಎಲ್ಲ ದುಗುಡವನ್ನು ಹೊರಚೆಲ್ಲುವ ರಾತ್ರಿ ಅದು. ದಕ್ಷಿಣ ಭಾರತದಲ್ಲೇನು ಬಹುಶಃ ಇಡೀ ದೇಶದಲ್ಲಿ ಈ ರೀತಿ ಆಚರಣೆ ಇರಲಾರದು. ಬಹುತೇಕ ಕೆಳವರ್ಗದ ಜನ ಮತ್ತು ಬುಡಕಟ್ಟು ವರ್ಗ ಮಾತ್ರ ಆಚರಿಸುವ ಈ ಸಿರಿ ದಕ್ಷಿಣ ಕನ್ನಡದ ಕೆಲವೆಡೆ ಈಗಲೂ ಆಚರಣೆಯಲ್ಲಿರುವ ಅಳಿಯ ಸಂತಾನದ ಮೂಲದ ಮಾತೃಪ್ರಧಾನ ಕುಟುಂಬದ ಹಿನ್ನೆಲೆಯುಳ್ಳದ್ದು. ಈ ಆಚರಣೆ ಅರ್ಥವಾಗಬೇಕಾದರೆ ಒಂದು ಕಥೆ ಹೇಳಲೇಬೇಕಾಗುತ್ತದೆ.

PDF created with pdfFactory Pro trial version www.pdffactory.com

"ತಮಿಳುನಾಡಿನ ಉತ್ತರ ಭಾಗಕ್ಕೆ ಸೇರಿದ ಲಂಕೆಲೋಕನಾಡಿನ ಸತ್ಯನಾಥಪುರದಲ್ಲಿ ಬೆರ್ಮ ಆಳ್ವ ಎಂಬ ವಯೋವೃದ್ಧನು ವಿಶಾಲವಾದ ಕೃಷಿ ಯೋಗ್ಯ ಜಮೀನು ಹಾಗೂ ಅನೇಕ ಒಕ್ಕಲುಗಳನ್ನು ಹೊಂದಿದ್ದನು. ಶ್ರೀಮಂತನಾಗಿದ್ದರೂ ಅವನಿಗೆ ಸಂತಾನ ಭಾಗ್ಯವಿರಲಿಲ್ಲ. ಮುಂದೆ ನಿಂತು ಬೆಂಬಲಿಸುವ ಗಂಡು ಸಂತಾನವಿಲ್ಲ. ಹಿಂದೆ ನಿಂತು ಬೆಂಬಲಿಸುವ ಹೆಣ್ಣು ಸಂತಾನವಿಲ್ಲ. ಪಕ್ಕದಲ್ಲಿ ನಿಲ್ಲಬಲ್ಲ ಅಳಿಯಂದಿರಿಲ್ಲ, ಕಾಲ ಕೆಳಗೆ ಓಡಾಡಿಕೊಂಡಿರುವ ಮೊಮ್ಮಕ್ಕಳಿಲ್ಲ. ಹೀಗೆ ತನ್ನ ದುಸ್ಥಿತಿಯನ್ನು ಕುರಿತು ಹಲುಬುತ್ತಾ ತನಗೆ ಮಕ್ಕಳಾದರೆ ತನ್ನ ಸಂಪತ್ತನ್ನೆಲ್ಲಾ ದಾನಧರ್ಮಗಳಿಗೆ ವಿನಿಯೋಗಿಸುವುದಾಗಿ ಹರಕೆ ಹೊರುತ್ತಾನೆ. ಒಂದು ದಿನ ಬ್ರಹ್ಮದೇವನು ಅವನ ಮನೆಯ ಬಾಗಿಲಿಗೆ ಬೇಡುವವನ ರೂಪದಲ್ಲಿ ಬರುತ್ತಾನೆ ಅವನ ನಿಜ ಸ್ವರೂಪವನ್ನು ತಿಳಿದ ಬೆರ್ಮ ಆಳ್ವನು ತನ್ನ ಮನೆ ಕೆಲಸದಾಕೆಯಲ್ಲಿ ಭಿಕ್ಷೆ ನೀಡುವಂತೆ ಆಜ್ಞಾಪಿಸುತ್ತಾನೆ. ಕೆಲಸದಾಕೆಯ ಕೈಯಿಂದ ಭಿಕ್ಷೆಯನ್ನು ನಿರಾಕರಿಸಿದ ಅವನು ಯಜಮಾನನೇ ಖುದ್ದಾಗಿ ಬಂದು ನೀಡಬೇಕೆಂದು ಒತ್ತಾಯಿಸುತ್ತಾನೆ. ಬೆರ್ಮ ಆಳ್ವನು ಬಂದಾಗ ಅವನು ಖಿನ್ನವಾಗಿರುವುದರ ಕಾರಣ ಕೇಳುತ್ತಾನೆ. ಬೆರ್ಮ ಆಳ್ವನು ತನ್ನ ವ್ಯಥೆಯ ಕಾರಣವನ್ನು ಮುಂದಿರಿಸಿದಾಗ ತಿರುಕ ರೂಪಿಯಾದ ಬ್ರಹ್ಮನು "ಮೂಲ ಸ್ಥಾನವನ್ನು ಮರೆತು ಕುಲದೈವಗಳ ಗುಡಿಗಳನ್ನು ಪಾಳಬೀಳುವಂತೆ ಮಾಡಿ ಬಾಂಧವರ ಬೇಡಿಕೆಗಳನ್ನು ಪೂರೈಸದಿರುವ ಕಾರಣ ಕುಲದೈವಗಳು ಸಂತಾನ ಫಲವನ್ನು ನೀಡಿಲ್ಲ." ಎಂಬುದಾಗಿ ತಿಳಿಸಿದ. ಸಮಸ್ಯೆಯ ಪರಿಹಾರಕ್ಕಾಗಿ ಕುಟುಂಬದ ಮೂಲಸ್ಥಾನ ಹಾಗೂ ಗುಡಿಗಳ ಜೀರ್ಣೋದ್ಧಾರ ಮಾಡುವಂತೆ ಬೆರ್ಮ ಆಳ್ವನಿಗೆ ಸೂಚಿಸಿದ.

ಬೆರ್ಮ ಆಳ್ವ ಅಪಾರ ಸಂಖ್ಯೆಯ ತನ್ನ ಒಕ್ಕಲು ಪರಿವಾರವನ್ನು ಕೂಡಿಕೊಂಡು ಲಂಕೆಲೋಕನಾಡಿಗೆ ಬಂದು ಹಾಳುಬಿದ್ದ ತನ್ನ ಕುಟುಂಬದ ದೈವಗಳ ಗುಡಿಗಳನ್ನು ನವೀಕರಿಸಿದ. ತನ್ನ ಕುಲ ದೈವವಾದ ಬೆರ್ಮರ್ ಮತ್ತು ಇತರ ದೈವಗಳಿಗೆ ಶ್ರದ್ಧಾ ಭಕ್ತಿಗಳಿಂದ ಉತ್ಸವಾಚರಣೆಗಳನ್ನು ನಡೆಸಿದ. ಬೆರ್ಮರಿಗೆ ಅಡಿಕೆ ಮರದ ಹೂಗೊಂಚಲನ್ನು ಸಮರ್ಪಿಸಿ ತನ್ನ ಈವರೆಗಿನ ಮರೆವನ್ನು ಮನ್ನಿಸಬೇಕಾಗಿ ಬೇಡಿಕೊಂಡ. ಅಷ್ಟರಲ್ಲಿ ಆ ಬಂಗಾರದ ಹಾಳೆ ಬಿಚ್ಚಿಕೊಂಡು ಅದರಲ್ಲಿ ಹೆಣ್ಣು ಶಿಶುವೊಂದು ಕಾಣಿಸಿಕೊಂಡಿತು. ಸಂತೋಷ ಹಾಗೂ ಸತ್ಯದ ಪ್ರತೀಕವಾಗಿ ಜನಿಸಿದ ಆ ಮಗುವಿಗೆ 'ಸಿರಿ' ಎಂಬುದಾಗಿ ನಾಮಕರಣ ಮಾಡಿದ.

ಲೋಕಸಾಮಾನ್ಯ ಬೆಳವಣಿಗೆಯನ್ನು ಮೀರಿ ಅತಿಶಯತೆಯನ್ನು ಮೆರೆದ ಸಿರಿಗೆ ಐದು ವರ್ಷವಾಗುತ್ತಲೇ ಮದುವೆಗೆ ಏರ್ಪಾಡು ನಡೆಸತೊಡಗಿದರು. ಕಡೆಯಂಗಡಿಯ ಕಾಂತ ಆಳ್ವನಿಗೆ ಭರ್ಮ ಆಳ್ವನು ಸಾಕಷ್ಟು ಭೂಮಿ ಕಾಣಿ

ನಗನಾಣ್ಯಗಳ ಕೊಡುಗೆಯೊಂದಿಗೆ ಸಿರಿಯನ್ನು ಮದುವೆ ಮಾಡಿಕೊಟ್ಟನು. ಆದರೆ ಕಾಂತ ಆಳ್ವನು ಈ ಹಿಂದೆಯೇ ವೇಶ್ಯೆಯೊಬ್ಬಳ ಸಂಪರ್ಕ ಇರಿಸಿಕೊಂಡಿದ್ದನು. ಸಾಧ್ವಿಯಾದ ಸಿರಿಯ ಸಹಜಸೌಂದರ್ಯ ಹಾಗೂ ಸತಿತ್ವಗಳು ವೇಶ್ಯೆಯಲ್ಲಿ ನೆಟ್ಟ ಕಾಂತ ಆಳ್ವನ ಮನಸ್ಸನ್ನು ಹಿಂದೆಗೆಸುವಲ್ಲಿ ವಿಫಲವಾದವು. ಆತ ಸಿರಿಯ ಸಕಲ ಸಂಪತ್ತನ್ನು ಆ ವೇಶ್ಯೆಗಾಗಿ ಪೋಲು ಮಾಡಿದ. ಸಿರಿಯು ಗರ್ಭವತಿಯಾದಾಗ ಆಕೆಯನ್ನು ಮೊದಲ ಹೆರಿಗೆಗಾಗಿ ತವರು ಮನೆಗೆ ಕಳುಹಿಸಿಕೊಡುವ ಸಂದರ್ಭದಲ್ಲಿ ಗೌರವಿಸಿ ಆಚರಿಸಬೇಕಾದ ಸೀಮಂತವನ್ನು ಆತ ಏರ್ಪಡಿಸಲಿಲ್ಲ. ಎಂಟನೇ ತಿಂಗಳಿಗೆ ಸಿರಿ ತವರಿಗೆ ಬಾರದೆ ಹೋದಾಗ ಬೆರ್ಮ ಆಳ್ವನೇ ಬಂದು ವಿಚಾರಿಸುತ್ತಾನೆ. ಸೀಮಂತವನ್ನು ನಡೆಸುವಂತೆ ಕಾಂತ ಆಳ್ವನನ್ನು ಒತ್ತಾಯಿಸಿ, ಸಿರಿಯ ಸೀಮಂತದ ಸೀರೆಯ ಬೆಲೆಯನ್ನು ತಾನೇ ನೀಡುತ್ತಾನೆ. ಕಾಂತ ಆಳ್ವನು ಒಂದು ಹೊಸ ಸೀರೆಯನ್ನು ಕೊಂಡುಕೊಂಡು ಅದನ್ನು ತನ್ನ ಸೂಳೆಗೆ ನೀಡಿ ಅವಳ ಒಂದು ಕಡು ಬಣ್ಣದ ಸೀರೆಯನ್ನು ಸಿರಿಗೆ ಉಡುಗೊರೆಯಾಗಿ ತರುತ್ತಾನೆ. ಗಂಡನ ತಾತ್ಸಾರ ಹಾಗೂ ಅವಜ್ಞೆಯಿಂದ ಅವಮಾನಿತಳಾದ ಸಿರಿ ಒಬ್ಬಂಟಿಯಾಗಿ ತವರಿಗೆ ಬರುತ್ತಾಳೆ. ತನ್ನಲ್ಲಿ ಹುಟ್ಟಿದ ಗಂಡು ಮಗುವಿಗೆ 'ಕುಮಾರ' ಎಂಬುದಾಗಿ ಹೆಸರಿಡುತ್ತಾಳೆ. ಹೆತ್ತ ಮಗುವನ್ನು ಕಂಡು ತನ್ನ ಮಗುವೆಂದು ಮಾನ್ಯ ಮಾಡಲು ಅದರ ತಂದೆ ಬಾರದೆ ಹೋದಾಗ ಕುಪಿತಳಾದ ಸಿರಿ 'ತನ್ನ ಗಂಡನ ಭೂಮಿ ಬಂಜರು ಬೀಳಲಿ, ಕುಟುಂಬ ನಿಸ್ಸಂತತಿಯಾಗಲಿ' ಎಂದು ಶಪಿಸುತ್ತಾಳೆ.

ಬೆರ್ಮ ಆಳ್ವನು ಮಗುವಿನ ಮುಖ ನೋಡಿದಲ್ಲಿ ಅವನು ಒಡನೆಯೇ ಸಾಯುತ್ತಾನೆ. ತಂದೆ ಮನೋರೋಗಿಯಾಗುತ್ತಾನೆ. ತಾಯಿಗೆ ದೂರದ ಊರುಗಳಲ್ಲಿ ಭಿಕ್ಷೆ ಬೇಡುವ ದುಸ್ಥಿತಿ ಬರುತ್ತದೆ! ಎಂಬುದಾಗಿ ಜೋಯಿಸರೊಬ್ಬರು ಮಗು ಹುಟ್ಟಿದ ಸಂದರ್ಭದಲ್ಲಿ ನುಡಿಯುತ್ತಾರೆ. ಒಂದು ದಿನ ಕುಮಾರನನ್ನು ಮೀಯಿಸುತ್ತಿದ್ದ ಸಿರಿ, ತುಂಡು ಬಟ್ಟೆಗಾಗಿ ಆ ಕೋಣೆಯಿಂದ ಹೊರಬರುತ್ತಾಳೆ. ಮಗು ಕುಮಾರನೊಬ್ಬನೇ ಇದ್ದ ಬಚ್ಚಲಿನ ಬಾಗಿಲ ಬಳಿ ಹಾದುಹೋಗುತ್ತಿದ್ದ ಬೆರ್ಮ ಆಳ್ವನಿಗೆ ಅಳುತ್ತಿದ್ದ ಮಗುವಿನ ದನಿ ಕೇಳಿಸುತ್ತದೆ. ಸಹಜ ಸೆಳೆತದಿಂದ ಕೋಣೆ ಒಳಗೆ ಹೋದ ಅಜ್ಜ ಮಗುವನ್ನು ಎತ್ತಿಕೊಂಡು ಪ್ರೀತಿಯಿಂದ ಎದೆಗೆ ಒತ್ತಿಕೊಳ್ಳುತ್ತಾನೆ. ಸಿರಿ ಹೊರ ಬಂದಾಗ ನೋಡುತ್ತಾಳೆ ದುಃಖದ ಆವೇಗದಲ್ಲಿ ಸಿರಿ ಮಗುವನ್ನು ಎತ್ತಿಕೊಂಡು ಗೊತ್ತು ಗುರಿಯಿಲ್ಲದೆ ಅಲೆಯ ತೊಡಗುತ್ತಾಳೆ. ಸಿರಿ ಈಗಾಗಲೇ ಗಂಡನೊಂದಿಗೆ ವಿಚ್ಛೇದನ ಮಾಡಿಕೊಂಡಿದ್ದಾಳೆ. ತನ್ನ ಬದುಕಿನ ಏಕೈಕ ಬಂಧು ಅಜ್ಜನನ್ನು ಕಳೆದುಕೊಂಡಿದ್ದಾಳೆ. ಬದುಕು ಭಾಗ್ಯಗಳೆಲ್ಲವನ್ನು ಆಕೆಯ ಗಂಡನ ವೇಶ್ಯೆ ಪೋಲು ಮಾಡಿದ್ದಾಳೆ.

PDF created with pdfFactory Pro trial version www.pdffactory.com

ಸಿರಿ ತೆಂಕನಾಡಿನತ್ತ ಸಾಗುತ್ತಿರಲು ಇಬ್ಬರು ಕ್ಷತ್ರಿಯ ವೀರರು ಆಕೆಗೆ ಎದುರಾಗುತ್ತಾರೆ. ಮೊದಲಿಗೆ ಅವರಿಬ್ಬರೂ ಈಕೆಯನ್ನು ಬಯಸಿದರೂ ಆಕೆ ಸಾಧ್ವಿ ಹೆಣ್ಣು ಎಂದು ಗುರುತಿಸಿಕೊಳ್ಳುತ್ತಾರೆ. ಆಕೆ ಅವರಿಬ್ಬರ ನೆರವನ್ನು ಯಾಚಿಸಿ ತನ್ನನ್ನು ಸಹೋದರಿಯಾಗಿ ಕಾಣಬೇಕೆಂದು ಭಿನ್ನವಿಸಿಕೊಳ್ಳುತ್ತಾಳೆ. "ನೀವು ನನಗಿಂತ ಹಿರಿಯರಾಗಿದ್ದರೆ ತಂಗಿ ಎಂದು ಕರೆಯಿರಿ. ನನಗಿಂತ ಕಿರಿಯರಾಗಿದ್ದರೆ ಅಕ್ಕ ಎಂದು ಕರೆಯಿರಿ" ಎನ್ನುತ್ತಾಳೆ. ಅವಳು ಕೊಟ್ರಪಾಡಿಯ ಕೊಡ್ಸರಾಳ್ವರನಲ್ಲಿಗೆ ಆಕೆಯನ್ನು ಕರೆತಂದು ಮದುವೆ ಯಾಗುವಂತೆ ಒತ್ತಾಯಿಸುತ್ತಾರೆ. 'ಕೈಪತ್ತಾವುನಿ' ಎಂಬ ವಿಧಿ ಪ್ರಕಾರ ಮದುವೆ ಯಾಗುವುದರಿಂದ ಆ ಹಿಂದೆ ಮದುವೆಯಾಗಿದ್ದರೂ ದೋಷ ತಟ್ಟುವುದಿಲ್ಲ ಎಂಬುದಾಗಿ ಕೊಂಡ್ಸರಾಳ್ವ ಸಮಾಧಾನ ಹೇಳುತ್ತಾನೆ. ವರದಕ್ಷಿಣೆ, ಬ್ರಾಹ್ಮಣ ಊಟೋಪಚಾರ, ಬಂಧುವರ್ಗದವರ ಅನುಮತಿ ಯಾವುದೂ ಈ ತರದ ಮದುವೆಗೆ ಬೇಕಿಲ್ಲ.

ಕೊಂಡ್ಸರಾಳ್ವನಿಗೆ ಆ ಹಿಂದೆಯೇ ಮದುವೆಯಾಗಿತ್ತು. ಕೈ ಹಿಡಿದ ಹೆಂಡತಿಗೆ ಗಂಡನ ಮದುವೆಯ ಇರಾದೆ ತಿಳಿದೊಡನೆ ತಾವು ಹೊತ್ತಿಸಿಬಿಟ್ಟ ದೀಪವನ್ನು ಹೊಸದಾಗಿ ಮನೆ ಸೇರುವ ಹೆಣ್ಣು ಸಿರಿ ಕಂಡೊಡನೆ ಅವಳ ಕಣ್ಣು ಕುರುಡಾಗಲೀ ಎಂದು ಶಾಪವೀಯುತ್ತಾಳೆ. ಕೊಂಡ್ಸರಾಳ್ವನಿಗೆ ಮದುವೆಯಾದ ಸಂಗತಿ ಹಾಗೂ ಇದೀಗ ಮರುಮದುವೆಯಿಂದ ಮೊದಲ ಹೆಂಡತಿಯ ಮನಸ್ಸು ಕುಪಿತಗೊಳ್ಳ ಬಹುದಾದನ್ನು ಸಿರಿ ತನ್ನ ಅಂತರದೃಷ್ಟಿಯಿಂದ ಅರಿತುಕೊಳ್ಳುತ್ತಾಳೆ. ಕೈ ಹಿಡಿದ ಹೆಂಡತಿ ಈ ಮರುಮದುವೆಗೆ ಸಮ್ಮತಿ ಸೂಚಿಸಿ ತನ್ನನ್ನು ಮನೆಯೊಳಗೆ ಹಿಡಿದು ಕರೆದುಕೊಂಡು ಬಾರದೆ ತಾನು ಬರಲಾರೆನೆಂದು ಸಿರಿ ಕೊಂಡ್ಸರಾಳ್ವನಿಗೆ ಹೇಳುತ್ತಾಳೆ. ಸಿರಿಯ ಪ್ರಾಮಾಣಿಕತೆ ಹಾಗೂ ರುಜುಬುದ್ಧಿ ಜೊತೆಗೆ ಅವಳ ದಯನೀಯ ಸ್ಥಿತಿಯನ್ನು ಕಂಡ ಮೊದಲ ಹೆಂಡತಿ ಸಿರಿಯನ್ನು ಮನೆಗೆ ಸ್ವಾಗತಿಸಿ ತನ್ನ ಸವತಿಯಾಗಿ ಸ್ವೀಕರಿಸುತ್ತಾಳೆ.

ಕೊಂಡ್ಸರಾಳ್ವನ ಮನೆಯಲ್ಲಿ ಸಿರಿ ಎರಡನೇ ಬಸುರಿಯಾಗುತ್ತಾಳೆ. ಹೆರಿಗೆಯ ಕಾಲಕ್ಕಿಂತ ಸ್ವಲ್ಪ ಮೊದಲು ಆಕೆ ಕಾಡಿನ ಪಕ್ಕದಲ್ಲಿರುವ ಒಂದು ಅಡಿಕೆ ಮರದ ತೋಟದೆಡೆಗೆ ಹೋಗಿ ಅಲ್ಲಿ ವೀಳೆದೆಲೆಯ ಹಾಸಿಗೆ ರಚಿಸುತ್ತಾಳೆ. ಮುಸ್ಸಂಜೆಯ ಹೊತ್ತಿಗೆ ಸಿರಿ ಅಲ್ಲಿ ಹೆಣ್ಣು ಮಗುವೊಂದಕ್ಕೆ ಜನ್ಮ ವೀಯುತ್ತಾಳೆ. ಆ ಮಗುವಿಗೆ 'ಸೊನ್ನೆ' ಎಂದು ಹೆಸರಿಡುತ್ತಾಳೆ. ಸಿರಿ ತಾನೇ ತನ್ನ ಹೆರಿಗೆಯ ಮಾಸನ್ನು ಮಣ್ಣಿನೊಳಕ್ಕೆ ಹುಗಿದಿರಿಸುತ್ತಾಳೆ. ಆದರೆ ರಾತ್ರಿ ಹೊತ್ತು ನರಿಗಳು ಮಣ್ಣನ್ನು ಕೆದಕಿ ಅದನ್ನು ಹೊರಗೆಳೆದು ತಿನ್ನುತ್ತವೆ. ಇನ್ನು ಮುಂದಕ್ಕೆ ನರಿಗಳು ಆ ಪ್ರದೇಶದ ಸಮೀಪಕ್ಕೆ ಹೋಗದಂತೆ ಶಪಿಸುತ್ತಾಳೆ. ಮುಂಜಾವದಲ್ಲಿ ಆಕೆ ಆ ಪ್ರದೇಶದಲ್ಲಿ ಭತ್ತ, ತೆಂಗು,

ಧಾನ್ಯ, ವೀಳೆಯದೆಲೆಗಳು ಸಮೃದ್ಧವಾಗಿ ಬೆಳೆಯಲಿ ಎಂದು ಹರಸುತ್ತಾಳೆ. ಅನಂತರ ಸಿರಿ ಅದೃಶ್ಯಳಾದರೂ ಆಕೆ ದೈವವಾಗಿ ಆ ಪ್ರದೇಶವನ್ನು ಸಂರಕ್ಷಿಸುತ್ತಾಳೆ ಎಂದು ನಂಬಲಾಗುತ್ತದೆ.

ಚಂದ್ರಯ್ಯ ಹೆಗ್ಗಡೆಯ ಮನೆಯಲ್ಲಿ ಸೊನ್ನೆ ಬೆಳೆದು ಮುಂದೆ ಉರ್ಕಿತೋಟದ ಗುರುಮಾರ್ಲನೊಂದಿಗೆ ಮದುವೆಯಾಗುತ್ತಾಳೆ. ತಮಗೆ ಮಕ್ಕಳಾದರೆ ಬ್ರಹ್ಮನಿಗೆ ದೊಡ್ಡ ಹರಕೆ ಮಾಡುವುದಾಗಿ ದಂಪತಿಗಳು ಮನಸ್ಸಿನಲ್ಲಿ ಸಂಕಲ್ಪಿಸಿಕೊಳ್ಳುತ್ತಾರೆ. ಸೊನ್ನೆ ಬೇಗನೇ ಬಸುರಿಯಾಗಿ 'ಅಬ್ಬಗದಾಗರ' ಎಂಬ ಅವಳಿ ಮಕ್ಕಳ ತಾಯಿಯಾಗುತ್ತಾಳೆ. ಕೌಟುಂಬಿಕ ಸುಖ–ಸಂತೋಷದ ಸಾಗರದಲ್ಲಿ ಅವರು ಬೆರ್ಮನಿಗೆ ಹೇಳಿಕೊಂಡ ಹರಕೆಯನ್ನು ಮರೆಯುತ್ತಾರೆ. ಸೊನ್ನೆ ಹಾಗೂ ಗುರುಮಾರ್ಲರಿಗೆ ಬೆರ್ಮ ಭವಿಷ್ಯ ನುಡಿಯುವವನ ರೂಪದಲ್ಲಿ ಕಾಣಿಸಿಕೊಳ್ಳುತ್ತಾನೆ. "ಆಡಿದ ಹರಕೆಯನ್ನು ಮರೆತುದಾದರೆ ಮುಂದೆ ತೀವ್ರ ವ್ಯಥೆಯನ್ನು ಅನುಭವಿಸಬೇಕಾಗಿ ಬರಬಹುದು. ಪರಮಾತ್ಮ ನೀಡಿದುದನ್ನು ಹಿಂದಕ್ಕೆ ಪಡೆಯುವ ಸಾಧ್ಯತೆಯೂ ಇದೆ. ಪರಸ್ಪರ ಜಗಳವೇ ಮಕ್ಕಳ ಪತನಕ್ಕೆ ಹೇತುವಾಗಬಹುದು" ಎನ್ನುತ್ತಾನೆ. ಈ ಮಾತುಗಳಿಂದ ಸಿಟ್ಟುಗೊಂಡ ಗುರುಮಾರ್ಲ ಭವಿಷ್ಯ ನುಡಿದವನನ್ನು ಅಬ್ಬರಿಸಿ ಹೊರಟು ಹೋಗುವಂತೆ ಸೂಚಿಸುತ್ತಾನೆ.

ಸೊನ್ನೆ ಹಾಗೂ ಗುರುಮಾರ್ಲನು ಒಂದು ದಿನ ತಮ್ಮ ಅವಳಿ ಮಕ್ಕಳಿಗೆ ಜಗಳವಾಡದಿರಿ ಎಂದು ಎಚ್ಚರಿಸಿ ಮನೆಯಿಂದ ಹೊರಟು ಹೋಗುತ್ತಾನೆ. ಆಟದ ಸಂದರ್ಭಗಳಲ್ಲಿ ಅನೇಕ ಬಾರಿ ಪರಸ್ಪರ ಜಗಳವಾಡುತ್ತಿರುವುದನ್ನು ಬಲ್ಲ ತಂದೆ–ತಾಯಂದಿರು ಹೆಣ್ಣು ಮಕ್ಕಳ ಪ್ರೀತಿಯ ಆಟದ ಚೆನ್ನಮಣೆಯನ್ನು ಭದ್ರವಾದ ಪೆಟ್ಟಿಗೆಯೊಳಗಿರಿಸಿ ಬೀಗ ಹಾಕಿ ಹೋಗುತ್ತಾರೆ. ಅಷ್ಟರಲ್ಲಿ ಬೆರ್ಮನು ಬ್ರಾಹ್ಮಣನ ರೂಪದಲ್ಲಿ ಬಂದು ಬೀಗದೊಳಗಿನ ಚೆನ್ನೆಮಣೆಯನ್ನು ಮಕ್ಕಳಿಗೆ ತೆಗೆದುಕೊಟ್ಟು ಆಟವಾಡುವಂತೆ ಸೂಚಿಸುತ್ತಾನೆ. ಆಟವಾಡುತ್ತಾ ಮಕ್ಕಳೊಳಗೆ ಜಗಳ ಹತ್ತಿತು. ಒಬ್ಬಳು ಮತ್ತೊಬ್ಬಳ ತಲೆಗೆ ಚೆನ್ನೆಮಣೆಯಿಂದ ಹೊಡೆಯುತ್ತಾಳೆ. ಆಕೆ ಕುಸಿದು ಬಿದ್ದು ತೀರಿಕೊಳ್ಳುತ್ತಾಳೆ. ತನ್ನ ಕೈಯಿಂದ ಘಟಿಸಿ ಹೋದ ಅತ್ಯಂತ ಹೇಯವಾದ ಕೃತ್ಯದಿಂದ ನೊಂದು ಹಾಗೂ ತಂದೆ ತಾಯಿಯರನ್ನು ಎದುರಿಸುವ ಭಯದಿಂದ ತತ್ತರಿಸಿ ಇನ್ನೊಬ್ಬ ಹೆಣ್ಣು ಮಗಳು ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ತಂದೆ ತಾಯಂದಿರು ಮರಳಿದಾಗ ಆ ಬ್ರಾಹ್ಮಣನು ದೇವರಿಗೆ ಹೇಳಿಕೊಂಡ ಹರಕೆಯನ್ನು ಮರೆತ ಫಲವಾಗಿ ಅವನು ನೀಡಿದುದನ್ನು ಮತ್ತೆ ಹಿಂದಕ್ಕೆ ಸೆಳೆದುಕೊಂಡುದಾಗಿ ಹೇಳುತ್ತಾನೆ".[೧೨]

PDF created with pdfFactory Pro trial version www.pdffactory.com

ಈ ಕಥೆಯ ಹಿನ್ನೆಲೆಯಲ್ಲಿ ನಡೆಯುವ ದಕ್ಷಿಣ ಕನ್ನಡದ 'ಸಿರಿ' ಎಂಬ ಈ ವಿಶಿಷ್ಟ ಆಚರಣೆಯನ್ನು ಈಗಾಗಲೇ ವಿದ್ವಾಂಸರನೇಕರು ಅಧ್ಯಯನ ಮಾಡಿದ್ದಾರೆ. ಅವರಲ್ಲಿ ಅಮೆರಿಕಾದ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಪೀಟರ್ ಜೆ ಕ್ಲಾಸ್ ಪ್ರಮುಖರು. ಇತ್ತೀಚೆಗೆ ನಮ್ಮ ನಾಡಿನ ವಿದ್ವಾಂಸರನೇಕರು ಈ ಬಗೆಗಿನ ವೈಜ್ಞಾನಿಕ ಅಧ್ಯಯನದಲ್ಲಿ ತೊಡಗಿದ್ದಾರೆ. ಜಾತ್ರೆ ನಡೆಯುವ ಹಿರಿಯಡ್ಕದ ವೀರಭದ್ರ ದೇವಸ್ಥಾನದ ಆವರಣಕ್ಕೆ ನಾವು ಹೋದಾಗ ಗುಡಿಯ ವಿಶಾಲ ಅಂಗಳದ ತುಂಬ ಮಹಿಳೆಯರ ಗುಂಪುಗಳು. ಸಾಮಾನ್ಯವಾಗಿ ಬಿಳಿ, ಕೆಂಪು ಮತ್ತು ಅರಿಶಿನ ಬಣ್ಣದ ಉಡುಪುಗಳೇ ಹೆಚ್ಚಾಗಿದ್ದ ಮಹಿಳೆಯರು ಮುಡಿಬಿಚ್ಚಿ ಕೈಯಲ್ಲಿ ಸಿಂಗಾರ(ಅಡಿಕೆ ಹೊಂಬಾಳೆ) ಹಿಡಿದು ಯಾವುದೋ ವಿಧಿಗಾಗಿ ಕಾಯುತ್ತಾ ನಿಂತಿದ್ದರು. ಇವರಲ್ಲಿ ಹರೆಯದ ಮದುವೆಯೂ ಆಗದ ತರುಣಿಯರಿಂದ ಹಿಡಿದು ಎಪ್ಪತ್ತರ ವಯಸ್ಸಿನ ವೃದ್ಧೆಯರೂ ಇದ್ದರು. ಹರೆಯದವರ ಕಣ್ಣುಗಳಲ್ಲಿ ಒಂದು ರೀತಿಯ ಅಪರಿಚಿತ ವಾತಾವರಣದ ಬೆದರಿಕೆ ಇದ್ದರೆ, ವೃದ್ಧೆಯರು ಇದೆಲ್ಲವೂ ತುಂಬ ಸಾಮಾನ್ಯ ಎನ್ನುವಂತೆ ಲೀಲಾಜಾಲವಾಗಿದ್ದರು. ಇವರ ನಡುವೆ ಅಲ್ಲಲ್ಲಿ ಕೆಂಪುವಸ್ತ್ರ ತೊಟ್ಟ ಗಂಡಸರೂ ಇದ್ದರು. ಈಗಾಗಲೇ ಇವರೆಲ್ಲರೂ ದೇವಸ್ಥಾನದ ಆವರಣದಲ್ಲಿಯ ಕಲ್ಯಾಣಿಯಲ್ಲಿ ಸ್ನಾನ ಮಾಡಿ ಮಡಿವಸ್ತ್ರ ಧರಿಸಿ ಮೈದುಂಬಲು ಬಂದು ನಿಂತ ಸಿರಿ, ಸೊನ್ನೆ, ಅಬ್ಬಗದಾರಗರು ಎಂಬುದು ಅನಂತರ ತಿಳಿಯಿತು.

ಆಚರಣೆಯ ಮೊದಲ ಹಂತದಲ್ಲಿ ಸಿರಿಯ ಕಥೆಯನ್ನು ನಿಧಾನವಾಗಿ ನಿರೂಪಿಸುವ ತುಳು ಪಾಡ್ದನಗಳನ್ನು ಹಾಡತೊಡಗುವುದು. ಕಥೆಯನ್ನು ನಿರೂಪಿಸುತ್ತಾ ಹೋದಂತೆ ಸಿರಿಯ ಕಷ್ಟ–ಕಾರ್ಪಣ್ಯ, ಅವಳ ಗಂಡನ ಅನಾದಾರ, ಅವನ ಅಸಭ್ಯತೆ ಕೇಳುವವರ ಮನ ತುಂಬುತ್ತಾ ಹೋಗುತ್ತದೆ. ಮೈ ಅದುರ ತೊಡಗುತ್ತದೆ. ಹಾಗೇ ಇಡೀ ದೇಹ ತೂಗತೊಡಗುತ್ತದೆ. ಕ್ರಮೇಣವಾಗಿ ಆವೇಶ ಹೆಚ್ಚುತ್ತಾ ಹೋದಂತೆ ಪಾಡ್ದನ ಗೌಣವಾಗಿ ಕಿರುಚಾಟ ಹೆಚ್ಚಾಗುತ್ತದೆ. ನಾಲಗೆ ಮತ್ತು ತುಟಿಯ ನಡುವೆ ಟಿಸ್ ಟಿಸ್... ಶಬ್ದದೊಡನೆ ಏಕಾಏಕಿ ಕೂಗಿಕೊಳ್ಳುವ ಕುಣಿಯುವ ಅವಸ್ಥೆಗೆ ತಲುಪುತ್ತಿದ್ದಂತೆ ಇನ್ನೇನು ಬೀಳುವ ಸ್ಥಿತಿಗೆ ಬಂದ ಮಹಿಳೆಯರನ್ನು ಸಂಬಂಧಿಕರು ಅಥವಾ ಬೆಂಗಾವಲಿಗೆ ಬಂದವರು ಹಿಡಿಯುತ್ತಾರೆ. ಹಿಡಿದಷ್ಟು ತಡೆದಷ್ಟು ಆವೇಶ ಹೆಚ್ಚುತ್ತದೆ. ದೈವಾವೇಶಕ್ಕೆ ಒಳಗಾದವರು ಹೊಸಬರಾದರೆ, ವೃದ್ಧೆಯರು ಅಥವಾ ಗುಂಪಿನ ನಡುವೆ ಅಲ್ಲಲ್ಲಿ ಕಂಡುಬರುವ ಕೆಂಪುವಸ್ತ್ರದ ಗಂಡಸರು ಅಥವಾ 'ಕುಮಾರ'ರು ಸಿರಿಯ ಮೊದಲ ಗಂಡನ ಮಗ) ಹೊಸಬಳನ್ನು ಪ್ರಶ್ನಿಸುತ್ತಾಳೆ ಯಾರು ನೀನು? ಸಿರಿಯೋ, ಸೊನ್ನೆಯೋ; ಅಬಗ್ಗವೋ, ದಾರಗವೋ? ಹೇಳು ಎಂದು ಒತ್ತಾಯಿಸುತ್ತಾರೆ. ಬಡಪೆಟ್ಟಿಗೆ ಹೇಳದಿದ್ದರೆ ಬೆದರಿಸಿ ಕೇಳುತ್ತಾರೆ. ಅವಳು

ಯಾವುದಾದರೊಂದು ಹೆಸರೇಳುತ್ತಾಳೆ. ಅಲ್ಲಿಗೆ ಇವಳು ಇಂಥವಳೇ ಎಂದು ನಿರ್ದಿಷ್ಟಪಡಿಸಲಾಗುತ್ತದೆ. ಮುಂದಿನ ವರ್ಷದಿಂದ ಖಾಯಂ ಆಗಿ ಬರುವಂತೆ ಪ್ರಯಾಣ ಮಾಡಲಾಗುತ್ತದೆ. ಆವೇಶ ಬಂದು ಕೂಗಿ ಬಾಗಿ ಸುಸ್ತಾಗಿ ಕೆಲವರು ಹಾಗೇ ನೆಲಕ್ಕೆ ಒರಗುತ್ತಾರೆ. ಮತ್ತೆ ಸಿರಿ ಐತಿಹ್ಯದ ಪಾಡ್ದನವನ್ನು ಹಾಡಲಾಗುತ್ತದೆ. ಹಾಡುತ್ತಾ ಹೋದಂತೆ ಬಸವಳಿದು ಬಿದ್ದ ಹೆಣ್ಣು ಮತ್ತೆ ಜೀವ ತುಂಬಿಕೊಳ್ಳ ತೊಡಗುತ್ತಾಳೆ. ಮತ್ತೆ ಅದೇ ರೀತಿಯ ಆವೇಶಕ್ಕೆ ಒಳಗಾಗುತ್ತಾಳೆ. ಕೈಯಲ್ಲಿರುವ ಹಿಂಗಾರದ ಅಕ್ಕಿ ಉದುರುವವರೆಗೆ ದೇಹವನ್ನು ನುಲಿಯುತ್ತಾಳೆ. ವಿಕಾರವಾಗಿ, ಆದರೆ ಅದರಲ್ಲಿಯೂ ಲಯಬದ್ಧವಾಗಿ ಕಿರುಚುತ್ತಾ ತನ್ನ ಆಚರಣೆಯನ್ನು ಮುಂದುವರೆಸುತ್ತಾಳೆ.

ಈ ತೆರನಾದ ಆವೇಶಭರಿತ ಅಸ್ಪಷ್ಟ ನರ್ತನ ದೇವಸ್ಥಾನದ ಆವರಣದಲ್ಲಿ ಇಡೀ ರಾತ್ರಿ ನಡೆಯುತ್ತದೆ. ಸಾವಿರಾರು ಹೆಂಗಸರು ಅದೇ ದೈವತ್ವದ ನಿಶೆಯಲ್ಲಿ ಒರಳುತ್ತಾರೆ. ಇದೇನಿದು? ಯಾವ ಪಾಪಕ್ಕಾಗಿ ಅನ್ನಿಸುವ ಮಟ್ಟಿಗೆ ಅವರ ಬಗೆಗೆ ಕನಿಕರ ಮೂಡುತ್ತದೆ. ಇಂಥ ಸಂಪ್ರದಾಯಗಳು ಇನ್ನೂ ಈ ದೇಶದಲ್ಲಿ ಇವೆಯಲ್ಲಾ ಅನ್ನಿಸಿ ಮನಸ್ಸು ಮುದುಡುತ್ತದೆ. ಆದರೂ ಈ ಆಚರಣೆಯ ಹಿಂದಿನ ಕ್ರೂರ ಸತ್ಯ ನಮ್ಮನ್ನು ಕಲಕುತ್ತದೆ. ಪುರುಷಪ್ರಧಾನ ಸಮಾಜದಲ್ಲಿನ ಹೆಣ್ಣಿನ ಗೋಳಿನ ಪ್ರಕಟಣೆಗೆ ಈ ಆಚರಣೆ ಮಾಧ್ಯಮವಾಗಿದೆ ಎಂಬ ಕಟುಸತ್ಯದ ಅರಿವಾದಾಗ ಈ ಆಚರಣೆ ಕೇವಲ ಮೂಢನಂಬಿಕೆಯಾಗಿರದೆ ಸಾಮಾಜಿಕ ವ್ಯವಸ್ಥೆಯೊಂದರ ಪ್ರತೀಕವಾಗಿದೆ ಅನ್ನಿಸದೆ ಇರದು.

ಮೇಲಿನ ಕಥೆಯನ್ನೇ ನೋಡಿ. ತನ್ನ ತಂದೆಯ ಪ್ರೀತಿಯ ಪುತ್ತಳಿಯಾದ 'ಸಿರಿ' ಸಿರಿವಂತನಾದ ಗಂಡನನ್ನು ಕೂಡಿ ಸುಖದಿಂದ ಇರಲಾಗದೆ ಎಲ್ಲರ ಪ್ರೇಮದಿಂದ ವಂಚಿತಳಾದಳು. ಎರಡನೇ ಗಂಡನ ಮನೆಯಲ್ಲಿಯೂ ತನ್ನ ಹೆರಿಗೆಯನ್ನು ತಾನೇ ಮಾಡಿಕೊಳ್ಳಬೇಕಾದ ಪ್ರಸಂಗ ಬರುತ್ತದೆ. ಅನಂತರ 'ಸಿರಿ'ಯ ಮಗಳಾದ ಸೊನ್ನೆ ಕೂಡ ಯಾವುದೋ ಮನೆಯಲ್ಲಿ ಬೆಳೆಯಬೇಕಾಗುತ್ತದೆ. ಈ ಎಲ್ಲಾ ಅಂಶಗಳು ಹೆಣ್ತನದ ಹೃದಯವನ್ನು ಕಲಕುತ್ತವೆ. ಸಿರಿಯ ಹರಕೆ ಹೊತ್ತು ಬಂದ ಸಾವಿರಾರು ಹೆಂಗಸರಲ್ಲಿ ಬಹುಪಾಲು ಜನರ ಜೀವನವೂ ಇದೇ ಆಗಿರುತ್ತದೆ ಅಥವಾ ಗಂಡನಿದ್ದು ಪರಕೀಯ ಬಾಳು ಬಾಳುತ್ತಿರುತ್ತಾರೆ. ಸಿರಿ ಬೇರಾರೂ ಅಲ್ಲದೆ ತನ್ನವಳೇ ಆಗುತ್ತಾಳೆ. ಹಾಗಾದಾಗ ಸಿರಿ–ಸೊನ್ನೆಯರು ತಾವೇ ಆಗಿ ಪರಸ್ಪರ ಸಂತೈಸತೊಡಗುತ್ತಾರೆ. ಎಷ್ಟು ವಿಚಿತ್ರವಾಗಿರುತ್ತದೆಂದರೆ ಎಲ್ಲಿಂದಲೋ ಯಾವ ಯಾವ ಊರಿನಿಂದಲೋ ಅಪರಿಚಿತರಾಗಿ ಬಂದವರು ತಮ್ಮ ವೈಯಕ್ತಿಕತೆಯನ್ನು ಮರೆತು ಅಕ್ಕ–ತಂಗಿಯರ ಸಂಬಂಧ ಕಲ್ಪಿಸಿಕೊಂಡು ಪರಸ್ಪರ ತಬ್ಬಿಕೊಂಡು ಗೋಳಾಡುತ್ತಾ ಕಾಂತಾ ಆಳ್ವನಂಥ

PDF created with pdfFactory Pro trial version www.pdffactory.com

ಅನಾಗರಿಕರ ವರ್ತನೆಯ ಪ್ರತಿ ಗಂಡನನ್ನು ಹೀಯಾಳಿಸತೊಡಗುತ್ತಾರೆ. ಸಿರಿ ಪಾಡ್ದನವರೆಲ್ಲರ ನಡುವಿನ ಬೆಸುಗೆಯಾಗಿ ಅವರೆಲ್ಲರನ್ನೂ ಒಂದುಮಾಡುತ್ತದೆ. ಒಬ್ಬಳು ಸಿರಿಯಾಗಿ ಮಾತಾಡಿದರೆ ಇನ್ನೊಬ್ಬಳು ಸೊನ್ನೆಯಾಗಿ ಮಾತನಾಡುತ್ತಾಳೆ. ಹೀಗೆ ಒಬ್ಬೊಬ್ಬರಲ್ಲಿ ಸಂವಾದ ಏರ್ಪಡುತ್ತದೆ.

ಸಿರಿ ಜಾತ್ರೆಯನ್ನು ನೋಡಲು ಬರುವ ಇತರರಿಗೂ ಕೊರತೆಯೇನಿಲ್ಲ. ಸಿರಿ ಮೈಮೇಲೆ ಬಂದವರಿಗೆ ಶ್ರದ್ಧೆಯಿಂದ ಕೈಮುಗಿಯುತ್ತ ಹಿಂಗಾರು ಕೈಗಿಟ್ಟು ಹಲವು ಪ್ರಶ್ನೆ ಕೇಳುತ್ತಾರೆ. ತನ್ನ ಮಗಳು ಋತುಮತಿಯಾದದ್ದು, ಗಂಡ ಸಿಗದಿದ್ದು, ಅವಳಿಗೆ ಬಂದ ಕಾಯಿಲೆ ಗುಣಪಡಿಸುವ ಬಗೆ ಮುಂತಾಗಿ ಕೆಲವರ ನೋವಾದರೆ, ಇನ್ನು ಕೆಲವರಿಗೆ ಗಂಡ ಹೊಡೆದದ್ದು, ಕೈ ಮುರಿದದ್ದು, ಇತ್ಯಾದಿಗಳನ್ನು ಸಿರಿಗೆ ಒಪ್ಪಿಸುತ್ತಾರೆ. ಪರಿಹಾರ ಬೇಡುತ್ತಾರೆ ಆಗ ದೈವಾವೇಶದ ಸಿರಿ ಪರಿಹಾರ ಹೇಳುತ್ತಾಳೆ ಅಥವಾ ಅವಳನ್ನೇ ಸಿರಿಯನ್ನಾಗಿ ಪರಿವರ್ತಿಸುತ್ತಾಳೆ.

ಕೆಳವರ್ಗದ ಭೀತಿ, ಭಯ, ನೋವು–ಸಂಕಷ್ಟಗಳನ್ನು ಹೇಳಿಕೊಳ್ಳುವುದಾದರೂ ಯಾರ ಬಳಿ? ಅದಕ್ಕೆ ಒಂದು ದಿನವಾದರೂ ಸಿರಿ ಉತ್ಸವ ನೆರವಾಗುತ್ತದೆ. ದೇವರ ಪೂಜೆಯ ಹರಕೆಯ ನೆಪದಲ್ಲಿ ನಿಟ್ಟುಸಿರು ಹೊರಹೊಮ್ಮುತ್ತದೆ. ಹಳ್ಳಿಯ ಜನ ದುಗುಡ ದುಮ್ಮಾನಗಳನ್ನು ಕಣ್ಣೀರಿನೊಂದಿಗೆ ಬೆರೆಸಿ ಅಮ್ಮ ಸಿರಿಯೇ ನಿನ್ನ ನೋವು ನನ್ನ ನೋವೂ ಹೌದು ಎಂದು ಭಾವಿಸುತ್ತಾರೆ. ಇವರಿಗೆ ಸಿರಿ ಜೊತೆಗಾತಿಯಾಗುತ್ತಾಳೆ. ಹಾಗೆಯೇ ಸಿರಿಯ ನೋವಿಗೂ ಸಾವಿರಾರು ಜೊತೆಗಾರರು ಸಿಗುತ್ತಾರೆ. ನಿಟ್ಟುಸಿರು ಇಡೀ ಉತ್ಸವದುದ್ದಕ್ಕೂ ಹೊಮ್ಮುತ್ತಲೇ ಇರುತ್ತದೆ.

ದಕ್ಷಿಣ ಕನ್ನಡದ ಬಹುತೇಕ ಕೆಳವರ್ಗಗಳ ಹಾಗೂ ಬುಡಕಟ್ಟುಗಳ ಜನರೇ ಸೇರಿ ಆಚರಿಸುವ ಈ ಆಚರಣೆ ಈ ದೇಶದ ಬಾಯಿಕಟ್ಟಿದ ಮಹಿಳೆಯರಿಗೆ ಧ್ವನಿಯಾಗಲು ಒಂದು ಅವಕಾಶ ಮಾಡಿಕೊಡುತ್ತದೆ. ಇಡೀ ವರ್ಷ ಮನೆಯಲ್ಲಿ ಅಸಹಾಯಕರಾಗಿ ಮೂಕವೇದನೆ ಅನುಭವಿಸಿದ ಅವರು ವರ್ಷದ ಒಂದು ನಿರ್ದಿಷ್ಟ ದಿನದಲ್ಲಿ ತಮ್ಮ ಅಳಲನ್ನು ತೋಡಿಕೊಳ್ಳುವ ಮೂಲಕ ಪುರುಷ ಸಮಾಜದ ಕ್ರೌರ್ಯವನ್ನು ಬಯಲಿಗೆಳೆಯುತ್ತಾರೆ.

ದಕ್ಷಿಣ ಕನ್ನಡದ ಖ್ಯಾತ ಜಾನಪದ ವಿದ್ವಾಂಸ ಡಾ.ಅಮೃತ ಸೋಮೇಶ್ವರ ಈ ಆರಾಧನೆಯ ಬಗ್ಗೆ ಹೀಗೆ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

"ಹುಣ್ಣಿಮೆ, ಅಮಾವಾಸ್ಯೆಗಳಂಥ ನಿಸರ್ಗದ ಸಂಧಿ ಸ್ಥಿತಿಗಳಿಗೂ ಮನಸ್ಸಿನ ಸ್ಥಿತ್ಯಂತರಗಳಿಗೂ ಸಂಬಂಧವಿದೆಯಷ್ಟೇ? ಅನೇಕ ಆಚರಣೆಗಳು ಈ ದಿನಗಳಿಗೆ ಸಂಬಂಧಿಸಿ ಜರುಗುವುದನ್ನು ಗಮನಿಸಬಹುದು. ಸಿರಿ ಜಾತ್ರೆಯ ವೇಳೆ ಸಿರಿಗಳಿಗೂ ಕುಮಾರನಿಗೂ ಆರಾಧನೆ ಸಲ್ಲುತ್ತದೆ(ಅಕ್ಕೆ ಸಿರಿ ಅಥವಾ ಅಕ್ಕೆರಸು ಪೊಂಜೆದಿ,

ಸೊನ್ನೆಗಿಂಡೆ, ಅಬ್ಬಗದಾರಗ ಇವರು ಸಿರಿಗಳು. ಅಕ್ಕೆ ಸಿರಿಯ ಮಗ ಕೋಟಿಪೂಂಜ ಕುಮಾರನೆಂದೇ ಪ್ರಸಿದ್ಧನಾಗಿದ್ದಾನೆ. ನೂರಾರು ಸ್ತ್ರೀಯರಿಗೆ ಸಿರಿ ಬಳಗದ ಶಕ್ತಿಗಳೂ, ಕೆಲವರು ಪುರುಷರಿಗೆ ಕುಮಾರನೂ ಮೈದುಂಬಿ ಬರುವುದು ಈ ಉತ್ಸವದ ವಿಶೇಷವಾಗಿದೆ. ಸಾಮಾನ್ಯವಾಗಿ ಒಂದು ದೈವ ಶಕ್ತಿಯು ಏಕಕಾಲದಲ್ಲಿ ಹಲವರ ಮೇಲೆ ಆವೇಶಗೊಳ್ಳುವ ಪದ್ಧತಿ ಕಡಿಮೆ.(ವಿಷ್ಣುಮೂರ್ತಿ ದೈವದ ಒತ್ತೆಕೋಲದಲ್ಲಿ ಮಾತ್ರ ಅಂಥ ವಾಡಿಕೆ ಇದೆ.).

ಸಾಮಾನ್ಯವಾಗಿ ಬ್ರಾಹ್ಮಣೇತರ ವರ್ಗದವರು ಮಾತ್ರ ಸಿರಿಬಳಗದಿಂದ ಆವೇಶಕ್ಕೆ ಒಳಗಾಗುತ್ತಾರೆ(ಆದರೆ ಮೊದಲಿಗೇ ಅಬ್ಬಗದಾರಗರು ಆವೇಶಗೊಂಡದ್ದು ನಂದಳಿಕೆ ದೇವಸ್ಥಾನದ ಬ್ರಾಹ್ಮಣ ಅರ್ಚಕರ ಹೆಂಡತಿಯ ಮೇಲೆ ಎಂಬ ಐತಿಹ್ಯವೂ ಇದೆ!). ಅಪೂರ್ವಕ್ಕೆ ಕ್ರೈಸ್ತರಿಗೂ ಮುಸ್ಲಿಮರಿಗೂ ಸಿರಿಯ 'ಸೂಕೆ' ಇರುವುದುಂಟು. ಇತರ ದೈವ ಸೇವೆಗಳಿಗೆ ಧರಿಸುವಂಥ ಯಾವುದೇ ವೇಷಭೂಷಣ ಸಿರಿ ಮತಾಚರಣೆಯಲ್ಲಿ ಇರುವುದಿಲ್ಲ.

ಆವೇಶಗೊಂಡ ಸಿರಿ ಬಳಗ ಕೈಯಲ್ಲಿ ಅಡಿಕೆಯ ಹೂವನ್ನು ಹಿಡಿದುಕೊಂಡು ಮೈಯೊಲೆಯಿಸುತ್ತ ಸಿರಿಸಂಧಿಯನ್ನು ನಿರ್ದಿಷ್ಟ ಧಾಟಿಯಲ್ಲಿ ಭಾವೋದ್ರಿಕ್ತರಾಗಿ ಹಾಡುತ್ತಾರೆ. ಆವೇಶಗೊಂಡ ಚಿಕ್ಕ ಚಿಕ್ಕ ಗುಂಪುಗಳನ್ನು ಕುಮಾರನಿಂದ ಆವೇಶಗೊಂಡ ಪಾತ್ರಿ ನಿಯಂತ್ರಿಸುತ್ತಿರುತ್ತಾರೆ. ಸಿರಿಬಳಗದೊಂದಿಗೆ ಕುಮಾರನ ಹಾಡಿನ ರೂಪದ ಸಂವಾದ ನಡೆಯುತ್ತದೆ. ಈ ಹಾಡು ಮತ್ತು ಆವೇಶ ಇಡೀ ರಾತ್ರಿ ನಡೆಯುವುದುಂಟು.

ಸಿರಿಜಾತ್ರೆಯ ಹೊರತಾಗಿಯೂ ಭಿನ್ನ ಸಂದರ್ಭಗಳಲ್ಲಿ 'ದಳಿಯ ಹಾಕುವುದು' ಎಂಬ ಕಾರ್ಯಕ್ರಮದಲ್ಲೂ ಸಿರಿಯ ಸಂಧಿ–ಹೆಚ್ಚಾಗಿ ಸಂವಾದ ರೂಪದಲ್ಲಿ ಹಾಡಲ್ಪಡುತ್ತದೆ. 'ಸಿರಿದರ್ಶನ'ದಲ್ಲಿ 'ದೈವಿಕ ಆವೇಶ'ದ ವಿಚಾರ ಏನಿದ್ದರೂ ಸುಪ್ತಮನಸ್ಸಿನ ಕೆಲವೊಂದು ಅದುಮಿಟ್ಟ ಸಂಗತಿಗಳಿಗೆ ಇಲ್ಲಿ ವ್ಯಕ್ತರೂಪ ದೊರಕಿ ಒಂದು ಬಗೆಯ ಮಾನಸಿಕ ತಾಪ ಶಮನಕ್ರಿಯೆ ಜರುಗುತ್ತದೆ ಎಂಬ ಅಂಶ ಸುಸ್ಪಷ್ಟ. ಸ್ವಚ್ಛಂದವಾಗಿ ಹಾಡಿ ಕುಣಿಯುವುದು ಆದಿಮಾನವ ಯುಗದ ಮೂಲ ಪ್ರವೃತ್ತಿ. ಈ ಸಹಜಾಪೇಕ್ಷೆ ಇಲ್ಲಿ ದೈವಿಕ ಉಪಚಾರದ ರೂಪದಲ್ಲಿ ಕಾಣಿಸಿಕೊಳ್ಳುವಂತಿದೆ. ಸಾಮಾನ್ಯ ಪರಿಸರದಲ್ಲಿ, ಕೌಟಂಬಿಕ ಜೀವನದಲ್ಲಿ ಹೀಗೆ ಹಾಡುವಂತಿಲ್ಲ; ಕುಣಿಯುವಂತಿಲ್ಲ. ತನ್ನ ಮನಸ್ಸಿನ ಅಭಿಪ್ರಾಯಗಳನ್ನು ನಿಚ್ಚಳವಾಗಿ ಪ್ರಕಟಿಸುವಂತಿಲ್ಲ. ಆದರೆ, ದೈವಾವೇಶಗೊಂಡ ವ್ಯಕ್ತಿ ಒಂದು ಬಗೆಯ ಸ್ವತಂತ್ರ. ಹಲವಾರು ಜನ ಒಟ್ಟಿಗೇ ಆವೇಶಗೊಂಡಾಗ ಮೂಲತಃ ದುರ್ಬಲ ವ್ಯಕ್ತಿತ್ವದ ಬಡಪಾಯಿಗಳಿಗೆ ಒಂದು ನೈತಿಕ ಧೈರ್ಯ ಬಂದಂತಾಗಬಹುದು. ಆವೇಶ, ವಿಚಿತ್ರವರ್ತನೆ, ಸಂಧಿಯ ಆಲಾಪನೆ ಪ್ರತಿಭಟನೆಯ ಸಂಕೇತಗಳಾಗಬಹುದು.

PDF created with pdfFactory Pro trial version www.pdffactory.com

ಸಿರಿಯ ಆವೇಶಕ್ಕೊಳಗಾದವರಲ್ಲಿ ಎಲ್ಲರೂ ಸಂಧಿ ಹಾಡುವುದಿಲ್ಲ. ಕೆಲವರು ಕೇವಲ ಲಯಬದ್ಧವಾಗಿ ಮೈಯೊಲೆಯಿಸುತ್ತಿರುತ್ತಾರೆ. ಕೆಲವರು ಕೆಲವೇ ಸೊಲ್ಲು ಹಾಡುತ್ತಾರೆ. ಕೆಲವರು ಬರೇ ನಾರಾಯಣ ನಾರಾಯಣ ಎಂದಷ್ಟೇ ಆವರ್ತಿಸುತ್ತಿರುತ್ತಾರೆ. ಅನುಭವ ಹೆಚ್ಚು ಆದಂತೆ ಸಂಧಿ ಸರಾಗವಾಗಿ ಹೊಮ್ಮುತ್ತದೆಂದು ತಿಳಿಯುತ್ತದೆ.

ಇಲ್ಲಿ ಪ್ರಕಟವಾಗುವ ಅನೇಕ ಮಾಸಿಕ ಸಮಸ್ಯೆಗಳ ಮೂಲವನ್ನು ಸಿರಿಪಾಡ್ದನದಲ್ಲಿ ಗುರುತಿಸಬಹುದಾಗಿದೆ. ಮಕ್ಕಳ ಹಂಬಲ, ಸವತಿ ಮತ್ಸರ, ಅನೈತಿಕ ಸಂಬಂಧ, ಗಂಡನಿಂದ ತಿರಸ್ಕಾರ, ಅತ್ತೆ ಸೊಸೆಯರ ಸಂಘರ್ಷ, ಅಕ್ಕ ತಂಗಿಯರ ಮೇಲಾಟ, ಒಡೆತನದ ಆಕಾಂಕ್ಷೆ–ಇತ್ಯಾದಿ ವಿಚಾರಗಳೇ ಬೇರೆ ಬೇರೆ ರೀತಿಯಲ್ಲಿ ವಿವಿಧ ಮುಖಗಳನ್ನು ಪಡೆದು ದೈವಿಕ ಮುಖವಾಡ ಧರಿಸುವ ಸಾಧ್ಯತೆ ಇದೆ. ಇಂಥ ಆವೇಶ ಪ್ರಸ್ಥಾನವನ್ನು ಮನೋವೈಜ್ಞಾನಿಕ ಪೃಥಕ್ಕರಣಕ್ಕೆ ಒಳಪಡಿಸಿದಲ್ಲಿ ಅನೇಕ ಮನೋಚೇಷ್ಟೆಗಳ ರಹಸ್ಯಗಳು ಪ್ರಕಟವಾದವು.

ಕೋಟಿ ಚೆನ್ನಯ ಸಂಧಿಯಲ್ಲಿ ಚಿತ್ರಿತವಾದ ಸಮಸ್ಯೆಗಳಿಗಿಂತ ಭಿನ್ನವೂ ಸಂಕೀರ್ಣ ಮಯವೂ ಆದ ಸಮಸ್ಯೆಗಳು ಸಿರಿ ಸಂಧಿಯಲ್ಲಿವೆ. ಮಾನವ ಸಂಬಂಧಗಳ ವಿಲಕ್ಷಣತೆಯನ್ನು, ಸೂಕ್ಷ್ಮತೆಯನ್ನು ಈ ಸಂಧಿ ಅಡಿಗಡಿಗೂ ಸ್ಪರ್ಶಿಸುತ್ತಾ ಸಾಗುತ್ತದೆ. ಮಾತೃವಂಶೀಯ ಕುಟುಂಬಪದ್ಧತಿಯ ಒಡಲಲ್ಲಿ ರೂಪುಗೊಂಡ ಹೆಣ್ಣೊಬ್ಬಳು ಅದೇ ವ್ಯವಸ್ಥೆಯ ಧಾಳಿಯನ್ನೂ, ಇತರ ಸಮಸ್ಯೆಗಳ ಹಾವಳಿಯನ್ನೂ ದಿಟ್ಟೆಯಾಗಿ ಇದಿರಿಸಿದ ಮಾರ್ಮಿಕ ವೃತ್ತಾಂತ ಈ ಸಂಧಿಯ ಮುಖ್ಯ ವಿಷಯವಾಗಿದೆ. ಅಕ್ಕೆ ಸಿರಿಯದು ಕಣ್ಣೀರ ಬಾಳ್ವೆಯಾದರೂ ಆಕೆ ಧೀರೆ. ಹೊಣೆಗೇಡಿಯಾಗಿ ದಾರಿಗೆ ಬಾರದ ವ್ಯಭಿಚಾರಿ ಗಂಡನಿಗೆ ಆಕೆ ಧೈರ್ಯದಿಂದ 'ಬರ' ಹೇಳುತ್ತಾಳೆ ಮಾತ್ರವಲ್ಲ. ಮರುಮದುವೆ ಯಾಗುತ್ತಾಳೆ. ಹಾಗಿದ್ದರೂ ಕಾರಣಿಕದ ಗರತಿ ಎಂಬ ಗೌರವಕ್ಕೆ ಪಾತ್ರಳಾಗುತ್ತಾಳೆ. "ಸಿರಿಯು ಪ್ರಬುದ್ಧ ಪುರುಷನೊಬ್ಬನ ಬೆಂಬಲವಿಲ್ಲದೆಯೂ ನೈತಿಕ ಸದ್ಗುಣಗಳನ್ನು ಮತ್ತು ಫಲವಂತಿಕೆಯನ್ನು ಕಾಯ್ದುಕೊಂಡು ಬಂದ ಸ್ತ್ರೀಯು ಐತಿಹ್ಯಕ್ಕೆ ದುಷ್ಟಾಂತವಾಗಿದ್ದಾಳೆ. ಅವಳ ಮಗ ಕುಮಾರ ಆಕೆಯ ಸದ್ಗುಣ ಮತ್ತು ಋಜುತ್ವದ ಸಾಕ್ಷಿಯಾಗಿ ನಿಲ್ಲುತ್ತಾನೆ(ಪೀಟರ್ ಜೆ. ಕ್ಲಾಸ್, ೧೯೮೭, ಪು.೩೦).

ಸಿರಿಯನ್ನು ಶಿಷ್ಟಪುರಾಣಗಳ ಸಾಧ್ವಿಯರ ಜೊತೆ ಹೋಲಿಸುವಂತಿಲ್ಲ. ಅಲ್ಲಿಯ ಪಾತಿವ್ರತ್ಯದ ಪರಿಕಲ್ಪನೆ ಬೇರೆ; ಇಲ್ಲಿಯ ಸ್ತ್ರೀ ಶಕ್ತಿಯ ಪ್ರತಿಪಾದನೆ ಬೇರೆ. ಇಲ್ಲಿಯ ನೈತಿಕತೆಯ ಕಲ್ಪನೆ, ಸ್ತ್ರೀಯ ವಿವೇಚನೆ ವಿಶಿಷ್ಟವಾದದ್ದು.

ಸಿರಿ ಸಂಧಿಯ ಕಥಾಭಿತ್ತಿ ತುಂಬ ವಿಸ್ತಾರವಾದದ್ದು. ಪುರಾಣ ಅಥವಾ ಮಹಾಕಾವ್ಯ ಸಹಜವಾದ ಹಲವು ಅತಿಮಾನುಷ ವೃತ್ತಾಂತಗಳು(ಸಿರಿಯ ಜನ್ಮ, ಆಕೆ ಪ್ರಕಟಿಸುವ

ಅಸಾಮಾನ್ಯ ಶಕ್ತಿಗಳ, ವರ, ಶಾಪ ಪ್ರಸಂಗಗಳು ಇತ್ಯಾದಿ.) ಇದರಲ್ಲಿ ಸೇರಿಕೊಂಡಿದ್ದರೂ, ಅಂಥ ಪವಾಡಗಳನ್ನು ಒಂದು ವೇಳೆ ಕಳಚಿದರೂ ಮೂಲಕಥೆ ಗಟ್ಟಿಯಾಗಿಯೇ ಉಳಿಯುತ್ತದೆ. ಇತಿಹಾಸದ ಒಂದು ಕಾಲಘಟ್ಟದಲ್ಲಿ ವಾಸ್ತವಿಕವಾಗಿ ನಡೆದುಹೋದ ಕಥೆ ಎಂಬುದರಲ್ಲಿ ಯಾವುದೇ ಸಂಶಯ ತೋರುವುದಿಲ್ಲ. ಭಿನ್ನ ಭಿನ್ನ ವ್ಯಕ್ತಿತ್ವವುಳ್ಳ ಅನೇಕ ಮಂದಿ ತಮ್ಮ ತಮ್ಮ ನಂಬಿಕೆ ಸಾಹಸ, ಸಿಟ್ಟು ಸೆಡುವು, ಸೊಕ್ಕು, ಪಂಥ ಪೌರುಷ, ಕುಹಕ, ಕರುಣೆ–ಇತ್ಯಾದಿ ಶಕ್ತಿ ದೌರ್ಬಲ್ಯಗಳಿಂದ ಜೀವಂತವೆನಿಸಿ ಈ ಹಾಡಿನುದ್ದಕ್ಕೂ ಹಾದು ಹೋಗುತ್ತಾರೆ. ಅವರ ಬಾಳ್ವೆಯ ಉತ್ಕಟತೆ, ಅವರಲ್ಲಿ ಕೆಲವರು ನೆಚ್ಚಿನ ಜೀವನಮೌಲ್ಯಗಳು ನಮ್ಮಲ್ಲಿ ಬೆರಗನ್ನು ಬಿತ್ತದೇ ಇರಲಾರವು. 'ಬೆರ್ಮರ್ ದೈವತ ಸಿರಿ ಕಥೆಯಲ್ಲಿ ಮುಖ್ಯ ಪಾತ್ರ–ಅದೃಷ್ಟ ದೇವತೆಯ ಪಾತ್ರ ವಹಿಸುತ್ತದೆ. ಶಾಪಾನುಗ್ರಹಮೂರ್ತಿಯಾದ ಈ ಬೆರ್ಮರ್ ಬ್ರಾಹ್ಮಣ ವೇಷದಲ್ಲಿ ಬರುವ ಒಂದು ಪಾತ್ರವಾಗಿಯೂ ಕಥಾಸೂತ್ರವನ್ನು ಜಗ್ಗುವುದನ್ನು ಗಮನಿಸಬಹುದು('ಬೆರ್ಮರ್' ದೇವತೆಯ ಹೆಚ್ಚಿನ ವಿಚಾರಗಳಿಗೆ ಲೀಲಾಭಟ್ ಅವರ 'ತುಳುನಾಡ ಬೆರ್ಮರ್–ಒಂದು ಟಿಪ್ಪಣಿ' ಎಂಬ ಲೇಖನ ನೋಡಬಹುದು –'ಸಿರಿ' ಸಂಪುಟ, ಪು.೨೩೬). ಒಂದು ರೀತಿಯಲ್ಲಿ ಇಡೀ ಕಥಾನಕವೇ ಬೆರ್ಮರ್ ದೇವರ ಮಹಿಮಾ ವ್ಯಾಖ್ಯಾನ ಎನ್ನಬಹುದು. ಪ್ರತ್ಯೇಕ ಇಲ್ಲವೆ ಪರೋಕ್ಷವಾದ ಬೆರ್ಮರ್ ದೇವರ ಕಣ್ಣಾಗಿನಲ್ಲೆ ನಾಲ್ಕು ತಲೆಮಾರುಗಳ ಕಥನ ನಡೆಯುತ್ತದೆ. ಬೆರ್ಮರ್ ಕ್ಷೇಮಂಕರ ದೈವತವಾಗಿರುವಂತೆಯೆ, ಸಾಂದರ್ಭಿಕವಾಗಿ(ಶಿಷ್ಟ ದೇವರುಗಳೂ ಅಷ್ಟೆ) ಶಿಕ್ಷಾಕರ್ತನಾಗಿಯೂ ಕಾಣಿಸಿಕೊಂಡಿದ್ದಾನೆ.

ಸಿರಿ ಸಂಧಿಯಲ್ಲಿ ಅಬ್ಬಗ ದಾರಗ ವೃತ್ತಾಂತದಲ್ಲಿ ವರ್ಣಿತವಾದ ಚೆನ್ನಯಾಟವು ಇಂದಿಗೂ ಸಿರಿಜಾತ್ರೆಯ ಸಂದರ್ಭದಲ್ಲಿ ಪುನರಭಿನಯಗೊಳ್ಳುತ್ತಿರುವುದು ಗಮನೀಯವಾಗಿದೆ. ಅಬ್ಬಗ ದಾರಗೆಯರಿಂದ ಆವೇಶಗೊಂಡ ಮಹಿಳೆಯರು ಚೆನ್ನಯಾಟ ಆಡುವ ವಿಧಿಯನ್ನು ನಿರ್ವಹಿಸುತ್ತಾರೆ. ಕುಮಾರನಿಂದ ಆವೇಶಿತನಾದ ಪಾತ್ರಿಯ ಉಪಸ್ಥಿತಿ ಇಲ್ಲಿ ಮುಖ್ಯವಾಗಿದೆ. ಈ ಸನ್ನಿವೇಶಕ್ಕೆ ಸಂಬಂಧಪಟ್ಟ ಸಂಧಿಯನ್ನು ಆಗ ಹಾಡಲಾಗುತ್ತದೆ.

ಪ್ರಾಚೀನ ತುಳುನಾಡಿನ ಸಾಂಸ್ಕೃತಿಕ ಬದುಕಿನ ಅನೇಕ ಮಗ್ಗುಲುಗಳ ಮಾರ್ಮಿಕ ಚಿತ್ರಣ ಈ ಸಂಧಿಯಲ್ಲಿದೆ. ಜನಪದ ವಿಜ್ಞಾನಿಗಳ, ಮಾನವಶಾಸ್ತ್ರಜ್ಞರ, ಮಾನಸ ವಿಜ್ಞಾನಿಗಳ ಕುತೂಹಲವನ್ನು ಸೆಳೆಯತಕ್ಕ ಅನೇಕ ಅಧ್ಯಯನಾಂಶಗಳು ಸಿರಿ ಆರಾಧನೆಯಲ್ಲಿಯೂ, ಅದಕ್ಕೆ ಸಂಬಂಧಪಟ್ಟ ಈ ಪೂರ್ವ ಅಖ್ಯಾಯಿಕೆಯಲ್ಲಿಯೂ ಹುದುಗಿವೆ. ಸ್ತ್ರೀವಾದಿ ಅಧ್ಯಯನಕ್ಕೊಂದು ವಿಶಿಷ್ಟ ಆಕರ–ಈ ಬೃಹತ್ ಪಠ್ಯ.

ಸಿರಿಪಾಡ್ದನ ರೂಪದ ಕಾವ್ಯವನ್ನು ಸಂಗ್ರಹಿಸಿ ಪ್ರಕಟಿಸಿರುವ ಡಾ.ಎ.ವಿ. ನಾವಡ

PDF created with pdfFactory Pro trial version www.pdffactory.com

ಅವರ ಅಭಿಪ್ರಾಯವೂ ಕೂಡ ಡಾ. ಅಮೃತ ಸೋಮೇಶ್ವರ ಅಭಿಪ್ರಾಯಕ್ಕೆ ಪೂರಕವಾಗಿಯೇ ಇದೆ.

"ಲೌಕಿಕ–ಅಲೌಕಿಕವನ್ನು ಒಂದುಗೂಡಿಸುವ, ಬದುಕಿನ ಒತ್ತಡಕ್ಕೆ ಒಳಗಾದ ನೂರಾರು ಮಹಿಳೆಯರು ಆವೇಶಗೊಳ್ಳುವ, ಅಲ್ಲಿ ಸೃಷ್ಟಿಯಾಗುವ ಪರ್ಯಾಯ ಬಂಧುತ್ವ ಹಾಗೂ ಆ ಮೂಲಕ ಪಡೆಯುವ ಸಮಾಧಾನ, ಬಿಡುಗಡೆಗಳ ಸಿರಿ ಆರಾಧನಾ ಪ್ರಪಂಚವನ್ನು ಬಹಳ ಸುಲಭವಾಗಿ ಅರ್ಥೈಸುವುದು ಆಗದು. ಅದನ್ನು ಜಾತ್ರೆಯ ಹೊರಗಿನ ಸಾಮಾಜಿಕ, ಕೌಟುಂಬಿಕ, ಸಾಂಸ್ಕೃತಿಕ, ಆರ್ಥಿಕ ಸಂದರ್ಭಗಳ ಗ್ರಹಿಕೆಯ ಹಿನ್ನೆಲೆಯಲ್ಲಿ ಕಂಡುಕೊಳ್ಳಬೇಕಾಗುತ್ತದೆ. "ಅದಕ್ಕೆ ಉತ್ಸವರೂಪದಲ್ಲಿ ನಡೆಯುವ ಮಹಿಳೆಯರ ಆವೇಶ ಮತ್ತು ಸಿರಿ ಸಂಧಿಯ ಹಾಡುವಿಕೆ ಈ ವ್ಯವಸ್ಥೆಯ ಒಂದು ಮುಖವಾದರೆ, ಸಿರಿ ಹೆಂಗಸರ ವೈಯಕ್ತಿಕ ಬದುಕಿನ ಒಂದು ಇತಿಹಾಸ, ಕುಟುಂಬ ಪದ್ಧತಿ, ಸಿರಿ ಬಳಗದ ಸದಸ್ಯೆಯಾಗಿ ನೇಮಕಗೊಳ್ಳುವ ದಲಿಯ ಸೇವೆ, ನಿತ್ಯಜೀವನದಲ್ಲಿ ಅನುಸರಿಸಬೇಕಾದ ವಿಧಿ ನಿಯಮಗಳು, ಅನುಭವ ಸಿರಿ ಹೆಂಗಸರಿಂದ ಮತ್ತು ಕುಮಾರನ ಸಹಾಯದಿಂದ ಸಿರಿ ಸಂಧಿಯನ್ನು ಕಲಿತುಕೊಳ್ಳುವ ಬಗೆ ಇವುಗಳು ಈ ವ್ಯವಸ್ಥೆಯ ಇತರ ಮುಖಗಳಾಗಿವೆ ಎನ್ನುವ ವಿಸ್ತಾರದ ಅರಿವಿರಬೇಕಾಗುತ್ತದೆ.

ಸಿರಿಪಾಡ್ದನದಲ್ಲಿ ಸಿರಿಯ ಕೌಟುಂಬಿಕ, ಸಾಮಾಜಿಕ ಸಂದರ್ಭ, ವಿಚ್ಛೇದನ, ಮರುಮದುವೆ, ಉತ್ತರಾಧಿಕಾರತ್ವ, ಸ್ತ್ರೀತ್ವ ಮತ್ತು ಪರಿಶುದ್ಧತೆಯ ಪರಿಕಲ್ಪನೆಗಳು, ಗಂಡಿನ ಮೋಸ, ಅನ್ಯಾಯ, ಪುರುಷಪ್ರಭುತ್ವದ ಹೇರಿಕೆಯ ಪ್ರಯತ್ನಗಳು, ಅದರ ವಿರುದ್ಧ ಹೆಣ್ಣಿನ ಹೋರಾಟ ಮತ್ತು ವಿಜಯಗಳು ದಾಖಲಾಗಿದೆ. ಇದರಿಂದಾಗಿ ಬಂಟ ಸಮುದಾಯದ ಮೂಲ ಹೆಣ್ಣೆಂದು ಗ್ರಹೀತಳಾದ ಸಿರಿಯೊಂದಿಗೆ ತುಳುನಾಡಿನ ಎಲ್ಲ ಮಾತೃರೂಪಿ ಕುಟುಂಬದ ಹೆಣ್ಣುಗಳು ತಮ್ಮ ಸಂಬಂಧವನ್ನು ಕಂಡುಕೊಳ್ಳುತ್ತಾರೆ. ಸಿರಿ(ಪಾಡ್ದನ) ಪುರಾಣದೊಂದಿಗೆ ಗಾಢವಾದ ಸಂಬಂಧವಿರುವ ತುಳುವ ಮಹಿಳೆಯರಿಗೆ ಸಿರಿಯ ಬದುಕು ಮತ್ತು ಹೋರಾಟಗಳು ಆದರ್ಶ ಮಾದರಿಯಾಗಿರುವಲ್ಲಿ ಸಿರಿಪಾಡ್ದನವು ಸಿರಿ ಜಾತ್ರೆಗೊಂದು ಸಂಹಿತೆಯಾಗಿ ಕಾರ್ಯನಿರ್ವಹಿಸುತ್ತದೆ. ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳ ಅನೇಕ ಶೈವ ದೇವಾಲಯಗಳಲ್ಲಿ ಸಿರಿ ಆರಾಧನೆ ವಾರ್ಷಿಕ ಜಾತ್ರೆಯ ಸ್ವರೂಪದಲ್ಲಿ ನಡೆಯುತ್ತದೆ. ಉಡುಪಿ ಜಿಲ್ಲೆಯ ಪಾಂಗಾಳ, ಕವತ್ತಾರು, ಹಿರಿಯಡಕ, ಬೊಳ್ಯೊಟ್ಟು, ನಂದಳಿಕೆ; ದಕ್ಷಿಣ ಕನ್ನಡ ಜಿಲ್ಲೆಯ ಕಂಡೇವು, ಆತ್ರಿಜಾಲ್, ಹುರುಂಬಿದೊಟ್ಟು, ಕುತ್ರೊಟ್ಟು, ನಿಡಿಗಲ್ಲ್, ಉರ್ಕಿದೊಟ್ಟು, ಜರೆಗುಡ್ಡೆಗಳು ಪ್ರಮುಖ ಸಿರಿ ಆರಾಧನಾ ಕೇಂದ್ರಗಳು. ಮಾರ್ಚ್, ಏಪ್ರಿಲ್, ಮೇ ತಿಂಗಳು ಹುಣ್ಣಿಮೆಯ ರಾತ್ರಿ ಸಿರಿಜಾತ್ರೆ ಜರುಗುವುದು.

ಬಹುತೇಕ ಸಿರಿಜಾತ್ರೆಗಳು ಶೈವ ದೇವಾಲಯಗಳಲ್ಲಿ ನಡೆಯುವುದದರೂ ಶಿಷ್ಟದೇವರಿಗೂ ಸಿರಿಗೂ ಯಾವುದೇ ಸಂಬಂಧವಿಲ್ಲ. ಈ ದೇವಾಲಯಗಳು ಮೂಲತಃ ಆಲಡೆ ಅಥವಾ ಬೆರ್ಮಸ್ಥಾನಗಳಾಗಿವೆ. ಸಿರಿಯ ಆರಾಧನೆ ಕೇಂದ್ರಗಳು ಸಂಕೀರ್ಣ ಸ್ವರೂಪದ್ದಾಗಿರುತ್ತದೆ. ಒಂದೆಡೆ ಶೈವ ದೇವಾಲಯ ಹಾಗೂ ಪರಿವಾರ ದೇವತೆಗಳು ಇನ್ನೊಂದೆಡೆ ಸ್ಥಳದ ಭೂತಗಳು, ಮತ್ತೊಂದು ಸ್ತರದಲ್ಲಿ ಸಿರಿಗುಂಡ, ಸಿರಿಬಳಗದ ಮೂರ್ತಿಗಳು. ಹೀಗಾಗಿ ಸಿರಿಜಾತ್ರೆಯ ಆವರಣ ಹಾಗೂ ಆರಾಧನೆ ಪ್ರಕ್ರಿಯೆಗಳು ಸಂಕೀರ್ಣತೆಯನ್ನು ಪಡೆದುಕೊಳ್ಳುತ್ತವೆ. ಡಾ.ಪೀಟರ್ ಜೆ.ಕ್ಲಾಸ್ ಗುರುತಿಸುವಂತೆ "ಇಲ್ಲಿನ ಶಿವಾರಾಧನೆ ಸಿರಿಯ ಆರಾಧನೆಯನ್ನು ಅತಿಕ್ರಮಿಸಿ ಜರಗುತ್ತದೆಯೇ ಹೊರತು ಸಿರಿ ಆರಾಧನೆಯ ಒಂದು ಅಂಗವಾಗಿ ನಡೆಯುತ್ತಿಲ್ಲ. ಇಷ್ಟೊಂದು ವ್ಯಾಪಕ ನೆಲೆಯಲ್ಲಿ ಆರಾಧಿಸಲಾಗುವ ಸಿರಿ ಅಧೀನ ದೈವವಾಗಿ ಆರಾಧಿಸಲ್ಪಡುವ ಸಂಗತಿ ಅನೇಕ ಪ್ರಶ್ನೆಗಳನ್ನು ಎತ್ತುತ್ತದೆ."

ಜಾತ್ರೆಯಂದು ಮುಸ್ಸಂಜೆ ಹೊತ್ತಿಗೆ ಸಿರಿಯ ಭಕ್ತರು ಹಾಗೂ ಅವರ ಬಂಧುಗಳು ಸಿರಿಗುಡಿಗೆ ಬಂದು ಕಾಣಿಕೆ ಒಪ್ಪಿಸುತ್ತಾರೆ. ಬ್ರಾಹ್ಮಣ ತಂತ್ರಿಯಿಂದ ಪೂಜೆ ಸಲ್ಲುತ್ತದೆ. ಸಿರಿ ಮತ್ತು ಕುಮಾರ ಮೈದುಂಬುವ ವ್ಯಕ್ತಿಗಳು ಅಂದು ಶೌಚದಲ್ಲಿರಬೇಕು. ಸ್ನಾನ, ಮಡಿಬಟ್ಟೆ, ನಡೆಹಾಸು, ವೇಷಭೂಷಣ, ಹಿಂಗಾರ ಹುಣ್ಣಿಮೆ ರಾತ್ರಿ, ವಾದ್ಯಮೇಳಗಳ ಮೂಲಕ ಅವರನ್ನು 'ಪ್ರತ್ಯೇಕ'ಗೊಳಿಸಲಾಗುವುದು ದೈಹಿಕ ಹಾಗೂ ಮಾನಸಿಕವಾದ ಈ ಪ್ರತ್ಯೇಕೀಕರಣ ಪೂರ್ವಸಿದ್ದತೆಗಳು ಆವೇಶಕ್ಕೆ ಪೂರಕವಾಗಿ ದುಡಿಯುತ್ತವೆ. ಪ್ರತಿಯೊಂದು ಸಿರಿ ಆರಾಧನಾ ಕೇಂದ್ರಕ್ಕೆ ಸಂಬಂಧಪಟ್ಟಂತೆ ನಿಗದಿಯಾದ ಮೂಲಕುಮಾರ ಅಥವಾ ಸ್ಥಳ ಕುಮಾರ ಮತ್ತು ಅವನ ಅಧೀನ ಕುಮಾರರು ಹಾಗೂ ಸಿರಿಗಳು ಇದ್ದು ಹೆಣ್ಣೊಬ್ಬಳು ಸಿರಿಯಾಗುವ ಪ್ರಕ್ರಿಯೆ ಹೀಗಿರುತ್ತದೆ: ಸಾಮಾನ್ಯವಾಗಿ ಹೆಣ್ಣು ಎಳೆಹರೆಯದಿಂದ ಮಧ್ಯವಯಸ್ಸಿನ(೧೪ರಿಂದ ೩೫) ಗುಂಪಿನಲ್ಲಿ ಸಿರಿ ಆಕರ್ಷಣೆಗೆ ಒಳಗಾಗುತ್ತಾಳೆ. ಒಬ್ಬಾಕೆಯಲ್ಲಿ ದೈಹಿಕ/ಮಾನಸಿಕ ಅಸ್ವಸ್ಥತೆಯ ಚಹರೆಗಳು ಕಂಡುಬಂದಾಗ ಅದು 'ದುಷ್ಟಶಕ್ತಿಯ' ಕಾಟ, ಉಪದ್ರವಗಳೆಂದು ಪರಿಹಾರೋಪಾಯಗಳನ್ನು ನಡೆಸಲಾಗುವುದು. ಆಗಲೂ ಫಲ ಕಂಡುಬಾರದಿದ್ದಲ್ಲಿ ಸಿರಿಜಾತ್ರೆಗೆ ಹೋಗಿ ಹರಕೆ ಹೇಳಿಕೊಳ್ಳುತ್ತಾರೆ. ಆದರಂತೆ ಕುಮಾರನನ್ನು ಮನೆಗೆ ಕರೆಯಿಸಿ ಅಥವಾ ಕುಮಾರನಲ್ಲಿಗೆ ಹುಡುಗಿಯನ್ನು ಕರೆದೊಯ್ದು ಅಥವಾ ವಾರ್ಷಿಕ ಸಿರಿಜಾತ್ರೆಗೆ ಕರೆತಂದು ಸೇರಿಸುತ್ತಾರೆ. ಆರಾಧನಾ ಪ್ರಕ್ರಿಯೆಯೊಳಗೆ ಆವೇಶಿತಳಾಗುವ ಹೆಣ್ಣನ್ನು ಕುಮಾರ ಸಿರಿಪಾಡ್ದನದ ಭಾಗಗಳನ್ನು ಹಾಡುವ ಮೂಲಕ ಮಧ್ಯಂತರ ಜಗತ್ತಿಗೆ ಪ್ರವೇಶಿಸುವಂತೆ ಪ್ರಚೋದಿಸಲಾಗುತ್ತದೆ. ಈ ಪ್ರವೇಶ ಸಾಧ್ಯವಾಗಿ ಆಕೆ ಸಿರಿಬಳಗದ ಯಾವುದಾದರೊಂದು ಪಾತ್ರವಾಗಿ

PDF created with pdfFactory Pro trial version www.pdffactory.com

ತನ್ನನ್ನು ಕಂಡುಕೊಳ್ಳುತ್ತಾಳೆ. ಆವೇಶದ ನಿರಂತರ ಸ್ಥಿತಿಯಲ್ಲಿ ಆಕೆಯನ್ನು ಅನುಭವಿ ಸಿರಿಗಳು ಹಾಗೂ ಕುಮಾರ 'ಬಾಯಿಬಿಡಿಸುವ' ಕಾರ್ಯ ಮಾಡುತ್ತಾರೆ. ಆಗ ಆಕೆ ತಾನು ಸಿರಿಬಳಗದ ಸೊನ್ನೆಯೋ ಆಕೆ ಸಿರಿಬಳಗದ ನಿರ್ದಿಷ್ಟ ಸದಸ್ಯೆಯಾಗಿ ನಾಮಕರಣ ಹೊಂದುತ್ತಾಳೆ. ಮತ್ತಾಕೆ ವರ್ಷ ವರ್ಷವೂ ಜಾತ್ರೆಗೆ ಬಂದು ಸೇವೆ ಸಲ್ಲಿಸಲು ನಿಬದ್ಧಳಾಗುತ್ತಾಳೆ ದೇಹ ಮತ್ತು ಮನಸ್ಸಿನ ಪರಿಶುದ್ಧ ಸ್ಥಿತಿಯಲ್ಲಿ ಮಾತ್ರ ಸಿರಿ ಮೈದುಂಬುವುದು ಸಾಧ್ಯ ಎಂಬ ಬಲವಾದ ನಂಬಿಕೆ ಇದೆ. ಹೀಗಾಗಿ ಹೆಣ್ಣೊಬ್ಬಳಿಗೆ ಸಿರಿಯಾಗುವುದು ಅವಳ ಸಚ್ಚಾರಿತ್ರ್ಯ ಮತ್ತು ಪಾವಿತ್ರ್ಯದ ಸಂಕೇತವೆಂದೂ ಭಾವಿಸಲಾಗುವುದು. ಇದರಿಂದ ಸಿರಿಯಾಗುವ ಮುನ್ನಿನ ಹಾಗೂ ಇವತ್ತಿನ ಅವಳ ಸ್ಥಾನಮಾನದಲ್ಲಿ ಬಹಳಷ್ಟು ವ್ಯತ್ಯಾಸ ಗೋಚರಿಸುತ್ತದೆ.

ಜಾತ್ರೆಯಲ್ಲಿ ತಂತ್ರಿಯಿಂದ ತೀರ್ಥಪ್ರಸಾದ ಸ್ವೀಕರಿಸಿದ ಸಿರಿಗಳು ಮತ್ತು ಕುಮಾರರು ಎದುರುಬದುರಿಗೆ ಸಾಲಾಗಿ ಅಥವಾ ಸುತ್ತುವರಿದು ನಿಲ್ಲುವರು. ಸಿರಿ ಪಾಡ್ದನದ ಹಂದರವು ಅನಾವರಣಗೊಳ್ಳುತ್ತ ಹೋದಾಗ ಲೌಕಿಕ ಜಗತ್ತಿನ ಈ ವ್ಯಕ್ತಿಗಳು ಅಲೌಕಿಕ ಜಗತ್ತನ್ನು ಪ್ರವೇಶಿಸುತ್ತಾರೆ ಹಾಗೂ ಮಧ್ಯಂತರ ಜಗತ್ತಿನ ಪಾತ್ರಗಳಾಗಿ ರೂಪಾಂತರ ಗೊಳ್ಳುತ್ತಾರೆ. ಆಗ ಅವರು ಸಿರಿ–ಕುಮಾರ, ಕುಮಾರ ಸೊನ್ನೆ, ಕುಮಾರ ಅಬ್ಬರ ದಾರಗರಾಗಿ ಪರಸ್ಪರ ಸಂಬಂಧವನ್ನು ಸ್ಥಾಪಿಸಿಕೊಂಡು ಪಾಡ್ದನದ ಮೂಲಕ ಉತ್ತಮ ಪುರುಷರಲ್ಲಿ ಸಂವಾದ ನಡೆಸುತ್ತಾರೆ. ತುಳುವ ಬಂಧುತ್ವ ವ್ಯವಸ್ಥೆಯಲ್ಲಿ ಈ ಜೋಡಿಗಳು ರಕ್ತಬಾಂಧವ್ಯ ಘಟಕವಾಗಿದ್ದು ಅವು ತಾಯಿ–ಮಗ, ಅಣ್ಣ–ತಂಗಿ, ಸೋದರಮಾವ–ಸೊಸೆಯದಾಗಿವೆ. ಮಾತೃರೂಪಿ ತುಳುವ ಸಂಸ್ಕೃತಿಯಲ್ಲಿ ತಾಯಿಯ ಬಳಗವು 'ಕುಟುಂಬ'ವೆಂದು ಪರಿಗಣಿತವಾಗುವುದರಿಂದ ಸೋದರಮಾವ ಕುಟುಂಬದ ಸದಸ್ಯನಾಗಿದ್ದು ಸೋದರಮಾವ–ಸೊಸೆಯು ಒಂದೇ ಬಳಿ ಹೊಂದಿದ್ದು ಅವರೊಳಗಿನ ವಿವಾಹ ನಿಷಿದ್ಧವಾದುದು. ಈ ತಿಳಿವಳಿಕೆ ಸಿರಿಜಾತ್ರೆಯನ್ನು ಸಂತಾನಾಪೇಕ್ಷಿ ಮೇಳವೆಂಬ ಗ್ರಹಿಕೆಯನ್ನು ಮರುವಿಮರ್ಶೆಗೆ ಒಡ್ಡಲು ಒತ್ತಾಯಿಸುತ್ತದೆ."

೨.೧೦. ಬಲೀಂದ್ರ

ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಮತ್ತು ಮಲೆನಾಡಿನ ಹಲವು ಭಾಗಗಳಲ್ಲಿ ಬುಡಕಟ್ಟುಗಳೂ ಮೊದಲ್ಗೊಂಡಂತೆ ವಿವಿಧ ಶೂದ್ರವರ್ಗ ಸಾಮೂಹಿಕವಾಗಿ ಆರಾಧಿಸುವ ಪ್ರಮುಖ ದೈವವೆಂದರೆ ಬಲೀಂದ್ರ. ಆದರೆ, ಈ ದೇವರು ಖಾಯಂ ಆಗಿ ನೆಲೆ ನಿಂತ ದೇವರಲ್ಲ. ವರ್ಷಕ್ಕೊಮ್ಮೆ ಭೂಲೋಕಕ್ಕೆ ಬಂದು ತನ್ನ ಮಕ್ಕಳನ್ನು, ಅವರು ಬೆಳೆಯುವ ಬೆಳೆಗಳನ್ನು ಹಾರೈಸಿ ಹಿಂತಿರುಗುವ ದೇವರು.

ಬಲೀಂದ್ರನ ಪೂಜೆಯನ್ನು ವಿಶೇಷವಾಗಿ ಇಲ್ಲಿ ಪ್ರಸ್ತಾಪಿಸುವುದಕ್ಕೆ ಕಾರಣಗಳಿವೆ. ನಮ್ಮ ಪುರಾಣಗಳ ಪ್ರಕಾರ ಹಿಂದೆ ಚಕ್ರಾಧಿಪತಿಯಾಗಿದ್ದ ಬಲೀಂದ್ರನನ್ನು ಬ್ರಾಹ್ಮಣ ವೇಷ ತೊಟ್ಟ ವಿಷ್ಣು ಭಿಕ್ಷೆಯ ನೆಪದಲ್ಲಿ ಪಾತಾಳಕ್ಕೆ ತುಳಿದ ಪ್ರಸಂಗ ಅತ್ಯಂತ ಜನಜನಿತವಾದುದು. ವೈದಿಕರ ಅದಿದೈವವೆನಿಸಿದ ವಿಷ್ಣು ಈ ದ್ರಾವಿಡ ಚಕ್ರಾಧಿಪತಿಯನ್ನು ಪಾತಾಳಕ್ಕೆ ತುಳಿದು ಅವನ ಭೂಮಿಯನ್ನು ಕಿತ್ತುಕೊಂಡರೂ, ಅಂದು ನಡೆದಿರಬಹುದಾದ ದೌರ್ಜನ್ಯಕ್ಕೊಂದು ಸಂಕೇತ. ಆದರೆ ಸಾಕ್ಷಾತ್ ಬಲೀಂದ್ರನೇ ನಮ್ಮ ಕುಲದ ಮೂಲಪುರುಷ ಎಂದು ನಂಬುವ, ಆರಾಧಿಸುವ ಅಸಂಖ್ಯಾತ ಜನ ಇನ್ನೂ ಇದ್ದಾರೆ ಎಂಬುದೇ ಬಹುಮುಖ್ಯವಾದ ವಿಚಾರ. ಆದ್ದರಿಂದ, ವಾಮನನ ಈ ಅವತಾರದ ಕಥೆ ಸ್ಥಳೀಯ ಬುಡಕಟ್ಟುಗಳ ಭೂಮಿಯನ್ನು ಬ್ರಾಹ್ಮಣರು ಕೈವಶಮಾಡಿಕೊಂಡಿದ್ದರ ಸಂಕೇತವೇ ಎಂಬ ಅನುಮಾನ ಕೂಡ ಬರುತ್ತದೆ. ಹೊರಗಿನಿಂದ ಬಂದ ಆರ್ಯರಿಗೂ ಸ್ಥಳೀಯ ನಿವಾಸಿಗಳಾಗಿದ್ದ ದ್ರಾವಿಡ ಬುಡಕಟ್ಟುಗಳಿಗೂ ಏರ್ಪಟ್ಟ ಸಂಘರ್ಷವೋ, ಒಪ್ಪಂದವೋ ಆಗಿರಬಹುದಾದ ಈ ಪ್ರಸಂಗ ಅತ್ಯಂತ ಕುತೂಹಲಕಾರಿ. ಅದು ಏನೇ ಇರಲಿ, ತಮ್ಮ ಪಿತೃಗಳ ಪ್ರತಿನಿಧಿಯಾಗಿ ವರ್ಷಕ್ಕೆ ಒಮ್ಮೆ ಭೂಮಿಗೆ ಬರುವ ತಮ್ಮ ಮೂಲಪುರುಷನನ್ನು ಸಮೃದ್ಧಿಯ ಸಂಕೇತವಾಗಿ ಆರಾಧಿಸುತ್ತಿರುವುದು ಗಮನಿಸಬೇಕಾದ ವಿಚಾರ.

ಬಲೀಂದ್ರನನ್ನು ಶೂದ್ರರು ತಮ್ಮ ಪಿತೃಗಳ ಪ್ರತಿನಿಧಿ ಎಂದೇ ಭಾವಿಸುತ್ತಾರೆ. ಅಷ್ಟೇ ಅಲ್ಲ ಬಲೀಂದ್ರ ಒಂದು ಕಾಲಕ್ಕೆ ಕೃಷಿ ಮಾಡುತ್ತಿದ್ದ ಹಾಲಕ್ಕಿಗೌಡ ಎಂಬುದು ಅವರ ನಂಬಿಕೆ. ವರ್ಷಕ್ಕೆ ಒಮ್ಮೆ ಅವನು ತನ್ನ ಐದು ಜನ ಸಂಗಡಿಗರೊಡನೆ ವಜ್ರದ ಕೊಡೆ ಹಿಡಿದು ಬರುತ್ತಾನೆ. ಬಂದವನೆ ತನ್ನ ಜೊತೆಗೆ ಬಂದವರನ್ನು ಭಟ್ಟರ ಮನೆಗೂ ಶೆಟ್ಟರ ಮನೆಗೂ ಕಳುಹಿಸಿ ತಾನು ಮಾತ್ರ ಹಾಲಕ್ಕಿ ಗೌಡರ ಮನೆಗೆ ಹೋಗುತ್ತೇನೆ ಎಂದು ಅಲ್ಲಿಗೆ ಬಂದನಂತೆ. ಇಂಥ ವಿಶ್ವಾಸ ಇಟ್ಟುಕೊಂಡಿರುವ ಹಾಲಕ್ಕಿ ಜನ ದೀಪಾವಳಿಯ ಸಮಯದಲ್ಲಿ ಪ್ರತಿವರ್ಷ ಭೂಮಿಗೆ ಬರುವ ಬಲೀಂದ್ರನನ್ನು ಮರೆತಾರೆಯೇ? ಅದೂ ತಮ್ಮಂಥ ಅಪ್ಪಟ ಕೃಷಿಕನಾದ ಭೂಮಿ ಪುತ್ರ ಬರುತ್ತಾನೆಂದರೆ ಅವರಿಗೆ ಎಲ್ಲಿಲ್ಲದ ಸಡಗರ ಮತ್ತು ಸಂತೋಷ.

ಈ ಬಲೀಂದ್ರನ ಹಬ್ಬವನ್ನು 'ಬೂರೆ ಹಬ್ಬ' ಎಂತಲೂ ಕರೆಯುತ್ತಾರೆ. ಕುಂಬಾರನಿಂದ ಹೊಸಗಡಿಗೆಯನ್ನು ತಂದು, ಅದಕ್ಕೆ ಚಿತ್ತಾರಗಳನ್ನು ಬರೆದು ಅಲಂಕರಿಸಿ, ಅದರೊಳಕ್ಕೆ ಹೊಸ ಅಕ್ಕಿ ಮತ್ತು ಮರದ ಚೆಕ್ಕೆ ಹಾಗೂ ಬೆಳ್ಳಿ ಅಥವಾ ಬಂಗಾರದ ನಾಣ್ಯಗಳನ್ನಿಟ್ಟು ಶುದ್ಧ ನೀರು ತುಂಬುತ್ತಾರೆ. ಕಂಠದ ಸುತ್ತ ಮಾವಿನ ಎಲೆಗಳನ್ನಿಟ್ಟು ಕಂಠದ ಮೇಲೆ ಮೊಗೆಕಾಯಿ ಅಥವಾ ತೆಂಗಿನ ಕಾಯಿಯನ್ನು ಇಡುತ್ತಾರೆ. ಗಡಿಗೆಯ ಕೊರಳಿಗೆ ಮಣಿಸರ ಹಾಗೂ ಬಂದಿಗಳನ್ನು ಇಟ್ಟು

PDF created with pdfFactory Pro trial version www.pdffactory.com

ಅಲಂಕರಿಸುವುದಲ್ಲದೇ ವಿವಿಧ ಬಗೆಯ ಹೂಮಾಲೆಯನ್ನು ಧರಿಸುತ್ತಾರೆ. ಹೀಗೆ ಅಲಂಕರಿಸಿದ ಪವಿತ್ರ ಗಡಿಗೆಯೇ ಬಲೀಂದ್ರ. ಬಲೀಂದ್ರನನ್ನು ಮೊದಲು ತುಳಸಿ ಕಟ್ಟೆಯಲ್ಲಿ ಪೂಜಿಸಿ ನಂತರ ಮನೆಯೊಳಗೆ ತರಲಾಗುತ್ತದೆ. ಒಳಗಿನ ಮನೆಯ ಅಂಗಳದಲ್ಲಿ ರಂಗೋಲಿ ಬರೆದು, ಅದರ ಮೇಲೆ ಬಾಳೆಲೆ ಇಟ್ಟು ಅದರ ಮೇಲೆ ಭತ್ತದ ಸಣ್ಣ ರಾಶಿ ಹಾಕಿ, ಭತ್ತದ ಮೇಲೆ ಬಲಿಂದ್ರನನ್ನು ಪ್ರತಿಷ್ಠಾಪಿಸುತ್ತಾರೆ. ಇದು ಮೊದಲ ದಿನದ ಆಚರಣೆಯಾದರೆ, ಎರಡನೇ ದಿನದ ಆಚರಣೆಯನ್ನೇ ಬೂರೆ ಹಬ್ಬ ಎಂದು ಇವರು ಕರೆಯುವುದು.

ಅಂದು ಮೊಗೆಕಾಯಿಯ ಕಡುಬು ಹಾಗೂ ಮೊಗೆಹಣ್ಣಿನ ಹಾಲಿನ ಪಾನೀಯದ ವಿಶೇಷ. ಆ ದಿನ ರಾತ್ರಿ ಹಾಲಕ್ಕಿ ಕೊಪ್ಪದ ಹೆಂಗಸರು ಮೊದಲು ಗೌಡನ ಮನೆಯಿಂದ ಹೊರಟು ಪ್ರತಿಮನೆಗೂ ಬೆಳಕಿನಾರತಿ ಒಯ್ಯುತ್ತಾರೆ. ಆರತಿ ತಂದ ಹೆಣ್ಣುಮಕ್ಕಳಿಗೆ ಮನೆಯವರು ಕಾಣಿಕೆ ನೀಡಿ ಸತ್ಕರಿಸುತ್ತಾರೆ. ಹೀಗೆ ಶೇಖರಿಸಿದ ಹಣದಿಂದ ಹಬ್ಬ ಮುಗಿದ ನಂತರ ಹೆಣ್ಣು ಮಕ್ಕಳೆಲ್ಲಾ ಸೇರಿ ಅವಲಕ್ಕಿ ಕೊಂಡು ತಂದು ತಿನ್ನುತ್ತಾರಂತೆ. ಬಲಿಪಾಡ್ಯದ ದಿನದ ರಾತ್ರಿ ಬಲೀಂದ್ರನಿಗೆ ಕೊನೆ ಆರತಿ ಮಾಡಿ ಪೂಜೆ ಸಲ್ಲಿಸಿ, ಬೆಳಗಿನ ಜಾವ, ಬಲೀಂದ್ರನ 'ಬುತ್ತಿಕೂಳಿ'ನೊಡನೆ ಹೊರಟು ತುಳಸಿಕಟ್ಟೆಯಲ್ಲಿ ವಿಸರ್ಜಿಸುತ್ತಾರೆ. ಆಮೇಲೆ ಹೆಂಗಸರೆಲ್ಲ ಸೇರಿ ಆ 'ಬುತ್ತಿಕೂಳ'ನ್ನು ಹಂಚಿಕೊಂಡು ಪ್ರಸಾದದ ರೀತಿಯಲ್ಲಿ ಸ್ವೀಕರಿಸುತ್ತಾರೆ.

ಇದೇ ಪಾಡ್ಯದ ದಿನ ಹಾಲಕ್ಕಿ ಸಮಾಜದ ಎಲ್ಲರೂ ವಿಶೇಷವಾಗಿ ಗೋಪೂಜೆ ಮಾಡುತ್ತಾರೆ. ದನಕರುಗಳ ಮೈತೊಳೆದು ಅವುಗಳನ್ನು ವಿಧವಿಧವಾಗಿ ಅಲಂಕರಿಸಿ, ಕೊಂಬುಗಳಿಗೆ ಬಣ್ಣ ಬಳಿದು ಚವಲಗಳನ್ನು ಕಟ್ಟುತ್ತಾರೆ. ಬಲೀಂದ್ರ ಭೂಮಿಯಿಂದ ತನ್ನ ಲೋಕಕ್ಕೆ ಹಿಂತಿರುಗುವಾಗ ಈ ಗೋವನ್ನೇ ವಾಹನ ಮಾಡಿಕೊಂಡು ಹೋಗುತ್ತಾನಂತೆ. ಹಾಗೆ ಹೋಗುವಾಗ ಹಾಲಕ್ಕಿ ಒಕ್ಕಲಿಗರ ಭೂಮಿಯಲ್ಲಿ ಹತ್ತಾರು ಬಗೆಯ ಧಾನ್ಯಗಳನ್ನು ಬಿತ್ತುತ್ತ ಹೋಗುತ್ತಾನಂತೆ.

ಲಯದ ಕಲ್ಪನೆ ಹಾಲಕ್ಕಿ ಒಕ್ಕಲಿಗರಲ್ಲಿ ಇಲ್ಲ. ಲಯಕ್ಕೆ ವಿರುದ್ಧವಾದ ಸಮೃದ್ಧಿ ಇವರ ಗುರಿ. ಆ ಸಮೃದ್ಧಿಗಾಗಿ ಆರಾಧಿಸುವುದು ಅವರ ಆಶಯ. ಬೆಂಕಿ, ಬಿರುಗಾಳಿ, ಪ್ರವಾಹಕ್ಕೆ ಇವರ ಸಮ್ಮತಿ ಇಲ್ಲ. ಅವುಗಳನ್ನು ಆಶಿಸುವುದೂ ಇಲ್ಲ. ಅವುಗಳನ್ನೇ ಆರಾಧಿಸುವ ಮೂಲಕ ನಮ್ಮ ಇಡೀ ನಾಡು ಸಮೃದ್ಧಿವಾಗಿರಲಿ, ಹಸುರಾಗಿರಲಿ, ನಗುನಗುತ್ತಾ ಇರಲಿ ಎಂಬುದು ಅವರ ಪ್ರಾರ್ಥನೆ. ಇವರ ಇಂಥ ಸಕಾರಾತ್ಮಕವಾದ ಆಶಯಗಳ ಪ್ರತೀಕವೇ ಬಲೀಂದ್ರ. ಬಲೀಂದ್ರನನ್ನು ಕರಾವಳಿಯಾದ್ಯಂತ, ಅದರಲ್ಲೂ ಉತ್ತರ ಕನ್ನಡದಲ್ಲಿ ಕೃಷಿಕರು ಆರಾಧಿಸುತ್ತಾರೆ. ಅವರ ಆರಾಧನೆಯ ಸಂದರ್ಭದಲ್ಲಿ ಹಾಡುವ ಹಲವು ರೀತಿಯ ಬಲೀಂದ್ರನ ಹಾಡುಗಳನ್ನು ಸಂಗ್ರಹಿಸಿ ಅವುಗಳ

ಅರ್ಥವನ್ನು ಕೊಟ್ಟಿದ್ದಾರೆ ಸಂಗ್ರಾಹಕ ಡಾ. ಎನ್.ಆರ್. ನಾಯಕ್. ಅದನ್ನಿಲ್ಲಿ ಅವಲೋಕಿಸೋಣ.

ಪಾತಾಳದಿಂದ ಬಂದ ಬಲೀಂದ್ರ ಹಣ್ಣಡಕೆ ಕೊನೆಯನ್ನೇರಿ, ತನ್ನ ರಾಜ್ಯದ ಸಿರಿಯನ್ನು ನೋಡುತ್ತಾನೆ. ಅಲ್ಲಿ ಹಾಲು ಹಳ್ಳ, ಮೊಸರುಗುಡ್ಡ ಬೆಳೆಯ ಸಮೃದ್ಧಿ. ಭಕ್ತರು ಮೊಗೆಹಣ್ಣು, ಕುಂಬಳಕಾಯಿ ಕಡಿದು ಮಾಡಿದ ಕಜ್ಜಾಯದ ನೈವೇದ್ಯ ಮಾಡಿರುತ್ತಾರೆ. ತುಲಸಿಯೆಡೆ ಬಂದು ಅಲ್ಲಿಂದ ಭಕ್ತರ ಮನೆಗೆ ಬರುತ್ತಾನೆ. ಅವನ ಪಟ್ಟೆದೋತರ, ಮುತ್ತಿನುಂಗುರ ಹಾಗೂ ಮೈ ಬೆಳಕು ಮನೆ ತುಂಬುತ್ತದೆ. ಮೂರುದಿನ ಉಳಿದು ಮುತ್ತಿನ ಕೊಡೆ ಹಿಡಿದು ಬಲೀಂದ್ರ ಹೊರಡುತ್ತಾನೆ. ಹೋಗುವಾಗ ಸಣ್ಣಕ್ಕಿಯ ಪಾಯಸ ಉಂಡು ಹೋಗುತ್ತಾನೆ.

ಅರಿಸಿನೆಣ್ಣೆಯನ್ನುಜ್ಜಿಕೊಂಡು ಮಿಂದು ಮಡಿಯುಟ್ಟು ಬಲೀಂದ್ರನನ್ನು ಕರೆಯಲು ಸಿದ್ಧರಾಗುತ್ತಾರೆ. ಹೆಣ್ಮಕ್ಕಳು ಪಟ್ಟೆಯುಟ್ಟು ಸಿಂಗಾರ ಮುಡಿದು, ತುಲಸಿಯ ಮುಂದಿನಿಂದ ಬಲೀಂದ್ರನನ್ನು ಮನೆಗೆ ತಂದು ನೈವೇದ್ಯ ಮಾಡುತ್ತಾರೆ. ಮುತ್ತಿನ ಕುಡಿಬಾಳೆಲೆಯಲ್ಲಿ ಹಾಲು, ತುಪ್ಪ, ಅನ್ನವನುಂಡು ಅಕ್ಕಿಯ ಕಣಜದಿಂದ ಇಳಿದು ಬಲಿ ಪಾತಾಳಕ್ಕೆ ಹೋಗುತ್ತಾನೆ. ಮೂರು ದಿನ ರಾಜ್ಯ ಸಿರಿಯನ್ನು ನೋಡಿ ರಾಜ್ಯಕ್ಕೆ ಶುಭ ಕೋರುತ್ತಾನೆ. ತನ್ನ ರಾಜ್ಯದಲ್ಲಿ ಕಟ್ಟದೆ ಕರೆಯಲಿ, ಬಿತ್ತದೆ ಬೆಳೆಯಲಿ ಕಲ್ಲುಗುಡ್ಡಗಳು ಚಿಗುರಿ ನಾಡು ಹಸುರೊಡೆಯಲಿ ಎಂದು ಹಾರೈಸಿ ಪಾತಾಳಕ್ಕಿಳಿಯುತ್ತಾನೆ.

ಮಾಳಿಗೆಯ ಒಳಗಿಂದ ಎಣ್ಣೆಯ ಬೆಳಕಿನಲ್ಲಿ ಬಲೀಂದ್ರ ಇಳಿದು ಬಂದ. ಮಕ್ಕಳೇ ಬುಟ್ಟಿಯನ್ನು ತೆಗೆದುಕೊಳ್ಳಿ. ನಮ್ಮೂರಿನಲ್ಲಿ ಮುತ್ತು ಮಾಣಿಕ್ಯ ಬೆಳೆಯುವಂತೆ ಬೀಜವನ್ನು ಬಿತ್ತುತ್ತಾ ಬರೋಣ. ಪಟ್ಟೆಯ ಹಚ್ಚಡದ ಮುತ್ತಿನುಂಗಿಲದ ಬಲೀಂದ್ರನಿಗೆ ಮುತ್ತಿನಾರತಿ ಬೆಳಗೋಣ.

ಬಲೀಂದ್ರ ಕಾಲ್ನಡಿಗೆಯಿಂದ ಬರುವುದಿಲ್ಲ. ಅವನು ಬೆಳ್ಳಿ ರಥ ಹತ್ತಿ ಬರುತ್ತಾನೆ; ಚಿನ್ನದ ರಥ ಹತ್ತಿ ಹೋಗುತ್ತಾನೆ. ಆತ ಹೋಗುವಾಗ ರಸ್ತೆಯಲ್ಲಿ ಸಿಕ್ಕಿದ ಗೋವಿಂದರಾಯನಿಗೆ, ಭಕ್ತರು ಅವನನ್ನೆದುರುಗೊಳ್ಳಲು ಸಜ್ಜಾಗಿ ಅವನನ್ನು 'ಗೋವಿಂದರಾಯ' ಎಂದು ಕರೆಯುವ ವಿಚಾರ ತಿಳಿಸುತ್ತಾನೆ.

ಬಲೀಂದ್ರನು ಬರುವಾಗ ಹಾವು ಚೇಳುಗಳೆಲ್ಲವೂ ಮಾಯವಾಗುತ್ತವೆ. ಅವನಿಗೆ ಹನ್ನೆರಡು ಸುತ್ತಿನ ಮುಂಡಾಸು, ಗರದೇವಿಗೆ ಬೆಳ್ಳಿಯ ಗಟ್ಟಿ ಹಾಗೂ ಹನ್ನೆರಡು ಮಾಳಿಗೆ ಮನೆ ಕಾರು ಬೆಳೆಗೆ ಬರುವಾಗ, ಕೇದಿಗೆ ಮಾಡುವಾಗ ಬಲೀಂದ್ರ ಬರುತ್ತಾನೆ. ಗರದೇವಿಯು ಮಕ್ಕಳ ಮದುವೆಗೆ ಎಕ್ಕೆ, ಸೀಗೆ, ಬಾಳೆ, ಕರ್ಕಿಗಳನ್ನು ನೆಡುತ್ತಾಳೆ. ಧೂಪ ಸುಟ್ಟು ಎಣ್ಣೆಯಲ್ಲಿ ದೀಪ ಹಚ್ಚುತ್ತಾಳೆ. ಗುಲಗುಂಜಿಯನ್ನು ಕಾಡಿನಲ್ಲಿ ಬೆಳೆದು ಮಕ್ಕಳಿಗೆ ಮಾಲೆ ಮಾಡುತ್ತಾಳೆ. ಹಬ್ಬದಲ್ಲಿ ಬೂರೆ ಹಬ್ಬ ಶ್ರೇಷ್ಠ.

PDF created with pdfFactory Pro trial version www.pdffactory.com

ಗರದೇವಿ ದಾಬನ್ನು ತೆಗೆದುಕೊಂಡು ಹೋಗಿ ಕರುಕಟ್ಟಿದಳು. ಬಾಳೆಲೆಯಲ್ಲಿ ಹಾಲು, ತುಪ್ಪವನ್ನು ಬಲೀಂದ್ರನಿಗೆ ಬಡಿಸಿದಳು. ಬಲೀಂದ್ರ ಹಾಲೂಟವುಂಡು 'ಹುಗ್ಗಿ' ಗುಡಿಗೆ ಹೋದನು.

ಈ ಹಾಡು ಮುಗಿದ ಮೇಲೆ ಬಲೀಂದ್ರನ ಮುಂದೆ ಎರಡು ಪಂಗಡಗಳಾಗಿ ಹಾಡಿ ಕುಣಿಯುತ್ತಾರೆ. ಪುಗಡಿ–ಪೂ ಹಾಕಿ ಕುಣಿಯುತ್ತಾರೆ.

ಚಿನ್ನದ ಭುಜದ ಬಲೀಂದ್ರನು ರಾಜನಂತೆ ಹೋಗುವಾಗ ನಾರು ಮುಡಿಯುಟ್ಟು, ಕಾಲಿಗೆ ಗೆಜ್ಜೆ, ಕೈಗೆ ಉಂಗುರ, ತಲೆಗೆ ವಜ್ರದ ಕಿರೀಟ ತೊಟ್ಟು ಕೈಯಲ್ಲಿ ಚಕ್ರ ಹಿಡಿದು, ಬೆಳ್ಳಿ ಮಂಚದಲ್ಲಿ ಕುಳಿತು ಮಾನವರಿಗೆ ವರವನ್ನು ಕೊಡುತ್ತಾನೆ. ನೀವು ಕಟ್ಟಿದ ಕೊಟ್ಟಿಗೆಗೆ, ತುಂಬಿದ ಸಭೆಗೆ ಸಿರಿ ಬರಲಿ. ನೀವು ಸುಖವಾಗಿ ಬಾಳಿರಿ. ನಾನು ನನ್ನ ರಾಜ್ಯಕ್ಕೆ ಹೋಗುತ್ತೇನೆ ಎಂದು ಮಾಳಿಗೆಯಿಂದಿಳಿದು ಹಟ್ಟಿಗೆ ಬರುತ್ತಾನೆ. ಬೆಳ್ಳಿಯ ಬಸವನನ್ನೇರಿ ರಾಜ್ಯಕ್ಕೆ ಸಿರಿಸಂಪತ್ತು ಬರಲೆಂದು ಹಾರೈಸಿ, 'ಒಡ್ಡಿ' ಗುಡಿಗೆ ಹೋಗುತ್ತಾನೆ.

ಅನಂತರ ದುಮ್ ಸಾಲೆ ಹಾಡು, ಬಿಂಬೀ ಹಾಡು, ತೋಳ್ ಚಿಲುವ ಹಾಡು, ಅಣಕು ಮದುವೆಯ ಹಾಡು ಹಾಡುತ್ತಾರೆ. ಅನಂತರ ಅಣಕು ಮದುವೆ ನಡೆಯುತ್ತದೆ. ಹಾಡು, ಕುಣಿತ, ಸಂಭಾಷಣೆ, ಅಭಿನಯಗಳಿಂದ ಕುಣಿದ ವಿಶಿಷ್ಟ ಹಾಡಿದು.

ಬಾವಿಯ ದಂಡಿಗೆಯ ಮೇಲೆ ಬಂದ ಬಲೀಂದ್ರ ತನ್ನೂರೇ ಶುಭವೆನ್ನುತ್ತಾನೆ. ಅಕ್ಕಿ ರೊಟ್ಟಿ ಬೆಲ್ಲ ತಿಂದು ತವರೂರಿಗೆ ನಡೆಯುತ್ತಾನೆ.

ಬಲ್ಲಾಳ ಬಲೀಂದ್ರನು ರಾಜ್ಯಕ್ಕೆ ಶ್ರೀಮಂತನು. ಆತ ಇಂದ್ರಲೋಕದಿಂದ ಬರುವಾಗ ಜಡಿಮಳೆ ಸುರಿಯುತ್ತದೆ. ಹುಲ್ಲ ಜಿಡ್ಡೆಗಳು ಚಿಗಿಯುತ್ತವೆ. ಬರಡು ಹಯನಾಗುತ್ತವೆ.

ಬಲೀಂದ್ರ ಜೋಟಿ ಕೊಕ್ಕೆಯ ಸಹಾಯದಿಂದ ಹಣ್ಣಡಿಕೆಯ ಕೊನೆಯಿಂದ ಕೊನೆಗೆ ಹಾರಿಬರುತ್ತಾನೆ. ಒಂದಕ್ಕಿ ಭಿತ್ತಿ ಒಂಬತ್ತು ಕಣಜವನ್ನು ಕಟ್ಟುವ ತನ್ನೂರೆ ಸಿರಿ ಎನ್ನುತ್ತಾನೆ. ಬೆಳ್ಳಿಯ ದಂಡಿಗೆ, ಸತ್ತಿಗೆ, ಗೊಂಡೆ ಹಾಗೂ ಫಲಾವಳಿಗಳುಳ್ಳ ರಥವನ್ನೇರಿ ಬಲೀಂದ್ರನು ಬರುತ್ತಾನೆ. ಬೆಳ್ಳಿಯ ಬೆತ್ತದ ಕೋಲು, ಹಸುರಂಗಿ ತೊಟ್ಟ, ನೊಸಲಿಗೊಪ್ಪುವ ಕಿರಿ ಮುಡಿಯುಳ್ಳ ಮಕ್ಕಳು ಬಲೀಂದ್ರನಿಗೆ ಆರತಿ ಬೆಳಗುತ್ತಾರೆ.

ಸಿಂಗಾರ ಕೊನೆಯ ಮೇಲೆ ನಿಂತ ಬಲೀಂದ್ರನು, ಸಿಂಗಾರದ ಏಳು ಬನಗಳು ತನಗೆನ್ನುತ್ತಾನೆ. ಅಕ್ಕಿ ಭಿತ್ತಿ ಬೆಳೆಯುವ ತನ್ನ ರಾಜ್ಯ ಶುಭವೆನ್ನುತ್ತಾನೆ. ಆತನಿಗೆ ಶ್ರೀಗಂಧ ಧೂಪಗಳ ಉಪಚಾರವಾಗುತ್ತದೆ. ಬಲೀಂದ್ರನ ಮುಂದೆ ರಂಗೋಲಿ ಬಿಡಿಸಿ, ಅವನನ್ನು ಹೂಗಳಿಂದ ಸಿಂಗರಿಸಿ ಆರತಿಯನ್ನು ಬೆಳಗುತ್ತಾರೆ. ಮುತ್ತೈದೆತನವನ್ನು ಕೊಟ್ಟು ಹರಸಲು ಬೇಡಿಕೊಳ್ಳುತ್ತಾರೆ.

ಬಾವಿಯ ದಡದಲ್ಲಿ ನಿಂತ ಬಲೀಂದ್ರನಿಗೆ ದಂಡೆಮಾಲೆಯನ್ನು ಹಾಕಿ, ಮನೆಗೆ ತಂದು ಕರ್ಪೂರದಾರತಿಯನ್ನು ಬೆಳಗುತ್ತಾರೆ. ಬೆಳ್ಳಿಯ ಬೆತ್ತವನ್ನು, ಗರುಡನನ್ನು ಹಿಡಿದು, ರಥವೇರಿ ಬಲೀಂದ್ರ ಬರುತ್ತಾನೆ. ಅವನಿಗೆ ಗಂಧ ಹಚ್ಚಿ, ದುಂಡು ಮಲ್ಲಿಗೆಯ ಮಾಲೆ ಹಾಕಿ, ಕರ್ಪೂರದಾರತಿಯನ್ನು ಬೆಳಗುತ್ತಾರೆ.

ಬಾವಿಯ ದಂಡಿಗೆಯ ಮೇಲೆ ನಿಂತ ಬಲೀಂದ್ರನನ್ನು ಹೆಂಗಸರು ತರುತ್ತಾರೆ. ಚಿನ್ನದ ಸತ್ತಿಗೆ, ಚಿನ್ನದ ದಂಡಿಗೆಯಲ್ಲಿ ಬಂದ ಬಲೀಂದ್ರನಿಗೆ ನಾರಿಯರು ಆರತಿಯನ್ನು ಬೆಳಗುತ್ತಾರೆ.

ಮುತ್ತಿನ ಸತ್ತುಗೆ, ಮುತ್ತಿನ ಗೊಂಡೆಯಿಂದ ಕೂಡಿದ ರಥವನ್ನೇರಿ ಬಲೀಂದ್ರ ಬರುತ್ತಾನೆ. ಅವನಿಗೆ ಮುತ್ತಿನಾರತಿಯನ್ನು ಬೆಳಗುತ್ತಾರೆ.

ಭಾಗ್ಯವಂತ ಬಲೀಂದ್ರ ಬರುವ ಹಾದಿಯಲ್ಲಿ ಆತನಿಗೆ ಪ್ರಿಯವಾದ ಮೂಲಂಗಿ, ಮುಡಿಯಾಳ, ಪಚ್ಚೆ ನೆಟ್ಟಿದ್ದಾರೆ. ಆತ ಬರುವ ಹಾದಿಯಲ್ಲಿ ಸಣ್ಣಕ್ಕಿ ಭತ್ತ ಬೆಳೆದಿದ್ದಾರೆ. ಆತ ಬರುವ ದಾರಿಯಲ್ಲಿ ಸಣ್ಣಕ್ಕಿ ಮುಡಿ ಇಡುವರು. ಆತ ಮನೆಗೆ ಬಂದು ಭಾಗ್ಯವನ್ನು ತಂದಿದ್ದಾನೆ.

ಬಲೀಂದ್ರನನ್ನು ಮತ್ತು ಬಲೀಂದ್ರನ ಆರಾಧನೆಯನ್ನು ಕುರಿತು ಹೊನ್ನಾವರ ತಾಲೂಕಿನ ಅಪ್ಪಿಕೇರಿಯ ಕಲಾವಿದೆ ಗಂಗೆ ಅವರೊಡನೆ ಸುದೀರ್ಘವಾಗಿ ಮಾತನಾಡುತ್ತಿದ್ದಾಗ ಗಣಪತಿ ಮತ್ತು ಬಲೀಂದ್ರ– ಈ ಇಬ್ಬರು ದೈವಗಳ ಬಗ್ಗೆ ಮತ್ತು ಆ ದೈವಗಳು ಇಷ್ಟಪಡುವ ಭಕ್ತರ ಮನೆಗಳ ಹಬ್ಬದೂಟದ ಬಗ್ಗೆ ಹೇಳಿದ ವಿನೋದಪೂರ್ಣ ಕಥೆಯನ್ನು ಇಲ್ಲಿ ಪ್ರಸ್ತಾಪಿಸಲೇಬೇಕು. ಆ ಕಥೆಯ ವಿವರ ಹೀಗಿದೆ.

ಅದಾಗ ತಾನೆ ಗಣೇಶ ಚೌತಿ ಮುಗಿದಿತ್ತು. ಬ್ರಾಹ್ಮಣರು ಮತ್ತು ಭಟ್ಟರ ಮನೆಯ ಕಡುಬು, ಕಜ್ಜಾಯ, ಹೋಳಿಗೆ ತಿಂದು ಡುಮ್ಮ ಹೊಟ್ಟೆಯ ಗಣಪತಿ ಹೊಟ್ಟೆ ಸವರುತ್ತಾ ಬರುತ್ತಿದ್ದ. ಅತ್ತ ಕಡೆಯಿಂದ ಬಲೀಂದ್ರ ಚಕ್ರವರ್ತಿ ತನ್ನ ಹಬ್ಬಕ್ಕಾಗಿ ಬರುತ್ತಿದ್ದ. ಈ ಇಬ್ಬರೂ ಚಂದಾವರದ ಕೆರೆಯ ಏರಿ ಮೇಲೆ ಭೇಟಿಯಾದರು. ಗಣಪತಿ ಬ್ರಾಹ್ಮಣರ ಮನೆಯ ಭೋಜನವನ್ನು ಪರಿಪರಿಯಾಗಿ ಹೊಗಳಿ, ಅದು ಅಜೀರ್ಣವಾದ ಪರಿಸ್ಥಿತಿಯನ್ನು ನಿವೇದಿಸಿಕೊಂಡ. ಅದಕ್ಕೆ ಬಲೀಂದ್ರ ನಕ್ಕುಬಿಟ್ಟ. ಯಾಕೆ ನಗುತ್ತೀಯ ಎಂದು ಗಣೇಶ ಕೇಳಿದ. ಅದಕ್ಕೆ ಬಲೀಂದ್ರ "ನಗದೆ ಮತ್ತೇನು ಮಾಡಬೇಕು. ಬ್ರಾಹ್ಮಣರ ಮನೆಯ ಊಟ ಎಂದರೆ ಹಾಗೇನೆ. ಅದು ಅಜೀರ್ಣ. ಹೊಟ್ಟೆಯನ್ನು ಹಾಳುಮಾಡುತ್ತದೆ. ಅದಕ್ಕಾಗಿಯೇ ನೀನು ಹೊಟ್ಟೆನೋವು ತಾಳಲಾರದೆ ಪ್ರತಿ ವರ್ಷ ನೀರಿಗೆ ಬಿದ್ದು ಸತ್ತು ಮತ್ತೆ ಹುಟ್ಟುತ್ತೀಯ. ಆದರೆ, ನನ್ನನ್ನು ನೋಡು, ನಾನು ಭಟ್ಟರ ಮನೆಗೂ ಹೋಗುವುದಿಲ್ಲ, ಶೆಟ್ಟರ ಮನೆಗೂ ಹೋಗುವುದಿಲ್ಲ.

PDF created with pdfFactory Pro trial version www.pdffactory.com

ನಾನು ನೇರವಾಗಿ ನನ್ನ ಮಕ್ಕಳಾದ ಹಾಲಕ್ಕಿ ಒಕ್ಕಲಿಗರ ಮನೆಗೆ ಹೋಗುತ್ತೇನೆ. ಅವರು ನನಗೆ ಕಡುಬು ಕಜ್ಜಾಯ ಕೊಡುವುದಿಲ್ಲ. ಬದಲಾಗಿ, ಐದು ರೀತಿಯ ಗಿಡಮೂಲಿಕೆಗಳಿಂದ ಮಾಡಿದ ಕಷಾಯ ಕೊಡುತ್ತಾರೆ. ಅದನ್ನು ಕುಡಿದರೆ ಎಂಥವರ ಆರೋಗ್ಯವೂ ವೃದ್ಧಿಸುತ್ತದೆ. ವರ್ಷಕ್ಕೊಂದು ಸಲ ಅದನ್ನು ಕುಡಿದವನ ದೇಹ ಶಕ್ತಿದಾಯಕವಾಗುತ್ತದೆ. ಆದ್ದರಿಂದ ಅದನ್ನು ನಾನೂ ಕುಡಿದು, ನನ್ನ ಮಕ್ಕಳಾದ ಹಾಲಕ್ಕಿ ಒಕ್ಕಲಿಗರಿಗೂ ಕುಡಿಸುತ್ತೇನೆ" ಎಂದು ಹೇಳಿ ಬಲೀಂದ್ರ ನೇರವಾಗಿ ಹಾಲಕ್ಕಿಗಳ ಮನೆಗೆ ಬರುತ್ತಾನಂತೆ.

ಭಟ್ಟರ ಮನೆಯ ಕಡುಬು ಕಜ್ಜಾಯಗಳನ್ನು ತಿನ್ನುವ ಗಣಪತಿ ಹೊಟ್ಟೆ ಊದಿಸಿಕೊಂಡು ಮೈಯೆಲ್ಲಾ ಅನಾರೋಗ್ಯವೇ ಆಗಿ, ಪ್ರತಿ ವರ್ಷ ನೀರಿನಲ್ಲಿ ಸತ್ತು ಮತ್ತೆ ಮಣ್ಣಿನಲ್ಲಿ ಹುಟ್ಟುತ್ತಾನೆ. ಆದರೆ ಬಲೀಂದ್ರ ಒಬ್ಬ ಯೋಗಿ. ಅವನು ಅವಧೂತನಂತೆ ಪಾತಾಳದಿಂದ ಉದ್ಭವಿಸಿ, ತನ್ನ ಮಕ್ಕಳಾದ ಹಾಲಕ್ಕಿ ಒಕ್ಕಲಿಗರ ಮನೆಯ ಆರೋಗ್ಯಪೂರ್ಣ ಕಷಾಯ ಕುಡಿದು, ಸಮೃದ್ಧಿಯನ್ನು ಹಾರೈಸಿ ಸಂತಸದಿಂದ ಹಿಂತಿರುಗುತ್ತಾನೆ. ದುಡಿಯುವ ವರ್ಗದ ಜನರು ಕಟ್ಟಿದ ಈ ಕಥೆ ಕುಂತುಣ್ಣುವ ಜನರ ವೈಭವವನ್ನು ತುಂಬಾ ಮಾರ್ಮಿಕವಾಗಿ ತಿರಸ್ಕರಿಸಿ, ತಮ್ಮ ಸರಳತೆಯೇ ಶ್ರೇಷ್ಠ ಎಂದು ಸಾರುತ್ತಾರೆ.

೩

ಮಾತೃಮೂಲ ಪರಂಪರೆ ಮತ್ತು ಮಾತೃದೇವತೆಯರು

ತಾಯಿ ಅಪ್ಪಟ ಸತ್ಯದ ಒಂದು ರೂಪ. ಆದರೆ ತಂದೆ ಸತ್ಯಕ್ಕೆ ಹತ್ತಿರಾದವನು. ಹಾಗೆಂದು ಅವನೇ ಸತ್ಯ ಎಂದು ಹೇಳುವ ಹಾಗಿಲ್ಲ. ಒಂದು ಮಗುವಿನ ತಾಯಿ ಯಾರು ಎಂಬುದು ಅದನ್ನು ಹಡೆದವಳಿಗೆ ಮಾತ್ರ ಗೊತ್ತಿರುತ್ತದೆ. ಅದರ ತಂದೆ ಎನಿಸಿಕೊಂಡವನು ಹೌದಿರಬಹುದು, ಅಲ್ಲದಿರಲೂಬಹುದು. ಅದ್ದರಿಂದ 'ತಾಯಿಯೇ ಸತ್ಯ' ಎಂಬ ಮಾತೊಂದಿದೆ. ಈ ಮಾತನ್ನು ನಾನು ಆಧುನಿಕ ಕಲ್ಪನೆಯ ಪಾತಿವ್ರತ್ಯದ ದೃಷ್ಟಿಯಿಂದ ಹೇಳುತ್ತಿಲ್ಲ. ಮಾನವನ ಇತಿಹಾಸದಲ್ಲಿ ತಂದೆ ಎನ್ನುವವನ ಸ್ಥಾನ ಎಷ್ಟು ಗೌಣವಾಗಿತ್ತು ಮತ್ತು ಈಗಲೂ ಅದು ವಾಸ್ತವ ಅಲ್ಲವೇ ಎಂಬ ಜಿಜ್ಞಾಸೆಯಿಂದ ಹೇಳುತ್ತಿದ್ದೇನೆ. ಖ್ಯಾತ ಮಾನವಶಾಸ್ತ್ರಜ್ಞ ಶ್ರೀ ವಾತ್ಸವ ಅವರು ಗುರುತಿಸುವಂತೆ "ಭಾರತೀಯ ಪರಂಪರೆ ಆರಂಭದಿಂದಲೂ ಸ್ತ್ರೀಯನ್ನು ಆರಾಧಿಸುತ್ತಾ ಬಂದಿದೆ. ತಾಯಿಯಾದವಳು ಎಂದಿಗೂ ತಂದೆಗಿಂತ ಕೀಳಾದವಳಾಗಿರಲಿಲ್ಲ. ಆದರೆ ತಂದೆ ಎಷ್ಟೋ ವೇಳೆಯವರೆಗೆ ಅವಳಿಗಿಂತ ಕಡಿಮೆ ದರ್ಜೆಯವನಾಗಿ ಬಾಳಿದ್ದಿದೆ. ಮಕ್ಕಳನ್ನು ಹೆರುವ ಮತ್ತು ಸಾಕುವ ಅವಳ ಶಕ್ತಿಗಾಗಿಯೇ ಅವಳನ್ನು ಉತ್ತುಂಗ ಸ್ಥಾನದಲ್ಲಿಟ್ಟು ಗೌರವಿಸುತ್ತಾ ಬರಲಾಗಿದೆ. ಆದ್ದರಿಂದಲೇ ಶಾಕ್ತಪಂಥ ಒಂದು ಪ್ರಮುಖ ಪಂಥವಾಗಿ ಈ ದೇಶದಲ್ಲಿ ಬೆಳೆದು ಬಂತು ಮತ್ತು ಅದು ಅದೇ ಸ್ಥಾನಮಾನದಲ್ಲಿ ಮುಂದುವರಿಯುತ್ತಿದೆ."[೧೩]

ಹೀಗೆ ಮಾತೃವಿನಿಂದ ಮೊದಲಾದ ಮಾನವ ಜೀವನ ಮಾತೃವಿನ ಆಸರೆಯಲ್ಲಿಯೇ ಸಾವಿರಾರು ವರ್ಷಗಳನ್ನು ಕಳೆದಿದೆ. ಬೇಟೆಯ ಯುಗದಲ್ಲಿ ಗಂಡಸಾದವನು ಬೇಟೆಗಾಗಿ ಹೊರಹೋದಾಗ, ಹೆಣ್ಣು ಆಹಾರ ಸಂಗ್ರಹಣೆಯಲ್ಲಿ ತೊಡಗುತ್ತಿದ್ದಳು. ತನ್ನ ಮಕ್ಕಳು ಮರಿಗಳ ಪೋಷಣೆ ಮಾಡುತ್ತಲೇ ತನಗೆ ದಕ್ಕುತ್ತಿದ್ದ ಅಗತ್ಯ ವಸ್ತುಗಳನ್ನು ಶೇಖರಿಸುವ ಕೆಲಸ ಅವಳದಾಗಿತ್ತು. ಬೇಟೆ ಎಂದೋ

PDF created with pdfFactory Pro trial version www.pdffactory.com

ಎಲ್ಲಿಯೋ ಹೋಗಿ ಮತ್ಯಾವಾಗಲೋ ಬರುತ್ತಿದ್ದ ಗಂಡುಮಕ್ಕಳ ಪಾಲಿಗೆ ಅಪರಿಚಿತನೇ. ಅಷ್ಟಲ್ಲದೇ ಅಂದಿನ ಜೀವನದಲ್ಲಿ ಇಂಥವನೇ ತಂದೆ ಎಂಬ ಪದ್ಧತಿಯೇ ಇರಲಿಲ್ಲ. ಸಮೂಹದ ಎಲ್ಲರೂ ಎಲ್ಲರಿಗೂ ಗಂಡಂದಿರೇ. ಎಲ್ಲರೂ ಎಲ್ಲರಿಗೂ ಹೆಂಡಂದಿರೇ. ಆದ್ದರಿಂದ ಯಾವ ಗರ್ಭದಲ್ಲಿ ಮಗುವಿನ ಜನನವಾಗುತ್ತದೋ ಅವಳು ಆ ಮಗುವಿನ ತಾಯಿ. ಆದರೆ ತಂದೆ ಯಾರೆಂಬುದು ಯಾರಿಗೂ ಗೊತ್ತಿಲ್ಲ. ತಾಯಿಯಾದವಳಿಗೆ ನಿರ್ದಿಷ್ಟ ಗಂಡೊಂದು ತನ್ನ ಮಗುವಿಗೆ ಹುಟ್ಟಿಗೆ ಕಾರಣ ಎಂಬುದು ಗೊತ್ತಿದ್ದರೂ ಅಂದಿನ ಸಮಾಜದಲ್ಲಿ ಅದು ನಗಣ್ಯ. ಯಾಕೆಂದರೆ ಅದು ಮಾತೃಮೂಲ ಕುಟುಂಬ. ಹೀಗೆ ಆಹಾರ ಸಂಗ್ರಹಣೆ ಮತ್ತು ಅದನ್ನು ಶೇಖರಿಸಿ ಇಡುವ ಕೆಲಸ ನಿರ್ವಹಿಸುತ್ತಿದ್ದ ಹೆಣ್ಣು ಆರ್ಥಿಕ ಚಟುವಟಿಕೆಯಲ್ಲಿಯೂ ಮುಖ್ಯವಾಗುತ್ತಿದ್ದಳು. ಯಾಕೆಂದರೆ ಬೇಟೆಯಲ್ಲಿ ತಂದ ಮಾಂಸ ತಾತ್ಕಾಲಿಕ ಹಸಿವನ್ನು ನೀಗಿಸುತ್ತಿತ್ತಾದರೆ, ಸಂಗ್ರಹಿಸಿಟ್ಟ ಆಹಾರದ ಸರಕುಗಳು ಎಲ್ಲ ಕಾಲದಲ್ಲೂ ತಲೆ ಕಾಯುತ್ತಿದ್ದವು. ಮಾತೃವಿನ ಆರಾಧನೆ ಬಹುಶಃ ಈ ಹಂತದಿಂದಲೇ ಆರಂಭವಾಯಿತೆನಿಸುತ್ತದೆ. "ಆಹಾರ ಸಂಗ್ರಹಣಾ ಹಂತದಿಂದ ಆಹಾರ ಉತ್ಪಾದನಾ ಹಂತಕ್ಕೆ ಸಾಗುವಲ್ಲಿ ಉಂಟಾಗುವ ಮೊದಲ ಬದಲಾವಣೆ ಎಂದರೆ ಆಹಾರವನ್ನು ಕೆಡದಂತೆ ಸಂಗ್ರಹಿಸುವ ಪರಿಕರಗಳನ್ನು ತಯಾರಿಸಿಕೊಳ್ಳುವುದೇ ಆಗಿದೆ. ಇದರಿಂದ ಆಹಾರ ಸಂಗ್ರಹಣೆಯ ಅಪವ್ಯಯದ ಭಯವು ಕಡಿಮೆಯಾಗಿ ಬದುಕು ಒಂದಿಷ್ಟು ಸರಾಗಗೊಳ್ಳುತ್ತದೆ. ಮಡಿಕೆ ಕುಡಿಕೆಗಳು, ಬುಟ್ಟಿಗಳು ಈ ಪ್ರಯತ್ನದಿಂದಲೇ ಹುಟ್ಟಿಕೊಳ್ಳುತ್ತವೆ. ಬಹುಮಟ್ಟಿಗೆ ಇವನ್ನು ಹೆಂಗಸರೇ ತಯಾರಿಸುತ್ತಾರೆ. ಮಡಿಕೆ ಕುಡಿಕೆಗಳು ಆಹಾರವನ್ನು ಕೆಡದಂತೆ ಕಾಪಾಡುವ ಒಂದು ಉತ್ಪಾದನಾ ಸಾಧನವಾಗಿ ರೂಪು ತಳೆಯಿತೆಂಬ ಕಾರಣದಿಂದಲೇ ಅವು ಮಾತೃದೇವತೆಗಳ ಪೂಜೆಯ ಮುಖ್ಯ ಭಾಗವೂ ಆಗುತ್ತವೆ. ಇಂದಿಗೂ ಮಾತೃದೇವತೆಯ ಹೆಸರಿನಲ್ಲೇ ನಡೆಯುವ "ಬೋಗಿಲು"ಗಳಂತಹ ಹಬ್ಬಗಳಲ್ಲಿ ಮಡಿಕೆ ಕುಡಿಕೆಗಳಿಗೆ ಪ್ರಧಾನ ಸ್ಥಾನವಿರುವುದನ್ನು ಕಾಣಬಹುದಾಗಿದೆ. ಮಡಿಕೆಗಳು ಮಾತೃದೇವತೆಗಳ ಆರಾಧನಾ ವಿಧಿಗಳಲ್ಲಿ ಪ್ರಧಾನ ಪಾತ್ರವನ್ನು ಪಡೆಯುತ್ತವಷ್ಟೇ ಅಲ್ಲದೆ ಎಷ್ಟೋ ವೇಳೆ ಸ್ವತಃ ಅವು ಮಾತೃದೇವತೆಗಳ ಪ್ರತಿ ರೂಪಗಳಾಗಿ ನೇರವಾಗಿ ಪೂಜೆಗೊಳಗಾಗುತ್ತವೆ. ಪ್ರಾಚೀನ ಕಾಲದಿಂದ ಈ ವರೆಗೂ ಮಡಿಕೆಗಳನ್ನು ತಯಾರಿಸುವ ಕುಂಬಾರರು ಮಡಿಕೆಯ ಕತ್ತಿನ ಭಾಗದಲ್ಲಿ ಅಲಂಕಾರದ ಕುಸುರಿ ಕೆಲಸವನ್ನು ಮಾಡುತ್ತಾರೆ. ಅದು ಸ್ಪಷ್ಟವಾಗಿ ಸ್ತ್ರೀತ್ವವನ್ನು ಸೂಚಿಸುವಂಥದ್ದಾಗಿರುತ್ತದೆ. ಸತ್ತವರು ಮತ್ತೆ ತಾಯಿಯ ಗರ್ಭವನ್ನು ಸೇರಿಕೊಳ್ಳುತ್ತಾರೆ ಎಂಬ ನಂಬಿಕೆಯಿಂದಾಗಿ, ಬಹು ಪ್ರಾಚೀನ ಸಮಾಜಗಳಲ್ಲಿ ಸತ್ತವರ ದೇಹಗಳನ್ನು ತಾಯಿಯ ಗರ್ಭದ ಸಂಕೇತವಾದ ಮಡಿಕೆಗಳಲ್ಲಿಟ್ಟು ಹೂಳುತ್ತಿದ್ದರು."[೧೪]

ಹೀಗೆ ಆಹಾರ ಸಂಗ್ರಹಣೆಯ ಸಮಯದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿದ ಸ್ತ್ರೀಯ ಸ್ಥಾನಮಾನ ತನ್ನ ಸೃಷ್ಟಿ ಶಕ್ತಿಯ ಜೊತೆಗೆ ಆಹಾರ ರಕ್ಷಣಾ ಶಕ್ತಿಯನ್ನು ಒಂದುಗೂಡಿಸಿಕೊಂಡು, ಆರ್ಥಿಕ ಚಟುವಟಿಕೆಯ ಆರಂಭಿಕ ಹಂತದ ಉದಯಕ್ಕೆ ಕಾರಣಳಾದಳು.ಕೊಸಾಂಬಿಯವರ ಪ್ರಕಾರ ಈ ಹಂತವೇ ಮಾತೃದೇವತೆಯ ಉಗಮಕ್ಕೂ ಕಾರಣವಾಗಿರಬಹುದು. ಹೀಗೆ ಉಗಮಗೊಂಡ ದೇವತೆಯನ್ನು ಅಲೆಮಾರಿ ಜನರು ತಮ್ಮ ಕಾರ್ಯಕಲಾಪಗಳನ್ನು ಮುಗಿಸಿಬಂದು ಸೇರುತ್ತಿದ್ದ ಕೂಡುಹಾದಿಗಳಲ್ಲಿ ಪ್ರತಿಷ್ಠಾಪಿಸುತ್ತಿದ್ದರು. ಅದಕ್ಕೆ ನರಬಲಿ ಅಥವಾ ರಕ್ತಬಲಿಯನ್ನು ನೀಡಲಾಗುತ್ತಿತ್ತು. "ಈ ಮಾತೃದೇವತಾ ಪಂಥದ ಜನಪದ ರೂಪಗಳೇ ಗ್ರಾಮದೇವತೆಗಳು" ಎಂಬುದು ದೇವಿಪ್ರಸಾದ್ ಚಟ್ಟೋಪಾಧ್ಯಾಯ ಅವರ ಅಭಿಪ್ರಾಯ.

ಗಂಡು ಹೀಗೆ ಬೇಟೆಗೆ ಹೊರಡುತ್ತಿದ್ದ ಸಂದರ್ಭದಲ್ಲಿಯೇ ಹೆಣ್ಣು ಕೃಷಿಯನ್ನು ಅನ್ವೇಷಿಸಿದಳು ಎಂಬುದನ್ನು ಮತ್ತೊಂದು ಸಿದ್ಧಾಂತ. ವಿವಿಧ ರೀತಿಯ ಸಸ್ಯಾಹಾರಗಳನ್ನು ಅವಳು ಸಂಗ್ರಹಿಸುತ್ತಿದ್ದಳಾದ್ದರಿಂದ, ಬೀಜ, ಹಣ್ಣು, ಸೊಪ್ಪು, ಗೆಡ್ಡೆ, ಗೆಣಸುಗಳನ್ನು ಕಲೆ ಹಾಕುತ್ತಿದ್ದಳಾದ್ದರಿಂದ, ಅದನ್ನು ನೆಟ್ಟು ಬೆಳೆಸುವ ಅನ್ವೇಷಣೆ ಅವಳಿಂದಲೇ ಆಗಿರುವುದು ಅತ್ಯಂತ ಸಹಜವೇ. ಹೀಗಾಗಿ "ಹೆಣ್ಣಿನ ಗರ್ಭಧಾರಣೆ ಮತ್ತು ಭೂಮಿಯ ಸಸ್ಯಧಾರಣೆ ಇವೆರಡಕ್ಕೂ ಸಾಮ್ಯತೆಯನ್ನು ಕಂಡುಕೊಂಡ ಆದಿಮಾನವ ಹೆಣ್ಣು ಮತ್ತು ಭೂಮಿ ಇವೆರಡು ಪೂಜ್ಯ ವಸ್ತುವೆಂದು ಭಾವಿಸಿದ. ಸಮೃದ್ಧಿಯ ಆಚರಣೆಯಾಗಿ ಮಾಟ ರೂಪುಗೊಂಡಿತು."[೧೫] ಎಂಬುದು ಇಲ್ಲಿ ಗಮನಿಸಬೇಕಾದ ಅಂಶ.

"ಹರಪ್ಪ ಸಂಸ್ಕೃತಿಯಲ್ಲಿ ಒಂದು ಕುತೂಹಲಕರವಾದ ಮುದ್ರೆ ದೊರೆತಿದ್ದು ಇದು ಕೃಷಿ ದೃಶ್ಯಕ್ಕೆ ಸಂಬಂಧಿಸಿದ್ದಾಗಿದೆ. ಈ ಮುದ್ರಿಕೆಯಲ್ಲಿ ಸ್ತ್ರೀಯ ವಿಗ್ರಹವಿದ್ದು ಆಕೆಯ ಗರ್ಭದಿಂದ ಒಂದು ಸಸ್ಯವು ಹುಟ್ಟುತ್ತಿರುವಂತೆ ಚಿತ್ರಿಸಲಾಗಿದೆ. ಇದು ಇನ್ನೊಂದರ ಬದಿಯಲ್ಲಿ ಸ್ತ್ರೀ ಪುರುಷರ ಚಿತ್ರಗಳಿವೆ. ಒಬ್ಬ ಮನುಷ್ಯನು ನೇಗಿಲಿನಂಥ ಆಯುಧವನ್ನು ಹಿಡಿದಿದ್ದಾನೆ. ಈ ಚಿತ್ರದಲ್ಲಿರುವ ಮನುಷ್ಯ ಉಳುಮೆ ಮಾಡುವ ರೈತನೆಂದು ಭಾವಿಸಲಾಗಿದೆ. ಗರ್ಭದಿಂದ ಸಸ್ಯವು ಹೊರಹೊಮ್ಮುತ್ತಿರುವ ಸ್ತ್ರೀ ಚಿತ್ರವನ್ನು ಮಾತೃದೇವತೆಯಂದು ಹೇಳಲಾಗಿದೆ. ಈಕೆಯನ್ನು ಶಾಕಾಂಬರಿ ಎಂದು ಗುರುತಿಸುತ್ತಾರೆ. ಹೀಗೆ ಸಸ್ಯಸಂಬಂಧಿಯಾದ ದೇವತೆಯ ಇನ್ನೊಂದು ಮುದ್ರಿಕೆಯು ಹರಪ್ಪ ಸಂಸ್ಕೃತಿಯಲ್ಲೇ ದೊರಕಿದೆ. ಈ ಚಿತ್ರ ಒಂದು ಹೆಣ್ಣಿನದಾಗಿದ್ದು ಈಕೆ ಒಂದು ವೃಕ್ಷದ ಎರಡು ಕೊಂಬೆಗಳ ಮೇಲೆ ನಿಂತಿದ್ದಾಳೆ. ಒಬ್ಬ ಭಕ್ತನು ಮರದ ಪಕ್ಕದಲ್ಲಿ ಭಾಗಿ ನಿಂತಿದ್ದಾನೆ. ಒಂದು ಮೇಕೆಯು ಭಕ್ತನ ಹಿಂದೆ ನಿಂತಿದೆ. ಇದರ

PDF created with pdfFactory Pro trial version www.pdffactory.com

ಕೆಳಭಾಗದಲ್ಲಿ ಏಳು ವಿಗ್ರಹಗಳನ್ನು ಕಾಣಬಹುದು. ಈ ಚಿತ್ರದ ಹೆಣ್ಣಿನ ವಿಗ್ರಹವನ್ನು ಮಾತೃದೇವತೆಯೆಂದು ಭಾವಿಸಲಾಗಿದೆ. ಇದರಲ್ಲಿ ಏಳು ವಿಗ್ರಹಗಳು ಕಡಿಮೆ ದರ್ಜೆಯ ಏಳು ದೇವತೆಗಳೆಂದು ಭಾವಿಸಲಾಗಿದೆ. ಇಲ್ಲಿರುವ ಮೇಕೆಗೆ ಮನುಷ್ಯನ ಮುಖವಿರುವುದರಿಂದ ಇದು ಬಲಿಗಾಗಿ ತಂದ ಪ್ರಾಣಿಯಲ್ಲವೆಂದು ವಿದ್ವಾಂಸರು ಭಾವಿಸುತ್ತಾರೆ.[೧೬]

"ಭೂಮಿಯನ್ನು ತಾಯಿ ಎಂದೂ ಮಾನವರ ಮಾತೆ ಎಂದೂ ದೇವತೆ ತಾಯಿ ಎಂದೂ, ಅರಣ್ಯ, ಪ್ರಾಣಿ, ಪಕ್ಷಿ, ಇವುಗಳ ಮಾತೃವೆಂದೂ ಪೂಜಿಸಲಾಗಿದೆ. ಸ್ತನ, ಗರ್ಭ, ಯೋನಿ ಇವುಗಳನ್ನು ಮಾತೃದೇವತೆಯ ಸಂಕೇತಗಳೆಂದು ಅವರು ಭಾವಿಸಿದ್ದರು. ಈ ಮೂರು ಅಂಗಗಳು ಮುಖ್ಯ ಮೂರು ಚಟುವಟಿಕೆಗಳನ್ನು ಮಾಡುತ್ತವೆ. ಅವು ಪಾಲನೆ, ಧಾರಣೆ ಮತ್ತು ಸೃಷ್ಟಿ. ಸಿಂಧೂ ಸಂಸ್ಕೃತಿಯಲ್ಲಿ ದೊರೆತಿರುವ ಉಗ್ರಾಕಾರದ ಕಲ್ಲುಗಳನ್ನು ಮಾತೃದೇವತೆಯ ಸೃಷ್ಟಿಯ ಅಂಗವಾದ ಯೋನಿ ಎಂದು ಭಾವಿಸಲಾಗಿದೆ."[೧೭]

ಈ ಸೃಷ್ಟಿಸಂಕೇತವಾದ ಯೋನಿಯನ್ನು ಬಹು ಹಿಂದಿನಿಂದಲೇ ಭಾರತದಲ್ಲಿ ಪೂಜಿಸಿಕೊಂಡು ಬರಲಾಗಿದೆ ಎಂಬುದಕ್ಕೆ ಹರಪ್ಪ ಮತ್ತು ಮಹೆಂಜದಾರೋಗಳಲ್ಲಿ ಸಿಕ್ಕಿರುವ ವಿಗ್ರಹಗಳೇ ಸಾಕ್ಷಿಯಾಗಿವೆ. ಅದರಲ್ಲಿಯೂ ಇಂಥ ವಿಗ್ರಹಗಳು ಕೃಷಿ ಯೋಗ್ಯ ಕಣಿವೆಗಳು ಮತ್ತು ನದಿ ಕೊಳ್ಳಗಳಲ್ಲಿ ಸಿಕ್ಕಿರುವುದು ಇನ್ನೂ ಹೆಚ್ಚಿನ ಜಿಜ್ಞಾಸೆಗೆ ನಮ್ಮನ್ನು ಒಳಪಡಿಸುತ್ತವೆ. ಕರ್ನಾಟಕದಾದ್ಯಂತ ಲಭ್ಯವಿರುವ ಲಜ್ಜಾಗೌರಿ ವಿಗ್ರಹಗಳಂತೂ ಅನಾದಿಕಾಲದಿಂದಲೂ ಪೂಜಿಸಲ್ಪಡುತ್ತಿರುವ 'ಯೋನಿ' ಶ್ರೇಷ್ಠತೆಯನ್ನು ಎತ್ತಿ ಹಿಡಿಯುತ್ತವೆ. "ಸೃಷ್ಟಿದೇವತೆಯ, ಆದಿಮಾತೆಯ ರೂಪವನ್ನು ಈ ವಿಗ್ರಹಗಳು ಪ್ರತಿನಿಧಿಸುತ್ತವೆ. ತಾನು ದಿನವೂ ನೋಡುತ್ತಿದ್ದ ಅನುಭವಿಸುತ್ತಿದ್ದ ಸೃಷ್ಟಿಯ ವ್ಯಾಪಾರಗಳನ್ನು ತನಗೆ ಪರಿಚಯವಿದ್ದ ವಾತಾವರಣದಲ್ಲಿ ಆದಿಮಾನವರು ಅರ್ಥೈಸಿಕೊಳ್ಳಲು ಯತ್ನಿಸಿದರು. ಕ್ರಮೇಣ ಮಳೆ ಬೆಳೆ ಸಮೃದ್ಧಿಯನ್ನು ಕೊಡಮಾಡುವ ಅದೃಶ್ಯ ಶಕ್ತಿಯನ್ನು ರೂಪಿಸಲು ಶ್ರಮಪಟ್ಟರು. ಸಂತತಿ ಬರಲು, ಅದು ಆಹಾರಾದಿಗಳನ್ನು ಪಡೆದು ಬೆಳೆಯಲು ಕಾರಣಳಾದ ಜನನಿಯನ್ನೇ ಬೃಹತ್ ಸೃಷ್ಟಿ ರೂಪದಲ್ಲಿ ಕಂಡರು, ಪೂಜಿಸಿದರು. ಸುಫಲತೆಗೆ ಅವಳನ್ನು ಪ್ರಾರ್ಥಿಸಿದರು. ಸೃಷ್ಟಿ–ಪುಷ್ಟಿ (ಜನನ ಹಾಗೂ ಪೋಷಣೆ)ಗೆ ಹೆಣ್ಣೇ ಕಾರಣ! ಅದರಂತೆ ಕಾಳು, ಹಣ್ಣು ಬೆಳೆಗೆ ಕಾರಣವಾದ ಭೂಮಿಯೂ ಹೆಣ್ಣು ದೇವತೆಯೇ! ಎಂಬ ಕಲ್ಪನೆ ಅವನಲ್ಲಿ ಸ್ಥಿರವಾಗಿ ಬೇರು ಬಿಟ್ಟ ಯುಗದಲ್ಲಿ ಈ ವಿಗ್ರಹಗಳ ಮೂಲವನ್ನು ಹುಡುಕಬಹುದು. ಚರಿತ್ರೆ ಹಾಗೂ ಉತ್ಖನನಗಳ ದೃಷ್ಟಿಯಿಂದ ಪ್ರಾಗೈತಿಹಾಸ ಕಾಲದಿಂದಲೂ ಇಂಥ ವಿಗ್ರಹಗಳು ಕಂಡು ಬರುತ್ತಿವೆ. ನಮ್ಮಲ್ಲಿ, ಮೂರು ಸಹಸ್ರ

ವರ್ಷಗಳಿಂದಲೂ ಸೃಷ್ಟಿಗೆ ಕಾರಣವಾದ ಭೂಮಾತೆಯ ಪೂಜೆ ಬಳಕೆಯಲ್ಲಿರುವುದನ್ನು ಗುರುತಿಸಬಹುದು. ಯೋನಿ ಹಾಗೂ ಸ್ತನಗಳಿಗೆ ಪ್ರಾಧಾನ್ಯ ಕೊಟ್ಟ ಈ ವಿಗ್ರಹಗಳು ಸುಫಲತೆ ಸಮೃದ್ಧಿಗಳ ಆರಾಧ್ಯ ದೇವತೆಯ ರೂಪಗಳಾಗಿವೆ. ಕೆಲವು ಪ್ರಾದೇಶಿಕ ಬದಲಾವಣೆಗಳನ್ನು ಹೊಂದಿದರೂ, ಇಷ್ಟ ಫಲದಾಯಿನಿಯ ರೂಪದಲ್ಲಿ ಭಾವುಕರಿಂದ ಪೂಜಿಸಲ್ಪಡುವ ಜಗಜ್ಜನನಿಯ ಪ್ರತೀಕವಾಗಿ ಮುಂದುವರೆದು ಪ್ರಾಚೀನ ಸಂಪ್ರದಾಯವನ್ನು ಪ್ರತಿನಿಧಿಸುತ್ತವೆ. ಇಂದಿಗೂ ಇದೇ ರೂಪದಲ್ಲಿ ಪೂಜಿಸಲ್ಪಡುವ ಸ್ತ್ರೀ ವಿಗ್ರಹಗಳು ಅಲ್ಲಲ್ಲಿ ಗುಡಿಯಲ್ಲಿದ್ದು, ಮಕ್ಕಳಾಗದವರು, ವ್ರತೋಪಾಸನಗಳನ್ನು ಕೈಗೊಂಡು ವಿಗ್ರಹದ ಯೋನಿ ಸ್ತನಗಳಿಗೆ ಬೆಣ್ಣೆ–ಸಿಂಧೂರಗಳ ಲೇಪದ ಅರ್ಚನೆಯ ವಿಧಾನ ಕೈಗೊಳ್ಳುತ್ತಾರೆ. ಉತ್ತರ ಕರ್ನಾಟಕದ ಕೆಲವಡೆಯಲ್ಲಿ 'ಲಜ್ಜಾಗೌರಿ' ಎಂದೇ ಈ ದೇವತೆಯನ್ನು ಗುರುತಿಸುತ್ತಾರೆ.

ಲಜ್ಜಾಗೌರಿಯ ವಿಗ್ರಹಗಳಲ್ಲಿ ಹಲವು ನದಿಕೊಳ್ಳ, ನಿರ್ಜನ ಕಣಿವೆಗಳಲ್ಲಿ ದೊರೆತಿದ್ದು, ಸಮೀಪದಲ್ಲೇ ಪ್ರಸಿದ್ಧ ಶಕ್ತಿದೇವತೆಯ ಉಪಾಸನಾ ಕೇಂದ್ರಗಳಿದ್ದದ್ದು ಕಂಡು ಬಂದಿದೆ. ಭೀಮಾನದಿ ಕೊಳ್ಳದ ಚಂದ್ರಲಾಂಬೆ, ಮಲಪ್ರಭೆಯ ಮಾಕೂಟೆಶ್ವರಿ (ಮಹಾ ಕೂಟೇಶ್ವರಿ), ಕೃಷ್ಣಾತೀರದ ಜೋಗುಳಾಂಬಾ ಇತ್ಯಾದಿ. ಇವು ತಾಂತ್ರಿಕರ ಪೂಜಾಸ್ಥಾನಗಳಾಗಿದ್ದವು. ಭಾರತದ ಪವಿತ್ರ ಸಾಹಿತ್ಯದಲ್ಲಿ ಶ್ರುತಿ, ಸ್ಮೃತಿ, ಪುರಾಣಗಳ ಬಳಿಕ ತಂತ್ರಶಾಸ್ತ್ರದ ಸ್ಥಾನ ಬರುತ್ತದೆ. ಇದರ ಉಗಮ, ವೇದಗಳಷ್ಟೇ ಹಳೆಯ ತಂತ್ರಾಗಮನಗಳಲ್ಲಿದ್ದು ಶೈವ, ವೈಷ್ಣವ, ಜೈನ, ಬೌದ್ಧಧರ್ಮಗಳೆಲ್ಲ ತಂತ್ರಶಾಸ್ತ್ರದ ಹಲವಾರು ಅಂಶಗಳನ್ನು ಹೊಂದಿದೆ. ತಾಂತ್ರಿಕರಲ್ಲಿ ಸೃಜನಶಕ್ತಿಯುಳ್ಳ ಸ್ತ್ರೀಗೆ ಉನ್ನತ ಸ್ಥಾನವಿದೆ. ಸ್ತ್ರೀ ರೂಪಿ ಶಕ್ತಿ ಪೂಜೆಗೆ ಪ್ರಾಧಾನ್ಯ. ಹೀಗಾಗಿ ಶಾಕ್ತ'ರೆನಿಸಿ ಕೊಳ್ಳುತ್ತಾರೆ. ಸ್ತ್ರೀತತ್ವಶಕ್ತಿಯು ಎಲ್ಲ ಸೃಷ್ಟಿಗೂ ಮೂಲವಾಗಿ ಯೋನಿ ರೂಪದಲ್ಲಿ ಆಕೆಯನ್ನು ಪೂಜಿಸುವುದು ಸಾಮಾನ್ಯ. ಯೋನಿರೂಪವೇ ಸೃಷ್ಟ್ಯಾತ್ಮಕ ಪರತತ್ವದ ಸಂಕೇತವಾಗಿದೆ. ಸೃಷ್ಟಿಕರ್ತೆಯಂತೆ ಲಯಕಾರಣಿಯೂ ಆಗಿದ್ದ ಶಕ್ತಿಯ ಪೂಜೆ ಭಾರತದಾದ್ಯಂತ ವಿವಿಧ ರೂಪಗಳಲ್ಲಿ ನಡೆದು ಬಂದಿತು.

ತಾಂತ್ರಿಕರ ಪೂಜಾಕ್ರಮದಲ್ಲಿ ಸ್ತ್ರೀಯರಿಗೆ ಪ್ರಧಾನ್ಯವಿದ್ದು ಕೆಲವೊಮ್ಮೆ ಶಾಕ್ತಪಂಥದ ಯೋಗಿನಿಯರೇ ತಾಂತ್ರಿಕ ವಿಧಾನಗಳು, ಮಂತ್ರಶಕ್ತಿಗಳಲ್ಲಿ ಮಿಗಿಲಾಗಿರುತ್ತಿದ್ದರು. ಹೆಣ್ಣಿನಲ್ಲಿ ದೈವಿಕತೆ ಕಂಡದ್ದು, ಜಾತಿಪಂಥ ಪದ್ಧತಿಯನ್ನು ಮೀರಿ ನಿಂತದ್ದು ಹಾಗೂ ವರ್ಗಸಮಾನತೆಯನ್ನು ಸಾಧಿಸಿದ್ದು ತಾಂತ್ರಿಕ ತತ್ವದ ಉತ್ತಮಾಂಶಗಳು. ಆದರೆ ಅವರಲ್ಲಿ ಹಲವರು ಬಾಹ್ಯಾಚರಣೆಗಳಲ್ಲೇ ಮಗ್ನರಾಗಿ, ಪಂಚ'ಮ'ಕಾರಗಳಿಗೆ ಮಹತ್ವ ನೀಡಿದ್ದು(ಮಾಂಸ, ಮತ್ಸ್ಯ, ಮುದ್ರೆ, ಮದ್ಯ ಮೈಥುನಗಳು ಪವಿತ್ರ ರೂಪದಲ್ಲಿ ಸಾಧನೆಯ ಅಂಗಗಳಾಗಿವೆ) ಇತರ ವೈದಿಕ ಮತಾನುಯಾಯಿಗಳು ಅವರನ್ನು ವಾಮಪಂಥೀಯ(ವಾಮಮಾರ್ಗಿ)ರೆಂದು ಹೀಗಳೆಯಲು ಕಾರಣವಾಯಿತು.

PDF created with pdfFactory Pro trial version www.pdffactory.com

ಶಂಕರಾಚಾರ್ಯರ ಧರ್ಮ ಸುಧಾರಣೆಯ ಕ್ರಮಗಳು ಪೂರ್ವ ಭಾರತದ ಮೇಲೆ ಅಷ್ಟೊಂದು ಪ್ರಭಾವ ಬೀರಿದಂತೆ ತೋರುವುದಿಲ್ಲ. ಅಲ್ಲಿ ಶಕ್ತಿಪೂಜೆ ಮೊದಲಿನಂತೆಯೇ ಮುಂದುವರಿದು ಅಸ್ಸಾಮದ ಕಾಮಾಖ್ಯಾ, ಜಾಗೃತ ಶಕ್ತಿ ದೇವತೆಯೆಂದು ಮುಂದುವರಿದು ಎಲ್ಲ ವರ್ಗಗಳ ಜನರ ಆರಾಧನೆಗೆ ಪಾತ್ರಳಾಗಿದ್ದಾಳೆ. ಇಲ್ಲಿ ಮುಖ್ಯವಾದದ್ದು ಈ ದೇವತೆಯ ಯೋನಿರೂಪ. ದೇವಾಲಯದ ಒಳಗಡೆ ಗುಹೆಯಲ್ಲಿ ಶಿಲೆಯೊಂದರ ಮೇಲೆ ಪ್ರತಿಷ್ಠಿತಳಾಗಿದ್ದಾಳೆ. ನೈಸರ್ಗಿಕ ಝರಿಯೊಂದು ಯೋನಿಭಾಗವನ್ನು ಸದಾ ಆರ್ದ್ರವಾಗಿಡುತ್ತದೆ. ಜ್ಯೇಷ್ಠ ಮಾಸದ ಕೊನೆಯಲ್ಲಿ ಅಥವಾ ಆಷಾಢದ ಮೊದಲಲ್ಲಿ ಬರುವ 'ಅಂಬುವಾಚಿ' ದೇವಿಯ ವಾರ್ಷಿಕ ಉತ್ಸವ ಮೊದಲಲ್ಲಿ ಆಚರಿಸಲ್ಪಡುತ್ತದೆ. ಆದಿಮಾತೆಯು ಕೃಷಿ ಸಂಬಂಧಿತ ಚಟುವಟಿಕೆಗಳನ್ನೆಲ್ಲಾ ಮೂರು ದಿನಗಳ ಕಾಲ ಸ್ಥಗಿತಗೊಳ್ಳಲು ಕಾರಣಳಾಗುತ್ತಾಳೆ! ಏಕೆಂದರೆ ಅಂಬುವಾಚಿ(ಅಂಬು=ಮಳೆ, ವಾಚಿ=ಅರಳುವುದು)ಯ ಅವಧಿಯಲ್ಲಿ ಭೂಮಿ ರಜಸ್ವಲೆಯಾಗುತ್ತಾಳೆ ಎಂದು ಆ ಜನರ ನಂಬಿಕೆ. ಆಗ ನೆಲಕ್ಕೆ ನೇಗಿಲು ಹತ್ತಕೂಡದು. ಭೂಮಿತಾಯಿಯನ್ನು ನೋಯಿಸಕೂಡದು. ಮೂರುದಿನ ಕಾಮಾಖ್ಯಾ ದೇವಾಲಯದ ಬಾಗಿಲು ಮುಚ್ಚಿರುತ್ತದೆ. ಆ ಬಳಿಕವೇ ದೇವಿಯ ದರ್ಶನ ಲಭ್ಯ. ಕೆಂಪು ಹೂ, ಕೆಂಪು ಬಟ್ಟೆ, ಕುಂಕುಮಗಳಿಂದ ದೇವಿಯನ್ನು ಅರ್ಚಿಸುತ್ತಾರೆ. ಅಪಾರ ಸಂಖ್ಯೆಯಲ್ಲಿ ಭಕ್ತಾದಿಗಳು ನೆರೆದಿದ್ದು ಕೆಂಪು ಬಟ್ಟೆಗಳ ಚೂರುಗಳ ಪ್ರಸಾದ ವಿನಿಯೋಗಕ್ಕೆ ಕಾದಿರುತ್ತಾರೆ. ಬಂಗಾಲದಲ್ಲಿ ಅಂಬುವಾಚಿಯ ಕಾಲ ವಿಶಿಷ್ಟವಾಗಿ ಆಚರಿಸಿದರೆ ಒರಿಸ್ಸಾದಲ್ಲಿಯೂ 'ರಜ ಉತ್ಸವ'ವು ಹೆಣ್ಣು ಮಕ್ಕಳ ಹಬ್ಬವಾಗಿದೆ. ಕಾಶ್ಮೀರದಲ್ಲಿಯೂ ಸೂರ್ಯಪತ್ನಿಯೆಂದು ಭೂಮಿದೇವಿಯ ಋತುಸ್ನಾನದ ಪೂಜೆಯನ್ನು ಸ್ತ್ರೀಯರೇ ಮಾಡುತ್ತಾರೆ. ಹೀಗೆ ಸೃಷ್ಟಿದೇವತೆಯ ಪೂಜೆ, ಭೂದೇವಿಯ ಪೂಜೆಯಲ್ಲಿ ಮಾರ್ಪಾಡಾಗಿ ಒಳ್ಳೆಯ ಫಸಲಿಗೆ ಆಕೆಯನ್ನು ಆರಾಧಿಸುವಲ್ಲಿ ರೂಪ ಹೊಂದಿದೆ.

ಈ ತನಕ ಲಭಿಸಿದ ಲಜ್ಜಾಗೌರಿಯ ಹೆಚ್ಚಿನ ವಿಗ್ರಹಗಳಲ್ಲಿ ಹೊಟ್ಟೆಯನ್ನು ಕುಂಭಾಕಾರದಲ್ಲಿ ಒಡಮೂಡಿಸಲಾಗಿದೆ. ಗರ್ಭಾಶಯದ ಪ್ರತೀಕವಾಗಿ ಪ್ರಾರಂಭವಾದ ಕುಂಭಪೂಜೆ ಅತ್ಯಂತ ಪ್ರಾಚೀನವಾಗಿದ್ದು ಭಾರತದ ಎಲ್ಲಾ ಮತಪಂಥಗಳಲ್ಲಿ ಪವಿತ್ರ ಅರ್ಚನೆಯ ಭಾಗವಾಗಿ ಮುಂದುವರಿದಿದೆ.

ಋಗ್ವೇದಕಾಲೀನ ಕಲ್ಪನೆಯಲ್ಲಿ ಆಕಾಶ(ದ್ಯಾ)ವೇ ತಂದೆ. ಭೂಮಿಯೇ ತಾಯಿ. ಇವರಿಬ್ಬರ ಮುಖಾಮುಖಿ ಸಮಾಗಮದಿಂದ ಭೂಮಿಯು ಗರ್ಭ ಧರಿಸಿ ಬಗೆಬಗೆಯ ಸೃಷ್ಟಿಜೀವಿಗಳಿಗೆ ಕಾರಣಳಾದಳು. ಇಲ್ಲಿ ಬರುವ 'ಉತ್ತಾನಚಮು' ಎಂಬ ಶಬ್ದವು ತೆರೆದ(ಮುಖಾಮುಖಿ) ಕುಂಭವೆಂದು ಅರ್ಥೈಸಲಾಗಿದೆ. ವಿಗ್ರಹರೂಪಿ

ಭೂಮಾತೆಯು ಕುಂಭಧಾರಿಣಿ ಎಂದು ಪೂಜೆಗೊಂಡದ್ದು ಆಶ್ಚರ್ಯವಲ್ಲ. ಪ್ರಾಗೈತಿಹಾಸಿಕ ಕಾಲದಲ್ಲೆಲ್ಲಾ ಕುಂಭಕರ್ಮವು ಹೆಣ್ಣುಮಕ್ಕಳ ಕೆಲಸವಾಗಿದ್ದು, ರೇಣುಕೆಯ ಕಥೆಯಲ್ಲಿ ಹಸಿಮಣ್ಣಿನ ಕೊಡ ಪ್ರಾತಿನಿಧಿಕವಾಗಿದೆ. ಎಲ್ಲಮ್ಮನ ಪೂಜೆಯಲ್ಲಿ ಕೊಡ ಹೊತ್ತು ಕುಣಿಯುವ ವಿಧಿ ಇದೆ. ಪೂರ್ಣಕುಂಭ(ಕಲಶ)ವು ಎಲ್ಲಾ ಉತ್ಸವಾದಿ ವಿಶೇಷ ಪ್ರಸಂಗಗಳಲ್ಲಿ ಆದ್ಯತೆ ಹೊಂದಿದೆ. ಶಕ್ತಿಪೂಜೆಗೆ ಪ್ರಾಧಾನ್ಯವಿರುವ ನವರಾತ್ರಿಯು ಘಟಸ್ಥಾಪನೆಯೊಂದಿಗೆ ಪ್ರಾರಂಭವಾಗುತ್ತದೆ. ಕುಂಭ ಅಥವಾ ಘಟದಲ್ಲಿ ಬಗೆಬಗೆಯ ಕಾಳುಗಳನ್ನು ಇಟ್ಟು ಮೊಳಕೆಯೊಡಿಸಿ ಪೂಜಿಸುವ ಕ್ರಮ ದೇಶದ ವಿವಿಧ ಭಾಗಗಳಲ್ಲಿದೆ. ವರಮಹಾಲಕ್ಷ್ಮಿಯ ಸಾಲಂಕೃತ ಕಲಶ ಪೂಜೆ, ಶ್ರಾವಣ ಮಾಸದ ವೈಶಿಷ್ಟ್ಯವಾಗಿ ಬೆಳೆದುಬಂದಿದೆ. ಮಹಾಲಕ್ಷ್ಮಿಯು ಭುವನೇಶ್ವರಿ ಅಥವಾ ಭೂಮಾತೆಯೇ!

ಬೆಂಗಳೂರಿಗೆ ಪರಿಚಿತವಿರುವ ಕರಗವು ಶಕ್ತಿಪೂಜೆಯಲ್ಲಿ ಸ್ತ್ರೀಯರ ಪ್ರಾಧಾನ್ಯವಿದ್ದ ಯುಗದ ಪಳೆಯುಳಿಕೆಯಾಗಿ ಮುಂದುವರಿದಿದೆ ಎಂಬುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಧರ್ಮರಾಯನ ಕರಗದ ಮುಖ್ಯ ಪೂಜಾರಿ ಸ್ತ್ರೀ ವೇಷವನ್ನು ತೊಡುವುದು ಮತ್ತು ದ್ರೌಪದಿಯು ಶಕ್ತಿಸ್ವರೂಪಿಣಿಯಾಗಿ ಪೂಜಿಸಲ್ಪಡುವುದು ಪ್ರಾಚೀನವಾದ ಮಹತ್ವದ ಸ್ತ್ರೀ ಕರ್ಮಕ್ಕೆ ನೀಡಿದ ಆದ್ಯತೆಯನ್ನು ಸೂಚಿಸುತ್ತದೆ. ನಮ್ಮ ದೇಶದ ಪೂಜಾ ವಿಧಾನಗಳು ಒಮ್ಮಿಂದೊಮ್ಮೆ ಕಣ್ಮರೆಯಾಗುವುದಿಲ್ಲ. ದೇವಾದಿದೇವತೆಗಳ ಸ್ವರೂಪ(ಅಲಂಕಾರ ವಿಶೇಷಗಳಿಂದ) ಅಥವಾ ಅರ್ಚಕ ವರ್ಗವು ಹಿಂದಿನ ಆಳರಸರ ಆಶ್ರಯಕ್ಕನುಗುಣವಾಗಿ ಬದಲಾದರೂ, ಸ್ಥಳ ಪುರಾಣಗಳು ಹಾಗೂ ಅರ್ಚನಾ ವಿಧಿಗಳ ಸಾಂಕೇತಿಕತೆಗಳು ಮುಂದುವರಿದೇ ಬರುತ್ತವೆ. ಇವುಗಳ ವಿಶೇಷ ಅಧ್ಯಯನ ಕೈಗೊಂಡಲ್ಲಿ ನಿಂತ ನೀರಾಗಿರದ, ಎಲ್ಲ ಕಾಲಗಳ ಬದಲಾವಣೆಗಳನ್ನು ಅರಗಿಸಿಕೊಳ್ಳಬಲ್ಲ, ಆದರೆ ಪ್ರಾಚೀನತೆಯನ್ನು ಬಿಟ್ಟು ಕೊಡದ ಭಾರತೀಯ ಪರಂಪರೆಯ ವೈಶಿಷ್ಟ್ಯಗಳನ್ನು ಅರಿಯಲು ಸಹಾಯವಾದೀತು."[೧೮]

ಕರ್ನಾಟಕ ಹಾಗೂ ತಮಿಳುನಾಡಿನಲ್ಲಿ ಬಹು ಜನಪ್ರಿಯವಾಗಿರುವ ಕರಗದ ಆಚರಣೆಯನ್ನು ನಾವು ಮತ್ತೆ ನೆನಪಿಸಿಕೊಳ್ಳಲೇಬೇಕು. ಈ ಕೃತಿಯ ಆರಂಭದ ಪುಟಗಳಲ್ಲಿ ನಾನು ನನ್ನೂರಿನ ಉಜ್ಜನಿ ಚೌಡಮ್ಮನ ಹಬ್ಬವನ್ನು ಪ್ರಸ್ತಾಪಿಸಿ, ಅಲ್ಲಿ ಎಲ್ಲಕ್ಕಿಂತ ಧೂಪುಂಡಿಗೆ ಮತ್ತು ಕರಗ ಕೊಂಡ ಹಾಯುತ್ತವೆ ಎಂದು ಹೇಳಿದ್ದೆ. ಜಲ ಮತ್ತು ಫಲದ ಸಂಕೇತವಾದ ಈ ಕರಗ, ಮೂಲದಲ್ಲಿ ಇದ್ದ 'ಕರಗದಮ್ಮ' ಅಲ್ಲದೇ ಮತ್ತೇನೂ ಅಲ್ಲ. ಅಂದರೆ ಕರ್ನಾಟಕ ಮತ್ತು ತಮಿಳುನಾಡಿನಲ್ಲಿ 'ಕರಗ'ವನ್ನು ಆದಿಶಕ್ತಿಯ ಪ್ರಾಚೀನ ರೂಪವೆಂದು ನಂಬಲಾಗಿತ್ತು. ಈ ಕರಗದ ಆರಾಧನೆಯನ್ನು

PDF created with pdfFactory Pro trial version www.pdffactory.com

ಕುರಿತು ಹಲವು ವಿದ್ವಾಂಸರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ, ಡಾ.ಚಂದ್ರಶೇಖರ ಕಂಬಾರರು "ಕರಗ ಶುದ್ಧಾಂಗವಾಗಿ ಪ್ರಾರಂಭದಲ್ಲಿ ಸಮೃದ್ಧಿ ಸೂಚಕವಾದ ಯೋನಿ ಪೂಜೆಯಾಗಿತ್ತೆಂಬುದರಲ್ಲಿ ಸಂದೇಹವಿಲ್ಲ" ಎಂದು ಹೇಳುತ್ತಾರೆ. ಡಾ. ಸಿದ್ದಲಿಂಗಯ್ಯನವರು "ಸ್ತ್ರೀಪ್ರಧಾನ ಆಚರಣೆಯೊಂದು ಪುರುಷ ಪ್ರಧಾನವಾಗಿ ನಮ್ಮ ಮುಂದಿದೆ" ಎಂದು ಕರಗದ ಇವತ್ತಿನ ಆಚರಣೆಯನ್ನು ಕುರಿತು ಹೇಳುತ್ತಾ, ಅದಕ್ಕೆ ಕಾರಣಗಳನ್ನು ಹೀಗೆ ನೀಡುತ್ತಾರೆ: "ಸಮೃದ್ಧಿ ಆಚರಣೆಗಳೆಲ್ಲವೂ ಸ್ತ್ರೀಸಂಬಂಧಿ ಆಚರಣೆಗಳಾದ್ದರಿಂದ ಅನೇಕ ಸಂಸ್ಕೃತಿಗಳಲ್ಲಿ ಗಂಡಿಗೆ ಆಚರಣೆಯ ಹಕ್ಕನ್ನು, ಆಚರಣೆಯ ಸ್ಥಳಕ್ಕೆ ಅವರ ಪ್ರವೇಶವನ್ನು ನಿರಾಕರಿಸಲಾಗಿದೆ. ಮಾನವ ಜೀವನವಿಧಾನ ಬದಲಾದಂತೆ ಕೃಷಿಯ ಮುಂದುವರಿದ ಘಟ್ಟಗಳಲ್ಲಿ ಗಂಡು ಮಹತ್ವದ ಸ್ಥಾನವನ್ನು ಗಳಿಸಿದ್ದಾನೆ. ಆಗ ಸಮೃದ್ಧಿಯ ಆಚರಣೆಗಳನ್ನು ನೆರವೇರಿಸುವ ಹೊಣೆಗಾರಿಕೆ ಅವನದಾಗುತ್ತದೆ. ಈ ತೊಡಕನ್ನು ನಿವಾರಿಸಲು ಗಂಡುಪೂಜಾರಿಯು ಸ್ತ್ರೀವೇಷಧಾರಿಯಾಗುತ್ತಾನೆ. ಆದ್ದರಿಂದ ಗಂಡು ಹೆಣ್ಣಿನಂತೆ ವರ್ತಿಸಲು ಸಾಂಸ್ಕೃತಿಕ ಕಾರಣಗಳೇ ಮುಖ್ಯ."

ಹೀಗೆ ಗಂಡುಪೂಜಾರಿಗಳು ಸ್ತ್ರೀವೇಷಧಾರಿಗಳಾಗುವ ಸಂಬಂಧ ನಮ್ಮ ಅನೇಕ ಗ್ರಾಮದೇವತೆಗಳ ಹಬ್ಬಗಳ ಸಂದರ್ಭದಲ್ಲಿಯೂ ಏರ್ಪಡುತ್ತದೆ ಎಂಬುದನ್ನು ನಾವು ಗಮನಿಸಲೇಬೇಕು. ಒಟ್ಟಿನಲ್ಲಿ ಈ ಕರಗದ ಆಚರಣೆ ದ್ರಾವಿಡ ಬುಡಕಟ್ಟುಗಳಲ್ಲಿ ಪ್ರಚಲಿತವಿದ್ದ ಫಲ ಸಮೃದ್ಧಿ ಆಚರಣೆಯ ಪಳೆಯುಳಿಕೆ ಎಂಬುದು ನಿಸ್ಸಂದೇಹವಾದ ಸಂಗತಿ.

ಹೀಗೆ ಪ್ರಾಚೀನ ಸಮಾಜಗಳಲ್ಲಿಯೇ ಆರಾಧನೆಗೊಳಪಟ್ಟ ಜಲ ಮತು ಫಲದ ಸಂಕೇತವೆನಿಸಿದ 'ಕುಂಭ–ಕಲಶ–ಕರಗ"ಗಳು ನಮ್ಮ ಬುಡಕಟ್ಟು ಸಮಾಜಗಳಲ್ಲಿ ಇಂದಿಗೂ ಪ್ರಚಲಿತದಲ್ಲಿವೆ ಎಂಬುದನ್ನು ಪ್ರತಿಪಾದಿಸುವುದೇ ಈ ಅಧ್ಯಾಯದ ಉದ್ದೇಶವಾಗಿತ್ತು. ಗೊಂಡರ ಮಂಡಲದಲ್ಲಿ ಪ್ರತಿಷ್ಠಾಪಿಸುವ 'ಕಲಶ' ಮತ್ತು ಮೇರರ ಕಾಡ್ಯನಾಟದ 'ಕಲಶಗಳು' ಹಾಗೂ ಬಲೀಂದ್ರ ಪೂಜೆಯ ಫಲಪುಷ್ಪಭರಿತ ಕಲಶ ಇವೆಲ್ಲವೂ ಇಂಥ ಸಂಕೇತಗಳೇ ಎಂಬುದು ನನ್ನ ಭಾವನೆ. ನಾನು ಈಗಾಗಲೇ ಪ್ರತಿಪಾದಿಸಿದಂತೆ ಅನಂತರದ ಹಲವು ಅವಸ್ತಾಂತರಗಳಲ್ಲಿ ಪುರುಷ ದೈವಗಳು ಅವತರಿಸಿದವು. ಈ ದೈವಾಂತರಗಳನ್ನು ಪ್ರಕೃತಿ ದೇವತೆಯರು, ಸಮೃದ್ಧಿ ದೇವತೆಯರು, ಚಟುವಟಿಕೆಯ ದೇವತೆಯರು, ಉನ್ನತ ದೇವತೆಯರು, ಜಗದಧಿಕಾರದ ದೇವತೆಯರು ಮುಂತಾಗಿ ವಿದ್ವಾಂಸರು ಹೆಸರಿಸಿದ್ದಾರೆ. ಆರಂಭದಲ್ಲಿ ಪ್ರಕೃತಿಯ ಅನುಕರಣೆ, ನಂತರದಲ್ಲಿ ಸರಳ ರೂಪದ ಕಂಬ ಮತು ಕುಂಭಗಳು, ಅನಂತರದಲ್ಲಿ ನಿರ್ದಿಷ್ಟ ರೂಪದ ಮೂರ್ತಿಗಳಾಗಿ ತಮ್ಮ ಇರುವನ್ನು ಗುರುತಿಸಿಕೊಂಡ ಈ ದೇವತೆಗಳ

ಚರಿತ್ರೆ ಸ್ತ್ರೀ ಮತ್ತು ಪುರುಷವರ್ಗಗಳ ನಡುವಿನ ಅನುಸಂಧಾನ ಹಾಗೂ ಸಾಂಸ್ಕೃತಿಕ ಘರ್ಷಣೆಯಾಗಿ ನಮ್ಮ ಕುತೂಹಲವನ್ನು ಕೆರಳಿಸುತ್ತವೆ. ಈ ಸಂದರ್ಭದಲ್ಲಿ ಪ್ರಖ್ಯಾತ ಚಿಂತಕ ಬರ್ಟ್ರೆಂಡ್ ರೆಸಲ್ ಅವರ ಕೆಲವು ಮಾತುಗಳನ್ನು ಉಲ್ಲೇಖಿಸುತ್ತಾ ಈ ಅಧ್ಯಾಯವನ್ನು ತಾತ್ಕಾಲಿಕವಾಗಿ ಮುಗಿಸಬಯಸುತ್ತೇನೆ.

"ಎಲ್ಲ ಆಧುನಿಕ ಸಮಾಜಗಳೂ ಪಿತೃಯಾಜಮಾನ್ಯ ಕುಟುಂಬಪದ್ಧತಿಯ ಮೇಲೆ ನೆಲೆಗೊಂಡಿರುವುದು ಹಾಗೂ ಈ ವ್ಯವಸ್ಥೆಯು ಸಾಧ್ಯವಾಗಲು ಸ್ತ್ರೀ ಪಾವಿತ್ರ್ಯದ ಕಲ್ಪನೆಯನ್ನು ಸೃಷ್ಟಿಸಿಕೊಂಡಿರುವುದು ಇವುಗಳನ್ನು ನೋಡಿದರೆ, ಪಿತೃತ್ವದ ಭಾವನೆಯನ್ನು ಉಂಟುಮಾಡಲು ಯಾವ ಸಹಜ ತುಡಿತಗಳು ಕಾರಣವಾಗಿವೆ ಎಂಬುದನ್ನು ವಿಚಾರಿಸುವುದು ತುಂಬಾ ಮಹತ್ವಪೂರ್ಣವೆನಿಸುತ್ತದೆ. ಅವೈಚಾರಿಕರು ಭಾವಿಸುವಂತೆ ಇದು ಅಷ್ಟೇನೂ ಸರಳವಾದ ವಿಷಯವಲ್ಲ. ಮಗುವಿನ ಬಗ್ಗೆ ತಾಯಿಯ ಭಾವನೆಯನ್ನು ಅರ್ಥ ಮಾಡಿಕೊಳ್ಳುವುದೇನೂ ಕಷ್ಟವಲ್ಲ. ಏಕೆಂದರೆ ಅವರಿಬ್ಬರಲ್ಲಿ ಕೂಸು ಮೊಲೆಯುಣ್ಣುವವರೆಗೆ ನಿಕಟವಾದ ದೈಹಿಕ ಸಂಪರ್ಕವಿದೆ. ಆದರೆ ಮಗುವಿನ ತಂದೆಯ ಸಂಬಂಧ ಪರೋಕ್ಷವಾದದ್ದು, ಕಲ್ಪನಾತ್ಮಕವಾದದ್ದು, ಊಹೆಯಿಂದಾದುದು. ಇದು ತಾಯಿಯ ಪಾತಿವ್ರತ್ಯದೊಂದಿಗೆ ಸಂಬಂಧಿಸಿದ್ದು. ಹೀಗಾಗಿ ಈ ವಿಷಯವು ಪ್ರವೃತ್ತ್ಯಾತ್ಮಕವೆನ್ನಲಾಗದಷ್ಟು ಬೌದ್ಧಿಕಕ್ಷೇತ್ರಕ್ಕೆ ಸೇರಿದೆ; ಕೊನೆಯ ಪಕ್ಷ, ಗಂಡಸಿನ ಬಗ್ಗೆ ಪಿತೃತ್ವಭಾವನೆಯನ್ನು ಅವನ ಮಕ್ಕಳಲ್ಲಿಯೇ ನಿರ್ದೇಶಿಸಬೇಕಾಗುತ್ತದೆಂಬಷ್ಟರ ಮಟ್ಟಿಗಾದರೂ ಇದು ಸತ್ಯ. ಆದರೆ ಇದು ಸದಾ ಆಗುವಂತಹುದೇನೂ ಅಲ್ಲ. ಜನರಿಗೆ ತಂದೆಯರಿರುತ್ತಾರೆಂಬ ವಿಷಯವನ್ನೇ



ಲಜ್ಜಾಗೌರಿ

PDF created with pdfFactory Pro trial version www.pdffactory.com

ಮೆಲನೀಸಿಯನ್ನರು ಅರಿಯರು, ಆದರೂ ತಾವು ತಂದೆಯರೆಂಬುದನ್ನು ತಿಳಿದವರು ಮಕ್ಕಳ ಬಗ್ಗೆ ಇಡುವಷ್ಟೇ ವಾತ್ಸಲ್ಯವನ್ನೇ ಅವರು ಇಟ್ಟಿರುತ್ತಾರೆ. ಮಾಲಿನೋವ್‌ಸ್ಕಿ ಟೋಬ್ರಿಯಂಡ್ ದ್ವೀಪವಾಸಿಗಳ ಬಗ್ಗೆ ರಚಿಸಿರುವ ಗ್ರಂಥಗಳಲ್ಲಿ ಪಿತೃತ್ವದ ಬಗ್ಗೆ ಅಪಾರವಾದ ಬೆಳಕು ಚೆಲ್ಲಲಾಗಿದೆ.

ವಾಸ್ತವವಾಗಿ ಪುರುಷನು ಮಕ್ಕಳಲ್ಲಿ ಆಸಕ್ತಿ ಇಡಲು ಎರಡು ಸ್ಪಷ್ಟ ಕಾರಣಗಳಿವೆ. ಮಗು ತನ್ನದೆಂಬ ನಂಬಿಕೆ ಅಥವಾ ಅದು ತನ್ನ ಹೆಂಡತಿಯದೆಂಬ ಅವನ ತಿಳುವಳಿಕೆ. ತಂದೆಯ ಪಾತ್ರದ ಅರಿವೇ ಇಲ್ಲದಿರುವಡೆಗಳಲ್ಲಿ ಎರಡನೇ ಕಾರಣವೇ ಪ್ರೇರಕವಾಗುವುದು.

ಟೋಬ್ರಿಯಂಡ್ ದ್ವೀಪವಾಸಿಗಳಿಗೆ ತಂದೆಯೆಂಬ ಕಲ್ಪನೆಯೇ ಇಲ್ಲದಿರುವ ವಿಷಯವೂ ಮಾಲಿನೋವ್‌ಸ್ಕಿಯ ಗ್ರಂಥಗಳಿಂದ ವಿವಾದಾತೀತವಾಗಿ ಪ್ರತಿಪಾದಿಸಲ್ಪಟ್ಟಿದೆ. ಆತನು ಕಂಡ ಒಂದು ವಿಷಯವನ್ನು ನಿದರ್ಶನವಾಗಿ ನೋಡಬಹುದು. ಯಾರಾದರೊಬ್ಬನೂ ಒಂದು ವರ್ಷವೋ ಹೆಚ್ಚು ಕಾಲವೋ ಪ್ರವಾಸ ಕೈಗೊಂಡಿದ್ದು ವಾಪಸಾದಾಗ ತನ್ನ ಹೆಂಡತಿಯು ಹೊಸ ಮಗುವನ್ನು ಪಡೆದಿದ್ದರೆ ಸಂತೋಷಿ ಸುತ್ತಾನೆಯೇ ಹೊರತು, ತನ್ನ ಹೆಂಡತಿಯ ಪಾತಿವ್ರತ್ಯದ ಬಗ್ಗೆ ಯುರೋಪಿಯನ್ನರ ಸಂಶಯಸೂಚನೆಗಳು ಅವನಿಗೆ ಅರ್ಥವಾಗುವುದೇ ಇಲ್ಲ. ಎಲ್ಲಾ ಮಾನವ ಬುಡಕಟ್ಟುಗಳೂ ಈಗ ಟೋಬ್ರಿಯಂಡ್ ದ್ವೀಪವಾಸಿಗಳಿರುವ ಸ್ಥಿತಿಯಿಂದ ಹಾದು ಬಂದವರೇ. ಏಕೆಂದರೆ ಪಿತೃತ್ವವನ್ನು ಗುರುತಿಸದಿದ್ದ ಕಾಲವೊಂದು



ಲಜ್ಜಾಗೌರಿ

ಅವರಲ್ಲಿಯೂ ಇದ್ದಿರಬೇಕೆಂಬುದು ಮಾಲಿನೋವ್‌ಸ್ಕಿಯವರ ಸಿದ್ಧಾಂತ. ಇದನ್ನು ಅಲ್ಲಗಳೆಯುವುದು ಕಷ್ಟವೆಂದು ನನಗೂ ಅನಿಸುತ್ತದೆ. ತಂದೆಯನ್ನು ಹೊಂದಿರುವ ಪ್ರಾಣಿ ಕುಟುಂಬಗಳೂ ಇದೇ ರೀತಿ ರೂಪುಗೊಂಡಿರಬೇಕು, ಬೇರೆಯ ರೀತಿಯಲ್ಲಿರಲೂ ಸಾಧ್ಯವಿಲ್ಲ. ಪಿತೃತ್ವವನ್ನು ಗುರುತಿಸಿದ ನಂತರ ಮಾನವರಲ್ಲಿ ಮಾತ್ರ ನಮಗೀಗ ಪರಿಚಿತವಾಗಿರುವಂತಹ ಪಿತೃಭಾವನೆಯುಂಟಾಗಲು ಸಾಧ್ಯ."[೧೯]

ಬರ್ಟ್ರೆಂಡ್ ರಸೆಲ್ ಅವರ ಈ ಮಾತು ಮಾತೃಮೂಲಪ್ರಧಾನವೆಂಬುದು ಕೇವಲ ಭಾರತಕ್ಕಲ್ಲ, ಇಡೀ ಪ್ರಪಂಚಕ್ಕೆ ಅನ್ವಯವಾಗುವ ಆದಿಯ ರೂಪದ ಸಹಜ ಪ್ರಕ್ರಿಯೆ ಎಂಬುದನ್ನು ಪುಷ್ಟೀಕರಿಸುತ್ತದೆ. ಮಾನವ ಚರಿತ್ರೆಯ ಬಹುಮುಖ್ಯ ಅಂಗವಾದ ಈ 'ಮಾತೃದೈವ'ದ ಕಲ್ಪನೆ ಮತ್ತಷ್ಟು ವಿವರವಾಗಿ ಅಧ್ಯಯನಕ್ಕೆ ಒಳಪಡಬೇಕಾದ ವಿಷಯವಾಗಿ ನಮ್ಮ ಮುಂದಿದೆ.

PDF created with pdfFactory Pro trial version www.pdffactory.com

ಉಲ್ಲೇಖಗಳು

೧. ದರ್ಶನ, ದೇವಿಪ್ರಸಾದ್ ಚಟ್ಟೋಪಾಧ್ಯಾಯ, ಅನು–ಡಾ.ಜಿ.ರಾಮಕೃಷ್ಣ, ಪುಟ.೧೪.

೨. ಹೆಚ್ಚಿನ ವಿವರಕ್ಕೆ ಇದೇ ಲೇಖಕನ 'ಉಜ್ಜನಿ ಚೌಡಮ್ಮ' ಪುಸ್ತಕ ನೋಡಿ.

೩. Pastoral Deities in western India – Guntner-Dietzsontneimer- ೩೪ ಮತ್ತು ಜಾತ್ರೆಗಳು: ಎಸ್.ಎಸ್. ಹಿರೇಮಠ, ಪುಟ.೨೬.

೪. ಹೆಚ್ಚಿನ ವಿವರಗಳಿಗೆ ಇದೇ ಲೇಖಕರ 'ದಾಸಪ್ಪ–ಜೋಗಪ್ಪ' ಕೃತಿ ನೋಡಿ.

೫. ನೀನಾಸಂ ಮಾತುಕತೆ, ಸಂ.೩೨ ಪುಟ.೨: ಡಾ.ಆಶೀಸ್ ನಂದಿ, ಅನು: ಕೆ.ವಿ. ಅಕ್ಷರ.

೬. ರಂಗನಾಥ–ತಿಮ್ಮಪ್ಪ, ರಾಜಾರಾಮ ಹೆಗಡೆ(ಲೇಖನ), ಕನ್ನಡ ಅಧ್ಯಯನ (ಮಳೆ ಸಂಚಿಕೆ), ೧೯೯೯, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಹೆಚ್ಚಿನ ವಿವರಗಳಿಗೆ ನೋಡಿ: ತಿರುಪತಿ ತಿಮ್ಮಪ್ಪ–ಎಸ್.ಕೆ.ರಾಮಚಂದ್ರರಾವ್.

೭. ಕಾಡ್ಯನಾಟ, ಪ್ರೊ. ಎ.ವಿ.ನಾವಡ ಮತ್ತು ಗಾಯತ್ರಿ ನಾವಡ.

೮. ಕೊಡಗಿನ ಪಣಿಯರು: ಆರ್. ನಾಗೇಶ್ ಬೆಣಗಾಲು, ಕರ್ನಾಟಕ ಬುಡಕಟ್ಟುಗಳು, ಸಂ.೧, ಪುಟ.೬೯೭.

೯. ರಂಗನಾಥ–ತಿಮ್ಮಪ್ಪ, ರಾಜರಾಮ ಹೆಗಡೆ, ಕನ್ನಡ ಅಧ್ಯಯನ(ಮಳೆ ಸಂಚಿಕೆ).

೧೦. ಇಲ್ಲಿಗರ ಸಂಸ್ಕೃತಿ, ಬಿ.ಸಿದ್ದಲಿಂಗಯ್ಯ ಕಂಬಾಳು, ಪುಟ.೮.

೧೧. ಮ್ಯಾಸಬೇಡರು, ಕೃಷ್ಣಮೂರ್ತಿ ಹನೂರು, ಕರ್ನಾಟಕದ ಬುಡಕಟ್ಟುಗಳು, ಸಂ.೧, ಪುಟ.೭೮೬.

೧೨. ತುಳುವ ದರ್ಶನ–ಪೀಟರ್ ಜೆ. ಕ್ಲಾಸ್, ಕನ್ನಡಾನುವಾದ: ಎ.ವಿ.ನಾವಡ, ಸುಭಾಶ್ಚಂದ್ರ.

೧೩. Mother Goddess: MCP. Srivatsava, page.1.

೧೪. ಪ್ರಾಚೀನ ಭಾರತದ ಚರಿತ್ರೆ, ಡಿ.ಡಿ. ಕೊಸಾಂಬಿ ಅವರ ಚಿಂತನೆಗಳು, ಮೂಲ: ಬಾಲಗೋಪಾಲ್, ಅನು: ಎಚ್.ಎಸ್.ಶ್ರೀಮತಿ.

೧೫. ಗ್ರಾಮದೇವತೆಗಳು, ಡಾ. ಸಿದ್ದಲಿಂಗಯ್ಯ, ಪುಟ.೧೭.

೧೬. Macay E.J.H. Further Excavations of mahenjadaro:PLXCIV 430 (ಉಲ್ಲೇಖ: ಗ್ರಾಮದೇವತೆಗಳು; ಸಿದ್ದಲಿಂಗಯ್ಯ)

೧೭. ಗ್ರಾಮದೇವತೆಗಳು, ಸಿದ್ಧಲಿಂಗಯ್ಯ, ಪುಟ.೨೨.

೧೮. ಮಹಿಳೆ: ಒಂದು ಅಧ್ಯಯನ, ಡಾ. ಜೋತ್ಸ್ನಾ ಕಾಮತ್, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೧೯. ಮದುವೆ ಮತ್ತು ನೀತಿ, ಮೂಲ: ಬರ್ಟ್ರಾಂಡ್ ರಸೆಲ್, ಅನು: ಪಿ.ವಿ. ನಾರಾಯಣ.

PDF created with pdfFactory Pro trial version www.pdffactory.com

ಪರಾಮರ್ಶನ ಗ್ರಂಥಗಳು

೧. ಆಶೀಶ್ ನಂದಿ(ಅನು: ಕೆ.ವಿ.ಅಕ್ಷರ), ನೀನಾಸಂ ಮಾತುಕತೆ(ಲೇಖನ), ಸಂ.೩೨, ಅಕ್ಷರ ಪ್ರಕಾಶನ, ಹೆಗ್ಗೋಡು.

೨. ಕೃಷ್ಣಮೂರ್ತಿ ಹನೂರು, ೧೯೯೫, ಮ್ಯಾಸಬೇಡರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೩. ಕಾಳೇಗೌಡ ನಾಗವಾರ, ಕಾಡುಗೊಲ್ಲರ ಹಟ್ಟಿ ಒಂದು ಅಧ್ಯಯನ(ಅಪ್ರಕಟಿತ ಪಿಎಚ್.ಡಿ. ಪ್ರಬಂಧ).

೪. ಚಂದ್ರಶೇಖರ ಕಂಬಾರ, ೧೯೮೦, ನಮ್ಮ ಜಾನಪದ, ಬೆಂಗಳೂರು

೫. ಜೊತ್ಸ್ನಾ ಕಾಮತ್, ಮಹಿಳೆ: ಒಂದು ಅಧ್ಯಯನ, ೧೯೯೯, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೬. ಪೀಟರ್ ಜೆ. ಕ್ಲಾಸ್, ೧೯೮೭, ಅನು: ಎ.ವಿ. ನಾವಡ, ಸುಭಾಶ್ಚಂದ್ರ, ತುಳುವ ದರ್ಶನ, ಆರ್.ಆರ್.ಸಿ, ಉಡುಪಿ.

೭. ನಾವಡ ಎ.ವಿ., ಗಾಯತ್ರಿ ನಾವಡ, ೧೯೯೨, ಕಾಡ್ಯನಾಟ, ಆರ್.ಸಿ.ಸಿ., ಉಡುಪಿ.

೮. ನಾಗೇಶ್ ಆರ್. ಬೆಣಗಾಲು, ೧೯೯೭, ಕೊಡಗಿನ ಪಣಿಯರು(ಲೇಖನ), ಕರ್ನಾಟಕ ಬುಡಕಟ್ಟುಗಳು, ಸಂ–೧, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು.

೯. ನಾಯಕ ಎನ್.ಆರ್., ೧೯೯೫, ಬಂದನೇ ಬಲೀಂದ್ರರಾಯ, ಹೊನ್ನಾವರ

೧೦. ಬರ್ಟ್ರೆಂಡ್ ರಸೆಲ್, ಅನು: ಪಿ.ವಿ. ನಾರಾಯಣ, ಮದುವೆ ಮತ್ತು ನೀತಿ, ಜ್ಞಾನಪಥ, ಬೆಂಗಳೂರು.

೧೧. ಬಾಲಗೋಪಾಲ್, ೧೯೯೮, ಅನು: ಎಚ್.ಎಸ್.ಶ್ರೀಮತಿ, ಪ್ರಾಚೀನ ಭಾರತದ ಚರಿತ್ರೆ(ಡಿ.ಡಿ.ಕೊಸಾಂಬಿಯವರ ಚಿಂತನೆಗಳು), ಬೆಳ್ಳಿ ಚುಕ್ಕಿ ಬುಕ್ ಟ್ರಸ್ಟ್, ಮೈಸೂರು.

೧೨. ಬೋರಲಿಂಗಯ್ಯ ಹಿ.ಚಿ., ೧೯೮೧, ದಾಸಪ್ಪ ಜೋಗಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೩. ಬೋರಲಿಂಗಯ್ಯ ಹಿ.ಚಿ., ೧೯೭೯, ಉಜ್ಜಿನಿ ಚೌಡಮ್ಮ, ದಿನಕರ ಪ್ರಕಾಶನ, ಬೆಂಗಳೂರು.

೧೪. ರಾಜಾರಾಮ ಹೆಗಡೆ, ೧೯೯೯, ರಂಗನಾಥ, ತಿಮ್ಮಪ್ಪ(ಲೇಖನ), ಕನ್ನಡ ಅಧ್ಯಯನ, ಮಳೆಸಂಚಿಕೆ, ಕನ್ನಡ ವಿ.ವಿ., ಹಂಪಿ.

೧೫. ರಾಮಕೃಷ್ಣ ಜಿ., ೧೯೯೪, ದರ್ಶನ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೧೬. ರಾಮಚಂದ್ರರಾವ್ ಎಸ್.ಕೆ., ೧೯೮೦, ತಿರುಪತಿ ತಿಮ್ಮಪ್ಪ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೧೭. ಸಿದ್ದಗಂಗಯ್ಯ ಬಿ. ಕಂಬಾಳು, ೧೯೯೫, ಇಲ್ಲಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೮. ಸಿದ್ದಲಿಂಗಯ್ಯ, ೧೯೯೭, ಗ್ರಾಮದೇವತೆಗಳು, ಮೂಲಭಾರತಿ ಪ್ರಕಾಶನ, ಬೆಂಗಳೂರು.

೧೯. ಹಿರೇಮಠ ಎಸ್.ಎಸ್., ೧೯೯೩, ಜಾತ್ರೆಗಳು, ಸಮತ ಪ್ರಕಾಶನ, ಹೊಸಪೇಟೆ.

20. Gunter Dietz sontneimar, Pestoral Dieties In Western India, Oxford University Press, Delhi.

21. Srinivatsava M.C.P., 1979, Mother Goddess, Agam Kala prakashan, Delhi.

PDF created with pdfFactory Pro trial version www.pdffactory.com

ಬುಡಕಟ್ಟು ಅಧ್ಯಯನ ಮಾಲೆ - ೧

ಬುಡಕಟ್ಟು ದೈವಾರಾಧನೆ

ಡಾ. ಹಿ.ಚಿ. ಬೋರಲಿಂಗಯ್ಯ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

PDF created with pdfFactory Pro trial version www.pdffactory.com

BUDAKATTU DYVAARAADHANE
(Tribal Worship in Karnataka-A Study)
by
Dr. H.C. Boralingaiah
Professor, Dept. of Tribal Studies
Kannada University, Hampi
Vidyaranya 583 276

Published by
Dr. S.C. Ramesh
Director, Prasaranga
Kannada University, Hampi
Vidyaranya 583 276

Page: x + 108+16 **Price:** Rs. **120/-**

www.kannadauniversity.org

First Impression: 2000
Second Impression: 2015

ISBN 978-93-83044-66-5

© ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೫

ಬೆಲೆ: ರೂ. ೧೨೦/-

ಮುಖಪುಟ: **ಕೆ.ಕೆ. ಮಕಾಳಿ**

ಅಕ್ಷರ ಸಂಯೋಜನೆ
ಸಂಜಯ್ ಗ್ರಾಫಿಕ್ಸ್, ಹಳ್ಳಿಕೆರೆ, ಕಮಲಾಪುರ

ಪುಸ್ತಕ ದೊರೆಯುವ ಸ್ಥಳ
ಸರಸ್ವತಿ ಪುಸ್ತಕ ಮಾರಾಟ ಮಳಿಗೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
ದೂರವಾಣಿ: ೦೮೩೯೪–೨೧೦೪೧೦

ಕನ್ನಡ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ
ನಂ. ೧, ಕಾನೂನು ಕಾಲೇಜಿನ ಹಳೆಯ ಕಟ್ಟಡ
ಮೈಸೂರು ಬ್ಯಾಂಕ್ ವೃತ್ತ, ಅರಮನೆ ರಸ್ತೆ
ಬೆಂಗಳೂರು ೫೬೦ ೦೦೯
ದೂರವಾಣಿ: ೦೮೦–೨೨೩೭೨೩೮೮

ಮುದ್ರಣ
ಮಯೂರ್ ಪ್ರಿಂಟ್ ಆ್ಯಡ್ಸ್, ಬೆಂಗಳೂರು

ಕನ್ನಡವೇ ಸತ್ಯ, ಕನ್ನಡವೇ ನಿತ್ಯ

ವಿದ್ಯೆಯ ಸೃಷ್ಟಿ ಕನ್ನಡ ವಿಶ್ವವಿದ್ಯಾಲಯದ ಒಂದು ಪ್ರಮುಖ ಧ್ಯೇಯ. ವಿಶ್ವದ ಜ್ಞಾನವನ್ನು ಕನ್ನಡಿಗರಿಗೆ ಮುಟ್ಟಿಸುವ ಕನ್ನಡ ಸಂಸ್ಕೃತಿಯನ್ನು ವಿಶ್ವಕ್ಕೆ ಪರಿಚಯಿಸುವ ಮಹತ್ವದ ಹೊಣೆಗಾರಿಕೆ ಕನ್ನಡ ವಿಶ್ವವಿದ್ಯಾಲಯಕ್ಕಿದೆ. ವಿದ್ಯೆಯ ಸೃಷ್ಟಿ ಮತ್ತು ಪ್ರಸರಣ ಎಂದರೆ ಅದು ಕೇವಲ ವಿಶ್ವವಿದ್ಯಾಲಯದಲ್ಲಿರುವ ಅಧ್ಯಾಪಕರಿಂದ ಮಾತ್ರ ಎಂಬ ಹಮ್ಮು ನಮ್ಮದಲ್ಲ. ಇಲ್ಲಿನ ವಿವಿಧ ವಿಭಾಗಗಳ ಒಳಗಿನ ಪ್ರತಿಭಾವಂತರ ಜೊತೆಗೆ ಕರ್ನಾಟಕದ ಎಲ್ಲ ಸಾಂಸ್ಕೃತಿಕ ಕ್ಷೇತ್ರದ ಪ್ರತಿಭಾ ಸಂಪನ್ನತೆಯನ್ನು ಬೆಸೆಯುವ ಕೊಂಡಿಯಂತೆ ಪ್ರತಿಯೊಂದು ವಿಭಾಗವೂ ಕೆಲಸ ಮಾಡುತ್ತದೆ. ಈ ಸುಂದರ ಬೆಸುಗೆ ಹೊಸ ಜ್ಞಾನದ ಸೃಷ್ಟಿಗೆ ಹಾಗೆಯೇ ಅರ್ಥಪೂರ್ಣ ಮೌಲ್ಯಗಳ ಪುನರ್‌ಸ್ಥಾಪನೆಗೆ ಕಾರಣವಾಗಿದೆ. ವಿದ್ಯೆಯ ಸೃಷ್ಟಿಗೆ ಪೂರಕವಾದ ಹಲವು ಬಗೆಯ ಜ್ಞಾನವಾಹಿನಿಗಳ ತಿಳುವಳಿಕೆ ವಿಶ್ವವಿದ್ಯಾಲಯದ ಒಳಗೆ ರೂಪುಗೊಳ್ಳುತ್ತಿದೆ. ಕನ್ನಡ ಸಂಶೋಧನೆಯ ವಿಧಿ ವಿಧಾನಗಳನ್ನು ಸೃಷ್ಟಿಸುವ ಪ್ರಯತ್ನ ಇಲ್ಲಿ ನಡೆಯುತ್ತಿದೆ. ಇವುಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಅನೇಕ ಕಮ್ಮಟ, ತರಬೇತಿ ಮುಂತಾದಂತೆ ಹತ್ತಾರು ಶಿಬಿರಗಳು ಇಲ್ಲಿ ನಡೆಯುತ್ತಿವೆ. ಈ ಎಲ್ಲ ಕುಲುಮೆಗಳಲ್ಲಿ ಪಕ್ವಗೊಂಡ ಜ್ಞಾನ ಪುಸ್ತಕದ ರೂಪದಲ್ಲಿ ಪ್ರಸಾರಾಂಗದ ಮೂಲಕ ಆಕಾರ ಪಡೆಯುತ್ತಿದೆ.

ಕನ್ನಡ ವಿಶ್ವವಿದ್ಯಾಲಯವು ಜನಸಾಮಾನ್ಯರು, ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಸಂಶೋಧಕರನ್ನು ತನ್ನ ಗುರಿಯನ್ನಾಗಿಟ್ಟುಕೊಂಡು ಹಲವು ಬಗೆಯ ಕಾರ್ಯಯೋಜನೆಗಳನ್ನು ಜಾರಿಗೆ ತಂದಿದೆ. ಜನಸಾಮಾನ್ಯರ ತಿಳುವಳಿಕೆಗಾಗಿ ನವಸಾಕ್ಷರ ಮಾಲೆ ಮತ್ತು ಮಂಟಪಮಾಲೆ ಎಂಬ ಪುಸ್ತಕಗಳು, ವಿದ್ಯಾರ್ಥಿಗಳಿಗಾಗಿ ಪಠ್ಯಪುಸ್ತಕಗಳು, ಸಂಶೋಧಕರಿಗೆ ಹಲವು ಬಗೆಯ ವಿಶ್ವಕೋಶಗಳು ಮುಂತಾದಂತೆ ವೈವಿಧ್ಯಮಯ ಜ್ಞಾನ ಸೃಷ್ಟಿ ಇಲ್ಲಿ ನಡೆಯುತ್ತಿದೆ. ಇವೆಲ್ಲವನ್ನೂ ಮೀರಿ ಮತ್ತೊಂದು ಗುರಿ ಕನ್ನಡ ವಿಶ್ವವಿದ್ಯಾಲಯಕ್ಕೆ ಇದೆ. ಅದೇನೆಂದರೆ ಕನ್ನಡ ಸಂಸ್ಕೃತಿಯ ಆಮೂಲಾಗ್ರ ಶೋಧ ನಡೆಸುವ ಮೂಲಕ ದೇಸಿ ಚಿಂತನಾಕ್ರಮವೊಂದನ್ನು ರೂಪಿಸುವುದು. ಭಾರತೀಯ ಸಂಸ್ಕೃತಿ ಎಂದು ಏಕಮುಖವಾಗಿ ಸಾರ್ವತ್ರೀಕರಿಸುವ ಸಾಂಪ್ರದಾಯಿಕ

PDF created with pdfFactory Pro trial version www.pdffactory.com

ತಿಳುವಳಿಕೆ ಯಿಂದ ಹೊರಬಂದು ಪ್ರತಿಯೊಂದು ನೆಲಕ್ಕೂ ತನ್ನದೇ ಆದ ವೈಶಿಷ್ಟ್ಯತೆ ಇದೆಯೆಂಬ ವಾಸ್ತವವಾದ ನೆಲೆಯಲ್ಲಿ ಕನ್ನಡ ನೆಲದ ಗುಣ ಹುಡುಕುವ ಕಾರ್ಯದಲ್ಲಿ ನಾವು ಈಗ ಮಗ್ನರಾಗಿದ್ದೇವೆ. ಆ ಮೂಲಕ ನಿರ್ಲಕ್ಷಿಸಲ್ಪಟ್ಟ ಕ್ಷೇತ್ರಗಳನ್ನು ಪ್ರಧಾನ ನೆಲೆಗೆ ತರುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ಈ ದೇಶದ ಅಥವಾ ನಾಡಿನ ಅಂಚಿನ ಜನಕ್ಕೆ ಕೂಡ ಒಂದು ಶ್ರೀಮಂತ ಸಂಸ್ಕೃತಿ ಇದೆಯೆಂದು, ಆ ಸಂಸ್ಕೃತಿಗೆ ತನ್ನದೇ ವಿಶಿಷ್ಟ ಪರಂಪರೆಯಿದೆಯೆಂದು, ಆ ಪರಂಪರೆಯೇ ನಾಡಿನ ವಿವೇಕ ಮತ್ತು ಜ್ಞಾನವನ್ನು ಕಾಪಾಡಿಕೊಂಡು ಬಂದಿದೆಯೆಂದು ಸ್ಪಷ್ಟ ಮಾತುಗಳಿಂದ ನಿರ್ವಚಿಸಬೇಕಾದ ಕಾಲವೊಂದು ಈಗ ಬಂದಿದೆ. ಆ ಮೂಲಕ ಕನ್ನಡ ನಾಡಿನ ಸರ್ವತೋಮುಖ ಬೆಳವಣಿಗೆಯನ್ನು ಯಾವ ಯಾವ ದಿಸೆಯಲ್ಲಿ ಸಾಧಿಸಬೇಕೆಂಬ ದೂರದೃಷ್ಟಿ ಮತ್ತು ಆಶಾವಾದ ಕೂಡ ನಮ್ಮ ಅಧ್ಯಯನಗಳ ಹಿಂದೆ ಇದೆ.

ಇಂದಿನ ಜಾಗತೀಕರಣ ಹಾಗೂ ಹಿಂಸೆಯ ವಾತಾವರಣದಲ್ಲಿ ನಲುಗುತ್ತಿರುವ ಮಾನವೀಯ ಮೌಲ್ಯಗಳನ್ನು ಹುಡುಕುವ ಮತ್ತು ಹುಟ್ಟುಹಾಕುವ ಬರಹಗಳನ್ನು ಪ್ರೋತ್ಸಾಹಿಸುವ ಕೆಲಸವೂ ಆಗಬೇಕಾಗಿದೆ. ಒಟ್ಟಾರೆಯಾಗಿ ಆಲೋಚನೆಗಳ ಮತ್ತು ಸಿದ್ಧಾಂತಗಳ ಮೌಲ್ಯೀಕರಣದ ಅಗತ್ಯವನ್ನು ಮನಗಂಡಿರುವ ಕನ್ನಡ ವಿಶ್ವವಿದ್ಯಾಲಯ ದೇಸಿ ಮತ್ತು ಸಾಂಪ್ರದಾಯಿಕ ಮೌಲ್ಯಗಳ ನಡುವೆ ಮುಖಾಮುಖಿಯೊಂದನ್ನು ಹುಟ್ಟುಹಾಕುವ ಮೂಲಕ ಸತ್ಯದ ಬೆಳಕಿನೆಡೆಗೆ ಕೊಂಡೊಯ್ಯುವ ಪ್ರಯತ್ನವನ್ನು ಮಾಡುತ್ತದೆಯೆಂಬ ಆಶಯ ನನ್ನದಾಗಿದೆ.

ಬುಡಕಟ್ಟು ಅಧ್ಯಯನ ವಿಭಾಗದಲ್ಲಿ 'ಬುಡಕಟ್ಟು ಮಹಾಕಾವ್ಯಮಾಲೆ'ಯ ನಂತರ ಕೈಗೊಂಡ 'ಬುಡಕಟ್ಟು ಅಧ್ಯಯನ ಮಾಲೆ'ಯ ಸರಣಿ ಪುಸ್ತಕಗಳು ಅತ್ಯಂತ ವಿಶಿಷ್ಟವಾಗಿ ಪ್ರಕಟವಾದವು. ಸಂಶೋಧಕರಿಗೆ ಈ ಪುಸ್ತಕಗಳು ಆಕರಗ್ರಂಥಗಳಾಗಿ ಪರಿಗಣಿಸಲ್ಪಟ್ಟವು. ಈ ಮಾಲೆಯ ಪುಸ್ತಕಗಳಲ್ಲಿ ಒಂದು 'ಬುಡಕಟ್ಟು ದೈವಾರಾಧನೆ'. ಈ ಕೃತಿ ಇದೀಗ ಪುನರ್ ಮುದ್ರಣಗೊಳ್ಳುತ್ತಿರುವ ಅವಕಾಶ ಪಡೆದಿದೆ. ಈ ಕೃತಿಯನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಡಾ. ಸ.ಚಿ. ರಮೇಶ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಬಿ. ಸುಜ್ಞಾನಮೂರ್ತಿ ಅವರಿಗೆ ಆಭಾರಿಯಾಗಿದ್ದೇನೆ.

ಡಾ. ಹಿ.ಚಿ. ಬೋರಲಿಂಗಯ್ಯ
ಕುಲಪತಿ

ದೇಸಿಯೊಳ್ ಪುಗುವುದು ಪೊಕ್ಕು ಮಾರ್ಗದೊಳೆ ತಳ್ವುದು

ಕನ್ನಡ ವಿಶ್ವವಿದ್ಯಾಲಯ ಪ್ರಥಮ ಗುರಿ 'ಕನ್ನಡ ಸಂಸ್ಕೃತಿಯ' ಶೋಧ, ವಿಮರ್ಶೆ ಮತ್ತು ಪ್ರಸಾರ. ಅಂತಿಮ ಗುರಿ ಸುತ್ತಲಿನ ಸಂಸ್ಕೃತಿಗಳ ವಿವೇಕಪೂರ್ಣ ವಿನಿಯೋಗ. ಆದಿಕವಿ ಪಂಪ, ಸಾಹಿತ್ಯಕ್ಕೆ ಅನ್ವಯಿಸಿ ಹೇಳಿರುವ 'ದೇಸಿಯೊಳ್ ಪುಗುವುದು, ಪೊಕ್ಕು ಮಾರ್ಗದೊಳೆ ತಳ್ವುದು' ಎಂಬ ಮಾತು ಪರ್ಯಾಯವಾಗಿ ಇದನ್ನೇ ಧ್ವನಿಸುತ್ತದೆ.

ಸಂಸ್ಕೃತಿ ಎನ್ನುವುದು ಸಮೂಹಸಮ್ಮತ ಜೀವನಪದ್ಧತಿಯಾಗಿದೆ. ಕನ್ನಡಿಗರ ಇಂತಹ ಪದ್ಧತಿಗೆ ಸಾವಿರ ಸಾವಿರ ವರ್ಷಗಳ ಇತಿಹಾಸವಿದೆ. ತನ್ನ ಆಯುರ್ಮಾನದಲ್ಲಿ ಆರ್ಯ-ಆಂಗ್ಲ ಸಂಸ್ಕೃತಿಗಳನ್ನು ಜೀರ್ಣಿಸಿಕೊಳ್ಳುತ್ತ ಬಂದ ಕನ್ನಡ ಸಮಾಜ, ಉದ್ದಕ್ಕೂ ದ್ವಿಭಾಷಾ ಸಂದರ್ಭದಲ್ಲಿ, ಬದುಕುಮಾಡಿದೆ. ಹಿಂದಿನದು ಕನ್ನಡ-ಸಂಸ್ಕೃತ ದ್ವಿಭಾಷಾ ಸಂದರ್ಭ, ಇಂದಿನದು ಕನ್ನಡ-ಇಂಗ್ಲಿಷ್ ದ್ವಿಭಾಷಾ ಸಂದರ್ಭ. ಗ್ರಂಥಸ್ಥ ಭಾಷೆಯಾದ ಸಂಸ್ಕೃತಕ್ಕಿಂತ ಜೀವಂತ ಭಾಷೆಯಾದ ಇಂಗ್ಲಿಷ್ ಬೆಳಕಾಗುತ್ತಲೇ ಬೆಂಕಿಯಾಗಬಹುದೇ? ಎಂಬ ಭಯ ನಮ್ಮಲ್ಲಿ ಹುಟ್ಟಿದೆ. ಹೆಚ್ಚಿನದಾಗಿ ಆಂಗ್ಲ ಜೀವನಶೈಲಿ ನಮ್ಮ ಜೀವನಾಡಿಗಳನ್ನು ದಿನೇ ದಿನೇ ನಿಯಂತ್ರಿಸತೊಡಗಿ, ಒಂದು ಬಗೆಯ ಅತಿರೇಕ ಸೃಷ್ಟಿಯಾಗುತ್ತಲಿದೆ.

ಗಾಂಧೀಜಿಯವರು ಈ ಅತಿರೇಕವನ್ನು ಬಹಳ ಹಿಂದೆಯೇ ಊಹಿಸಿ, 'ಸ್ವದೇಶೀ ಚಳುವಳಿ'ಯನ್ನು ಕೈಗೆತ್ತಿಕೊಂಡಿದ್ದರು. ಈ ಮತ್ತು ಇಂಥ ದೇಶೀ ಚಿಂತನೆಗಳ ಆದರ್ಶದಲ್ಲಿ ಕನ್ನಡ ವಿಶ್ವವಿದ್ಯಾಲಯ ಮೊದಲು ಮಾಡಬೇಕಾದ ಕೆಲಸವೆಂದರೆ ವಿಸ್ಮೃತಿಯ ಸಾಗದಲ್ಲಿ ಮುಳುಗಿ ಹೋಗಿರುವ ನಮ್ಮ ಪಾರಂಪರಿಕ ಕ್ರಿಯೆ, ಪ್ರಕ್ರಿಯೆ ರೂಪದ 'ಸ್ವದೇಶೀ ಸತ್ಯ'ಗಳನ್ನು ಶೋಧಿಸುವುದು; ಬಳಿಕ ಅಲ್ಲಿ ಸೇರಿಕೊಂಡಿರುವ ದೋಷಗಳನ್ನು ದೂರ ಸರಿಸಿ ಗುಣಾಂಶಗಳನ್ನು ಗುರುತಿಸುವ, ಜೊತೆಗೆ ಪೂರ್ಣ ಬದುಕಿಗೆ ಅವಶ್ಯವಿರುವ ಕೊರತೆಗಳನ್ನು ಅನ್ಯಸಂಸ್ಕೃತಿಯಿಂದ ಎಚ್ಚರವಹಿಸಿ ತುಂಬಿಕೊಳ್ಳುವ ಕೆಲಸ ನಮ್ಮಲ್ಲಿ ನಡೆಯಬೇಕಾಗಿದೆ. ಒಟ್ಟಾರೆ ಅನ್ಯಸಂಸ್ಕೃತಿಗಳ ಸಹಯೋಗದಲ್ಲಿಯೂ 'ಕನ್ನಡವು ಕನ್ನಡವ ಕನ್ನಡಿಸುತಿರಬೇಕು' ಎಂಬಂತೆ ನಾವು

PDF created with pdfFactory Pro trial version www.pdffactory.com

ಕನ್ನಡವನ್ನು ಸ್ಥಾನಿಕದಲ್ಲಿ ಬದುಕಿಸಬೇಕಾಗಿದೆ. ಜಾಗತಿಕದಲ್ಲಿ ಬೆಳೆಸಬೇಕಾಗಿದೆ. ಹಾಗೆ ಮಾಡಿದಾಗ ಮಾತ್ರ ಕನ್ನಡತ್ವವನ್ನು ನಾಶ ಮಾಡಿಕೊಂಡು ಜಾಗತಿಕವಾಗುವುದು ತಪ್ಪಿ, ಕನ್ನಡವೂ ಜಾಗತಿಕವಾಗುತ್ತದೆ. ಜಾಗತಿಕವಾಗುವುದೆಂದರೆ ಸ್ಥಾನಿಕದ ನಿರಾಕರಣೆಯಲ್ಲವೆಂಬ ಸತ್ಯ ಸ್ಥಾಪನೆಗೊಳ್ಳುತ್ತದೆ.

ಹೆಗಲ ಮೇಲೆ ಈ ಹೊಣೆಯನ್ನು ಹೊತ್ತು ಅಸ್ತಿತ್ವಕ್ಕೆ ಬಂದಿರುವ ಕನ್ನಡ ವಿಶ್ವವಿದ್ಯಾಲಯ 'ಎಲ್ಲ ರಸ್ತೆಗಳು ರೋಮ್‌ದ ಕಡೆಗೆ' ಎಂಬಂತೆ ಕನ್ನಡದ ಎಲ್ಲ ಹಾದಿಗಳು ಹಂಪಿಯ ಕಡೆಗೆ ಕೇಂದ್ರೀಕರಣಗೊಳ್ಳುವ ಮತ್ತು ಇಲ್ಲಿಂದಲೇ ಜಗತ್ತಿನ ಅಂಚಿನತ್ತ ವಿಕೇಂದ್ರೀಕರಣಗೊಳ್ಳುವ ವಾತಾವರಣವನ್ನು ನಿರ್ಮಾಣ ಮಾಡಬೇಕಾಗಿದೆ. ಈ ರೀತಿ ಐತಿಹಾಸಿಕ ಪರಂಪರೆ ಮತ್ತು ಭೌಗೋಳಿಕ ಪರಿಸರಗಳಲ್ಲಿ ಶ್ರಮಿಸ ಬೇಕಾಗಿರುವ ಕನ್ನಡ ವಿಶ್ವವಿದ್ಯಾಲಯ "ಎಂದೆಂದಿಗೂ ನೀ ಕನ್ನಡವಾಗಿರು" ಎಂಬ ಪ್ರಜ್ಞೆ ಕನ್ನಡಿಗರಲ್ಲಿ ಜಾಗೃತವಾಗಿರುವಂತೆಯೂ ನೋಡಿಕೊಳ್ಳಬೇಕಾಗಿದೆ.

ಈ ಎಲ್ಲ ನೆಲೆಗಳಲ್ಲಿ ಸೃಷ್ಟಿಯಾಗುವ ತನ್ನ ಶೋಧನೆ-ಚಿಂತನೆಗಳನ್ನು ದಾಖಲಿಸ ಬೇಕೆಂಬ ಮತ್ತು ಸಂವಹನಗೊಳಿಸಬೇಕೆಂಬ ತೀವ್ರ ಹಂಬಲದಿಂದ ಈ ವಿಶ್ವವಿದ್ಯಾಲಯ 'ಪ್ರಸಾರಾಂಗ' ಹೆಸರಿನ ಪ್ರಸಾರ ಮಾಧ್ಯಮ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತಂದಿದೆ. ಶ್ರವ್ಯ, ದೃಶ್ಯ, ವಾಚನ ಸಾಮಗ್ರಿಗಳ ಉತ್ಪಾದನೆ-ವಿತರಣೆ ಇತ್ಯಾದಿ ಕಾರ್ಯಗಳನ್ನು ಕೈಗೆತ್ತಿಕೊಂಡಿರುವ ಇದು, ವಾಚನ ಸಾಮಗ್ರಿಯಾಗಿರುವ ಪುಸ್ತಕಗಳ ಉತ್ಪಾದನೆಗೆ ವಿಶೇಷ ಕಾಳಜಿ ವಹಿಸಿದೆ. ಆಂತರಿಕ ಸತ್ವ, ಬಾಹ್ಯ ಸೌಂದರ್ಯಗಳಿಂದ ಕೂಡಿರುವ ವಿಶಿಷ್ಟ "ಪುಸ್ತಕ ಸಂಸ್ಕೃತಿ'ಯನ್ನು ಅಸ್ತಿತ್ವಕ್ಕೆ ತರುತ್ತಲಿರುವ ಈ ಪ್ರಸಾರಾಂಗದ ಇತ್ತೀಚಿನ ಪ್ರಕಟಣೆ 'ಬುಡಕಟ್ಟು ದೈವಾರಾಧನೆ'.

"ಬುಡಕಟ್ಟು ಅಧ್ಯಯನ ವಿಭಾಗ" ನಮ್ಮ ವಿಶ್ವವಿದ್ಯಾಲಯದ ವಿಶಿಷ್ಟ ಘಟಕ. ಇದಕ್ಕೆ ಅರ್ಥ ತುಂಬುವ ದಿಸೆಯಲ್ಲಿ ಅಸ್ತಿತ್ವಕ್ಕೆ ಬಂದಿರುವ ಬುಡಕಟ್ಟು ಅಧ್ಯಯನ ಮಾಲೆಯ ಭಾಗವಾಗಿ ಪ್ರಕಟವಾಗುತ್ತಲಿರುವ 'ಬುಡಕಟ್ಟು ದೈವರಾಧನೆ' ಪುಸ್ತಕ ರಚನೆಗಾಗಿ ಡಾ.ಹಿ.ಚಿ.ಬೋರಲಿಂಗಯ್ಯ ಅವರಿಗೆ ನಮ್ಮ ಧನ್ಯವಾದಗಳು ಸಲ್ಲುತ್ತವೆ.

ಡಾ. ಎಂ.ಎಂ. ಕಲಬುರ್ಗಿ
ಕುಲಪತಿ

ಬುಡಕಟ್ಟು ಅಧ್ಯಯನ ಮಾಲೆಯನ್ನು ಕುರಿತು

ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗವು ತನ್ನ ಆರಂಭದ ನಾಲ್ಕು ವರ್ಷಗಳಲ್ಲಿ ಸಂಸ್ಕೃತಿಯ ಬಹುಮುಖ್ಯ ಮೌಖಿಕ ಆಕರಗಳೆನಿಸಿದ ಬುಡಕಟ್ಟು ಮಹಾಕಾವ್ಯಗಳನ್ನು ಹೊರತಂದಿದೆ. ಬಹುಶಃ ಭಾರತೀಯ ಭಾಷೆಗಳಲ್ಲಿಯೇ ಇದೊಂದು ವಿಕ್ರಮ ಎನ್ನುವ ಹಾಗೆ ಒಟ್ಟು ಒಂಬತ್ತು ಮಹಾಕಾವ್ಯಗಳನ್ನು ನಾವು ಪ್ರಕಟಿಸಿದ್ದೇವೆ.

ಕುಲಪತಿ ಡಾ. ಎಂ.ಎಂ. ಕಲಬುರ್ಗಿ ಅವರು ವಿಭಾಗದ ಇದುವರೆಗಿನ ಸಂಗ್ರಹ ಸಂಪಾದನಾ ಕಾರ್ಯವನ್ನು ಮೆಚ್ಚಿ, ಇನ್ನು ಮುಂದೆ ಅಧ್ಯಯನಕ್ಕೆ ಹೆಚ್ಚು ಒತ್ತು ಕೊಡಿ ಎಂದು ಸೂಚಿಸಿದರು. ಅವರ ಸೂಚನೆಯನ್ನು ವಿಭಾಗ ಉತ್ಸಾಹದಿಂದ ಒಪ್ಪಿತು. ಯಾಕೆಂದರೆ ಕರ್ನಾಟಕದಲ್ಲಿ ಇದುವರೆಗೆ ಬುಡಕಟ್ಟುಗಳನ್ನು ಕುರಿತಾದ ಮಾಹಿತಿ ಸಂಗ್ರಹಣೆ ಆಗಿದೆಯೇ ಹೊರತು, ಅಧ್ಯಯನ ಆಗಿಲ್ಲ ಎಂಬ ಕೊರಗು ನಮ್ಮನ್ನು ಕಾಡುತ್ತಿತ್ತು. ಆದ್ದರಿಂದ ಬುಡಕಟ್ಟು ಸಂಸ್ಕೃತಿಯ ವಿವಿಧ ಮುಖಗಳನ್ನು ಕುರಿತ ಪ್ರಾಥಮಿಕ ಮಟ್ಟದ ಪರಿಶೋಧನೆ ಮತ್ತು ಅಧ್ಯಯನವನ್ನು ಈ ಮಾಲಿಕೆ ಮೂಲಕ ಕೈಗೊಂಡಿದ್ದೇವೆ. 'ಪ್ರಾಥಮಿಕ' ಎಂದು ಯಾಕೆ ಹೇಳುತ್ತಿದ್ದೇನೆಂದರೆ ಇದು ಪ್ರಪ್ರಥಮವಾಗಿ ಕೈಗೊಳ್ಳಲಾಗುತ್ತಿರುವ ಮೊದಲ ಹಂತದ ಸಂಶೋಧನೆ ಎಂಬ ದೃಷ್ಟಿಯಿಂದ. ಆಳವಾದ ಹಾಗೂ ವಿಸ್ತೃತ ರೂಪದ ಸಂಶೋಧನೆಗಳಿಗೆ ನಮ್ಮ ಈ ಪುಟ್ಟ ಗ್ರಂಥಗಳು ಮಾರ್ಗಸೂಚಿಯಾಗುತ್ತವೆ ಎಂಬ ನಂಬಿಕೆ ನನ್ನದು.

ಕನ್ನಡ ವಿಶ್ವವಿದ್ಯಾಲಯದ ಮೂಲ ಧ್ಯೇಯವೆನಿಸಿದ ದೇಸಿ ಸಂಸ್ಕೃತಿಯ ಹುಡುಕಾಟದ ಧೋರಣೆಗೆ ಪೂರಕವಾಗಿಯೇ ನಮ್ಮ ಈ ಅಧ್ಯಯನಗಳು ಹೊರಬರುತ್ತಿವೆ. ನಮ್ಮದು ದೇಶಿಯಲ್ಲಿ ದೇಸಿ ಎಂದರೂ ತಪ್ಪಾಗಲಾರದು!

ಈ ಸಂಬಂಧದಲ್ಲಿ ಪ್ರೋತ್ಸಾಹಿಸಿದ ಸರ್ವರಿಗೂ ವಿಭಾಗದ ಪರವಾಗಿ ಕೃತಜ್ಞತೆಗಳು ಸಲ್ಲುತ್ತವೆ.

ಗಿರಿಸೀಮೆ

ಡಾ. ಹಿ.ಚಿ. ಬೋರಲಿಂಗಯ್ಯ

PDF created with pdfFactory Pro trial version www.pdffactory.com

ಪರಿವಿಡಿ

ಕನ್ನಡವೇ ಸತ್ಯ, ಕನ್ನಡವೇ ನಿತ್ಯ / 3
ದೇಸಿಯೊಳ್ ಪುಗುವುದು
ಪೊಕ್ಕು ಮಾರ್ಗದೊಳೆ ತಳ್ಳುದು / 5
ಬುಡಕಟ್ಟು ಅಧ್ಯಯನ ಮಾಲೆಯನ್ನು ಕುರಿತು / 7
೧. ದೈವ: ಒಂದು ಪೀಠಿಕೆ / ೧
೨. ಬುಡಕಟ್ಟು ವೀರರು ಮತ್ತು ಮಾತೆಯರು / ೧೮
೨.೧. ಬೀರನ ಮನೆ / ೧೯
೨.೨. ಜಟ್ಟಿಗನ ಬನ / ೨೯
೨.೩. ಕಾಡ್ಯನ ಮನೆ / ೩೫
೨.೪. ಕಾವೆಲಿಯಕುಚ್ಚಿ ಕಾಡು / ೪೦
೨.೫. ಪೋಡಿನ ದೈವ / ೪೪
೨.೬. ಮರದ ಮೇಲಿನ ದೇವರು / ೫೬
೨.೭. ಮಿಂಚೇರಿಯ ಹುಲಿ ಸಮಾಧಿ / ೬೧
೨.೮. ಗೊಲ್ಲರ ಹಟ್ಟಿ / ೬೫
೨.೯. ಬೆಳದಿಂಗಳ ಸಿರಿ / ೭೩
೨.೧೦. ಬಲೀಂದ್ರ / ೮೬
೩. ಮಾತೃಮೂಲ ಪರಂಪರೆ ಮತ್ತು ಮಾತೃದೇವತೆಯರು / ೯೩
ಅನುಬಂಧ
ಅ. ಉಲ್ಲೇಖಗಳು / ೧೦೪
ಆ. ಪರಾಮರ್ಶನ ಗ್ರಂಥಗಳು / ೧೦೬
ಇ. ಛಾಯಾಚಿತ್ರಗಳು / ೧೦೯

PDF created with pdfFactory Pro trial version www.pdffactory.com

೧

ದೈವ : ಒಂದು ಪೀಠಿಕೆ

ನಮ್ಮ ದೇವ–ದೇವತೆಯರನ್ನು ಕುರಿತ ಗಂಭೀರ ಚರ್ಚೆಗಿಂತ ಮೊದಲು ಚಿಕ್ಕಂದಿನಲ್ಲಿ ನಾನು ಕಂಡ ದೈವಸಂಬಂಧಿಯಾದ ಕೆಲವು ಘಟನೆಗಳನ್ನು ವಿವರಿಸುವುದು ಸೂಕ್ತ ಎಂದುಕೊಂಡಿದ್ದೇನೆ. ಯಾಕೆಂದರೆ ಬಾಲ್ಯದಲ್ಲಿ ಕಂಡುಂಡು ಅನುಭವಿಸಿದ ಆ ಘಟನೆಗಳು ಈಗ ನಾನು ಮಂಡಿಸಬೇಕಿರುವ ಚರ್ಚೆಗಳಿಗೆ ಪೀಠಿಕೆಯಾಗಬಲ್ಲವು ಎಂಬ ನಂಬಿಕೆ ನನಗಿದೆ. ನಾನು ಹುಟ್ಟಿ ಬೆಳೆದ ಊರು ಮತ್ತು ಪರಿಸರ ಒಂದು ಬುಡಕಟ್ಟಿನ ಹಂತವನ್ನು ದಾಟಿದ ಕೃಷಿ ಸಮಾಜ ವ್ಯವಸ್ಥೆಗೆ ಸೇರಿದ್ದಾಗಿತ್ತಾದರೂ, ಇಂದು ಆ ಬಾಲ್ಯವನ್ನು ಮೆಲುಕು ಹಾಕುವಾಗ, ಎಷ್ಟೆಲ್ಲ ಬುಡಕಟ್ಟಿನ ಅಂಶಗಳು ಅಂದು ನಮ್ಮ ನಡುವೆ ಇದ್ದವು ಎಂಬುದು ಹೊಳೆಯುತ್ತಾ ಹೋದಂತೆ ಆಶ್ಚರ್ಯವಾಗುತ್ತದೆ. ಈ ಸಂದರ್ಭದಲ್ಲಿ ಖ್ಯಾತ ಚಿಂತಕ ಡಾ. ದೇವಿಪ್ರಸಾದ್ ಚಟ್ಟೋಪಾಧ್ಯಾಯ ಅವರ ಒಂದು ಮಾತು ನೆನಪಿಗೆ ಬರುತ್ತದೆ. "ಅನಾಗರಿಕ ವ್ಯವಸ್ಥೆಯನ್ನು ದಾಟಿ ನಾಗರಿಕತೆಯ ಹೊಸ್ತಿಲನ್ನು ಮುಟ್ಟಿದ ಮೇಲೂ ಬಹಳ ಕಾಲದವರೆಗೆ ಮನುಷ್ಯ ತನ್ನ ಭೂತಕಾಲದ ಅನಾಗರಿಕ ಹಂತದ ಅನೇಕ ಅಭ್ಯಾಸಗಳನ್ನು ಪೂರ್ಣವಾಗಿ ಬಿಡಲಾರದೆ ಹೋದ. ನಾಗರಿಕ ಸಮಾಜದ ಮನುಷ್ಯನ ಗ್ರಹಿಕೆಗಳು ಹಾಗೂ ನಂಬಿಕೆಗಳಲ್ಲಿ ಆದಿಮಕಾಲದ ವಿಧವಿಧವಾದ ನಂಬಿಕೆಗಳು ಹಾಗೇ ಅಂಟಿಕೊಂಡಿವೆ. ಆದ್ದರಿಂದಲೇ ನಾಗರಿಕತೆಯ ಪ್ರಾರಂಭದ ದೆಸೆಯ ವಿಷಯಗಳನ್ನು ಸರಿಯಾಗಿ ತಿಳಿದುಕೊಳ್ಳಲು ಅನಾಗರಿಕ ಅವಸ್ಥೆಯ ಸನ್ನಿವೇಶಗಳನ್ನು ವಿಶೇಷವಾಗಿ ತಿಳಿದುಕೊಳ್ಳುವ ಅವಶ್ಯಕತೆ ಇದೆ."[೧]

ಈಗ್ಗೆ ೩೫–೪೦ ವರ್ಷಗಳ ಹಿಂದೆ ನಾನು ನನ್ನ ಅಪ್ಪನ ಜೊತೆ ಪಾಲ್ಗೊಳ್ಳುತ್ತಿದ್ದ ಒಂದು ಕ್ರಿಯಾವಿಧಿ ನೆನಪಿಗೆ ಬರುತ್ತದೆ. ನವೆಂಬರ್ ತಿಂಗಳಿನ ರಾಗಿ ಹೊಲದ ಕೊಯಿಲಿನ ಸಂದರ್ಭದಲ್ಲಿ ಕೈಗೊಳ್ಳುತ್ತಿದ್ದ ಆಚರಣೆ ಅದು. ಕೊಯಿಲಿನ ಆರಂಭಕ್ಕೆ

PDF created with pdfFactory Pro trial version www.pdffactory.com

ಮೊದಲು, ಒಂದು ಸಂಜೆ ನನ್ನ ಅಪ್ಪ ಹಾಲು ಮತ್ತು ಅನ್ನದ ಎರಡು ಪಾತ್ರೆಗಳನ್ನು ಮರದ ಹೆಡಿಗೆಗೆ ತುಂಬಿಕೊಂಡು, ನಾಳೆಗೆ ಕೊಯಿಲು ಆರಂಭಿಸಬೇಕಾಗಿರುವ ಒಂದು ಹೊಲಕ್ಕೆ ಹೋಗುತ್ತಿದ್ದರು. ಒಣಗಿದ ತೆನೆಗಳಿಂದ ತುಂಬಿಕೊಂಡು ಭೂಮಿಗೆ ವಾಲಿದ ಪೈರುಗಳನ್ನು ಸರಿಸಿ ಸರಿಸಿ ಹೊಲದ ಮಧ್ಯಭಾಗಕ್ಕೆ ಹೊಕ್ಕು, ಸುಮಾರು ಇಪ್ಪತ್ತೈದು ಅಡಿ ಚದುರದ ಜಾಗದಲ್ಲಿ ಪೈರುಗಳನ್ನು ಕೊಯ್ದು ಅರಿ ಇಡುತ್ತಿದ್ದರು. ಅಲ್ಲಿಯೇ ಸುತ್ತಮುತ್ತ ಮೂರು ಕಲ್ಲುಗಳನ್ನು ಆರಿಸಿ ನೀರಿನಿಂದ ತೊಳೆದು ಸಾಲಾಗಿ ಇಡುತ್ತಿದ್ದರು. ಆ ಕಲ್ಲುಗಳಿಗೆ ಅರಿಶಿನ, ಕುಂಕುಮ ಹಚ್ಚಿ ಪೂಜಿಸುತ್ತಿದ್ದರು. ಹೊಲದ ಸಾಲಿನಲ್ಲಿ ಬೆಳೆದ ಹರಳು ಎಲೆಗಳನ್ನು ಕಿತ್ತು, ಅದರ ಮೇಲೆ ಹಾಲು ಅನ್ನ ಇಟ್ಟು ಕಲ್ಲುಗಳ ಮುಂದೆ ಇಡುತ್ತಿದ್ದರು. ಆ ಕಲ್ಲುಗಳೇ ಮೂರು ದೇವರುಗಳು! ಒಂದು ಭೂಮಿತಾಯಿ, ಎರಡು ಮಳೆರಾಯ, ಮೂರು ಬೆನವಣ್ಣ. ಸೃಷ್ಟಿಸುವ, ಪೋಷಿಸುವ ಮತ್ತು ರಕ್ಷಿಸುವ ಸಂಕೇತಗಳಾದ ಆ ದೇವರುಗಳಿಗೆ ನನ್ನ ಅಪ್ಪನ ಪ್ರಕಾರ ರೂಪಗಳಿರಲಿಲ್ಲ. ಇದು ಬಯಲುಸೀಮೆಯ ಕೆಲವು ಕೃಷಿಕರಲ್ಲಿ ಈಗಲೂ ಉಳಿದಿರುವ ಮೂಲದೈವ ಕಲ್ಪನೆಯ ಪಳೆಯುಳಿಕೆ.

ನನಗೆ ಗೊತ್ತಿದ್ದಂತೆ ನಾವು 'ಬಾಗೆ' ಕುಲದವರು. ಬಾಗೆ ಎಂಬುದು ಒಂದು ಮರದ ಹೆಸರು. ನಮ್ಮ ಹಾಗೆಯೇ ಬನ್ನಿ ಕುಲದವರು ನಮ್ಮ ಊರಿನಲ್ಲಿದ್ದರು. ಬಾಗೆ ಮತ್ತು ಬನ್ನಿ ಎರಡು ಜಾತಿಯ ಸಸ್ಯಗಳು. ಆ ಕುಲದವರು ಬಹುಶಃ ಆ ಪ್ರದೇಶದ ಮೂಲ ಕೃಷಿಕರಿದ್ದಿರಬಹುದು. ಆದರೆ ಇನ್ನೆರಡು ರೀತಿಯ ಬಳಿಗಳು ನಮ್ಮ ಊರಿನಲ್ಲಿದ್ದವು. ಅವು 'ಪೆಟ್ಟಿಗೆ' ಮತ್ತು 'ಬುಜ್ಜುಣಿಕೆ' ಕುಲಗಳು. ಪೆಟ್ಟಿಗೆ ಎಂದರೆ ವಿವರಿಸಬೇಕಾಗಿಲ್ಲ. ಬುಜ್ಜುಣಿಕೆ ಎಂದರೆ ಸ್ವಲ್ಪ ವಿವರಿಸಬೇಕಾಗುತ್ತದೆ. ಸಣ್ಣಸಣ್ಣ ಬಿದಿರು ಕಡ್ಡಿಗಳನ್ನು ಒತ್ತಟ್ಟಿಗೆ ಜೋಡಿಸಿ ಹೆಣೆದ ಕುಂಭಾಕಾರದ ಹೊಟ್ಟೆ ಮತ್ತು ಅಗಲವಾದ ಬಾಯಿ ಇರುವ ಒಂದು ಸಾಧನ. ಮೇಲೊಂದು ಮುಚ್ಚಳ ಇರುತ್ತದೆ. ಒಟ್ಟಿನಲ್ಲಿ ಇದು ಕೂಡ ಪೆಟ್ಟಿಗೆಯಂತೆಯೇ ವಸ್ತುಗಳನ್ನು, ಬಟ್ಟೆಬರೆಗಳನ್ನು ತುಂಬಿಡುವ ಅಥವಾ ಸಂಚಾರದ ಸಂದರ್ಭದಲ್ಲಿ ಹೊತ್ತೊಯ್ಯುವ ಒಂದು ಸಾಧನ. ಈ ಸಾಧನಗಳನ್ನೇ ತಮ್ಮ ಬಳಿಯನ್ನಾಗಿ ಗುರುತಿಸಿಕೊಂಡ ಈ ಪಂಗಡದವರು ಬಹುಶಃ ಒಂದು ಕಾಲಕ್ಕೆ ಅಲೆಮಾರಿ ಕೃಷಿಕರಾಗಿದ್ದು ನಂತರದಲ್ಲಿ ಒಂದು ಕಡೆ ಬಂದು ನೆಲೆಸಿದವರಿರಬೇಕು. ಅವರ ಈ ಸಾಧನಗಳ ಕುರುಹೇ ಇದಕ್ಕೆ ಸಾಕ್ಷಿ.

ಒಂದೇ ಬಳಿಗೆ ಸೇರಿದ ಕುಟುಂಬಗಳ ನಡುವೆ ಹೆಣ್ಣು ಕೊಟ್ಟು ಹೆಣ್ಣು ತರುವುದು ನಿಷೇಧ. ಬಾಗೆ ಕುಲದಿಂದ ಬನ್ನಿ ಕುಲಕ್ಕೂ ಹಾಗೇ ಬನ್ನಿ ಬಾಗೆ ಕುಲದಿಂದ ಪೆಟ್ಟಿಗೆ ಬುಜ್ಜುಣಿಕೆ ಕುಲಕ್ಕೂ ಕೊಟ್ಟು ತರುವ ಅವಕಾಶಗಳುಂಟು. ಆಯಾ ಕುಲದವರು ತಮ್ಮ ತಮ್ಮ ಕುಲಗಳನ್ನು ಸಂಕೇತಿಸುವ ವಸ್ತು ಅಥವಾ ಸಸ್ಯಗಳ ಬಗ್ಗೆ ಅಪಾರ

ಗೌರವ ಇಟ್ಟುಕೊಂಡಿರುತ್ತಿದ್ದರು. ಬಾಗೆ ಮರವನ್ನು ನಾವು ಎಂದಿಗೂ ಕಡಿಯುವ ಹಾಗಿಲ್ಲ. ಅದರ ಸೌದೆಯನ್ನು ಒಲೆಗೆ ಉರಿಸುವ ಹಾಗಿಲ್ಲ. ಮದುವೆಯ ಸಂದರ್ಭಗಳಲ್ಲಿ ಆ ಮರಕ್ಕೆ ಪೂಜೆ ಸಲ್ಲಿಸಬೇಕು. ಪೆಟ್ಟಿಗೆ ಮತ್ತು ಬುಜ್ಜುಣಿಕೆ ಕುಲದವರು ತಮ್ಮ ತಮ್ಮ ಮದುವೆ ಸಂದರ್ಭಗಳಲ್ಲಿ ತಮ್ಮ ತಮ್ಮ ಮನೆ ದೇವರ ಪ್ರತೀಕಗಳನ್ನು ಪೆಟ್ಟಿಗೆ ಅಥವಾ ಬುಜ್ಜುಣಿಕೆಯಲ್ಲಿ ಇಟ್ಟು ಹೊತ್ತು ತಂದು ಅದರ ಸಮ್ಮುಖದಲ್ಲಿ ಮದುವೆ ಕಾರ್ಯಗಳನ್ನು ನೆರವೇರಿಸುತ್ತಿದ್ದರು. ಒಂದು ಕಾಲದ ವಾಸ್ತವ ಇಂದು ಸಾಂಕೇತಿಕ ರೂಪದಲ್ಲಿ ತನ್ನ ಅಸ್ತಿತ್ವ ಉಳಿಸಿಕೊಂಡಿದೆ ಇಲ್ಲಿ. ನಾಗರಿಕತೆಯ ಹೊಸ್ತಿಲಿಗೆ ಬಂದ ಮೇಲೂ ಈ ಆಚರಣೆ ಮತ್ತು ನಿಷೇಧಗಳಿರುವುದನ್ನು ನೋಡಿದರೆ ಇವತ್ತಿನ ಅನೇಕ ಕೃಷಿಕರು ಅಂದಿನ ಬುಡಕಟ್ಟುಗಳಿಂದ ವಿಕಾಸ ಹೊಂದಿದವರೇ ಎಂಬುದು ಸ್ಪಷ್ಟ.

ಇನ್ನು ನಮ್ಮ ಸುತ್ತಮುತ್ತ ಪ್ರಚಲಿತವಿದ್ದ ಮತ್ತು ಆರಾಧಿಸಲ್ಪಡುತ್ತಿದ್ದ ದೈವಗಳ ಬಗ್ಗೆಯೂ ಒಂದಿಷ್ಟು ಹೇಳಲೇಬೇಕು. ಕೇವಲ ನಮ್ಮ ಊರಲ್ಲ, ಸುತ್ತಲೂ ಏಳೂರುಗಳಲ್ಲಿಯೂ ಬಹು ಜನಪ್ರಿಯವಾಗಿದ್ದ ದೇವತೆ ಎಂದರೆ ಚೌಡಮ್ಮ. 'ಉಜ್ಜನಿ ಚೌಡಮ್ಮ' ಎಂದು ಸಾಮಾನ್ಯವಾಗಿ ಎಲ್ಲರೂ ಕರೆಯುತ್ತಿದ್ದರು. ನಮ್ಮ ಸುತ್ತಲೂ ಹಳ್ಳಿಗಳಲ್ಲಿ ಉಜ್ಜನಿ ಒಂದು ದೊಡ್ಡ ಊರು. ವಿಜಯನಗರದ ಅರಸರ ಕಾಲದ ಶಾಸನವೂ ಊರಿನಲ್ಲಿದೆ. ಅವಶೇಷದಂತೆ ಇರುವ ಕೋಟೆ ಬಾಗಿಲು ಹಾಗೂ ಇನ್ನಿತರ ಐತಿಹಾಸಿಕ ಕುರುಹುಗಳೂ ಕಾಣಸಿಗುವುದರಿಂದ ಇದೊಂದು ಸಣ್ಣ ಪಾಳೆಯಪಟ್ಟಾಗಿತ್ತೆಂಬುದು ನಿಸ್ಸಂದೇಹ. ೧೪ನೇ ಶತಮಾನಕ್ಕೆ ಸಂಬಂಧಿಸಿದ ಶಾಸನದಲ್ಲಿ 'ಚೌಡೇಶ್ವರಿ ದೇವಿ' ಎಂಬ ಅಂಕಿತವಿರುವುದರಿಂದ ಚೌಡಮ್ಮನ ಇತಿಹಾಸವೂ ಅಷ್ಟರಮಟ್ಟಿಗೆ ಹಿಂದಕ್ಕೆ ಹೋಗುತ್ತದೆ. ಪ್ರತಿವರ್ಷ ನಡೆಯುವ ಚೌಡಮ್ಮನ ಹಬ್ಬ ಅತ್ಯಂತ ವಿಶಿಷ್ಟವಾದದ್ದು.[೨]

ಉಜ್ಜನಿಯಲ್ಲಿ ಒಕ್ಕಲಿಗರು, ಹೊಲೆಯರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ವೀರಶೈವರು, ಬ್ರಾಹ್ಮಣರು, ಅಗಸರು, ಬೆಸ್ತರು, ಅರಸುಗಳು, ಮಾದಿಗರು ಇತ್ಯಾದಿಯಾಗಿ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಒಕ್ಕಲಿಗರು, ಹೊಲೆಯರು ಮತ್ತು ಮಾದಿಗರಿಗೆ ಅವರವರದೇ ಆದ ಪ್ರತ್ಯೇಕ ವಾಸಸ್ಥಳಗಳಿವೆ. ಚೌಡಮ್ಮನ ಹಬ್ಬದಲ್ಲಿ ಈ ಎಲ್ಲರಿಗೂ ಒಂದಲ್ಲ ಒಂದು ರೀತಿಯ ನಿರ್ದಿಷ್ಟಪಡಿಸಿದ ಕಾರ್ಯವಿರುತ್ತದೆ. ಆದರೆ ಹಬ್ಬದ ವಿಶಿಷ್ಟಾಚರಣೆಗಳು ಮಾತ್ರ ನಮ್ಮನ್ನು ಬಹು ಹಿಂದಕ್ಕೆ ಕರೆದೊಯ್ಯುತ್ತವೆ.

ಉಜ್ಜನಿಯಲ್ಲಿ ಮೂರು ರೀತಿಯ ಸ್ತ್ರೀ ದೇವತೆಗಳಿರುವುದು ಈ ವಿಶಿಷ್ಟತೆಗೆ ಕಾರಣವಾಗಿದೆ. ಚೌಡಮ್ಮ, ಹೆಬ್ಬಾರಮ್ಮ ಮತ್ತು ಮಾರಮ್ಮ. ಚೌಡಮ್ಮನಿಗೆ ಏಳು ಜನ ಅಕ್ಕತಂಗಿಯರೂ ಇದ್ದಾರೆ. ನಿಡಸಾಲೆ, ಯಮನಹಳ್ಳಿ ಇತ್ಯಾದಿಯಾಗಿ ಬೇರೆ

PDF created with pdfFactory Pro trial version www.pdffactory.com

ಬೇರೆ ಊರುಗಳಲ್ಲಿ ಅವರು ತಂಗಿದ್ದಾರೆ ಎಂದು ಹೇಳಲಾಗುತ್ತಿದೆ. ಅವರಲ್ಲಿ ನಿಡಸಾಲೆ ಚೌಡಮ್ಮ ಮಾತ್ರ ಪ್ರತಿವರ್ಷದ ಹಬ್ಬದಲ್ಲಿ ಉಜ್ಜನಿಗೆ ಬಂದು ಅಕ್ಕನ ಹಬ್ಬದಲ್ಲಿ ಪಾಲ್ಗೊಂಡು ಹೋಗುತ್ತಾಳೆ. ಇಡೀ ದಕ್ಷಿಣ ಭಾರತದ ದೈವೇತಿಹಾಸದಲ್ಲಿ ಪ್ರಮುಖ ಅಂಶವಾಗಿ ಕಾಣಿಸಿಕೊಳ್ಳುವ 'ಏಳುಜನ ಅಕ್ಕ ತಂಗಿಯರು ದೇವತೆಗಳಾಗಿ' ನೆಲೆಗೊಂಡ ಪುರಾಣ ಉಜ್ಜನಿಯಲ್ಲಿಯೂ ಇದೆ. ಹಾಗೆಯೇ ವಲಸೆಗಾರರಾಗಿ ಬಂದು ನೆಲೆಗೊಂಡ ಕೆಲವು ಬುಡಕಟ್ಟುಗಳು ಆದಿಯಲ್ಲಿ ಚೌಡಮ್ಮನನ್ನು ಪ್ರತಿಷ್ಠಾಪಿಸಿರಬೇಕು ಎಂಬ ಅನುಮಾನವೂ ಬರುತ್ತದೆ. ಯಾಕೆಂದರೆ ಈ ಏಳು ದೇವತೆಯರು ಅರ್ಥಾತ್ ಸಪ್ತಮಾತೃಕೆಯರು ವಲಸೆಗಾರ ಹಾಗೂ ಪಶುಪಾಲಕ ಬುಡಕಟ್ಟುಗಳ ಆರಾಧ್ಯ ದೈವಗಳಾಗಿದ್ದವು ಎಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.[3] ಹಾಗಾದರೆ ಉಜ್ಜನಿಯಲ್ಲಿರುವ ಈಗಿನ ಕೃಷಿಕರು ಹಿಂದೆ ವಲಸೆಗಾರರಾಗಿ ಅಥವಾ ಪಶುಪಾಲಕರಾಗಿ ಬಂದು ನೆಲೆಗೊಂಡರೇ ಎಂಬುದನ್ನು ಇನ್ನೂ ಸಂಶೋಧಿಸಬೇಕಾಗುತ್ತದೆ.

ಹೆಬ್ಬಾರಮ್ಮ ಮುಖ್ಯವಾಗಿ ಹೊಲೆಯರ ದೇವತೆ. ಹೆಬ್ಬಾರಮ್ಮನ ಗುಡಿಯೂ ಹೊಲಗೇರಿಯಲ್ಲಿದೆ. ಈ ದೇವತೆಗೆ ಸಂಬಂಧಿಸಿದ ಪುರಾಣ ಹೆಚ್ಚುಕಡಿಮೆ ಮಾರಮ್ಮನ ಪುರಾಣವನ್ನು ಹೋಲುತ್ತದೆ. ಆದ್ದರಿಂದಲೇ ಇಲ್ಲಿ ಇರುವ ಮಾರಮ್ಮನಿಗೆ ಹೆಚ್ಚು ಪ್ರಾಶಸ್ತ್ಯವಿಲ್ಲ. ಉಜ್ಜನಿಯ ವಿಶಿಷ್ಟತೆ ಏನು ಎಂದರೆ, ಹೆಬ್ಬಾರಮ್ಮನ ಭಕ್ತರಾದ ಹೊಲೆಯರು ಚೌಡಮ್ಮನ ಹಬ್ಬದಲ್ಲಿ ಪ್ರಧಾನಪಾತ್ರ ವಹಿಸುವುದು. ಹದಿನೆಂಟು ದಿನಗಳ ಕಾಲ ನಿಗದಿಪಡಿಸಿದ ಆರು ಜನ ಹೊಲೆಯರು ಜನಿವಾರ ಹಾಕಿ ಶಾಸ್ತ್ರೋಕ್ತವಾಗಿ ಬ್ರಾಹ್ಮಣರಾಗುತ್ತಾರೆ. ಬ್ರಾಹ್ಮಣ ಪುರೋಹಿತ ಈ ಶಾಸ್ತ್ರವನ್ನು ನಡೆಸಿಕೊಡುತ್ತಾನೆ. ಹೀಗೆ ನೇಮನಿಯಮಗಳನ್ನು ಪಾಲಿಸಿದ ಹೊಲೆಯರು ಚೌಡಮ್ಮನ ಕೊಂಡದಲ್ಲಿ ಹೆಬ್ಬಾರೆ ಹೊತ್ತು ಓಡಲು ಅರ್ಹರಾಗುತ್ತಾರೆ. ಹಾಗೆ ಕೊಂಡದಲ್ಲಿ ಓಡುವ ಇತರೆ ದೇವತೆಗಳ ವಿವರ ನೋಡಿ. ಉಜ್ಜನಿ ಚೌಡಮ್ಮ, ನಿಡಸಾಲೆ ಚೌಡಮ್ಮ, ಕರಗ, ದೂಪುಂಡಿಗೆ ಹಾಗೂ ಕೊನೆಯಲ್ಲಿ ಆರು ಜನ ಹೆಬ್ಬಾರೆ ಹೊತ್ತ ಗುಡ್ಡರು. ಸವರ್ಣೀಯ ಗುಡ್ಡರು ಆ ಬೃಹತ್ ಕೆಂಡದ ರಾಶಿಯನ್ನು ಹಾದು ದೇವಸ್ಥಾನದ ಒಳಕ್ಕೆ ಪ್ರವೇಶಿಸುತ್ತಾರೆ. ಆದರೆ ಹೆಬ್ಬಾರೆ ಗುಡ್ಡರನ್ನು ಹೊರಗೆ ತಡೆಯಲಾಗುತ್ತದೆ. ಆ ಸಂದರ್ಭದಲ್ಲಿ ಹೆಬ್ಬಾರೆ ಗುಡ್ಡರು ಆವೇಶಭರಿತರಾಗಿ ಒಳನುಗ್ಗುವುದು, ಸವರ್ಣೀಯರು ತಡೆಯುವುದು ಇದೇ ತೆರನಾದ 'ಅಭಿನಯ' ನಡೆದು ಚೌಡಮ್ಮನ ಗುಡಿಯ ತೀರ್ಥವನ್ನು ಸಿಂಪಡಿಸಿದ ನಂತರ ಅವರು ಸಾವಧಾನಕ್ಕೆ ಬರುತ್ತಾರೆ.

ಹೆಬ್ಬಾರಮ್ಮ ಮತ್ತು ಚೌಡಮ್ಮಗಳ ಇಲ್ಲಿಯ ಸಂಬಂಧ ವಲಸೆ ಬಂದವರು ಮತ್ತು ಮೂಲವಾಗಿ ಇದ್ದವರ ನಡುವಿನ ಒಂದು ಕಾಲದ ಸಂಘರ್ಷವಾಗಿ ಮತ್ತು

ಇಂದು ಅದು ಹಬ್ಬದ ರೂಪದ ಸಾಮರಸ್ಯವಾಗಿ ನಮಗೆ ಕಾಣುತ್ತಿದೆಯೇ? ಆದರೆ ಚೌಡಮ್ಮ ಮತ್ತು ಹೆಬ್ಬಾರಮ್ಮ ಇಬ್ಬರೂ ಕೊಂಡ ಹಾಯುವುದರಿಂದ ಒಂದು ಕಾಲಕ್ಕೆ ಈ ಇಬ್ಬರೂ 'ಸತಿ'ಯರಾದ ಮಹಿಳೆಯರಿರಬಹುದೇ? ಈ ಎಲ್ಲಾ ದೇವರ ಪ್ರತೀಕಗಳಿಗಿಂತ ಪ್ರಪ್ರಥಮವಾಗಿ ಕೊಂಡದಲ್ಲಿ ಓಡುವ ಕರಗ ಏನನ್ನು ಸಂಕೇತಿಸುತ್ತದೆ? ಬಹುಶಃ 'ಕರಗ' ಚೌಡಮ್ಮ ಮತ್ತು ಹೆಬ್ಬಾರಮ್ಮನಿಗಿಂತ ಪುರಾತನವಾದ ದೈವೀ ಕಲ್ಪನೆ. ಸಮೃದ್ಧಿಯನ್ನು ಹಾರೈಸುವ ಆ ಮೂಲಕ ಸೃಷ್ಟಿಗೆ ಕಾರಣವಾದ ಸ್ತ್ರೀಯ ಯೋನಿಯನ್ನು ಸಂಕೇತಿಸುವ ಕರಗ ಶಿಲಾಯುಗದಷ್ಟು ಹಿಂದಿನ ಕಲ್ಪನೆಗೆ ನಮ್ಮನ್ನು ಕೊಂಡೊಯ್ಯುತ್ತದೆ. ನಮ್ಮ ಬಯಲು ಸೀಮೆಯ ಅನೇಕ ಗ್ರಾಮದೇವತೆಯರ ಹಬ್ಬದಲ್ಲಿ ಈ ಕರಗ ಮುಂಚೂಣಿಯಲ್ಲಿ ಇದ್ದೇ ಇರಬೇಕು. ಉಜ್ಜನಿಯಲ್ಲಿ 'ಕರಗದ ಪಾಲು' ಮತ್ತು 'ಕರಡಿ ಪಾಲು' ಎಂಬ ಎರಡು ಪ್ರತ್ಯೇಕ ಬಳಿಗಳಿದ್ದು, ಆ ಕಥೆಗಳು ವಲಸೆಗಾರರಾಗಿ ಉಜ್ಜನಿಗೆ ಬಂದು ನೆಲೆಸಿದವರ ಕಥೆಗಳನ್ನೇ ಹೇಳುತ್ತವೆ.

ಈ ಪ್ರದೇಶದ ಮಲ್ಲಪ್ಪನಗುಡ್ಡ, ಅಯ್ಯನಗುಡ್ಡ, ಕಂಬದಗುಡ್ಡಗಳಲ್ಲಿ ಇರುವ ಗುಹೆಗಳು ಒಂದು ಕಾಲಕ್ಕೆ ಅಲ್ಲಿದ್ದ ತಾಂತ್ರಿಕ ಪಂಥದ ಪ್ರಚಾರತೆಯನ್ನು ಹೇಳುತ್ತದೆ. ಉಜ್ಜನಿ ಮತ್ತು ಹುಲಿಯೂರುದುರ್ಗದ ನಡುವೆ ಇರುವ ಹೇಮಗಿರಿ ಬೆಟ್ಟದಲ್ಲಿನ 'ಕಾಲಭೈರವನ' ಗುಹೆ ಕಾಳಾಮುಖ ಪಂಥದ ಅಸ್ತಿತ್ವವನ್ನು ಹೇಳುತ್ತದಲ್ಲದೆ, ಇಂದಿಗೂ ಬಹುಜನಪ್ರಿಯವಾಗಿರುವ ಅಲ್ಲಿನ ಜಾತ್ರೆ ಅಂಥ ಅನೇಕ ಸಾಂಕೇತಿಕ ಆಚರಣೆಗಳ ಆಗರವಾಗಿದೆ. ನಾವೆಲ್ಲಾ ಚಿಕ್ಕಂದಿನಲ್ಲಿ ಆ ಬೆಟ್ಟ ಏರಿ, ಭೈರವನ ದರ್ಶನ ಪಡೆದು, ಅನೇಕ ಗುಹೆಗಳನ್ನು ಬಗ್ಗಿ ಬಗ್ಗಿ ನೋಡಿ, ಕತ್ತಲೆಗೆ ಹೆದರಿ, ಹಿರಿಯರು ಹೇಳುತ್ತಿದ್ದ ರಾತ್ರಿಯಲ್ಲಿ ಓಡಾಡುವ ನಿಶಾಚರ ಸಿದ್ಧರನ್ನು ನೆನಪಿಸಿಕೊಂಡು ಭಯದಿಂದ ಓಡೋಡಿ ಜಾತ್ರೆ ಸೇರಿದ ಪ್ರಸಂಗಗಳೂ ಇವೆ.

ನಮ್ಮ ಮನೆಯಲ್ಲಿ ನಡೆಯುತ್ತಿದ್ದ ಮತ್ತೊಂದು ಪ್ರಸಂಗವನ್ನು ಈಗಲೇ ಹೇಳಿ ಬಿಡುತ್ತೇನೆ. ನಾವು ನಂಜನಗೂಡಿನ ನಂಜುಂಡನ ಪಂಥಕ್ಕೆ ಸೇರಿದವರು ಎಂದು ನಮ್ಮ ಹಿರಿಯರ ನಂಬಿಕೆ. ಯಾಕೆಂದರೆ ಮಲೆಮಾದೇಶ್ವರ, ಮಂಟೇಸ್ವಾಮಿ, ಭೈರವ, ತಿರುಪತಿವೆಂಕಟರಮಣ, ಓದೇಶ್ವರ(ವೈದ್ಯನಾಥೇಶ್ವರ) ಇತ್ಯಾದಿಯಾಗಿ ಅನೇಕ ದೈವ ಪಂಥಗಳು ನಮ್ಮಲ್ಲಿ ರೂಢಿಯಲ್ಲಿವೆ. ಮೊದಲಿಗೆ ಆಕಾರವಿಲ್ಲದ ದೈವವನ್ನು, ಆನಂತರ ಗ್ರಾಮದೇವತೆಯರನ್ನೂ ಆರಾಧಿಸುತ್ತಿದ್ದ ಜನ, ನಂತರದಲ್ಲಿ ಈ ಗಂಡು ದೈವಗಳ ಪಂಥಗಳಿಗೆ ಸೇರಿದ್ದು ಒಂದು ಚಾರಿತ್ರಿಕ ಕಾಲದಲ್ಲಿಯೇ. ಮಧ್ಯಕಾಲೀನ ಕರ್ನಾಟಕ ಅಂಥ ಒಂದು ಚಾರಿತ್ರಿಕಘಟ್ಟ. ಶಂಕರಾಚಾರ್ಯ ರಾಮಾನುಚಾರ್ಯ ಮತ್ತು ಮಧ್ವಾಚಾರ್ಯರು ತಮ್ಮ ವೈದಿಕ ಮೌಲ್ಯಗಳ ಪುನರುತ್ಥಾನಕ್ಕೆ ಪ್ರಯತ್ನಪಟ್ಟ ಸಂದರ್ಭಗಳಲ್ಲಿಯೇ, ಅನೇಕ ದೇಸಿ ಪಂಥಗಳು ಕೂಡ ತಮ್ಮ ತಮ್ಮ ಪರಂಪರೆಯ

PDF created with pdfFactory Pro trial version www.pdffactory.com

ಉಳಿವಿಗಾಗಿ ಹೋರಾಟ ನಡೆಸುತ್ತಿದ್ದವು. ಈ ಸಂದರ್ಭದಲ್ಲಿಯೇ ಶೈವ ಮತ್ತು ವೈಷ್ಣವ ಪಂಥಗಳು ತಮ್ಮ ತಮ್ಮ ಜನಪ್ರಿಯತೆಗಾಗಿ ಅನೇಕ ಹೊಸ ಹೊಸ ಪಂಥಗಳನ್ನು ಹುಟ್ಟುಹಾಕಿದವು. ಆದರೆ ದೇಸಿ ಪಂಥಗಳನ್ನು ಮುನ್ನಡೆಸಿದ ಮಲೆಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಭೈರವ ಹಾಗೂ ತಿರುಪತಿ ವೆಂಕಟರಮಣ ಹೆಚ್ಚು ಜನಪ್ರಿಯರಾದರು. ತಿರುಪತಿಯ ದಾಸಯ್ಯಗಳು, ಚುಂಚನಗಿರಿಯ ಜೋಗಪ್ಪಗಳು, ಮಾದಪ್ಪನ ಕಂಸಾಳೆ ಗುಡ್ಡರು ಹಾಗೂ ಮಂಟೆಸ್ವಾಮಿಯ ನೀಲಗಾರರು ಒಂದು ರೀತಿಯಲ್ಲಿ ದೇಸಿ ಪುರೋಹಿತರಾಗಿ ಸ್ಥಳೀಯ ಜೀವನಕ್ರಮಗಳ ಚೌಕಟ್ಟಿನಲ್ಲಿಯೇ ತಮ್ಮ ತಮ್ಮ ಪಂಥಕ್ಕಾಗಿ ಭಕ್ತರನ್ನು ಸಂಪಾದಿಸಿದರು. ಉತ್ತರಕರ್ನಾಟಕದ ಯಲ್ಲಮ್ಮ, ಮೈಲಾರಲಿಂಗ ಹಾಗೂ ಅನೇಕ ಸೂಫಿ ಪಂಥಗಳೂ ಇದನ್ನೇ ಮಾಡಿದ್ದು. ಇಂಥ ಸನ್ನಿವೇಶದಲ್ಲಿ ನಮ್ಮ ಮನೆತನ, ಹಾಗೆಯೇ ನಮ್ಮೂರಿನ ಇನ್ನೂ ಹತ್ತಾರು ಮನೆತನಗಳು ನಂಜನಗೂಡಿನ ನಂಜುಂಡನನ್ನು ತಮ್ಮ ಇಷ್ಟದೈವವಾಗಿ ಇಟ್ಟುಕೊಂಡಿದ್ದು ಒಂದು ಆಶ್ಚರ್ಯ. ಆದರೇನಂತೆ, ಭೈರವ ನಮಗೆ ದೂರವಲ್ಲ. ಉದಾಹರಣೆಗೆ ನನ್ನ ಹೆಸರೇ ಭೈರವನ ಮೂಲದಿಂದ ನಿಷ್ಪತ್ತಿಗೊಂಡಿದ್ದು. ಭೈರವಲಿಂಗ 'ಬೋರಲಿಂಗ'ವಾಯಿತು ಅಷ್ಟೇ. ಅದಿರಲಿ, ಈಗ ನಾನು ನನ್ನ ಕುಟುಂಬದಲ್ಲಿ ನಡೆಯುತ್ತಿದ್ದ ಆ ವಿಶಿಷ್ಟ ಆಚರಣೆಯ ವಿಷಯಕ್ಕೆ ಬರುತ್ತೇನೆ.

ವರ್ಷಕ್ಕೆ ಒಂದುಬಾರಿ ನಾವು 'ಭಂಗಿಸೇವೆ' ಎಂಬ ಒಂದು ಸಂಪ್ರದಾಯವನ್ನು ತಪ್ಪದೆ ನಡೆಸುತ್ತಿದ್ದೆವು. ಇದು ಒಂದು ರೀತಿಯಲ್ಲಿ ಚುಂಚನಗಿರಿಯ ಭೈರವನಿಗೂ ತಿರುಪತಿಯ ವೆಂಕಟರಮಣನಿಗೂ ಒಪ್ಪಿಸುವ ಹರಕೆಯ ರೂಪದ ಆಚರಣೆ. ಭೈರವನ ಪ್ರತಿನಿಧಿಯಾದ ಜೋಗಪ್ಪನನ್ನೂ, ವೆಂಕಟರಮಣನ ಪ್ರತಿನಿಧಿಯಾದ ದಾಸಪ್ಪನನ್ನೂ, ನಾವು ಮನೆಗೆ ಅಹ್ವಾನಿಸುತ್ತಿದ್ದೆವು. ಅವರು ಬಂದು ನಡುಮನೆಯಲ್ಲಿ ಹಾಸಿದ ಬಿಳಿವಸ್ತ್ರದ ಮೇಲೆ ತಮ್ಮ ತಮ್ಮ ದೇವರುಗಳನ್ನು ಇಟ್ಟು, ವಿಧ ವಿಧವಾದ ಹೂಗಳಿಂದ ಅಲಂಕರಿಸುತ್ತಿದ್ದರು. ಆ ದೇವರುಗಳ ಮುಂದೆ ಹರಡಿದ ಬಾಳೆ ಎಲೆ ಮೇಲೆ 'ಎಡೆ' ಏರ್ಪಡಿಸಲಾಗುತ್ತಿತ್ತು. ಆ ಎಡೆಯಲ್ಲಿ ಅನ್ನ, ಮಾಂಸದ ಅಡುಗೆ, ಹೆಂಡ ಹಾಗೂ ಭಂಗಿ ಕೊಳವೆ ಕಡ್ಡಾಯವಾಗಿ ಇರಲೇಬೇಕು. ಅದೊಂದು ರೀತಿಯಲ್ಲಿ ವಾಮಾಚಾರದ ಆಚರಣೆಯಂತಿರುತ್ತಿತ್ತು. ದಾಸಪ್ಪ ಜೋಗಪ್ಪ ಇಬ್ಬರೂ ತಮ್ಮ ತಮ್ಮ ದೈವಗಳ ಬಗ್ಗೆ ಹೊಗಳಿಕೆಗಳನ್ನು ಮಾಡಿದ ನಂತರ ಹೆಂಡದ ಸೇವನೆಯೂ, ಬಾಡಿನ ಊಟವೂ ಆಗುತ್ತಿತ್ತು. ವೆಂಕಟರಮಣ ಮತ್ತು ಭೈರವನ ಈ ಸಮಾಗಮ ಅತ್ಯಂತ ಕುತೂಹಲಕಾರಿ. ಜನಸಾಮಾನ್ಯರು ತಮ್ಮಲ್ಲಿ ತಾವೇ ಏರ್ಪಡಿಸಿಕೊಂಡ ಈ ಶೈವ–ವೈಷ್ಣವ ಸಾಮರಸ್ಯ ವೈದಿಕ ಮೂಲದ

ಆಚಾರ್ಯರುಗಳಿಗೆ ಗೊತ್ತಿರಲಿಲ್ಲವೆಂದೇ ಕಾಣುತ್ತದೆ.[೪] ತಮ್ಮ ತಮ್ಮ ಪಂಥಗಳ ಉನ್ನತಿಗಾಗಿ ಬೊಬ್ಬೆ ಹಾಕುತ್ತಿದ್ದ ದೊಡ್ಡ ದೊಡ್ಡ ಪಂಡಿತರುಗಳ ಚಾಣಾಕ್ಷತನವನ್ನು ಈ ರೀತಿಯಲ್ಲಿ ಹೆಂಡ ಮತ್ತು ಬಾಡಿನ ವಾಸನೆಯಲ್ಲಿ ಐಕ್ಯಗೊಳಿಸಿದ ನಮ್ಮ ಜನ ನಿಜಕ್ಕೂ ಅಭಿನಂದನಾರ್ಹರು.

ಉಜ್ಜನಿ ಚೌಡಮ್ಮನ ಬಗ್ಗೆ ಈ ಹಿಂದೆ ಹೇಳಿದೆ. ನಾವೆಲ್ಲ ಅಷ್ಟು ವಿಜೃಂಭಣೆಯಿಂದ ಆರಾಧಿಸುತ್ತಿದ್ದ ಚೌಡಮ್ಮ ನಮ್ಮ ಮನೆದೇವರಲ್ಲ. ನಮ್ಮ ಭಾಗದಲ್ಲಿ ಚೌಡಮ್ಮನ ಒಕ್ಕಲು ಹೆಚ್ಚಾಗಿದೆಯಾದರೂ ನಮ್ಮ ಮನೆದೇವರು ಚೌಡಮ್ಮನಾಗಿರಲಿಲ್ಲ. ನಮ್ಮೂರಿಂದ ಸುಮಾರು ಇಪ್ಪತ್ತು. ಕಿ.ಮೀ. ದೂರದಲ್ಲಿರುವ ಶಿಂಷಾ ನದಿಯನ್ನು ದಾಟಿ, ಆ ಕಡೆ ಹೋದರೆ ನಾಗಮಂಗಲ ತಾಲೂಕಿನಲ್ಲಿ ಇರುವ ತೂಬಿನಕೆರೆ 'ಪಟಲದಮ್ಮ' ನಮ್ಮ ಮನೆದೇವರು. ಈಗಲೂ ವರ್ಷಕ್ಕೊಂದು ಸಲ ಆ ಹಬ್ಬಕ್ಕೆ ನಾವು ಹೋಗಲೇಬೇಕು. ಅಂದರೆ ನಮ್ಮ ಪೂರ್ವಜರು ಒಂದಾನೊಂದು ಕಾಲಕ್ಕೆ ಅಲ್ಲಿಂದ ಇಲ್ಲಿಗೆ(ಕುಣಿಗಲ್ ತಾಲೂಕಿನ ಉಜ್ಜನಿ ಪಕ್ಕದ ಹಿತ್ತಲಪುರಕ್ಕೆ) ಬಂದು ಸೇರಿಕೊಂಡರು. ಹೀಗಾಗಿ ಪಟಲದಮ್ಮನೂ ಚೌಡಮ್ಮನೂ ನಮ್ಮ ಆರಾಧ್ಯ ದೇವತೆಯರಾದರೆ, ನಂಜನಗೂಡಿನ ನಂಜುಂಡ, ಚುಂಚನಗಿರಿಯ ಭೈರವ ಹಾಗೂ ಆಗಾಗ ತಿರುಪತಿ ವೆಂಕಟರಮಣ ನಮ್ಮ ನಮ್ಮ ಮುಖ್ಯ ದೇವರುಗಳಾಗಿ ನಿಂತರು.

ನಾಗಾರಾಧನೆ ಅತ್ಯಂತ ಪ್ರಾಚೀನವಾದದ್ದು ಎಂಬ ನಂಬಿಕೆ ಇದೆ. ಹಾಗೆ ನೋಡಿದರೆ ಕರಾವಳಿಯಲ್ಲಿ ಈಗಲೂ ಅತ್ಯಂತ ಜನಪ್ರಿಯವಾಗಿರುವ ನಾಗಾರಾಧನೆ ಅನೇಕ ಬುಡಕಟ್ಟುಗಳಲ್ಲಿ ಅಚ್ಚಳಿಯದ ನಂಬಿಕೆ ಉಳಿದಿದೆ. ನಮ್ಮಲ್ಲಿ ಕೂಡ ನಾಗಪ್ಪನ ಪೂಜೆ ಬಳಕೆಯಲ್ಲಿದೆ. ಅದನ್ನು 'ಮುನಿಯಪ್ಪನ ಸೇವೆ', 'ಮುನಿ ಮಾಡುವುದು' ಮುಂತಾಗಿ ಹೇಳುತ್ತಾರೆ. ಸಮೃದ್ಧವಾಗಿ ಬೆಳೆದ ಹೊಲದಲ್ಲಿ ಹಸುರಿನ ಕಾಲದಲ್ಲಿ ಈ ಸೇವೆ ಮಾಡಲಾಗುತ್ತದೆ. ಕುರಿ ಅಥವಾ ಕೋಳಿಯನ್ನು ಬಲಿ ಕೊಟ್ಟು ಮಾಡುವ ಈ ಸೇವೆಯಲ್ಲಿ ನಾಗಪ್ಪನಿಗೆ ಹಾಲಿನ ಬದಲು ಮಾಂಸಾಹಾರದ ಊಟ ಇಡಲಾಗುತ್ತದೆ. ಸಮೃದ್ಧಿ ಮತ್ತು ಸಂತಾನದ ಸಂಕೇತವಾದ ಈ 'ಮುನಿಸೇವೆ'ಯನ್ನು ಹೊಲದ ತುಂಬ ಹೊಸ ಬೆಳೆ ಬಂದಾಗ ಮಾಡುವುದರಲ್ಲಿ ಅರ್ಥವಿದೆ.

ಹೀಗೇಯೇ ಭೂತಪ್ಪ, ಮಾಯಮ್ಮ, ಮಾರಮ್ಮ, ದಂಡಿನಮ್ಮ ಮುಂತಾಗಿ ಹಲವು ದೇವದೇವತೆಯರ ಆರಾಧನೆ ನಡೆಯುತ್ತದೆ. ದವಸದಾನ್ಯಗಳನ್ನು ಹೊಕ್ಕಿ ಕಣದಲ್ಲಿ ರಾಶಿ ಮಾಡಿದಾಗ ಆರಾಧಿಸುವ ಸಮೃದ್ಧಿ ದೇವರುಗಳ ಆರಾಧನೆ ಅತ್ಯಂತ ಸಾಂಕೇತಿಕವಾಗಿ ನಡೆಯುತ್ತದೆ. ಸೂರ್ಯಗ್ರಹಣ ಮತ್ತು ಚಂದ್ರಗ್ರಹಣಗಳ ಸಂದರ್ಭದಲ್ಲಿ ಬರೆಯುವ ಮಂಡಲಗಳು ಮತ್ತು ಆರಾಧನಾ ಸ್ವರೂಪ ನಮ್ಮನ್ನು ಮಾಂತ್ರಿಕ ಲೋಕವೊಂದಕ್ಕೆ ಕರೆದೊಯ್ಯುತ್ತದೆ.

PDF created with pdfFactory Pro trial version www.pdffactory.com

ಉಜ್ಜನಿ ಚೌಡಮ್ಮನ ಗುಡಿಯಲ್ಲಿ ಹಾಗೂ ತೂಬಿನಕೆರೆ ಪಟಲದಮ್ಮನ ಗುಡಿಯಲ್ಲಿನ ಪ್ರವೇಶ ದ್ವಾರದಲ್ಲಿ ಇದ್ದ ಒಂದು ಕೆಂಪುಮುಖದ ಹಾಗೂ ಕರಿಮುಖದ ಬೃಹದಾಕಾರದ 'ಭೂತ'ಗಳು ಆಗಿನ ಕಾಲಕ್ಕೆ ನಮ್ಮ ಎದೆ ನಡುಗಿಸುತ್ತಿದ್ದವು. ಸುಮಾರು ೧೫ ಅಡಿ ಎತ್ತರ ಮತ್ತು ೩೦ ಅಡಿ ಸುತ್ತಳತೆಯ ಆ 'ರಾಕ್ಷಸರು' ನೋಡಲು ಸುಂದರ ಹಾಗೂ ಭಯಾನಕ. ಅವುಗಳಿಗೆ ಬಳಸಲಾಗಿದ್ದ ವಿವಿಧ ಬಣ್ಣಗಳು ಮತ್ತು ಅವುಗಳ ಸಂಯೋಜನೆ ಆಕರ್ಷಕ. ಆದರೆ ಒಟ್ಟಾರೆ ಮುಖಭಾವ ಕ್ರೂರ. ನನ್ನ ಅಪ್ಪ ಯಾವುದೇ ರಾಕ್ಷಸರ ಕಥೆ ಹೇಳಿದರೂ ನನ್ನ ಮುಂದೆ ದುತ್ತನೆ ಬಂದು ನಿಲ್ಲುತ್ತಿದ್ದ ಮೂರ್ತಿಗಳು ಅವೇ. ವಾಸ್ತವವಾಗಿ ಅವು ಚೌಡಮ್ಮನ ಕಾವಲು ಭಟರಷ್ಟೇ ಅಲ್ಲ, ಏಳೂರಿನ ಆಡಳಿತ ನೋಡಿಕೊಳ್ಳುತ್ತಿದ್ದ ಸೇವಕರು ಎಂಬುದು ಪ್ರತೀತಿ. ಕುದುರೆ ಏರಿ ಚೌಡಮ್ಮ ಹೊರಟರೆ, ಇವರು ಸದಾ ಕಾವಲು. ಒಂದು ಕಾಲದ ಮಾತೃಮೂಲ ಆಧಿಕಾರದ ಸಾಂಕೇತಿಕ ಚಿತ್ರ ಇದು. ಅತಿಮಾನುಷ ಶಕ್ತಿಗಳ ಆರಾಧನೆ, ದೇವಿ ಆರಾಧನೆಯ ಜೊತೆ ಜೊತೆಯಲ್ಲೇ ಬೆಳೆದು ಬಂದದ್ದಕ್ಕೆ ಇದೊಂದು ಉದಾಹರಣೆ ಕೂಡ. ಗ್ರಾಮದೇವತೆಯ ಹಬ್ಬಗಳ ಅವಿಭಾಜ್ಯ ಅಂಗವೆನಿಸಿದ 'ಸೋಮ'ಗಳ ಆರಾಧನೆ ಇದಕ್ಕೆ ಹತ್ತಿರವಾದದ್ದೆ. ಕರಿರಾಯ ಕೆಂಚರಾಯ ಎಂಬ ಸೋಮಗಳು ಸದಾ ಆಯಾ ದೇವಿಯ ಭಟರು. ದೇವಿಯ ಅನುಪಸ್ಥಿತಿಯಲ್ಲಿ ಎಲ್ಲ ಕಾರ್ಯಗಳನ್ನು ಕೈಗೊಳ್ಳುವರು ಅವರೇ. ಹೀಗೆ ಒಂದು ಗ್ರಾಮದೇವತೆಯ ಗುಡಿಯಲ್ಲಿನ ಕರಗ ಎಂಬ ಸಂಕೇತದ ಯೋನಿ ಸೂಚಕ ಆರಾಧನೆ, ಸರ್ಪದ ಮೂಲಕ ಆರಾಧಿಸುತ್ತಿದ್ದ ಲೈಂಗಿಕ ಸೂಚಕ ಆರಾಧನೆ, ಭೂತಗಳ ಮೂಲಕ ಕಾಣಲಾಗುತ್ತಿದ್ದ ಅತಿಮಾನುಷ ಶಕ್ತಿಗಳ ಆರಾಧನೆ, ಹೆಬ್ಬಾರೆ ಗುಡ್ಡರ ಮೂಲಕ ಮೂಲದ ಅಸ್ಪೃಶ್ಯರು ಮತ್ತು ವಲಸೆ ಬಂದು ಬೀಡುಬಿಟ್ಟ ಕೃಷಿಕ ಸಮುದಾಯಗಳ ನಡುವಿನ ಘರ್ಷಣೆ ಹಾಗೂ ಸಾಮರಸ್ಯಕ್ಕೆ ನಮಗೆ ಅತ್ಯಂತ ಕುತೂಹಲದ ಸಂಗತಿಗಳಾಗಿ ಕಾಣಿಸುತ್ತವೆ.

ನಾನು ಇಷ್ಟೆಲ್ಲಾ ಹೇಳಿದ್ದಕ್ಕೆ ಕಾರಣಗಳಿವೆ. ಬುಡಕಟ್ಟುಗಳ ದೈವಾರಾಧನೆ ಬಗ್ಗೆ ಹೇಳಲು ಹೊರಟ ನಾನು ಇದುವರೆಗೆ ನನ್ನೂರಿನ ದೈವಾರಾಧನೆಯ ವಿವರಗಳನ್ನು ಕೊಡುತ್ತಾ ಕೂತೆ. ನನ್ನ ದೃಷ್ಟಿಯಲ್ಲಿ ಇದರ ಅವಶ್ಯಕತೆ ಇತ್ತು. ಯಾಕೆಂದರೆ, ಇಂದಿನ ನಾಗರಿಕ ಸಮಾಜದ ಅನೇಕ ಸಮುದಾಯಗಳು ಒಂದು ಕಾಲದ ಬುಡಕಟ್ಟೊಂದರ ಕವಲುಗಳಲ್ಲದೆ ಮತ್ತೇನೂ ಅಲ್ಲ. ನಾವೆಷ್ಟೇ ಮುಂದುವರಿದಿದ್ದೇವೆ ಎಂದರೂ ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಿ, ಪರಂಪರೆಯ ಎಳೆಯಾಗಿ ಹೇಗೆ ಅವು ನಮ್ಮನ್ನು ಪ್ರಭಾವಿಸುತ್ತವೆ ಎಂಬುದನ್ನು ಈ ಮೂಲಕ ಹೇಳಲು ಪ್ರಯತ್ನಿಸಿದ್ದೇನೆ.

ಇಂದು ನಾವು ಎಷ್ಟೇ ನಾಸ್ತಿಕರು ಎಂದುಕೊಂಡರೂ ದೇವರುಗಳ ಸಂಪರ್ಕ ಕಳಚಿಕೊಂಡು ಇರಲು ಸಾಧ್ಯವೇ ಇಲ್ಲ. ನಾವು ಬೇಡವೆಂದರೂ ದೇವರುಗಳು ನಮಗೆ ಹತ್ತಿರವಾಗುತ್ತವೆ. ನಾವು ಆರಾಧಿಸಲೇಬೇಕೆಂದೇನೂ ಇಲ್ಲ. ದ್ವೇಷಿಸುವುದು ಕೂಡ ಆರಾಧನೆಯ ಇನ್ನೊಂದು ತುದಿಯೇ ತಾನೇ? ಪರಸ್ಪರ ಸಂಪರ್ಕವಂತೂ ಕಡಿದು ಹಾಕುವಂತದ್ದಲ್ಲ. ನಮ್ಮ ದೃಷ್ಟಿ ಸಕಾರಾತ್ಮಕವೋ ನಕಾರಾತ್ಮಕವೋ. ಆದರೆ ದೇವರುಗಳ ಪ್ರಭಾವದಿಂದ ನಾವು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದು ನನ್ನ ತರ್ಕ. ನನ್ನ ಈ ಮಾತಿಗೆ ಪುಷ್ಟಿಯೊದಗಿಸುವಂಥ ಖ್ಯಾತ ಚಿಂತಕ ಆಶಿಶ್‌ನಂದಿ ಅವರ ಮಾತುಗಳನ್ನು ನೋಡಿ. "ನನಗೆ ದೇವರುಗಳನ್ನು ಸಮೀಪಿಸುವ ಇಷ್ಟವಿಲ್ಲದಿದ್ದರೂ ಒತ್ತಾಯದಿಂದ ಅವರೇ ನನ್ನ ಸಮೀಪಕ್ಕೆ ಬರುತ್ತಿದ್ದಾರೆ. ಈ ದೇವ ದೇವಿಯರು, ನಾನು ಹಾಗೆ ಹೇಳಬಹುದಾದರೆ, ಅನಿವಾರ್ಯ ತರ್ಕವೆಂಬಂತೆ ನಮ್ಮ ಬದುಕಿಗೆ ಬರುತ್ತಾರೆ. ಜಾಡ್ಯದಂತೆ ಈ ಬದುಕಿಗೆ ಅಂಟುತ್ತಾರೆ, ಆವರಿಸಿ ಆಕ್ರಮಿಸಿ ನಾವು ಬಯಸದಿದ್ದರೂ ನಮ್ಮ ಬದುಕಿನಾದ್ಯಂತ ವ್ಯಾಪಿಸುತ್ತಾರೆ. ಮೇಲ್ನೋಟಕ್ಕೆ ದೇವದೇವಿಯರನ್ನು ನಿರಾಕರಿಸುವಂತೆ ಕಾಣುವ ಧರ್ಮಗಳಲ್ಲೂ ಕೂಡಾ, ದೇವತೆಗಳಿಂದ ತುಂಬಿದ ಧರ್ಮಗಳಲ್ಲಿ ಕಾಣುವ ಕೆಲವು ರೂಢಿಗಳ ಮೂಲಕ, ದೇವದೇವಿಯರು ಪ್ರವೇಶ ಮಾಡುತ್ತಾರೆ. ಅತ್ಯಂತ, ನಿಷ್ಠ ಏಕದೇವತಾವಾದಿ ಹಾಗೂ ಕಟು ಮೂರ್ತಿವಿರೋಧಿ ಧರ್ಮಗಳಲ್ಲೂ ಕೂಡಾ ದೇವತೆಗಳು ಇದ್ದಾರೆ. ದೇವರುಗಳು ನಮ್ಮ ಬದುಕನ್ನು ವ್ಯಾಪಿಸಿಕೊಂಡಿದ್ದಾರೆ ಎಂದು ಹೇಳಿದ್ದರ ಅರ್ಥವು ಒಬ್ಬ ಆಧುನಿಕಗೊಂಡ ನಗರೀಕೃತ ಸುಸಂಸ್ಕೃತ ವ್ಯಕ್ತಿಯು ಹೀಗೆ ಹೇಳುವುದಕ್ಕಿಂತ ಭಿನ್ನವಾದದ್ದು ಅಥವಾ ಒಬ್ಬ ವಿಚಾರವಾದಿಯು ದೇವರು ತನ್ನ ಭಕ್ತನ ಬದುಕನ್ನು ವ್ಯಾಪಿಸುವ ಪ್ರಕ್ರಿಯೆಯನ್ನು ಗ್ರಹಿಸುವುದಕ್ಕಿಂತ ವಿಭಿನ್ನವಾದದ್ದು. ನಾನು ಹೇಳುತ್ತಿರುವುದು ದೇವದೇವಿಯರು ಹೆಚ್ಚು ಕಮ್ಮಿ ಮನುಷ್ಯ ಅರೆಮನುಷ್ಯ ರೂಪಗಳಲ್ಲಿಯೇ ನಮ್ಮ ಬದುಕನ್ನು ಪ್ರವೇಶಿಸುತ್ತಾರೆ ಎನ್ನುವುದನ್ನು. ಪ್ರಪಂಚದ ಈ ಭಾಗದಲ್ಲಿ, ಅಂದರೆ ದಕ್ಷಿಣ ಏಶಿಯಾದಲ್ಲಿ, ದೇವರು ಮತ್ತು ಮನುಷ್ಯರು ಪರಸ್ಪರ ಅಷ್ಟೇನೂ ದೂರದವರಲ್ಲ. ಬೇರೆ ಹಲವು ಸಂಸ್ಕೃತಿಗಳಲ್ಲಿ ಕಾಣುವುದಕ್ಕಿಂತ ಭಿನ್ನವಾಗಿ ಇಲ್ಲಿ ದೇವರು ಮತ್ತು ಮಾನವರ ನಡುವೆ ಅಂತರ ಕಡಿಮೆ. ಆದ್ದರಿಂದಲೇ ಇಲ್ಲಿ ಮನುಷ್ಯ ಕೆಲವೊಮ್ಮೆ ದೇವರನ್ನು ತನಗೆ ಬೇಕಾದಂತೆ ಬಣ್ಣಿಸಿಕೊಳ್ಳಲು ಸಾಧ್ಯ. ತಪಸ್ಸಿನ ಮೂಲಕ, ವಿವಿಧ ಆಚಾರಗಳ ಮೂಲಕ ಅಥವಾ ಕೆಲವೊಮ್ಮೆ ಅಧಿಕ ಶಕ್ತಿಯ ಬೇರೊಂದು ದೇವರನ್ನು ಒಲಿಸಿಕೊಳ್ಳುವ ಮೂಲಕ ಆತ ಇದನ್ನು ಸಾಧಿಸಿಕೊಳ್ಳಬಲ್ಲ. ಅರ್ಥಾತ್ ಮಾನವರು ಯಾವತ್ತೂ ದೇವರಿಗಿಂತ ಕೆಳಗಿನ ಸ್ತರದಲ್ಲೇ ಇರುವುದು ಅನಿವಾರ್ಯವೇನೂ ಅಲ್ಲ. ಅದ್ದರಿಂದ ಇಲ್ಲಿ ದೇವರು

PDF created with pdfFactory Pro trial version www.pdffactory.com

ಮತ್ತು ಮಾನವರ ನಡುವೆ ಬೃಹತ್ ಕಂದರವೇನೂ ಇಲ್ಲ. ದೇವದೇವಿಯರು ಅದರಲ್ಲೂ ವಾಮಮಾರ್ಗದ ದೇವದೇವಿಯರು ಆಯಾ ಕಾಲದ ಸಾಮಾಜಿಕ ಚಲನೆಗಳ ಮೇಲೆ ಬೆಳಕು ಚೆಲ್ಲುತ್ತಾರೆ. ಆಯಾ ಸಮಾಜ ಸಂಸ್ಕೃತಿಯ ಭಯ ಆತಂಕಗಳನ್ನು ಪ್ರತಿನಿಧಿಸುತ್ತಾರೆ. ಧರ್ಮಶಾಸ್ತ್ರಗಳನ್ನು ಎಷ್ಟೇ ಶಿಸ್ತಿನಿಂದ ವಿಶ್ಲೇಷಿಸಿದರೂ ಅಥವಾ ಉಚ್ಚ ಸಂಸ್ಕೃತಿಯ ದೇವತೆಗಳನ್ನು ಎಷ್ಟೇ ಶಾಸ್ತ್ರೀಯವಾಗಿ ಅಭ್ಯಾಸ ಮಾಡಿದರೂ ದೊರಕದ ಒಳನೋಟಗಳು ನಮಗಿಲ್ಲಿ ಲಭ್ಯವಾಗುತ್ತವೆ. ದೇವದೇವಿಯರು ಈ ಜಗತ್ತೇನಿದೆ ಅದು, ಭೂತ ದೆವ್ವ ರಾಕ್ಷಸರ ಇನ್ನೊಂದು ಜಗತ್ತಿನೊಂದಿಗೆ ಪೂರ್ಣವಾಗಿ ಬೆಸೆದುಕೊಂಡಿದೆ. ಆ ಜಗತ್ತಿಲ್ಲದೇ ಈ ಜಗತ್ತು ಇಲ್ಲ ಎನ್ನುವಷ್ಟರಮಟ್ಟಿಗೆ ಅವುಗಳ ನಡುವೆ ಸಂಬಂಧವಿದೆ. ಇದನ್ನು ಸುರ ಅಸುರರ ಕಲ್ಪನೆಯೆನ್ನಬಹುದು. ಆದಿತ್ಯ ದೈತ್ಯರ ಕಲ್ಪನೆಯೆನ್ನಬಹುದು, ಒಟ್ಟಿನಲ್ಲಿ ದೇವತೆಗಳು ಆ ಇನ್ನೊಂದು ಜಗತ್ತಿನ ತಮ್ಮ ಪ್ರತಿದ್ವಂದ್ವಗಳೊಂದಿಗೆ ಸೇರದೇ ಸಂಪೂರ್ಣರಾಗುವುದಿಲ್ಲ. ಈ ಒಟ್ಟು ಜಗತ್ತನ್ನು ನೀವು ಬೇಕಾದರೆ ಉದ್ದ, ಅಗಲ, ಆಳಗಳಿರುವ ಒಂದು ಅವಕಾಶವೆಂದು ಕಲ್ಪಿಸಬಹುದು. ಈ ಅವಕಾಶದ ಒಂದರ್ಧದಲ್ಲಿ ದೇವದೇವಿಯರಿದ್ದಾರೆ. ಅವರಲ್ಲಿ ಮತ್ತೆ ಒಳ್ಳೆಯವರು ಕೆಟ್ಟವರು ಸದಾಚಾರದವರು ವಾಮಾಚಾರದವರು ಬೇರೆ ಬೇರೆ ಜಾಗಗಳಲ್ಲಿದ್ದಾರೆ. ಹಾಗೆಯೇ ಇನ್ನೊಂದು ಇಡಿಯ ಅರ್ಧದಲ್ಲಿ ಭೂತ ದೆವ್ವಗಳ ಜಗತ್ತಿದ್ದು ಅದು ಮೊದಲರ್ಧದೊಂದಿಗೆ ಬೇರ್ಪಡಿ ಸಲಾಗದಂತೆ ಬೆಸೆದುಕೊಂಡಿದೆ. ಹೀಗೆ ದೇವರು ಮತ್ತು ದಾನವರ ಜಗತ್ತಿನ ನಡುವೆ ಸೀಮಾರೇಖೆ ಮಸುಕಾಗಿರುವ ಕಾರಣದಿಂದಲೇ ನಮ್ಮ ಸಮಾಜದಲ್ಲಿ ಒಂದು ವಿಶಿಷ್ಟ ರೀತಿಯ ಸಹನೆ ಸಹಬಾಳ್ವೆಗಳು ಸಾಧ್ಯವಾಗಿವೆ."[೫]

ಈ ದೇವರುಗಳ ಜಗತ್ತು ಅತ್ಯಂತ ಸಂಕೀರ್ಣವಾದುದು. ಈ ಜಗತ್ತಿನ ಸಾಂಸ್ಕೃತಿಕ ಮುಖ ಒಂದಾದರೆ ಸಾಮಾಜಿಕ ಮುಖ ಇನ್ನೊಂದು. ಇವೆರಡನ್ನು ಒಟ್ಟಾಗಿ ಇಟ್ಟೇ ನಾವು ನೋಡಬೇಕಾಗುತ್ತದೆ. ದೇವರು ಸೃಷ್ಟಿಯಾದದ್ದು ಹೇಗೆ? ಇದೊಂದು ಜಟಿಲ ಪ್ರಶ್ನೆ. ಲಕ್ಷಾಂತರ ವರ್ಷಗಳ ಮಾನವನ ಇತಿಹಾಸದಲ್ಲಿ ನಿರಂತರವಾಗಿ ವಿಕಾಸ ಹೊಂದುತ್ತಾ ಬಂದ ಅವನ ಪ್ರಜೆ ಇವತ್ತಿಗೂ ಅದೇ ವಿಕಾಸದ ಹಾದಿಯಲ್ಲೇ ಇದೆ. ಮೆದುಳು ಬೆಳೆಯುತ್ತಾ ಹೋದಂತೆ ಅವನ ಪ್ರಜ್ಞೆ ಕೂಡ ಹಲವು ಹಂತಗಳಲ್ಲಿ ವಿಕಸಿಸುತ್ತಾ ನಡೆದಿದೆ. ಆದ್ದರಿಂದ ಸಾಂಸ್ಕೃತಿಕವಾಗಿ ಇವೊತ್ತು ನಮ್ಮ ಕಣ್ಣ ಮುಂದಿರುವ ಯಾವುದೇ ಅಂಶವೂ ದಿಢೀರನೆ ಅವತರಿಸಿದ್ದಂತೂ ಅಲ್ಲ. ಮಾನವಶಾಸ್ತ್ರದ ಆಳ ಅಧ್ಯಯನವಷ್ಟೇ ಇದಕ್ಕೆಲ್ಲ ಉತ್ತರಿಸಬೇಕು. ಆದರೂ ಉತ್ತರ ಅಷ್ಟು ಸುಲಭವಲ್ಲ. ಆದರೂ ಇವತ್ತಿನ ಮನುಷ್ಯ ಯಾವ ರೀತಿಯಲ್ಲೇ ಬದುಕುತ್ತಿರಲಿ, ಎಷ್ಟೇ ನಾಗರಿಕನಾಗಿ ತನ್ನ ವ್ಯವಹಾರವನ್ನು ವಿಸ್ತರಿಸಿಕೊಂಡಿರಲಿ, ದೇವರು ಇಲ್ಲವೇ ಇಲ್ಲ

ಎಂಬ ನಾಸ್ತಿಕವಾದವನ್ನು ಮಂಡಿಸುವಷ್ಟು ಪ್ರಜ್ಞಾವಂತನಾಗಿರಲಿ, ಆ ಎಲ್ಲಾ ಅನಿಸಿಕೆಗಳಿಗೆ ಒಂದು ಸುದೀರ್ಘ ಇತಿಹಾಸವಂತೂ ಇದೆ. ನಾಸ್ತಿಕವಾದ ಹುಟ್ಟುವುದು ಕೂಡ ಅಸ್ತಿತ್ವದಲ್ಲಿರುವ ಯಾವುದೋ ಒಂದರ ಆಧಾರದ ಮೇಲೆ ತಾನೇ? ಹೀಗೆಂದು ದೇವರು ಇದ್ದಾನೆ ಅಥವಾ ಇಲ್ಲ ಎಂಬ ತರ್ಕಮಂಡನೆಯ ಕಾರ್ಯವನ್ನು ನಾನಿಲ್ಲಿ ಮಾಡುತ್ತಿಲ್ಲ. ಆದರೆ ದೇವರನ್ನು ಮನುಷ್ಯನೇ ಸೃಷ್ಟಿಸಿದ ಪ್ರಕ್ರಿಯೆ ಹೇಗೆ ಆರಂಭವಾಯಿತು ಎಂಬುದೇ ಇಲ್ಲಿಯ ಪ್ರಶ್ನೆ.

ಮನುಷ್ಯ ಎರಡು ಕಾರಣಕ್ಕೆ ದೇವರನ್ನು ಕಲ್ಪಿಸಿಕೊಂಡ ಎಂಬ ವಾದಗಳಿವೆ. ಪ್ರಕೃತಿಯ ಎಲ್ಲ ವೈಚಿತ್ರ್ಯಗಳನ್ನು, ಬಿಡಿಸಲಾರದ ನಿಗೂಢಗಳನ್ನು ಗಮನಿಸಿದ ಆದಿಮ ಮನುಷ್ಯ ತನ್ನನ್ನೂ ಮೀರಿದ ಅಗೋಚರ ಶಕ್ತಿಯೊಂದಿದೆ ಎಂದು ನಂಬಿದ. ಆ ಶಕ್ತಿಯನ್ನು ಒಲಿಸಿಕೊಳ್ಳುವ ಮೂಲಕ ತನ್ನ ಒಳ್ಳೆಯದನ್ನು ಸಾಧಿಸಿಕೊಳ್ಳಬೇಕು ಎಂಬುದು ಅವನ ಉದ್ದೇಶವಾಯಿತು. ಯಾಕೆಂದರೆ ನಿಸರ್ಗದ ಒಡಲಲ್ಲಿ ಬಾಳುತ್ತಿದ್ದ ಅವನಿಗೆ ಸಹಜವಾಗಿಯೇ ನೂರೆಂಟು ಕಂಟಕಗಳು ಎದುರಾಗುತ್ತಿದ್ದವು. ಆದ್ದರಿಂದ ಅಗೋಚರ ಶಕ್ತಿಯನ್ನು ಒಲಿಸಿಕೊಳ್ಳುವ ಮೂಲಕ ತನಗೆ ಒದಗುವ ಕಂಟಕಗಳಿಂದ ಪಾರಾಗಬೇಕು ಎಂಬುದು ಅವನ ತರ್ಕವಾಗಿತ್ತು. ಹೀಗಾಗಿ ಆರಂಭದ ಅವನ ದೇವರ ಕಲ್ಪನೆಯ ಹಿಂದೆ ತಾನು ದೇವರ ಕೃಪೆಯಿಂದ ದೊಡ್ಡವನಾಗಬೇಕು, ಸಂಪಾದಿಸಬೇಕು ಎಂಬ ಸ್ವಾರ್ಥಕ್ಕಿಂತ, ತನಗೆ ಒದಗುವ ಕಷ್ಟಗಳಿಂದ ಪಾರಾಗಬೇಕು ಎಂಬ ಸಹಜ ಉದ್ದೇಶವಿತ್ತು.

ಆದ್ದರಿಂದ ಅಗೋಚರ ಶಕ್ತಿಯನ್ನು ಒಲಿಸಿಕೊಳ್ಳುವ ಬಗೆ ಹೇಗೆ? ಅವನು ಎರಡು ರೀತಿಯಲ್ಲಿ ದೈವವನ್ನು ಅಥವಾ ಆ ಶಕ್ತಿಯನ್ನು ಗೆಲ್ಲುವ ಪ್ರಯತ್ನ ಮಾಡಿದ.

೧. ಮಾಟದ ಮೂಲಕ ನಿಯಂತ್ರಿಸುವುದು

೨. ಆರಾಧನೆಯ ಮೂಲಕ ಒಲಿಸಿಕೊಳ್ಳುವುದು.

ಮಾಟದ ಮೂಲಕ ಅಗೋಚರ ಶಕ್ತಿಯನ್ನು ನಿಯಂತ್ರಿಸಿ ತನ್ನ ಕಂಟಕಗಳನ್ನು ದೂರ ಮಾಡಿಕೊಳ್ಳುವ ಕಲ್ಪನೆ ಆದಿಮಾನವನದ್ದು. ಈ ಮಾಂತ್ರಿಕತೆಯೇ ಮುಂದೆ ವಿಜ್ಞಾನವಾಗಿ ಬೆಳೆಯಿತು ಎಂಬುದು ಅನೇಕ ಮಾನವಶಾಸ್ತ್ರಜ್ಞರ ವಾದ. ಮಾಂತ್ರಿಕ ಮನಸ್ಸು ವಿಜ್ಞಾನವನ್ನು ಬೆಳೆಸಿತು ಎಂಬುದು ನಿಜ. ಆದರೆ, ಈ ಮಾಂತ್ರಿಕತೆ ಪೂರಾ ವಿಜ್ಞಾನವಾಗಿ ಪರಿವರ್ತನೆಯಾಗಲಿಲ್ಲ. ಮಾಂತ್ರಿಕ ರೂಪದ ಅನೇಕ ಆಚರಣೆಗಳು ಹಾಗೇ ಉಳಿದು ಬಂದವು. ಅವು ಅನೇಕ ಆಚರಣೆಗಳ ರೂಪದಲ್ಲಿ, ಕಲೆಗಳ ರೂಪದಲ್ಲಿ, ವಿಧಿನಿಷೇಧಗಳ ರೂಪದಲ್ಲಿ ಇಂದಿಗೂ ನಮ್ಮ ಜನಪದ ಜೀವನದಲ್ಲಿ ಉಳಿದು ಬಂದಿವೆ. ಡಾ.ದೇವಿಪ್ರಸಾದ ಚಟ್ಟೋಪಾಧ್ಯಾಯ ಅವರು ಇವತ್ತಿನ ಒಂದು ವ್ರತದ ಉದಾಹರಣೆಯನ್ನು ಕೊಟ್ಟು, ಅದು ಹೇಗೆ ಮಾಂತ್ರಿಕ

PDF created with pdfFactory Pro trial version www.pdffactory.com

ಈಡೇರಬೇಕು. ಆದರೆ, ವ್ರತದ ಅರ್ಥ ಇದರಿಂದ ಪೂರ್ತಿಯಾಗಿ ಭಿನ್ನವಾಗಿದೆ. ಕರುಣೆಯ ಭಿಕ್ಷೆಯನ್ನು ಬೇಡುವ ಪ್ರಯತ್ನ ವ್ರತದಲ್ಲಿ ಸುತಾರಂ ಇಲ್ಲ. ಅದರಲ್ಲಿರುವ ಭಾವನೆ ಒಂದು ರೀತಿಯ ಆಜ್ಞೆಯ ತರಹದ್ದು. ಉದಾಹರಣೆಗೆ, ರಂಗೋಲಿಯಲ್ಲಿ ನದಿಯನ್ನು ಬಿಡಿಸುವುದು, ಅದರ ಮೇಲೆ ಹೂ ಇಡುವುದು ಮತ್ತು ಹಾಡಿನ ರೂಪದಲ್ಲಿ ಮನೋಭಿಲಾಷೆಯನ್ನು ಪ್ರಕಟಿಸುವುದು ಹೀಗೆ ಮಾಡುವುದರಿಂದ ನದಿಯ ಮನಸ್ಸಿನಲ್ಲಿ ದಯಾಭಾವ ಮೂಡುತ್ತದೆಂಬ ಭಾವನೆ ಸರ್ವಥಾ ಅಲ್ಲ. ಅಲ್ಲಿರುವ ಭಾವನೆಯೇ ಬೇರೆ. ಪ್ರಸ್ತುತ ಮನೋಭಿಲಾಷೆಯನ್ನು ಪೂರೈಸಲು ನದಿಯು ಅಸಮರ್ಥವಾಗಿದೆ.

ರಂಗೋಲಿ, ಹೂವು ಮತ್ತು ಹಾಡುಗಳಿಂದ ನದಿಯನ್ನು ವಶ ಮಾಡಿಕೊಳ್ಳುವ ಆಶಯ ಇಲ್ಲಿದೆ. ಅಂದರೆ, ಮನೋಭಿಲಾಷೆಯು ಈಡೇರಿಕೆಗೆ ದಯೆಯ ಭಿಕ್ಷೆ ಬೇಡುವ ಭಾವನೆ ವ್ರತಕ್ಕೆ ಹೊರತಾದದ್ದು. ವ್ರತ ಮತ್ತು ಪೂಜೆಗಳಲ್ಲಿ ಹೂವಿನ ಪಾತ್ರ ಭಿನ್ನ ಭಿನ್ನವಾಗಿದೆ. ವ್ರತದಲ್ಲಿ ಹೂವುಗಳು ಸಾಕ್ಷಿ ಇದ್ದಂತೆ. ನದಿಯನ್ನು ಬಿಡಿಸಿ ವಶಮಾಡಿಕೊಳ್ಳುವುದಕ್ಕೆ ಹೂವುಗಳು ಸಾಕ್ಷಿ.

ಮಾಟದ ರೇಖಾ ಚಿತ್ರ

ಪ್ರಾಚೀನ ಮನುಷ್ಯನಿಗೆ ನೃತ್ಯ, ಗಾನ, ಚಿತ್ರ, ಪದ್ಯ ಎಲ್ಲ ಒಂದಕ್ಕೊಂದು ಅಂಟಿ ನಿಲ್ಲುತ್ತವೆ. ಅದೆಲ್ಲದರ ಹಿಂದೆ ಇರುವ ಮೂಲಭೂತವಾದ ಸಂಗತಿ ಎಂದರೆ ಜೀವಿಸಲು ಪ್ರಯತ್ನ. ಕೆಲಸ ಕಾರ್ಯಗಳಿಗೆ ಪ್ರೇರಣೆ. ಇವುಗಳೆಲ್ಲ ಯಾವ ನಂಬಿಕೆಯಲ್ಲಿ ಕೇಂದ್ರೀಕರಿಸಲ್ಪಟ್ಟಿದೆಯೋ ಅದನ್ನೇ ನಾವು ಮಂತ್ರ ವಿದ್ಯೆ ಎನ್ನುತ್ತೇವೆ.[೬]

ಇಂದು, ಮಾಟಮಂತ್ರದ ಮೂಲಕ ಪ್ರಕೃತಿಯನ್ನು ಒಲಿಸಿಕೊಳ್ಳುವ ಕಾರ್ಯ ನಿಂತಿದೆ ಎಂದೇನೂ ನಾವು ಹೇಳುವಂತಿಲ್ಲ. ನಮ್ಮ ನಡುವಿನ ಆಧುನಿಕ ವಿಜ್ಞಾನ ಪರೋಕ್ಷವಾಗಿ ಅದನ್ನೇ ಮಾಡುತ್ತಿದೆ. ಇದು ಮನುಷ್ಯನ ಬದುಕಿನ ಒಂದು ಆಯಾಮ. ಆರಂಭದಲ್ಲಿ ತನ್ನ ಉಳಿವು ಮತ್ತು ಅಸ್ತಿತ್ವಕ್ಕಾಗಿ ಅನುಕರಣೆಯ ಮೂಲಕ ಪ್ರಕೃತಿಯಲ್ಲಿನ ಅಗೋಚರ ಶಕ್ತಿಯನ್ನು ಒಲಿಸಿಕೊಳ್ಳಲು ಯತ್ನಿಸಿದ ಮನುಷ್ಯ, ಬರುಬರುತ್ತಾ ಆ

ಆಚರಣೆ ಎಂಬುದನ್ನು ಸೊಗಸಾಗಿ ನಿರೂಪಿಸಿದ್ದಾರೆ. ಅದರ ವಿವರವನ್ನು ಇಲ್ಲಿ ಕೊಡುವುದು ಸೂಕ್ತ ಎಂದುಕೊಂಡಿದ್ದೇನೆ. "ಎಲ್ಲಿಯವರೆಗೆ ಟೋಟಂ ಪಂಗಡವು ಬಿಗಿಯಾಗಿತ್ತೋ, ಅಂದರೆ ಪಂಗಡದ ವ್ಯಕ್ತಿಗಳೆಲ್ಲಾ ಸಮಾನರಾಗಿ ಎಲ್ಲಿಯವರೆಗೆ ಎಣಿಸಲ್ಪಡುತ್ತಿದ್ದರೋ, ಅಲ್ಲಿಯವರೆಗೆ ಮನುಷ್ಯ ಪೂಜೆ ಮಾಡುವುದನ್ನು ಕಲಿಯಲಿಲ್ಲ, ಪ್ರಾರ್ಥನೆ ಸಲ್ಲಿಸುತ್ತಿರಲಿಲ್ಲ. ದೇವತೆಗಳ ಪಾದಗಳಲ್ಲಿ ತಲೆ ಬಗ್ಗಿಸುವುದು, ಹರಕೆ ಕಟ್ಟುವುದು, ಇವೆಲ್ಲಾ ಅವನಿಗೆ ಗೊತ್ತಿರಲಿಲ್ಲ. ಅಂದರೆ ಅಲ್ಲಿಯವರೆಗೆ ಧರ್ಮವೆಂಬ ಹೆಸರಿನ ಯಾವುದೂ ಮನುಷ್ಯನ ಮಿದುಳಿನಲ್ಲಿ ಮನೆ ಮಾಡಿಕೊಂಡಿರಲಿಲ್ಲ. ದೇವತೆಗಳ ಜನ್ಮವೇ ಇನ್ನೂ ಆಗದಿದ್ದಾಗ ಧರ್ಮವೆಂಬುದರಲ್ಲಿ ನಂಬಿಕೆ ಹೇಗೆ ತಾನೆ ಬಂದಿತು! ಇದಕ್ಕೆ ನಮ್ಮಲ್ಲಿ ಏನು ನಿದರ್ಶನವಿದೆ? ಉತ್ತರವಾಗಿ ಎರಡು ನಿದರ್ಶನಗಳನ್ನು ನಾವು ನೋಡಬಹುದು. ಮೊದಲನೆಯದು ನಾಗರಿಕ ಮನುಷ್ಯನ ವ್ಯವಹಾರಗಳಲ್ಲಿ ಇಂದಿಗೂ ಅದರ ಛಾಯೆ ಉಳಿದು ಬಂದಿದೆ. ಎರಡನೆಯದು ಇಂದಿಗೂ ಆದಿಮ ಅನಾಗರಿಕ ಹಂತದಲ್ಲೇ ಉಳಿದಿರುವವರನ್ನು ನೋಡಿದರೆ ತಿಳಿಯುತ್ತದೆ. ಅವರ ನಂಬಿಕೆಗಳನ್ನು ತೂಗಿ ನೋಡಿದರೆ ಅವರಲ್ಲಿ ಧರ್ಮದಲ್ಲಿನ ನಂಬಿಕೆ ಎನ್ನಬಹುದಾದಂತ ಹುದ್ದು ಏನೂ ಇಲ್ಲವೆಂದು ತಿಳಿಯುತ್ತದೆ.

ನಮ್ಮ ದೇಶದ ಹಳ್ಳಿ ಹಳ್ಳಿಗಳಲ್ಲಿಯೂ ಹೆಂಗಸರು ವ್ರತ ಮಾಡುವುದುಂಟು. ಈ ವ್ರತಗಳ ಅರ್ಥವಾದರೂ ಏನು. ಸ್ವಲ್ಪ ಆಳವಾಗಿ ಪರಿಶೀಲಿಸಿದರೆ ಒಂದೊಂದು ವ್ರತದ ಹಿಂದೆಯೂ ಒಂದೊಂದು ಕಾಮನೆ ಇರುವುದು ಕಂಡುಬರುತ್ತದೆ. ಇಂತಹ ಯಾವುದೋ ಫಲ ಬೇಕು, ಅದಕ್ಕೆ ಯಾವುದೋ ಒಂದು ವ್ರತ. ಇದೇ ವ್ರತದ ಪ್ರಮುಖವಾದ ಹಿನ್ನೆಲೆ. ಬಂಗಾಳದಲ್ಲಿ ಈ ವ್ರತದ ವೇಳೆಯಲ್ಲಿ ಹಲವು ಚಿಹ್ನೆಗಳನ್ನು ಚಿತ್ರದಾಕಾರದಲ್ಲಿ ಬರೆಯುವ ಪದ್ಧತಿ ಇದೆ. ನದಿ, ಸಮುದ್ರ, ಮುಳ್ಳುಗಳಿಂದ ತುಂಬಿದ ಕಾಡು, ಕಾಡುಮೃಗಗಳು, ಹೀಗೆ ಏನೋನೋ ಚಿತ್ರಗಳನ್ನು ಬಿಡಿಸುತ್ತಾರೆ. ರಂಗೋಲಿಯಲ್ಲಿ ಹೀಗೆ ಚಿತ್ರ ಬಿಡಿಸಿ ಅವುಗಳ ಮೇಲೆ ಹೂಗಳನ್ನರಿಸುವುದು ಮತ್ತು ಹೆಂಗಸರೆಲ್ಲ ಒಟ್ಟಾಗಿ ಹಾಡುವುದು ರೂಢಿ. ಈ ಹಾಡುಗಳಲ್ಲಿ ಅವರವರ ಕಾಮನೆಗಳ ಪ್ರಸ್ತಾಪ ಬರುತ್ತದೆ. ಈ ಸಂಪ್ರದಾಯ ಹೀಗೆ ಮುಂದುವರಿದಿದೆ. ಆದರೆ ಇದರ ಅಂತರ ಅರ್ಥ ಏನು? ವ್ರತವನ್ನು ನೈಜವಾಗಿ ಅರ್ಥ ಮಾಡಿಕೊಳ್ಳುವವನಿಗೆ ಈ ವಿವರಣೆಯಿಂದ ತೃಪ್ತಿ ದೊರೆಯುವುದಿಲ್ಲ. ಏಕೆಂದರೆ ಪೂಜೆ ಮತ್ತು ವ್ರತಗಳ ನಡುವೆ ಆಕಾಶ ಭೂಮಿಯಷ್ಟು ಅಂತರವಿದೆಯೆಂಬುದು ಅವರಿಗೆ ಗೊತ್ತು. ಪೂಜೆ ಎಂದರೇನು? ದೇವರ ಪಾದದಲ್ಲಿ ಹೂವನ್ನು ಅರ್ಪಿಸುವುದು ಮತ್ತು ಅವನಿಂದ ಸ್ವಂತಕ್ಕೆ ಏನಾದರೂ ದಯೆಯನ್ನು ಪಡೆಯುವುದು ಪೂಜೆಯೆನಿಸಿಕೊಳ್ಳುತ್ತದೆ. ದೇವರು ಪ್ರಸನ್ನವಾಗಬೇಕು ಮತ್ತು ನಮ್ಮ ಮನೋಭಿಲಾಷೆ

PDF created with pdfFactory Pro trial version www.pdffactory.com

ನಿಗೂಢ ಶಕ್ತಿಯ ಆರಾಧನೆಗೂ ತೊಡಗಿದ. ಇಲ್ಲಿ ಎರಡು ವಿಚಾರಗಳು ಬಹಳ ಮುಖ್ಯವಾಗುತ್ತವೆ.

ಒಂದು ಪ್ರಕೃತಿಯ ಘಟನೆಗಳ ಅನುಕರಣಾತ್ಮಕ ಮಂತ್ರ ವಿದ್ಯೆಯ ಬೆಳೆವಣಿಗೆ ಮೌನವಾಗಿ, ನಂತರ ವಿಜ್ಞಾನವಾಗಿ ರೂಪ ಪಡೆದದ್ದು;.

ಎರಡು – ನಿಸರ್ಗದ ನಿಗೂಢವನ್ನು ಆರಾಧಿಸುವ ಮೂಲಕ, ಅಂಥ ಆರಾಧನೆಗೆ ಒಂದು ರೂಪ ಕೊಟ್ಟುಕೊಳ್ಳುವ ಮೂಲಕ ಧರ್ಮದ ಉಗಮವಾದದ್ದು.

ನಿಸರ್ಗದಲ್ಲಿ ಎರಡು ರೀತಿಯ ಚೈತನ್ಯಗಳಿದ್ದವು. ಒಂದು ಪೊರೆಯುವ ಚೈತನ್ಯವಾದರೆ, ಇನ್ನೊಂದು ನಾಶ ಮಾಡುವ ಚೈತನ್ಯ. ಮಳೆ ಗಾಳಿ ಬೆಂಕಿ ಇಂಥ ಚೈತನ್ಯ ಪಡೆದಿದ್ದವು. ಮನುಷ್ಯನ ಹುಟ್ಟಿಗೆ ಕಾರಣವಾಗುವ ನಿಸರ್ಗವೇ ಅವನ ಸಾವಿಗೂ ಕಾರಣವಾಗುತ್ತಿತ್ತು. ಇಂಥ ಸಂದರ್ಭದಲ್ಲಿ ಆ ಅಗೋಚರ ಶಕ್ತಿಯನ್ನು ಒಲಿಸಿಕೊಳ್ಳುವ ಅಥವಾ ನಿಯಂತ್ರಿಸುವ ಪ್ರಕ್ರಿಯೆಯಲ್ಲಿ, ಆ ಶಕ್ತಿಗೆ ಅವನೊಂದು ರೂಪ ಕೊಟ್ಟು ತನ್ನ ಕಲ್ಪನೆಯನ್ನು ವಿಸ್ತರಿಸಿದ.

ರೂಪ ಅಂದರೆ ಬರೀ ರೂಪವಲ್ಲ. ಒಂದು ಸಂಕೇತ ಎಂದು ನಾವು ಅಂದುಕೊಳ್ಳಬಹುದು. ಈಗ ಮತ್ತೆ ನಾನು ನನ್ನ ಅಪ್ಪ ಕೈಗೊಳ್ಳುತ್ತಿದ್ದ ಹೊಲ ಕೊಯ್ಯುವ ಮೊದಲಿನ ಆಚರಣೆಯನ್ನು ನೆನಪಿಸಬಯಸುತ್ತೇನೆ. ಮೂರು ಕಲ್ಲುಗಳನ್ನು ಇಟ್ಟು ಅವುಗಳಿಗೆ ಕುಂಕುಮ ಹಚ್ಚಿ ಹೂ ಇಟ್ಟು ಪೂಜಿಸುತ್ತಿದ್ದ ರೀತಿ. ಮೂರು ಕಲ್ಲುಗಳಲ್ಲಿ ಒಂದು ಭೂಮಿ ತಾಯಿ, ಇನ್ನೊಂದು ಮಳೆರಾಯ, ಮತ್ತೊಂದು ಬೆನವಣ್ಣ. ಸೃಷ್ಟಿಸುವ ಪೊರೆಯುವ ಮತ್ತು ರಕ್ಷಿಸುವ ಸಂಕೇತಗಳು ಆ ಮೂರು ಕಲ್ಲುಗಳು. ಅನಂತರದ ಸಾವಿರಾರು ವರ್ಷಗಳ ಮನುಷ್ಯನ ಇತಿಹಾಸದಲ್ಲಿ ಭೂಮಿತಾಯಿಗೆ ದೇವತೆಯ ರೂಪವೂ ಆರೋಪಿಸಲ್ಪಟ್ಟವು. ಅಥವಾ ಆ ರೀತಿಯ ದೈವಕಲ್ಪನೆಯ ಚಿಂತನೆ ವಿಕಾಸಗೊಂಡಿತು.

ಅವರು ದ್ರಾವಿಡರೋ ಆರ್ಯರೋ ಅಥವಾ ಮಂಗೋಲಿಯನ್ನರೋ– ಎಲ್ಲರ ಕಲ್ಪನೆ ಕಿಡಿ ಹೊಡೆದದ್ದು ಹೀಗೆಯೇ. ಬುಡಕಟ್ಟು ಪರಿಸರದಲ್ಲಿ ದೈವ ಅಥವಾ ದೆವ್ವಗಳು ರೂಪು ತಾಳಿದ್ದು ಹೀಗೆ. ಆರಾಧನೆ ಅಥವಾ ನಿಯಂತ್ರಣ ಆರಂಭವಾದದ್ದು ಹೀಗೆ. ಬರಬರುತ್ತಾ ದೈವಗಳು ಪೂಜೆಯನ್ನು ದೆವ್ವ ಭೂತಗಳು ನಿಯಂತ್ರಣ ರೂಪದ ಆಚರಣೆಗಳನ್ನೂ ಪಡೆಯುತ್ತಾ ಬಂದವು. ಇಂದು ನಮ್ಮ ಮುಂದಿರುವ ಅನೇಕ ಆರಾಧನೆ ಮತ್ತು ಆಚರಣೆಯ ಹಿನ್ನೆಲೆಯನ್ನು ಈ ರೀತಿಯಲ್ಲಿ ನಾವು ಅರ್ಥೈಸಬೇಕಾಗುತ್ತದೆ.

ನಿರ್ದಿಷ್ಟ ದೇವರು ಅಥವಾ ನಿರ್ದಿಷ್ಟ ಧರ್ಮ ಉದಯಿಸುವ ಮೊದಲು ಮನುಷ್ಯ ನಿಸರ್ಗದ ಅನೇಕ ಸಚರಾಚರ ಪ್ರಾಣಿ ಸಮುದಾಯಗಳಲ್ಲಿ ತಾನೂ

ಒಬ್ಬನಾಗಿ ಬದುಕುತ್ತಿದ್ದ. ಗುಂಪು ಗುಂಪುಗಳಲ್ಲಿ ವಾಸಿಸುತ್ತಿದ್ದ. ಅವರಿಗೆ, ತಮ್ಮ ತಮ್ಮ ಗುಂಪುಗಳ ಗುರುತು ಹೇಳಿಕೊಳ್ಳಲು ಏನಾದರೂ ಆಧಾರ ಬೇಕಾಗಿತ್ತು. ಆಯಾ ಪ್ರದೇಶದಲ್ಲಿ ತಮ್ಮನ್ನು ಪ್ರಭಾವಿಸಿದ ಪ್ರಾಣಿ, ಸಸ್ಯ, ನದಿ, ಬೆಟ್ಟ ಅಥವಾ ವಸ್ತುವಿನ ಹೆಸರನ್ನು ತಮ್ಮ ತಮ್ಮ ಗುಂಪಿನ ಲಾಂಛನವನ್ನಾಗಿ ಅವರು ಇಟ್ಟುಕೊಂಡರು. ಮುಂದೆ ಇದೇ ಅವರ ಕುಲಚಿಹ್ನೆಯಾಯಿತು. ಒಂದು ಮಾತನ್ನು ಇಲ್ಲಿ ಗಮನಿಸಬೇಕು, ಕುಲಚಿಹ್ನೆ ಅವರನ್ನು ಅವರು ಗುರುತಿಸಿಕೊಳ್ಳುವ ಸಾಧನವಾಗಿತ್ತೇ ಹೊರತು, ದೈವವಾಗಿರಲಿಲ್ಲ. ಆದರೆ, ಬರಬರುತ್ತಾ ಆಯಾ ಗುಂಪುಗಳಲ್ಲಿ ಬಲಾಢ್ಯ ಮತ್ತು ದುರ್ಬಲ ಎಂಬ ಗುಂಪುಗಳಾದವು. ಒಂದು ಮತ್ತೊಂದನ್ನು ನಿಯಂತ್ರಿಸ ಬಯಸಿತು. ಸಮಾಜದಲ್ಲಿ ತನ್ನ ಸ್ಥಾನವನ್ನು ಮೇಲೇರಿಸಿಕೊಂಡ ಲಾಂಛನ ಇತರರೂ ಅನುಸರಿಸಬೇಕಾದ ಅಥವಾ ಗೌರವಿಸಬೇಕಾದ ಸಂಗತಿಯಾಯಿತು. ಹೀಗೆ ಗೌರವಿಸಲ್ಪಟ್ಟ ಲಾಂಛನವೇ ಮುಂದೆ ದೈವವಾಗಿ ರೂಪು ಪಡೆದಿರಬೇಕು ಎಂಬುದು ಅನೇಕ ವಿದ್ವಾಂಸರ ಅಭಿಪ್ರಾಯ. ಆದರೆ ಭಾರತದಲ್ಲಿನ ದೈವಾವಸ್ಥೆಯನ್ನು ಗಮನಿಸಿದರೆ ಈ ರೀತಿಯಲ್ಲಿ ಟೋಟೆಂಗಳು ದೈವಗಳಾಗಿರುವ ಉದಾಹರಣೆ ತೀರಾ ವಿರಳ. ಹಳೇ ಶಿಲಾಯುಗದ ಕಾಲದಿಂದ ಆರಂಭವಾಗಿ ಹೊಸಶಿಲಾಯುಗ ಮತ್ತು ಕಂಚಿನ ಯುಗದಲ್ಲಿ ನಮಗೆ ಅನೇಕ ರೀತಿಯ ದೇವರುಗಳ ಮೂರ್ತಿಗಳು ಸಿಕ್ಕಿವೆ. ಗುಹೆಗಳಲ್ಲಿ ಮತ್ತು ಬಂಡೆಗಳ ಮೇಲೆ ಕೆತ್ತಿದ ಅನೇಕ ಆಕೃತಿಗಳು ದೊರಕಿವೆ. ದೇವರುಗಳ ಅಸ್ತಿತ್ವ ಅಷ್ಟು ಪ್ರಾಚೀನದಲ್ಲಿಯೇ ಇತ್ತು ಎಂಬುದಕ್ಕೆ ಅನೇಕ ಆಧಾರಗಳನ್ನು ಪುರಾತತ್ವಶಾಸ್ತ್ರಜ್ಞರು ನಿರೂಪಿಸಿದ್ದಾರೆ. ಹರಪ್ಪಾ ಮತ್ತು ಮೊಹೆಂಜದಾರೋ ಉತ್ಖನನದಲ್ಲಿ ಅನೇಕ ದೇವತೆಯರ ಆಕೃತಿಗಳು ಲಭ್ಯವಾಗಿವೆ. ಆದರೆ ಒಂದು ಅಂಶವನ್ನು ಇಲ್ಲಿ ಮುಖ್ಯವಾಗಿ ಗಮನಿಸಬೇಕು. ಭಾರತದ ಪ್ರಾಚೀನ ಪರಂಪರೆಯಲ್ಲಿ ಕಂಡುಬರುವ ಬಹುತೇಕ ದೇವರುಗಳಲ್ಲಿ ಪ್ರಮುಖ ಸ್ಥಾನ ಮಾತೃದೇವತೆಯರದ್ದು. ಎಲ್ಲೆಲ್ಲಿಯೂ ಮಾತೃವೇ ಮುಖ್ಯ. ಇದಕ್ಕೆ ಕಾರಣಗಳೇನು? ಬಹುಶಃ ಭಾರತದಲ್ಲಷ್ಟೇ ಅಲ್ಲ ಇಡೀ ಜಗತ್ತಿನ ದೈವಕಲ್ಪನೆಯಲ್ಲಿಯೂ ಮಾತೃವಿಗೇ ಪ್ರಥಮ ಸ್ಥಾನ.

ದೇವರುಗಳ ಸೃಷ್ಟಿಯಲ್ಲಿ ಕನಿಷ್ಠ ನಾಲ್ಕು ಹಂತಗಳನ್ನು ಗುರುತಿಸಬಹುದು ಎಂಬುದು ನನ್ನ ಅಭಿಪ್ರಾಯ. ಮನುಷ್ಯ ನಾಗರಿಕನಾಗಲು ಹವಣಿಸಿದ ಮೊದಲ ಘಟ್ಟ ಆಹಾರ ಸಂಗ್ರಹಣೆ. ಅಂದರೆ ತನಗೆ ಬೇಕಾದ ಅಗತ್ಯ ವಸ್ತುಗಳನ್ನು ಅರಸುತ್ತಾ ಕಾಡಿನಿಂದ ಕಾಡಿಗೆ ಅಲೆದ ಮೃಗೀಯ ಜೀವನ ಅದು. ಆದರೂ ಹಾಗೆ ಲಭ್ಯವಾದ ಆಹಾರವನ್ನು ಒಂದು ಕಡೆ ಕೂಡಿಡುವ, ಸಂರಕ್ಷಿಸುವ ಬುದ್ಧಿಯನ್ನು ಉಪಯೋಗಿಸಿದ್ದೇ ಅವನು ನಾಗರಿಕತೆ ಕಡೆಗೆ ಮುಖ ಮಾಡಿದ ಪ್ರಥಮ ಹಂತ. ಒಂದು ಗುಂಪಿನ ಜನ ಒಟ್ಟಾಗಿ ವಾಸಿಸುವ ಮೂಲಕ ತಮಗೊಂದು ಅಸ್ತಿತ್ವ ಕಂಡುಕೊಳ್ಳುತ್ತಿದ್ದ ಕಾಲ

PDF created with pdfFactory Pro trial version www.pdffactory.com

ಅದು. ಅಲ್ಲಿ ಯಾರು ಗಂಡ ಅಥವಾ ಯಾರು ಹೆಂಡತಿ ಎಂಬ ಕಲ್ಪನೆ ಇರಲಿಲ್ಲ. ಸಮೂಹ ಜೀವನ ಅದು. ಮಕ್ಕಳನ್ನು ಹಡೆಯಬಲ್ಲ ಶಕ್ತಿ ಪಡೆದ ಮಾತೃ ಮಾತ್ರ ಅಲ್ಲಿ ಮುಖ್ಯ. ಅವಳಿಗೇ ಅಲ್ಲಿ ಪ್ರಾಧಾನ್ಯ. ಆಹಾರ ಸಂಗ್ರಹಣೆಗಾಗಿ ಹೊರಟ ಗಂಡರು ಹಿಂತಿರುಗಿ ಬಂದಾಗ ಲಭ್ಯವಿದ್ದ ಹೆಂಗಸಿನ ಜೊತೆ ತನ್ನ ಲೈಂಗಿಕ ತೃಷೆ ತೀರಿಸಿಕೊಳ್ಳುತ್ತಿದ್ದ ಅಷ್ಟೇ. ಆದರೆ ಯಾರು ಮಗುವಿನ ತಾಯಿಯಾಗುತ್ತಾಳೋ ಅವಳಿಗೆ ವಿಶೇಷ ಸ್ಥಾನಮಾನ. ಅದರ ತಂದೆ ಯಾರು ಎಂಬುದು ಅಲ್ಲಿ ಮುಖ್ಯವೇ ಅಲ್ಲ. ಹೀಗಾಗಿ ತಾಯಿಯೇ ಸತ್ಯ. ಇಷ್ಟಲ್ಲದೆ ಗಂಡಸರು ಹೊರಗಿನಿಂದ ಸಂಗ್ರಹಿಸಿ ತಂದ ಆಹಾರಗಳನ್ನು ಸಂರಕ್ಷಿಸಿ ಇಡುವುದು, ಹೆತ್ತ ಮಕ್ಕಳನ್ನು ಪೋಷಿಸುವುದು ಮುಂತಾದಂತೆ ಇಡೀ ಸಮೂಹದ ಜವಾಬ್ದಾರಿ ತಾಯಿಯದೇ ಆಗಿತ್ತು. ಆದ್ದರಿಂದ ಮಾತೃವಿನ ಸ್ಥಾನ ನಿರ್ವಿವಾದವಾಗಿ ಪ್ರಾಮುಖ್ಯತೆ ಗಳಿಸಿತ್ತು. ಹೀಗಾಗಿ ಸೃಷ್ಟಿಗೆ ಕಾರಣವಾದ ಮತ್ತು ಪೋಷಣೆಗೆ ಅಗತ್ಯವಾದ ಮಾತೃವನ್ನು ಗೌರವಿಸಿ, ಆರಾಧಿಸಿದ್ದು ಕೂಡ ಅಷ್ಟೇ ಸಹಜ. ಮಾತೃವಿನ ಆರಾಧನೆ ಆರಂಭವಾದ ಮೊದಲ ಹಂತ ಇದು. ಆದ್ದರಿಂದ ನಾನೀಗಾಗಲೇ ಹೇಳಿದಂತೆ ದೈವಸೃಷ್ಟಿಯ ವಿವಿಧ ಹಂತಗಳನ್ನು ಹೀಗೆ ಪಟ್ಟಿ ಮಾಡಬಹುದು.

೧. ಮೇಲೆ ವಿವರಿಸಿದಂತೆ ಎಲ್ಲಕ್ಕೂ ಮಾತೃವೇ ಮೂಲ, ಅವಳೇ ಸತ್ಯ ಎಂಬ ಅನಾದಿಕಾಲದ ನಿಜಸ್ಥಿತಿಯ ಮೂಲಕ ರೂಪುಗೊಂಡ ಮಾತೃವಿನ ಆರಾಧನೆ. ಇದು ಆಹಾರ ಸಂಗ್ರಹಣೆಯ ಕಾಲದ ಮುಕ್ತ ಸ್ಥಿತಿಯಲ್ಲಿ ಆರಂಭಗೊಂಡದ್ದು.

೨. ಪ್ರಾಣಿಗಳನ್ನು ಪಳಗಿಸಿ ಪಶುಸಂಗೋಪನಾ ಕಾರ್ಯ ಕೈಗೊಂಡ ಹಂತದಿಂದ ಪುರುಷ ಪ್ರಾಧಾನ್ಯ ಹೆಚ್ಚಾಯಿತು. ಪುರುಷ ಪ್ರಾಧಾನ್ಯತೆಯ ಜೊತೆಗೇ ಪುರುಷ ದೈವಗಳ ಸೃಷ್ಟಿಯೂ ಆಯಿತು. ಆಯಾ ಸಮುದಾಯದ ವೀರರು ದೈವಗಳಾಗಿ ರೂಪಾಂತರಗೊಂಡ ಸ್ಥಿತಿಯಲ್ಲಿ ಅವರ ಆರಾಧನೆಯೂ ವಿವಿಧ ರೀತಿಯಲ್ಲಿ ಆರಂಭಗೊಂಡಿತು.

೩. ಪುರುಷ ಹೊರಗೆ ಹೋದಾಗ ಮಕ್ಕಳ ಪೋಷಣೆ ಮಾಡಿಕೊಂಡು ಇರುತ್ತಿದ್ದ. ಸ್ತ್ರೀ ಕೃಷಿಯನ್ನು ಅನ್ವೇಷಣೆ ಮಾಡಿದಳು ಎಂಬುದು ಅನೇಕರ ಅಭಿಪ್ರಾಯ. ಸ್ತ್ರೀಯ ಗರ್ಭಧಾರಣಾ ಶಕ್ತಿ ಮತ್ತು ಭೂಮಿಯ ಸಸ್ಯಧಾರಣಾ ಶಕ್ತಿಯನ್ನು ಗೌರವಿಸಿ ಮಾನ್ಯ ಮಾಡಿದ ಕೃಷಿ ಹಂತದ ಚಟುವಟಿಕೆಗಳು ಸ್ತ್ರೀಯನ್ನು ಮತ್ತೆ ದೈವಸ್ಥಾನಕ್ಕೆ ಏರಿಸಿದವು. ಗ್ರಾಮದೇವತೆಗಳ ಸೃಷ್ಟಿ ಆರಂಭವಾದದ್ದು ಹೀಗೆ.

೪. ಕೃಷಿ ಚಟುವಟಿಕೆ ಒಂದು ಆರ್ಥಿಕ ಚಟುವಟಿಕೆಯಾಗಿ ಅಭಿವೃದ್ಧಿ ಹೊಂದಿದಂತೆ ಭೂಮಾಲೀಕತ್ವವೂ ತನ್ನ ನೆಲೆ ಕಂಡುಕೊಳ್ಳತೊಡಗಿತು. ಆಸ್ತಿಯ ಒಡೆತನದ ಕಲ್ಪನೆ ಬರುತ್ತಿದ್ದಂತೆ ತಮ್ಮ ಆಸ್ತಿ ತಮ್ಮ ಮಕ್ಕಳಿಗೇ ಸೇರಬೇಕೆಂಬ ನಂಬಿಕೆ ಬಲವಾಯಿತು. ಇಲ್ಲಿಯೇ ಪಾತಿವ್ರತ್ಯ ಎಂಬ ಹೊಸ ಮೌಲ್ಯ ಇಣುಕು ಹಾಕಿತು. ಭೂಮಿಯಂತೆಯೇ ಸ್ತ್ರೀ ಕೂಡ ಪುರುಷನ ಆಸ್ತಿಯಾಗಿ ಪರಿವರ್ತಿತಳಾದಳು. ಪುರುಷಪ್ರಾಧಾನ್ಯ ಇಲ್ಲಿ ಮತ್ತೆ ತನ್ನ ಸಾರ್ವಭೌಮತ್ವ ಸ್ಥಾಪಿಸಿತು. ಆರ್ಯರ ಮುಖಂಡತ್ವದಲ್ಲಿ ಪುರುಷಪ್ರಧಾನ ಮೌಲ್ಯ ವಿಜೃಂಭಿಸಿ, ಪುರುಷ ದೈವಗಳ ಸೃಷ್ಟಿಯೂ ಆಯಿತು. ಆ ದೈವಗಳ ಪುರಾಣಗಳು ಲಿಖಿತವಾಗಿ ದಾಖಲಾದವು. ಮಾತೃವಿನ ಸಂಕೇತದ ದೇವತೆಗಳು ಪುರುಷ ದೈವಗಳ ಅಡಿಯಾಳಾಗಿಯೋ, ನಿಕೃಷ್ಟ ಸೇವಕಿಯಾಗಿಯೋ ಇಲ್ಲವೇ ಆರ್ಯದೈವಗಳ ಹೆಂಡತಿಯರಾಗಿಯೋ ಕಾಣಿಸಿಕೊಂಡರು. ಇದು ಇವತ್ತಿನ ನಮ್ಮ ಕಣ್ಣಮುಂದಿನ ಸ್ಥಿತಿ.

ಇಷ್ಟೆಲ್ಲ ಪುರುಷಪ್ರಾಧಾನ್ಯತೆಯ ನಡುವೆಯೂ ಮಾತೃದೇವತೆಯರ ಸ್ಥಾನವೇ ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ಅಧಿಕೃತವಾಗಿ ಉಳಿದಿರುವುದೊಂದು ವಿಶೇಷ. ಆರ್ಥಿಕ ಚಟುವಟಿಕೆ ಗಂಡಸಿನದಾಗುವ ಮೂಲಕ ಆ ರಂಗದಲ್ಲಿ ಪುರುಷ ಮುಖ್ಯವಾಗಿದ್ದಾನಾದರೂ ಸಾಂಸ್ಕೃತಿಕ ಚಟುವಟಿಕೆಯಲ್ಲಿ ಸ್ತ್ರೀಯ ಪ್ರಾಧಾನ್ಯ ಕಡಿಮೆಯಂತೂ ಆಗಿಲ್ಲ. ಮನುಷ್ಯ ಸಮುದಾಯದ ಪಾಲನೆ ಪೋಷಣೆ ಮತ್ತು ರಕ್ಷಕಿಯಾಗಿ ಮಾತೃದೇವತೆ(ಬೇಟೆ ಮತ್ತು ಆಹಾರ ಸಂಗ್ರಹಣೆ ಹಂತ). ಧಾನ್ಯ ದೇವತೆಯಾಗಿ ಮಾತೃದೇವತೆ(ಕೃಷಿ ಹಂತ) ರೋಗನಿಯಂತ್ರಕಳಾಗಿ ಮಾತೃದೇವತೆ (ಗ್ರಾಮಗಳ ಹುಟ್ಟಿನ ನಂತರದ ಸ್ಥಿತಿ). ಈ ರೀತಿಯಲ್ಲಿ ಪ್ರಾಚೀನದಿಂದ ಇಲ್ಲಿಯವರೆಗೆ ಮಾತೃದೇವತೆಯ ಸ್ಥಾನವೇ ಮಿಗಿಲಾಗಿ ಪರಿಗಣಿತವಾಗುತ್ತಾ ಬಂದಿರುವುದನ್ನು ನಾವು ಕಾಣುತ್ತೇವೆ. ದಕ್ಷಿಣ ಭಾರತದ ಇಡೀ ದ್ರಾವಿಡ ಸಮುದಾಯದಲ್ಲಂತೂ ಮಾತೃಮೂಲ ಕುಟುಂಬಗಳೇ ಇತ್ತೀಚಿನವರೆಗೂ ಅಸ್ತಿತ್ವದಲ್ಲಿದ್ದ ಕಾರಣ ಮಾತೃದೇವತೆಯರ ಪ್ರಾಮುಖ್ಯವೂ ಅಷ್ಟೇ ಇತ್ತು. ಬುಡಕಟ್ಟು ಸಮುದಾಯಗಳಿಂದ ನಾಗರಿಕ ಸಮುದಾಯಗಳವರೆಗೆ ಈ ಮಾತು ನಿಜ. ಇಷ್ಟು ಪೀಠಿಕೆಯ ಹಿನ್ನೆಲೆಯಲ್ಲಿ ಬುಡಕಟ್ಟು ದೈವಗಳನ್ನು ಕುರಿತ ನನ್ನ ಗ್ರಹಿಕೆಗಳನ್ನು ಮುಂದೆ ನಿರೂಪಿಸಬಯಸುತ್ತೇನೆ.

PDF created with pdfFactory Pro trial version www.pdffactory.com

೨

ಬುಡಕಟ್ಟು ವೀರರು ಮತ್ತು ಮಾತೆಯರು

ಬುಡಕಟ್ಟು ಜನ ಎಂದು ಯಾರನ್ನು ಕರೆಯುತ್ತೇವೆ ಮತ್ತು ಯಾರು ನಿಜವಾದ ಬುಡಕಟ್ಟುಗಳು ಈ ಪ್ರಶ್ನೆ ಕೂಡ ಅಷ್ಟು ಸುಲಭದ್ದಲ್ಲ. ಈಗಾಗಲೇ ನಾವು ನೋಡಿದಂತೆ ಇವತ್ತಿನ ನಾಗರಿಕ ಹಂತದಲ್ಲಿರುವ ಅನೇಕ ಸಮುದಾಯಗಳು ಕೂಡ ಒಂದು ಕಾಲದ ಬುಡಕಟ್ಟುಗಳೇ ಎಂಬುದರಲ್ಲಿ ಸಂಶಯವಿಲ್ಲ. ಜಗತ್ತಿನ ಬಹುತೇಕ ಜನವರ್ಗಗಳಲ್ಲಿ ಇಂದಿಗೂ ಬುಡಕಟ್ಟಿನ ಅನೇಕ ರೀತಿಯ ಪಳೆಯುಳಿಕೆಗಳು ಕಂಡುಬರುತ್ತಿವೆ. ಹಾಗೆಂದು ಇವತ್ತಿನ ಸ್ಥಿತಿಯಲ್ಲಿ ಎಲ್ಲರೂ ಬುಡಕಟ್ಟುಗಳೇ ಎಂದು ತೀರ್ಮಾನಿಸುವ ಹಾಗೂ ಅಗತ್ಯವೂ ಇಲ್ಲ. ಹಾಗೆಂದು ನಮ್ಮ ಸರ್ಕಾರಗಳು ಗುರುತಿಸಿ ಅಧಿಕೃತ ಎಂದು ಪಟ್ಟಿ ಮಾಡಿರುವವರು ಮಾತ್ರ ಬುಡಕಟ್ಟುಗಳು ಎಂದು ಪರಿಗಣಿಸಬೇಕಾಗಿಯೂ ಇಲ್ಲ. ರಾಜಕಾರಣ ಪ್ರೇರಿತ ಆಡಳಿತಶಾಹಿ ಇದನ್ನೆಲ್ಲ ವೈಜ್ಞಾನಿಕವಾಗಿ ಮಾಡುವುದಿಲ್ಲ. ಆದ್ದರಿಂದ ಸರಕಾರಿ ವಿಂಗಡಣೆ ಕೂಡ ಪರಿಪೂರ್ಣವಲ್ಲ. ಇದು ಪರಿಪೂರ್ಣವಲ್ಲ ಎಂಬುದಕ್ಕೆ ಸಾಕ್ಷಿಯಾಗಿ ಕೇಂದ್ರ ಸರಕಾರ ಇತ್ತೀಚೆಗೆ ತಾನೆ ಮಹಾಶ್ವೇತಾದೇವಿ ಅವರ ನೇತೃತ್ವದಲ್ಲಿ ಅನಧಿಸೂಚಿತ ಬುಡಕಟ್ಟುಗಳನ್ನು ಪಟ್ಟಿ ಮಾಡಲು ಸಮಿತಿಯೊಂದನ್ನು ರಚಿಸಿದೆ. ಕರ್ನಾಟಕದಲ್ಲಿ ಕೂಡ ಈ ಕೊರತೆ ಇದ್ದೇ ಇದೆ. ಕಣ್ಣಿಗೆ ಕಂಡ ಜನವರ್ಗಗಳನ್ನು ಗುರುತಿಸಿ ಕಾಣದಿರುವ ಇನ್ನೂ ಎಷ್ಟೋ ಜನವರ್ಗಗಳನ್ನು ನಿರ್ಲಕ್ಷಿಸಲಾಗಿದೆ. ಸರ್ಕಾರದ ವತಿಯಿಂದಲೇ ಒಂದು ಸಮಗ್ರ ಸಮೀಕ್ಷೆ ಆಗುವ ಅಗತ್ಯವಂತೂ ಇದೆ.

ಹಾಗಾದರೆ ನಿಜವಾದ ಬುಡಕಟ್ಟು ಯಾವುದು? ಯಾವುದೇ ಒಂದು ಪ್ರದೇಶದಲ್ಲಿ ತಮ್ಮದೇ ಆದ ವಿಶಿಷ್ಟ ಜೀವನಪದ್ಧತಿ ರೂಪಿಸಿಕೊಂಡು, ತಮ್ಮದೇ ಆದ ಪರಂಪರೆಯಲ್ಲಿ ನಿರ್ದಿಷ್ಟ ಜ್ಞಾನಶಾಖೆಗಳನ್ನು ಬೆಳೆಸಿಕೊಂಡು, ಸಾಮಾಜಿಕ ಪದ್ಧತಿಗಳನ್ನು ವಿಶಿಷ್ಟವಾಗಿ

ಮತ್ತು ಅನನ್ಯವಾಗಿ ಅನುಸರಿಸುತ್ತಾ ಬರುತ್ತಿರುವ ಜನ ಸಮುದಾಯಕ್ಕೆ ಬುಡಕಟ್ಟು ಅನ್ನಬಹುದು. ಇವರು ಅರಣ್ಯದಲ್ಲೇ ಬದುಕಬೇಕು ಎಂದೇನಿಲ್ಲ. ಬಹುಶಃ ಗಿರಿಜನರು ಎಂಬ ಪದ ಗಿರಿಕಂದರ ನಿವಾಸಿಗಳು ಎಂಬ ಅರ್ಥದಲ್ಲಿಯೇ ನಿರೂಪಿತವಾಗಿರುವಂತಿದೆ. ಈ ಗಿರಿಜನರು ಎಂಬ ಪದ ಸಹ್ಯಾದ್ರಿಯ ಘಟ್ಟಗಳು ಮತ್ತು ಕರಾವಳಿಯ ಅರಣ್ಯಗಳಲ್ಲಿ ವಾಸಿಸುವ ಜನರಿಗೆ ಸರಿಯಾಗಿ ಒಪ್ಪುವ ಮಾತು. ಆರೆ ಬಯಲು ಸೀಮೆಯಲ್ಲೂ ಅನೇಕ ರೀತಿಯ ಬುಡಕಟ್ಟು ಜನರಿದ್ದಾರೆ. ಒಂದೇ ಪ್ರದೇಶಕ್ಕೆ ಸೀಮಿತವಾದವರೂ ಇದ್ದಾರೆ.

ಅಲೆಮಾರಿ ಬುಡಕಟ್ಟುಗಳೂ ಇವೆ. ಆದ್ದರಿಂದ ಬುಡಕಟ್ಟು ಎಂದರೆ ಸಮಾನವಾದ ವಿಶಿಷ್ಟಾಂಶಗಳನ್ನು ಪಡೆದ ಒಂದು ಸಮುದಾಯ ಎಂದು ನಾವು ಅರ್ಥ ಮಾಡಿಕೊಳ್ಳಬೇಕು. ಉಡಿಗೆ ತೊಡಿಗೆ, ಊಟ ಉಪಚಾರ, ಆರಾಧನೆ ಸಂಪ್ರದಾಯ, ಭಾಷೆ ಸಾಹಿತ್ಯ, ನ್ಯಾಯಪದ್ಧತಿ, ನಿಷೇಧ ರೂಪಗಳು, ರೂಪಿಸಿಕೊಂಡ ಪರಂಪರೆ ಹಾಗೂ ನಂಬಿಕೆ ಇತ್ಯಾದಿಯಾಗಿ ಎಲ್ಲವೂ ಯಾವುದೇ ಮತ್ತೊಂದು ಸಮಾಜ ಅಥವಾ ಸಮುದಾಯಕ್ಕಿಂತ ಭಿನ್ನವಾಗಿ ಒಂದು ಬುಡಕಟ್ಟಿನಲ್ಲಿ ಕಾಣಿಸಿಕೊಳ್ಳುತ್ತವೆ. ಭಿನ್ನತೆ ಅಷ್ಟೇ ಅಲ್ಲ, ಅವರ ಆಚಾರ ವಿಚಾರ ಸಂಪ್ರದಾಯಗಳು ಮತ್ತು ಪ್ರಾಚೀನದಿಂದ ಬಂದ ಪರಂಪರಾಗತ ಪದ್ಧತಿಗಳನ್ನು ಇನ್ನೂ ಅನುಸರಿಸುವ ಪ್ರಯತ್ನದಲ್ಲಿರುತ್ತವೆ. ಒಟ್ಟಾರೆ, ಪ್ರಾಚೀನತೆ–ವಿಶಿಷ್ಟತೆ–ಪ್ರತ್ಯೇಕತೆ ಈ ಮೂರು ಒಂದು ಬುಡಕಟ್ಟಿನ ಮುಖ್ಯ ಲಕ್ಷಣಗಳು. ಇಂದಿನ ದಿನಮಾನದಲ್ಲಿ ಪ್ರಾಚೀನತೆ ಇರಲೇಬೇಕಾದ ಅಂಶ ಎಂದು ತಿಳಿಯಬೇಕಾಗಿಲ್ಲ. ಯಾಕೆಂದರೆ ಹೊಸಕಾಲದ ಬದಲಾವಣೆಯ ವೇಗ ಅಷ್ಟು ತೀವ್ರವಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಬುಡಕಟ್ಟು ದೈವಗಳ ಸ್ವರೂಪವನ್ನು ನಾವೀಗ ನೋಡಬಹುದಾಗಿದೆ.

೨.೧. ಬೀರನ ಮನೆ

ಉತ್ತರ ಕನ್ನಡ ಜಿಲ್ಲೆಯಲ್ಲಿ ನನಗೆ ಅತ್ಯಂತ ಪ್ರಿಯವಾದ ಬುಡಕಟ್ಟು ಹಾಲಕ್ಕಿ ಒಕ್ಕಲಿಗ ಸಮುದಾಯ. ಅಲ್ಲಿಂದಲೇ ನನ್ನ ಈ ವ್ಯಾಖ್ಯಾನವನ್ನು ಆರಂಭಿಸುತ್ತೇನೆ. ಉತ್ತರ ಕನ್ನಡವನ್ನು ನಾನಿಲ್ಲಿ ವರ್ಣಿಸಲು ಹೋಗುವುದಿಲ್ಲ. ಅಲ್ಲಿನ ಅಭೇದ್ಯ ಅರಣ್ಯಗಳು, ನದಿ, ಸಮುದ್ರ ಇವೆಲ್ಲದರ ಸಂಗಮ ಸ್ಥಾನವಾಗಿ ರಮ್ಯ ಪ್ರಕೃತಿಯ ತಾಣವಾದ ಆ ಜಿಲ್ಲೆ ಅತ್ಯಂತ ವಿಶಿಷ್ಟವಾದದ್ದು. ಘಟ್ಟ ಮತ್ತು ಸಮುದ್ರದ ನಡುವಿನ ನದೀತಟಗಳಲ್ಲಿ ವಾಸ ಮಾಡುವ ಹಾಲಕ್ಕಿ ಒಕ್ಕಲಿಗರು ಆ ಜಿಲ್ಲೆಯ ಪ್ರಮುಖ ಬುಡಕಟ್ಟುಗಳಲ್ಲಿ ಒಂದು. ಅವರ ದೈವಗಳು ನಮಗೆ ಅನೇಕ ಬಗೆಯ ವಿಪುಲ ಮಾಹಿತಿಗಳನ್ನು ಒದಗಿಸುವ ಮೂಲಕ ಸಾಂಸ್ಕೃತಿಕ ಇತಿಹಾಸವೊಂದನ್ನು ತೆರೆದಿಡುತ್ತದೆ. ಅಂಥ ಒಂದು ಸ್ಥಳದ ಪರಿಚಯವನ್ನೀಗ ಮಾಡ ಬಯಸುತ್ತೇನೆ.

PDF created with pdfFactory Pro trial version www.pdffactory.com

ಹೊನ್ನಾವರ ತಾಲೂಕಿನ ಅಪ್ಪಿಕೇರಿ ಮತ್ತು ಶಿಕಾರು ಎಂಬ ಎರಡು ಹಾಲಕ್ಕಿ ಕೊಪ್ಪಗಳ ನಡುವೆ ಬೀರನಗುಡಿಯೊಂದಿದೆ. ಅದನ್ನು ಬ್ಯಾಟೆಬೀರನಗುಡಿ ಎಂದೂ ಕರೆಯುತ್ತಾರೆ. ಪಶ್ಚಿಮದಲ್ಲಿ ಭೋರ್ಗರೆವ ಸಮುದ್ರ. ಸಮುದ್ರದಿಂದ ಮೂರು ಕಿ.ಮೀ. ಒಳಗೆ ಒಂದು ಕುರುಚಲು ಗುಡ್ಡದ ತಪ್ಪಲಿನಲ್ಲಿ ಈ ಬೀರನಗುಡಿ ಇದೆ. ಇಲ್ಲಿ ಈ ಬೀರನಗುಡಿ ಒಂದೇ ಇದ್ದರೆ ಆಶ್ಚರ್ಯವಾಗುತ್ತಿರಲಿಲ್ಲ. ಅದೊಂದು ಸಂಕೀರ್ಣ ಬಯಲು ದೇವಾಲಯ ಎನ್ನಬಹುದು. ಬೀರನಗುಡಿಯ ಬಯಲು ವಿಶಾಲವಾಗಿದ್ದು, ಸುತ್ತಲೂ ಕರಿಯ ಕಲ್ಲುಗಳ ಮೆದು ಬಂಡೆಗಳಿವೆ. ಆ ಬಂಡೆಗಳ ನಡುವಿನ ಬಯಲಲ್ಲಿ ವಾಸ ಮಾಡುವ ದೇವರುಗಳು ಅಸಂಖ್ಯಾತ.

ಬೀರನಗುಡಿಯಲ್ಲಿ ಬ್ಯಾಟೆ ಬೀರ ಮತ್ತು ಕರಬೀರ ಎಂಬ ಇಬ್ಬರು ವೀರರಿದ್ದಾರೆ. ಅವರ ಪಕ್ಕದಲ್ಲಿ ಭೂಮಿತಾಯಿಯ ಮೂರ್ತಿ ಇದೆ. ಬೀರರು ಇಬ್ಬರೂ ಬಿಲ್ಲು ಬಾಣ ಹಿಡಿದು ಬೇಟೆಗೆ ಮತ್ತು ಸಮರಕ್ಕೆ ಸಿದ್ಧರಾದವರಂತೆ ಕಾಣುತ್ತಾರೆ. ಕುಡಿ ಮೀಸೆ, ಮುಖದ ಪೌರುಷ ಅವರು ಅಸಾಮಾನ್ಯ ವೀರರು ಎಂಬುದನ್ನು ದೃಢಪಡಿಸುತ್ತದೆ. ಭೂಮಿತಾಯಿ ಸೌಮ್ಯವಾಗಿ ಪ್ರಸನ್ನಳಾಗಿ ನಿಂತಿದ್ದಾಳೆ. ಅವಳ ಮುಖದಲ್ಲಿನ ಪ್ರಸನ್ನತೆ ಪೊರೆಯುವ, ರಕ್ಷಿಸುವ, ನೀಡುವ ಮಾತೃವಿನಂತೆಯೇ ಇದೆ. ಹೊರಗಡೆ ಒಂದು ಸಣ್ಣ ಮಾಡಿನ ಕೆಳಗೆ ಜಟ್ಟಿಗ ಎಂಬ ಮತ್ತೊಬ್ಬ ವೀರನಿದ್ದಾನೆ. ಅದರ ಆಚೆಗೆ ಅಷ್ಟು ದೂರದಲ್ಲಿ ನೆಲದಿಂದ ಮೇಲೆದ್ದು ನಿಂತ ಶಿಶ್ನರೂಪದ ಕಲ್ಲಿನ ಆಕೃತಿಯೊಂದಿದೆ. ಅದರ ಪಕ್ಕದಲ್ಲಿ ವೀರರು ಬೀರರು ಬಳಸುವ ಆಯುಧ ಎನ್ನಲಾದ ತ್ರಿಶೂಲ ರೂಪದ ಕೊಂಬುಗಳಿವೆ. ಅದರ ಪಕ್ಕದ ಇನ್ನೊಂದು ಸಣ್ಣ ಗುಡಿಯಲ್ಲಿ ಹುಲಿಯ ಚಿತ್ರವಿರುವ ಹುಲಿದೇವರು ಇದೆ. ಅದರ ಪಕ್ಕದ ಮತ್ತೊಂದು ಗುದ್ದಿಗೆಯಲ್ಲಿ ಚಿತ್ರವಿಚಿತ್ರವಾಗಿ ಕಾಣುವ ಅನೇಕ ರೀತಿಯ ಒರಟು ಕಲ್ಲಿನ ರೂಪದ ಆಕೃತಿಗಳನ್ನು ಸ್ಥಾಪಿಸಲಾಗಿದೆ. ಅವೆಲ್ಲಕ್ಕು ಒಂದೊಂದು ದೈವದ ಹೆಸರಿದೆ. ಇವೆಲ್ಲ ಸಾಲದೆಂಬಂತೆ ಹೆಣ್ಣಿನ ಯೋನಿಯಂತೆ ಕಾಣುವ ಉರುಟು ಕಲ್ಲಿನ ಸಣ್ಣ ಬಂಡೆಯೊಂದಕ್ಕೆ ಹರಿಸಿನ ಕುಂಕುಮ ಹಚ್ಚಿ ಪೂಜೆ ಮಾಡಿರುವ ಕುರುಹುಗಳಿವೆ. ಇಷ್ಟೆಲ್ಲ ದೈವಗಳ ಈ ಸಂಕೀರ್ಣ ನಿಜಕ್ಕು ನಮ್ಮನ್ನು ಯೋಚನೆಗೆ ಹಚ್ಚುತ್ತದೆ. ಮುಖ್ಯ ಸ್ಥಳವಾದ ಬೀರನಗುಡಿಯಲ್ಲಿರುವ ಬೀರರು ಮತ್ತು ಭೂಮಿತಾಯಿಗೆ ಗುನಗರ ಜನಾಂಗದ ಪೂಜಾರಿ(ಕುಂಬಾರರು) ಪೂಜೆ ಮಾಡುತ್ತಾನೆ. ಉಳಿದಂತೆ ಬಯಲಲ್ಲಿರುವ ಎಲ್ಲ ದೇವಾನುದೇವತೆಯರನ್ನು ಯಾರಾದರೂ ಹೇಗಾದರೂ ಪೂಜಿಸಬಹುದು.

ಪ್ರಾಚೀನ ನಂಬಿಕೆ ಮತ್ತು ಸಂಸ್ಕೃತಿಯನ್ನು ಉಳಿಸಿಕೊಂಡ ಬುಡಕಟ್ಟಿನ ಸಾಂಸ್ಕೃತಿಕ ಜೀವನ ಎಷ್ಟು ಸಂಕೀರ್ಣ ಎಂಬುದನ್ನು ತಿಳಿಯಬೇಕಾದರೆ ಹಾಲಕ್ಕಿ ಒಕ್ಕಲಿಗರ ದೈವಗಳನ್ನು ಕುರಿತ ಮತ್ತಷ್ಟು ನಂಬಿಕೆಗಳನ್ನು ಗಮನಿಸುವ ಅಗತ್ಯವಿದೆ.

ಸರಣ ಸರಣೆಂದೆನು ದೇವಾ
ಸರಣೋ ಸರಣಂದೆನು ದೇವರಿಗೇ
ಮೂಡಿ ಬರುವ ಸೂಲ್ಯಮ್ಮ ದೇವರಿಗೇ
ಸರಣೋ ಸರಣಂದೋ ದೇವರಿಗೇ
ಕಂದುವಲ್ಲಿ ಚಂದುರಾಗೆ ದೇವರಿಗೇ
ಸರಣೋ ಸರಣಂದೆನು ನಾ
ಕೈಯ್ಯ ಕೊಟ್ಟ ಕೈಯ್ಯಮ್ಮ ದೇವರಿಗೆ
ಕಾಲಕೊಟ್ಟ ಕಾಲಮ್ಮ ದೇವರಿಗೆ
ಸರಣೋ ಸರಣಂದೆನು ನಾ

ದೇವ ದೇವರಿಗೆಲ್ಲ ಸೂರ್ಯದೇವರೆ ಹೆಚ್ಚು ಎಂದು ಹೇಳುವ ಹಾಲಕ್ಕಿ ಒಕ್ಕಲಿಗರು ಚಂದ್ರನನ್ನು ಮತ್ತು ಚಂದ್ರನ ಬೆಳದಿಂಗಳನ್ನು ಅಪಾರವಾಗಿ ಪ್ರೀತಿಸುತ್ತಾರೆ. ಬೆಳದಿಂಗಳನ್ನು ಕುರಿತಂತೆ ಅವರಲ್ಲಿರುವ ಅಪಾರ ಜನಪದ ಸಾಹಿತ್ಯ ಚಂದ್ರನ ಬಗ್ಗೆ ಅವರಿಗಿರುವ ಅನನ್ಯ ಶ್ರದ್ಧೆಯನ್ನು ನಿರೂಪಿಸುತ್ತದೆ. ಕಣ್ಣಿಗೆ ಕಾಣುವಂಥ ದೇವರುಗಳಾದ ಇವರಿಗೆ ದಿನದ ಮೊದಲ ನಮಸ್ಕಾರ ಎಂಬುದು ಅವರ ನಡವಳಿಕೆ. ನಮ್ಮ ಹಿಂದಿನವರು ಸೂರ್ಯಾರಾಧಕರು ಮತ್ತು ಚಂದ್ರಾರಾಧಕರು ಎಂಬ ಎರಡು ವಿಭಾಗಗಳನ್ನು ಮಾಡಿ ಪ್ರಮುಖ ಜನವರ್ಗಗಳನ್ನು ಅವುಗಳಲ್ಲಿ ಗುರುತಿಸಲು ಪ್ರಯತ್ನಿಸಿದ್ದಾರೆ. ಆದರೆ ಅದ್ಯಾವ ಪೂರ್ವಪ್ರಜ್ಞೆಯೂ ಇಲ್ಲದ ಈ ಜನ ಪ್ರತಿದಿನ ತಮಗೆ ಬೆಳಕನ್ನು ಶಕ್ತಿಯನ್ನು ನೀಡುವ, ಕಣ್ಣಿಗೆ ಪ್ರತ್ಯಕ್ಷ ದೇವರಾಗಿ ಕಾಣುವ ಸೂರ್ಯಚಂದ್ರರನ್ನು ಮುಗ್ಧವಾಗಿ ಆರಾಧಿಸುತ್ತಾರೆ. ನಿಜವಾದ ಅರ್ಥದಲ್ಲಿ ಇದೇ ಅವರ ಮೂಲ ದೈವಾರಾಧನೆ. ಗಿಳಿ, ಪಾರಿವಾಳ, ನವಿಲು ಇವರ ಆರಾಧ್ಯ ಪಕ್ಷಿಗಳು. ಇವರ ಹಾಡುಗಳ ತುಂಬ ಈ ಪಕ್ಷಿಗಳು ಹಾಡುತ್ತವೆ, ಸಂಭಾಷಿಸುತ್ತವೆ, ಆತ್ಮೀಯವಾಗಿ ಮಾತಾಡುತ್ತವೆ. ಹಾಲಕ್ಕಿ ಒಕ್ಕಲಿಗರ ಈ ನಿಸರ್ಗಾರಾಧನೆ ಬುಡಕಟ್ಟುಗಳಲ್ಲಿ ರೂಪುಗೊಂಡ ಆದಿ ದೈವಾರಾಧನೆಯ ವಿವಿಧ ಸ್ಥಿತಿಗಳಿಗೆ ಸಾಕ್ಷಿಯಲ್ಲದೆ ಬೇರೇನೂ ಅಲ್ಲ.

ಭೂಮಿಯಾ ನೆನದೇನಯ್ಯ ಭೂಮಿಗೆ ನಾವ್ ಬಲದೇನಾ
ಚಾಮಿ ನಿನ್ನಲ್ಲಿ ಚರಣಂಬೋಲಾ
ಮೆಟ್ಟಿದಲ್ಲಿ ಭೊಮಿಗೆ ಚರಣಂಬೋ ದೇವಾರೇ
ಹರಿವಾಲೆ ನೀರಿಗೆ ನಾಮೇ ಶರಣಂಬೋ ದೇವಾರೇ
ಬೀಸುವಂತ ಗಾಳಿಗೇ ನಾಮೆ ಶರಣಂಬೋ ದೇವಾರೇ
ಸುತ್ತು ಮುತ್ತು ಆಕಾಶಕೆ ನಾಮೇ ಶರಣೊಬೋಲಾ

PDF created with pdfFactory Pro trial version www.pdffactory.com

ಬೆಳೆಯನ್ನು ಕೊಡುವ ಭೂಮಿತಾಯಿ, ದಾಹ ಇಂಗಿಸುವ ನೀರು, ಜೀವ ದ್ರವ್ಯವಾದ ಗಾಳಿ, ಮಳೆ ತರುವ ಆಕಾಶ ಈ ಮೂಲಭೂತ ವಸ್ತುಗಳೇ ಅವರ ದೈವಗಳು. ಪಂಚಭೂತಗಳ ಈ ದೇಸಿ ಪರಿಭಾವನೆ ಅತ್ಯಂತ ಸರಳವಾದದ್ದು. ಹಾಲಕ್ಕಿ ಜನ ಸೂರ್ಯನನನು, ಚಂದ್ರನನ್ನು, ಬೆಳ್ಳಿ, ಶುಕ್ರ ಮುಂತಾದ ನಕ್ಷತ್ರಗಳನ್ನು ಆರಾಧಿಸುವುದಷ್ಟೇ ಅಲ್ಲದೆ, ತಮ್ಮ ಪುರಾಣಗಳ ಪಾತ್ರಗಳನ್ನಾಗಿಯೂ ಅವರನ್ನು ಕಂಡಿದ್ದಾರೆ. ಒಂದು ಮರವನ್ನು ಕಡಿಯುವ ಪ್ರಸಂಗಬಂದಲ್ಲಿ ಅದನ್ನು ಪೂಜಿಸಿ, ಪ್ರಕೃತಿ ಮಾತೆಯ ಕ್ಷಮೆ ಕೇಳಿ ಮರ ಕಡಿಯುವ ಪದ್ಧತಿ ಅವರಲ್ಲಿತ್ತು. ತುಳಸಿ ಮತ್ತು ಪಂಬೆ ಅವರ ಇಷ್ಟದೈವ ರೂಪದ ಸಸ್ಯಗಳು. ಮುಂದಿನ ತುಳಸಿಕಟ್ಟೆಯಲ್ಲಿ ತುಳಸಿ ಪೂಜೆಗೊಂಡರೆ ಹಿತ್ತಲಿನಲ್ಲಿ ತುಂಬೆ ಪೂಜೆಗೊಳ್ಳುತ್ತದೆ. ಅಷ್ಟೇ ಅಲ್ಲ, ತಮ್ಮ ಬೇಸಾಯಕ್ಕೆ ಬೇಕಾದ ಗೋವನ್ನು, ಅದಕ್ಕೆ ಮೃತ್ಯು ರೂಪವಾದ ಹುಲಿಯನ್ನು, ಹಕ್ಕಿ–ಪಕ್ಷಿಗಳಾದಿಯಾಗಿ ಗಿಳಿ ಗೊರವಂಕ ನವಿಲುಗಳನ್ನು ಅವರು ಆರಾಧಿಸುತ್ತಾರೆ. ಇದೆಲ್ಲ ಏನನ್ನು ಸೂಚಿಸುತ್ತದೆಂದರೆ ಹಾಲಕ್ಕಿ ಒಕ್ಕಲಿಗರು ಮೂಲದಲ್ಲಿ ನಿಸರ್ಗಾರಾಧಕರು. ಅವರನ್ನು ತನ್ನ ಒಡಲಿನಲ್ಲಿಟ್ಟು ಪೊರೆಯುವ ಸಮಸ್ತ ನಿಸರ್ಗವೂ ಅವರಿಗೆ ದೈವ. ಆ ನಿಸರ್ಗದ ಆರಾಧನೆ ಈಗ ಪಳೆಯುಳಿಕೆಯಂತೆ ಅವರ ನಡುವೆ ಕಂಡುಬರುತ್ತಿದೆ. ಇದು ಇವರ ದೈವಾರಾಧನೆಯ ಮೊದಲ ಹಂತ.

ಈಗ ಇವರ ಆರಾಧನೆಯ ಎರಡನೆಯ ಹಂತಕ್ಕೆ ಬರೋಣ. ಬಹುಶಃ ಇವರ ಆಹಾರ ಸಂಗ್ರಾಹಕರಾಗಿದ್ದ ಕಾಲವದು. ಗಂಡಸರು ಆಹಾರ ಸಂಗ್ರಹಣೆಗೆ ಹೊರಗೆ ಹೋದಾಗಲೇ ಹೆಣ್ಣು ಒಂದೇ ಕಡೆ ಇದ್ದು ಕೃಷಿಯ ಅನ್ವೇಷಣೆ ಮಾಡಿದಳು ಎಂಬ ತರ್ಕವನ್ನು ಈಗಾಗಲೇ ನೋಡಿದ್ದೇವೆ. ಇದು ನಿಜ ಕೂಡ. ಆಹಾರ ಸಂಗ್ರಹಣೆಯ ಜೊತೆಜೊತೆಗೇ ಧಾನ್ಯ ಬೆಳೆಯುವ ಸಂಸ್ಕೃತಿಯನ್ನು ಮನುಷ್ಯ ರೂಢಿಸಿಕೊಂಡ ಮೇಲೆ ಮಾತೃಸ್ವರೂಪಿಯೂ ಆದ ಭೂಮಿಯನ್ನು, ಗರ್ಭಧರಿಸುವ ಹೆಣ್ಣನೊಡನೆ ಹೋಲಿಸಲಾಯಿತು. ಇವರಿಬ್ಬರೂ ಸಮೃದ್ಧಿಯ ಸಂಕೇತಗಳಾದರು. ಅಲ್ಲಿಂದ ಮಾತೃವಿನ ಆರಾಧನೆ ಮೊದಲಾಯಿತು. ಮಾತೃ ಎಲ್ಲಕ್ಕೂ ಮೊದಲಾದಳು. ಈ ಹಂತದಲ್ಲಿಯೇ ಮಾತೃಗಳು ದೇವತೆಯರಾಗಿ ಆರಾಧನೆಗೆ ಒಳಗಾದದ್ದು. ಇದರಲ್ಲಿ ಎರಡು ವಿಧ. ಮಧ್ಯಕಾಲೀನ ಕರ್ನಾಟಕದಲ್ಲಿ ಹುಟ್ಟಿಕೊಂಡ ಸತಿಪದ್ಧತಿಯ ಕಾರಣದಿಂದ ಕೊಂಡಕ್ಕೆ ಬಿದ್ದವರು, ಆತ್ಮಹತ್ಯೆ ಮಾಡಿಕೊಂಡವರು ಅಥವಾ ಹತ್ಯೆಗೊಳಗಾದವರು ದೇವತೆಯರಾದ ಕಥೆ ಬೇರೆ. ಇದು ಪುರುಷಪ್ರಧಾನ ಸಮಾಜ ಸೃಷ್ಟಿಸಿದ ಮೌಲ್ಯ. ಆದರೆ ಪ್ರಾಚೀನದಲ್ಲಿ, ಅಂದರೆ ಆರ್ಯರು ಈ ದೇಶಕ್ಕೆ ಬರುವ ಮೊದಲು, ಈ ನೆಲದಲ್ಲಿ ಮಾತೃವಿನ ಸ್ಥಾನ ಅತ್ಯಂತ ಪ್ರಧಾನವಾದುದಾಗಿತ್ತು. ಹಾಲಕ್ಕಿ ಜನಗಳಲ್ಲಿ ಈ ಎರಡು ರೀತಿಯ ಮಾತೃದೈವಗಳನ್ನು ನಾವು ಕಾಣುತ್ತೇವೆ.

ಕಾಡಿನ ರಕ್ಷಕರಾಗಿ, ಆ ಮೂಲಕ ತಮ್ಮನ್ನು ಪೊರೆಯುತ್ತಿದ್ದ ಮಾತೃವಿನ ರೂಪದಲ್ಲಿ ಕಾನಮ್ಮ, ದೇವಿಕಾನಮ್ಮ, ಕರಿಕಾನಮ್ಮ ಎಂಬ ನಿಸರ್ಗ ದೇವತೆಯರು ಇವರ ಸುತ್ತಮುತ್ತ ಇದ್ದಾರೆ. ಮಾಸ್ತಿ, ಅರೆಮಾಸ್ತಿ, ಹುಚ್ಚಮಾಸ್ತಿ ಎಂಬ ಹೆಸರಿನ ಮಹಾಸತಿಯರಾದವರ ಗುಡಿಗಳು ಹಾಲಕ್ಕಿ ಸಮುದಾಯದಲ್ಲಿ ಇವೆ. ಈ ಎಲ್ಲ ದೇವತೆಗಳಿಗೆ ಈಗಲೂ ಪೂಜೆ ಸಲ್ಲುತ್ತಿದೆ. ಜನಪ್ರಿಯ ಗ್ರಾಮದೇವತೆಗಳೆನಿಸಿದ ಮಾರಿಕಾಂಬೆ, ಕಾಳಿಕಾಂಬೆ, ಚೌಡಿ. ಕೋಗ್ತಿ ಮುಂತಾದ ಬೇರೆ ಬೇರೆ ರಕ್ಷಕ ದೇವತೆಯರನ್ನೂ ಇವರು ಆರಾಧಿಸುತ್ತಾರೆ. ಇದು ಇವರ ದೈವಾರಾಧನೆಯ ಎರಡನೇ ಹಂತ.

ಹಾಲಕ್ಕಿ ಒಕ್ಕಲಿಗರ ದೈವಾರಾಧನೆಯ ಮೂರನೇ ಹಂತವನ್ನು ಈಗ ನೋಡೋಣ. ಒಂದಾನೊಂದು ಕಾಲಕ್ಕೆ ಬೇಟೆ ಮತ್ತು ಪಶುಪಾಲನೆಯೂ ಇವರ ಮುಖ್ಯ ಕಸುಬಾಗಿತ್ತು. ಬಹುಶಃ ಪಶುಪಾಲನೆ ಮತ್ತು ಕೃಷಿಯನ್ನು ಒಟ್ಟಿಗೆ ಇವರು ಪಾಲಿಸಿಕೊಂಡು ಬಂದಂತೆ ಕಾಣುತ್ತದೆ. ಪಶುಪಾಲನೆ ಪ್ರಧಾನವಾದಾಗ ಪುರುಷ ಮುಖ್ಯನಾಗುತ್ತಾನೆ. ಅಂಥ ಸಂದರ್ಭದಲ್ಲಿ ಅನೇಕ ಪುರುಷ ದೇವತೆಗಳ ಉದ್ಭವವೂ

ಸೂರ್ಯಚಂದ್ರ

PDF created with pdfFactory Pro trial version www.pdffactory.com

ಆಗಿದೆ. ಬೀರರು ಮತ್ತು ಜಟ್ಟಿಗರು ಈ ಸಂದರ್ಭದ ಪ್ರಮುಖ ದೇವರುಗಳು. ಅನೇಕ ಸ್ಥಳಗಳಲ್ಲಿ ಶಿಶ್ನರೂಪದ ಜಟ್ಟಿಗ ಇದ್ದು ಅವನನ್ನು ಆರಾಧಿಸುತ್ತಾರೆ. ನಾನು ಈ ಹಿಂದೆ ಹೇಳಿದ ಅಪ್ಪಿಕೇರಿಯ ದೈವ ಸಂಕೀರ್ಣವನ್ನು ನೀವು ಮತ್ತೆ ನೆನಪಿಸಿಕೊಳ್ಳಬಹುದು. ಜಟ್ಟಿಗ ಎಂದರೆ ಜಡೆಗ ಜಟಾಧಾರಿ, ಶಿವನ ಒಂದು ರೂಪ. ಸೃಷ್ಟಿಗೆ ಕಾರಣನಾದವನು ಎಂದು ಊಹಿಸಬಹುದಾಗಿದೆ. ಜಟ್ಟಿಗ ಅಂದರೆ ಶಕ್ತಿವಂತ, ಗಟ್ಟಿಗ, ಪರಾಕ್ರಮಿ ಎಂಬ ಅರ್ಥಗಳನ್ನೂ ಕೊಡಬಹುದು. ಒಟ್ಟಿನಲ್ಲಿ ಪಶುಸಂಗೋಪನಾ ಹಂತದ ಈ ದೈವ ಅವರ ರಕ್ಷಕನಾಗಿ ಕಾರ್ಯ ನಿರ್ವಹಿಸಿದಂತಿದೆ.

ಈ ಬೀರರಲ್ಲಿ ಅನೇಕ ವಿಧವಾದ ದೈವಗಳುಂಟು. ಉದಾಹರಣೆಗೆ 'ಬ್ಯಾಟಿಬೀರ' ಎಂದರೆ ಅವರ ಬೇಟೆಗೆ ಸಹಾಯ ಮಾಡುವ ದೇವರು. 'ಗೋಳಿ ಬೀರ' ಎಂದರೆ ರೋಗ ನಿರೋಧಕ ದೇವರು ಗೋಣಿ ಚಕ್ಕೆಯನ್ನು ನೀರಿನಲ್ಲಿ ಕುದಿಸಿ ಮೈಗೆ ಲೇಪಿಸಿಕೊಂಡರೆ ಚರ್ಮರೋಗ ನಿವಾರಣೆಯಾಗುತ್ತದೆ. ಆದ್ದರಿಂದ ಆ ಗೋಳಿ(ಣಿ) ಮರದ ಕೆಳಗೆ ಇರುವವನು ಗೋಳಿ ಬೀರ. ಇದೇ ರೀತಿಯಲ್ಲಿ ಸಂತಾನಬೀರರು ಉಂಟು. ದಂಡಿನಬೀರ ಯುದ್ಧದಲ್ಲಿ ಸಹಾಯ ಮಾಡಿದವನು. ಹುಲಿಬೀರ ಹುಲಿಯನ್ನು ಕೊಂದವನು, ಹಂದಿಬೀರ ಹಂದಿಗಳಿಂದ ಬೆಳೆಯನ್ನು ರಕ್ಷಿಸಿದವನು. ಬಟ್ಟೆಬೀರ ದಾರಿಗಳನ್ನು ಕಾಯುತ್ತಾ ವೈರಿಗಳನ್ನು ತಡೆಯುವನು. ಹೀಗೆ ನಾನಾ ರೀತಿಯ ಬೀರರೂ ಉಂಟು. ಆದ್ದರಿಂದಲೇ ಇವರ ದೇವಸ್ಥಾನಗಳಲ್ಲಿ ಹುಲಿ ಮತ್ತು ಹಂದಿಗಳ ಪ್ರತಿಮೆಗಳೂ ಉಂಟು.

ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಈ ಬೀರರು ಮತ್ತು ಜಟ್ಟಿಗರು ಬನವೊಂದರಲ್ಲಿ ನೆಲೆಸಿರುತ್ತಾರೆ. 'ಬನ' ಅಂದರೆ ಹಲವು ರೀತಿ ಹಾಲು ಉತ್ಪತ್ತಿ ಮಾಡುವ ಮರಗಿಡ ಬಳ್ಳಿಗಳು. ಆಲ, ಅರಳಿ, ಗೋಳಿ ಇತ್ಯಾದಿಯೆಲ್ಲವೂ ಈ ಪರಿವಾರದಲ್ಲಿ ಬರುತ್ತವೆ. ಅಂದರೆ ಇವೆಲ್ಲ ಸಮೃದ್ಧಿಯ ಸಂಕೇತಗಳು. ಅಂಥ ಬನದಲ್ಲಿ ಬಹುತೇಕ ಗ್ರಾಮದೇವತೆಯರ ಮೂರ್ತಿಗಳಿರುತ್ತವೆ. ಅಥವಾ ಗ್ರಾಮದೇವತೆಯೆಂದು ಹೇಳಲಾಗುವ ಚಿಹ್ನೆಯೊಂದು ಇದ್ದೇ ಇರುತ್ತದೆ. ಆ ಗ್ರಾಮದೇವತೆಯ ಪರಿವಾರದ ಸೇವಕರಾಗಿ ಈ ಬೀರರು ಮತ್ತು ಜಟ್ಟಿಗರು ಇರುತ್ತಾರೆ. ಅಥವಾ ಅವಳ ರಕ್ಷಕ ಭಂಟರಾಗಿ ಇವರು ಇರುತ್ತಾರೆ. ಬೇಟೆ ಮತ್ತು ಪಶುಪಾಲನೆಯ ಹಂತದಲ್ಲಿ ಈ ಪುರುಷ ದೈವಗಳ ಸೃಷ್ಟಿಯಾದರೂ ಅವು ಕೃಷಿಯ ಅನ್ವೇಷಕಿ ಮತ್ತು ಒಡತಿಯಾಗಿದ್ದ ಸ್ತ್ರೀಯ ಅಧೀನದಲ್ಲಿವೆ ಎಂಬುವುದೇ ಇಲ್ಲಿ ಮುಖ್ಯ ಸಂಗತಿ. ಮಾತೃಪ್ರಧಾನ ವ್ಯವಸ್ಥೆ ಈ ಜನವರ್ಗದಲ್ಲಿ ಇತ್ತೀಚಿನವರೆಗೂ ರೂಢಿಯಲ್ಲಿತ್ತು ಮತ್ತು ಆ ರೀತಿಯ ಒಂದು ಆಂತರ್ಯದ ಗೌರವ ಮಾತೃವಿಗೆ

ಈಗಲೂ ಇದೆ ಅವರ ಈ ಆರಾಧನಾ ವಿಧಾನ ಮತ್ತು ಅನುಸರಿಸುವ ಆಚರಣೆಗಳೇ ಸಾಕ್ಷಿ. ಇಷ್ಟಲ್ಲದೆ ಬನದ ಚೌಡಿ ಹಾಗೂ ಗದ್ದೆಯ ಅಂಚಿನ ಮಾಸ್ತಿಗುಡಿಗಳು ಹಾಲಕ್ಕಿ ಸಮುದಾಯಗಳಿರುವ ಎಲ್ಲ ಕೊಪ್ಪಗಳಲ್ಲಿಯೂ ವಿಶೇಷವಾಗಿ ಕಾಣಸಿಗುತ್ತವೆ. ಇವರು ಹಿಂದೊಂದು ದಿನ ಸತಿಯಾದವರು ಎಂಬುದು ನಿರ್ವಿವಾದ.

ಇನ್ನು ನಾಲ್ಕನೆಯ ಹಂತಕ್ಕೆ ಬರೋಣ. ಬರಬರುತ್ತಾ ಕಾಲ ಬದಲಾದಂತೆ ಪುರುಷಪ್ರಧಾನ ವ್ಯವಸ್ಥೆ ಸರ್ವವ್ಯಾಪಿಯಾಗಿ ತನ್ನ ಬಾಹುಗಳನ್ನು ಚಾಚಿತು. ದೈವಗಳ ಸ್ಥಾನಮಾನದಲ್ಲಿ ಏರುಪೇರಾಯಿತು. ಇದುವರೆಗೆ ದ್ರಾವಿಡ ಪರಂಪರೆಯಲ್ಲಿ ಬೆಳೆದುಬಂದ ಸಾಂಸ್ಕೃತಿಕ ಜೀವನಕ್ಕೆ ವೈದಿಕತನದ ಸ್ಪರ್ಶವಾದದ್ದು ಈ ಹಂತದ ಪ್ರಮುಖ ಲಕ್ಷಣ. ಅಂಥ ವ್ಯವಸ್ಥೆಯ ಪ್ರತಿಪಾದಕರೆನಿಸಿದ ನಮ್ಮ ದಾಸರು ಮತ್ತು ಆಚಾರ್ಯರು ಹೇಳಿಕೊಟ್ಟಂತೆ ಅಥವಾ ಅವರ ಪ್ರಚಾರ ಪ್ರಭಾವಗಳಿಗೆ ತಲೆಬಾಗಿ ತಿರುಪತಿ ವೆಂಕಟರಮಣನನ್ನೂ, ಧರ್ಮಸ್ಥಳದ ಮಂಜುನಾಥನನ್ನು, ಗೋಕರ್ಣದ ಗೋಕರ್ಣೇಶ್ವರನನ್ನು ಅವರು ದೈವವಾಗಿ ಸ್ವೀಕರಿಸಿದರು. ಮೂಲದಲ್ಲಿ ಶೈವಾರಾಧಕರಾಗಿದ್ದ, ತಮ್ಮ ಹುಟ್ಟಿನ ಪುರಾಣಗಳ ಪ್ರಕಾರ ಶಿವನಿಂದ ಉದ್ಭವಿಸಿದ ಈ ಹಾಲಕ್ಕಿಯವರು ಶಿವಸಂಬಂಧಿಯಾದ ಗೋಕರ್ಣ ಅಥವಾ ಧರ್ಮಸ್ಥಳಕ್ಕಿಂತ ದೂರದ ತಿರುಪತಿ ವೆಂಕಟರಮಣನನ್ನು ಹಚ್ಚಿಕೊಂಡಿದ್ದೇಕೆ? ಇಂದು ತಿರುಪತಿ ವೆಂಕಟರಮಣನೇ ಅವರ ಪ್ರಮುಖ ಆರಾಧ್ಯವಾಗಿರಲು ಕಾರಣವೇನು? ಇದು ಕೇವಲ ಹಾಲಕ್ಕಿ ಒಕ್ಕಲಿಗರ ಪ್ರಶ್ನೆ ಮಾತ್ರವಲ್ಲ. ಇದೇ ಉತ್ತರ ಕನ್ನಡದ ಗೊಂಡ ಬುಡಕಟ್ಟಿನ ದೈವತ್ವದ ಪ್ರಶ್ನೆಯೂ ಹೌದು. ಹಾಗೇ ಕರಾವಳಿ ಮತ್ತು ಮಲೆನಾಡಿನ, ಅಷ್ಟೇ ಏಕೆ, ಇದೇ ದಕ್ಷಿಣಭಾರತದ ಅನೇಕ ಸಮುದಾಯಗಳ ದೈವಾಂತರದ ಪ್ರಶ್ನೆಯಾಗಿ ನಮ್ಮ ಮುಂದಿದೆ. ದೈವಾರಾಧನೆಯ ಈ ಅವಸ್ಥಾಂತರದ ಅಧ್ಯಯನಕ್ಕೆ ಯೋಗ್ಯವಾದ ವಿಚಾರ. ಹಾಗೆಂದು ಹಾಲಕ್ಕಿಯವರು ತಮ್ಮ ಮೂಲದೈವಗಳನ್ನು ಮರೆತಿದ್ದಾರೆ ಎಂದು ಹೇಳುವಂತಿಲ್ಲ.

ಆದರೆ, ತಿರುಪತಿ ತಿಮ್ಮಪ್ಪ ಅವರ ಬದುಕಿನ ಪ್ರತಿ ಹಂತದಲ್ಲೂ ಪ್ರವೇಶಿಸುತ್ತಾನೆ. ಅವರ ಮನೆಗಳ ಮುಂದಿನ ಪ್ರತಿ ತುಳಸಿಕಟ್ಟೆಯಲ್ಲಿಯೂ ತಿಮ್ಮಪ್ಪನ ಮೂರ್ತಿ ಇದ್ದೇ ಇರತಕ್ಕದ್ದು. ಒಳಗಿನ ಮನೆಯಲ್ಲಿಯೂ ತಿಮ್ಮಪ್ಪನ ಪ್ರತಿಷ್ಠಾಪನೆ. ಪ್ರತಿ ಶನಿವಾರ ತಿಮ್ಮಪ್ಪನ ಪೂಜೆ. ನಾಮಧಾರಣೆ ಆಗಲೇಬೇಕು. ಹರಕೆಯ ಕಟ್ಟಿಕೊಂಡು ತಿರುಪತಿ ಯಾತ್ರೆ ಮಾಡಿ ಬರುವವರ ಸಂಖ್ಯೆಯೂ ಕಡಿಮೆಯೇನಲ್ಲ. ತಿಮ್ಮಪ್ಪನ ಜೊತೆಗಿನ ಇವರ ಬಾಂಧವ್ಯ ಅಷ್ಟು ಮುಖ್ಯ ಹಾಗೂ ಕಡ್ಡಾಯ. ಇಂಥ ಸ್ಥಿತ್ಯಂತರಕ್ಕೆ ಕಾರಣವೇನು? ಮಲೆನಾಡಿನ ಮತ್ತು ಕರಾವಳಿಯ ಅನೇಕ ಬುಡಕಟ್ಟುಗಳು ಇಂಥ ಒಂದು ಧಾರ್ಮಿಕ ಅವಸ್ಥಾಂತರಕ್ಕೆ ಒಳಗಾಗಿ ತಮ್ಮ ಆಚರಣೆ

PDF created with pdfFactory Pro trial version www.pdffactory.com

ಸಂಪ್ರದಾಯಗಳಲ್ಲಿ ತಿಮ್ಮಪ್ಪನ ಆರಾಧನೆಯನ್ನೇ ಮುಖ್ಯವಾಗಿರಿಸಿಕೊಂಡಿರುವಲ್ಲಿ ಅನೇಕ ಸಾಮಾಜಿಕ ಮತ್ತು ಐತಿಹಾಸಿಕ ಕಾರಣಗಳಿರುವಂತಿದೆ. ಶ್ರೀ ರಾಮಾನುಜಾಚಾರ್ಯರ ಪಾತ್ರ ಇಲ್ಲಿ ಬಹಳ ಮುಖ್ಯವಾಗಿದೆ. ರಾಮಾನುಜಾಚಾರ್ಯರ ವೈಷ್ಣವೀಕರಣಕ್ಕೆ ಸ್ವತಃ ಬಿಟ್ಟಿದೇವನೇ ಒಳಗಾದಾಗಿನಿಂದ ಹಿಡಿದು ವಿಜಯನಗರದ ಅರಸರದವರೆಗೆ ಅನೇಕ ದಾಸ ಪರಂಪರೆಯ ಯತಿಗಳು ಈ ಕಾರ್ಯವನ್ನು ಮಾಡುತ್ತಲೇ ಬಂದರು. ಹೆಚ್ಚೂ ಕಡಿಮೆ ಇಡೀ ಕರ್ನಾಟಕವನ್ನು ತಮ್ಮ ಆಡಳಿತದಲ್ಲಿ ಇಟ್ಟುಕೊಂಡಿದ್ದ ವಿಜಯನಗರದ ಅರಸರು ತಿರುಪತಿ ತಿಮ್ಮಪ್ಪನ ಪರಮ ಭಕ್ತರೂ ಆಗಿದ್ದರು ಎಂಬುದನ್ನು ಇಲ್ಲಿ ಸ್ಮರಿಸಬೇಕು. ತಿರುಪತಿಯ ಮಠದಲ್ಲಿ ದೀಕ್ಷೆ ಪಡೆದ ಅನೇಕ ದಾಸರು ತಮ್ಮ ದೈವದ ಮಹಿಮೆಯನ್ನು ಸಾರುತ್ತಾ ತಮ್ಮ ಪಯಣದ ಮಾರ್ಗಗಳಲ್ಲಿ ಜನಸಾಮಾನ್ಯರಿಗೂ ದಾಸ ದೀಕ್ಷೆ ನೀಡುತ್ತಾ ಬಂದರು. ಆದರೆ ಈ ದಾಸರಿಂದಲೇ ಇಷ್ಟೆಲ್ಲ ಸ್ಥಿತ್ಯಂತರವಾಯಿತು ಎಂದು ಹೇಳಿ ಮುಗಿಸಿಬಿಡುವ ಹಾಗಿಲ್ಲ. ಯಾಕೆಂದರೆ ಸ್ವತಹ ತಿಮ್ಮಪ್ಪನೇ ಮೂಲದಲ್ಲಿ ಒಂದು ಬುಡಕಟ್ಟು ದೇವತೆ ಎಂಬ ಬಲವಾದ ವಾದಗಳಿವೆ. ದೇವರ ಹೆಸರಿನಲ್ಲಿ ಜನರ ಭಾವನೆಗಳನ್ನು ಪರಿವರ್ತಿಸಲಾಗಿದೆ ಎಂದು ನಾನು ಹೇಳುತ್ತಿದ್ದೇನೆ ಅಷ್ಟೇ. ಆದರೆ ಸ್ವತಃ ದೇವರನ್ನೇ ಹಾಗೆ ಪರಿವರ್ತಿಸಲಾಗಿದೆ ಎಂಬುದು ವಿದ್ವಾಂಸರ ಅಭಿಪ್ರಾಯ. ಶ್ರೀ ಎಸ್.ಕೆ. ರಾಮಚಂದ್ರರಾವ್ ತಮ್ಮ 'ತಿರುಪತಿ ತಿಮ್ಮಪ್ಪ' ಗ್ರಂಥದಲ್ಲಿ ಇಂಥ ಅನೇಕ ಸಂಗತಿಗಳನ್ನು ಬೆಳಕಿಗೆ ತಂದಿದ್ದಾರೆ. ನಂತರದಲ್ಲಿ ಈ ಸಂಗತಿಗಳ ಮೇಲೆ ಇನ್ನೂ ಹೆಚ್ಚಿನ ಬೆಳಕು ಚೆಲ್ಲಿರುವ ಒಂದು ಲೇಖನದ ಉಲ್ಲೇಖಗಳನ್ನು ಇಲ್ಲಿ ನೀಡ ಬಯಸುತ್ತೇನೆ.

"ಬಹುಶಃ ಮೇಲಿನ ಬೆಳವಣಿಗೆಗೆ ಕರ್ನಾಟಕದಲ್ಲಿ ಶ್ರೀ ವೈಷ್ಣವ ಮತದ ಪ್ರಸಾರದ ವೈಶಿಷ್ಟ್ಯತೆಯೇ ಕಾರಣವಾಗಿರಬಹುದು. ನಮಗೆ ತಿಳಿದುಬರುವಂತೆ ಹೊಯ್ಸಳ ರಾಜ್ಯದಲ್ಲಿ ೧೨ನೇ ಶತಮಾನದ ನಂತರ ಶ್ರೀ ವೈಷ್ಣವ ಅಗ್ರಹಾರಗಳೂ ಪೂಜಾಸ್ಥಳಗಳೂ ಬೆಳೆದು ಬಂದವು. ರಾಮಾನುಜರು ಕರ್ನಾಟಕದಲ್ಲಿ ಸಂಚರಿಸಿದ ನಂತರ ಈ ಬೆಳವಣಿಗೆಯಾಯಿತು ಎಂಬ ಸಾಮಾನ್ಯ ಗ್ರಹಿಕೆಯೂ ಇದೆ. ಶ್ರೀರಂಗಂ ಶ್ರೀವೈಷ್ಣವ ಮತದ ಪ್ರಧಾನ ಕೇಂದ್ರವಾದರೂ ರಾಮಾನುಜರಿಗೆ ತಿರುಪತಿ ಕ್ಷೇತ್ರದ ಸಂಪರ್ಕವೂ ಅಷ್ಟೇ ಗಾಢವಾಗಿ ಇತ್ತು. ಹೀಗಾಗಿ ತಿರುಪತಿಯ ದೇವತೆ ಕುರಿತು ಅವರ ಕಾಲದಲ್ಲಿ ಶೈವರಿಗೂ ವೈಷ್ಣವರಿಗೂ ಕಲಹ ಉಂಟಾದಾಗ, ರಾಮಾನುಜರು ಅಲ್ಲಿ ನಿರ್ಣಾಯಕವಾಗಿ ಶ್ರೀವೈಷ್ಣವರನ್ನು ಸ್ಥಾಪಿಸಿದರು ಎಂದು ಪ್ರತೀತಿ ಇದೆ. ಈ ಘಟನೆ ನಮಗೆ ಎರಡು ಮುಖ್ಯ ಅಂಶಗಳನ್ನು ಸೂಚಿಸುತ್ತದೆ. ಮೊದಲನೆಯದಾಗಿ ತಿರುಪತಿ ದೇವತೆಗೆ ರಾಮಾನುಜರ ಕಾಲದ ನಂತರ ವೈಷ್ಣವ ಗುರುತು ಗಟ್ಟಿಯಾಯಿತು ಹಾಗೂ ಮೂಲತಃ ಅದೊಂದು ವಿವಾದಾಸ್ಪದ ಪ್ರಾದೇಶಿಕ ದೇವತೆ ಎಂಬುದು.

ಎರಡನೆಯದಾಗಿ ಶ್ರೀ ವೈಷ್ಣವ ಮತವು ಇಂಥದೇ ಪ್ರಾದೇಶಿಕ ಕ್ಷೇತ್ರಗಳನ್ನು ಒಳಗೊಳುತ್ತ ಕರ್ನಾಟಕದಲ್ಲೂ ಪ್ರಸಾರವಾಗಿರಬಹುದು. ಕರ್ನಾಟಕದ ಗುಡ್ಡಬೆಟ್ಟಗಳಲ್ಲಿ ಕಂಡುಬರುವ ರಂಗನಾಥ–ತಿಮ್ಮಪ್ಪ ದೇವರು ಮೂಲತಃ ಗುಡ್ಡಗಾಡಿನ ದೇವತೆ. ಈ ದೇವತೆಯ ಮೂರ್ತಿಗಳು ಮತ್ತೊಂದು ಪ್ರಕಾರವಾಗಿವೆ. ಈ ದೇವತೆ ನಿಂತುಕೊಂಡ ಭಂಗಿಯಲ್ಲಿ ಇದ್ದು, ೧೬–೧೭ನೇ ಶತಮಾನದ ನಂತರದ ಈ ದೇವತೆಯ ಮೂರ್ತಿ ಬಿಲ್ಲುಬಾಣ ಹಾಗೂ ಶಂಖ ಚಕ್ರಗಳನ್ನು ಹಿಡಿದಿರುತ್ತದೆ. ಈ ಭಾಗದಲ್ಲಿ ಆ ಕಾಲದಲ್ಲಿ ನಿರ್ಮಾಣವಾದ ವೆಂಕಟೇಶ್ವರ ದೇವಾಲಯಗಳಲ್ಲೂ ಇದೇ ಮೂರ್ತಿಯನ್ನು ನೋಡುತ್ತೇವೆ. ಆದರೆ ನಮಗೆ ಸಿಗುವ ಪ್ರಾಚೀನ ಎರಡು ಕೈಗಳು ಅರ್ಧಂಬರ್ಧ ಕಾಣುತ್ತಿದ್ದು ಅದಕ್ಕೆ ಚಿನ್ನದ ಶಂಖ ಚಕ್ರಗಳನ್ನು ಹಿಡಿಸಲಾಗಿದೆ. ಮೂಲತಃ ಅವುಗಳಲ್ಲಿ ವೈಷ್ಣವ ಚಿಹ್ನೆಗಳು ಇದ್ದ ಸೂಚನೆ ಇಲ್ಲ. ಬಿಳಿಗಿರಿಯ ರಂಗನ ಮೂರ್ತಿಯಲ್ಲಿ ಇದೇ ಭಂಗಿಯಲ್ಲಿ ಇದ್ದುದನ್ನು ನೋಡಬಹುದು. ಆದರೆ ಆ ಮೂರ್ತಿಗೆ ಮತ್ತೆರಡು ಕೈಗಳಲ್ಲಿ ಶಂಖ ಚಕ್ರಗಳನ್ನು ಹಿಡಿಸಲಾಗಿದೆ. ಎಂದರೆ, ತಿರುಪತಿಯ ದೇವತೆಗೆ ವೈಷ್ಣವ ಗುರುತುಗಳ ಧಾರಣೆಯಾದ ನಂತರ ಪ್ರಚಲಿತದಲ್ಲಿ ಬಂದ ಒಂದು ಮೂರ್ತಿ ಪ್ರಕಾರ ಇದಾಗಿದೆ. ರಂಗನ ಮೂರ್ತಿಗೆ ಸೊಂಟದಲ್ಲಿ ಒಂದು ಖಡ್ಗ ನೇತಾಡುತ್ತಿರುವಂತೆ ತೋರಿಸಲಾಗಿದೆ. ತಿರುಪತಿಯ ದೇವರ ಕೈಗಳಲ್ಲಿ ಶ್ರೀವೈಷ್ಣವ ನಿರೂಪಣೆಗೂ ಪೂರ್ವದಲ್ಲಿ ಮರಬಿಲ್ಲು ಹಾಗೂ ಬಾಣಗಳನ್ನೂ ಇರಿಸುವ ವಾಡಿಕೆ ಇತ್ತು ಎಂಬುದಕ್ಕೂ ಕೆಲವು ಆಧಾರಗಳಿವೆ. ಆ ದೇವತೆಯ ಪುರಾಣದಲ್ಲಿ ಹಾಗೂ ಸಂಸ್ಕೃತ ಸ್ತೋತ್ರಗಳಲ್ಲಿ ಕೂಡ ಅದೊಂದು ಬೇಟೆಯ ದೇವತೆ ಎಂಬ ಉಲ್ಲೇಖಗಳಿವೆ."[೬]

ಧರ್ಮಪಂಥಗಳನ್ನು ಮತ್ತು ಪ್ರಚುರಪಡಿಸುವ ಆತುರದಲ್ಲಿ ಇಂಥ ರೂಪಾಂತರಗಳು ಹಾಗೂ ಪರಿವರ್ತನೆಗಳು ಭಾರತದಾದ್ಯಂತ ನಡೆದಿವೆ. ಇಂಥದ್ದೇ ಅವಸ್ಥಾಂತರಕ್ಕೆ ಒಳಗಾದ ಮತ್ತೊಂದು ಪ್ರಸಿದ್ಧ ದೇವತೆ ಎಂದರೆ ಪುರಿಯ ಜಗನ್ನಾಥ. ಮೂಲತಃ ಬುಡಕಟ್ಟು ದೈವವಾಗಿದ್ದ ಪುರಿಯ ಜಗನ್ನಾಥ ಆಳುವ ವರ್ಗ ಮತ್ತು ಪುರೋಹಿತ ವರ್ಗಗಳ ಕಪಿಮುಷ್ಟಿಗೆ ಸಿಲುಕಿ ಬಡಾಠಾಕೂರನಾದದ್ದು ಒಂದು ವಿಶೇಷ ಪ್ರಸಂಗ. ಆದಿವಾಸಿಗಳ ದೀನಬಂಧು ಎಂದು ಕರೆಸಿಕೊಳ್ಳುತ್ತಿದ್ದ ಜಗನ್ನಾಥ, ಅವರ ಪ್ರೀತಿಯ ದೈವವಾಗಿ ಪೊರೆಯುತ್ತಿದ್ದ ಜಗನ್ನಾಥ ಬಡಾಠಾಕೂರನಾಗಿ ಪರಿವರ್ತನೆ ಹೊಂದುವ ಮೂಲಕ ಅವರಿಂದ ದೂರ ಸರಿದು ಬ್ರಾಹ್ಮಣರ ಪರವಾದದ್ದನ್ನು ಅಲ್ಲಿ ನಾವು ಕಾಣುತ್ತೇವೆ. ಹಾಗೆ ಆಳುವವರು ಮತ್ತು ಪುರೋಹಿತರು ಜಗನ್ನಾಥನನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡ ಪರಿಣಾಮವಾಗಿ ಅಲ್ಲಿನ ಗುಡ್ಡ ಗಾಡಿನ ಜನರ ನೆಲೆಯೇ ತತ್ತರಿಸುತ್ತದೆ. ದೇವರ ಹೆಸರಿನಲ್ಲಿ ಕೃಷಿಭೂಮಿ ಮತ್ತು

PDF created with pdfFactory Pro trial version www.pdffactory.com

ಕಾಡಿನ ಪ್ರದೇಶಗಳನ್ನು ಹೊರಗಿನವರು ಆಕ್ರಮಿಸಿಕೊಳ್ಳುತ್ತಾರೆ. ಭೂಮಾಲೀಕರ ಹಿಡಿತಕ್ಕೆ ಸಿಕ್ಕ ಜಗನ್ನಾಥ ಬಡಾಶಾಕೂರನಾಗುತ್ತಾನೆ. ಆದಿವಾಸಿಗಳಿಗೆ ದೇವಸ್ಥಾನದ ಪ್ರವೇಶವೂ ನಿರಾಕರಿಸಲ್ಪಡುತ್ತದೆ. ಈ ನಿಷೇಧದ ವೈಚಿತ್ರ್ಯದಿಂದ ರೋಸಿ ಹೋದ ಆದಿವಾಸಿಗಳು 'ದಾರು ಪ್ರತಿಮಾ ನಾ ಪೂಜಿವೆ'(ಮರದ ಕಟ್ಟಿಗೆಯನ್ನು ನಾವು ಪೂಜಿಸುವುದಿಲ್ಲ) ಎಂಬ ಚಳುವಳಿಗೂ ಇಳಿದು ತಮ್ಮ ಪ್ರೀತಿಯ ಜಗನ್ನಾಥನನ್ನು ತಿರಸ್ಕರಿಸುವ ಒಂದು ಹಂತಕ್ಕೂ ಪರಿಸ್ಥಿತಿ ಹೋಗುತ್ತದೆ. ತಿರುಪತಿ ತಿಮ್ಮಪ್ಪ ಮತ್ತು ಬಿಳಿಗಿರಿ ರಂಗಯ್ಯನವರುಗಳೂ ಈಗ ಹಾಗೇ ಸ್ಥಿತ್ಯಂತರಗೊಂಡು ಪುರೋಹಿತರ ಹಿಡಿತದಲ್ಲಿದ್ದಾ ರಾದರೂ, ಜನರು ಮಾತ್ರ ತಮ್ಮ ಪ್ರೀತಿಯ ದೈವಗಳನ್ನು ಪುರೋಹಿತರು ಹೇಳಿ ಕೊಟ್ಟಿದ್ದಕ್ಕಿಂತ ಭಿನ್ನವಾಗಿ ಆರಾಧಿಸುತ್ತಿದ್ದಾರೆ ಎಂಬುದು ಮುಖ್ಯ. ದೇವರು ಎಲ್ಲಿಂದಲೇ ಬರಲಿ ಅವನನ್ನು ತಮ್ಮ ನೆಲೆಯಲ್ಲಿ ಸ್ಥಳೀಯನನ್ನಾಗಿ ಪರಿವರ್ತಿಸಿಕೊಳ್ಳುವ ಶಕ್ತಿ ಬುಡಕಟ್ಟುಗಳಿಗಿದೆ.

ಘಟ್ಟ ಮತ್ತು ಘಟ್ಟದ ಕೆಳಗಿನ ಅನೇಕಾನೇಕ ಜನವರ್ಗಗಳಿಗೆ ತುಳಸಿ ಪವಿತ್ರತಮವಾದ ಒಂದು ಸಸ್ಯ. ಹಾಲಕ್ಕಿ ಒಕ್ಕಲಿಗರೂ ಇದಕ್ಕೆ ಹೊರತಲ್ಲ. ಇವರ ತುಳಸಿಕಟ್ಟೆ ಎಂದರೆ ಅದೊಂದು ಪರಮಪೂಜನೀಯ ಸ್ಥಳ ಎಂದೇ ಅರ್ಥ. ಪ್ರತಿ ಮನೆಯ ಮುಂದೆ ಪ್ರತಿಷ್ಠಾಪಿಸಲ್ಪಟ್ಟ ತುಳಸಿ ಕಟ್ಟೆಯೇ ಹಾಲಕ್ಕಿ ಒಕ್ಕಲಿಗರು ನಂಬಿದ ಇತರ ದೇವರಿಗೂ ಆವಾಸಸ್ಥಾನ. ಒಂದು ರೀತಿಯಲ್ಲಿ ತುಳಸಿಗೂ ವೆಂಕಟರಮಣನಿಗೂ ಅವಿನಾಭಾವ ಸಂಬಂಧ ಹಾಲಕ್ಕಿ ಮನೆಗಳಲ್ಲಿ ತುಳಸಿ ಕಟ್ಟೆಗಳಿಲ್ಲದೇ ವೆಂಟರಮಣನಿಲ್ಲ. ವೆಂಕಟರಮಣನಿಲ್ಲದೆ ತುಳಸಿಕಟ್ಟೆಯೂ ಇಲ್ಲ. ತುಳಸಿ ತಿಮ್ಮಪ್ಪನ ಹೆಂಡತಿ ಎಂಬುದು ಇವರ ನಂಬಿಕೆ. ಇವರು ವೆಂಕಟರಮಣನನ್ನು ದೈವವನ್ನಾಗಿ ಸ್ವೀಕರಿಸಿದ ಮೇಲೆ ತುಳಸಿಯನ್ನು ಜೊತೆಗೆ ಇಟ್ಟುಕೊಂಡರೋ ಅಥವಾ ತುಳಸಿ ಇವರ ಮೂಲ ಆರಾಧನೆಯ ಒಂದು ಸಸ್ಯವಾಗಿತ್ತೋ ಎಂಬುದು ಇನ್ನು ಸ್ಪಷ್ಟವಾಗಬೇಕಾದ ವಿಚಾರ.

ಒಟ್ಟಿನಲ್ಲಿ ಹಾಲಕ್ಕಿಯವರ ದೇವರ ಚರಿತ್ರೆ ತುಂಬ ಆಸಕ್ತಿದಾಯಕವಾದುದು. ಬೇಟೆ ಪಶುಪಾಲನೆ ಮತ್ತು ಕೃಷಿಯ ವಿವಿಧ ಹಂತಗಳಲ್ಲಿ ವಿಕಸನಗೊಂಡ ಅವರ ದೈವಗಳ ಆರಾಧನೆ ಅನೇಕ ಅವಸ್ಥೆಗಳನ್ನು ದಾಟಿದೆ ಎಂಬಂತೆ ಮೇಲ್ನೋಟಕ್ಕೆ ಕಂಡರೂ, ಆ ಎಲ್ಲ ಪ್ರಾಚೀನ ಅಂಶಗಳನ್ನು ಒಳಗೊಂಡು ಇಂದು ಒಂದು ಸಂಕೀರ್ಣಾವಸ್ಥೆಯಲ್ಲಿ ಕಾಣಿಸಿಕೊಳ್ಳುತ್ತಿದೆ. ಸೂರ್ಯ, ಚಂದ್ರ, ಭೂಮಿತಾಯಿ, ಬೀರ, ಜಟ್ಟಿಗ, ಮಾಸ್ತಿ, ಚೌಡಿ, ಕರಿ ಕಾನಮ್ಮ, ದೇವಿಕಾನಮ್ಮ, ಮಾಸ್ತಮ್ಮ ಹಾಗೂ ತಿರುಪತಿ ತಿಮ್ಮಪ್ಪನವರೆಗೆ ವಿಸ್ತರಿಸುತ್ತಾ ಯಾವುದನ್ನೂ ಬಿಡದೆ, ಹೊಸ ಹೊಸದಾಗಿ ಸೇರಿಸಿಕೊಳ್ಳುತ್ತಾ ಹೋಗುತ್ತಿರುವ ರೀತಿಯನ್ನು ನೋಡಿದರೆ, ಒಂದು ಪರಂಪರೆಯನ್ನು

ಸಂರಕ್ಷಿಸುತ್ತಲೇ ಹೊಸದನ್ನು ಆಹ್ವಾನಿಸಿಕೊಳ್ಳುವ ಕ್ರಿಯಾಶೀಲ ಗುಣವೊಂದು ಇಲ್ಲಿ ನಿಚ್ಚಳವಾಗಿ ಕಾಣಿಸಿಕೊಳ್ಳುತ್ತದೆ ಎಂದು ಹೇಳಬಹುದು.

೨.೨. ಜಟ್ಟಿಗನ ಬನ

ಇದೇ ಉತ್ತರ ಕನ್ನಡ ಕರಾವಳಿಯ ಭಟ್ಕಳದ ಸುತ್ತಮುತ್ತ ಇರುವ ಗೊಂಡರ ಜೀವನ ಕ್ರಮ ಮತ್ತು ಅವರ ದೈವರಾಧನೆಯ ವೈವಿಧ್ಯಗಳು ಕೂಡ ಅಧ್ಯಯನಕ್ಕೆ ಯೋಗ್ಯವಾದ ವಿಚಾರಗಳು. ಸಮುದ್ರಕ್ಕೆ ತೀರಾ ಹತ್ತಿರದಲ್ಲಿರುವ ಭಟ್ಕಳ ಮತ್ತು ಶಿರಾಲಿ ಹಾಗೂ ನಿಬಿಡಾರಣ್ಯದ ತಾಣಗಳೆನಿಸಿದ ಗೋವರ್ಧನಗಿರಿ ಮತ್ತು ಮೆಘಾನೆ ಬೆಟ್ಟಸಾಲುಗಳಿಂದ ಹಿಡಿದು ಮಾರುಕೇರಿಯವರೆಗೆ ದಟ್ಟ ಕಾಡುಗಳ ಒಡಲಲ್ಲಿ ನೆಲೆಸಿರುವ ಗೊಂಡರು ವಿಶಿಷ್ಟ ಜೀವನಕ್ಕೆ ಹೆಸರಾದವರು.

ಮಾರುಕೇರಿ ಎಂಬ ಗೊಂಡರ ಒಂದು ತಾಣದಲ್ಲಿ 'ಜಟ್ಟಿಗನ ಬನ'ವೊಂದು ಇದೆ. ಇಲ್ಲಿಂದಲೇ ಅವರ ಅನೇಕ ದೈವಗಳನ್ನು ಪರಿಚಯಿಸಲು ಪ್ರಯತ್ನಿಸುತ್ತೇನೆ. ಮಾರುಕೇರಿಯ ಜಟ್ಟಿಗನ ಬನ ಎಂದರೆ ಅದೊಂದು ಪರಿಸರ ನಿರ್ಮಿತ ಸಸ್ಯವನ. ಹಾಲುಬರುವ ಅನೇಕ ರೀತಿಯ ಮರಗಿಡ ಬಳ್ಳಿಗಳ ಸಮೂಹ ಅದು. ಅಲ್ಲಿರುವ ಮರಗಿಡ ಬಳ್ಳಿಗಳನ್ನು ಯಾರೂ ಕಡಿಯಬಾರದೆಂಬ ನಿಷೇಧವಿರುವುದರಿಂದ ನೂರಾರು ವರ್ಷಗಳಿಂದ ಬೆಳೆದ ಮರಗಳು ತಮ್ಮ ಪ್ರಾಚೀನಾವಸ್ಥೆಯನ್ನು ತೋರಲೋ ಎಂಬಂತೆ ಅಂಕುಡೊಂಕಾಗಿ ಸುಕ್ಕುಗಟ್ಟಿಬಾಗಿ ಬಿದ್ದು ವಿಚಿತ್ರಾಕಾರದಲ್ಲಿವೆ. ಅವುಗಳನ್ನು ಅಪ್ಪಿ ಹಬ್ಬಿದ ಬಳ್ಳಿಗಳು ಮಾರಿಬಲೆಯ ಹಗ್ಗದ ರೀತಿಯಲ್ಲಿ ಎಲ್ಲೆಲ್ಲೂ ಹೆಣೆದುಕೊಂಡಿವೆ. ಈ ಸೊಂಪಾದ ವನದಲ್ಲಿ ಒಂದು ಉದ್ದನೆಯ ಜಗುಲಿ ನಿರ್ಮಿಸಲಾಗಿದೆ. ಆ ಜಗುಲಿಯ ಮೇಲೆ ಹತ್ತಾರು ಜಟ್ಟಿಗನ ಕೊಂಬುಗಳಿವೆ. ಜಟ್ಟಿಗನ ಕೊಂಬು ಅಂದರೇನು? ಗೊಂಡರ ಸಾಂಸ್ಕೃತಿಕ ವೀರರನ್ನು ಜಟ್ಟಿಗರು ಎಂದು ಕರೆಯಲಾಗುತ್ತದೆ. ಅಂಥ ಹತ್ತಾರು ಜಟ್ಟಿಗರು ಅವರಲ್ಲಿ ಪೂಜೆಗೊಳ್ಳುತ್ತಿದ್ದಾರೆ. ಆ ಜಟ್ಟಿಗರ ಆಯುಧ ರೂಪದ ಮರದ ಆಕೃತಿಗಳೇ ಜಟ್ಟಿಗನ ಕೊಂಬು.

ನೇತ್ರಾಣಿ ಜಟ್ಟಿಗ, ಕುಂಟ ಜಟ್ಟಿಗ, ಗುಡಿ ಜಟ್ಟಿಗ, ಮೋಟಗಾರ ಜಟ್ಟಿಗ, ಕೋಟೆ ಜಟ್ಟಿಗ, ಹೊಗೇಡಿ ಜಟ್ಟಿಗ, ಹೊಟ್ಕಾಣಿ ಜಟ್ಟಿಗ ಮುಂತಾಗಿ ಆ ಜಟ್ಟಿಗರನ್ನು ಗುರುತಿಸಲಾಗುತ್ತದೆ. ಜಟ್ಟಿಗರ ಹೆಸರಿನಲ್ಲಿ ಹರಕೆ ಹೊತ್ತವರು ತಂದು ಸಲ್ಲಿಸುವ ಆಯುಧ ರೂಪದ ಮರದ ಕಂಬಗಳನ್ನು ಆ ಜಗುಲಿಯ ಮೇಲೆ ನೆಡಲಾಗುತ್ತದೆ. ಹಾಗೆ ಯಾಕಾಗಿ ಹರಕೆ ಹೊತ್ತು ತಂದು ಕೊಡುತ್ತಾರೆ? ಈ ಜಟ್ಟಿಗರೆಲ್ಲ ಒಂದಾನೊಂದು ಕಾಲದಲ್ಲಿ ಗೊಂಡರ ಒಳಿತಿಗಾಗಿ ಸೆಣಸಿ ಶ್ರಮಿಸಿ ದೇಹತ್ಯಾಗ ಮಾಡಿದವರು. ಅವರೆಲ್ಲ ಇಂದು ಜಟ್ಟಿಗರು ಅರ್ಥಾತ್ ಬಲಾಢ್ಯರು, ಪರಾಕ್ರಮಿಗಳು, ತ್ಯಾಗವೀರರು ಎಂಬ ಅರ್ಥದಲ್ಲಿ ಪೂಜೆಗೊಳ್ಳುತ್ತಿದ್ದಾರೆ. ಹೆಣ್ಣಿನ ರಕ್ಷಣೆ ಇರಬಹುದು,

PDF created with pdfFactory Pro trial version www.pdffactory.com

ಊರ ರಕ್ಷಣೆ ಇರಬಹುದು, ಒಟ್ಟಾರೆ ಆ ಇಡೀ ಬುಡಕಟ್ಟಿನ ರಕ್ಷಣೆ ಇರಬಹುದು. ಗೊಂಡರು ಇಂದು ಪೂರ್ಣಪ್ರಮಾಣದ ಕೃಷಿಕರು. ಅವರ ಬೆಳೆಗಳನ್ನು, ದನಕರುಗಳನ್ನು ನಾಶ ಮಾಡುತ್ತಿದ್ದ ಹುಲಿ ಮತ್ತು ಹಂದಿಗಳನ್ನು ಕೊಂದು ಅಥವಾ ಕೊಲ್ಲುವ ಕ್ರಿಯೆಯಲ್ಲಿ ಮರಣಕ್ಕೆ ತುತ್ತಾಗಿ ಸ್ವರ್ಗ ಸೇರಿದ ಸಾಹಸಿಗಳೂ ಇರಬಹುದು. ಅಂಥ ಜಟ್ಟಿಗರನ್ನೂ ತಮ್ಮ ಬುಡಕಟ್ಟಿನ ವೀರರನ್ನಾಗಿ ಪರಿಗಣಿಸಿ ಇಂದು ಗೊಂಡರು ಪೂಜಿಸುತ್ತಿದ್ದಾರೆ. ಅವರ ಆರಾಧನೆ ಅತ್ಯಂತ ಸಾಂಕೇತಿಕವಾದುದು. ಆ ವೀರರು ತಮ್ಮ ಹೋರಾಟದ ಸಂದರ್ಭದಲ್ಲಿ ಬಳಸಿರಬಹುದಾದ ಆಯುಧ ರೂಪದ ಮರದ ಕೊಂಬೆಯೇ ಅವರನ್ನು ಪ್ರತಿನಿಧಿಸುವ ಸಾಧನ. ಈಗಲೂ ಅಭೇದ್ಯ ಅರಣ್ಯಗಳ ನಡುವೆ ವಾಸಿಸುವ ಗೊಂಡರಿಗೆ ಹುಲಿ ಮತ್ತು ಹಂದಿಯ ಕಾಟ ತಪ್ಪಿದ್ದಲ್ಲ. ಅವರು ಹರಕೆ ಹೊರುತ್ತಾರೆ. ನಮ್ಮ ಹೊಲವನ್ನು ಹಂದಿ ಹಾಳು ಮಾಡದಂತೆ, ನಮ್ಮ ದನಕರುಗಳನ್ನು ಹುಲಿ ಹಿಡಿಯದಂತೆ ಕಾಪಾಡು ಎಂದು. ಹಾಗೆ ಹರಕೆ ಹೊತ್ತವರು ಅಂಥ ಒಂದು ಜಟ್ಟಿಗನ ಕೊಂಬನ್ನು ಮಾಡಿಸಿ ತಂದು ಆ ಬನದಲ್ಲಿ ಪ್ರತಿಷ್ಠಾಪಿಸುತ್ತಾರೆ. ಹಾಗೆ ಹರಕೆ ಹೊತ್ತು ಸಲ್ಲಿಸಿದ ಹತ್ತಾರು ಜಟ್ಟಿಗನ ಕೊಂಬುಗಳು ಅಲ್ಲಿವೆ.

ಅವರ ವೀರರಾದ ಜಟ್ಟಿಗರು ಹುಲಿ ಹಂದಿಗಳನ್ನು ಕೊಂದಿರಬಹುದು. ಆದರೆ ಎಲ್ಲರೂ ಆ ಕೆಲಸ ಮಾಡಲು ಸಾಧ್ಯವಿಲ್ಲವಲ್ಲ. ಆದ್ದರಿಂದ ಅವರು ಕಂಡುಕೊಂಡ ಉಪಾಯವೆಂದರೆ ಹುಲಿ ಮತ್ತು ಹಂದಿಯನ್ನು ಪೂಜಿಸುವುದು. ಇದು ಪೂಜೆಯೂ ಇರಬಹುದು, ಇಲ್ಲವೆ ಮಾಟದ ರೂಪದ ನಿಯಂತ್ರಣವೂ ಇರಬಹುದು. ಹುಲಿ ಮತ್ತು ಹಂದಿಯ ರೂಪದ ಮೂರ್ತಿಗಳನ್ನು ಮಾಡಿಸಿ, ಅಂದರೆ ಅನುಕರಿಸಿ, ಅವು ತಮ್ಮ ಸಂಪತ್ತನ್ನು ಹಾಳು ಮಾಡದಂತೆ ತಡೆಯುವ ಕ್ರಮಗಳನ್ನು ಅವರು ಕೈಗೊಳ್ಳುತ್ತಾರೆ. ದೇವಿಪ್ರಸಾದ್ ಚಟ್ಟೋಪಾಧ್ಯಾಯ ಅವರು ಹೇಳುವಂತೆ ನಾವು ಆಶಿಸಿದ್ದನ್ನು ಪಡೆಯಲು ಅಥವಾ ಹಾಗೇ ಮಾಡಲು ಅಸಹಾಯಕರಾದಾಗ, ನೃತ್ಯದ ಮೂಲಕವೋ ಅಥವಾ ಆಚರಣೆಯ ಮೂಲಕವೋ ಅದನ್ನು ಅನುಕರಿಸುತ್ತೇವೆ. ಅರ್ಥಾತ್ ಪುನರಭಿನಯಿ ಸುತ್ತೇವೆ. ಅದನ್ನೇ ಮಾಟ ಎಂದು ಕರೆಯುವುದು. ಹಾಗೆ ಮಾಡುವುದರಿಂದ ಯಾವುದು ವಾಸ್ತವದಲ್ಲಿ ಅಸಾಧ್ಯವೋ ಅದನ್ನು ಪರೋಕ್ಷ ರೂಪದಲ್ಲಿ ಸಾಧ್ಯ ಆಗಿಸುವುದು ಅವರ ಆಶಯ. ಇದು ಆದಿ ಮಾನವನ ಒಂದು ನಂಬಿಕೆ ಗೊಂಡರ ಹುಲಿ ಮತ್ತು ಹಂದಿಯ ಮೂರ್ತಿಗಳ ಅರ್ಪಣೆ ಎಂದರೆ ಇಂಥದ್ದೇ ಒಂದು ಮಾಟದ ಕ್ರಿಯೆ. ಬಹುಶಃ ಇದು ಗೊಂಡರ ಅತ್ಯಂತ ಪ್ರಾಚೀನ ಪದ್ಧತಿಗಳಲ್ಲಿ ಒಂದು ಎಂದು ಹೇಳಬಹುದು. ಹೀಗೆ ಹರಕೆ ಕಟ್ಟಿ ಅರ್ಪಿಸಿದ ನೂರಾರು ಹುಲಿ ಮತ್ತು ಹಂದಿಯ ಚಿತ್ರಗಳು ಆ ಜಟ್ಟಿಗನ ಬನದಲ್ಲಿ ಇವೆ.

ಈಗ ನೇರವಾಗಿ ಭಟ್ಕಳ ಪೇಟೆ ಮತ್ತು ಸಮುದ್ರದ ನಡುವೆ ಇರುವ ಒಂದು ವಿಶಾಲ ಬಯಲಿನ ಗೊಂಡರ ಆರಾಧ್ಯ ದೇವತೆ ಕೋಗ್ತಿ ಗುಡಿಗೆ ಹೋಗೋಣ. ವಿಶಾಲ ಬಯಲಿನ ನಡುವೆ ಒಂದು ಸುಂದರವಾದ ಕೆರೆ ಇದೆ. ಆ ಕೆರೆಯ ದಡದಲ್ಲಿ ಪೂರ್ವಾಭಿಮುಖವಾಗಿ ಕಟ್ಟಲಾಗಿರುವ ಸರಳ ದೇವಾಲಯ. ಅದೇ ಕೋಗ್ತಿ ಗುಡಿ. ಈ ದೈವವನ್ನು 'ಕೋಗ್ತಿಕಟ್ಟೆ ಮಾಸ್ತಿ' ಎಂದೂ ಕರೆಯುತ್ತಾರೆ. ವರ್ಷಕ್ಕೊಮ್ಮೆ, ಅಂದರೆ ಸಂಕ್ರಾಂತಿಯ ಮಾರನೇ ದಿನ ಇಲ್ಲಿ ಜಾತ್ರೆ ನಡೆಯುತ್ತದೆ. ಸಮಸ್ತ ಗೊಂಡರೂ ಅಲ್ಲಿ ನೆರೆಯುತ್ತಾರೆ.

ಭಟ್ಕಳ ಈಗೊಂದು 'ಮಿನಿ ದುಬಾಯ್' ಎಂದೇ ಹೆಸರು ಪಡೆದಿದೆ. ದಿನ ದಿನಕ್ಕೂ ಪಾಶ್ಚಾತ್ಯ ನಾಗರಿಕತೆಯನ್ನು ರೂಢಿಸಿಕೊಂಡು ಬೆಳೆಯುತ್ತಿರುವ ಈ ಚಿಕ್ಕ ಪಟ್ಟಣ ಅತ್ಯಾಧುನಿಕ ಕಟ್ಟಡಗಳನ್ನು ಹೊಂದಿದೆ. ಇಂಥ ಆಧುನಿಕ ಭಟ್ಕಳದಲ್ಲಿ ಗೊಂಡರ ಕೋಗ್ತಿ ಗುಡಿ ಇದೆಯಲ್ಲ ಎಂದು ಆಶ್ಚರ್ಯ ಪಡಬೇಕಾಗಿಲ್ಲ. ಹಿಂದೆ ಭಟ್ಕಳದ ಸಮುದ್ರದಂಚಿನವರೆಗೂ ದಟ್ಟಾರಣ್ಯವೇ ಇತ್ತು. ಬೆಟ್ಟಗುಡ್ಡಗಳಿಂದ ಆವೃತವಾದ ಭಟ್ಕಳ ಮತ್ತು ಮುರ್ಡೇಶ್ವರಗಳ ಸಮುದ್ರತೀರ ಇಂದಿಗೂ ಅಷ್ಟೇ ಆಕರ್ಷಕ. ಹಾಗೆ ನೋಡಿದರೆ ಇಡೀ ಉತ್ತರ ಕನ್ನಡದಲ್ಲಿ ಸಮುದ್ರದ ಅಂಚಿನವರೆಗೂ ಘಟ್ಟಗಳು ವ್ಯಾಪಿಸಿ ಬೃಹತ್ ಅರಣ್ಯವಿದ್ದ ಲಕ್ಷಣಗಳೇ ತುಂಬಿವೆ. ಹೀಗಾಗಿ ಕಾಡಿನ ವಾಸಿಗಳಾದ ಗೊಂಡರು ಸಮುದ್ರದ ಅಂಚಿನವರೆಗೂ ವಾಸವಾಗಿದ್ದರು. ಅರಣ್ಯಕ್ಕೂ ಸಮುದ್ರಕ್ಕೂ ಒಂದು ರೀತಿಯಲ್ಲಿ ನೆಂಟಸ್ತನ ಬೆಳೆಸಿದವರು ಈ ಗೊಂಡರು ಎಂದು ಹೇಳಿದರೆ ಆಶ್ಚರ್ಯವೇನಲ್ಲ. ಇದರ ಕುರುಹಾಗಿ ಭಟ್ಕಳದಿಂದ ಹತ್ತಾರು ಕಿ.ಮೀ. ಒಳಭಾಗದಲ್ಲಿ ಸಮುದ್ರದ ಮಧ್ಯೆ ಕಡುಗಪ್ಪು ನೀರಿನಿಂದಾವೃತವಾದ ನೇತ್ರಾಣಿ ಗುಡ್ಡದಲ್ಲಿಯೂ ಗೊಂಡರ ಸಾಂಸ್ಕೃತಿಕ ವೀರನೆನಿಸಿದ ಕುಂಟ ಜಟ್ಟಿಗನ ಕೊಂಬುಗಳಿವೆ. ಇವನನ್ನು ನೇತ್ರಾಣಿ ಜಟ್ಟಿಗ ಎಂದೂ ಕರೆಯುತ್ತಾರೆ. ಈಗಲೂ ಹಬ್ಬ ಜಾತ್ರೆಗಳ ಸಂದರ್ಭದಲ್ಲಿ ಆ ಭೋರ್ಗರೆಯುವ ಸಮುದ್ರವನ್ನು ಹಾದು ನೇತ್ರಾಣಿ ಗುಡ್ಡದಲ್ಲಿ ಪೂಜೆ ಸಲ್ಲಿಸಿ ಬರುವ ಗೊಂಡರೂ ಉಂಟು. ದೂರಕ್ಕೆ ನಿಗೂಢ ಪರ್ವತದಂತೆ ಕಾಣುವ ಆ ಸಾಗರದೊಳಗಿನ ಗುಡ್ಡ ಒಂದು ಕಾಲಕ್ಕೆ ಗೊಂಡರ ಪವಿತ್ರ ಸ್ಥಳವಾಗಿತ್ತೆಂದು ಹೇಳುತ್ತಾರೆ.

ಕೋಗ್ತಿ ಗುಡಿಯ ಒಳಗೆ ಏನೇನು ವಿಶೇಷಗಳಿವೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ. ಒಳಗಿನ ಹಜಾರದಲ್ಲಿ ಸಾಲುಸಾಲಾಗಿ ನಿಲ್ಲಿಸಿದ ಬಣ್ಣಬಣ್ಣದ ಮಾಸ್ತಿ ಮಹಾಸತಿಯರ ಮರದ ಮೂರ್ತಿಗಳವೆ. ಅವುಗಳೆಲ್ಲ ಭಕ್ತರು ಹರಕೆ ಹೊತ್ತ ಕಾರಣಕ್ಕಾಗಿ ಮಾಡಿಸಿ ತಂದಿಟ್ಟ ಮೂರ್ತಿಗಳು. ಗುಡಿಯ ಸುತ್ತ ಕಾಂಪೌಂಡ್ ರೀತಿಯಲ್ಲಿ ಹೊರಗೋಡೆ ನಿರ್ಮಿಸಿದ್ದು, ಆ ಗೋಡೆಯೊಳಗಿನ ಆವರಣದಲ್ಲಿ

PDF created with pdfFactory Pro trial version www.pdffactory.com

ಒಂದು ಚೌಡಿಕಟ್ಟೆ ಇದೆ. ಅಲ್ಲಿಯೂ ಅನೇಕ ರೀತಿಯ ಜಟ್ಟಿಗನ ಕೊಂಬುಗಳಿವೆ. ಈ ಜಟ್ಟಿಗರೆಲ್ಲ ಇಲ್ಲಿ ಕೋಗ್ತಿಯ ಸೇವಕರು. ಅಥವಾ ಅವಳ ಆಜ್ಞಾನುವರ್ತಿಗಳಾದ ಭಂಟರು. ತುಳಸಿ ಮತ್ತು ನಾಗರಕಲ್ಲುಗಳ ಕಟ್ಟೆಗಳೂ ಇಲ್ಲಿ ಇವೆ.

ಮಹಾಸತಿಯರಾದ ಅನೇಕಾನೇಕ ಮಾಸ್ತಿಯರು ಗೊಂಡರ ಎಲ್ಲ ಪ್ರದೇಶಗಳಲ್ಲಿ ಕಂಡು ಬರುತ್ತಾರೆ. ಆ ಎಲ್ಲಾ ಮಾಸ್ತಿಯರ ಸಂಕೇತವೇ ಈ ಕೋಗ್ತಿಕಟ್ಟೆ ಮಾಸ್ತಿ. ಹೊಸ್ ಮಾಸ್ತಿ, ಹಾದಿ ಮಾಸ್ತಿ, ವೀರ ಮಾಸ್ತಿ, ಕೊಡದ ಮಾಸ್ತಿ, ಮಹಾ ಮಾಸ್ತಿ ಮುಂತಾಗಿ ಅನೇಕ ವಿಧವಾದ ಮಾಸ್ತಿಯರನ್ನು ಇವರು ಆರಾಧಿಸುತ್ತಾರೆ. ಹರಕೆ ಮಾಡಿಕೊಂಡವರು ತಂದು ಒಪ್ಪಿಸಿದ ಮಾಸ್ತಿಯರಂತೂ ನೂರಾರು. ಸುಂದರವಾದ ಮರದ ಮೂರ್ತಿಯನ್ನು ಮಾಡಿಸಿ, ಅವುಗಳಿಗೆ ಹೊಂದುವ ವಿವಿಧ ಬಣ್ಣಗಳನ್ನು ಸಂಯೋಜಿಸಿ ಒಂದು ಸುಂದರ ದೇವಿವಿಗ್ರಹವನ್ನಾಗಿ ರೂಪಿಸಿ ಅದನ್ನು ತಂದು ಕೋಗ್ತಿಗುಡಿಗೆ ಒಪ್ಪಿಸುತ್ತಾರೆ. ಈ ಪದ್ಧತಿ ಈ ಭಾಗದಲ್ಲಿ ತುಂಬ ಜನಪ್ರಿಯ ಎನ್ನುವುದಕ್ಕೆ ಸಾಕ್ಷಿಯಾಗಿ ಭಟ್ಕಳದ ಸಮೀಪವಿರುವ ಸೋಡಿಗದ್ದೆಯ ಮಾಸ್ತಿ ಗುಡಿಗೆ ಹೋಗಬೇಕು. ಅಲ್ಲಿ ಕೇವಲ ಗೊಂಡರಷ್ಟೇ ಭಕ್ತರಲ್ಲ. ಇತರೆ ಅನೇಕ ಜನವರ್ಗಗಳು ಅಲ್ಲಿನ ಭಕ್ತರು. ಹೀಗೇ ಹರಕೆ ಕಟ್ಟಿಕೊಂಡು ಅರ್ಪಿಸಿದ ಸಾವಿರಾರು ಮಾಸ್ತಿ ವಿಗ್ರಹಗಳು ಅಲ್ಲಿನ ವಿಶಾಲ ದೇವಸ್ಥಾನದಲ್ಲಿ ಸ್ಥಾನ ಪಡೆದಿವೆ. ರಾಶಿರಾಶಿಯಾದ ಆ ಅಂದದ ಮೂರ್ತಿಗಳನ್ನು ನೋಡುವುದೇ ಒಂದು ಆನಂದ.

ಗೊಂಡರ ಆರಾಧನೆಯಲ್ಲಿ ಹೆಸರಿಸಲೇಬೇಕಾದ ಮತ್ತೊಂದು ಆಚರಣೆ ಅವರ ಮಂಡಳ ಕುಣಿತ. ಇದು ಕೋಗ್ತಿ ಜಾತ್ರೆಯಂದು ನಡೆಯುತ್ತದೆ. ಈಗಾಗಲೇ ಹೇಳಿದಂತೆ ಈ ಜಾತ್ರೆ ಸಂಕ್ರಾಂತಿಯ ಮಾರನೇ ದಿನ ನಡೆಯುತ್ತದೆ. ಮಂಡಲ ಕುಣಿತಕ್ಕೆ ಪೂರ್ವಭಾವಿಯಾಗಿ ಸಾಂಕೇತಿಕವಾಗಿ ಸಿಡಿಯಾಡುವುದು, ಮಾಸ್ತಿಯ ಮೂರ್ತಿಗಳಿಗೆ ಪೂಜೆ ಸಲ್ಲಿಸುವುದು, ದೆವ್ವ ಮೈಮೇಲೆ ಬರುವುದು ಮುಂತಾದ ಮುಖ್ಯ ಆಚರಣೆಗಳು ಅಂದು ನಡೆಯುತ್ತವೆ. ಈ ಮಂಡಲಪೂಜೆ ದೇವಾಲಯದ ಹೊರಗೆ ಬರೆದ ಮಂಡಲವನ್ನನುಸರಿಸಿ ನಡೆಯುತ್ತದೆ.

ಮಂಡಲವನ್ನು ಬರೆಯುವ ಗೆರೆಗಳನ್ನು 'ಗರಿ'ಗಳೆಂದು ಕರೆಯುತ್ತಾರೆ. ಕಪ್ಪು, ಕೆಂಪು, ಹಳದಿ, ನೀಲಿ, ಹಸಿರು ಮುಂತಾದ ಎಲ್ಲ ಬಣ್ಣಗಳ ಗರಿಯನ್ನು ಬರೆಯಲಾಗುತ್ತದೆ. ಹೀಗೆ ಮಂಡಲ ಬರೆಯುವಾಗ ಅಕ್ಕಿಹಿಟ್ಟು, ಅರಿಶಿನ, ಕುಂಕುಮ ಮೊದಲಾದವುಗಳ ಮಿಶ್ರಣವನ್ನು ಬಳಸುತ್ತಾರೆ. ಮಂಡಲದ ತ್ರಿಜ್ಯ ಸಾಧಾರಣ ಎರಡು ಅಡಿ. ಮಂಡಲವು ಒಂದೇ ಆಗಿದ್ದು ನಾಲ್ಕು ಬದಿಗಳಲ್ಲಿ ನಾಲ್ಕು ರೀತಿಯ ಚೌಕವಿರುತ್ತದೆ. ಮಂಡಲದ ಮೇಲೆ ಹಾವಿನ ಆಕಾರವೊಂದನ್ನು ಬರೆದಿರುತ್ತಾರೆ. ಅದೇ ಸಂದರ್ಭದಲ್ಲಿ ಗುಡಿಯ ಹೊರಗೆ ಬಾಗಿನಲ್ಲಿ ಒಂದು ಚೊಂಬಿನಲ್ಲಿ ಸ್ವಲ್ಪ

ನೀರನ್ನು ತುಂಬಿಸಿ ಅದಕ್ಕೆ ಹಿಂಗಾರದ ಕೊನೆಯೊಂದನ್ನಿಟ್ಟು ನೆಲದ ಮೇಲೆ ಇಟ್ಟಿರುತ್ತಾರೆ. ಕಳಶ ಎಂದು ಕರೆಯಲಾಗುವ ಇದರಲ್ಲಿ ಮಂಡಲವನ್ನು ನಿಲ್ಲಿಸಲಾಗುತ್ತಿದೆ. ಇದಕ್ಕೆ ಅಬ್ಬಲಿಗೆ ಹೂಗಳನ್ನು ಹಾಗೂ ಹಿಂಗಾರವನ್ನು ಪ್ರಭಾವಳಿಯ ರೀತಿಯಲ್ಲಿ ಕಟ್ಟಲಾಗುತ್ತದೆ. ಈ ಮಂಡಲದ ಮೇಲೆ ಚಪ್ಪರವಿರುತ್ತದೆ. ಚಪ್ಪರದ ಒಳಭಾಗಕ್ಕೆ ಮೇಲುಕಟ್ಟೊಂದನ್ನು ಕಟ್ಟಿರುತ್ತಾರೆ. ಮೇಲು ಕಟ್ಟಿನಲ್ಲಿ ತೆಂಗಿನ ಹಸಿರು ಗರಿಗಳಿಂದ ಮಾಡಿದ ಹಾವುಗಳು ಮತ್ತು ಹಕ್ಕಿಗಳನ್ನು ತೂಗುಹಾಕಲಾಗಿರುತ್ತದೆ.

ಮಂಡಲದ ಪೂಜೆಯಲ್ಲಿ ಮಂಡಲದ 'ಬಗಸ' ಮುಖ್ಯವಾಗಿರುತ್ತದೆ. ಡಕ್ಕೆ, ವಸ್ತ್ರ, ಡಕ್ಕೆಯ ಮುಚ್ಚು ಇತ್ಯಾದಿಗಳಿರುವ ಒಂದು ಕುಕ್ಕೆಯೇ ಮಂಡಲದ ಬಗಸ. ಇದು ಸಾಮಾನ್ಯವಾಗಿ ಊರಿನ ಮುಖ್ಯ ಗೌಡನ ಮನೆಯಲ್ಲಿರುತ್ತದೆ. ಹೀಗೆ ಮಂಡಲ ಪೂಜೆಯ ಸಿದ್ಧತೆಗಳೆಲ್ಲವೂ ನಡೆದ ಮೇಲೆ ಸುಮಾರು ರಾತ್ರಿ ಹತ್ತು ಗಂಟೆಯ ವೇಳೆಗೆ ಪೂಜಾರಿ ಮತ್ತು ಢಕ್ಕೆಯವರು ಬರುತ್ತಾರೆ. ಗುಡಿಯೊಳಗೆ ಪೂಜೆಯಾದ ನಂತರ ದೆವ್ವಕರೆಯುವ ಹಾಡನ್ನು ಹಾಡಲಾಗುತ್ತದೆ. ಗೊಂಡರ ದೇವತೆಗಳಾದ ಮಾಸ್ತಿ ಮತ್ತು ಜಟ್ಟಿಗರನ್ನು ಈ ಹಾಡಿನ ಮೂಲಕ ಕರೆಯಲಾಗುತ್ತದೆ. ಆಗ ಪೂಜಾರಿಗೆ ದೆವ್ವ ಮೈಮೇಲೆ ಬರುತ್ತದೆ. ಆಗ ಅವನನ್ನು ಮಂಡಲದ ಬಳಿಗೆ ಕರೆದು ತರಲಾಗುತ್ತದೆ. ಪೂಜಾರಿ ಹಿಡಿ ಅಕ್ಕಿ ಇಟ್ಟು, ತೆಂಗಿನಕಾಯಿ ಒಡೆದು, ದೂಪದ ಗಿಂಡಿ ಹಿಡಿದು ಕಳಸಕ್ಕೆ ಪ್ರದಕ್ಷಿಣೆ ಮಾಡಿ ಪೂಜೆ ಮುಗಿಸುತ್ತಾನೆ. ಅನಂತರ ಮಂಡಲದ ಪದ ಹಾಡುವವರು ಹಾಡುವುದಕ್ಕೆ ತೊಡಗುತ್ತಾರೆ. ಇವರು ಕೆಂಪುಮಡಿ ಪಂಚೆಯನ್ನು ಮೊಣಕಾಲಿನವರೆಗೆ ಉಟ್ಟಿರುತ್ತಾರೆ. ಕೊರಳಿಗೆ ದೃಷ್ಟಿಸರ, ಮಣಿಸರ, ಚಿನ್ನದ ಸರಗಳನ್ನು ಹಾಕಿರುತ್ತಾರೆ. ಕಿವಿಗೆ ದೊಡ್ಡದಾದ ಗಾಲವಂಟಿ, ಅಬ್ಬಲಿಗೆ ಹೂ, ಕಾಲಿಗೆ ಗೆಜ್ಜೆಯ ಕಡಗ ಇವಿಷ್ಟು ಇವರ ವೇಷಭೂಷಣಗಳು. ಸರ್ವೇಸಾಮಾನ್ಯವಾಗಿ ನಾಲ್ಕು ಜನರೇ ಇರುವ ಇವರು ಕಳಸದ ಇಬ್ಬದಿಗಳಲ್ಲಿ ಇಬ್ಬಿಬ್ಬರು ನಿಲ್ಲುತ್ತಾರೆ. ಈಚೆಗೆ ನಿಂತವರು ಢಕ್ಕೆ ಬಾರಿಸುತ್ತಾ, ಕಳಸದ ಸುತ್ತ ಕುಣಿಯುತ್ತ ಹಾಡಲು ಪ್ರಾರಂಭಿಸಿದಾಗ ಆ ಬದಿಯವರು ಇವರು ಎತ್ತಿಕೊಟ್ಟ ಹಾಡನ್ನು ಪುನರುಚ್ಚರಿಸುತ್ತಾರೆ. ಮೊದಲಿಗೆ ಕಳಸಕ್ಕೆ ಅಡ್ಡ ಬಿದ್ದು ಹೊನ್ನಮ್ಮ ಮಾಸ್ತಿ, ಸೋಡಿಗದ್ದೆ ಮಾಸ್ತಿ, ಕೋಗ್ತಿ ಕಟ್ಟೆ ಮಾಸ್ತಿ, ಜಟ್ಟಿಗ, ಹಾಯ್ಗೊಳಿ ಮೊದಲಾದ ದೇವರುಗಳ ಸುತ್ತಿ ಮಾಡುತ್ತಾರೆ. ಈ ನಾಲ್ಕು ಜನರ ಕುಣಿತದ ಜೊತೆಗೆ ಪೂಜಾರಿಯೂ ಕುಣಿಯುತ್ತಿರುತ್ತಾನೆ. ಆದರೆ ಪೂಜಾರಿಯ ಹಾವಭಾವ ಮತ್ತು ನರ್ತನ ವಿಶೇಷವಾಗಿರುತ್ತದೆ. ಅವನು ದೆವ್ವಕರೆಯುವ ರೀತಿ ಹಾಗೂ ದೇವಿಯ ಉಪಾಸನೆ ಮಾಡುವ ರೀತಿ ವಿಶಿಷ್ಟವಾಗಿರುತ್ತದೆ. ಕುಣಿಯುತ್ತಾ ಕುಣಿಯುತ್ತಾ ಆತ ಕೈಯಲ್ಲಿರುವ ಹೊಂಬಾಳೆಯ ಎಸಳುಗಳನ್ನು ಸುತ್ತು ಕಳಸದ ಮೇಲೆ ಹಾಕುತ್ತಿರುತ್ತಾನೆ.

PDF created with pdfFactory Pro trial version www.pdffactory.com

ಒಂದು ಹೊಂಬಾಳೆ ಮುಗಿದರೆ ಮತ್ತೊಂದು ಹೊಂಬಾಳೆಯಂತೆ ಕಿತ್ತು ಕಿತ್ತು ಹಾಕಿರುತ್ತಾನೆ. ಈ ಕುಣಿತ ಮುಂಜಾನೆಯವರೆಗೆ ನಡೆಯುತ್ತದೆ. ಆದರೂ ಪೂಜಾರಿಯ ಆವೇಶ ತಣ್ಣಗಾಗಿರುವುದಿಲ್ಲ. ಬೆಳಗಿನ ಜಾವ ಅವನನ್ನು ಗುಡಿಯ ಒಳಗೆ ಕರೆತಂದು ದೆವ್ವ ಬಿಡಿಸುತ್ತಾರೆ. ಆ ನಂತರವೂ ಹೊರಗೆ ಮಂಡಳ ಕುಣಿತ ಹಾಗೂ ಹಾಡುಗಾರಿಕೆ ಮುಂದುವರಿಯುತ್ತದೆ.

ಆ ಕುಣಿತ ಕೋಗ್ತಿ ಹಬ್ಬದಲ್ಲಿ ದೇವಾಲಯದ ಆವರಣದಲ್ಲಿ ನಡೆಯುತ್ತದೆ. ಇದೇ ರೀತಿ ಹರಕೆ ಕಟ್ಟಿಕೊಂಡ ಕುಟುಂಬಗಳು ಇದೇ ಸಂಕ್ರಾಂತಿಯಿಂದ ಶಿವರಾತ್ರಿಯ ನಡುವಿನ ಸಮಯದಲ್ಲಿ ತಮ್ಮ ತಮ್ಮ ಮನೆ ಮತ್ತು ಗುಡಿಗಳ ಮುಂದೆ ದೆವ್ವಕರೆಯುವ ಆಚರಣೆಯನ್ನು ಏರ್ಪಡಿಸುತ್ತಾರೆ. ಆದರೆ ಆಚರಣೆಯ ವಿಧಿವಿಧಾನಗಳು ಮಾತ್ರ ಎಲ್ಲಾ ಕಡೆಯಲ್ಲಿಯೂ ಒಂದೇ ತೆರನಾಗಿರುತ್ತವೆ.

ಈ ಆಚರಣೆಯನ್ನು ಇಷ್ಟೆಲ್ಲಾ ವಿವರಿಸಿದ್ದಕ್ಕೆ ಕಾರಣಗಳಿವೆ. ಇದು ಅನಾದಿಕಾಲದ ಹಲವು ಸಾಂಸ್ಕೃತಿಕ ವಿಶೇಷಗಳನ್ನು ತನ್ನೊಳಗೆ ಪ್ರತಿನಿಧಿಸುತ್ತಿರುವ ಒಂದು ಆಚರಣೆ. ಕಾಡಿನ ಮೂಲ ನಿವಾಸಿಗಳಾದ ಗೊಂಡರು ಒಂದು ಕಡೆ ಅನಂತ ಸಮುದ್ರದ ಅಬ್ಬರವನ್ನೂ ಮತ್ತೊಂದು ಕಡೆ ದಟ್ಟ ಕಾನನದ ನಿಗೂಢತೆಯನ್ನು ಕಂಡು ಬೆರಗಾದವರು. ಸತತ ಮಳೆ, ಬಿರುಗಾಳಿ, ಹುಲಿ, ಘಟಸರ್ಪವಾದ ಕಾಳಿಂಗ ಇಂಥೆಲ್ಲಾ ಕಷ್ಟಕಾರ್ಪಣ್ಯಗಳ ನಡುವೆ ಬದುಕು ನೀಸಿದವರು. ಇವರ ಮಂಡಲಾಚರಣೆ ಇಂಥ ಅಭೇದ್ಯ ನಿಸರ್ಗವನ್ನು ನಿಯಂತ್ರಿಸಿ ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಹಂಬಲದ ಮಾಂತ್ರಿಕ ಆಚರಣೆಯಲ್ಲದೆ ಮತ್ತೇನೂ ಅಲ್ಲ. ಮಂಡಲದ ನಡುವೆ ಇಡುವ ಕಲಶ ಅಂಥ ನಿಸರ್ಗದ ನಡುವೆಯೂ ಅವರು ಸಮೃದ್ಧಿಗಾಗಿ, ಫಲೋತ್ಪತ್ತಿಗಾಗಿ ಹಾರೈಸುವುದರ ಸಂಕೇತ. ತೆಂಗಿನ ಗರಿಗಳಿಂದ ತಯಾರಿಸಿ ಕಟ್ಟಿ ಬಿಡಲಾದ ಸರ್ಪ, ಮಂಡಲದ ಮೇಲಿನ ನಾಗಮಂಡಲದ ಮಧ್ಯೆ ಇಟ್ಟ ಕಲಶಗಳು ಫಲವಂತಿಕೆಯ ಹೆಣ್ಣು ಗಂಡಿನ ಸಂಕೇತಗಳು. ಒಂದು ಕಡೆ ಮಾಸ್ತಿ, ಮಾರಿ ಹಾಗೂ ಚಾಡಿಯರೆಂಬ ಹೆಣ್ಣು ದೇವತೆಗಳನ್ನು ಇನ್ನೊಂದು ಕಡೆ ತಮ್ಮ ವೀರತ್ವದ ಸಂಕೇತದ ಜಟ್ಟಿಗರನ್ನು ಆರಾಧಿಸುವ ಗೊಂಡರು ಪುರುಷ ಮತ್ತು ಸ್ತ್ರೀ ಇಬ್ಬರನ್ನು ಸಮಾನವಾಗಿ ಪರಿಗಣಿಸಿ ನಾಗ ಮತ್ತು ಕಲಶದ ಮೂಲಕ ಸಂಕೇತಿಸುತ್ತಾರೆ. ಕೃಷಿ ಮತ್ತು ಪಶುಸಂಗೋಪನೆ ಎರಡನ್ನೂ ಒಟ್ಟೊಟ್ಟಾಗಿ ನಿಭಾಯಿಸಿಕೊಂಡು ಬರುತ್ತಿರುವ ಗೊಂಡರು, ಕೃಷಿ ಹಂತದ ಸಮೃದ್ಧಿ ದೇವತೆಯರು ಹಾಗೂ ಪಶುಸಂಗೋಪನೆ ಹಂತದ ವೀರ ಪುರುಷರನ್ನು ಒಟ್ಟಾಗಿ ಆರಾಧಿಸುವಲ್ಲಿ ಗೊಂಡರ ಸಾಂಸ್ಕೃತಿಕ ವಿಕಸನದ ಇತಿಹಾಸವೇ ಅಡಗಿದಂತಿದೆ. ಮಂಡಲದ ಆಚರಣೆಯಲ್ಲಿ ಪೂಜಾರಿ ಕೆಂಪುವಸ್ತ್ರ ತೊಟ್ಟು ವಿವಿಧ ವೇಷಭೂಷಣಗಳಿಂದ ಅಲಂಕರಿಸಿಕೊಂಡು ದೆವ್ವ ಕರೆಯಲು ಸಿದ್ಧವಾಗುವ ರೀತಿಯೇ

ರೋಮಾಂಚಕ. ಒಬ್ಬ ಮಾಂತ್ರಿಕನ ಎಲ್ಲ ಲಕ್ಷಣಗಳೂ ಅವನಲ್ಲಿವೆ. ಅದಕ್ಕೆ ಪೂರಕವಾಗಿ ವೃತ್ತಾಕಾರದ ಸಂಕೀರ್ಣ ರೂಪದ ಗೆರೆಗಳ ಮಂಡಲವಿದೆ. ಇದು ಒಂದು ದೈವದ ಆರಾಧನೆ ಬದಲು, ಪ್ರಕೃತಿಯ ಅಗೋಚರ ಶಕ್ತಿಯಮೇಲೆ ತರುವ ಒತ್ತಾಯ. ಅದನ್ನು ವಶಪಡಿಸಿಕೊಂಡು, ಬೇಕಾದ್ದನ್ನು ಪಡೆಯುವ ಅರ್ಥಾತ್ ಎಲ್ಲಾ ರೀತಿಯ ಸಮೃದ್ಧಿಯನ್ನು ಪಡೆಯುವ ಆಶಯ ಈ ಇಡೀ ಮಾಂತ್ರಿಕಾಚರಣೆಯ ಸಾಂಕೇತಿಕತೆ ಎನ್ನಬಹುದಾಗಿದೆ.

ಈ ರೀತಿಯಲ್ಲಿ ಕೋಗ್ತಿ, ಮಾಸ್ತಿ, ಚೌಡಿ, ಮಾರಿ ಹಾಗೂ ಜಟ್ಟಿಗರನ್ನು ಆರಾಧಿಸುವ ಗೊಂಡರು ಕೂಡ ಹಾಲಕ್ಕಿ ಒಕ್ಕಲಿಗರಂತೆಯೇ ತಿರುಪತಿ ತಿಮ್ಮಪ್ಪನನ್ನೇ ಇಂದು ಪ್ರಧಾನವಾಗಿ ಪೂಜಿಸುತ್ತಿದ್ದಾರೆ. ಎಷ್ಟರಮಟ್ಟಿಗೆ ಎಂದರೆ ಜೀವನದಲ್ಲಿ ಒಮ್ಮೆಯಾದರೂ ತಿರುಪತಿಯ ಯಾತ್ರೆ ಮಾಡಬೇಕೆಂಬುದು ಇವರಲ್ಲಿನ ಪ್ರತಿಯೊಬ್ಬರ ಆಶಯ. ಯಾವುದಕ್ಕೂ ತಿಮ್ಮಪ್ಪನೇ ಮೊದಲು ಅವನೇ ಅಂತಿಮ. ತಿಮ್ಮಪ್ಪನನ್ನು ಇವರು ಹಚ್ಚಿಕೊಂಡಿರುವ ರೀತಿ ನೋಡಬೇಕೆಂದರೆ, ಹರಕೆ ಹೊತ್ತುಕೊಂಡ ಗೊಂಡರು ತಿಮ್ಮಪ್ಪನ ಹೆಸರಿನಲ್ಲಿ ಮಾಡುವ 'ಹರಿಸೇವೆ'ಯನ್ನು ನೋಡಬೇಕು. ಮದುವೆಯನ್ನು ಕೂಡ ಅಷ್ಟು ಸಂಭ್ರಮದಿಂದ ಅವರು ಮಾಡುವುದಿಲ್ಲ. ಐವತ್ತು ಸಾವಿರದಿಂದ ಒಂದು ಲಕ್ಷ ರೂಪಾಯಿ ಖರ್ಚು ಮಾಡಿ ಹರಿಸೇವೆ ಆಚರಣೆಯನ್ನು ಮಾಡುತ್ತಾರೆ. ಇದಕ್ಕಾಗಿ ಸಾಲಗಾರರಾದವರೇ ಹೆಚ್ಚು. ಯಾಕೆಂದರೆ ಇವರ್ಯಾರು ಯಥೇಚ್ಛ ಹಣ ಖರ್ಚು ಮಾಡುವಷ್ಟು ಶ್ರೀಮಂತರಂತೂ ಅಲ್ಲ. ಒಂದು ರೀತಿಯಲ್ಲಿ ಪ್ರವಾಹದಂತೆ ಬಂದ ತಿಮ್ಮಪ್ಪನ ಅನುಕರಣೆ ಮತ್ತು ಸ್ವಪ್ರತಿಷ್ಠೆ ಇವರನ್ನು ಅಷ್ಟರ ಮಟ್ಟಿಗೆ ಪ್ರಭಾವಿಸಿವೆ.

ಮೂಲದಿಂದ ಇವರೂ ಶೈವಾರಾಧಕರಾಗಿದ್ದರು ಎಂಬುದಕ್ಕೆ ಅನೇಕ ಕುರುಹುಗಳಿವೆ. ಯಾಕೆಂದರೆ ಇವರ ಪ್ರಧಾನವಾದ ಹಬ್ಬವೇ ಶಿವರಾತ್ರಿ. ಶಿವರಾತ್ರಿಯಂದು ಇವರು ಕುಣಿಯುವ ಗೊಂಡರ ಕುಣಿತ ವಿಶೇಷವಾದದ್ದು. ನಂತರ 'ಹೋಳಿ ಹಳಬು' ನೃತ್ಯ ಮಾಡಿ ಶಿವನನ್ನು ಆರಾಧಿಸುತ್ತಾರೆ. ಆದರೆ ಇವರ ಮೇಲಾದ ತಿಮ್ಮಪ್ಪನ ಪ್ರಭಾವ ಉಳಿದ ಆಚರಣೆಗಳನ್ನು ಮಸಕು ಮಾಡಿದೆ. ಆದರೂ ತಮ್ಮ ಪರಂಪರೆಯ ಬಗ್ಗೆ ಅಪಾರ ಶ್ರದ್ಧೆ ಇರುವ ಗೊಂಡರು ಮೂಲ ದೈವಾಚರಣೆಗಳನ್ನು ಬಿಟ್ಟಿಲ್ಲ.

೨.೩. ಕಾಡ್ಯನ ಮನೆ

ಮೇರರನ್ನು ಹರಿಜನರೆಂದು ಕರೆಯುತ್ತಾರಾದರೂ ನನ್ನ ದೃಷ್ಟಿಯಲ್ಲಿ ಅವರು ಬುಡಕಟ್ಟಿನ ಎಲ್ಲ ಲಕ್ಷಣಗಳೂ ಇರುವ ಒಂದು ವಿಶಿಷ್ಟ ಸಮುದಾಯ. ಇವರ ಕಾಡ್ಯನ ಬನ ತುಂಬ ವಿಶಿಷ್ಟವಾದುದು. ಕಾಡ್ಯ ಎಂದರೆ ನಾಗ ಅಥವಾ ಸರ್ಪ

PDF created with pdfFactory Pro trial version www.pdffactory.com

ಎಂದು ಹೇಳುತ್ತಾರೆ. ನಮ್ಮ ದ್ರಾವಿಡ ಪರಂಪರೆಯಲ್ಲಿ ಕಡ್ಯ ಎಂಬ ಒಂದು ಪದವಿದ್ದು ಅದರ ಅರ್ಥ ಕುಂಭ ಅಥವಾ ಮಡಕೆ. ವಾಸ್ತವವಾಗಿ ಈ ಕಾಡ್ಯನ ಆರಾಧನೆ ಫಲೋತ್ಪತ್ತಿಯ ಸಂಕೇತಗಳಾದ ಕುಂಭ ಹಾಗೂ ಸರ್ಪ ಈ ಎರಡಕ್ಕೂ ಸಂಬಂಧಿಸಿದ್ದು. ಆದ್ದರಿಂದ ನಾನಿಲ್ಲಿ ಕಾಡ್ಯ ಎಂದರೆ ಏನು ಎಂಬಿತ್ಯಾದಿ ಭಾಷಾಶಾಸ್ತ್ರದ ಸಮಸ್ಯೆಗಳಿಗೆ ತಲೆಕೆಡಿಸಿಕೊಳ್ಳುವುದಿಲ್ಲ.

ಕಾಡ್ಯನಿಗೆ ಸಂಬಂಧಿಸಿದ ಜಾಗವನ್ನು ಕಾಡ್ಯನ ಮನೆ ಎಂದು ಕರೆಯಲಾಗುತ್ತದೆ. ಇದು ಸಾಮಾನ್ಯವಾಗಿ ಜನವಸತಿಯಿಂದ ದೂರ ಹಾಗೂ ಕಾಡಿನ ಒಳಭಾಗದಲ್ಲಿ ಇರುವ ಜಾಗ. ಬೃಹದಾಕಾರವಾಗಿ ಬೆಳೆದ ಹುತ್ತವೇ ಅಲ್ಲಿ ಆಕರ್ಷಣೆ. ಆ ಹುತ್ತದ ಮೇಲೆ ಚಪ್ಪರದ ರೀತಿಯ ಮಾಡು ಇರುತ್ತದೆ. ಆ ಮಾಡಿನ ಸುತ್ತಲಿರುವ ಮರಗಳ ಬುಡದಲ್ಲಿ ಅನೇಕಾನೇಕ ಕುಂಭಗಳ ರಾಶಿಯೇ ಬಿದ್ದಿರುತ್ತದೆ. ಪ್ರತಿಯೊಂದು ಕುಂಭದ ಹೊರಮೈ ಮೇಲೆ ಸರ್ಪಾಕೃತಿಯ ಸುಂದರ ಚಿತ್ರಗಳಿರುತ್ತವೆ. ಅಂಥ ಚಿತ್ರಗಳು ಒಂದಕ್ಕಿಂತ ಹೆಚ್ಚಿರುತ್ತವೆ. ಹೆಡೆ ಎತ್ತಿದ ನಾಗಗಳ ಚಿತ್ರಗಳೇ ಹೆಚ್ಚು. ಹುತ್ತದ ಬುಡದಲ್ಲಿ ಇನ್ನೂ ಶಿಥಿಲವಾಗದ, ಒಡೆಯದ ಇಂಥ ಅನೇಕ ಕುಂಬಗಳು ಬಿದ್ದಿರುತ್ತವೆ. ಈ ಕುಂಭಗಳನ್ನು ಅವರು 'ಕಲಶ' ಎಂದು ಕರೆಯುತ್ತಾರೆ.

ಈ ಕಾಡ್ಯನ ಮನೆಯ ಪರಿಸರದಲ್ಲಿ ಬೀಡು ಬಿಟ್ಟಿರುವ ಇತರ ದೈವಗಳಿಗೂ ಕಡಿಮೆ ಇಲ್ಲ. ಬ್ರಹ್ಮ, ಯಕ್ಷ, ಉಮ್ಮಳ್ತಿ, ಬೊಬ್ಬರ್ಯ, ಗಾಮ, ಜಟ್ಟಿಗ, ಕಾನು ಪಂಜುರ್ಲಿ, ಕಲ್ಲುಡ ಇತ್ಯಾದಿ ಅನೇಕ ದೇವರುಗಳ ಆವಾಸಸ್ಥಾನ ಅದು. ಆದರೆ ಇಲ್ಲೆಲ್ಲ ಅತ್ಯಂತ ಪ್ರಮುಖವಾದದ್ದೇ ಹುತ್ತ–ಕುಂಭದ ಕಲಶ–ನಾಗಪ್ಪ. ಕಾಡ್ಯ ಎಂದರೆ ಕಾಳಿಂಗಸರ್ಪ ಎಂದೂ ಕೆಲವರು ಅಭಿಪ್ರಾಯ ಪಡುತ್ತಾರೆ. ಅಂದ ಮೇಲೆ ಇದು ನಾಗಾರಾಧನೆಯ ಒಂದು ಸ್ಥಳ ಎಂಬುದರಲ್ಲಿ ಎರಡು ಮಾತಿಲ್ಲ. ಕರಾವಳಿಯಾದ್ಯಂತ ನಾಗಾರಾಧನೆ ಸಂಕೀರ್ಣ ರೂಪದಲ್ಲಿರುವ ಒಂದು ಆಚರಣೆ. ದಕ್ಷಿಣ ಕನ್ನಡ ಜಿಲ್ಲೆಯ ಹತ್ತಾರು ಕಡೆ ನಾವು 'ನಾಗಬನ'ಗಳನ್ನು ಕಾಣಬಹುದು. ಅಲ್ಲದೆ, ಈ ನಾಗಾರಾಧನೆ ಅತ್ಯಂತ ಪ್ರಾಚೀನವಾದ ಒಂದು ಆಚರಣೆ ಎಂಬ ಅಭಿಪ್ರಾಯಗಳೂ ಇವೆ. ಹೀಗಾಗಿ ಕರಾವಳಿ ಪ್ರದೇಶದಲ್ಲಿ ಮೇಲ್ವರ್ಗವೆನಿಸಿದ ಬ್ರಾಹ್ಮಣರಿಂದ ಹಿಡಿದು ಅಸ್ಪೃಶ್ಯರೆನಿಸಿದ ಮೇರರವರೆಗೆ ಈ ಆಚರಣೆ ಇದೆ. ಆದರೆ ಇದು ಮೂಲತಃ ಯಾರದು? ಎಂಬುದೇ ಇಲ್ಲಿಯ ಪ್ರಶ್ನೆ.

ಈ ಸಂದರ್ಭದಲ್ಲಿ ಆ ಪ್ರದೇಶದಲ್ಲಿ ಪ್ರಚಲಿತವಿರುವ ಒಂದು ಜನಪದ ಕಥೆಯನ್ನು ಅವಲೋಕಿಸಬೇಕಾಗುತ್ತದೆ. "ಹೊನ್ನಿ ಎಂಬ ಮೇರರ ಬಾಲೆಯೊಬ್ಬಳಿರುತ್ತಾಳೆ. ದೊಡ್ಡವಳಾಗಿ ಮೈನೆರೆಯುತ್ತಾಳೆ. ಗಾಳಿದೇವರ ಸೋಂಕಿನಿಂದ ಬಸುರಿಯೂ ಆಗುತ್ತಾಳೆ. ಮುಂದೆ ನವಮಾಸದ ತುಂಬಿದ ಬಸುರಿಯೂ ಆಗುತ್ತಾಳೆ. ಆಗ

ಬರಗಾಲ ಬರುತ್ತದೆ. ಅನ್ನ ಬಟ್ಟೆಬರೆಗಳಿಗೆ ಪರದಾಟ ಉಂಟಾಗುತ್ತದೆ. ಹೊನ್ನಿ ತನ್ನ ಒಡೆಯರ ಮನೆಗೆ ಹೋಗಿ ತನ್ನ ಸಂಕಷ್ಟ ತೋಡಿಕೊಳ್ಳುತ್ತಾಳೆ. ಒಡೆಯರಿಗೆ ಮನಕರಗುತ್ತದೆ. ಅವಳಿಗೆ ಒಂದಿಷ್ಟು ಉಂಬಳಿ ಕೊಡುತ್ತಾರೆ. ಹೊನ್ನಿ ಸಂತೋಷದಿಂದ ಭತ್ತ ತೆಗೆದುಕೊಂಡು ಮನೆಗೆ ಬರುತ್ತಾಳೆ. ಆಗ ಮಾಯದ ಮಳೆಗಾಳಿ ಬೀಸುತ್ತದೆ. ಎಲ್ಲಿ ನೋಡಿದರೂ ನೀರೇ ನೀರು. ತುಂಬಿ ಹರಿಯುವ ಹಳ್ಳ ಹೊನ್ನಿಗೆ ಅಡ್ಡಲಾಗುತ್ತದೆ. ಆಗ ಹೊನ್ನಿ ನಾನು ಒಂದೇ ತಂದೆ ತಾಯಿಯರಿಗೆ ಹುಟ್ಟಿದ ಮಗಳಾದರೆ ಮಾಯದ ಮಳೆಗಾಳಿ ನಿಲ್ಲಬೇಕು ಎಂದು ಕೇಳಿಕೊಳ್ಳುತ್ತಾಳೆ. ಮಳೆಗಾಳಿ ನಿಲ್ಲುತ್ತದೆ. ಮನೆಗೆ ಬಂದ ಹೊನ್ನಿ ಭತ್ತ ಕುಟ್ಟಿ, ಅಕ್ಕಿ ಮಾಡಿ, ಗಂಜಿ ಬೇಯಿಸುತ್ತಾಳೆ. ಅಂಗಳದಲ್ಲಿ ಏಳು ಹೊಂಡ ಮಾಡಿ, ಗೆರೆಟೆಯಿಂದ ತಿಳಿಗಂಜಿ ಎರೆಯುತ್ತಾಳೆ. ಇದನ್ನು ಏಳು ಮಕ್ಕಳು ಉಣ್ಣುತ್ತಾರೆ. ಹೊನ್ನಿಗೆ ಗಂಜಿ ಮಿಗಲಿಲ್ಲ. ಆಗ ಅವಳು ಆ ಏಳು ಹೊಂಡಗಳನ್ನು ನೆಕ್ಕುತ್ತಾಳೆ. ಆದರೂ ಹಸಿವು ಇಂಗುವುದಿಲ್ಲ. ಮತ್ತೆ ಹೊನ್ನು ಏನಾದರೂ ದುಡಿದು ತರಬೇಕೆಂದು ಕಮ್ಮಾರನ ಮನೆಗೆ ಹೋಗುತ್ತಾಳೆ. ಒಂದೇ ಕಾಸಿಗೆ ಒಂದೇ ಹೊಡೆತಕ್ಕೆ ಏಳು ಜೋಡು ಅಗೆವ ಸಲಕರಣೆಯೊಂದನ್ನು ಮಾಡಬೇಕೆಂದು ಮಾಡಿಕೊಡಬೇಕೆಂದು ಕೇಳುತ್ತಾಳೆ. ಆತ ಅವುಗಳನ್ನು ಮಾಡಿಕೊಡುತ್ತಾನೆ. ಅವುಗಳನ್ನು ತೆಗೆದುಕೊಂಡು ಕಾಡು ಗೆಣಸನ್ನು ಹುಡುಕುತ್ತಾ ಮೂಡಣ ದಿಕ್ಕಿಗೆ ಹೋಗುತ್ತಾಳೆ. ಕಾಡು ಗೆಣಸಿನ ಬಳ್ಳಿಗಳು ಕಂಡುಬರುತ್ತವೆ. ಅವಳು ಹಾರೆ ಹಾಕಿ ಮಣ್ಣು ಕಡಿಯುತ್ತಾಳೆ. ಒಂದು ಹಾರೆ ಮಣ್ಣು ಕಡಿದಾಗ ಚಿನ್ನದ ಕಲಶ, ಎರಡನೆಯ ಹಾರೆಗೆ ತಾಮ್ರದ ಕಲಶ, ಮೂರನೆಯ ಹಾರೆಗೆ ಮಣ್ಣಿನ ಕಲಶ ಹೊರಬರುತ್ತದೆ. ಹೊನ್ನಿಗೆ ಆಶ್ಚರ್ಯವಾಗುತ್ತದೆ. ಆಕೆ ಓಡಿ ಹೋಗಿ ಒಡೆಯರಿಗೆ ವಿಷಯ ತಿಳಿಸುತ್ತಾಳೆ. ಒಡೆಯರು ಅಡಿಗಳ ಮನೆಗೆ ಹೋಗಿ ತಿಳಿಸುವಂತೆ ಹೇಳುತ್ತಾರೆ. ಆಗ ಏನಾಯಿತು? ಚಿನ್ನದ ಕಲಶವನ್ನು ಅಡಿಗಳು ತೆಗೆದುಕೊಂಡರು. ತಾಮ್ರದ ಕಳಶವನ್ನು ಒಡೆಯರು ತೆಗೆದುಕೊಂಡರು. ಮಣ್ಣಿನ ಕಲಶವನ್ನು ತನಗೆ ಇರಲೆಂದು ಹೊನ್ನಿ ಇರಿಸಿಕೊಂಡಳು.

ಅಡಿಗಳು ಚಿನ್ನದ ಕಳಶದ ನಾಗನನ್ನು ಅಶ್ವತ್ಥಕಟ್ಟೆಯಲ್ಲಿ ಪ್ರತಿಷ್ಠಾಪಿಸಿದರು. ಒಡೆಯರು ತಾಮ್ರದ ಕಳಶದ ನಾಗನನ್ನು ತಮ್ಮ ಮನೆಯ ಮುಂದೆ ಪ್ರತಿಷ್ಠಾಪಿಸಿದರು. ಹೊನ್ನಿ ಮಣ್ಣಿನ ಕಲಶದ ನಾಗನನ್ನು ಗದ್ದೆಯಲ್ಲಿ ಇಟ್ಟಳು. ಮೊದಲನೆಯ ಅಡಿಗಳ ನಾಗನಿಗೆ ನಾಗಮಂಡಲದ ಸೇವೆಯೂ, ಒಡೆಯರ ನಾಗನಿಗೆ ಪಾಣಾರಾಟದ ಸೇವೆಯೂ, ಹೊನ್ನಿಯ ನಾಗನಿಗೆ ಕಾಡ್ಯನಾಟದ ಸೇವೆಯೂ ಆರಂಭವಾಯಿತು."

ಈ ಕಥೆಯಲ್ಲಿ ನಮಗೆ ಅನೇಕ ಮಾಹಿತಿಗಳು ದೊರೆಯುತ್ತವೆ. ನಾಗಾರಾಧನೆಯ ವಿಕಾಸದ ಬಗ್ಗೆ ಅನೇಕ ಸುಳಿವುಗಳು ಇಲ್ಲಿ ಸಿಗುತ್ತವೆ. ಸ್ವತಃ ಹುತ್ತವೇ ಸೃಷ್ಟಿಗೆ

PDF created with pdfFactory Pro trial version www.pdffactory.com

ಕಾರಣವಾದ ಯೋನಿಯ ಸಂಕೇತ. ಮಣ್ಣಿನ ಕುಂಭರೂಪದ ಕಲಶವಂತೂ ಗರ್ಭಧರಿಸಿದ ಫಲವತಿಯಾದ ಹೆಣ್ಣಿನ ಸಂಕೇತ. ಅದರ ಮೇಲಣ ನಾಗ ಸೃಷ್ಟಿಗೆ ಕಾರಣವಾದ ಗಂಡಿನ ಶಕ್ತಿಯ ಸಂಕೇತ. ಹೀಗೆ, ಹುತ್ತ ಮತ್ತು ಕಳಶದಿಂದ ಆರಂಭವಾದ ನಾಗಪೂಜೆ ಮನೆ ಅಂಗಳದ 'ದೇವರ ಕಟ್ಟೆ'ಗೆ ಬಂದದ್ದು ಎರಡನೇ ಹಂತ. ಅಂದರೆ ಅಲ್ಲಿ ಹುತ್ತದ ಬುಡದಲ್ಲಿಟ್ಟ ಮಣ್ಣಿನ ಕಳಶದ ಮೈಮೇಲೆ ಕೆತ್ತಿದ ನಾಗ ತಾಮ್ರದ ರೂಪಕ್ಕೆ ಪರಿವರ್ತಿತವಾಗುತ್ತಾನೆ. ನಂತರದ ಹಂತ ಚಿನ್ನದ ನಾಗಪ್ಪ. ಬಹುಶಃ ಆರಂಭಕ್ಕೆ ಅಸ್ಪೃಶ್ಯರ ಮತ್ತು ಕಾಡಿನ ನಡುವೆ ಕಷ್ಟಪಟ್ಟು ಕೆಲಸ ಮಾಡುತ್ತಿದ್ದ ಶ್ರಮಜೀವಿಗಳಲ್ಲಿ ಮಾತ್ರ ನಾಗಾರಾಧನೆ ಇದ್ದಂತೆ ಕಾಣುತ್ತದೆ. ಯಾಕೆಂದರೆ ಕಾಳಿಂಗ ಸರ್ಪ ದಟ್ಟಾರಣ್ಯಗಳ ಕೆಲವೇ ಕೆಲವು ಕಾಡುಗಳಲ್ಲಿ ಮಾತ್ರ ಕಂಡು ಬರುವ ಒಂದು ಅಪರೂಪದ ಜೀವಿ.

ಈ ಕಥೆ ಆರಾಧನಾ ರೂಪಗಳಲ್ಲಿ ಆದ ಬದಲಾವಣೆಯ ಹಂತಗಳನ್ನು ಹೇಳುತ್ತದೆ. ಮೊದಲಿಗೆ ಕಾಡ್ಯನಾಟವಾಗಿ ಮೇರರಲ್ಲಿ ಇದ್ದದ್ದು, ನಂತರ ಪಾಣಾರರ ಆಟವಾಗಿ(ಅಂದರೆ ಭೂತಕೋಲದ ಒಂದು ಪ್ರಕಾರವಾಗಿ) ಭೂ ಮಾಲೀಕರ ಹಂತಕ್ಕೆ ಮುಟ್ಟುತ್ತದೆ. ನಂತರ ಇದೀಗ, ದಕ್ಷಿಣ ಕನ್ನಡದ ಎಲ್ಲೆಲ್ಲೂ ನಾವು ನೋಡುತ್ತಿರುವಂತೆ ಅದ್ಧೂರಿ ಮತ್ತು ವರ್ಣರಂಜಿತ ನಾಗಮಂಡಲ ಆಚರಣೆಯಾಗಿ ಬ್ರಾಹ್ಮಣ ಸಮುದಾಯಗಳಲ್ಲಿ ರೂಢಿಯಲ್ಲಿದೆ. ಇಷ್ಟಾದರೂ ನಾಗಮಂಡಲದ ಆರಾಧನೆಯ ಅನೇಕ ವಿಧಿಗಳು ಹಾಗೂ ಮಂಡಲ ಬರೆಯುವ ಕ್ರಮಗಳು ಮೂಲದ ಮೇರರ ಕಾಡ್ಯನಾಟದಿಂದ ಪ್ರೇರಿತವಾಗಿ, ಈಗಿನ ರೂಪದಲ್ಲಿ ಕಾಣಿಸಿಕೊಂಡಿದೆ ಎಂದರೆ ತಪ್ಪೇನಿಲ್ಲ.

ಗೆಡ್ಡೆಗೆಣಸಿನ ಆಹಾರಕ್ಕಾಗಿ ಹುಡುಕುತ್ತಿದ್ದ ಹೊನ್ನಿಗೆ ಮೂರು ರೀತಿಯ ನಾಗ ಕಳಶಗಳು ಸಿಕ್ಕಿದ ಕಥೆಯ ಹಿಂದಿನ ಆಶಯವೇ ಅದು ಮೂಲತಃ ಮೇರರ ಮೂಲ ಆಚರಣೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಆ ದೃಷ್ಟಿಯಲ್ಲಿ ಆ ಮೂರು ಕಳಶಗಳು ಹೊನ್ನಿಯ ಸ್ವತ್ತು. ಅದನ್ನು ಬಳುವಳಿಯಾಗಿ ಪಡೆದವರು ಒಡೆಯರು ಮತ್ತು ಅಡಿಗಳು. ಆದ್ದರಿಂದ ಇಡೀ ನಾಗಾರಾಧನೆ ಮೂಲದಲ್ಲಿ ಕೆಳವರ್ಗದಲ್ಲಿ ಮಾತ್ರ ಪ್ರಚಲಿತವಿದ್ದು ಈಗಿರುವ ಅನೇಕ ರೂಢಿಗಳು ಅವರಿಂದ ಬಂದ ಬಳುವಳಿಯಾಗಿವೆ ಎಂದು ಹೇಳಬಹುದಾಗಿದೆ.

ಇನ್ನೂ ಕಾಡ್ಯನಾಟದ ಆಚರಣಾ ವಿಧಿಯನ್ನು ನೋಡೋಣ. ಇಲ್ಲಿಯೂ ಮಂಡಲ ಚಿತ್ತಾರಕ್ಕೆ ಪ್ರಮುಖ ಪ್ರಾಶಸ್ತ್ಯ. ಕಾಡ್ಯನಾಟದ ಸಂದರ್ಭದಲ್ಲಿ ಹಾಕಲಾದ ಬೈದ್ಯರ ಹಂದರದೊಳಗೆ ಸುಮಾರು ೧೦ ಅಡಿ ವ್ಯಾಸದ ವೃತ್ತಾಕಾರದ ಮಂಡಲವನ್ನು ಪಂಚವರ್ಣದ ಹುಂಡಿಯಿಂದ ಬರೆಯಲಾಗುತ್ತದೆ. ಈ ಮಂಡಲ ರಚನೆ ಬೈದ್ಯನ

ನೇತೃತ್ವದಲ್ಲಿ ಅವನ ಸಹಯೋಗಿಗಳಿಂದ ಒಂದು ಸಾಮೂಹಿಕ ಪ್ರಯತ್ನದ ಮೂಲಕ ರೂಪುಗೊಳ್ಳುತ್ತದೆ. ಕಾಡ್ಯನಾಟದ ಆಚರಣೆಯ ಎರಡನೆಯ ಹಾಗೂ ಮೂರನೆಯ ರಾತ್ರಿ ಈ ಮಂಡಲವನ್ನು ಬರೆಯುತ್ತಾರೆ. ಮೊದಲನೆಯ ದಿನ ಚಿತ್ತಾರಗಳೆಲ್ಲವೂ ಕೇಂದ್ರ ಕಂಬದ ಕಡೆಗೆ ಮುಖ ಮಾಡಿದ್ದರೆ ಎರಡನೆಯದಿನ ಎಲ್ಲವೂ ಮಂಡಲದ ಪರಿಧಿಗೆ ಅಭಿಮುಖವಾಗಿರುತ್ತವೆ. ಮಂಡಲಕ್ಕೆ ಹಳದಿ, ಕೆಂಪು, ಕಪ್ಪು, ಹಸುರು ಹಾಗೂ ಬಿಳಿ ಬಣ್ಣದ ಹುಡಿಗಳನ್ನು ಅವರೇ ತಯಾರಿಸಿಕೊಳ್ಳುತ್ತಾರೆ. ಕಾಡ್ಯನಾಟದ ಮಂಡಲದೊಳಗೆ ಅವರು ತಮ್ಮ ಬದುಕನ್ನು ಪ್ರಭಾವಿಸಿದ ಸೂರ್ಯ, ಚಂದ್ರ, ನಕ್ಷತ್ರಗಳು, ಕಮಲದ ಹೂ, ಹೊನ್ನರುಳಿ ಮರ, ಕಾಗೆ, ಗೋವಕ್ಕಿ, ನವಿಲು, ಒನಕೆ, ಒರಳು, ಗೆರಸೆ, ಚೆನ್ನೆಮಣೆ, ದೋಣಿ, ನಾಗ(ಹಳದಿ ಬಣ್ಣ) ಕಾಡ್ಯ(ಕಪ್ಪು ಬಣ್ಣ) ಇತ್ಯಾದಿ ಚಿತ್ರಗಳನ್ನು ಬರೆದಿರುತ್ತಾರೆ. ಮಂಡಲದ ರಚನೆ ಹಾಗೂ ಆಚರಣೆಯ ಸಂದರ್ಭದಲ್ಲಿ ಕಲಶಗಳನ್ನು ಸ್ಥಾಪನೆ ಮಾಡುವ ಬಟ್ಟೆ ಎಲ್ಲವು ವೃತ್ತಾಕಾರದಲ್ಲಿಯೇ ಇರುತ್ತವೆ. ಹೀಗೆ ಮಂಡಲವನ್ನು ಬರೆದು ಅವರ ಕೇಂದ್ರದಲ್ಲಿರುವ ಮುಹೂರ್ತ ಕಂಬಕ್ಕೆ ತಾಗಿ ಕಲಶವನ್ನು ಇರಿಸಲಾಗುತ್ತದೆ. ಉಳಿದ ನಾಲ್ಕನ್ನು ಮಂಡಲ ಚಿತ್ತಾರದೊಳಗೆ ಬೈದ್ಯ ಸ್ಥಾಪಿಸುತ್ತಾನೆ. ಮಂಡಲದೊಳಗೆ ತಾವರೆ ಹೂವಿನ ಚಿತ್ರ ಬರೆಯಲಾಗುತ್ತದೆ. ಅದರ ನಡುವೆ ಕಲಶ ಹೊತ್ತ ಹೆಣ್ಣೊಬ್ಬಳನ್ನು ನಿಲ್ಲಿಸಿ ಆ ಕಲಶದ ಮೇಲೆ ಬೈದ್ಯನು ಅಕ್ಕಿ ಕಾಳನ್ನು ಎರಚುತ್ತಾನೆ. ಮಂಡಲದಲ್ಲಿ ಪ್ರಕೃತಿ ದೇವತೆಗಳ ಜೊತೆಗೆ ಕೃಷಿಸಂಬಂಧಿ ವಸ್ತುಗಳ ಚಿತ್ರಗಳನ್ನು ಬಿಡಿಸಲಾಗುತ್ತದೆ.

ಕಾಡ್ಯನಾಟದ ಎಲ್ಲ ರಾತ್ರಿಗಳಲ್ಲಿ ಅನೇಕ ವಿಧವಾದ ಕೋಲಗಳು ಜರುಗುತ್ತವೆ. ವಿಧಿವತ್ತಾದ ಅನೇಕ ಸಂಕೀರ್ಣವಾದ ಆಚರಣೆಗಳು ನೆರವೇರುತ್ತವೆ. ವಿಧವಿಧವಾದ ಹಗರಣಗಳ ಮೂಲಕ ನೆರೆದ ಜನರಿಗೆ ಮನರಂಜನೆ ಒದಗಿಸಲಾಗುತ್ತದೆ.

ಕಾಡ್ಯನಾಟವನ್ನು ಅಧ್ಯಯನ ಮಾಡಿರುವ ಶ್ರೀ ಎ.ವಿ. ನಾವಡ ದಂಪತಿಗಳ ಅಭಿಪ್ರಾಯ ಹೀಗಿದೆ–"ಕರಾವಳಿಯ ಉಪಾಸನಾ ಪಂಥದ ಮೂಲ ನಾಗನವರೆಗೆ ಇದು ಹೋಗುತ್ತದೆ. ನಾಗ ಬೆರ್ಮರ ಆರಾಧನೆ ತುಳುನಾಡಿನ ಎಲ್ಲೆಡೆಯೂ ಕಂಡು ಬರುತ್ತದೆ. ಈ ನಾಗವೇ ಬರುಬರುತ್ತಾ ಇತರ ದೇವತೆಗಳೊಂದಿಗೆ ಸಮಾವೇಶಗೊಳ್ಳುತ್ತಾನೆ. ಅನಂತಪದ್ಮನಾಭ, ಅನಂತೇಶ್ವರ, ಶಕ್ತಿ, ಗಣಪತಿ, ಯಕ್ಷ, ಬೊಬ್ಬರ್ಯರೊಂದಿಗೆ ನಾಗನ ಸಂಬಂಧವಿರುವುದನ್ನು ಗಮನಿಸಬಹುದು. ಇಲ್ಲಿಯ ನಾಡವರು ನಾಗನನ್ನು ಸ್ವಾಮಿ ಎಂದೂ, ಮೇರರು ಕಾಡ್ಯನೆಂದೂ ಪರಿಭಾವಿಸುತ್ತಾರೆ. ನಾಗಮಂಡಲ, ಬ್ರಹ್ಮಮಂಡಲ, ಪಾಣಾರಾಟ ಇತ್ಯಾದಿ ಆಚರಣೆಗಳೂ ಇಲ್ಲಿವೆ. ಹೀಗೆ ಕರಾವಳಿಯಲ್ಲಿ ನಾಗವು ಫಲೀಕರಣ ದೇವತೆಯಾಗಿ ಆರಾಧನೆಗೊಳ್ಳುತ್ತದೆ. ನಾಗ ಮತ್ತು ಯಕ್ಷ(ಯಕ್ಷಿ)ರಿಗೂ ಪರಸ್ಪರ ಸಂಬಂಧವಿದೆ. ಇವರಿಬ್ಬರೂ ಒಂದೇ

PDF created with pdfFactory Pro trial version www.pdffactory.com

ವರ್ಗಕ್ಕೆ ಸೇರಿದ ಫಲೋತ್ಪತ್ತಿ ಹಾಗೂ 'ನೀರಿನ' ಆಧಿದೇವತೆಯರು. ಪೂರ್ಣ ಕುಂಭ, ಕಲಶ ಮೊದಲಾದ ಕಲ್ಪನೆಗಳು ಈ ಯಕ್ಷಾರಾಧನೆಗೆ ಸಂಬಂಧಿಸಿದವು. ಕಾಡ್ಯನಾಟದಲ್ಲಿಯೂ ಈ ನಾಗಯಕ್ಷ ಆರಾಧನೆಯ ಬೀಜಗಳಿವೆ"[2] ಎಂದು ಹೇಳುತ್ತಾರೆ.

ನನಗಿಲ್ಲಿ ಮುಖ್ಯವಾಗುವುದು ಅವರ ಮಂಡಲದಲ್ಲಿ ಬಿಡಿಸಿದ ಪ್ರಕೃತಿ ದೈವಗಳು (ಸೂರ್ಯ, ಚಂದ್ರ, ನಕ್ಷತ್ರ) ಹಾಗೂ ಅವರ ಕೃಷಿ ಸಂಬಂಧದ ವಿವಿಧ ವಸ್ತುಗಳು. ಅಂದರೆ ನಿಸರ್ಗಾರಾಧನೆಯಿಂದ ಕೃಷಿಸಂಬಂಧಿ ಆರಾಧನೆಯವರೆಗಿನ ಅವರ ಪ್ರಾಚೀನ ಆಸಕ್ತಿಯನ್ನು ಇವು ಕಾಣಿಸುವಲ್ಲಿ ಸಫಲವಾಗಿದೆ. ಪ್ರಾಣಿ ಪಕ್ಷಿಗಳ ಚಿತ್ರಗಳೂ ಅಲ್ಲಿ ಬರುವುದರಿಂದ ಇಡೀ ನಿಸರ್ಗವನ್ನು ತಮ್ಮ ಆರಾಧನೆಯ ಕೇಂದ್ರ ಬಿಂದುವನ್ನಾಗಿ ಮಾಡಿಕೊಂಡಿದ್ದು ಅವರಿಗೆ ಆ ನಿಸರ್ಗದ ಬಗ್ಗೆ ಇರುವ ತೀವ್ರ ಬದ್ಧತೆಯನ್ನು ತೋರುತ್ತದೆ. ಉಳಿದಂತೆ ಕುಂಭ, ಕಲಶ, ನಾಗ, ಹುತ್ತ ಇವೆಲ್ಲ ಫಲಸಮೃದ್ಧಿಗಾಗಿ ಒತ್ತಾಯಿಸುವ ಮಾಂತ್ರಿಕ ಆಚರಣೆಗಳು ಎನ್ನುವುದೇ ಲೇಸು.

೨.೪. ಕಾವೆಲಿಯಕುಚ್ಚಿ ಕಾಡು

ಕೊಡಗಿನ ವಿರಾಜಪೇಟೆ ತಾಲೂಕಿನ ತುತ್ತತುದಿಯ ದಕ್ಷಿಣದಲ್ಲಿರುವ ಪ್ರದೇಶವನ್ನು 'ಕುಟ್ಟ' ಎಂದು ಕರೆಯುತ್ತಾರೆ. ಈ ಪ್ರದೇಶದ ಪ್ರಮುಖ ಜನವರ್ಗವೆಂದರೆ ಫಣಿಯರು. ಇವರ ಜೊತೆಗೆ ಯರವರು ಮತ್ತು ಕುಡಿಯರೂ ಅಲ್ಲಲ್ಲಿ ಇದ್ದಾರೆ. ಈಗ ಸದ್ಯಕ್ಕೆ ಫಣಿಯರ ದೇವರಿಗೆ ಸಂಬಂಧಿಸಿದ ಎರಡು ಹಬ್ಬಗಳನ್ನು ಪರಿಶೀಲಿಸಬಹುದು. ಈ ಹಬ್ಬಗಳ ವಿವರಣೆಯನ್ನು ಬೆಣಗಾಲಿನ ಆರ್. ನಾಗೇಶ್ ದಾಖಲಿಸಿದ್ದಾರೆ. ಆ ಹಬ್ಬಗಳ ವಿವರ ಹೀಗಿದೆ: "ಅವರ ಒಂದು ಹಬ್ಬದ ಹೆಸರು 'ಕುಳಿಯಂದರೆ.'(ಇವರ ಭಾಷೆ ಮಲೆಯಾಳಿಗೆ ಹತ್ತಿರದ ಒಂದು ಉಪಭಾಷೆ ಎಂಬುದನ್ನು ನೆನಪಿಡಬೇಕು) ಕುಳಿಯೆಂದರೆ ಅಂದರೆ 'ದೇವರಾಟ' ಎಂದು ಅರ್ಥ. ದೇವರುಗಳು ಜನರ ಮೈಮೇಲೆ ಬಂದು ಕುಣಿಯುವುದೇ ಈ ಹಬ್ಬದ ವಿಶೇಷತೆ. ಯಾವುದೇ ದೇವರಾಗಲಿ ನಮ್ಮ ದುಡಿಯ ಸದ್ದಿಗೆ ಕುಣಿಯಲೇಬೇಕು ಎಂದು ಅವರು ಹೇಳುತ್ತಾರೆ. ಈ ಹಬ್ಬವನ್ನು ಏಳು ದಿವಸಗಳ ಕಾಲ ಆಚರಿಸುತ್ತಾರೆ. ಫಣಿಯರು ಆಚರಿಸುವ ಅತಿ ದೊಡ್ಡ ಹಾಗೂ ಅತಿ ದೀರ್ಘ ಹಬ್ಬವೆಂದರೆ ಈ ಕುಳಿಯಂದರೆ. ದೇವರಿಗೆ ಊಟವನ್ನು ಕೊಡುವುದಕ್ಕಾಗಿ ಈ ಹಬ್ಬವನ್ನು ಆಚರಿಸುತ್ತಿದ್ದೇವೆ ಎಂಬುದು ಅವರ ನಂಬಿಕೆ. ಭತ್ತದ ಹುಲ್ಲಿನಲ್ಲಿ ಮೂಡೆಕಟ್ಟೆ ಇಟ್ಟಿರುವ ಭತ್ತವನ್ನು ಇಳಿಸಿಕೊಳ್ಳುತ್ತಾರೆ. ಜಿಮ್ಮಿಯ ಮೈಮೇಲೆ ದೇವರು ಬಂದು ಆ ಮೂಡೆಯಲ್ಲಿರುವ ಭತ್ತವನ್ನು ಕತ್ತಿಯಿಂದ ನಾಲ್ಕು ಭಾಗ ಮಾಡುತ್ತದೆ. ಈ ನಾಲ್ಕು ಭಾಗದ ಭತ್ತವನ್ನು ಒಂದೊಂದಕ್ಕೆ ಉಪಯೋಗಿಸುತ್ತಾರೆ. ಅವಲಕ್ಕಿಗೆ, ಅನ್ನಕ್ಕೆ, ಹಿಟ್ಟಿಗೆ ಮತ್ತು ಅಕ್ಕಿಗೆ ಎಂದು ಅದನ್ನು

ಬಳಸುತ್ತಾರೆ. ಎರಡನೆಯ ದಿನ ಮಿಂದು ಮಡಿಯುಟ್ಟು ಅಕ್ಕಿಯನ್ನು ಕುಟ್ಟಬೇಕು. ಅವಲಕ್ಕಿ ಕುಟ್ಟುವಾಗ ಬಟ್ಟೆಯನ್ನು ಧರಿಸುವಂತಿಲ್ಲ. ಕಾಡಿನ ಸೊಪ್ಪನ್ನು ಮೈಗೆ ಕಟ್ಟಿಕೊಂಡು ಬಾಯಿಗೆ ಬಟ್ಟೆಯನ್ನು ಕಟ್ಟಿಕೊಳ್ಳುತ್ತಾರೆ. ಹೆಂಗಸರು ಉಪವಾಸವಿದ್ದು ಬಾಯಿಗೆ ಬಟ್ಟೆ ಕಟ್ಟಿಕೊಂಡು, ಅದನ್ನು ಕೇರಿ ಸೋಸಿ, ಶುದ್ಧಗೊಳಿಸಬೇಕು. ಇದಾದ ನಂತರ ಅವಲಕ್ಕಿಯನ್ನು ದೇವರಿಗೆ ವಿಶೇಷ ನೈವೇದ್ಯ ಮಾಡಲು ಬಳಸಲಾಗುವುದು. ಮೂರನೇ ದಿವಸ ಒಂದು ದೊಡ್ಡ ಮರದ ಕೆಳಗೆ ಚಪ್ಪರ ಹಾಕುತ್ತಾರೆ. ಚಪ್ಪರದ ಕೆಳಗೆ ಒಂದೊಂದೇ ದೇವರು ಬಂದು ಕುಣಿಯಲು ಪ್ರಾರಂಭ ಮಾಡುತ್ತವೆ. ದೇವರು ಬಂದವರ ಜೊತೆಯಲ್ಲಿ ಬೇರೆ ಮನುಷ್ಯರೂ ಕುಣಿಯಲು ಪ್ರಾರಂಭಿಸುತ್ತಾರೆ. ಇದು ಉಳಿದ ನಾಲ್ಕು ದಿನಗಳ ಕಾಲವೂ ಸತತವಾಗಿ ಮುಂದುವರೆಯುತ್ತದೆ. ತಾವೂ ಕುಣಿದು ದೇವರನ್ನು ಕುಣಿಸಿ ತೃಪ್ತಿ ಪಡುತ್ತಾರೆ. ಕೊನೆಯ ದಿವಸ 'ಪನಾಲಿ' ಎಂಬ ವ್ಯಕ್ತಿ ಇಪ್ಪತ್ತನಾಲ್ಕು ಗಂಟೆಯೂ ಮೇಲೇಳದಂತೆ ಕುಳಿತು ಹಾಡು ಹೇಳಬೇಕು. ಆಗ ಅವನ ಮೈಮೇಲೆ ದೇವರು ಬಂದು 'ಇಡೀ ಬೆಟ್ಟಕ್ಕೆ ಬೆಂಕಿ ಬಿದ್ದು ಬೆಟ್ಟ ಹತ್ತಿ ಉರಿಯುತ್ತಿದ್ದರೂ ನಿಮ್ಮ ಕಾಲಿನ ಚರ್ಮವು ಸುಡುವುದಿಲ್ಲ. ಆ ರೀತಿ ನಿಮ್ಮನ್ನು ಸಲಹುತ್ತೇನೆ' ಎಂದು ಮಾತು ಕೊಟ್ಟಾಗ ಎಲ್ಲರಿಗೂ ತೃಪ್ತಿಯಾಗುತ್ತದೆ. ಆ ದಿನ ಮನೆ ಮನೆಯಿಂದ ಸಂಗ್ರಹಗೊಳಿಸಿದ ವಸ್ತುಗಳಿಂದ ಅಡುಗೆ ಮಾಡಿ ಏಳು ದಿವಸಗಳ ಕಾರ್ಯಕ್ರಮ ಮುಗಿಸುತ್ತಾರೆ.

ಎರಡನೇ ಹಬ್ಬದ ಸಾರಾಂಶ ಹೀಗಿದೆ–"ಈ ಹಬ್ಬದ ಹೆಸರು 'ತೈಯಕೋಳು' ಎಂದು. ಈ ಹಬ್ಬದಲ್ಲಿ ಇಡೀ ಕುಟುಂಬದವರೆಲ್ಲರೂ ಸೇರಿ ಅವರ ಕುಟುಂಬದಲ್ಲಿ ಯಾವ ಹುಡುಗನಿಗೆ 'ಮೈಹಿಡಿಯುವುದಿಲ್ಲವೋ'–ಅಂದರೆ ಮೈ ಮೇಲೆ ದೇವರು ಬರುವುದಿಲ್ಲವೋ–ಅವನಿಗೆ ಮೈಹಿಡಿಸುವ ವಿಶೇಷ ಕಾರ್ಯಕ್ರಮ ಹಾಕಿಕೊಳ್ಳುತ್ತಾರೆ. ಆ ದಿನ ಎಲ್ಲರೂ ಸ್ನಾನ ಮಾಡಿ ಬಟ್ಟೆ ಧರಿಸಿ ಮನೆಯ ಮುಂದಿನ ಜಾಗದಲ್ಲಿ ಬಾಳೆಯ ಮರದ ಪಟ್ಟಿಯಿಂದ ಮಂಟಪವನ್ನು ಕಟ್ಟುತ್ತಾರೆ. ಆ ಮಂಟಪದ ಸುತ್ತ ತೆಂಗಿನಕಾಯನ್ನು ಇಟ್ಟು, ಅಕ್ಕಿ ಎಲೆ, ಅಡಿಕೆ ಇಟ್ಟು ಪೂಜಿಸುತ್ತಾರೆ. ಅವರಲ್ಲಿ ಒಬ್ಬ ವ್ಯಕ್ತಿ ಬ್ರಾಹ್ಮಣ ಪುರೋಹಿತನ ವೇಷ ಹಾಕಿ ಬಾಳೆಯ ಪಟ್ಟಿಯೊಂದನ್ನು ಜನಿವಾರದ ರೀತಿಯಲ್ಲಿ ಹಾಕಿಕೊಳ್ಳುತ್ತಾನೆ. ಪೂಜೆ ನಡೆಯುತ್ತಿರುವ ಮಧ್ಯದಲ್ಲಿ ಬ್ರಾಹ್ಮಣ ಪೂಜಾರಿಯಾಗಿ ವೇಷ ಹಾಕಿದ್ದವನು ಭೇದಿ ಪ್ರಾರಂಭವಾದಂತೆ ನಟಿಸಿ ಓಡಿ ಹೋಗುತ್ತಾನೆ. ನಂತರ ಪೂಜೆಯನ್ನು ಜಿಮ್ಮಿಯು ಮುಂದುವರಿಸುತ್ತಾರೆ. ಬ್ರಾಹ್ಮಣ ವೇಷಧಾರಿಯು ಆಗಾಗ ಬಂದು ಓಡಿ ಹೋಗುವುದು ನಡದೇ ಇರುತ್ತದೆ. ಆಗ ಮೈಮೇಲೆ ಬರದ ಹುಡುಗರನ್ನು ಕರೆದು ಅವನಿಗೆ ಪೂಜೆ ಮಾಡಿ, ಅವರ ಕೈಯಿಂದ ಪೂಜೆ ಮಾಡಿಸಿ, ಅವರ ತಲೆಯ ಮೇಲೆ ದೇವರ ಹೆಸರೇಳಿ ಅಕ್ಕಿ

PDF created with pdfFactory Pro trial version www.pdffactory.com

ಹಾಕುತ್ತಾರೆ. ಮೊದಲು ಬೇರೆ ಬೇರೆ ದೇವರ ಹೆಸರೇಳಿ ತಲೆಗೆ ಅಕ್ಕಿ ಹಾಕುತ್ತಾರೆ. ಆದರೂ ದೇವರು ಬರುವುದಿಲ್ಲ. ಕೊನೆಯದಾಗಿ ಅವರ ಮೂಲದೇವರಾದ 'ಕಾವೆಲಿಯಕುಚ್ಚಿ'ಯ ಹೆಸರನ್ನು ಹೇಳಿದಾಗ ಅವನ ಮೇಲೆ ದೇವರು ಬರುತ್ತದೆ. ಒಂದು ಸಾರಿ ಒಬ್ಬನ ಮೇಲೆ ದೇವರು ಬಂತೆಂದರೆ ಮತ್ತೆ ಆತ ಬದುಕಿರುವವರೆಗೆ ಅವನ ಮೇಲೆ ಆಗಾಗ ಆ ದೇವರು ಬರುತ್ತಿರುತ್ತದೆ. ಹೀಗೆ ದೇವರು ಬಂದವರಿಗೆ ದೇವರು ಬರಿಸಿ ಅವರನ್ನು ಕುಣಿಸುವುದೇ ಈ ಹಬ್ಬದ ಮುಖ್ಯ ಉದ್ದೇಶ. ಈ ಹಬ್ಬವನ್ನು ರಾತ್ರಿಯ ಹೊತ್ತು ಮಾಡುವುದುರಿಂದ ದೇವರು ಬಂದ ವ್ಯಕ್ತಿಗಳನ್ನು ಬೆಳಕಿನ ತನಕ ಕುಣಿಸುತ್ತಾರೆ. ಬೆಳಿಗ್ಗೆ ಸೂರ್ಯ ಉದಯವಾದಂತೆ ಎಲ್ಲಾ ದೇವರುಗಳೂ ನಿಲ್ಲುತ್ತವೆ. ಅಲ್ಲಿಗೆ ಹಬ್ಬವೂ ಮುಗಿಯುತ್ತದೆ."[೮]

ಈ ಎರಡೂ ಹಬ್ಬಗಳೂ ತುಂಬ ಅನನ್ಯವಾದ ವಿವರಗಳನ್ನು ಒಳಗೊಂಡಿವೆ. ಸಾಮಾನ್ಯವಾಗಿ ದೇವರು ಇರುವ ಒಂದು ನಿರ್ದಿಷ್ಟ ಸ್ಥಳವಿರುತ್ತದೆ. ಆ ಸ್ಥಳಕ್ಕೆ ಹೋಗಿ ದೇವರನ್ನು ಆರಾಧಿಸುವ ಪರಿಪಾಟವೇ ಹೆಚ್ಚು. ಆದರೆ ಇಲ್ಲಿನ ಸನ್ನಿವೇಶ ತೀರಾ ವ್ಯತಿರಿಕ್ತ. ತಾವಿದ್ದಲ್ಲಿಗೇ ದೇವರನ್ನು ಬರಮಾಡಿಕೊಳ್ಳುವ ಇಲ್ಲಿನ ಕ್ರಮ ಹೆಚ್ಚು ಆಪ್ಯಾಯಮಾನ. ಅದೂ ಒಬ್ಬ ಅಥವಾ ಇಬ್ಬರ ಮೇಲೆ ದೇವರು ಬಂದು ಮಾತಾಡುವ ಮಾಮೂಲೀ ಶೈಲಿಯೂ ಇಲ್ಲಿ ಇಲ್ಲ. ಬದಲಾಗಿ ಇರುವವರ ಮೇಲೆಲ್ಲ ದೇವರ ಆವಾಹನೆಯಾಗುತ್ತದೆ. ಹಾಗಾಗಿ ಎಲ್ಲ ಮನುಷ್ಯರೂ ಇಲ್ಲಿ ದೇವರುಗಳೇ. ದೇವರಿಗೂ ಮನುಷ್ಯರಿಗೂ ಇಲ್ಲಿ ವ್ಯತ್ಯಾಸವೇ ಇಲ್ಲ. ಈ ಪ್ರಬಂಧದ ಆರಂಭದಲ್ಲಿ ಆಶೀಸ್ ನಂದಿಯವರ ಮಾತುಗಳನ್ನು ನಾನು ಉಲ್ಲೇಖಿಸಿದ್ದೆ. ದೇವರಿಗೂ ಮನುಷ್ಯರಿಗೂ ಅಂತರವಿಲ್ಲದ ಸಂಬಂಧವೊಂದು ಭಾರತದ ಪರಿಸರದಲ್ಲಿ ಏರ್ಪಡುತ್ತದೆ ಎಂಬ ರೀತಿಯಲ್ಲಿ ಅವರು ಪ್ರತಿಪಾದಿಸಿದ್ದರು. ಆ ಮಾತುಗಳಿಗೆ ಪ್ರತ್ಯಕ್ಷ ಉದಾಹರಣೆ ಫಣಿಯರ ಈ ಹಬ್ಬಾಚರಣೆ.

ಹಾಗೆ ಪ್ರತಿಯೊಬ್ಬರ ಮೇಲೂ ದೇವರ ಆವಾಹನೆ ಆಗಬೇಕಾದಲ್ಲಿ ಅವರ ಪೂರ್ವಭಾವಿ ಸಿದ್ಧತೆಗಳು ಅಷ್ಟರಮಟ್ಟಿಗೆ ಮಹತ್ವವಾಗಿಯೇ ಇವೆ. ಹುಟ್ಟಿದ ನಿರ್ವಾಣ ಅರ್ಥಾತ್ ಎಲೆಗಳ ಉಡುಗೆ ಹುಟ್ಟು ದೇವರ ನೈವೇದ್ಯದ ಅಕ್ಕಿಯನ್ನು ಅವರು ಸಿದ್ಧಪಡಿಸಬೇಕು. ಅಂದರೆ ಮನುಷ್ಯನ ಆದಿಯ ಕಾಲಕ್ಕೆ ಹಿಂತಿರುಗಿ ಅದೇ ಮುಗ್ಧತೆಯನ್ನು, ಆ ಆನಂದವನ್ನು ಮತ್ತೆ ತಂದುಕೊಳ್ಳುವ ಪ್ರಯತ್ನವಿದು. ಹೀಗೆ ತಮ್ಮದೇ ಆದ ಮಧ್ಯಂತರ ಜಗತ್ತೊಂದು ನಿರ್ಮಿಸಿಕೊಂಡು ದೇವರೊಡನೆ ಬೆರೆತು ಒಂದಾಗುವ ಆತ್ಮಸಾಕ್ಷಾತ್ಕಾರದ ಈ ಆಚರಣೆ ಅತ್ಯಂತ ಅಪೂರ್ವವಾದದ್ದು.

ಮತ್ತೊಂದು ಲೌಕಿಕದ ವಿಚಾರವೂ ಇಲ್ಲಿದೆ. ಕೊಡಗಿನ ಅರಣ್ಯಕ್ಕೆ ಬೆಂಕಿಯನ್ನು ಕಂಡರೆ ಸದಾ ಅಕ್ಕರೆ. ಅಲ್ಲಿನ ಅರಣ್ಯಕ್ಕೆ ಯಾವ ಸೂಕ್ಷ್ಮ ಸನ್ನಿವೇಶದಲ್ಲಿ

ಅಗ್ನಿಸ್ಪರ್ಶವಾಗುತ್ತದೋ ಹೇಳುವುದೇ ಕಷ್ಟ. ನಾವು ನೋಡುನೋಡುತ್ತಿದ್ದಂತೆ ನಾಗರ ಹೊಳೆ ಅಭಯಾರಣ್ಯಕ್ಕೆ ಅದೆಷ್ಟು ಸಲ ಬೆಂಕಿ ಬಿತ್ತು? ಅದರ ವಾಸ್ತವತೆಯ ಮತ್ತು ಅದರ ಬಿಸಿಯ ಅನುಭವವೂ ಫಣಿಯರಿಗಿದೆ. ಆದ್ದರಿಂದಲೇ ಅವರು ತಮ್ಮ ದೇವರಿಂದ 'ಬೆಟ್ಟಕ್ಕೆ ಬೆಂಕಿ ಬಿದ್ದು ಬೆಟ್ಟ ಹತ್ತಿ ಉರಿಯುತ್ತಿದ್ದರೂ ನಿಮ್ಮ ಕಾಲಿನ ಚರ್ಮವೂ ಸುಡುವುದಿಲ್ಲ' ಎಂಬ ಆಶ್ವಾಸನೆಯನ್ನು ಒತ್ತಾಯ ಪೂರ್ವಕವಾಗಿಯೇ ಪಡೆಯುವಲ್ಲಿ ಯಶಸ್ವಿಯಾಗುತ್ತಾರೆ.

ಫಣಿಯರ ಮತ್ತೊಂದು ಹಬ್ಬವೂ ದೇವರನ್ನು ಆವಾಹಿಸಿಕೊಳ್ಳುವ ಕ್ರಿಯೆಗೇ ಸಂಬಂಧಿಸಿದ್ದು. ಆದರೆ ದೇವರನ್ನು ಆವಾಹಿಸಿಕೊಳ್ಳದವ ಪೂರ್ಣ ಮನುಷ್ಯನಲ್ಲ ಎಂಬ ಅವರ ಭಾವನೆ ಬಲವಾಗಿರುವುದರಿಂದಲೇ ಅಥವಾ ತಾನೂ ದೇವರಾಗಿ ಮನಸೋ ಇಚ್ಛೆ ಕುಣಿಯಲಾರದವ ಎಂಥ ಮನುಷ್ಯ ಎಂಬ ಲೋಕ ದೃಷ್ಟಿಯೊಂದು ಆ ಸಮುದಾಯದಲ್ಲಿ ದರ್ಶನ ರೂಪದಲ್ಲಿ ಇರುವುದರಿಂದಲೇ, ಎಲ್ಲರಿಗೂ ದೇವರಾಗುವ ಪಾಠವನ್ನು ಕಲಿಸುತ್ತಾರೆ ಅಥವಾ ಅಂಥ ತರಬೇತಿ ನೀಡುತ್ತಾರೆ. ಆದರೆ ಅಂಥ ತರಬೇತಿಯ ಸಂದರ್ಭದಲ್ಲಿ ಬ್ರಾಹ್ಮಣ ಪೂಜಾರಿಯ ವೇಷವೊಂದನ್ನು ಬಳಸಿಕೊಳ್ಳುವ ಇವರ ಸಾಮಾಜಿಕ ಪ್ರಜ್ಞೆ ಆಶ್ಚರ್ಯ ಹುಟ್ಟಿಸುತ್ತದೆ. ಬೂಟಾಟಿಕೆ ಪೂಜೆ, ಕೃತಕ ಪೌರೋಹಿತ್ಯ, ಅವರಲ್ಲಿ ಅಸಹ್ಯದ ಭಾವನೆ ಹುಟ್ಟಿಸಿದೆ ಅಷ್ಟೇ ಅಲ್ಲ, ಅವರ ಮೂಲ ದೈವವೇ ನಿಜವಾದ ದೈವ. ಅದರೊಡನೆ ಸಂಪರ್ಕ ಬೆಳಸಬೇಕಾದವರು ತಾವು. ಈ ಮಧ್ಯವರ್ತಿಯ ಹಂಗೇಕೆ ಎಂಬ ಲೋಕಜ್ಞಾನವೂ ಅವರಿಗೆ ಚೆನ್ನಾಗಿಯೇ ಇದೆ. ಬಹುಶಃ ಒಂದು ಸಂದರ್ಭದಲ್ಲಿ ಇವರ ಮೇಲೆ ಪ್ರಭಾವ ಬೀರಲು ಯತ್ನಿಸಿರಬಹುದಾದ ಪುರೋಹಿತ ಶಾಹಿಯ ಅಣಕ ಇಲ್ಲಿರುವಂತಿದೆ. ಆ ಅಣಕವೇ ಪ್ರಬಲ ಪ್ರತಿಭಟನೆಯಾಗಿ ಆ ವ್ಯಂಗ್ಯಪೂರಿತವಾದ ಆಚರಣೆಯಲ್ಲಿ ವ್ಯಕ್ತವಾಗುತ್ತಿದೆ.

ಫಣಿಯರು ನಂಬಿರುವ ಪ್ರಕಾರ ಅವರ ಮೂಲ ದೈವದ ಹೆಸರು 'ಕಾವೆಲಿಯ ಕುಚ್ಚಿ'. ಕೇರಳದ ಇಪ್ಪಿಮಲೈ ಎಂಬ ಪರ್ವತ ಪ್ರದೇಶದಲ್ಲಿರುವ ಅಂಜಲಕಾವು ಎಂಬ ಪ್ರದೇಶದಿಂದ ಇಲ್ಲಿಗೆ ವಲಸೆ ಬಂದವರು ನಾವು ಎಂದು ಹೇಳಿಕೊಳ್ಳುವ ಫಣಿಯರು. ಅವರ ಮೂಲ ದೈವ ಅಷ್ಟು ದೂರದ ಆ ಇಪ್ಪಿಮಲೈಯಲ್ಲಿ ಇರುವುದಾದರೂ ತಾವು ಕರೆದಾಗ ಅದು ಬರುತ್ತದೆ ಎಂದು ನಂಬಿದ್ದಾರೆ. ಆದ್ದರಿಂದಲೇ ದೇವರ ಆವಾಹನೆ ಆಗದ ಹುಡುಗನಿಗೆ ಅಂತಿಮವಾಗಿ ಆವಾಹನೆ ಆಗುವುದು ಅವರ ಮೂಲ ದೈವದ ಹೆಸರೇಳಿ ಅಕ್ಕಿ ಕಾಳು ಹಾದಾಗ ಮಾತ್ರ!

ಕೊಡಗಿನ ಫಣಿಯರು, ಯರವರು, ಕುಡಿಯರು ತಮ್ಮ ಕುಣಿತಕ್ಕೆ 'ದುಡಿ'ವಾದ್ಯವನ್ನು ಬಳಸುತ್ತಾರೆ. ದುಡಿಯ ಲಯಬದ್ಧ ಶಬ್ದ ಎಂಥವರಿಗೂ ಭಾವಪರವಶತೆಯನ್ನು ತರುವಂಥದ್ದು. ಅದನ್ನು ನುಡಿಸುತ್ತಾ ಗಂಟೆಗಟ್ಟಲೆ ಹಾಡುತ್ತಾ

PDF created with pdfFactory Pro trial version www.pdffactory.com

ಹೆಂಗಸರು ಗಂಡಸರು ಮಕ್ಕಳಾದಿಯಾಗಿ ಅವರು ನರ್ತಿಸುವ ರೀತಿಯೇ ಅವರಿನ್ನೂ ತಾರತಮ್ಯರಹಿತವಾದ ಮುಗ್ಧ ಹಾಗೂ ಸಮಾನತೆಯ ಜೀವನದ ಆರಾಧಕರೂ ಎಂಬುದನ್ನು ದೃಢಪಡಿಸುತ್ತದೆ. ಕೊಡಗಿನ ಬುಡಕಟ್ಟುಗಳು ಇತ್ತೀಚೆಗೆ ಅನೇಕ ರೀತಿಯ ಶೋಷಣೆಗೆ, ದ್ವೇಷ, ವೈಷಮ್ಯಕ್ಕೆ ಹೊಳಗಾಗುತ್ತಿವೆ ಎಂಬುದು ನಿಜ. ಆದರೆ ರಾತ್ರಿಯ ಬೆಳದಿಂಗಳ ನೀರವತೆಯಲ್ಲಿ ದುಡಿಯ ಬಡಿತಕ್ಕೆ ತಮ್ಮನ್ನು ಒಪ್ಪಿಸಿಕೊಂಡು ಎಲ್ಲವನ್ನು ಮರೆತು ಅವರ ದೇವರ ಜೊತೆಯಲ್ಲಿ ಅಂತರ್ಧಾನವಾಗುವ ರೀತಿಯನ್ನು ನೋಡಿದಾಗ ಮಾತ್ರ ನಾವು ಕನಿಷ್ಠ ೫೦೦೦ ವರ್ಷಗಳಷ್ಟು ಹಿಂದಕ್ಕೆ ಹೋಗಿರುತ್ತೇವೆ ಎಂಬುದಂತೂ ಸತ್ಯ. ಆದರೆ ಆ ದರ್ಶನವನ್ನು ಕಾಣುವ ಅಂತರಂಗಶುದ್ಧಿ ಬೇಕು ಅಷ್ಟೆ.

೨.೫. ಪೋಡಿನ ದೈವ

ಮೈಸೂರು ಜಿಲ್ಲೆಯಲ್ಲಿ ಪ್ರಾಕೃತಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಬಹುಪ್ರಿಯವಾದ ಎರಡು ಪರ್ವತಗಳಿವೆ. ಅವುಗಳನ್ನು ಮಲೆಮಹದೇಶ್ವರಬೆಟ್ಟ ಮತ್ತು ಬಿಳಿಗಿರಿರಂಗನಬೆಟ್ಟ ಎಂದು ಕರೆಯುತ್ತಾರೆ. ಒಂದರ ಹಿಂದೆ ಒಂದರಂತೆ ಹಬ್ಬಿ ನಿಂತಿರುವ ಈ ಬೆಟ್ಟ ಸಾಲುಗಳು ದಟ್ಟಾರಣ್ಯದಿಂದ ಆವೃತವಾಗಿವೆ. ಇಲ್ಲಿ ಅನಾದಿಕಾಲದಿಂದ ಜೀವಿಸುತ್ತಿರುವ ಸೋಲಿಗ ಸಮುದಾಯವಿದೆ. ಕಾಡಿನ ಮಕ್ಕಳಾಗಿ ನಿಸರ್ಗದ ಜೊತೆಜೊತೆಯಲ್ಲಿಯೇ ಬೆಳೆದು ಬಂದ ಸೋಲಿಗರು ಇಂದಿಗೂ ಅದೇ ಕಾಡಿನ ನಿವಾಸಿಗಳು. ಸೋಲಿಗರ ದೈವಾರಾಧನೆ ಹಲವು ಹಂತಗಳಲ್ಲಿ ನಮಗೆ ಕಾಣಸಿಗುತ್ತದೆ. ಮಾರಿಯನ್ನು ಆರಾಧಿಸುವ ಸೋಲಿಗರೂ ಇದ್ದಾರೆ, ತಮ್ಮ ಬುಡಕಟ್ಟಿನ ಮೂಲಮಾತೆ ಎಂದು ಭಾವಿಸಿರುವ ಸಂಕಮ್ಮನನ್ನು ಆರಾಧಿಸುವವರೂ ಇದ್ದಾರೆ. ಸಂಕಮ್ಮನ ಮಕ್ಕಳೆನಿಸಿದ ಕಾರಯ್ಯ ಮತ್ತು ಬಿಲ್ಲಯ್ಯರನ್ನು ತಮ್ಮ ಸಾಂಸ್ಕೃತಿಕ ನಾಯಕರಾಗಿ ಇವರು ಕಾಣುತ್ತಾರೆ. ಇವರ ಕಾಡಿನಲ್ಲಿಯೇ ಇರುವ 'ಕ್ಯಾತೆದೇವರು' ಇವರ ಮತ್ತೊಂದು ಪ್ರಮುಖ ದೈವ.

ಇವುಗಳನ್ನೆಲ್ಲ ಅವರ ಮೂಲ ದೈವಗಳೆಂದು ಪರಿಗಣಿಸಬಹುದಾದರೆ, ಅನಂತರದ ಅವಸ್ಥಾಂತರದಲ್ಲಿ ಬಿಳಿಗಿರಿ ರಂಗಯ್ಯ ಮತ್ತು ಮಲೆ ಮಾದೇಶ್ವರ ಇವರ ಆರಾಧ್ಯ ದೈವವಾದದ್ದು ಕುತೂಹಲಕಾರಿಯಾದ ವಿಚಾರ.

ಸೋಲಿಗರು ತಮ್ಮ ವಿವಿಧ ಪಂಗಡಗಳಿಗೆ(ಬಳಿ) ಹೆಸರಿಟ್ಟುಕೊಂಡಿರುವ ರೀತಿಯನ್ನು ಪರಿಶೀಲಿಸಬಹುದು. ಹೊಂಗೆಲರ ಕುಲ(ಹೊಂಗೆಮರ) ಆಲೂರು ಕುಲ(ಆಲದ ಮರ) ಬೆಲ್ಲರ ಕುಲ(ಬೆಳ್ಳಿಕುಲ–ನಕ್ಷತ್ರ) ಸೂರ್ಯಕುಲ, ಪೆನೇರು ಕುಲ(ರಾಗಿಯ ತೆನೆ) ಜೇನುಕುಲ, ಕುಂಬಳು ಕುಲ(ಕುಂಬಳ ಹೂ) ಇತ್ಯಾದಿ. ಇವರ ಕುಲಗಳಿಗೆ ಹೆಸರಿಟ್ಟುಕೊಂಡ ಬಗೆಯೇ ನಿಸರ್ಗದ ಜೊತೆಗಿನ ಅವರ

ಸಂಬಂಧವನ್ನು ಸ್ಪಷ್ಟಪಡಿಸುತ್ತದೆ. ಮರ–ಗಿಡಗಳನ್ನು ಪ್ರಕೃತಿಯ ಸೂರ್ಯ–ನಕ್ಷತ್ರಗಳನ್ನು ಕುಲದ ಗುರುತುಗಳನ್ನಾಗಿ ಇಟ್ಟುಕೊಂಡ ಇವರು ಮೂಲದಲ್ಲಿ ನಿಸರ್ಗಾರಾಧಕರು ಎಂಬುದರಲ್ಲಿ ಎರಡು ಮಾತಿಲ್ಲ.

ಮಾರಿಯನ್ನು ಇವರು ಪೂಜಿಸುವುದರ ಅರ್ಥವೇ ಇವರು ಮಾತೃಮೂಲ ಕುಟುಂಬದವರು ಎಂಬ ವಾದವನ್ನು ನಿಚ್ಚಳಗೊಳಿಸುತ್ತದೆ. ಆದರೆ ಮಲೆ ಮಹದೇಶ್ವರ ಬೆಟ್ಟದ ಸುತ್ತಮುತ್ತಲಿರುವ 'ಕೊಕ್ಕು ಬರೆ'. ಎಂಬ ಪಂಗಡದ ಸೋಲಿಗರು ಮಾರಿ ಹಬ್ಬವನ್ನು ಆಚರಿಸುವ ರೀತಿ ತುಂಬ ವಿಶಿಷ್ಟವಾದದ್ದಾಗಿದೆ. ಬಯಲು ಸೀಮೆಯಲ್ಲಿರುವಂತೆ ಕಂಬ ಪ್ರತಿಷ್ಠಾಪನೆ ಮಾಡಿ ಕಂಬ ಇಕ್ಕಿದ ದಿನದಿಂದ ಹನ್ನೊಂದು ದಿನದವರೆಗೆ ಬೆಂಕಿಯ ಸುತ್ತ ಕುಣಿಯುವ ಸಂಪ್ರದಾಯವನ್ನು ಅವರು ಆಚರಿಸಿಕೊಂಡು ಬರುತ್ತಿದ್ದಾರೆ. ಕೊಡಗು ಮತ್ತು ಮೈಸೂರು ಜಿಲ್ಲೆಯ ಸೋಲಿಗರು, ಕಾಡುಕುರುಬರು, ಮತ್ತು ಬೆಟ್ಟ ಕುರುಬರು ತಮ್ಮ ಕುಣಿತಗಳನ್ನು ಸಾಮಾನ್ಯವಾಗಿ ಬೆಂಕಿಯ ಸುತ್ತ ನಡೆಸುತ್ತಾರೆ. ಇದು ಆರ್ಯಮೂಲದ ವೈದಿಕ ಪ್ರಭಾವವಿರಬಹುದು ಎಂಬ ಅಭಿಪ್ರಾಯವನ್ನು ಒಬ್ಬಿಬ್ಬರು ವ್ಯಕ್ತಪಡಿಸಿದ್ದಾರೆ. ಆದರೆ ವಾಸ್ತವದ ಅರಿವಿಲ್ಲದ ಸಂಶೋಧಕರಿಗೆ ಈ ರೀತಿ ಅಭಿಪ್ರಾಯಗಳು ತಟ್ಟನೆ ಬಂದು ಬಿಡಬಹುದು. ಕೊಡಗು ಮತ್ತು ಮೈಸೂರು ಜಿಲ್ಲೆಯ ಅರಣ್ಯವನ್ನು ಅಲ್ಲಿ ವಾಸವಾಗಿರುವ ವಿವಿಧ ಕಾಡುಪ್ರಾಣಿಗಳನ್ನು ಅದರಲ್ಲೂ ವಿಶೇಷವಾಗಿ ಯಥೇಚ್ಛವಾಗಿ ಇರುವ ಆನೆಗಳ ಸಂತತಿಯನ್ನು ಗಮನಿಸಿದವರಿಗೆ ಈ ಜನಸಮುದಾಯಗಳ ಸದಾ ಬೆಂಕಿಯ ಜೊತೆಗೆ ಯಾಕಿರುತ್ತಾರೆ ಎಂಬ ಸತ್ಯದ ಅರಿವು ಆಗದೇ ಇರದು. ಎಲ್ಲಿ ಬೆಂಕಿ ಇರುತ್ತದೋ ಅಲ್ಲಿ ಆನೆಗಳು ಸುಳಿಯುವುದಿಲ್ಲ. ತಮ್ಮ ಪೋಡುಗಳ ಮುಂದೆ(ಸೋಲಿಗರು ತಮ್ಮ ವಾಸಸ್ಥಳವನ್ನು ಪೋಡು ಎಂದು ಕರೆದುಕೊಳ್ಳುತ್ತಾರೆ) ರಾತ್ರಿಯ ಬಹುಕಾಲದವರೆಗೆ ಕುಣಿದು ನರ್ತಿಸುವ ಪರಿಪಾಟವಿರುವ ಜನರಿಗೆ ಆನೆಯ ಕಾಟದಿಂದ ಮುಕ್ತಿ ಕೊಡುತ್ತದೆ ಈ ಬೆಂಕಿ. ಮಾರಿ ಹಬ್ಬದ ಹನ್ನೆರಡನೆಯ ದಿನ ತಂಬಿಟ್ಟಿನ ಆರತಿ ಮತ್ತು ಪ್ರಾಣಿ ಬಲಿಯನ್ನು ನೀಡಲಾಗುತ್ತದೆ. ಸೋಲಿಗರು ಮಾರಿಯನ್ನು ಮುಖ್ಯವಾಗಿ ರೋಗನಿರೋಧಕ ದೈವವನ್ನಾಗಿ ಆರಾಧಿಸುತ್ತಾರೆ.

ಸೋಲಿಗರ ಮೂಲಮಾತೆ ಎನಿಸಿಕೊಂಡಿರುವ ಸಂಕಮ್ಮ ತುಂಬ ವಿಶಿಷ್ಟವಾದ ವ್ಯಕ್ತಿತ್ವವನ್ನು ಪಡೆದ ಒಬ್ಬ ಧೀರ ಬುಡಕಟ್ಟು ಹೆಣ್ಣು. ಸಂಕಮ್ಮನ ಹಬ್ಬವನ್ನು ಸೋಲಿಗರು ವಿಜೃಂಭಣೆಯಿಂದ ಆಚರಿಸುತ್ತಾರೆ. ಸಂಕಮ್ಮನ ಮೂಲದ ವಿಚಾರದಲ್ಲಿ ಒಂದೆರಡು ವೈರುಧ್ಯಾತ್ಮಕ ಸಂಗತಿಗಳಿವೆ. ಅದೇನೆಂದರೆ ಮಲೆಮಾದೇಶ್ವರ ಮೌಖಿಕ ಮಹಾಕಾವ್ಯದಲ್ಲಿ ಸಂಕಮ್ಮ ಮಲೆಮಾದೇಶ್ವರನ ಶಿಷ್ಯೆಯಾಗಿ ಕಾಣಿಸಿಕೊಳ್ಳುತ್ತಾಳೆ. ಕೆಲವು ವಿದ್ವಾಂಸರು ಗುರುತಿಸಿರುವಂತೆ ದಕ್ಷಿಣ ಕರ್ನಾಟಕ ಭಾಗದ ಅನೇಕ ಜನ

PDF created with pdfFactory Pro trial version www.pdffactory.com

ಸಮುದಾಯಗಳ ಸಾಂಸ್ಕೃತಿಕ ವೀರನಾದ ಮಲೆ ಮಾದೇಶ್ವರನ ಕಾಲ ಸುಮಾರು ೧೪–೧೫ ನೇ ಶತಮಾನ. ಇದು ನಿಜವಾದರೆ ಈ ಸಂದರ್ಭದಲ್ಲಿ ಇದ್ದ ಸಂಕಮ್ಮ ಸೋಲಿಗ ಜನಾಂಗದ ಮೂಲಮಾತೆ ಎನಿಸಿಕೊಳ್ಳಲು ಸಾಧ್ಯವಿಲ್ಲ. ಹಾಗೆಯೇ ಸಂಕಮ್ಮನ ಮಕ್ಕಳಾದ ಕಾಡಯ್ಯ ಮತ್ತು ಬಿಲ್ಲಯ್ಯ ಅವರುಗಳು ಈ ಜನವರ್ಗದ ಮೂಲ ಸಾಂಸ್ಕೃತಿಕ ನಾಯಕರು ಎಂದು ಹೇಳಲು ಸಾಧ್ಯವಾಗುವುದಿಲ್ಲ. ಈ ದ್ವಂದ್ವಗಳ ನಿವಾರಣೆಗಾಗಿ ಮಲೆಮಾದೇಶ್ವರ ಮತ್ತು ಸೋಲಿಗ ಜನವರ್ಗದ ಜೊತೆಗಿನ ಸಂಬಂಧಗಳನ್ನು ನಿರೂಪಿಸುವ ಕಥೆಯನ್ನು ಕ್ವಚಿತ್ತಾಗಿಯಾದರೂ ಹೇಳಲೇ ಬೇಕಾಗುತ್ತದೆ.

ಸೋಲಿಗರ ಒಂದು ಪ್ರಭೇದವಾದ ಮೇಲೆ ಸೋಲಿಗರ ನೀಲಯ್ಯ ಎಂಬುವವನು ಇನ್ನೂ ಮದುವೆಯಾಗಿರುವುದಿಲ್ಲ. ಸ್ಫುರದ್ರೂಪಿಯೂ ಮಾಟಮಂತ್ರಗಳನ್ನು ಚೆನ್ನಾಗಿ ಬಲ್ಲ ಮಹಾಮಾಂತ್ರಿಕನೂ ಆದ ಈ ಮಲೆಸೋಲಿಗರ ನೀಲಯ್ಯನಿಗೆ ಅನುರೂಪಳಾದ ಹೆಣ್ಣೇ ಅವನಿಗೆ ದೊರಕಿರುವುದಿಲ್ಲ. ಆ ಮಹಾರಣ್ಯದಲ್ಲಿ ಕುರಿಕಾಯುವ ಕಾಯಕದಲ್ಲಿ ನಿರತನಾಗಿರುವ ಒಂದು ಸಂದರ್ಭದಲ್ಲಿ ಕಾಡಿನ ನಡುವೆ ದೂರದಲ್ಲಿ ಎಲ್ಲೋ ಒಂದು ಕಡೆ ಸೂಜಿಗಾತ್ರದ ಹೊಗೆ ಏಳುತ್ತಿರುವುದು ಕಾಣಿಸಿಕೊಳ್ಳುತ್ತದೆ. ಅಪಾರ ಬಾಯಾರಿಕೆಯಿಂದ ಬಳಲುತ್ತಿದ್ದ ನೀಲಯ್ಯ ಅಲ್ಲಿ ಜನವಸತಿ ಇರಬಹುದೆಂಬುದನ್ನು ಗ್ರಹಿಸಿ ಅತ್ತ ಪ್ರಯಾಣ ಬೆಳೆಸುತ್ತಾನೆ. ಅವನ ಊಹೆಯಂತೆ ಅಲ್ಲಿ ದೇವ ಸೋಲಿಗರ ಕುಟುಂಬವೊಂದು ವಾಸವಾಗಿರುತ್ತದೆ. ಆ ಪೋಡಿನ ಹತ್ತಿರ ನಿಂತು ಬಾಯಾರಿಕೆಗಾಗಿ ನೀರು ಕೇಳುತ್ತಾನೆ. ನೀರನ್ನು ತಂದುಕೊಟ್ಟ ಹೆಣ್ಣು ಕಡುಚೆಲುವೆಯಾಗಿದ್ದು ನೀಲಯ್ಯನ ಮನಸ್ಸನ್ನು ಆಕರ್ಷಿಸುತ್ತಾಳೆ. ಹಿಂತಿರುಗಿ ಬಂದ ನೀಲಯ್ಯ ಅನ್ನ ಆಹಾರಗಳನ್ನು ಬಿಟ್ಟು ಚೆಲುವೆಯಾದ ಸಂಕಮ್ಮನ ಧ್ಯಾನದಲ್ಲಿ ಇರತೊಡಗುತ್ತಾನೆ. ನೀಲಯ್ಯನ ಈ ವಿಚಿತ್ರ ಸ್ಥಿತಿಯನ್ನು ಗಮನಿಸಿದ ಅವನ ತಂದೆ–ತಾಯಂದಿರು ಅವನ ಮನದಾಳದ ಇಂಗಿತವನ್ನು ಅರ್ಥ ಮಾಡಿಕೊಂಡು ದೇವಸೋಲಿಗರ ಪೋಡಿಗೆ ಹೋಗಿ ಹೆಣ್ಣು ಕೇಳುತ್ತಾರೆ. ಆಗಿನ ಪದ್ಧತಿಯಂತೆ ಹೆಣ್ಣಿಗೆ ತೆರ ಕಟ್ಟಿ ಮದುವೆಯನ್ನು ಮಾಡಿಕೊಂಡು ಬರಲಾಗುತ್ತದೆ. ಮದುವೆಯಾದ ನಂತರ ಅನೇಕ ವರ್ಷಗಳ ಕಾಲ ನೀಲಯ್ಯನಿಗೆ ಮಕ್ಕಳಾಗುವುದಿಲ್ಲ. ಸಂಕಮ್ಮನ ವಾರಗಿತ್ತಿಯರು ಬಂಜೆ ಎಂದು ಹೀಯಾಳಿಸಲು ಮೊದಲು ಮಾಡುತ್ತಾರೆ. ಇದರಿಂದ ಕ್ರೋಧಗೊಂಡ ನೀಲಯ್ಯ ಪ್ರತ್ಯೇಕ ಸಂಸಾರ ಹೂಡಲು ನಿರ್ಧರಿಸುತ್ತಾನೆ. ಮಹಾ ಅರಣ್ಯದ ನಡುವೆ ಮರಗಿಡ ಬಳ್ಳಿಗಳ ಸಹಾಯದಿಂದಲೇ ಪುಟ್ಟ ಗುಡಿಸಲೊಂದನ್ನು ನಿರ್ಮಾಣ ಮಾಡಿ ಅದರಲ್ಲಿ ದಂಪತಿಗಳಿಬ್ಬರೂ ವಾಸ ಮಾಡುತ್ತಿರುತ್ತಾರೆ.

ಇಲ್ಲಿ ಕಥೆ ಮತ್ತೊಂದು ತಿರುವನ್ನು ಪಡೆದುಕೊಳ್ಳುತ್ತದೆ. ಕಥೆಗೆ ಅಂಥ ತಿರುವನ್ನು ಕೊಡುವ ಪ್ರಮುಖ ಘಟನೆ ಯಾವುದೆಂದರೆ ಮಲೆಸೋಲಿಗರು ಸಾಮೂಹಿಕವಾಗಿ

ಬೇಟೆಗೆ ಹೋಗುವ ಪ್ರಸಂಗ. ಬೇಟೆಯೆಂದರೆ ಇಂದು ಹೋಗಿ ನಾಳೆ ಬರುವ ಬೇಟೆಯಲ್ಲ. ಒಂಬತ್ತು ತಿಂಗಳುಗಳ ಕಾಲ ಸತತವಾಗಿ ನಡೆಯುವ ಸುದೀರ್ಘ ಬೇಟೆಯದು. ಬೇಟೆಯೆಂದರೆ ಅದು ಬೇಟೆಯೂ ಅಲ್ಲ, ವಾಸ್ತವವಾಗಿ ಕಾವ್ಯದಲ್ಲಿ ಬರುವ ವಿವರಗಳ ಪ್ರಕಾರ ಅದೊಂದು ಸುದೀರ್ಘ ಆಹಾರ ಸಂಗ್ರಹಣೆಯ ಪ್ರಯಾಣ. ಕಾಡಿನಲ್ಲಿ ಸಿಗುವ ಗೆಡ್ಡೆ–ಗೆಣಸು, ಬಿದರಕ್ಕಿ, ತುಡುವೆ, ಜೇನು ಹೆಜ್ಜೇನು–ಇತ್ಯಾದಿಯಾಗಿ ಆಹಾರ ಪರಿಕರಗಳ ಸಂಗ್ರಹದ ಬೇಟೆಯದು. ಈ ಆಹಾರ ಸಂಗ್ರಹಣೆಯ ಬಗ್ಗೆ ಮಲೆಮಾದೇಶ್ವರ ಕಾವ್ಯ ಅತ್ಯಂತ ವೈವಿಧ್ಯಮಯವಾಗಿ ವರ್ಣಿಸುತ್ತದೆ. ಇಡೀ ಪೋಡಿನ ಜನ ಒಮ್ಮೆ ಇಂಥ ಬೇಟೆಗೆ ಹೋಗಬೇಕೆಂದು ನಿರ್ಧರಿಸಿದರೆ ಮನೆಗೆ ಒಬ್ಬರಂತೆ ಕಡ್ಡಾಯವಾಗಿ ಹೊರಡಲೇಬೇಕು. ಯಾಕೆಂದರೆ ಆ ಮಹಾ ಅರಣ್ಯದಲ್ಲಿ ಒಬ್ಬಿಬ್ಬರು ಇಂತಹ ಕಾರ್ಯ ಕೈಗೊಳ್ಳಲು ಸಾಧ್ಯವೇ ಇಲ್ಲ.

ಕುಲದ ಬೇಟೆಗೆ ಹೊರಡಬೇಕೆಂಬ ಹಿರಿಯರ ಕಟ್ಟಾಜ್ಞೆಯ ಹಿನ್ನೆಲೆಯಲ್ಲಿ ನೀಲಯ್ಯನು ಬೇಟೆಗೆ ಹೊರಡಬೇಕಾಗಿದೆ. ಆದರೆ ಅವನು ಒಬ್ಬಂಟಿ. ಸಂಕಮ್ಮ ಒಬ್ಬಳನ್ನೇ ಬಿಟ್ಟು ಹೊರಡುವುದಾದರೂ ಹೇಗೆ? ಹೊರಡಲಿಲ್ಲವಾದರೆ ಕುಲದಿಂದ ಹೊರಗೆ ಹಾಕುವ ಭಯ ಅವನನ್ನು ಕಾಡುತ್ತದೆ ಸಂಕಮ್ಮನನ್ನು ಬಿಟ್ಟು ಹೋಗಲು ಅವನು ಯಾಕೆ ತಯಾರಿಲ್ಲ? ಆ ದಟ್ಟಾರಣ್ಯದಲ್ಲಿ ಅವಳು ಒಬ್ಬಳು ಹೇಗೆ ಎಂಬ ಹೆಂಡತಿಯ ಬಗೆಗಿನ ಪ್ರೀತಿಯಿಂದ ಎಂದು ತಿಳಿದರೆ ಅದು ತಪ್ಪಾಗುತ್ತದೆ. ಏಕೆಂದರೆ ಅವನು ಸಂಕಮ್ಮನನ್ನು ಒಂಬತ್ತು ತಿಂಗಳುಗಳ ಕಾಲ ಬಿಟ್ಟು ಹೋಗಲು ಹಿಂಜರಿಯುತ್ತಿರುವ ಕಾರಣವೆಂದರೆ ಕಡುಚೆಲುವೆಯಾದ ಅವಳು ತನ್ನ ಅನುಪಸ್ಥಿತಿಯಲ್ಲಿ ಯಾರಿಗಾದರೂ ಒಲಿದುಬಿಟ್ಟರೆ? ಇದು ನೀಲಯ್ಯನ ಆತಂಕ. ಅದಕ್ಕಾಗಿಯೇ ಅವನೊಂದು ಉಪಾಯ ಹುಡುಕುತ್ತಾನೆ. ತಾನೂ ಹಿಂತಿರುಗಿ ಬರುವವರೆಗೆ ಬೇರೆ ಯಾರೊಂದಿಗೂ ಅಂತಹ ಅನೈತಿಕ ಸಂಬಂಧವನ್ನು ಏರ್ಪಡಿಸಿಕೊಳ್ಳುವುದಿಲ್ಲ ಎಂದು ಭಾಷೆ ಕೊಡುವಂತೆ ಸಂಕಮ್ಮನನ್ನು ಒತ್ತಾಯಿಸುತ್ತಾನೆ. ನೀಲಯ್ಯನ ಈ ಅನುಮಾನ ಹಾಗೂ ಅವನು ಭಾಷೆ ಕೇಳುತ್ತಿರುವ ಹೀನಬುದ್ಧಿ ಸಂಕಮ್ಮನನ್ನು ಕೆರಳಿಸುತ್ತದೆ. ಅವಳ ಸ್ವಾಭಿಮಾನ ಕುಡಿಯೊಡೆಯುತ್ತದೆ. ನೀನು ಕೊಟ್ಟಿದ್ದ ತೆರವನ್ನು ಹಿಂದಕ್ಕೆ ಪಡೆದು ಈ ದಿನವೇ ತನ್ನನ್ನು ಬಿಟ್ಟು ಬಿಡುವಂತೆ ಒತ್ತಾಯಿಸುತ್ತಾಳೆಯೇ ಹೊರತು ಭಾಷೆಯನ್ನು ಕೊಡುವುದಿಲ್ಲ. ಈ ಸಂದರ್ಭದಲ್ಲಿ ನೀಲಯ್ಯ ಮತ್ತು ಸಂಕಮ್ಮರ ನಡುವೆ ನಡೆಯುವ ವಾಗ್ವಾದಗಳು ಪುರುಷ ಪ್ರಾಧಾನ್ಯತೆಯ ಅಂಕುರವನ್ನು ಹಾಗೆಯೇ ಅದನ್ನು ಧಿಕ್ಕರಿಸುವ ಸ್ತ್ರೀ ಸ್ವಾಭಿಮಾನವನ್ನೂ ಎತ್ತಿ ತೋರಿಸುತ್ತದೆ. ನೀಲಯ್ಯ ಎಷ್ಟು ಪ್ರಯತ್ನಪಟ್ಟರೂ ಸಂಕಮ್ಮಳ ಭಾಷೆ ಪಡೆಯುವಲ್ಲಿ ವಿಫಲನಾಗುತ್ತಾನೆ. ಇದರಿಂದ ರೊಚ್ಚಿಗೆದ್ದ ನೀಲಯ್ಯ ತನಗೆ ಗೊತ್ತಿರುವ ಮಾಟ ವಿದ್ಯೆಯನ್ನು ಪ್ರಯೋಗಿಸಿ ಅವಳನ್ನು ಬೆತ್ತಲು ಮಾಡಿ ಅನೇಕ ವಿಧವಾದ

PDF created with pdfFactory Pro trial version www.pdffactory.com

ಬಳ್ಳಿ ಮತ್ತು ಮುಳ್ಳುಗಳಿಂದ ಅವಳ ಕೈಕಾಲುಗಳನ್ನು ಕಟ್ಟಿಹಾಕಿ, ಅನೇಕ ರೀತಿಯ ಬಂಧನಗಳನ್ನು ವಿಧಿಸಿ ಕಾವಲು ಕಾಯಲು ಹಾವು, ಚೇಳು, ಮತ್ತು ರಾಕ್ಷಸರನ್ನು ನಿಲ್ಲಿಸಿ ಬೇಟೆಗೆ ಹೊರಟು ಹೋಗುತ್ತಾನೆ. ಅಮಾಯಕಳಾದ ಸಂಕಮ್ಮ ಹಾಹಾಕಾರ ಮಾಡುತ್ತಾ ನೆರವಿಗಾಗಿ ಕೂಗಿಕೊಳ್ಳುತ್ತಾಳೆ. ದಟ್ಟ ಕಾನನದ ಒಂಟಿ ಗುಡಿಸಲಲ್ಲಿ ಬಂಧಿತಳಾಗಿರುವ ಅವಳ ರಕ್ಷಣೆಗೆ ಯಾರು ತಾನೆ ಬರುತ್ತಾರೆ? ಕಡೆಗೆ ಅವಳು ಎಪ್ಪತ್ತೇಳು ಮಲೆಯ ಒಡೆಯನಾದ ಮಲೆಮಾದೇಶ್ವರನನ್ನು ಧ್ಯಾನಿಸುತ್ತಾಳೆ.

ಕಥೆ ಇಲ್ಲಿಂದ ಮತ್ತೊಂದು ತಿರುವನ್ನು ಪಡೆದುಕೊಳ್ಳುತ್ತದೆ. ಎಪ್ಪತ್ತೇಳು ಮಲೆಯ ಉನ್ನತ ಸ್ಥಾನದಲ್ಲಿ ಕುಂತು ಧ್ಯಾನಸ್ಥನಾಗಿದ್ದ ಮಲೆಮಾದೇಶ್ವರನ ಪ್ರಜ್ಞೆಗೆ ಸಂಕಮ್ಮನ ದುಸ್ಥಿತಿ ಅರಿವಾಗುತ್ತದೆ. ಇಂಥ ಸ್ಥಿತಿಯಲ್ಲಿರುವ ಹೆಣ್ಣುಮಗಳನ್ನು ರಕ್ಷಿಸಲೇಬೇಕೆಂದು ಅವನು ಸಂಕಲ್ಪಿಸುತ್ತಾನೆ. ತನ್ನ ಆಪ್ತಸೇವಕನಾದ ಬೇಡರ ಕಣ್ಣಯ್ಯನಿಗೆ ತನ್ನ ಪರಿವಾರದಲ್ಲಿ ಸಾಕಿರುವ ಹಲವು ವಿಧದ ಹುಲಿಗಳನ್ನು ಕೂಗಿ ಕರೆಯುವಂತೆ ಹೇಳುತ್ತಾನೆ. ಬಿಳೀಹುಲಿ, ಕರಿಹುಲಿ, ಪಟ್ಟೇಹುಲಿ, ಚುಕ್ಕೆಹುಲಿ ಮುಂತಾಗಿ ಹತ್ತಾರು ಹುಲಿಗಳು ತಮ್ಮ ಕೋರೆ ಹಲ್ಲುಗಳನ್ನು ಜಳಪಿಸುತ್ತಾ ಓಡೋಡಿ ಬರುತ್ತವೆ. ಅವುಗಳಲ್ಲಿ ಆಯ್ಕೆ ಮಾಡಿದ ಒಂದು ಹುಲಿಯ ಮೇಲೆ ಕುಂತು ಧಾವಿಸಿ ಬರುತ್ತಾನೆ.

ಮಲೆಮಾದೇಶ್ವರ ಕಾವ್ಯದ ಈ ಸಂಕಮ್ಮನ ಕಥಾಭಾಗ ಬುಡಕಟ್ಟು ಜೀವನದ ಅಧ್ಯಯನದ ದೃಷ್ಟಿಯಿಂದ ಅತ್ಯಂತ ಮುಖ್ಯವಾದದ್ದು. ಈ ಕಾವ್ಯದಲ್ಲಿ ಬರುವ ಹತ್ತಾರು ಬಗೆಯ ಮರಗಿಡ ಬಳ್ಳಿಗಳು, ಅರಣ್ಯದ ಅಪೂರ್ವ ಪರಿಸರ ಹಾಗೂ ಆ ಪರಿಸರದಲ್ಲಿ ಸೋಲಿಗ ಸಮುದಾಯ ಕೈಗೊಳ್ಳುವ ಬೇಟೆ ಮತ್ತು ಅವರ ಆಹಾರ ಸಂಗ್ರಹಣೆಯ ವಿಧಿವಿಧಾನಗಳು ಸೋಲಿಗರ ಪ್ರಾಚೀನ ಜೀವನದ ಪದ್ಧತಿಯನ್ನು ಚೆನ್ನಾಗಿ ಬಿಂಬಿಸುತ್ತದೆ. ಇಲ್ಲಿನ ಇನ್ನೊಂದು ಮುಖ್ಯ ವಿಚಾರವೆಂದರೆ ಬೇಟೆ ಎಂದರೆ ಎಲ್ಲಿಯೂ ಪ್ರಾಣಿಗಳನ್ನು ಹತ್ಯೆ ಮಾಡುವುದಲ್ಲ. ಬದಲಾಗಿ ಜೇನು, ಹೆಜ್ಜೇನು, ಬೇರು, ಗೆಡ್ಡೆ–ಗೆಣಸು, ಹಣ್ಣು ಹಂಪಲು ಮತ್ತು ಪ್ರಾಣಿಗಳ ಅವಶೇಷಗಳನ್ನು ಸಂಗ್ರಹಿಸುವ ಅಪೂರ್ವ ವಿಧಾನ. ಇವರ ಸಾಂಸ್ಕೃತಿಕ ವೀರನಾದ ಮಲೆಮಾದೇಶ್ವರ ಕೂಡ ಪ್ರಾಣಿಪ್ರಿಯ ದೈವ. ಸದಾ ಹಾವು ಮತ್ತು ಹುಲಿಗಳ ಒಡನಾಟದಲ್ಲಿ ಅವುಗಳ ಗೆಳೆಯನಾಗಿ ಕಾಲ ಕಳೆಯುವ ಒಬ್ಬ ಹೃದಯವಂತ. ಅವನ ಹುಲಿಗಳಿಗೆ ಅವನು ಇಟ್ಟಿರುವ ಹೆಸರಾದರೂ ಎಂತವು. ಕೊಳ್ಳಗಾಲ್ದ ಕುಳ್ಳು ಬರಗಾ, ಅಂಚಿತಾಳ್ದ ಕೆಂಚು ಬರಗಾ, ತಾಳು ಬೆಟ್ಟದ ತಲೆದೂಗಾ, ರಂಗನೊಡ್ಡ, ಸಿಂಗಲ್ಲು, ಬರಗಾ–ಮುಂತಾಗಿ ಅವನ ಹುಲಿಗಳಿಗೆ ಹೆಸರಿಟ್ಟಿದ್ದಾನೆ. ತನ್ನ ಕಾಡಿನಲ್ಲಿರುವ ಹತ್ತಾರು ಹುಲಿಗಳನ್ನು ಕರೆದು ಮೈಸವರಿ ಕ್ಷೇಮ ಸಮಾಚಾರ ವಿಚಾರಿಸಿ ತನಗೆ ಪ್ರಿಯವಾದ ಹನ್ನೆರಡೆಜ್ಜೆ ಕೆಂಬರಗನ ಮೇಲೆ ಕುಂತು ಮಾದಪ್ಪ ಸಂಕಮ್ಮನ ಗುಡಿಸಲಿಗೆ ಪ್ರಯಾಣ ಬೆಳೆಸುತ್ತಾನೆ.

ನೀಲಯ್ಯ ಮಹಾಮಾಟಗಾರ. ಅನೇಕ ರೀತಿಯ ಮಂಡಲಗಳನ್ನು ಬರೆದು ಕಟ್ಟು ಕಟ್ಟಳೆಗಳನ್ನು ಮಾಡಿ ಹಾವು, ಚೇಳು, ರಾಕ್ಷಸರನ್ನು ಕಾವಲಿಗಿಟ್ಟು ಕುಲದ ಬೇಟೆಗೆ ಹೋಗಿದ್ದಾನೆ. ಆ ಕಟ್ಟು ಕಟ್ಟಲೆಗಳನ್ನು ನಿರರ್ಥಕಗೊಳಿಸಿಯೇ ಒಳ ಹೋಗಬೇಕು. ಇದು ಮಾದೇಶ್ವರನಿಗೆ ಅಸಾಧ್ಯದ ವಿಚಾರವೇನೂ ಅಲ್ಲ. ಯಾಕೆಂದರೆ ಇವನು ಮೋಡಿಕಾರರ ಗುರು. ಮಂತ್ರವಿದ್ಯೆಯ ಸಕಲ ವಿವರಗಳೂ ಗೊತ್ತಿರುವ ಮಹಾಮಾಂತ್ರಿಕ. ಮೋಡಿಗೆ ಪ್ರತಿಮೋಡಿ ಮಾಡಿ ಕ್ಷಣಾರ್ಧದಲ್ಲಿ ನಿರರ್ಥಕಗೊಳಿಸಬಲ್ಲ ಮಹಾವಿದ್ಯೆಕಾರ. ನೀಲಯ್ಯನ ಎಲ್ಲಾ ಮಂಡಲಗಳನ್ನು ಕಟ್ಟುಕಟ್ಟಲೆಗಳನ್ನು ನಿರರ್ಥಕಗೊಳಿಸಿ ಸಂಕಮ್ಮಳನ್ನು ಸಮೀಪಿಸುತ್ತಾನೆ. ಅವಳ ಮೈಮೇಲಿನ ಮುಳ್ಳು ಬಳ್ಳಿಗಳನ್ನು ಇಲ್ಲವಾಗಿಸುತ್ತಾನೆ. ಬೆತ್ತಲೆ ಇರುವ ಸಂಕಮ್ಮಳಿಗೆ ವಸ್ತ್ರವನ್ನು ದಯಪಾಲಿಸುತ್ತಾನೆ. ಇಷ್ಟೆಲ್ಲ ಮಾಡಿ ಮತ್ತೇನು ಬೇಕು ಮಗಳೇ ಎಂದು ಕೇಳುವಾಗ ಮಕ್ಕಳ ಫಲ ಕೊಟ್ಟು ಹೋಗುವಂತೆ ಹಟ ಹಿಡಿಯುತ್ತಾಳೆ. ಸಂಕಮ್ಮಳ ಅಭೀಪ್ಸೆಯನ್ನು ಈಡೇರಿಸಲು ಕೊನೆಗೂ ಒಪ್ಪಿಕೊಂಡ ಮಾದೇವ ಹಾಗೆ ಹುಟ್ಟುವ ಮೊದಲ ಇಬ್ಬರು ಮಕ್ಕಳನ್ನು ತನ್ನ ಸೇವೆಗೆ ಬಿಡಬೇಕು ಎಂಬ ವಾಗ್ದಾನ ಪಡೆದು ಅವಳಿಗೆ ಮಕ್ಕಳ ಫಲವನ್ನು ಕರುಣಿಸುತ್ತಾನೆ. ಅವಳನ್ನು ಭಾಗಿಸಿ ಬೆನ್ನಿನ ಮೇಲೆ ಮಕ್ಕಳ ಫಲವನ್ನು ಬರೆದು ಕಾಡು ಬೆಂಡೆಕಾಯಿಯ ಮೂಲಕ ಪಿಂಡ ಪರಸಾದವನ್ನು ಕೊಟ್ಟನಂತೆ ಮಾದೇಶ್ವರ! ಕಾವ್ಯದಲ್ಲಿ ಬರುವ ಈ ಪ್ರತಿಮೆ ಅತ್ಯಂತ ಅರ್ಥಗರ್ಭಿತವಾಗಿದೆ. ವಾಸ್ತವಕ್ಕೆ ಹತ್ತಿರವಾಗಿದೆ.

ಸಂಕಮ್ಮ ಗರ್ಭಿಣಿಯಾಗಿ ಮಕ್ಕಳನ್ನು ಹೆರುವುದಕ್ಕೂ ನೀಲಯ್ಯನ ಒಂಬತ್ತು ತಿಂಗಳು ಕಾಲದ ಕುಲದ ಬೇಟೆ ಮುಗಿಯುವುದಕ್ಕೂ ಸರಿಹೋಗುತ್ತದೆ. ಅವನು ಬಂದು ನೋಡಿದಾಗ ಗುಡಿಸಿಲ ಬದಲು ಮಾದೇಶ್ವರನ ಕರುಣೆಯಿಂದ ಅರಮನೆ ನಿರ್ಮಾಣವಾಗಿರುತ್ತದೆ. ಕಾರಯ್ಯ–ಬಿಲ್ಲಯ್ಯ ಎಂಬ ಮಕ್ಕಳನ್ನು ಹೆತ್ತು ಆರಾಮವಾಗಿರುವ ಸಂಕಮ್ಮಳನ್ನು ನೋಡಿ ಮತ್ತಷ್ಟು ಕ್ರೋಧಗೊಳ್ಳುತ್ತಾನೆ. ಸಂಕಮ್ಮಳಿಗೆ ಅನೇಕ ರೀತಿಯ ಕಷ್ಟ ಕೋಟಲೆಗಳನ್ನು ನೀಡುತ್ತಾನೆ. ಆದರೆ ಸಂಕಮ್ಮಳ ಅರಮನೆಯ ಗೋಡೆಯ ಮೇಲೆ ಹಲ್ಲಿಯ ರೂಪದಲ್ಲಿ ಕುಳಿತುಕೊಳ್ಳುವ ಮಾದೇವ ಅವಳ ಎಲ್ಲ ರೀತಿಯ ಕಷ್ಟಗಳನ್ನು ಪರಿಹರಿಸಿ ನೀಲಯ್ಯ ಸೋಲೊಪ್ಪಿಕೊಳ್ಳುವಂತೆ ಮಾಡುವಲ್ಲಿ ಯಶಸ್ವಿ ಯಾಗುತ್ತಾನೆ.

ಇಷ್ಟು ಸುದೀರ್ಘವಾದ ಕಥೆಯನ್ನು ಹೇಳಿದ್ದಕ್ಕೆ ಕಾರಣವಿದೆ. ಬುಡಕಟ್ಟು ದೈವಗಳನ್ನು ಕುರಿತು ಚರ್ಚೆ ಮಾಡುತ್ತಿರುವ ಈ ಸಂದರ್ಭದಲ್ಲಿ, ಸೋಲಿಗರ ಮನೆ ದೇವತೆಯಾಗಿರುವ ಸಂಕಮ್ಮ; ಸೋಲಿಗರ ಆರಾಧ್ಯ ದೈವವಾಗಿರುವ ಮಲೆ ಮಾದೇಶ್ವರ ಮತ್ತು ಸೋಲಿಗರ ಸಾಂಸ್ಕೃತಿಕ ವೀರರೆನಿಸಿದ ಕಾರಯ್ಯ ಮತ್ತು

PDF created with pdfFactory Pro trial version www.pdffactory.com

ಬಿಲ್ಲಯ್ಯ ಇವರುಗಳ ಸಂಬಂಧವನ್ನು ಕಾಡಿನ ಪರಿಸರದ ಎಲ್ಲ ದಟ್ಟ ಸಾಂಸ್ಕೃತಿಕ ವಿವರಗಳನ್ನು ಉಳಿಸಿಕೊಂಡು ನಿರೂಪಿಸುವ ಈ ಕಾವ್ಯ ಒಂದು ಕಾಲದ ಬುಡಕಟ್ಟೊಂದರ ಜೀವನ ವಿಧಾನವನ್ನು ವಿಶ್ಲೇಷಿಸುತ್ತದೆ. ಕಾವ್ಯದ ಆರಂಭದಲ್ಲಿ ನೀಲಯ್ಯ ಕುರಿಗಳನ್ನು ಕಾಯುವ ಕಾಯಕವನ್ನು ಮಾಡುತ್ತಿರುತ್ತಾನೆ. ಅಂದರೆ ಆಹಾರ ಸಂಗ್ರಹಣೆಯ ಜೊತೆಗೆ ಪಶುಸಂಗೋಪನೆಯನ್ನು ಈ ಜನಾಂಗ ಅವಲಂಬಿಸಿದ್ದುದು ಈ ಮೂಲಕ ತಿಳಿದುಬರುತ್ತದೆ. ಹೀಗೆ ಪಶುಪಾಲನೆ ಹಂತದ ಮೌಲ್ಯವೆನಿಸಿದ ಪುರುಷಪ್ರಧಾನ ನೆಲೆ ನೀಲಯ್ಯನ ಮನಸ್ಸಿನಲ್ಲಿ ಮನೆ ಮಾಡಿದೆ. ಆ ಮೂಲಕ ಮಾತೃಪ್ರಧಾನ ವ್ಯವಸ್ಥೆಯಲ್ಲಿದ್ದ ಸೋಲಿಗ ಬುಡಕಟ್ಟು ಪುರುಷಪ್ರಧಾನ ವ್ಯವಸ್ಥೆಗೆ ಪರಿವರ್ತಿತವಾಗುತ್ತಿರುವ ಸಂಕೇತವಾಗಿ ನೀಲಯ್ಯ ನಮಗೆ ಕಾಣಿಸುತ್ತಾನೆ. ಆದರೆ ಹಾಗೆ ತನ್ನ ಮೇಲೆ ಅಧಿಕಾರ ಚಲಾಯಿಸಲು ಪ್ರಯತ್ನಿಸುತ್ತಿರುವ ಪುರುಷಪ್ರಾಧಾನ್ಯವನ್ನು ಧಿಕ್ಕರಿಸುವ ಮಾತೃಮೂಲ ವ್ಯವಸ್ಥೆಯ ಪ್ರತೀಕವಾಗಿ ಸಂಕಮ್ಮ ಕಂಡುಬರುತ್ತಾಳೆ. ನೀಲಯ್ಯ ಮತ್ತು ಸಂಕಮ್ಮರ ಈ ಸಾಂಸ್ಕೃತಿಕ ಘರ್ಷಣೆ ಒಂದು ಕಾಲದ ಇಡೀ ಸೋಲಿಗ ಸಮುದಾಯದ ಸಾಂಸ್ಕೃತಿಕ ಘರ್ಷಣೆಯಾಗಿಯೇ ನಮಗೆ ಕಂಡುಬರುತ್ತದೆ. ಹೆಂಡತಿ ಎನ್ನುವವಳು ತನ್ನ ಆಸ್ತಿ ಎಂಬ ನಿಯಂತ್ರಣಾವಸ್ಥೆಯನ್ನು ನೀಲಯ್ಯ ಪ್ರತಿನಿಧಿಸಿದರೆ ತಾನು ಯಾರಿಂದಲಾದರೂ ಮಕ್ಕಳ ಫಲವನ್ನು ಪಡೆಯಬಹುದು ಎನ್ನುವ ಮೂಲಕ ಪ್ರಾಚೀನದಲ್ಲಿದ್ದ ಮಾತೃಮೂಲ ಕುಟುಂಬದ ಮುಕ್ತವ್ಯವಸ್ಥೆಯ ಕಡೆಗೆ ಸಂಕಮ್ಮ ಒಲಿಯುತ್ತಾಳೆ. ಹೀಗಾಗಿ ಕಾವ್ಯದ ಈ ಭಾಗ ಒಂದು ಕಾಲದ ಪರಿವರ್ತನ ಸಮಾಜದ ಇತಿಹಾಸವನ್ನೇ ನಿರೂಪಿಸುತ್ತದೆ.

ಇಲ್ಲಿ ಬರುವ ಮೋಡಿ, ಮಾಟ ಮತ್ತು ಮಂತ್ರವಿದ್ಯೆಯ ಅನೇಕ ವಿವರಗಳು ಪ್ರಾಚೀನ ಸಮಾಜವೊಂದರ ಜೀವನಪದ್ಧತಿಯ ಕುರುಹುಗಳಾಗಿ ನಮಗೆ ಕಾಣಿಸುತ್ತವೆ. ಯಾವುದೇ ಬುಡಕಟ್ಟು ಸಮುದಾಯದ ಅವಿಭಾಜ್ಯ ಅಂಗ ಈ ಮಂತ್ರ ವಿದ್ಯೆ. ಮಹಾಮಾಟಕಾರನಾದ ನೀಲಯ್ಯ ಮತ್ತು ಮಾಟಕಾರರ ಗುರುವಾದ ಮಹದೇಶ್ವರ ಈ ಇಬ್ಬರು ಒಂದು ಕಾಲದ ಎರಡು ಸಮುದಾಯಗಳ ನಡುವೆ ನಡೆಯುತ್ತಿದ್ದಿರ ಬಹುದಾದ ಮಂತ್ರವಿದ್ಯೆಯ ಸ್ಪರ್ಧೆಯನ್ನೇ ಪ್ರತಿನಿಧಿಸುತ್ತಾರೆ. ಆರಾಧನೆಗಿಂತಲೂ ಮಂತ್ರವಿದ್ಯೆಯೇ ಬುಡಕಟ್ಟು ಸಮುದಾಯಗಳಲ್ಲಿ ಪ್ರಮುಖವಾಗಿತ್ತು ಎಂಬುದನ್ನು ಈ ಪ್ರಸಂಗ ನಿಚ್ಚಳವಾಗಿ ನಿರೂಪಿಸುತ್ತದೆ.

ಕುಲದ ಬೇಟೆಯ ವಿಚಾರವನ್ನು ಆ ಮೂಲಕ ಆಹಾರ ಸಂಗ್ರಹಣೆಯ ವಿವರಗಳು ಹಾಗೂ ಹುಲಿ ಮತ್ತು ಹಾವುಗಳಂತ ಕ್ರೂರ ಜಂತುಗಳನ್ನೇ ತಮ್ಮ ಸಹಬಾಳ್ವೆಯಲ್ಲಿ ಕೊಂಡೊಯ್ಯುತ್ತಿದ್ದ ಅಪೂರ್ವ ಪ್ರಸಂಗಗಳು ಅನಾದಿ ಕಾಲವೊಂದರ ಪ್ರಾಣಿ ಸಮೂಹದ ಜೊತೆಗಿನ ವಿಶಿಷ್ಟ ಜೀವನ ಪದ್ಧತಿಯನ್ನು ನಿರೂಪಿಸುತ್ತದೆ.

ಇಲ್ಲಿ ಪರಿಶೀಲಿಸಬೇಕಾದ ಮುಖ್ಯವಾದ ಅಂಶವೆಂದರೆ ಮಲೆಮಾದೇಶ್ವರ ಮತ್ತು ಸಂಕಮ್ಮ ಸೋಲಿಗರ ಮೂಲ ದೈವಗಳೇ ಎಂಬುದು. ಮಲೆಮಾದೇಶ್ವರ ಒಬ್ಬ ಐತಿಹಾಸಿಕ ವ್ಯಕ್ತಿಯೂ ಆಗಿರುವುದರಿಂದ ಅವನ ಕಾಲ ಸುಮಾರು ೧೪–೧೫ನೇ ಶತಮಾನವಾಗಿರ ಬಹುದು ಎಂಬ ಊಹೆ ಇರುವುದರಿಂದ ಸಂಕಮ್ಮನ ಈ ಪ್ರಸಂಗ ನಿಜವಿರಬಹುದು ಅಥವಾ ಇಲ್ಲದಿರಬಹುದು. ಆದರೆ ಅವಳು ಮಲೆ ಮಾದೇಶ್ವರನ ನಿಕಟವರ್ತಿಯಾದ ಒಬ್ಬಳು ಶರಣೆಯಾಗಿ ಬದುಕಿರುವ ಸಾಧ್ಯತೆಗಳು ಹೆಚ್ಚಿವೆ. ಆದ್ದರಿಂದ ಸೋಲಿಗರಿಗೆ ಈ ಇಬ್ಬರು ದೈವಗಳಿಗಿಂತ ಆದಿಯಲ್ಲಿ ಮೂಲ ದೈವಗಳು ಇರಲಿಲ್ಲವೇ ಎಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ. ವಾಸ್ತವವಾಗಿ ಕ್ಯಾತೆದೇವರು(ಶಿವನ ಸ್ವರೂಪಿ) ಮತ್ತು ಮಾರಮ್ಮ ಮೂಲದಲ್ಲಿ ಇವರ ದೈವವಾಗಿದ್ದವು ಎಂಬುದರಲ್ಲಿ ಅನುಮಾನವಿಲ್ಲ. ಬಹುಶಃ ಕ್ಯಾತೆದೇವರು ಇವರ ಪಶು ಸಂಗೋಪನೆಯ ಹಂತದ ದೈವವಾಗಿದ್ದರೆ ಮಾರಮ್ಮ ಅದಕ್ಕೂ ಹಿಂದಿನ ಮಾತೃಮೂಲ ಕುಟುಂಬದ ವ್ಯವಸ್ಥೆಯ ದೇವರಿರಬಹುದು. ಆದರೆ ಇವರ ಬಳಿ ಮತ್ತು ಕುಲಗಳ ವಿಚಾರ ಬಂದಾಗ ನಿಸರ್ಗದ ದೇವರುಗಳು ಮತ್ತು ಮರಗಿಡ ಬಳ್ಳಿಗಳ ಪ್ರಸ್ತಾಪವೇ ಹಂಚಿರುವುದರಿಂದ ಪ್ರಾಚೀನದಲ್ಲಿ ಇವರು ಕೂಡ ನಿಸರ್ಗದ ಆರಾಧಕರೇ.

ಮಲೆಮಾದೇಶ್ವರ ಕೇವಲ ಸೋಲಿಗರಿಗಷ್ಟೇ ದೈವವಲ್ಲ. ದಕ್ಷಿಣ ಕರ್ನಾಟಕದ ಮೈಸೂರು, ಮಂಡ್ಯ, ಬೆಂಗಳೂರು ಮುಂತಾಗಿ ಹಲವು ಪ್ರದೇಶಗಳ ಶೂದ್ರ ವರ್ಗದ ಅನೇಕ ಸಮುದಾಯಗಳು ಮಲೆಮಾದೇಶ್ವರನ ಭಕ್ತರು. ಇತ್ತೀಚೆಗೆ ವೀರಶೈವರೂ ಕೂಡ ಮಲೆಮಾದೇಶ್ವರನ ವೀರಶೈವ ದೇವರೆಂದು ಪ್ರತಿಪಾದಿಸುತ್ತಾರೆ. ಕಲ್ಯಾಣದ ಕ್ರಾಂತಿ ನಂತರದಲ್ಲಿ ಬಸವಣ್ಣ ಮತ್ತು ಅಲ್ಲಮಪ್ರಭುಗಳ ತತ್ವಾದರ್ಶನಗಳನ್ನೂ ಶೂದ್ರರ ಪಂಚಮಕಾರಗಳ ಆಸಕ್ತಿಯನ್ನು ಒಂದುಗೂಡಿಸಿ ಕೆಳವರ್ಗಗಳ ಜನಸಮುದಾಯಗಳನ್ನು ಒಂದು ಪಂಥದ ಅಡಿಯಲ್ಲಿ ತಂದ ಕೀರ್ತಿ ಮಲೆಮಾದೇಶ್ವರ, ಮಂಟೆಸ್ವಾಮಿಗೆ ಸಲ್ಲುತ್ತದೆ. ಮಲೆಮಾದೇಶ್ವರನನ್ನು ಮಾದಿಗ ಕುಲದವನೆಂದು ಪ್ರತಿಪಾದಿಸಲಾಗಿದೆ. ಇದು ನಿಜವಿರಬಹುದು ಅಥವಾ ಊಹೆಯಿರಬಹುದು. ಆದರೆ, ಶೂದ್ರಾತಿಶೂದ್ರರಿಗೆ ಒಂದು ಸ್ವಾಭಿಮಾನ ಮತ್ತು ಧಾರ್ಮಿಕವಾದ ದಿಕ್ಕು ದೆಸೆಗಳನ್ನು ತೋರಿದ ಕ್ರಾಂತಿಕಾರಕ ವ್ಯಕ್ತಿಗಳು ಇವರಾಗಿದ್ದರು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದ್ದರಿಂದಲೇ ಅನೇಕ ಜನಸಮುದಾಯಗಳು ಈ ಇಬ್ಬರು ಸಾಂಸ್ಕೃತಿಕ ವ್ಯಕ್ತಿಗಳನ್ನು ಆರಾಧ್ಯ ದೈವಗಳಾಗಿ ಕಾಣುತ್ತಿದ್ದಾರೆ. ದಕ್ಷಿಣ ತುತ್ತತುದಿಯ ಮಹಾ ಅರಣ್ಯದ ಎಪ್ಪತ್ತೇಳು ಮಲೆಗಳನ್ನೇ ತಮ್ಮ ಕ್ರಾಂತಿಯ ಸ್ಥಳವನ್ನಾಗಿ ಮಾಡಿಕೊಂಡ ಮಲೆಮಾದೇಶ್ವರ ಮೊದಲಿಗೆ ತನ್ನ ಶಿಷ್ಯರನ್ನಾಗಿ ಸ್ವೀಕರಿಸಿದ್ದು ಸೋಲಿಗರು ಮತ್ತು ಬೇಡ ಗಂಪಣದ ಸಮುದಾಯವನ್ನು. ಆದ್ದರಿಂದ ಸೋಲಿಗರು ಮಧ್ಯಕಾಲೀನ

PDF created with pdfFactory Pro trial version www.pdffactory.com

ಕರ್ನಾಟಕದ ಸಾಂಸ್ಕೃತಿಕ ಪರಿವರ್ತನೆಯ ಈ ಹಂತದಲ್ಲಿ ಮಲೆಮಾದೇಶ್ವರನ ಭಕ್ತರಾಗಿದ್ದಾರೆ. ಸಂಕಮ್ಮನ ಮಕ್ಕಳೆನ್ನಲಾದ ಕಾರಯ್ಯ ಮತ್ತು ಬಿಲ್ಲಯ್ಯ ಅವರು ಮಾದೇಶ್ವರನ ಪ್ರಥಮ ಶಿಷ್ಯರಾಗಿರಬೇಕು. ಇದು ಕಾವ್ಯದಲ್ಲಿಯೂ ಸ್ಪಷ್ಟವಾಗಿಯೇ ಬರುತ್ತದೆ. ಸೋಲಿಗರ ಸಾಂಸ್ಕೃತಿಕ ವೀರರಾದ ಇವರು ಬಹುಶಃ ಇಡೀ ಸೋಲಿಗ ಸಮುದಾಯವನ್ನೇ ಮಲೆಮಾದೇಶ್ವರನ ಭಕ್ತರಾಗುವಂತೆ ಪ್ರಭಾವ ಬೀರಿರಬಹುದು.

ಈ ನಡುವೆ ಮತ್ತೊಂದು ವಿಚಿತ್ರ ಪ್ರಸಂಗ ಸೋಲಿಗರ ಧಾರ್ಮಿಕ ಬದುಕಿನಲ್ಲಿ ನಡೆದು ಹೋಗಿದೆ. ಅದೇನೆಂದರೆ ಬಿಳಿಗಿರಿ ರಂಗಯ್ಯ ಸೋಲಿಗರ ಆರಾಧ್ಯ ದೈವವಾದ ಪ್ರಸಂಗ. ಮಲೆಮಾದೇಶ್ವರ ಬೆಟ್ಟದಿಂದ ಸುಮಾರು ದೂರದಲ್ಲಿರುವ ಮೈಸೂರು ಜಿಲ್ಲೆಯ ಮತ್ತೊಂದು ನಿಸರ್ಗ ಪರ್ವತವೆಂದರೆ ಬಿಳಿಗಿರಿ ರಂಗನ ಬೆಟ್ಟ. ಸೋಲಿಗರು ದಟ್ಟವಾಗಿರುವ ಪ್ರದೇಶವಿದು. ಮೂಲದಲ್ಲಿ ಮಾತೃವಿನ ಶಿವನ ಆರಾಧಕರಾಗಿದ್ದ ಸೋಲಿಗರು ಶ್ರೀ ವೈಷ್ಣವ ಪರಂಪರೆಯ ಬಿಳಿಗಿರಿ ರಂಗಯ್ಯನಿಗೆ ಹೇಗೆ ಮತ್ತು ಯಾವಾಗ ಭಕ್ತರಾದರು ಎಂಬುದು ಅತ್ಯಂತ ಕುತೂಹಲಕಾರಿ ವಿಚಾರ. ಅದಕ್ಕೂ ಒಂದು ಪುಟ್ಟ ಕಥೆ ಇದೆ. ಈ ಕಥೆಯನ್ನು ಸೋಲಿಗರು ಸುದೀರ್ಘ ಕಾವ್ಯವನ್ನಾಗಿಯೂ ಹಾಡುತ್ತಾರೆ. ಸೋಲಿಗರ ಮತ್ತೊಬ್ಬಳು ಚೆಲುವೆ ಕುಸುಮಾಲೆ. ಕಾಡಿನ ನಡುವಿನ ಪೋಡಿನಲ್ಲಿ ಈ ಸುಂದರ ಹೆಣ್ಣನ್ನು ಬಿಳಿಗಿರಿ ರಂಗಯ್ಯ ಕಾಣುತ್ತಾನೆ. ಅವಳ ಮೇಲೆ ಅವನಿಗೆ ಮನಸ್ಸಾಗುತ್ತದೆ. ಆದರೆ, ಕಾಡುಸೋಲಿಗರ ಬೊಮ್ಮೇಗೌಡ ಅಂದರೆ ಕುಸುಮಾಲೆಯ ತಂದೆ ಇದಕ್ಕೆ ಒಪ್ಪುವವನಲ್ಲ. ಮೊದಲನೆಯದಾಗಿ ಬಿಳಿಗಿರಿ ರಂಗಯ್ಯ ಸೋಲಿಗನಲ್ಲ. ಎರಡನೆದಾಗಿ ರಂಗಯ್ಯನಿಗೆ ಈಗಾಗಲೇ ಮದುವೆಯಾಗಿ ಇಬ್ಬರು ಮಡದಿಯರಿದ್ದಾರೆ. ಆದ್ದರಿಂದ ಹೆಣ್ಣನ್ನು ಕೇಳಿ ಪಡೆಯುವ ಪ್ರಶ್ನೆಯೇ ಬರುವುದಿಲ್ಲ ಎಂಬುದು ಬಿಳಿಗಿರಿ ರಂಗಯ್ಯನಿಗೂ ಗೊತ್ತಿದೆ. ಆದ್ದರಿಂದ ಏನು ಮಾಡುವುದು? ಮೊದಲು ಕುಸುಮಾಲೆಯ ಮನಸ್ಸನ್ನು ಕದಿಯುತ್ತಾನೆ. ನಂತರ ಅವಳನ್ನು ಅಪಹರಿಸಿ ಮದುವೆ ಮಾಡಿಕೊಳ್ಳುತ್ತಾನೆ. ಹೀಗೆ ಅಪಹರಣದ ಮೂಲಕ ರಂಗಯ್ಯ ಮತ್ತು ಕುಸುಮಾಲೆಯರು ಗಂಡ ಹೆಂಡಿರಾಗುತ್ತಾರೆ. ಇದನ್ನು ಒಪ್ಪಿಕೊಂಡ ಸೋಲಿಗ ಸಮುದಾಯದವರು ಬಿಳಿಗಿರಿ ರಂಗಯ್ಯನನ್ನು ಭಾವನನ್ನಾಗಿ ಸ್ವೀಕರಿಸುತ್ತಾರೆ. ಅಂದಿನಿಂದ ಸೋಲಿಗರಲ್ಲಿ ಅಪಹರಣ ರೂಪದ ವಿವಾಹಪದ್ಧತಿಯೇ ಬೆಳೆಯಿತು ಎಂದು ಸೋಲಿಗರು ಹೇಳುತ್ತಾರೆ. ಸೋಲಿಗರು ಇಂದು ನೆರವೇರಿಸುವ ವಿವಾಹದಲ್ಲಿಯೂ ಈ ಅಪಹರಣದ ಸಾಂಕೇತಿಕ ಆಚರಣೆಗಳು ನಡೆಯುತ್ತವೆ. ಒಂದು ಕಾಲಕ್ಕೆ ಗಂಡು ಹೆಣ್ಣನ್ನು ಅಪಹರಿಸುವ ಮೂಲಕವೇ ತನ್ನವಳಾಗಿ ಮಾಡಿಕೊಳ್ಳುವ ಅಪರೂಪದ ವಿವಾಹಪದ್ಧತಿಯೊಂದು ಸೋಲಿಗರಲ್ಲಿ ಇದ್ದುದನ್ನು ಈ ಸಾಂಕೇತಿಕ ಆಚರಣೆಗಳು ನಿಚ್ಚಳಪಡಿಸುತ್ತವೆ.

ಆದರೆ ಈ ಪದ್ಧತಿಯನ್ನು ಕುಸುಮಾಲೆ ಮತ್ತು ಬಿಳಿಗಿರಿ ರಂಗಯ್ಯನ ಸಂಬಂಧಗಳ ಜೊತೆಯಲ್ಲಿ ಬೆಸೆದಿರುವುದು ತುಂಬ ಔಚಿತ್ಯಪೂರ್ಣವಾಗಿದೆ. ಈಗಾಗಲೇ ದೈವವಾಗಿದ್ದ ಬಿಳಿಗಿರಿ ರಂಗಯ್ಯ ಸೋಲಿಗರ ಭಾವ ನೆಂಟನಾದ ಮೇಲೆ ಅವನನ್ನು ಪೂಜಿಸಲೇಬೇಕು ತಾನೇ? ಈಗ ಎಷ್ಟರ ಮಟ್ಟಿಗೆ ಸೋಲಿಗರು ಬಿಳಿಗಿರಿ ರಂಗಯ್ಯನ ಭಕ್ತರಾಗಿದ್ದಾರೆ ಎಂದರೆ ಹಾಲಕ್ಕಿ ಒಕ್ಕಲಿಗರು ಮತ್ತು ಗೊಂಡರು ತಿರುಪತಿ ವೆಂಕಟರಮಣನ ಭಕ್ತರಾದಂತೆಯೇ ಈ ಪ್ರಸಂಗ ಕೂಡ.

ಇಲ್ಲಿ ನಮ್ಮ ದೈವಗಳ ಸಂಬಂಧದಲ್ಲಿ ಉಂಟಾಗಿರುವ ಬಹುಮುಖ್ಯವಾದ ಮತ್ತು ಅಪರೂಪದ ವೈವಾಹಿಕ ಸಂಬಂಧಗಳನ್ನು ನೆನಪಿಸಿಕೊಳ್ಳುವ ಅಗತ್ಯವಿದೆ. ಮೇಲುಕೋಟೆಯ ಚೆಲುವರಾಯನಿಗೆ ವರನಂದಿ ಪ್ರೇಯಸಿಯಾಗಿ ಬರುವುದು, ನಂಜನಗೂಡು ನಂಜುಂಡನಿಗೆ ಬೆಟ್ಟದ ಚಾಮುಂಡಿ ಪ್ರೇಯಸಿಯಾಗುವುದು, ಬಿಳಿಗಿರಿ ರಂಗಯ್ಯನಿಗೆ ಕುಸುಮಾಲೆ ಪ್ರೇಯಸಿಯಾಗುವುದು, ಬೇಲೂರು ಚೆನ್ನಕೇಶವನಿಗೆ ಮಳಲಿಯ ಗಿಡ್ಡಮ್ಮ ಪ್ರೇಯಸಿಯಾಗುವುದು, ಉಜ್ಜನಿಯ ವರದರಾಜನಿಗೆ ಚೌಡಮ್ಮ ಪ್ರೇಯಸಿಯಾಗುವುದು, ತಿರುಪತಿ ವೆಂಕಟರಮಣನಿಗೆ ಅಲಮೇಲು ಮಂಗಮ್ಮ ಪ್ರೇಯಸಿಯಾಗುವುದು–ಇವೆಲ್ಲ ವಿಚಿತ್ರ ಪ್ರಸಂಗಗಳಂತೆ ಕಂಡರೂ ನಮ್ಮ ದೇವ–ದೇವಿಯರ ಜಗತ್ತಿನಲ್ಲಿ ತುಂಬ ಕುತೂಹಲಕಾರಿಯಾದ ಸಂಗತಿಗಳು. ಅದರಲ್ಲಿಯೂ ವೈದಿಕ ಸಂಪ್ರದಾಯದ ವೈಷ್ಣವ ದೇವತೆಗಳು ಗಂಡಂದಿರಾಗಿ ಸ್ಥಳೀಯ ದೇವಿಯರು ಪತ್ನಿಯರಾಗಿ ಸೇರ್ಪಡೆಗೊಂಡ ಈ ಐತಿಹಾಸಿಕ ಪ್ರಸಂಗಗಳನ್ನು ಮುಂದಿನ ಅಧ್ಯಯನಗಳಲ್ಲಿ ವಿವರಿಸಲು ಪ್ರಯತ್ನಿಸಲಾಗುವುದು. ಈಗ ಬಿಳಿಗಿರಿ ರಂಗಯ್ಯ ಮತ್ತು ಕುಸುಮಾಲೆಯ ಪ್ರಸಂಗವನ್ನು ನೋಡೋಣ. ಈ ಸಂಬಂಧದಲ್ಲಿ ವಿದ್ವಾಂಸರೊಬ್ಬರು ಹೀಗೆ ಹೇಳುತ್ತಾರೆ. "ರಂಗನಾಥನ ಮತ್ತು ಸ್ಥಾನಿಕ ಸಮುದಾಯಗಳ ಅಮ್ಮಂದಿರ ಈ ಪ್ರಣಯಸಂಬಂಧ ಕಲಹವನ್ನು ಉಂಟುಮಾಡಿದರೂ, ಅದನ್ನು ವಿಧಿಬದ್ಧವಾಗಿ ಒಪ್ಪಿಕೊಂಡು ಅದಕ್ಕೂ ಒಂದು ಸ್ಥಾನ ಕಲ್ಪಿಸಲಾಗುತ್ತದೆ. ಅಷ್ಟೇ ಅಲ್ಲ, ಅದನ್ನು ಮುಂದುವರೆಸಿಕೊಂಡು ಬರಲಾಗುತ್ತದೆ. ಎಂದರೆ ಈ ದೇವತೆಯ ವೈವಾಹಿಕ ಚೌಕಟ್ಟಿಗಿಂತ ಆತನ ಪ್ರಣಯಸಂಬಂಧವೇ ಸ್ಥಾನಿಕ ಸಂದರ್ಭದಲ್ಲಿ ಹೆಚ್ಚು ಪ್ರಸ್ತುತವಾಗಿರುವುದು. ಇದು ನೂರಾರು ವರ್ಷಗಳ ಮಾದರೀಕರಣದ ನಂತರವೂ ಸ್ಥಾನಿಕ ಸಂಸ್ಕೃತಿಗಳ ಜೊತೆಗೆ ಈ ದೇವತೆಗೆ ಇರುವ ಸಂಬಂಧದ ಗಾಢತೆಯನ್ನು ತೋರಿಸುತ್ತದೆ. ಈ ಸ್ಥಾನಿಕ ನಿರೂಪಣೆಗಳು ಕೇವಲ ತಮ್ಮ ಮತ್ತು ರಂಗಯ್ಯನ ಗಾಢ ಸಂಬಂಧವನ್ನು ದೇವಿಯರ ಮೂಲಕ ಸಾರಿಕೊಳ್ಳುವುದಲ್ಲದೇ, ರಂಗಯ್ಯನ ಕೌಟುಂಬಿಕ ಚೌಕಟ್ಟು ಕೃತಕ ಹಾಗೂ ತಮ್ಮ ದೇವಿಯ ಸಂಬಂಧವೇ ಜೀವಂತ ಎಂದು ಪ್ರತಿಪಾದಿಸುತ್ತದೆ. ಇಂಥ ಪ್ರತಿಪಾದನೆಯಲ್ಲಿ

PDF created with pdfFactory Pro trial version www.pdffactory.com

ರಂಗಯ್ಯನ ಕುರಿತಾಗಿ ಬೆಳೆದು ಬಂದ ದೇವಾಲಯ ಸಂಸ್ಕೃತಿ ಹಾಗೂ ಪ್ರತಿಮಾಶಾಸ್ತ್ರಗಳ ಕುರಿತು ವ್ಯಂಗ್ಯವೂ ಸೇರಿರುತ್ತದೆ. ಇದು ನಮಗೆ ಸ್ಪಷ್ಟವಾಗಿ ಕಾಣುವುದು ಬಿಳಿಗಿರಿ ರಂಗ–ಕುಸುಮಾಲೆ ಕಾವ್ಯದಲ್ಲಿ.

ಬಿಳಿಗಿರಿ ರಂಗಯ್ಯ ಈಗಾಗಲೇ ಉಲ್ಲೇಖಿಸಿದಂತೆ ವೆಂಕಟೇಶ್ವರ ಎಂದು ಶಾಸ್ತ್ರೀಯವಾಗಿ ಗುರುತಿಸಲ್ಪಟ್ಟಿದ್ದಾನೆ. ಈ ದೇವಾಲಯದ ೧೩–೧೪ನೇ ಶತಮಾನದಷ್ಟು ಹಿಂದಿನ ಭಾಗಗಳನ್ನೂ ಹೊಂದಿದೆ. ಈ ದೇವತೆ ಸ್ಥಾನಿಕವಾಗಿ ಸೋಲಿಗರ ಹಾಗೂ ಮಾದಿಗ ಮುಂತಾದ ಸಮಾಜಗಳ ಕುಲದೈವ. ಈತ ಒಬ್ಬ ಬೇಟೆಯಾಡುವ ದೇವತೆಯಾಗಿದ್ದು ಸದಾ ಅರಣ್ಯದಲ್ಲಿ ಓಡಾಡುತ್ತಿರುತ್ತಾನೆ. ಹಾಗಾಗಿ ಈ ದೇವತೆಗೆ ಮಾದಿಗರು ಎರಡು ವರ್ಷಕ್ಕೊಮ್ಮೆ ದೊಡ್ಡ ಪಾದುಕೆಗಳನ್ನು ಮಾಡಿ ಸಲ್ಲಿಸುತ್ತಾರೆ. ಸೋಲಿಗರು ಕೂಡ ಈತನನ್ನು ಭಾವರಂಗಯ್ಯ ಎಂದು ಗುರುತಿಸುತ್ತಾರೆ. ಏಕೆಂದರೆ ಈತ ಸೋಲಿಗರ ದೇವಿಯಾದ ರಂಗಿಯ ಜೊತೆ ಸಂಬಂಧ ಹೊಂದಿದ್ದಾನೆ ಹಾಗೂ ಕುಸುಮಾಲೆ ಆತನ ಅತ್ಯಂತ ಮೆಚ್ಚಿನ ಪ್ರೇಯಸಿ. ಬಿಳಿಗಿರಿಯ ಜಾತ್ರೆಯ ಸಮಯದಲ್ಲಿ ಸೋಲಿಗರು ತಮ್ಮ ದೇವಿಯನ್ನು ತಂದು ಕಲ್ಯಾಣಿಯ ಬಳಿ ಗುಡಿಸಲು ಹಾಕಿ ಇಡುತ್ತಾರೆ. ರಂಗ ರಾತ್ರಿ ಅವಳಲ್ಲಿಗೆ ಬರುತ್ತಾನೆ ಎಂದು ಅವರು ನಂಬುತ್ತಾರೆ. ಸೋಲಿಗರ ಹಾಡು ನಿರೂಪಿಸುವಂತೆ ಆತ ತನ್ನ ಹೆಂಡತಿಯರು, ಆಳುಕಾಳು ಹಾಗೂ ಅರಮನೆಯಿಂದ ಹೊರಗೆ ಓಡಿ ಬರಲು ಸದಾ ಹೊಂಚುತ್ತಿರುತ್ತಾನೆ. ಆದರೆ ಆತನನ್ನು ಅಲ್ಲಿ ಬಲಾತ್ಕಾರವಾಗಿ ಬಂಧಿಸಲಾಗಿದೆ. ಇದಕ್ಕೆ ಸಂಬಂಧಿಸಿದ ಹಾಡುಗಳಲ್ಲಿ ವಿಭಿನ್ನ ವಿವರಗಳು ಬರುತ್ತವೆಯಾದರೂ ಅವುಗಳ ಸಾರಾಂಶವನ್ನು ಈ ಕೆಳಗಿನಂತೆ ನೀಡಬಹುದು.

ರಂಗಯ್ಯನನ್ನು ಆತನ ಹೆಂಡತಿಯರಾದ ಲಕ್ಕಮ್ಮ ಹಾಗೂ ತೊಳಚಮ್ಮ ಸರ್ವಕಾವಲು ಹಾಕಿ ಕಾಯುತ್ತಿರುತ್ತಾರೆ. ಬೇಹುಗಾರಿಕೆಗೆ ಹನುಮಪ್ಪನನ್ನು ನೇಮಿಸಿರುತ್ತಾರೆ. ರಂಗಯ್ಯನು ತನ್ನ ಹೆಂಡತಿಯರು ನಿದ್ದೆ ಮಾಡುತ್ತಿರುವಾಗ ಸದ್ದಿಲ್ಲದೇ ಓಡಿ ಹೋಗುತ್ತಾನೆ(ಒಂದು ಪಾಠದ ಪ್ರಕಾರ ತನ್ನಂಥದೇ ಮರದ ಪ್ರತಿಮೆಯೊಂದನ್ನು ಮಾಡಿ ಹೆಂಡತಿಯ ಮಧ್ಯೆ ಮಲಗಿಸಿ ಹೋಗುತ್ತಾನೆ). ಹನುಮಂತ ಇವನನ್ನು ನೋಡಿ ಬೆನ್ನಟ್ಟುತ್ತಾನೆ. ಆದರೆ ರಂಗ ಹನುಮಂತನನ್ನು ತೇರಿಗೆ ಕಟ್ಟಿಹಾಕಿ ಈ ಸೂಳೆ ರಂಗಿಯ ಗುಡಿಸಲಿಗೆ ಹೋಗುತ್ತಾನೆ. ಮಾರನೆಯ ದಿನ ಲಕ್ಕಮ್ಮ, ತೊಳಚಮ್ಮ ರಂಗನನ್ನು ಹುಡುಕಿಕೊಂಡು ಹನುಮಂತನ ಸಹಾಯದಿಂದ ರಂಗಿಯ ಗುಡಿಸಲಿಗೆ ಹೋಗಿ ಗುಡಿಸಲನ್ನು ಒದ್ದು ಕೆಡವಿ ರಂಗನನ್ನು ವಾಪಸ್ಸು ಕರೆತರುತ್ತಾನೆ(ಒಂದು ಪಾಠದ ಪ್ರಕಾರ ಸೂಳೆ ರಂಗಿ ೯೦೦೦ ಹಣ ಕೊಡದ ಹೊರತು ವಾಪಸ್ಸು ಹೋಗುವಂತಿಲ್ಲ ಎಂದು ಆತನನ್ನು ಮನೆಯಲ್ಲಿ ಇಟ್ಟಿರುತ್ತಾಳೆ.

ಲಕ್ಕಮ್ಮ–ತೊಳಚಮ್ಮ ಆ ಹಣವನ್ನು ಕಳುಹಿಸಿ ರಂಗಯ್ಯನನ್ನು ವಾಪಸ್ಸು ಕರೆಸಿಕೊಳ್ಳುತ್ತಾರೆ). ಮನೆಯಲ್ಲಿ ಹೆಂಡಿರಿಬ್ಬರೂ ರಂಗಯ್ಯನಿಗೆ ಅರ ಕಡ್ಡಿಯಲ್ಲಿ ಹೊಡೆದು, ಸ್ನಾನ ಮಾಡಿಸುತ್ತೇವೆಂದು ಆತನ ಮೈಮೇಲೆ ಬೊಕ್ಕೆ ಏಳುವ ಹಾಗೆ ಕುದಿ ನೀರನ್ನು ಸುರಿದು ಉಪವಾಸ ಕೆಡವಿ ಹಿಂಸಿಸುತ್ತಾರೆ. ಆಗ ರಂಗಯ್ಯ ಸತ್ತವನಂತೆ ನಟಿಸುತ್ತಾನೆ. ಹೆಂಡತಿಯರು ಆತನನ್ನು ಸ್ಮಶಾನಕ್ಕೆ ಒಯ್ದು ಸುಡಲು ತಯಾರಿ ನಡೆಸುತ್ತಾರೆ. ಉಪಾಯವಿಲ್ಲದೆ ರಂಗ ಅಲ್ಲಿಂದ ಎದ್ದು ಮನೆಗೆ ಓಡಿ ಬರುತ್ತಾನೆ. ಮತ್ತೆ ಆ ರಾತ್ರಿ ಆತನಿಗೆ ಕುಸುಮಾಲೆಯ ನೆನಪು ಕಾಡುತ್ತದೆ. ಆ ರಾತ್ರಿ ಮನೆಯಿಂದ ಜಾರಿಕೊಳ್ಳುತ್ತಾನೆ. ಅಡವಿಗೆ ಬಂದು ಕುಸುಮಾಲೆಯನ್ನು ಒಲಿಸಿಕೊಂಡು ಆಕೆಯ ಮನೆಯಲ್ಲಿ ತನ್ನ ಹೆಂಡತಿಯರು, ಹನುಮಂತ ಹಾಗೂ ತನ್ನ ಮೇಲುಗಿರಿಯ ಗ್ಯಾನವನ್ನು ಮರೆತು ಮಲಗಿರುತ್ತಾನೆ.

ಈ ಹಾಡುಗಳಲ್ಲಿ ರಂಗಯ್ಯನ ಮನಸ್ಸು ಸೋಲಿಗರ ಪ್ರೇಯಸಿಯ ಕಡೆಗೆ ಸೆಳೆಯುತ್ತಿದ್ದರೂ, ಅದಕ್ಕೆ ತಡೆಯಾಗಿ ಆತನ ಹೆಂಡತಿ ಹಾಗೂ ಅರಮನೆಯ ವ್ಯವಸ್ಥೆ ನಿಂತಿದೆ. ಅಲ್ಲಿಂದ ತಪ್ಪಿಸಿಕೊಂಡು ಬರುವುದಕ್ಕೆ ಅವನು ಮಾಡುವ ಉಪಾಯ ಎಂದರೆ, ತನ್ನ ಪ್ರತಿಮೆಯೊಂದನ್ನು ತಯಾರಿಸಿ ಹೆಂಡತಿಯರನ್ನು ವಂಚಿಸುವುದು, ರಂಗಯ್ಯ ಮೂಲತಃ ದಾಸಯ್ಯನಂತೆ ಜಂಗಮನಾದ ದೇವತೆಯಾಗಿದ್ದು, ಮನೆಯೊಳಗೆ ಬಂಧಿಯಾದಾಗ ಸೂಳೆ ರಂಗಿಯ ಮನೆಗೆ ಹೋಗದಿದ್ದರೆ ದಾಸನಾದುದಕ್ಕೆ ಫಲವೇನು ಎಂದು ಚಿಂತಿಸುತ್ತಾನೆ. ತಾನು ಮನೆಯೊಳಗಿಲ್ಲ ಎಂಬ ಸಂಗತಿಯನ್ನು ಮುಚ್ಚಿಡಲು ಆತನಿಗೆ ಪ್ರತಿಮೆ ಒಂದು ಉಪಾಯವಾಗಿ ಬರುತ್ತದೆ. ಅಂದರೆ ಈ ಹಾಡುಗಳು ರಂಗನ ಮೂರ್ತಿಯನ್ನು ಸುಳ್ಳುಬೊಂಬೆ ಅಥವಾ ಮಾಯದ ರೂಪ ಎಂದು ಸೂಚಿಸುತ್ತವೆ ಹಾಗೂ ನಿಜವಾದ ರಂಗ ತಮ್ಮ ಜೊತೆಗೆ ಇದ್ದಾನೆ ಎಂದು ಪ್ರತಿಪಾದಿಸುತ್ತವೆ. ಈ ಹಾಡಿನಲ್ಲಿ ಆತನು ಬೊಂಬೆಯ ಉಲ್ಲೇಖ ಬರುವಾಗ ಮಲಗಿದ ಭಂಗಿಯ ಹಾಗೂ ಜೊತೆಗೆ ಲಕ್ಕಮ್ಮ ಹಾಗೂ ತೊಳಚಮ್ಮ ನೋಡಿದಂತೆ ರಂಗನಾಥ–ತಿಮ್ಮಪ್ಪನ ಮುಖ್ಯವಾದ ಎರಡು ರೂಪಗಳಲ್ಲಿ ಒಂದು ಶಯನ ಮೂರ್ತಿಯಾಗಿದ್ದು, ಜೊತೆ ಆತನ ಹೆಂಡತಿಯನ್ನು ತೋರಿಸುತ್ತಾರೆ. ಇಲ್ಲಿ ಅವಳೂ ಅದರ ಒಂದು ಭಾಗವಾಗಿದ್ದಾಳೆ. ಈ ಹಾಡು ಅಂಥದ್ದೇನಾದರೂ ಮೂರ್ತಿ ವಿವರಗಳನ್ನು ಸೂಚಿಸಬಹುದೇ? ಒಟ್ಟಿನಲ್ಲಿ ಈ ಹಾಡು ಕೇವಲ ಒಂದು ವಿಧಿ ಆಚರಣೆ ಆಗಿರದೆ, ಸಾಂಸ್ಕೃತಿಕ ಟೀಕೆಯ ಧ್ವನಿಗಳನ್ನು ಹೊತ್ತಿದೆ ಎಂಬುದು ಸ್ಪಷ್ಟವಾಗಿದೆ."[೯]

ಈ ರೀತಿಯ ಶ್ರೀ ವೈಷ್ಣವ ಪ್ರಭಾವ ಮತ್ತು ತಿರುಪತಿ ಹಾಗೂ ಇತರೆ ವೈಷ್ಣವ ದೇವರುಗಳ ಭಕ್ತರಾದ ವಿವರಣೆಗಳನ್ನು ಹಾಗೂ ಅದರಲ್ಲಿ ರಾಮಾನುಜಾಚಾರ್ಯರ

PDF created with pdfFactory Pro trial version www.pdffactory.com

ಪಾತ್ರವನ್ನು ಈಗಾಗಲೇ ವಿವರಿಸಿರುವುದರಿಂದ ಇಲ್ಲಿಗೆ ಸೋಲಿಗರ ದೇವರ ವಿಚಾರವನ್ನು ತಾತ್ಕಾಲಿಕವಾಗಿ ನಿಲ್ಲಿಸಬಹುದೆಂದು ಕಾಣುತ್ತದೆ.

೨.೬. ಮರದ ಮೇಲಿನ ದೇವರು

ಬೆಂಗಳೂರು ನಗರದಿಂದ ಕೇವಲ ನಲವತ್ತು ಕಿ.ಮೀ. ದೂರದಲ್ಲಿರುವ ಸಾವನದುರ್ಗ ಎಂಬ ಬೆಟ್ಟ ಪ್ರದೇಶ ಬುಡಕಟ್ಟುಗಳ ಒಂದು ಮೂಲ ತಾಣ. ಸಾವನದುರ್ಗ, ಉತ್ತರಿದುರ್ಗ, ಹುಲಿಯೂರುದುರ್ಗ, ಕೃಷ್ಣಗಿರಿ, ರಾಮಗಿರಿ–ಮುಂತಾಗಿ ಏಳು ದುರ್ಗಗಳಲ್ಲಿ ಪಾಳೇಗಾರ ದೊರೆ ಕೆಂಪೇಗೌಡ ಆಳುತ್ತಿದ್ದನೆಂಬ ಇತಿಹಾಸವಿದೆ. ಮೈಸೂರು ಕಡೆಯಿಂದ ಬೆಂಗಳೂರಿಗೆ ಬರುವ ಹೆದ್ದಾರಿಯಲ್ಲಿ ರಾಮನಗರ ಸಿಗುತ್ತದೆ. ರಾಮನಗರದ ಆಸುಪಾಸುಗಳಲ್ಲಿ ಭೂಮಿಯಿಂದ ಬೃಹದಾಕಾರವಾಗಿ ಎದ್ದು ನಿಂತ ವಿವಿಧಾಕೃತಿಯ ಬಂಡೆ ಬೆಟ್ಟಗಳಿವೆ. ಚಿತ್ರವಿಚಿತ್ರ ಆಕಾರದ ಈ ಬಂಡೆಗಳ ನಡುವೆ ಅಲ್ಲಲ್ಲಿ ಕೃಷಿ ಭೂಮಿಯೂ ಹಿಂದೆ ಮಹಾ ಅರಣ್ಯಗಳಿದ್ದ ಚಹರೆಗಳೂ ಕಾಣಸಿಗುತ್ತವೆ. ಸಾವನದುರ್ಗದ ಆಸುಪಾಸಿನಲ್ಲಿ ಈಗಲೂ ಒಂದಿಷ್ಟು ಒಳ್ಳೆಯ ಅರಣ್ಯವಿದೆ. ಸಾವನದುರ್ಗದಿಂದ ಮಾಗಡಿಯವರೆಗೆ ಇರುವ ಹಳ್ಳ–ಕೊಳ್ಳ, ಬೆಟ್ಟ–ದಿನ್ನೆ ಮುಂತಾದ ವೈವಿಧ್ಯಗಳ ನಡುವೆ ಇರುವ ಕುರುಚಲು ಕಾಡಿನಲ್ಲಿ ಅಥವಾ ಹೆಬ್ಬಂಡೆಗಳ ಪದತಲದಲ್ಲಿ "ಇಲ್ಲುಗ ಪೂಜಾರಿಗಳು" ಎಂಬ ವಿಶಿಷ್ಟ ಜನ ಸಮುದಾಯವಿದೆ. ಸದ್ಯಕ್ಕೆ ರಾಮನಗರ, ಮಾಗಡಿ, ಕುಣಿಗಲ್ ತಾಲೂಕಿನ ಇಂಥ ವಿಶಿಷ್ಟ ಬಂಡೆ ಬೆಟ್ಟಗಳ ನಡುವೆ ಇವರು ಕಾಣಸಿಗುತ್ತಾರೆ. ಈ ಸೀಮಿತ ಪ್ರದೇಶದಲ್ಲಿರುವ ಇವರ ಸಂಖ್ಯೆ ಸುಮಾರು ನಾಲ್ಕು ಸಾವಿರವಿರಬಹುದು ಅಷ್ಟೆ. ಇವರ ಬಗ್ಗೆ ಅಧ್ಯಯನ ಮಾಡಿರುವ ಸಿದ್ಧಗಂಗಯ್ಯ ಕಂಬಾಳು(ನಿಸರ್ಗಪ್ರಿಯ) ಅವರು ಹೇಳುವ ಮಾತುಗಳನ್ನು ಇಲ್ಲಿ ನೀಡುವುದು ಸೂಕ್ತ ಎಂದುಕೊಂಡಿದ್ದೇನೆ. ೧೯೮೧ರಲ್ಲಿ ಕ್ಷೇತ್ರಕಾರ್ಯ ನಡೆಸಿದಾಗ ರಾಮನಗರ ತಾಲ್ಲೂಕು ಬಸವಲಿಂಗನ ದೊಡ್ಡಿ ಹುಚ್ಚಯ್ಯ(ವಯಸ್ಸು ೮೫ ಇರಬಹುದು)ನ ಹೇಳಿಕೆಯಿಂದ ಪಡೆದ ಮಾಹಿತಿ–

"ಸೋಮಿ ನಾವ್ ಅಪ್ಪನ ಕಾಲ್ದಾಗಿನಿಂದ ಕಾಡಜನ. ಕಾಡಪೂಜಾರಿಗಳೂಂತ ಆದಿಸಿಂದ ಹೇಳ್ತಾರೆ. ನಾವ್ ವಟ್ಟೆ ಪಾಡಿಗೆ ಇಲಿಯಿಡುಕೊಂಡು ತಿಂತೀವಲ್ಲ ಅದ್ಕೆ 'ಇಲಿಗ್ರು' 'ಇಲಿಗ್ರೂ' ಅಂತ ಜನ ಕೂಗತದ. ಇಲಿಗ್ರು ಅಂದರೆ ನಮ್ಮನ್ನ ಬೈದಂಗೆ ಅಂತ ತಿಳ್ಕುಳಿ. ಬಡ ಜನ ಏನಂದ್ರು ಸುಮ್ಕಿರತೀವಿ. ನಾ ಚಿಕ್ಕೋನಾಗಿದ್ದಾಗ ಯಾರ್ಸಾಮಿ ನಮ್ಮ ಗವೀ ಅತ್ರ ಬತ್ತಿದ್ದೋರು. ಅಪ್ಪನ ಕಾಲ್ದಾಗೆ ಬಟ್ಟೆ ಇಕ್ಕಿದ ಜನ ಕಂಡರೆ ದಿಗಿಲು ಬಿದ್ದು ಓಡಿ ಕಾಡಿನಾಗೆ ಮಕ್ಕೋಳತಿದ್ದು. ನನ ಕಣ ಮುಂದೇನೇ ಕಾಡು ಬಟಾ ಬಯಲಾಗಿ ಹೋಯ್ತು. ಕಾಡವಾಗೆ ಜೇನು, ಕಡ್ಡಿಜೇನು, ಹೆಜ್ಜೇನು ಯಾವ್ದೂ ಸಿಗದಂಗಾಯ್ತು. ಬೆಂಕಿ ಬಿದ್ದು ಕಾಡಗೆಣಸ್ತು ನಾಶವಾಯ್ತು. ಇನ್ನೇನು ತಿನ್ನಾನ ಇಲಿ ಹಿಡಕೊಂಡೇ ತಿಂದೋ ಅದ್ಕೆ ಇಲಿಗ್ರು ಅಂತ ಕರೀತಾರೆ."

ಇಲ್ಲುಗರು ಕೆಂದು ಬಣ್ಣದ ನಸು ಗುಂಗುರು ಕೂದಲಿನ ಮೊಂಡೆನಿಸುವ ಮೂಗಿನ ವರಟು ಜನಾಂಗ. ರಾಮನಗರದ ಬಳಿಯಿರುವ ಮೆಟ್ಟಾರೆ ಕಾಡಿನಲ್ಲಿ ವಾಸಿಸುವ ಈ ಜನರಲ್ಲಿ ಇವರ ಮೂಲ ಬಣ್ಣ ಆಕಾರಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಉಳಿದೆಡೆಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಗಳನ್ನು ಕಾಣಬಹುದು. ಒಟ್ಟಾರೆ ಇಲ್ಲಿಗರ ರೂಪಲಕ್ಷಣ ಒಂದೇ ಒಂದೇತೆರನಾಗಿರುತ್ತದೆ.

ಮಾಗಡಿ, ರಾಮನಗರ, ಸುತ್ತಲ ಬೆಟ್ಟ ಗುಡ್ಡಗಳಲ್ಲಿ ೧೨ನೇ ಶತಮಾನದಲ್ಲಿ ಶ್ರೀ ರಾಮಾನುಜಾಚಾರ್ಯರು ಹಲವು ಕಾಲ ನೆಲೆಯಾಗಿದ್ದರೆಂದು ತಿಳಿದುಬರುತ್ತದೆ. ಶೈವದೊರೆ ಕಾಂಚೀಪುರದ ರಾಜ ರಾಮಾನುಜಾಚಾರ್ಯರ ತಲೆ ಕತ್ತರಿಸಿ ತಂದವರಿಗೆ ಸುವರ್ಣ ನಾಣ್ಯಗಳನ್ನು ಬಹುಮಾನವಾಗಿ ಸಾರಿದ್ದ. ಆಚಾರ್ಯರ ತಲೆಯನ್ನು ಉಳಿಸಿಕೊಳ್ಳಲು ಅವರ ಭಕ್ತರು ರಾಮಾನುಜಾಚಾರ್ಯರಂತೆ ವೇಷ ಧರಿಸಿ ಅವರನ್ನು ಗೌಪ್ಯ ಮಾಡಿ ರಾಜನ ದಂಡನೆಗೆ ತಲೆತೆತ್ತರು. ಆ ಸಂದರ್ಭದಲ್ಲಿ ತಲೆಮರೆಸಿಕೊಳ್ಳಲು ರಾಮನಗರ, ಮಾಗಡಿ ಪ್ರಾಂತ್ಯದ ಬೆಟ್ಟಗುಡ್ಡಗಳಲ್ಲಿ ಆಚಾರ್ಯರು ವಾಸಿಸುತ್ತಿದ್ದರು ಅಥವಾ ಅವರ ಶಿಷ್ಯರಿದ್ದರು. ಇವರು ಕಾಡಿನಂಚಿನಲ್ಲಿದ್ದ ಒಕ್ಕಲಿಗರ ಮೇಲೆ ವೈಷ್ಣವಮತದ ಧಾರ್ಮಿಕ ಆಚರಣೆಗಳನ್ನು ತೆಳುವಾಗಿ ಹೊದಿಸಿದರೆಂದು ಕಾಣುತ್ತದೆ. ಒಕ್ಕಲಿಗರ ಮೂಲಕವಾಗಿಯೋ, ನೇರವಾಗಿಯೋ, ಇಲ್ಲಿಗರ ಮೇಲೆ ವೈಷ್ಣವ ದೈವದ ಪ್ರಭಾವ ಬೀರಿದ್ದು ವಿಷ್ಣು ಆರಾಧನೆಗೆ ತೊಡಗಿರಬೇಕು. ನಂತರ ಉತ್ತರ ದೇಶದಿಂದ ಕೊಳ್ಳೇಗಾಲದ ಕಡೆಗೆ ಬಂದ ಮಾದೇಶ್ವರರೆಂಬ ಶೈವ ಸಂಪ್ರದಾಯದ ಜಂಗಮರು, ಇಲ್ಲಿಗರ ಮೇಲೆ ಶಿವಾಚಾರದ ಪ್ರಭಾವ ಬೀರಿದರು. ಹೀಗಾಗಿ ಕೆಲವು ಇಲ್ಲಿಗರು ವಿಷ್ಣು ಸಂಪ್ರದಾಯವನ್ನು ಅನುಸರಿಸಿ ಹಣೆಗೆ ನಾಮವನ್ನು, ಉಳಿದವರು ಹಣೆಗೆ ವಿಭೂತಿ ಧರಿಸಿ ಶೈವಸಂಪ್ರದಾಯವನ್ನು ಅನುಸರಿಸುತ್ತಿದ್ದಾರೆ. ವಿಷ್ಣು ಸಂಪ್ರದಾಯದ ನಾಮ ಧರಿಸುವವರಿಗೆ, ಒಕ್ಕಲಿಗರ ಗೋಮಿನ ದೇಶಾಭಾಗದ ದಾಸಯ್ಯಗಳು ಗುರುಗಳಾದರೆ, ಶೈವ ಸಂಪ್ರದಾಯದ ವಿಭೂತಿದಾರಿಗಳಿಗೆ 'ಅಯ್ಯನವರು' ಗುರುಗಳಾಗಿರುತ್ತಾರೆ. ಇಲ್ಲಿಗರಿಗೆ ಹರನಾಗಲಿ, ಹರಿಯಾಗಲಿ, ಯಾರು ಏನು ಎಂಬ ವ್ಯತ್ಯಾಸ ತಿಳಿದಿಲ್ಲ. ವಿಷ್ಣು ಸಂಪ್ರದಾಯದವರು, ಎಳೆಯಮ್ಮ, ಬರೆಯಮ್ಮ ಮತ್ತು ಮಾದೇಶ್ವರನ ಒಕ್ಕಲು. ನಾಮ ಧರಿಸುವವರನ್ನು ಮುಳ್ಳು ಕುಲದವರೆಂತಲೂ ವಿಭೂತಿದಾರಿಗಳನ್ನು ಛತ್ರಿಕುಲದವರು, ಬೆಳ್ಳಿಕುಳಿಯಾದ ಬೆಳ್ಳಿ ಕುಲದವರೆಂತಲೂ ಕರೆಯುತ್ತಾರೆ.

ಲಕ್ಷ್ಮೀಪುರದ ಬಳಿ ಇರುವ ಇಲ್ಲಿಗರ ಪ್ರೇತವನವನ್ನು ನೋಡಿಬರಲೆಂದು ಹೋಗಿದ್ದಾಗ ಸಂದರ್ಶಕನಿಗೆ ಆಶ್ಚರ್ಯಕರವಾದ ಮಾಹಿತಿಯೊಂದು ದೊರೆಯಿತು. ತೊಂಬತ್ತು ವರ್ಷದ ಮುದುಕಿಯೊಬ್ಬಳು ಹದಿವಯಸ್ಸಿನ ಹುಡುಗಿಯ ಜೊತೆ

PDF created with pdfFactory Pro trial version www.pdffactory.com

ಮುರುಕು ಜೋಪಡಿಯಲ್ಲಿ ವಾಸಿಸುತ್ತಿದ್ದಾಳೆ. ಈ ಜೋಪಡಿ ಇಲ್ಲಿಗರ ಪ್ರೇತವನಕ್ಕೆ ಹೊಂದಿಕೊಂಡಿದೆ. ಒಂಟಿ ಗುಡಿಸಲ ಬಗ್ಗೆ ವಿಚಾರಿಸಿದಾಗ ಆ ಮುದುಕಿ ಮಠಕಯ್ಯನ ದೊಡ್ಡಿಯವಳೆಂದು, ಸಾಯುವ ಸ್ಥಿತಿಯಲ್ಲಿರುವಳೆಂದು, ಮಠಕಯ್ಯನದೊಡ್ಡಿ ಈ ಪ್ರೇತವನಕ್ಕೆ ಮೂರು ಮೈಲಿಗಳಾಗಿತ್ತವೆಂದೂ ಸತ್ತ ನಂತರ ಈ ಮುದುಕಿಯ ಅಂತಿಮ ಆಸೆಯಂತೆ ಆಕೆಯ ತಾಯಿಯನ್ನು ಕಲ್ಲು ಸೇವೆ ಮಾಡಿದ ಕಲ್ಲು ಗೂಡಿನಲ್ಲೇ ಇರಿಸಿ ಸಂಸ್ಕಾರ ಮಾಡಬೇಕೆಂದು, ಸತ್ತ ನಂತರ ಶವವನ್ನು ಮೂರು ಮೈಲಿ ದೂರ ಹೊರಬೇಕಾಗಿ ಬಂದಾಗ ಉದಾಸೀನದಿಂದ ಮಕ್ಕಳು ಮುದುಕಿಗೆ ಇಷ್ಟವಿಲ್ಲದ ಬೇರೆ ಸ್ಥಳದಲ್ಲಿ ಸಂಸ್ಕಾರ ಮಾಡಿ ಬಿಡುತ್ತಾರೆಂಬ ಅಪನಂಬಿಕೆ ಸಾವಿನ ಹೊಸ್ತಿಲಲ್ಲಿರುವ ಮುದುಕಿಗೆ ಸುಳಿದು, ಸಾಯುವ ಮನ್ನವೇ, ಪ್ರೇತವನದ ಹತ್ತಿರ ಬಂದು, ಜೋಪಡಿಯೊಂದರಲ್ಲಿ ಸೂರ್ಯಾಸ್ತಮಾನಗಳನ್ನು ಎಣಿಸುತ್ತಾ ಸಾವನ್ನು ಎದುರು ನೋಡುತ್ತಿರುವಳೆಂದು ತಿಳಿದುಬಂತು.

ಸತ್ತ ಮೇಲೆ ದೇವರಾಗುತ್ತಾರೆಂದು ನಂಬಿಕೆ ಹೊಂದುವ ಈ ಜನರು ವರ್ಷಕ್ಕೊಮ್ಮೆ ಯುಗಾದಿ ಹಬ್ಬದಲ್ಲಿ ಹಿರೀಕರಿಗೆ ಎಡೆಯಾಕಲು ಪ್ರೇತವನಕ್ಕೆ ಬರಬೇಕು. ಹಿರೀಕರ ಆರಾಧನೆಯನ್ನು ಇವರು ಬಿಡಲಾರರು. ಇದೀಗ ಇವರು ಆರಾಧಿಸುವ ಕೆಲವು ಶಕ್ತಿದೇವತೆಗಳು ಎಂದೋ ಒಂದು ಕಾಲದಲ್ಲಿ ಈ ಜನಾಂಗದ ಕುಲಸಂಜಾತರೇ ಆಗಿರುತ್ತಾರೆ. ಕೆಲವರು ಆಲೇ ಮರದ ಬುಡದಲ್ಲಿ ಆಕಾರವಿಲ್ಲದ ಗುಂಡುಗಳನ್ನೇ ಸಾಲಾಗಿರಿಸಿ ಹಿರೀಕರು ಎಂದು ಆರಾಧಿಸುತ್ತಿದ್ದಾರೆ.

ಇಲ್ಲಿಗರು ಆರಾಧನೆಯಲ್ಲಿ ತಮ್ಮ ಬದುಕಿನ ಅತಿ ಹೆಚ್ಚು ಭಾಗವನ್ನು ಮೀಸಲಿಡಬಯಸುವ ಮೂಲನಿವಾಸಿಗಳು. ನಯವಿಲ್ಲದ ಒರಟೊರಟು ಭಾವದಿಂದ ಇವರು ಆಚರಿಸುವ ಆರಾಧನೆ ಪೂಜೆಗಳಿಂದಾಗಿಯೇ ಈ ಜನಾಂಗವನ್ನು ಇಲ್ಲಿಗರೆಂದು ಕರೆದಿರಬಹುದು. ಕಾಡು ಎಂಬ ಪದಕ್ಕೆ ಅರಣ್ಯ, ಒರಟು, ಕ್ರೂರ, ಎಂಬ ಅರ್ಥಗಳೂ ಇವೆ ಈ ಎಲ್ಲಾ ಅರ್ಥಗಳಿಗೂ ಇವರು ಅನ್ವಯಿಸುತ್ತಾರೆ."[೧೦]

ಇಲ್ಲಿಗರ ದೈವಾರಾಧನೆಯ ಪ್ರಥಮ ಹಂತ ಅವರ ಹಿರೀಕರ ಪೂಜೆಯೇ ಆಗಿದೆ. ತೀರಿಕೊಂಡ ಹಿರಿಯರ ಹೆಸರಿನಲ್ಲಿ ಒಂದೊಂದು ಕಲ್ಲನ್ನು ಇಟ್ಟು ಒಂದೊಕ್ಕೊಂದು ಒಂದೊಂದು ಹೆಸರನ್ನಿಟ್ಟು ಪೂಜಿಸುತ್ತಾರೆ. ಅದರಲ್ಲಿಯೂ ಈ ಕಲ್ಲುಗಳನ್ನು ಹಾಲು ಮತ್ತು ಅಂಟಿನ ಅಂಶವಿರುವ ಆಲೇಮರದ ಕೆಳಗಡೆ ಇಡುವುದನ್ನು ನೋಡಿದಾಗ ಈ ಹಿರಿಯರ ಪೂಜೆಯನ್ನು ಸಮೃದ್ಧಿಯ ಫಲಾಪೇಕ್ಷೆಯಿಂದಲೇ ಮಾಡುತ್ತಾರೆಂದು ಊಹಿಸಬಹುದಾಗಿದೆ. ಅಲ್ಲದೆ ಸಾಮಾನ್ಯವಾಗಿ ಹಿರಿಯರ ಪೂಜೆಯನ್ನು ಮಹಾನವಮಿ ಅಥವಾ ಅದರ ಹಿಂದು–ಮುಂದಿನ ದಿನಗಳಲ್ಲಿ ಮಾಡುವುದು ಇತರೆ ಜನಾಂಗಗಳಲ್ಲಿ ವಾಡಿಕೆ. ಅವರ ಅಕ್ಕಪಕ್ಕದಲ್ಲೇ ಇರುವ

ಬಹುಸಂಖ್ಯಾತ ಒಕ್ಕಲಿಗರೂ ಕೂಡ ಮಹಾನವಮಿಯಲ್ಲೇ ಪಿತೃಪೂಜೆ ಮಾಡುತ್ತಾರೆ. ಆದರೆ ಇಲ್ಲಿಗರು ಈ ಪೂಜೆಯನ್ನು ಯುಗಾದಿಯಲ್ಲಿ ಮಾಡುವುದನ್ನು ನೋಡಿದರೆ ವಸಂತ ಮಾಸದ ಹೊಸ ಚಿಗುರುಗಳಂತೆ ತಮ್ಮ ಹಿರಿಯರ ಆರ್ಶೀವಾದದಿಂದ ಹೊಸ ಜೀವನಕ್ಕೆ ಅಡಿಯಿಡುವ ಆಶಯವನ್ನು ಇಲ್ಲಿ ಕಟ್ಟಿಕೊಂಡಿರಬೇಕು ಎನಿಸುತ್ತದೆ.

ಇವರ ದೈವಗಳ ಎರಡನೇ ಹಂತ ಮಾತೃದೇವತಾಪೂಜೆ. ಎಳೆಯಮ್ಮ, ಬರೆಯಮ್ಮ, ಕಾಳಮ್ಮ, ಮದ್ದೂರಮ್ಮ, ಮುಂತಾದವು ಇವರ ಮಾತೃದೇವತೆಯರು. ಗೌರಿಪೂಜೆಯನ್ನೂ ಮಾಡುವ ಸಂಪ್ರದಾಯವಿದೆ. ಗೌರಿಹಬ್ಬದಲ್ಲಿ ಮಾಡುವ ಹುತ್ತದ ಪೂಜೆ ಮತ್ತು ಹುತ್ತಕ್ಕೆ ಹಾಲೆರೆಯುವ ಸಂಪ್ರದಾಯವನ್ನು ನೋಡಿದರೆ, ಒಂದು ಕಾಲಕ್ಕೆ ಇವರು ನಾಗಾರಾಧಕರೂ ಇರಬಹುದು ಎಂದೆನಿಸುತ್ತದೆ. ಇಲ್ಲಿ ನಾಗ ಮತ್ತು ಹುತ್ತವನ್ನು ಬೇರ್ಪಡಿಸುವ ಸಂದರ್ಭವೇ ಇಲ್ಲ. ಈ ಹುತ್ತವೇ ಮಾತೃವಿನ ಜನನ ಸ್ಥಾನ ಎಂಬ ನಂಬಿಕೆ ಸರ್ವೇ ಸಾಮಾನ್ಯ. ಹೀಗಾಗಿ ಗೌರಿಹಬ್ಬದಲ್ಲಿ ಇವರು ನಡೆಸುವ ಹುತ್ತದ ಪೂಜೆಗೆ ಹೆಚ್ಚಿನ ಅರ್ಥವಿದೆ.

ಇವರ ದೈವಾರಾಧನೆಯ ಮೂರನೆಯ ಹಂತ ವೆಂಕಟರಮಣ ಮತ್ತು ಮಾದೇಶ್ವರ. ಮಾಗಡಿಯ ರಂಗನಾಥನೂ ಇವರ ದೈವವೇ. ನಾವು ಈಗಾಗಲೇ ಚರ್ಚಿಸಿದಂತೆ ವೈಷ್ಣವ ಶೈವ ಪ್ರಭಾವದ ಈ ಅಂಶಗಳು ತೀರಾ ಪ್ರಾಚೀನವಲ್ಲ ಎಂಬುದು ನೆನಪಿಡಬೇಕು. ಇಲ್ಲಿಗರ ಬಹುಮುಖ್ಯವಾದ ಆರಾಧನೆಯ ವಿಶಿಷ್ಟತೆ ಎಂದರೆ ಅವರು ತಮ್ಮ ಪೂಜಾಸಾಮಗ್ರಿಗಳನ್ನು ನೆಲದ ಮೇಲೆ ಇಡದಿರುವುದು. ಒಂದು ರೀತಿಯಲ್ಲಿ ಒಂದು ದೈವದ ಅವತಾರವೆಂದೇ ನಂಬಿದ 'ಆಲೆಯ ಮರದ' ಇವರ ಪೂಜಾಸಾಮಗ್ರಿಗಳು ಸದಾ ಇರುತ್ತವೆ. ಅವರ ಪೂಜಾರಿ ಅರ್ಥಾತ್ ಕಣಿ ಹೇಳುವ ನಿರ್ದಿಷ್ಟ ವ್ಯಕ್ತಿ ಆ ದೇವರುಗಳನ್ನು ಹೊರತೆಗೆದು ಪೂಜಿಸುತ್ತಾನೆ. ಅವರ ಹಿರಿಯರನ್ನು ಕುರಿತ ಶ್ರದ್ಧೆ ಮತ್ತು ಭಕ್ತಿಗೆ ಮತ್ತೊಂದು ಉದಾಹರಣೆ ಎಂದರೆ ಪ್ರಾಯದ ಹುಡುಗರ ಮೇಲೆ ದೈವ ಮೈತುಂಬುವ ಸಂಪ್ರದಾಯ. ಹಿರೀಕ ದೈವಗಳ ಮುಂದೆ ಹತ್ತು ಜನ ಪ್ರಾಯದ ಹುಡುಗರು ಒಬ್ಬರ ಮೇಲೆ ಒಬ್ಬರು ಹೆಗಲ ಮೇಲೆ ಕೈ ಹಾಕಿಕೊಂಡು ಸಾಲತೆಕ್ಕೆಯಲ್ಲಿ ನಿಂತಿರುತ್ತಾರೆ. ಪೂಜೆ ನಡೆಯುವಾಗ ಅಲಲೋ, ಕಲಲೋ ಎಂದು ಉನ್ಮಾದದಿಂದ ಕಾಕುಹಾಕುತ್ತಾ ಎಡಕ್ಕೂ, ಬಲಕ್ಕೂ, ತೊನೆಯುತ್ತಾ, ತೂಗುತ್ತಾ ವಾಲಾಡುತ್ತಿರುತ್ತಾರೆ. ಬಲಿಮೇಕೆಯ ಕುತ್ತಿಗೆ ಕತ್ತರಿಸುವಾಗ ತೆಕ್ಕೆಯೊಳಗಿರುವ ಪ್ರಾಯದ ಹುಡುಗರ ಕಾಕು, ಚೀತ್ಕಾರ ತಾರಕಕ್ಕೇರುತ್ತದೆ. ಹಿರೀಕರಿಗೆ ಬಲಿ ಹಾಕಿದ ಮೇಕೆ ರುಂಡ ಮುಂಡಗಳಿಂದ ದೊದದೊದನೆ ಸುರಿಯುವ ರಕ್ತವನ್ನು ಇಬ್ಬರು ಹರಿವಾಣವೊಂದಕ್ಕೆ ಶೇಖರವಾಗುವಂತೆ ನೋಡಿಕೊಂಡು ಹರಿವಾಣ ಹಿಡಿದು ನಿಲ್ಲುತ್ತಾರೆ. ಹತ್ತು ಜನ ಪ್ರಾಯದ ಹುಡುಗರಲ್ಲಿ ಕನಿಷ್ಠ ಮೂರು ಜನರಿಗೆ ಹಿರೀಕರು

PDF created with pdfFactory Pro trial version www.pdffactory.com

ಮೈತುಂಬಿ ಬರುತ್ತಾರೆ. ಹಿರೀಕ ದೈವಗಳ ಆವಾಹನೆಗೀಡಾದ ಹರೆಯದ ಈ ಹುಡುಗರು ಒಂದೇ ನೆಗೆತಕ್ಕೆ ಹಾರಿ ರಕ್ತದ ಹರಿವಾಣಕ್ಕೆ ಬಾಯಿ ಹಾಕಿ ರಕ್ತ ಹೀರುತ್ತಾರೆ ಅಥವಾ ನಾಲಗೆ ಚಾಚಿ ನೆಕ್ಕುತ್ತಾರೆ. ಇಂಥದೊಂದು ವಿಶೇಷ ಸಂದರ್ಭದಲ್ಲಿ ಮಾತ್ರ ಹಿರೀಕರು ಪ್ರಾಯದ ಹುಡುಗರ ಮೈಮೇಲೆ ಬರುತ್ತಾರೆ. ಉಳಿದಂತೆ ಕಣಿ ಹೇಳುವಾತನ ಮೇಲೆ ಆವಾಹನೆಗೊಳ್ಳುತ್ತಾರೆ.

ಇಲ್ಲಿಗರು ಕರಗದಮ್ಮಾ ಎಂದು ಕರೆಯಲಾಗುವ ಶಕ್ತಿದೇವತೆಯೊಂದನ್ನು ಆರಾಧಿಸುವ ಪರಿಪಾಟವಿದೆ ಎಂದು ಸಿದ್ಧಗಂಗಯ್ಯ ಕಂಬಾಳು ಗುರುತಿಸುತ್ತಾರೆ. ಈಕೆಯನ್ನು ರತ್ನಗಿರಿಯಮ್ಮ ಎಂದು ಕರೆಯಲಾಗುತ್ತದಂತೆ. ಕುಂಬವನ್ನು ಅಲಂಕರಿಸಿ, ಅದರಲ್ಲಿ ಈ ರತ್ನಗಿರಿಯಮ್ಮನ ಕಣ್ಣು ಮತ್ತು ಬಾಯಿಯನ್ನು ಅಂಟಿಸಲಾಗುತ್ತದೆ. ಆಗ ಕುಂಭವೇ ಒಂದು ದೇವತೆಯ ರೂಪ ಪಡೆಯುತ್ತದೆ. ಈ ದೇವತೆಯನ್ನು ಪೂಜಾರಿ ಕಣಿ ಹೇಳುವ ಸಂದರ್ಭದಲ್ಲಿ ಪೂಜಿಸಲಾಗುತ್ತದೆ. ಕಣಿ ಹೇಳುವವ ಆಕೆಯ ಮಹಿಮೆಯನ್ನು ವಿವರಿಸಿ ಹೇಳುತ್ತಾನೆ. ಇದೇ ರೀತಿ ಇವರು ಮಾದಮ್ಮ ಮತ್ತು ಏಳು ಮಕದಮ್ಮ ಎಂಬ ದೇವರನ್ನು ಆರಾಧಿಸುತ್ತಾರೆ. ಮಲೆಮಾದೇಶ್ವರನ ಆರಾಧನಾ ಸಂದರ್ಭದಲ್ಲಿ ಇವರು ತಮ್ಮ ಬಿಲ್ಲಯ್ಯ ನ ವಂಶದವರೆಂದು ಕರೆದುಕೊಳ್ಳುವ ಪ್ರಸಂಗ ಇವರ ಮೂಲವನ್ನು ಮಲೆಮಾದೇಶ್ವರನ ಬೆಟ್ಟದ ತಪ್ಪಲಿಗೆ ಕೊಂಡೊಯ್ಯುತ್ತದೆ. ಇದಕ್ಕೆ ಪೂರಕವಾಗಿ ಇವರನ್ನು 'ಕಾಡು ಸೋಲಿಗ'ರೆಂದು ಕರೆಯುವ ರೂಢಿಯೂ ಇರುವುದನ್ನು ನೋಡಿದಾಗ ಇವರು ಸೋಲಿಗರ ಒಂದು ಉಪಪಂಗಡವಿರಬಹುದೇ ಎಂಬ ಅನುಮಾನ ಸಹಜವಾಗಿಯೇ ಬರುತ್ತದೆ.

ಇಲ್ಲಿಗರಲ್ಲಿ ಕಣಿ ಹೇಳುವ ಪೂಜಾರಿಗೆ ಮಹತ್ವದ ಸ್ಥಾನ. ಆಲೇಮರದ ಮೇಲಿಟ್ಟ ದೇವರನ್ನು ಕೆಳಗಿಳಿಸಿ ಅದಕ್ಕೆ ಪೂಜೆ ಸಲ್ಲಿಸಿ ಮೈದುಂಬುವ ಪೂಜಾರಿ ಆವೇಶದಿಂದ ಪ್ರಾಸಬದ್ಧವಾಗಿ ದೇವರ ಆವಾಹನೆಗೆ ತೊಡಗುತ್ತಾನೆ. ಪಕ್ಕದಲ್ಲಿರುವ ಮತ್ತೊಬ್ಬ ತಮಟೆಯೊಂದನ್ನು ಲಯಬದ್ಧವಾಗಿ ಬಡಿಯುತ್ತಾ ಅವನ ಅವಾಹನೆಗೆ ಪೂರಕ ವಾತಾವರಣ ನಿರ್ಮಾಣ ಮಾಡುತ್ತಾನೆ. ಜನರಿಗೆ ಕಷ್ಟ ಬಂದಾಗ ರಾತ್ರಿ ಸಮಯದಲ್ಲಿ ಜನ ಗುಂಪುಗೂಡಿ ಕಣಿಯನ್ನು ಕೇಳತೊಡಗುತ್ತಾರೆ. ಕಷ್ಟಗಳನ್ನು ವಿವರಿಸಿ ಹೇಳುವ ಭಕ್ತರ ಮುಂದೆ ಅವರವರ ಆಯಾ ಕಷ್ಟಗಳಿಗೆ ತಕ್ಕಂತೆ ಶಾಂತಿಯನ್ನು ಸೂಚಿಸಲಾಗುತ್ತದೆ. ಕಣಿ ಹೇಳುವವನು ಸಾಮಾನ್ಯವಾಗಿ ತಮ್ಮ ಹಿರೀಕರ ಧ್ಯಾನದಿಂದ ಆರಂಭಿಸಿ ಮಾತೃದೇವತೆಗಳನ್ನು ನೆನೆದು ಇಷ್ಟದೈವಗಳನ್ನು ಸ್ತುತಿಸಿ, ಮಾದಮ್ಮನ ಪೂಜೆಯ ಮೂಲಕ ಮುಕ್ತಾಯಗೊಳಿಸುತ್ತಾನೆ. ಇಂಥ ಕಣಿ ಹೇಳುವ ಅನೇಕ ಪೂಜಾರಿಗಳು ಇಲ್ಲಿಗರಲ್ಲಿ ಇದ್ದಾರೆ. ಆದ್ದರಿಂದಲೇ ಇರಬಹುದು ಇವರನ್ನು 'ಕಾಡುಪೂಜಾರಿ'ಗಳು ಎಂದು ಕರೆಯಲಾಗುತ್ತದೆ.

ಈ ಹಿಂದೆ ಕೊಡಗಿನ ಫಣಿಯರ ಸಂದರ್ಭದಲ್ಲಿ ದೇವರ ಆವಾಹನೆಯನ್ನು ಕುರಿತು ಸಾಕಷ್ಟು ಚರ್ಚಿಸಲಾಗಿದೆ. ತಮ್ಮ ಇಷ್ಟ ದೈವಗಳನ್ನು ಆವಾಹಿಸಿಕೊಂಡು ತಾನೂ ದೇವರಾಗುವ, ಆ ಮೂಲಕ ತಮ್ಮ ಜನಸಮುದಾಯದ ಒಳಿತನ್ನು ಆಶಿಸುವ ಒಬ್ಬ ಮಾಂತ್ರಿಕನಾಗಿ ಕೂಡ ಈ ಕಣಿ ಹೇಳುವವ ಬದಲಾಗುತ್ತಾನೆ. ಪೂಜಾರಿಯ ಆವೇಶ ಭರಿತ ನರ್ತನ ಬೇಡುವುದಕ್ಕಿಂತ ಆದೇಶಿಸುವ ರೀತಿಯಲ್ಲಿರುತ್ತದೆ. ಕಣಿ ಕೇಳುವ ಜನ ಕೂಡ ಪೂಜಾರಿಯ ಮೂಲಕ ದೇವರಿಗೆ ಆದೇಶಿಸುವ ಕೆಲಸವನ್ನೇ ಮಾಡುತ್ತಾರೆಂದರೆ ಅದು ತಪ್ಪೇನೂ ಆಗಲಾರದು.

೨.೭. ಮಿಂಚೇರಿಯ ಹುಲಿ ಸಮಾಧಿ

ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಯ ನಡುವಿನ ಕುರಚಲು ಪ್ರದೇಶದ ಕಾಡಿನಲ್ಲಿ ವಾಸವಾಗಿರುವ ಮ್ಯಾಸಬೇಡರ ತಾಣ ಮತ್ತೊಂದು ವಿಶಿಷ್ಟ ಪ್ರದೇಶ. ಅಪೂರ್ವವಾದ ಶಿಲಾಪದರುಗಳಿಂದ ಹಾಗೂ ಪ್ರಾಚೀನವೆನಿಸಿದ ಹಲವು ರೀತಿಯ ಭೂಪದರುಗಳಿಂದ ಕೂಡಿರುವ ಈ ಪ್ರದೇಶ ಮೇಲ್ನೋಟಕ್ಕೆ ಬರಡಾಗಿ ಕಾಣುತ್ತದೆ. ನೋಡಿದಷ್ಟು ದೂರವೂ ಒಣಭೂಮಿಯ ಬರಡು ನೆಲ. ಆದರೂ ಇಲ್ಲಿ ಅನೇಕ ರಾಜರ ಮತ್ತು ಪಾಳೇಗಾರರ ಆಡಳಿತ ನಡೆದಿದೆ. ಬೇಟೆಗಾರರು ಮತ್ತು ಪಶುಪಾಲಕರ ಪ್ರಮುಖ ನೆಲೆಯಾದ ಚಿತ್ರದುರ್ಗ ಮತ್ತು ಬಳ್ಳಾರಿಗಳ ನಡುವಿನ ಈ ಭೂಪ್ರದೇಶ ಬುಡಕಟ್ಟು ಜೀವನದ ದೃಷ್ಟಿಯಿಂದ ಅತ್ಯಂತ ಮುಖ್ಯವಾದದ್ದು. ಕೃಷ್ಣಮೂರ್ತಿ ಹನೂರರು ಮ್ಯಾಸಬೇಡರ ಹುಟ್ಟಿನ ಬಗ್ಗೆ ಅವರು ಹೇಳುವ ಕಥೆಯೊಂದನ್ನು ಸಂಗ್ರಹಿಸಿದ್ದಾರೆ. ಇವರ ದೈವಾರಾಧನೆಯ ವಿವಿಧ ಹಂತಗಳನ್ನು ಈ ಕಥೆಯ ಮೂಲಕವೇ ಗುರುತಿಸುವ ಪ್ರಯತ್ನವನ್ನು ಮಾಡಬಹುದಾಗಿದೆ. ಆದ್ದರಿಂದ ಈ ಕಥೆಯನ್ನು ಇಲ್ಲಿ ನೀಡುವುದು ಸೂಕ್ತ ಎಂಬ ಭಾವನೆ ನನ್ನದು. "ಮ್ಯಾಸಬೇಡ ಬುಡಕಟ್ಟಿನ ಮೂಲಪುರುಷನ ಹುಟ್ಟು ಬ್ರಹ್ಮ, ವಿಷ್ಣು, ಮಹೇಶ್ವರರಿಂದಲೇ ಆಯಿತು. ಈ ತ್ರಿಮೂರ್ತಿಗಳು ಪ್ರಪಂಚದ ಮೇಲೆ ಬರುತ್ತಿದ್ದರು. ಆಗ ಭೂಮಿಯ ಮೇಲೆ ಬರೀ ಅರಣ್ಯವೇ ಇದ್ದಿತು. ನರಮನುಷ್ಯರ ಸುಳಿವೂ ಇರಲಿಲ್ಲ. ತ್ರಿಮೂರ್ತಿಗಳು ಪ್ರಪಂಚದ ಮೇಲೆ ಬರುತ್ತಾ ಮೊಳಕಾಲ್ಮೂರು ಬಳಿಯ ಬಿ.ಜಿ.(ಬೊಮ್ಮಗೊಂಡನಕೆರೆ) ಕೆರೆಯ ಬಳಿ ಕಮರದ ಕಾನಿನಲ್ಲಿ ಬಂದು ಸರೋವರದ ಮುಂದೆ ಇಳಿದರು. ಆಗ ಬೆಳಗಾಗುತ್ತಲಿತ್ತು. ಮೂರು ಜನವೂ ಮುಖಮಾರ್ಜನ ಮಾಡಿ ಬ್ರಹ್ಮ, ವಿಷ್ಣು, ಇಬ್ಬರೂ ಹಣೆಗೆ ನಾಮ ಇಟ್ಟುಕೊಂಡರು. ಹಾಗೆ ನಾಮವಿಡುವಾಗ ಅದರ ಶುದ್ಧಿಗೆ ಗೋವಿನ ಮೂತ್ರ ಬೇಕಾಯಿತು. ಆಗ ಬ್ರಹ್ಮ ಒಂದು ಒಂಟಿಕೊಂಬಿನ ಬಲ್ಲಾವನ್ನು, ಪಂಪಾದ್ರಿ ಎಂಬ ಬಸವನನ್ನು ಸೃಷ್ಟಿಸಿದ. ಗೋವಿನ ಮೂತ್ರದ ಒಂದು ಹನಿಯನ್ನು ತೆಗೆದು ಬ್ರಹ್ಮ, ವಿಷ್ಣು, ಮಹೇಶ್ವರರು ವಿಭೂತಿಯನ್ನು ಧರಿಸಿಕೊಂಡರು. ಮಹೇಶ್ವರನು

PDF created with pdfFactory Pro trial version www.pdffactory.com

ವಿಭೂತಿ ಧರಿಸುವಾಗ ವಿಭೂತಿಯ ಒಂದು ಧೂಳು ಬ್ರಹ್ಮನು ಸೃಷ್ಟಿಸಿದ ಒಂಟಿಕೊಂಬಿನ ಬಲ್ಲಾವಿನ ಕಾಲಗೊರಸಿನಲ್ಲಿ ಬಿದ್ದು ಅಲ್ಲಿ ಸಿಕ್ಕಿಹಾಕಿಕೊಂಡಿತು. ತ್ರಿಮೂರ್ತಿಗಳು ಆ ಸರೋವರವನ್ನು ಬಿಟ್ಟು ಹೋಗುವಾಗ ಅವರು ಸೃಷ್ಟಿಸಿದ ಒಂಟಿಕೊಂಬಿನ ಬಲ್ಲಾವನ್ನು, ಪಂಪಾದ್ರಿ ಬಸವನನ್ನು ನೋಡಿಕೊಳ್ಳುವವರಾರು ಎಂಬ ಯೋಚನೆ ಬರಲು, ಬ್ರಹ್ಮನು ಆ ಎರಡೂ ಜೀವರಾಶಿಗಳನ್ನು ಸಲಹುವವನು ಅವುಗಳಿಂದಲೇ ಹುಟ್ಟುವನು, ಚಿಂತೆ ಮಾಡಬೇಕಿಲ್ಲ ಎಂದ. ದಿನದಿನವೂ ಒಂಟಿಕೊಂಬಿನ ಬಲ್ಲಾವು ಮತ್ತು ಪಂಪಾದ್ರಿ ಬಸವ ಕಾಡಿನಲ್ಲಿ ಮೇಯ್ದು ಸರೋವರದಲ್ಲಿ ನೀರು ಕುಡಿದುಕೊಂಡಿದ್ದವು. ಹೀಗಿರಲು ಬಲ್ಲಾವಿನ ಕಾಲಿನ ಗೊರಸಿನಲ್ಲಿ ಸಿಕ್ಕಿಹಾಕಿಕೊಂಡಿದ್ದ ವಿಭೂತಿಯ ಧೂಳು ಒಂಬತ್ತು ತಿಂಗಳು, ಒಂಬತ್ತು ದಿನ, ಒಂಬತ್ತು ಘಳಿಗೆಯಲ್ಲಿ ಬೆಳೆದು ಗರ್ಭ ಒಡೆದು ಗಂಡು ಶಿಶುವಿನ ಜನನವಾಯಿತು. ಅದು ಕೊಳದ ತಡಿಯಲ್ಲಿ ಅಳುತ್ತಿರಲು ಆ ದಿನವೇ ವಾಯುಮಾರ್ಗದಲ್ಲಿ ಹೋಗುತ್ತಿದ್ದ ಶಿವಪಾರ್ವತಿಯರಿಗೆ ಕೇಳಿಸಿತು. ಪಾರ್ವತಿಯು ಬಂದು ಶಿಶುವಿನ ಹೊಕ್ಕುಳುರಿ ಕುಯ್ದು ಹಣೆಗೆ ಸುಟಿಗೆ ಹಾಕಿ ಮಗುವನ್ನು ಕೊಳದ ತಡಿಯಲ್ಲೇ ಮಲಗಿಸಿ ಅದಕ್ಕೆ 'ಚೆಟ್ಲು ಮಲ್ಲನಾಯಕ' ಎಂದು ಹೆಸರಿಟ್ಟರು. ಆ ಮಗುವು ಗಿಡ ಮರಗಳ ಮಧ್ಯದ ಕಾಡಿನಲ್ಲಿ, ಹುಟ್ಟಿದುದರಿಂದ ಅದಕ್ಕೆ ಚೆಟ್ಲು ಗೆಟ್ಲು ಮಲ್ಲನಾಯಕ ಎಂದು ಹೆಸರಾಯಿತು. ಆ ಶಿಶುವು ಮಲಗಿದ್ದ ಜಾಗದಲ್ಲಿಯೇ ಒಂದು ಮರವಿದ್ದು ಆ ಮರದಲ್ಲಿ ತುಡಬೆ ಜೇನು ಕಟ್ಟಿತ್ತು. ಆ ಜೇನುಗೂಡಿನಿಂದ ಜೇನು ತೊಟ್ಟಾಗಿ ಶಿಶುವಿನ ಬಾಯಿಗೆ ಬಿದ್ದು ಮಗುವು ಅಳುವುದನ್ನು ನಿಲ್ಲಿಸಿಬಿಟ್ಟಿತು. ಶಿಶು ಚೆಟ್ಲಿಗೊಟ್ಲು ಮಲ್ಲನಾಯಕನು ಬೆಳೆದು ಆ ಒಂಟಿಕೊಂಬಿನ ಬಲ್ಲಾವನ್ನು, ಪಂಪಾದ್ರಿ ಬಸವನನ್ನು ಸಾಕಿಕೊಂಡು ಕಾಲ ಮಾಡಿದ. ಆಗಾಗ ದೇವಲೋಕದಿಂದ ಗಂಧರ್ವ ಕನ್ಯೆಯರು ಕಮರದ ಕಾನಿನ ಸರೋವರದ ಕಡೆ ಬಂದು ನೀರಾಟವಾಡಿ ಹೋಗುತ್ತಿದ್ದರು. ಆಗ ಒಬ್ಬಳು ಗಂಧರ್ವ ಕನ್ಯೆ ಚೆಟ್ಲುಗೊಟ್ಲು ಮಲ್ಲನಾಯಕನನ್ನು ಕಂಡು ಮೋಹಗೊಂಡು ಲಗ್ನವಾಗಿ ಅಲ್ಲೇ ಇದ್ದುಬಿಟ್ಟಳು. ಇವರಿಬ್ಬರಿಗೂ ಹುಟ್ಟಿದ ಒಬ್ಬಳೇ ಹೆಣ್ಣು ಮಗಳು ಚಂಚುಲಕ್ಷ್ಮಿ. ಈಕೆ ಬೆಳೆದು ಕಾಡಿನಲ್ಲಿ ಇರುವಾಗ್ಗೆ ವಿಷ್ಣುವು, ನರಸಿಂಹನ ಅವತಾರ ತಾಳಿ ಹಿರಣ್ಯಕಶಿಪುವನ್ನು ಕೊಂದು ತನ್ನ ಪ್ರತಾಪ ಹಾಗೂ ಕೋಪವನ್ನು ತಾಳಲಾರದೆ ಬರುತ್ತಿರಬೇಕಾದರೆ, ಅವನ ಅಸಂತೋಷವನ್ನು ಚಂಚುಲಕ್ಷ್ಮಿ ತಡೆದಳು. ತಡೆದು, ಚಂಚುಲಕ್ಷ್ಮಿ ತನ್ನ ವಂಶಕ್ಕೆ ದೇವತೆಯಾಗಿ ನಿಲ್ಲಬೇಕೆಂದು ಕೇಳಿಕೊಂಡಳು. ನರಸಿಂಹನು ಚಂಚುಲಕ್ಷ್ಮಿಯನ್ನು ವಿವಾಹವಾಗಿ ಸ್ವಲ್ಪಕಾಲ ಅವಳೊಂದಿಗೆ ಸಂಸಾರ ಹೂಡಿ ದೇವಲೋಕಕ್ಕೆ ಹೋದನು. ಚಂಚುಲಕ್ಷ್ಮಿ ಮತ್ತು ನರಸಿಂಹನಿಗೆ ಹುಟ್ಟಿದ ಮೂವರು ಮಕ್ಕಳೇ ಪೆದ್ದಪ್ಪನಾಯಕ,

ಕೋರಿಮರಮಂಚನಾಯಕ, ಕೋರಿ ಪಾಪನಾಯಕ ಇವರೇ ಬೇಡ ನಾಯಕರ ಮೂಲಪುರುಷರೆನಿಸಿಕೊಂಡರು."[೧೧]

ಮ್ಯಾಸಬೇಡರ ಕುಲಮೂಲದ ಈ ಕಥೆ ಅವರ ದೈವಾರಾಧನೆಯ ವಿವಿಧ ಘಟ್ಟಗಳನ್ನು ವಿವರಿಸುತ್ತದೆ. ತಮ್ಮ ಹುಟ್ಟನ್ನು ತ್ರಿಮೂರ್ತಿಗಳ ಮೂಲದಿಂದ ಗುರುತಿಸುವುದಲ್ಲದೆ, ನರಸಿಂಹ ಹಾಗೂ ಚಂಚುಲಕ್ಷ್ಮಿಯರ ಸಂಬಂಧದಿಂದಾಗಿ ಹುಟ್ಟಿದ ಮೂವರೇ ನಾಯಕರೇ ತಮ್ಮ ಹಿರಿಯರು ಎಂದು ಹೇಳಿಕೊಳ್ಳುವ ಇಲ್ಲಿನ ಮನೋಭಾವ ಹಲವು ಪ್ರಭಾವಗಳಿಂದ ರೂಪಿತವಾಗಿದೆ ಎನ್ನದೇ ವಿಧಿಯಿಲ್ಲ. ಒಂಟಿ ಕೊಂಬಿನ ಬಲ್ಲಾವಿನ ಕಾಲಗೊರಸಿನಲ್ಲಿ ಸಿಕ್ಕಿಕೊಂಡ ವಿಭೂತಿಯ ಕಣದಿಂದ ಹುಟ್ಟುವ ಶಿಶು ತನ್ನ ಪಾಡಿಗೆ ತಾನು ನಿಸರ್ಗದಲ್ಲಿ ಬೆಳೆಯುವ ರೀತಿಯಂತೂ ತುಂಬ ಸೊಗಸಾಗಿದೆ. ಸ್ವತಃ ಪಾರ್ವತಿಯೇ ಆ ಮಗುವನ್ನು ಸಲಹುತ್ತಾಳೆ. ನಿಸರ್ಗ ಕಾಪಾಡುತ್ತದೆ. ಹೀಗೆ ಬೆಳೆದ ಮಲ್ಲನಾಯಕನಿಗೆ ಗಂಧರ್ವಕನ್ಯೆಯ ಸಂಬಂಧವನ್ನು ಕಲ್ಪಿಸಲಾಗಿದೆ. ಅವರ ಮಗಳಾದ ಚಂಚುಲಕ್ಷ್ಮಿಯು ವಿಷ್ಣುವಿನ ಅವತಾರನಾದ ನರಸಿಂಹನನ್ನು ವರಿಸುತ್ತಾಳೆ. ವೈದಿಕ ಪ್ರಭಾವಕ್ಕೆ ಒಳಗಾದ ಮತ್ತು ಅವರ ವೈಭವಯುತ ಪುರಾಣಗಳನ್ನು ತಿಳಿದ ಅವೈದಿಕ ಕೀಳರಿಮೆಯಿಂದ ಕಟ್ಟಿಕೊಂಡ ಕಥೆ ಇದಾಗಿದೆ. ಗಂಧರ್ವ ಕನ್ಯೆ ಚಂಚುಲಕ್ಷ್ಮಿಯರ ಪ್ರವೇಶ ಮಾತೃಮೂಲ ಕುಟುಂಬದ ಎಳೆಗಳನ್ನು ಹುಡುಕಲು ಸಹಾಯ ಮಾಡುತ್ತವೆ. ಇವರು ಕೂಡ ಮಾರಿಯನ್ನು ಆರಾಧಿಸುವುದರಿಂದ ಪಶುಪಾಲನೆಗೂ ಮೊದಲನೇ ಹಂತದಲ್ಲಿ ಇವರಲ್ಲಿಯೂ ಮಾತೃಮೂಲ ಕುಟುಂಬಗಳೇ ಇದ್ದವು ಎಂಬುದನ್ನು ಊಹಿಸಬಹುದಾಗಿದೆ.

ಮಧ್ಯಕರ್ನಾಟಕದ ಕುರುಚಲು ಕಾಡಿನ ಈ ಪ್ರದೇಶಕ್ಕೆ ಮ್ಯಾಸಬೇಡರು ಶ್ರೀ ಶೈಲದ ಕಡೆಯಿಂದ ಆಗಮಿಸಿರಬೇಕೆಂಬ ಊಹೆ ನಿಜವೇ ಇರಬಹುದು. ತೆಲುಗು ಮತ್ತು ಕನ್ನಡ ಎರಡೂ ಭಾಷೆಗಳನ್ನು ಆಡುವ ಮ್ಯಾಸಬೇಡರು ಪ್ರಮುಖವಾಗಿ ಪಶುಪಾಲಕರು. ಇಲ್ಲಿಯವರೆಗೆ ನಾವು ನೋಡಿದಂತೆ, ಪಶುಪಾಲನೆಯ ಹಂತದಲ್ಲಿ ಉದ್ಭವಗೊಂಡ ಅನೇಕ ಪುರುಷ ದೈವಗಳ ಆರಾಧನೆ ಇವರಲ್ಲಿಯೂ ಆರಂಭವಾಗಿದೆ. ಓಬಳದೇವರು, ಗಾದ್ರಿಪಾಲನಾಯಕ, ಸೂರಲಿಂಗ, ರಾಜದೇವರು, ಬೋರೇದೇವರು, ದೋಸೆ ದೇವರು, ಬೋರುವ(ಬೈರವ) ಬೊಮ್ಮದೇವರು, ದಡ್ಡಿ ಸೂರನಾಯಕ ಮುಂತಾಗಿ ಹನ್ನೆರೆಡು ವಿಧದ ದೇವರನ್ನು ಇವರು ಆರಾಧಿಸುತ್ತಾರೆ.

ತಮ್ಮ ಹುಟ್ಟನ್ನು ಮತ್ತು ತಮ್ಮ ಕುಲಮೂಲವನ್ನು ವೈಷ್ಣವ ಧರ್ಮದ ಜೊತೆಗೆ ಈಗ ಗುರುತಿಸಿಕೊಳ್ಳುತ್ತಿದ್ದಾರಾದರೂ ಮೂಲದಲ್ಲಿ ಇವರು ಶೈವಾರಾಧಕರಾಗಿದ್ದರು ಎಂಬುದಕ್ಕೆ ಅವರ ಬೋರೇದೇವರು, ಬೋರುವ ಮತ್ತು ಬೊಮ್ಮ ದೇವರುಗಳೇ ಸಾಕ್ಷಿ. ಗಾದ್ರಿಪಾಲನಾಯಕ ಮತ್ತು ದಡ್ಡಿ ಸೂರನಾಯಕ ಇವರು ಸಮುದಾಯದ

PDF created with pdfFactory Pro trial version www.pdffactory.com

ಸಾಂಸ್ಕೃತಿಕ ನಾಯಕರು. ಇವರು ಸಾಂಸ್ಕೃತಿಕ ವೀರನಾದ ಸೂರನಾಯಕ ತದನಂತರದಲ್ಲಿ ಸೂರಲಿಂಗೇಶ್ವರ ಆಗಿದ್ದಾನೆ. ಇವರ ಸಾಂಸ್ಕೃತಿಕ ವೀರನಾದ ಗಾದ್ರಿಪಾಲನಾಯಕ ಹೆಚ್ಚು ಪ್ರಸಿದ್ಧ ದೈವವಾಗಿದ್ದು ಅವನು ಹುಲಿಯೊಂದಿಗೆ ಹೋರಾಡಿ ಸತ್ತ ಕತೆ ಜನಜನಿತವಾದದ್ದು. ಇವರ ಪ್ರಮುಖ ಜಾತ್ರೆಗಳು ನಡೆಯುವ ಮೊಳಕಾಲ್ಮೂರಿನ ಕಂಪಳ ದೇವರ ಹಟ್ಟಿ, ಹಾಗೂ ಹೊಳಲ್ಕೆರೆ ತಾಲ್ಲೂಕಿನ ಮಿಂಚೇರಿ ಬಹುಮುಖ್ಯವಾದ ಸ್ಥಳಗಳು. ಈ ಮಿಂಚೇರಿಯ ಕಾಡಿನಲ್ಲಿ ಇರುವ ಗಾದ್ರಿ ಪಾಲನಾಯಕನ ಸಮಾಧಿ ಮ್ಯಾಸಬೇಡರಿಗೆ ಅತ್ಯಂತ ಪವಿತ್ರವಾದ ಸ್ಥಳ. ಗಾದ್ರಿಪಾಲನಾಯಕನ ಜೊತೆಯಲ್ಲಿಯೇ ಸತ್ತ ಹುಲಿಯ ಸಮಾಧಿಯೂ ಇದೆ. ಗಾದ್ರಿಪಾಲನಾಯಕ ಮತ್ತು ಹುಲಿ ಇವರ ದೈವಗಳಾಗಿ ಇಂದು ಪರಿವರ್ತಿತವಾಗಿವೆ. ಇಂಥ ಕತೆಯ ಉಲ್ಲೇಖ ಇಲ್ಲಿ ಅಗತ್ಯವೆಂದು ನಾನು ಭಾವಿಸುತ್ತೇನೆ.

ಮ್ಯಾಸಬೇಡರ ಸಾಂಸ್ಕೃತಿಕ ನಾಯಕ ಗಾದ್ರಿಪಾಲ. ಇವನು ಒಬ್ಬ ದನಗಾಹಿ, ಬಳ್ಳಾರಿ, ಚಿತ್ರದುರ್ಗದ ನಡುವಿನ ಸಂಡೂರು ಅರಣ್ಯಗಳಿಂದಾವೃತವಾದ ಜರಿಮಲೆ ಸೀಮೆ ಇವನ ಪಶುಪಾಲನೆಯ ಸ್ಥಳ. ಅದು ಹುಲಿಗಳ ಆವಾಸಸ್ಥಾನ. ಹುಲಿಗಳು ಮನುಷ್ಯರ ಹಸುಗಳನ್ನು ಕೊಲ್ಲುವುದು, ಮನುಷ್ಯರು ಹುಲಿಗಳ ಸಂತತಿಯನ್ನು ನಾಶ ಮಾಡುವುದು ನಡದೇ ಇರುತ್ತದೆ. ಇಂಥಾ ಒಂದು ಪರಸ್ಪರ ಸಾಂಪ್ರದಾಯಿಕ ದ್ವೇಷವನ್ನು ಹೋಗಲಾಡಿಸಿ ಪರಸ್ಪರ ಪ್ರೀತಿಯ ಒಪ್ಪಂದಕ್ಕೆ ಬರುವುದು ಗಾದ್ರಿಪಾಲನಾಯಕ ಕಾವ್ಯದ ಮೊದಲ ಘಟ್ಟ. ಈ ಒಪ್ಪಂದದಂತೆ ಗಾದ್ರಿಪಾಲನ ಪಶುಗಳ ರಕ್ಷಣೆಯ ಕೆಲಸವನ್ನು ಹುಲಿಯೇ ವಹಿಸಿಕೊಳ್ಳುತ್ತದೆ. ಹಾಗೆಯೇ ಹುಲಿಮರಿಗಳ ರಕ್ಷಣೆಯನ್ನು ಗಾದ್ರಿಪಾಲ ವಹಿಸಿಕೊಳ್ಳುತ್ತಾನೆ. ಈ ಒಪ್ಪಂದ ಪರಸ್ಪರರಲ್ಲಿ ಸುಖ ಶಾಂತಿ ನೆಮ್ಮದಿಗಳನ್ನು ತರುತ್ತದೆ. ಅಷ್ಟರಲ್ಲಿ ಗಾದ್ರಿಪಾಲನನ್ನು ನೋಡುವುದಕ್ಕಾಗಿ ಇಬ್ಬರು ಹೊರಗಿನ ಜನ ಬರುತ್ತಾರೆ. ಅವರ ಕೈಲಿ ಕೋವಿ ಇರುತ್ತದೆ(ಈ ಕೋವಿ ಆಧುನಿಕತೆಯ ಸಂಕೇತವೂ, ನಾಗರಿಕ ಜನರ ನಾಶಪ್ರವೃತ್ತಿಯ ಪ್ರತೀಕವೂ ಹೌದು). ಗಾದ್ರಿಪಾಲ ಮನೆಯಲ್ಲಿ ಇರುವುದಿಲ್ಲ. ಆದರೆ ಹುಲಿ ಮರಿಗಳಿರುತ್ತವೆ. ತಮ್ಮ ಕೋವಿಗಳಿಂದ ಹುಲಿಮರಿಗಳನ್ನು ಅವರು ಕೊಂದು ಬಿಡುತ್ತಾರೆ. ತನ್ನ ಮರಿಗಳ ರೋದನ ಕೇಳಿ ದೂರದಲ್ಲಿ ಹಸುಗಳನ್ನು ಮೇಯಿಸುತ್ತಿದ್ದ ಹುಲಿ ಓಡಿಬರುತ್ತದೆ. ತನ್ನ ಮರಿಗಳು ಸತ್ತು ಬಿದ್ದಿರುವುದನ್ನು ನೋಡುತ್ತದೆ. ಈ ಮನುಷ್ಯರೇ ಹೀಗೆ. ಮಾತಿಗೆ ತಪ್ಪುವವರು ಎಂದು ತಿಳಿದ ಹುಲಿ ಈ ಸಾವು ಗಾದ್ರಿಪಾಲನಿಂದಲೇ ಸಂಭವಿಸಿದೆ ಎಂದು ಭಾವಿಸುತ್ತದೆ. ಗಾದ್ರಿಪಾಲನಿಗೂ ಹುಲಿಗೂ ಏಳುದಿನಗಳ ಕಾಲ ಯುದ್ಧ ನಡೆದು ಕಡೆಗೆ ಯಾರೂ ಸೋಲದೆ ಇಬ್ಬರೂ ಸಾವನ್ನಪ್ಪುತ್ತಾರೆ. ಈ ದುರಂತ ಕಥೆ ಪ್ರಕೃತಿಯನ್ನು ಮನುಷ್ಯ ನಾಶ ಮಾಡುವ ಅಹಂಕಾರ ಮತ್ತು ತನಗೆ

ಎಲ್ಲವನ್ನು ನೀಡುವ ಪ್ರಕೃತಿಗೆ ಮೋಸ ಮಾಡುವುದರಿಂದ ಎಂಥ ದುರಂತ ಸಂಭವಿಸುತ್ತದೆ ಎಂಬ ಆಶಯವನ್ನು ಹೊತ್ತಿದೆ. ಈ ನಿಸರ್ಗದಲ್ಲಿ ಪ್ರಾಣಿ ಪ್ರಪಂಚಕ್ಕೆ ಕೂಡ ಮನುಷ್ಯನಷ್ಟೇ ನಿರ್ಭಿಡೆಯಿಂದ ಬದುಕಲು ಹಕ್ಕಿದೆ. ಅದನ್ನು ಮುರಿದಲ್ಲಿ ದುರಂತ ಸಂಭವಿಸುತ್ತದೆ ಎಂಬುದನ್ನು ಈ ಕಥೆ ಸಾರುತ್ತದೆ. ಕೋವಿ ಹಿಡಿದ ಮನುಷ್ಯನ ಆಧುನೀಕರಣಗೊಂಡ ಕಲುಷಿತ ಮನಸ್ಸು ನಿಸರ್ಗದ ನೆಮ್ಮದಿಯನ್ನು ಕಲಕುವ ಮೂಲಕ ಪ್ರಾಣಿಗಳು ಮತ್ತು ಮುಗ್ಧ ಮನುಷ್ಯರ ನಡುವಿನ ಸಂಬಂಧಕ್ಕೆ ಇತಿಶ್ರೀ ಹಾಡುವ ಸತ್ಯವನ್ನು ಹೇಳ ಹೊರಟ ಈ ದುರಂತ ಕಥೆ ಮ್ಯಾಸಬೇಡರ ಲೋಕದೃಷ್ಟಿಯನ್ನು ಅನನ್ಯವಾಗಿ ಚಿತ್ರಿಸುತ್ತದೆ.

ಮೂಲತಃ ಬೇಟೆಗಾರರೂ ಅನಂತರದಲ್ಲಿ ಪಶುಪಾಲಕರೂ ಆಗಿ ಜೀವನ ನಿರ್ವಹಿಸಿದ ಈ ಬುಡಕಟ್ಟು ವಿಜಯನಗರ ಸಾಮ್ರಾಜ್ಯದ ಸಂದರ್ಭದಲ್ಲಿ ಪ್ರಧಾನವಾಗಿ ಸೈನಿಕ ವೃತ್ತಿಯನ್ನು ಕೈಗೊಂಡಿದೆ. ನಿಪುಣ ಬೇಟೆಗಾರರೂ ಆದ ಇವರು ಸೈನ್ಯಕ್ಕೆ ಹೇಳಿ ಮಾಡಿಸಿದವರೂ ಹೌದು. ವಿಜಯನಗರ ಪತನಾನಂತರ ಅನೇಕ ಸಣ್ಣಪುಟ್ಟ ಪಾಳೆಯ ಪಟ್ಟುಗಳು ತಲೆ ಎತ್ತಿದವು. ಅಂಥ ಹಲವು ಪಾಳೆಪಟ್ಟುಗಳ ನಾಯಕರಾಗಿಯೂ ಇವರು ರಾಜ್ಯವನ್ನು ಆಳಿರಬಹುದು. ಆ ನಂತರದಲ್ಲಿ ಕಾಡಿನಲ್ಲೇ ಉಳಿದವರನ್ನು ಮ್ಯಾಸನಾಯಕರೆಂದೂ. ಊರಿನಲ್ಲಿ ಉಳಿದವರನ್ನು ಊರನಾಯಕರೆಂದೂ ಕರೆದಿರುವಂತೆ ಕಾಣುತ್ತದೆ. ಬಹುಶಃ ಸೈನಿಕರಾಗುವ ಮೂಲಕ ಆಳುವ ಜನರಿಗೆ ಹತ್ತಿರವಾದ ಇವರು ಹಲವು ಸಂದರ್ಭದಲ್ಲಿ ವೈಷ್ಣವೀಕರಣಗೊಂಡಿದ್ದಲ್ಲದೆ ತಮ್ಮ ಕುಲಮೂಲಕ್ಕೆ ವೈದಿಕ ಪುರಾಣಗಳ ಸಹಾಯವನ್ನು ಪಡೆದಂತೆ ಕಾಣುತ್ತದೆ. ಆದ್ದರಿಂದಲೇ ಇವರಲ್ಲಿ ಶೈವ ಮತ್ತು ವೈಷ್ಣವ ಎರಡೂ ಪಂಥಗಳ ಆರಾಧನೆ ರೂಢಿಯಲ್ಲಿದೆ. ಆದರೆ ಇವೆಲ್ಲವನ್ನು ಮೀರಿ ಗಾದ್ರಿಪಾಲನಾಯಕನಂಥ ಒಬ್ಬ ನಿಸರ್ಗದ ವೀರನನ್ನು ದೈವವನ್ನಾಗಿ ಪೂಜಿಸುತ್ತಿರುವುದು ಅವರ ಅನನ್ಯ ಲೋಕದೃಷ್ಟಿಯ ಸಂಕೇತವಾಗಿದೆ. ಆದ್ದರಿಂದಲೇ ಮಿಂಚೇರಿ, ಗಂಜಿಗಟ್ಟೆ ಹಾಗೂ ನನ್ನೀವಾಳದ ಜಾತ್ರೆಗಳು ಅವರ ಹಿರಿಯರ ಆರಾಧನೆಯ ಸಂಕೇತಗಳಾಗಿಯೇ ಉಳಿದಿವೆ.

೨.೮. ಗೊಲ್ಲರ ಹಟ್ಟಿ

ಕರ್ನಾಟಕದ ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳಲ್ಲಿ ವಿಶೇಷವಾಗಿ ಕಂಡುಬರುವ ಕಾಡುಗೊಲ್ಲರದು ಅತ್ಯಂತ ವಿಶಿಷ್ಟವಾದ ಜೀವನ. ಯಾವುದೇ ಇತರ ಸಮುದಾಯಗಳ ಜೊತೆಗೆ ತಮ್ಮನ್ನು ಗುರುತಿಸಿಕೊಳ್ಳಲು ಇಷ್ಟಪಡದ ಇವರ ವಾಸಸ್ಥಳಗಳು ಊರ ಸಂಸ್ಕೃತಿಯಿಂದ ಸದಾ ದೂರ. ತಮ್ಮದೇ ಆದ ಗುಡಿಸಲುಗಳ ಸಮೂಹವನ್ನು 'ಹಟ್ಟಿ' ಎಂದು ಕರೆದುಕೊಳ್ಳುವ ಇವರು ಒಂದು ನಿರ್ದಿಷ್ಟ ಜಾಗದಲ್ಲಿ

PDF created with pdfFactory Pro trial version www.pdffactory.com

ನಿಗದಿಮಾಡಿದ ಪ್ರದೇಶದಲ್ಲಿ ವಾಸಿಸುವಂಥವರು. ಇದು ಒಂದು ರೀತಿಯಲ್ಲಿ ನಿಷೇಧಿತ ಪ್ರದೇಶ. ಹಟ್ಟಿಯ ಯಜಮಾನನ ಅಪ್ಪಣೆ ಇಲ್ಲದೆ ಯಾರೂ ಪ್ರವೇಶ ಮಾಡುವಂಥ ಸ್ಥಿತಿಯೂ ಒಂದು ಕಾಲಕ್ಕಿತ್ತು. ಹಟ್ಟಿ ಎಂದು ಕರೆದುಕೊಳ್ಳುವ ಆ ಗುಡಿಸಲುಗಳ ಸಮೂಹದ ನಡುವೆ ಜುಂಜಪ್ಪನ ಅಥವಾ ಎತ್ತಪ್ಪನ ಅಥವಾ ಅವರ ಕ್ಯಾತಯ್ಯ–ಪಾತಯ್ಯರ ಗುಡಿಗಳಿರುತ್ತವೆ. ಗುಡಿ ಎಂದರೆ ಚಕ್ರಾಕಾರದ ಮೋಟುಗೋಡೆಯ ಮೇಲೆ ಮೇಲ್ಮುಖವಾಗಿ ಕಟ್ಟಿದ ಎತ್ತರದ ಸೂರು. ಇಂಥ ಒಂದು ಪುಟ್ಟ ಗುಡಿಸಲಿನ ಒಳಗೆ ದೇವರ ವಾಸ. ನಿರ್ದಿಷ್ಟಪಡಿಸಿದ ಪೂಜಾರಿಯಷ್ಟೇ ಒಳಗಡೆ ಪ್ರವೇಶ ಮಾಡಬಹುದು. ಆ ಗುಡಿಯ ಸುತ್ತ ತೀವ್ರತರವಾದ ಮುಳ್ಳಿನ ಹೆಬ್ಬೇಲಿ. ಆ ಬೇಲಿಯನ್ನು ಭೇದಿಸಿ ಯಾರೂ ಒಳಗೆ ಹೋಗುವ ಹಾಗಿಲ್ಲ. ಅಂದರೆ ಇದರ ಅರ್ಥ ಇಷ್ಟೆ. ಕಾಡುಗೊಲ್ಲರ ದೇವರು ಅವರ ದೃಷ್ಟಿಯಲ್ಲಿ ಅತ್ಯಂತ ಪವಿತ್ರವಾದದ್ದು. ಆದ್ದರಿಂದ ಇತರೆ ನಾಗರಿಕರ ಜನರ ಸೋಂಕು ಅದಕ್ಕೆ ತಟ್ಟಬಾರದು. ಇದು ದೇವರನ್ನು ಕುರಿತ ಅವರ ಪವಿತ್ರ ಕಲ್ಪನೆ. ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಯ ಅನೇಕಾನೇಕ ಕಾಡುಗೊಲ್ಲರ ಹಟ್ಟಿಗಳಲ್ಲಿ ಈ ದೃಶ್ಯ ಸರ್ವೇಸಾಮಾನ್ಯ. ಇಷ್ಟೆಲ್ಲಾ ಕಟ್ಟುನಿಟ್ಟನ್ನು ಪಾಲಿಸುವ ಈ ಜನ ಅತ್ಯಂತ ಮುಗ್ಧರು. ಸ್ನೇಹಶೀಲರು, ಕಷ್ಟಜೀವಿಗಳು. ದೇವರು ಮತ್ತು ಪಾವಿತ್ರ್ಯದ ವಿಚಾರ ಬಂದಾಗ ಅಷ್ಟೇ ನಿಷ್ಠುರರು. ಬಹುಶಃ ಇಡೀ ಕರ್ನಾಟಕದಲ್ಲಿ ಎಲ್ಲಿಯೂ ಇಷ್ಟು ಕಟ್ಟುನಿಟ್ಟಿನ ಸಂಪ್ರದಾಯಗಳನ್ನು ಕಟಿಬದ್ಧವಾಗಿ ಆಚರಿಸುವ ಬುಡಕಟ್ಟು ಇನ್ನೊಂದಿಲ್ಲ. ಒಂದು ಹೆಣ್ಣು ಹಡೆದಾಗ ಅವಳು ಸೂತಕದವಳು ಎಂಬುದು ಇವರ ಕಲ್ಪನೆ. ಆದ್ದರಿಂದಲೇ ಅವಳು ಹಡೆಯುವ ಸಂದರ್ಭಕ್ಕೆ ಹಟ್ಟಿಯ ಹೊರಗೆ ದೂರದಲ್ಲಿ ಗುಡಿಸಲು ಕಟ್ಟುತ್ತಾರೆ. ಅದರಲ್ಲಿ ಆ ಹೆಣ್ಣು ಒಬ್ಬಳೇ ವಾಸಿಸಬೇಕು. ತನ್ನ ಹೆರಿಗೆಯ ಕರ್ಮವನ್ನು ತೀರಿಸಿಕೊಳ್ಳಬೇಕು. ಈ ಕಟ್ಟುನಿಟ್ಟು ಕೂಡ ಮತ್ತಾವುದೇ ಜನಸಮುದಾಯದಲ್ಲಿ ಇಲ್ಲದಿರುವ ವಿಶಿಷ್ಟ ಪದ್ಧತಿಯಾಗಿದೆ.

ಕಾಡುಗೊಲ್ಲರು ಇಷ್ಟೆಲ್ಲಾ ಕಟ್ಟುನಿಟ್ಟಿನ ನಡುವೆ ಬಾಳಿ ಬದುಕಿದ್ದರೂ ಅವರ ಮೇಲೆ ಆಗಿರುವ ವೈದಿಕ ಪ್ರಭಾವ ನಮ್ಮನ್ನು ಬೆಚ್ಚಿ ಬೀಳಿಸುತ್ತದೆ. ಮಹಾಭಾರತದ ಕೃಷ್ಣ ಇವರ ಮೂಲ ಪುರುಷ ಎಂಬುದು ಇವರ ನಂಬಿಕೆ. ಕಾಡುಗೊಲ್ಲರಲ್ಲಿ ಗಂಡ ಸತ್ತವರು ಬಳೆ ಒಡೆಯುವುದಿಲ್ಲ ಮತ್ತು ಕುಂಕುಮ ಅಳಿಸುವುದಿಲ್ಲ. ತಾವು ವಿಧವೆಯರೆಂದು ತಿಳಿಯುವುದಿಲ್ಲ. ಕೃಷ್ಣನೇ ಅವರೆಲ್ಲರ ಪರೋಕ್ಷ ಪುರುಷ ದೈವ ಹಾಗೂ ಪತಿ. ಆದ್ದರಿಂದ ಚಿಕ್ಕ ವಯಸ್ಸಿನಲ್ಲಿ ಗಂಡ ತೀರಿಕೊಂಡರೂ ತಾವು ವಿಧವೆಯರಾಗಿದ್ದೇವೆಂಬ ಭಾವನೆ ಅವರಲ್ಲಿ ಬರುವುದಿಲ್ಲ. ಇದು ಅವರ ಪೌರಾಣಿಕವಾದ ಕಲ್ಪನೆ ಮತ್ತು ಆ ಕಲ್ಪನೆಯನ್ನು ನೇರವಾಗಿ ತಮ್ಮ ಜೀವನಕ್ಕೆ

ಆವಾಹಿಸಿಕೊಂಡಿರುವ ರೀತಿ. ಬಹುಶಃ ಕೃಷ್ಣ ಮೂಲತಃ ಗೊಲ್ಲನೇ ಆದ್ದರಿಂದ ಇದು ವೈದಿಕ ಕಲ್ಪನೆ ಎಂದು ಅರ್ಥೈಸುವುದು ಕೂಡ ತಪ್ಪಾಗಬಹುದು.

ಇಂಥ ಒಂದು ಕಲ್ಪನೆಯ ನಡುವೆಯೂ ಅವರು ಮೂಲದಲ್ಲಿ ವೈದಿಕರೋ ಅಥವಾ ಶೈವರೋ ಎಂಬುದನ್ನು ಖಚಿತವಾಗಿ ಹೇಳುವ ಪುರಾಣಗಳಿವೆ. ಅವರ ಪುರಾಣ ಮೂಲದಲ್ಲಿ ಶೈವರು ಎಂಬುದನ್ನು ಸಾರಿ ಹೇಳುತ್ತದೆ. "ಕಾಡುಗೊಲ್ಲರ ಎರಡು ಪ್ರಮುಖ ಮಹಾಕಾವ್ಯಗಳು ಜನಪ್ರಿಯವಾಗಿವೆ. ಜುಂಜಪ್ಪನ ಕಾವ್ಯ ಮತ್ತು ಎತ್ತಪ್ಪನ ಕಾವ್ಯ. ಈ ಎರಡೂ ಕಾವ್ಯಗಳಲ್ಲಿಯೂ ಶಿವ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತಾನೆ.

ಕಾಡುಗೊಲ್ಲರ ಮೂಲದೈವಗಳಾದ ಚಿತ್ರದೇವರು ಮತ್ತು ಕಾಟುಮದೇವರ ಕಥೆ ಶಿವನಿಂದಲೇ ಆರಂಭವಾಗುತ್ತದೆ. ಜುಂಜಪ್ಪ ಮತ್ತು ಎತ್ತಪ್ಪ ಕಾಡುಗೊಲ್ಲರ ಐತಿಹಾಸಿಕ ಪುರುಷರು. ಪ್ರಮುಖ ಪಶುಪಾಲಕರಾದ ಇವರು, ಸಮುದಾಯಗಳಿಗಾಗಿ ಪ್ರಾಣ ತೆತ್ತವರಾಗಿದ್ದಾರೆ. ಆದ್ದರಿಂದಲೇ ಇಂದು ಈ ಇಬ್ಬರು ಸಾಂಸ್ಕೃತಿಕ ವೀರರು ಕಾಡುಗೊಲ್ಲರ ಬಹುಮುಖ್ಯ ದೈವಗಳಾಗಿ ಪರಿಗಣಿತರಾಗಿದ್ದಾರೆ. ಈ ದೈವಗಳನ್ನು ಕುರಿತು ಕಾಡುಗೊಲ್ಲ ಕಲಾವಿದರು ಕಟ್ಟಿರುವ ಕಾವ್ಯ ಅನನ್ಯವಾದದ್ದು. ಈ ಕಾವ್ಯವನ್ನು ಗಣೆವಾದನದ (ಉದ್ದನೆಯ ಬಿದಿರು ಕೊಳಲು) ಹಿನ್ನಲೆಯಲ್ಲಿ ಸುಶ್ರಾವ್ಯವಾಗಿ ಹಾಡಲಾಗುತ್ತದೆ. ಒಬ್ಬ ಹಾಡುವವನು ಮತ್ತೊಬ್ಬ ಗಣೆ ಊದುವವನು. ಹಿಮ್ಮೇಳಗಾರನೂ ಇರಬಹುದು ಅಥವಾ ಇಲ್ಲದಿರಬಹುದು. ಒಬ್ಬನೇ ಕಲಾವಿದ ಮಂತ್ರದಂತೆ ಪಟಿಸುತ್ತ ವಚನ ರೂಪದಲ್ಲಿ ಹಾಡುವ ಸಂಪ್ರದಾಯವೂ ಉಂಟು. ಇದು ರಾಗಕ್ಕಿಂತ ಸಾಹಿತ್ಯಕ್ಕೆ ಹೆಚ್ಚು ಒತ್ತು ಕೊಡುತ್ತದೆ. ಇದಲ್ಲದೆ ತ್ರಿಪದಿಯ ರೂಪದಲ್ಲಿ ಹೆಂಗಸರು ಹಾಡುವ ಜುಂಜಪ್ಪನ ಕಾವ್ಯವೂ ಉಂಟು. ಒಟ್ಟಿನಲ್ಲಿ ಕಾಡುಗೊಲ್ಲರಲ್ಲಿ ಅಪೂರ್ವ ಕಲಾವಿದರಿದ್ದಾರೆ. ಅವರ ದೈವವನ್ನು ಮತ್ತು ಪರಂಪರೆಯ ನಡವಳಿಕೆಯನ್ನು ಪವಿತ್ರ ಭಾವನೆಯಿಂದ ಕಾಣುವ ಅವರು ತಮ್ಮ ಮೌಖಿಕ ಸಂಪ್ರದಾಯದಲ್ಲಿ ಬಹುದೊಡ್ಡ ಕಾವ್ಯವೊಂದನ್ನು ಬೆಳೆಸಿಕೊಂಡು ಬಂದಿದ್ದಾರೆ. ಜುಂಜಪ್ಪನ ಕುರಿತ ಈ ಮಹಾಕಾವ್ಯ ಅವರ ಪಶುಪಾಲಕ ಜೀವನದ ಇತಿಹಾಸವನ್ನೂ ಹೇಳುತ್ತದಲ್ಲದೆ ಅವರ ದೈವಗಳನ್ನು ಕುರಿತ ಇತಿಹಾಸವನ್ನು ನಿರೂಪಿಸುತ್ತದೆ. ಆದ್ದರಿಂದ ಜುಂಜಪ್ಪನ ಕಾವ್ಯದ ಸಂಕ್ಷಿಪ್ತ ಕಥಾಭಾಗವನ್ನು ಇಲ್ಲಿ ನೀಡುವುದು ಸೂಕ್ತ ಎಂದು ನಾನು ಭಾವಿಸಿದ್ದೇನೆ. ಇಲ್ಲಿ ಜುಂಜಪ್ಪನ ಕಾವ್ಯ ಪ್ರಾತಿನಿಧಿಕ ಎಂದು ಭಾವಿಸಿ ಈ ಕಥೆಯನ್ನು ನಿರೂಪಿಸುತ್ತೇನೆ. ಆದರೆ ಇದೊಂದೇ ಅವರ ಕಥೆಯಲ್ಲ. ಜುಂಜಪ್ಪನ ಕಾವ್ಯವಲ್ಲದೆ ಎತ್ತಯ್ಯನ ಕಾವ್ಯ, ಚಿತ್ರದೇವರ ಕಾವ್ಯ, ಕಾಟಮದೇವರ ಕಾವ್ಯ, ಕ್ಯಾತೇದೇವರ ಕಾವ್ಯ, ಪಾತೇದೇವರಕಾವ್ಯ, ಗೌರಸಂದ್ರದ ಮಾರಮ್ಮನ ಕಾವ್ಯ, ಬೊಮ್ಮಲಿಂಗನ ಕಾವ್ಯ ಮುಂತಾಗಿ ಅವರ ಆರಾಧ್ಯ ದೇವರುಗಳ

PDF created with pdfFactory Pro trial version www.pdffactory.com

ಕಾವ್ಯಗಳು ವೈವಿಧ್ಯಮಯವಾಗಿ ರೂಪಿತವಾಗಿವೆ. ಆದರೆ ಜುಂಜಪ್ಪನ ಕಾವ್ಯ ಅತ್ಯಂತ ಪ್ರಾತಿನಿಧಿಕ ಪುರಾಣವಾಗಿದ್ದು ಕಾಡುಗೊಲ್ಲರ ದೈವಿಕ ಶ್ರದ್ಧೆಯನ್ನು ಸಾರುವಂಥಾದ್ದಾಗಿದೆ.

"ಕರ್ನಾಟಕದ ಪಶುಸಂಗೋಪನಾ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದ ಪ್ರಮುಖ ಜನವರ್ಗಗಳೆಂದರೆ ಗೊಲ್ಲರು ಮತ್ತು ಕುರುಬರು. ಗೊಲ್ಲರಲ್ಲಿ ಊರುಗೊಲ್ಲರು ಮತ್ತು ಕಾಡುಗೊಲ್ಲರು ಎರಡು ಪ್ರಮುಖ ಪ್ರಭೇದಗಳಿವೆ. ಕುರುಬರಲ್ಲಿಯೂ ಈ ಪ್ರಭೇದಗಳಿವೆ. ಊರುಗಳ ನಿರ್ಮಾಣ ಹಂತದಲ್ಲಿಯೇ ಊರು ಸೇರಿರಬಹುದಾದ ಅಥವಾ ಕ್ರಮೇಣ ಊರುಗಳ ಆಕರ್ಷಣೆಗೆ ಒಳಗಾಗಿ ಒಂದು ಕಡೆ ನೆಲೆ ನಿಂತಿರಬಹುದಾದ ಈ ಊರುಗೊಲ್ಲರು ಮತ್ತು ಊರುಕುರುಬರು ಈಗಲೂ ಪಶುಸಂಗೋಪನಾ ವೃತ್ತಿಯನ್ನೇ ಅವಲಂಬಿಸಿದ್ದರೂ ಬೇಸಾಯದಲ್ಲಿ ಹಿಂದೆ ಬಿದ್ದಿಲ್ಲ. ಹಾಗೆಯೇ ಊರು ಸೇರಿದ ಕಾರಣಕ್ಕಾಗಿ ತಮ್ಮೊಡನೆ ಬಾಳುವ ಇತರೆ ಜನವರ್ಗಗಳ ಸಂಸ್ಕೃತಿಯ ಜೊತೆ ಬೆರೆತಿದ್ದಾರೆ ಕೂಡ. ಹೀಗಾಗಿ ಇವರಲ್ಲಿ 'ವಿಶಿಷ್ಟ ಜೀವನ ವಿಧಾನ ಮತ್ತು ಸಂಸ್ಕೃತಿ'ಯನ್ನು ಗುರುತಿಸುವುದು ಕಷ್ಟಸಾಧ್ಯ. ಆದರೆ ಕಾಡುಕುರುಬರು ಮತ್ತು ಕಾಡುಗೊಲ್ಲರ ಜೀವನವಿಧಾನ ಮತ್ತು ಸಂಸ್ಕೃತಿ ಇಂದಿಗೂ ವಿಶಿಷ್ಟವಾದುದೇ.

ಕರ್ನಾಟಕದ ಒಳನಾಡಿನ ಮಧ್ಯಭಾಗವೆನ್ನಬಹುದಾದ ತುಮಕೂರು, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳ ಕೆಲವು ಭಾಗಗಳಲ್ಲಿ ವಿಶೇಷವಾಗಿ ಕಂಡುಬರುವ ಈ ಕಾಡುಗೊಲ್ಲರು ತಮ್ಮ ವಾಸಕ್ಕಾಗಿ ಆಯ್ಕೆ ಮಾಡಿಕೊಂಡಿರುವ ಭೂಪ್ರದೇಶಗಳು ಕೂಡ ಅಷ್ಟೇ ವಿಶಿಷ್ಟವಾಗಿವೆ. ಕುರುಚಲು ಕಾಡುಗಳ, ಸಾಮಾನ್ಯ ಗುಡ್ಡಬೆಟ್ಟಗಳ, ಹುಲ್ಲುಗಾವಲುಗಳೇ ಪ್ರಧಾನವಾದ ಈ ಪ್ರದೇಶ ಇವರ ವೃತ್ತಿಗೆ ಪೂರಕವಾದದ್ದು. ಊರುಗಳ ಸಂಸ್ಕೃತಿಗೆ ಪರ್ಯಾಯವಾಗಿ ತಮ್ಮದೇ 'ಹಟ್ಟಿ'ಗಳ ಸಂಸ್ಕೃತಿಯನ್ನು ಪೋಷಿಸುತ್ತಾ, ಯಾವ ಕಾರಣಕ್ಕೂ ಊರಿನ ಕಲಾಪಗಳ ಜೊತೆ ಒಂದಾಗದ ಇವರು ಊರಿನ ಜನರನ್ನು ಮೈಲಿಗೆಯವರು ಎಂದೇ ಕರೆಯುತ್ತಾರೆ. ಜುಂಜಪ್ಪನ ಕಾವ್ಯವನ್ನು ಅವಲೋಕಿಸಿ ಹೇಳುವುದಾದರೆ ಬಹುಶಃ ಮೊದಲಿಗೆ ಪೂರಾ ಅಲೆಮಾರಿಗಳಾಗಿಯೇ ಜೀವನ ಸಾಗಿಸುತ್ತಿದ್ದ ಇವರು ಕ್ರಮೇಣ 'ಹಟ್ಟಿ'ಗಳನ್ನು ಕಟ್ಟಿಕೊಂಡಂತೆ ಕಾಣುತ್ತದೆ.

ಈ ಕಾವ್ಯದಲ್ಲಿ ಎರಡು ಅಂಶಗಳು ಮುಖ್ಯವಾಗುತ್ತವೆ. ಒಂದು ಕಡೆ ಈ ಗೊಲ್ಲರನ್ನು ಸಹಿಸದ ಬೇಟೆಗಾರ ಸಮೂಹ, ಮತ್ತೊಂದು ಕಡೆ ಇವರ ಇವರ ಹುಲ್ಲುಗಾವಲುಗಳನ್ನು ಕ್ರಮೇಣ ಬೇಸಾಯ ಭೂಮಿಯನ್ನಾಗಿ ಪರಿವರ್ತಿಸುತ್ತಾ ಬಂದ ಕೃಷಿ ವರ್ಗಗಳು. ಈ ಇಬ್ಬರ ನಡುವೆ ತಮ್ಮ ಅಸ್ತಿತ್ವಕ್ಕಾಗಿ ಪರದಾಡುವಂತೆ

ಕಂಡುಬರುವುದು ಒಂದು ಘಟ್ಟವಾದರೆ, ತಮ್ಮದೇ ಕುಲದ ಇತರೆ ಬೆಡಗುಗಳ ಅಸೂಯೆಯನ್ನು ಗೆಲ್ಲುವುದು ಮತ್ತೊಂದು ಘಟ್ಟ. ಮಾರನವರ ಗೊಲ್ಲರ ದನಗಳು ಬೆಳೆದು ಹೆಚ್ಚಾಗುವುದನ್ನು ಕಂಬೇರ ಗೊಲ್ಲರು ಸಹಿಸುವುದಿಲ್ಲ. ಜುಂಜಪ್ಪನಿಗೂ ಜುಂಜಪ್ಪನ ಸೋದರ ಮಾವಂದಿರಿಗೂ ಸದಾ ನಡೆಯುವ ಹೋರಾಟ ಇಂಥದ್ದೇ.

ಜುಂಜಪ್ಪನ ಕಾವ್ಯ ಈ ಎರಡು ಪಾತಳಿಗಳಲ್ಲಿ ಹರಿಯುತ್ತಾ ಹೋಗುತ್ತದೆ. ಕೇವಲ ದನಗಳನ್ನು ನಂಬಿಕೊಂಡು, ಅವುಗಳನ್ನು ಮೇಯಿಸುವ ಕಾಯಕಕ್ಕಾಗಿ ಕಾಡುಮೇಡು ಅಲೆಯುವ ಅಲೆಮಾರಿ ಜನವರ್ಗವೊಂದರ ಅತಂತ್ರ ಸ್ಥಿತಿಯ ಪ್ರತೀಕವಾಗಿ ಜುಂಜಪ್ಪ ಕಾಣಿಸಿಕೊಳ್ಳುತ್ತಾನೆ. ಅನೇಕ ಸಂದರ್ಭಗಳಲ್ಲಿ ವ್ಯಕ್ತಗೊಳಿಸುವ ಜುಂಜಪ್ಪನ ಅನಾಥತೆ ಕಾಡಿನ ಮಕ್ಕಳ ಕಡುಬಡತನವನ್ನು ನಿವೇದಿಸುತ್ತದೆ. ಮದುವೆಯಾದರೂ ಹೆಂಡತಿಯೊಡನೆ ಕೂಡಿ ಬಾಳಲಾಗದ ಜುಂಜಪ್ಪ ತನ್ನ ತಾತ ದೇವರದೈಮಾರನ ಸ್ಥಿತಿ. ಈ ಅಲೆಮಾರಿಗಳ ಸುಖವಿಲ್ಲದ ಬದುಕನ್ನು ಚಿತ್ರಿಸುತ್ತದೆ. ಬಹುಶಃ ಈ ಸ್ಥಿತಿಯೇ ಹೆಣ್ಣು ಮಕ್ಕಳನ್ನು ಅನುಮಾನಿಸುವ ಮಾನಸಿಕ ಕ್ಲೇಶಕ್ಕೂ ಒಳಗು ಮಾಡುತ್ತದೆ. ತನ್ನ ತಂದೆಯ ಅನುಪಸ್ಥಿತಿಯಲ್ಲಿ ಮಕ್ಕಳನ್ನು ಹೆತ್ತ ಜುಂಜಪ್ಪನ ತಾಯಿಯನ್ನು ಸ್ವತಃ ಜುಂಜಪ್ಪನೇ ಅನುಮಾನಿಸಿ ಹಲವು ಪರೀಕ್ಷೆಗಳಿಗೆ ಒಡ್ಡುತ್ತಾನೆ. ಹೆರಿಗೆಯಾದ ಹೆಣ್ಣು ಮಗಳು ಮೂರುತಿಂಗಳ ಕಾಲ ಪ್ರತ್ಯೇಕವಾಗಿ ಒಂಟಿ ಗುಡಿಸಲಲ್ಲಿ ಬಾಳಬೇಕಾದ ದಾರುಣ ಸ್ಥಿತಿ ಕಾಡುಗೊಲ್ಲರಲ್ಲಿ ಇಂದಿಗೂ ರೂಢಿಯಲ್ಲಿದೆ.

ಈ ಕಾವ್ಯದ ಮತ್ತೊಂದು ಪ್ರಮುಖ ಅಂಶವೆಂದರೆ ಕಾಡುಗೊಲ್ಲರು ತಮ್ಮ ದನ ಕರುಗಳಿಗೆ ನೀಡುವ ಪ್ರಾಧಾನ್ಯತೆ. ದನಗಳೇ ಅವರ ಸರ್ವಸ್ವ. ಅವೇ ಅವರ ಮೂಲದೈವಗಳು. ನೂರಾರು ರಾಸುಗಳನ್ನು ನೂರಾರು ಹೆಸರುಗಳಲ್ಲಿ ಗುರುತಿಸಿ ತಮ್ಮ 'ಗಣೆ' ಊದಿ ಕರೆಯುವ ಪರಿಯಂತೂ ಮೋಹಕವಾದದ್ದು. ಜುಂಜಪ್ಪನ ಕಾವ್ಯದ ಬಹುಭಾಗವನ್ನು ಆಕ್ರಮಿಸಿಕೊಂಡಿರುವ ಜುಂಜಪ್ಪನ ನೆಚ್ಚಿನ ಹೋರಿ 'ಬಡಮೈಲ' ಕಾಡುಗೊಲ್ಲರು ತಮ್ಮ ದನಗಳಲ್ಲಿ ಇಟ್ಟ ನಂಬಿಕೆಗೆ ಪ್ರೀತಿಗೆ ಒಂದು ಪ್ರತೀಕ. ಕಷ್ಟಗಳಿಂದ ಪೊರೆಯಬಲ್ಲ, ಗೊಲ್ಲನ ಅನುಪಸ್ಥಿತಿಯಲ್ಲಿ ಇತರೆ ದನಗಳ ಹಿಂಡನ್ನು ನಿಯಂತ್ರಿಸಬಲ್ಲ ಈ ಬಡಮೈಲ ಎಂಬ ಹೋರಿ ಅನೀತಿಯವರಿಗೆ, ಅಸೂಯೆಯವರಿಗೆ, ಕುತಂತ್ರಿಗಳಿಗೆ ಸಿಂಹಸ್ವಪ್ನ. ಹೋರಿಯ ರೂಪದ ಈ ಪ್ರತಿಮೆ ಜುಂಜಪ್ಪ ಆತ್ಮವಿಶ್ವಾಸದ ಮತ್ತೊಂದು ರೂಪ. ಕಡೆಗಣಿಸಿ ಬಿಸಾಡಿದ ಹಸುವಿನ ಕರುವೊಂದನ್ನು ಅಸಾಮಾನ್ಯವಾಗಿ ಬೆಳೆಸಿ ವೈರಿಗಳ ಹುಟ್ಟಡಗಿಸುವ ಜುಂಜಪ್ಪನ ಛಲವಾಗಲೀ, ಇಷ್ಟಾಗಿಯೂ ಅದನ್ನು 'ಬಡಮೈಲ' ಎಂದೇ ಕರೆಯುವ 'ಧ್ವನಿ'ಯಾಗಲಿ ಈ ಕಾವ್ಯದ ಒಂದು ಪ್ರಮುಖ ಅಂಶ. ಸ್ವತಃ ಜುಂಜಪ್ಪ ಕೂಡ ಎಷ್ಟೇ ಪರಾಕ್ರಮಿಯಾದರೂ ಒಬ್ಬ ಬಡವ ಎನ್ನುವ ಮಾತು ಸುಳ್ಳಲ್ಲ. ಅವನು ಅನೇಕ

PDF created with pdfFactory Pro trial version www.pdffactory.com

ಹುಲ್ಲುಗಾವಲುಗಳನ್ನು ಗೆಲ್ಲುತ್ತಾನೆ. ಚೇಳೂರ ದೊರೆಗಳನ್ನು ಗೆಲ್ಲುತ್ತಾನೆ. ಶ್ರೀಮಂತರಾದ ತನ್ನ ಸೋದರ ಮಾವಂದಿರ ಕುತಂತ್ರವನ್ನು ಬಯಲು ಮಾಡುತ್ತಾನೆ. ಇಷ್ಟೆಲ್ಲದರ ನಡುವೆಯೂ ಅವನೊಬ್ಬ ಅನಾಥನಂತೆಯೇ ಗೋಚರಿಸುತ್ತಾನೆ. ಆದರೆ ಅವನ ಛಲ, ಆತ್ಮವಿಶ್ವಾಸ ಹಾಗೂ ತಾಳ್ಮೆ ಹಾಗೂ ವೃತ್ತಿಯಲ್ಲಿನ ಪ್ರಾಮಾಣಿಕತೆ ಅವನನ್ನು ನಾಯಕನನ್ನಾಗಿಸಿವೆ. ಕಾಡುಗೊಲ್ಲರು ತಮ್ಮನ್ನು ಜುಂಜಪ್ಪನ ಜೊತೆಗೆ ಸಮೀಕರಿಸಿಕೊಳ್ಳುತ್ತಾರೆ. ಆದ್ದರಿಂದಲೇ ಅವನೊಬ್ಬ ಸಾಂಸ್ಕೃತಿಕ ವೀರನಾಗಿ ನಮ್ಮ ಮುಂದಿದ್ದಾನೆ.

ಬಹುಶಃ ಮೂಲದಲ್ಲಿ ಶೈವರಾಗಿದ್ದ ಕಾಡುಗೊಲ್ಲರು ನಂತರದ ಅವಸ್ಥಾಂತರಗಳಲ್ಲಿ ವೈಷ್ಣವರಾಗಿರುವಂತೆ ಕಾಣುತ್ತದೆ. ಇವರ ದೈವಗಳಾದ 'ಸಿತ್ತರುಲಿಂಗ' ಮತ್ತು 'ಕಾಟಮುಲಿಂಗ'(ಚಿತ್ರದೇವರು, ಕಾಟುಮದೇವರು) ಶಿವನ ಅಪೇಕ್ಷೆಯಂತೆ ಭೂಲೋಕಕ್ಕೆ ಬಂದವರು. ಇವರು ಭೂಮಿಗೆ ಬಂದಾಗ ಇವರ ಬಂಗಾರದ ರಥವನ್ನು ಕಸಿದುಕೊಳ್ಳಲು ಯತ್ನಿಸುವ ಬ್ರಾಹ್ಮಣನಿಗೆ ಇವರು ಕಲಿಸುವ ಪಾಠ ತುಂಬ ಮಾರ್ಮಿಕವಾಗಿದೆ. ಈ ಇಬ್ಬರು ದೇವರ ನಂತರ ಕಾಡುಗೊಲ್ಲರ ದೈವವಾಗಿ ಪೂಜಿಸಲ್ಪಡುತ್ತಿರುವ ಜುಂಜಪ್ಪ ಕೂಡ ವೀರಭದ್ರನ ಅವತಾರ ಎಂದೇ ಅವರು ನಂಬುತ್ತಾರೆ. ಹಾಗೆಯೇ ಜುಂಜಪ್ಪನನ್ನು ಶ್ರೀಕೃಷ್ಣನ ವ್ಯಕ್ತಿತ್ವದ ಸಂವಾದಿ ರೂಪವಾಗಿ ಕೂಡ ಕಾಣುತ್ತಾರೆ. ಅವನ ಸೋದರ ಮಾವಂದಿರನ್ನು ಅವನು ನಾಶ ಮಾಡುವ ಆಶಯ ಮಹಾಭಾರತದ ಕೃಷ್ಣನನ್ನೇ ನೆನಪಿಸುತ್ತದೆ. ಈಗಿನ ಕಾಡುಗೊಲ್ಲರು ಸಂಪೂರ್ಣವಾಗಿ ವೈಷ್ಣವೀಕರಣಕ್ಕೊಳಗೊಂಡಿದ್ದು ವೆಂಕಟರಮಣನನ್ನು ಪೂಜಿಸುತ್ತಾರೆ ಹಾಗೆಯೇ ಬೆಟ್ಟದ ರಂಗಸ್ವಾಮಿ ಕೂಡ ಇವರ ದೇವರು. ಕಾವ್ಯದಲ್ಲಿ ಬರುವ ಗೌರಸಂದ್ರದ ಮಾರಿಯ ಪಾತ್ರವಂತೂ ಅನೇಕ ಸಂದರ್ಭಗಳಲ್ಲಿ ಜುಂಜಪ್ಪನ ರಕ್ಷಣೆಗಾಗಿಯೇ ಬರುವಂತಿದೆ. ಹಾಗೆಯೇ ಇವತ್ತಿಗೂ ಕೂಡ ಕಾಡುಗೊಲ್ಲರು ಮಾರಿಯ ಆರಾಧನೆಯನ್ನು ಅಷ್ಟೇ ನಿಷ್ಠೆಯಿಂದ ಮಾಡುತ್ತಾರೆ. ಒಟ್ಟಿನಲ್ಲಿ ಕಾಡುಗೊಲ್ಲರ ಈ ಕಾವ್ಯ ಅವರ ಸಂಕೀರ್ಣವಾದ ಆರಾಧನಾ ಪದ್ಧತಿಗಳನ್ನು, ಅವರ ಜೀವನ ವೈವಿಧ್ಯವನ್ನು ಹಾಗೆಯೇ ಒಂದು ಜನವರ್ಗದ ಆಶೋತ್ತರಗಳನ್ನು ಬಿಂಬಿಸುವ ಒಂದು ಅತ್ಯಂತ ಮಹತ್ವದ ಸಾಂಸ್ಕೃತಿಕ ಪುರಾಣವಾಗಿ ನಮ್ಮನ್ನು ಸೆಳೆಯುತ್ತದೆ."

ಕಾಡುಗೊಲ್ಲರ ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡಿರುವ ಕಾಳೇಗೌಡ ನಾಗವಾರ ಅವರು ಅವರ ದೈವಾರಾಧನೆಯ ಒಳವಿವರಗಳನ್ನು ಹೀಗೆ ದಾಖಲಿಸುತ್ತಾರೆ. "ಹಂಚಿಹುಲ್ಲು ಬಾದೆಹುಲ್ಲು ಮತ್ತು ಸೋಗೆಗರಿಗಳಲ್ಲಿ ತಾವು ವಾಸ ಮಾಡುವ ಗುಡಿಸಲುಗಳನ್ನು ನಿರ್ಮಿಸುವ ಕಾಡುಗೊಲ್ಲರು ತಮ್ಮ

ದೇವಾಲಯಕ್ಕಾಗಿ ಒಂದು ಪುಟ್ಟ ಗುಡಿಸಲು ಕಟ್ಟಿರುತ್ತಾರೆ; ಇದನ್ನು ಗುಬ್ಬ ಎಂದು ಕರೆಯಲಾಗುತ್ತದೆ. ಪ್ರಸ್ತುತ ಹಟ್ಟಿಯಲ್ಲಿ ಈ ಬಗೆಯ ಮೂರು ಗುಬ್ಬಗಳು ಇದ್ದು, ಅವುಗಳಲ್ಲಿ ಜುಂಜಪ್ಪ, ಚಿತ್ತದೇವರು, ಎತ್ತಪ್ಪ ಮತ್ತು ಕಣತಿ ತಮ್ಮಪ್ಪ ದೇವರುಗಳಿವೆ. ಬೀಗ ಹಾಕಲಾಗಿರುವ ಪೆಟ್ಟಿಗೆಯಲ್ಲಿ ಜುಂಜಪ್ಪನು ಬಳಸುತ್ತಿದ್ದನೆನ್ನಲಾದ ವಸ್ತುಗಳನ್ನು ಯಾರೊಬ್ಬರಿಗೂ ತೋರಿಸದಂತೆ ಇಡುತ್ತಾರೆ. ಈ ಗುಬ್ಬಗಳ ಸುತ್ತಲೂ ಮುಳ್ಳಿನ ಬೇಲಿಯನ್ನು ಹಾಕಲಾಗಿದೆ. ಜುಂಜಪ್ಪನ ಗುಬ್ಬದ ಬಾಗಿಲಿನ ಹಿತ್ತಾಳೆ ತಗಡಿನಲ್ಲಿ ಜುಂಜಪ್ಪನ ಪುರಾಣದಲ್ಲಿ ಕಾಣಿಸಿಕೊಳ್ಳುವ ಆತನ ಬಡಮೈಲ ಎಂಬ ಹೋರಿಯ ಚಿತ್ರ ಮತ್ತು ಎತ್ತಯ್ಯನ ಪುರಾಣದಲ್ಲಿನ ಸೀಳುತಲೆ ಚಿಕ್ಕರಂಭೆ ಎಂಬ ಪ್ರಖ್ಯಾತ ಹಸುವಿನ ಚಿತ್ರಗಳು ಇವೆ. ಜುಂಜಪ್ಪನು ನಿಜರೂಪದಲ್ಲಿ ಕಂಡರೆ, ನೋಡಿದವರು ಸುಟ್ಟು ಹೋಗುವರೆಂದು, ಆತನು ಸರ್ಪದ ರೂಪದಲ್ಲಿ ಕಾಣಿಸಿಕೊಳ್ಳುತ್ತಾನೆಂದು ಈ ಜನ ನಂಬುತ್ತಾರೆ. ತನ್ನ ಸೋದರ ಮಾವಂದಿರ ವಿರುದ್ಧ ಜುಂಜಪ್ಪನು ಹೋರಾಡಿ ಚಿಕ್ಕವಯಸ್ಸಿನಲ್ಲೇ ಮಡಿಯುತ್ತಾನೆ. ಅತ್ಯಂತ ಸಾಹಸಿಯೂ, ನಿಯಮಬದ್ಧನೂ, ನ್ಯಾಯಪಕ್ಷಪಾತಿಯೂ ಆದವನು ಅವಿವಾಹಿತ ನಾಗಿದ್ದು ದನಗಾಹಿ ಬದುಕಿನ ಕಷ್ಟಗಳನ್ನೆಲ್ಲ ಸಂಪೂರ್ಣವಾಗಿ ಅನುಭವಿಸಿ ಮೇಲೇರುತ್ತಾನೆ. ಜುಂಜಪ್ಪನ ಇಷ್ಟೇಲ್ಲ ಯಶಸ್ಸನ್ನು ಕಂಡು ಸಹಿಸಲಾರದೆ, ಕರುಬಿದ ಆತನ ಸೋದರಮಾವಂದಿರು ಅನೇಕ ರೀತಿಯಲ್ಲಿ ಕಿರುಕುಳಗಳನ್ನು ನೀಡಿ, ಕೊನೆಗೆ ಪ್ರೀತಿಯಿಂದಲೆಂಬಂತೆ ಮನೆಗೆ ಔತಣಕ್ಕೆ ಆಹ್ವಾನಿಸಿ ಉಗ್ರವಾದ ವಿಷವಿಕ್ಕಿ ಕೊಲ್ಲುತ್ತಾರೆ. ವಿಷವುಂಡ ಜುಂಜಪ್ಪ ಘೋರಯಾತನೆಯೊಡನೆ ತಾನು ಸಾಯುವ ಮುನ್ನ ಸೋದರ ಮಾವಂದಿರು ಮತ್ತು ಅವರ ವಾಸಸ್ಥಾನದ ಇಡೀ ಕಂಬೇರಹಟ್ಟಿಯನ್ನು ನಾಶ ಮಾಡುತ್ತಾನೆ. ಹೀಗೆ ಜುಂಜಪ್ಪನು ಕಾಡುಗೊಲ್ಲರ ಬದುಕಿನಲ್ಲಿ ಸಾಂಸ್ಕೃತಿಕ ವೀರನೂ ಪುರಾಣದ ದೇವತೆಯಾಗಿ ಒಟ್ಟಿಗೇ ಪೂಜಿಸಲ್ಪಡುತ್ತಿದ್ದಾನೆ. ಜುಂಜಪ್ಪ ಮತ್ತು ಆತನ ತಂದೆ ಕೆಂಗುರಿ ಮಲ್ಲಪ್ಪನು ವಾಸಿಸುತ್ತಿದ್ದ ಕಳುವಾರಹಳ್ಳಿ ಹಟ್ಟಿಯು, ಇಲ್ಲಿ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡಿರುವ ಬೇವಿನಹಳ್ಳಿ ಗೊಲ್ಲರಹಟ್ಟಿಯ ಸಮೀಪದಲ್ಲಿಯೇ ಇದೆ. ಜುಂಜಪ್ಪ ನಾಶ ಮಾಡಿದ 'ಕಂಬೇರಹಾಳು' ಪ್ರದೇಶವನ್ನು ಕೂಡ ಸ್ಪಷ್ಟವಾಗಿ ಗುರುತಿಸಲಾಗುತ್ತದೆ. ಜೊತೆಗೆ ಕಳೂರಹಳ್ಳಿ ಎಂದು ಈಗ ಕರೆಯಲಾಗುವ ಊರಿನ ಎಲ್ಲೆಯಲ್ಲಿ ಜುಂಜಪ್ಪನ ಗುಡ್ಡೆ(ಸಮಾಧಿ) ಇದೆ. ಈತನ ಹೆಸರಿನ ೯೮ ಗದ್ದುಗೆಗಳು ಕಾಡುಗೊಲ್ಲರು ವಾಸಿಸುವ ಬೇರೆ ಬೇರೆ ಪ್ರದೇಶಗಳಲ್ಲಿ ಇದ್ದರೂ ಸಹ ಅವುಗಳಲ್ಲೆಲ್ಲ ಈ ಸಮಾಧಿಗಳನ್ನು ಅತ್ಯಂತ ಗೌರವಗಳಿಂದ ಪೂಜಿಸುತ್ತಾರೆ. ಇಲ್ಲಿನ ಪೂಜೆ ಪುನಸ್ಕಾರಗಳಿಗೆಲ್ಲ ಈಗಿನ ಹಕ್ಕುದಾರರಾಗಿರುವ ಬೇವಿನಹಳ್ಳಿ ಗೊಲ್ಲರಹಟ್ಟಿಯ ಗೊಲ್ಲರು ದೀವಳಿಗೆಯಲ್ಲಿ ಜುಂಜಪ್ಪನ ಹಬ್ಬದ ಸಮಯದಲ್ಲಿ ಪ್ರತಿವರ್ಷ ಕಾರ್ತೀಕ

PDF created with pdfFactory Pro trial version www.pdffactory.com

ಮಾಸದಲ್ಲಿ ಅಮಾವಾಸ್ಯೆಯ ನಂತರ ಬರುವ ಮೊದಲ ಸೋಮವಾರದಂದು ಜುಂಜಪ್ಪನ ಗುಡ್ಡೆಯಲ್ಲಿ ನಡೆಯುವ ವಿಶೇಷಪೂಜೆಗಾಗಿ ಕಾಡುಗೊಲ್ಲರ ಎಲ್ಲ ನೆಲೆಗಳಿಂದಲೂ ಬರುವ ಜನರು ಅಸಂಖ್ಯ ಪ್ರಮಾಣದಲ್ಲಿ ನೆರೆಯುತ್ತಾರೆ.

ಜುಂಜಪ್ಪನ ತಂದೆಯಾದ ಕೆಂಗುರಿ ಮಲ್ಲಪ್ಪನಿಗೆ ಕಳೂರಹಳ್ಳಿಯ ಕುಂಚಟಿಗರ ಕುಲದ ಅಳುವಿರವರ ಒಕ್ಕಲಿಗನಾದ ಹೊನ್ನಹಟ್ಟಿ ಅಲೇಗೌಡನು ಆಶ್ರಯವಿತ್ತು, ಆತನ ಅಲೆಮಾರಿ ಬದುಕಿಗೊಂದು ನೆಲೆಯನ್ನು ಒದಗಿಸುತ್ತಾನೆ. ಕೆಂಗುರಿ ಮಲ್ಲಪ್ಪನು ಇಲ್ಲಿ ಬಂದು ನೆಲೆಯೂರಿದ ಮೇಲೆ ಆತ ಮತ್ತು ಅಲೇಗೌಡನ ಪರಸ್ಪರ ಕೃತಜ್ಞತೆಯ ಭಾವದಿಂದ ತುಂಬಿದವರಾಗಿ ಗೌರವಾದರಗಳೊಡನೆ ಬದುಕುತ್ತಾರೆ. ಈ ನಡುವೆ ಕೆಂಗುರಿ ಮಲ್ಲಪ್ಪನ ಮಗನಾದ ಕಲಿವೀರ ಜುಂಜಪ್ಪನು ಬೆಳಗುವ ನಕ್ಷತ್ರದಂತೆ ಕೀರ್ತಿವಂತನಾಗಿ ಬೆಳೆದು, ಸುತ್ತೆಲ್ಲರ ಗಮನ ಸೆಳೆದು, ಹದುನಾರರ ಹರೆಯದಲಿದ್ದಾಗಲೇ ಥಟ್ಟನೆ ಮೃತಪಟ್ಟಾಗ, ಲೋಕಾಶ್ಚರ್ಯಕ್ಕೆ ಒಳಗಾಗಿ ದೇವತೆಯೆಂದು ಪೂಜಿಸಲ್ಪಡುತ್ತಾನೆ. ಕೆಂಗುರಿ ಮಲ್ಲಪ್ಪ ಮತ್ತು ಜುಂಜಪ್ಪನಿಗೆ ಆಶ್ರಯದಾತನೂ, ಅಭಿಮಾನಿಯೂ ಆಗಿದ್ದ ಹೊನ್ನಹಟ್ಟಿ ಅಲೇಗೌಡನು ಕಳೂರಹಳ್ಳಿಯಲ್ಲಿ ಜುಂಜಪ್ಪನ ಗುಡಿ ಕಟ್ಟಿಸಿ, ಪೂಜಾದಿ ನಿತ್ಯನೇಮಗಳೆಲ್ಲವೂ ನಿರಂತರವಾಗಿ ಸಲ್ಲುವಂತೆ ವ್ಯವಸ್ಥೆ ಮಾಡುತ್ತಾನೆ. ಕ್ರಮೇಣ ಜುಂಜಪ್ಪ ದೇವರು ಇನ್ನಷ್ಟು ಪ್ರಸಿದ್ಧನಾಗಿ ಗೊಲ್ಲರೂ ಸೇರಿದಂತೆ ಎಲ್ಲ ಜಾತಿಯ ಭಕ್ತಾದಿಗಳ ಸಂಖ್ಯೆ ದಿನೇದಿನೇ ಹೆಚ್ಚಾಗತೊಡಗುತ್ತದೆ. ದೇವರು ಮತ್ತು ಪೂಜಾದಿಗಳ ಒಡೆತನ ಮಾತ್ರ ಕಳೂರಹಳ್ಳಿ ಕುಂಚಟಿಗರ ಕುಲದ ಹೊನ್ನಹಳ್ಳಿ ವಂಶಸ್ಥರಲ್ಲೇ ಇರುತ್ತದೆ. ಈ ಒಡೆತನವು ನಮ್ಮದಾಗಬೇಕೆಂದು ಗೊಲ್ಲರು ತೀರ್ಮಾನಿಸುತ್ತಾರೆ. ಸುಮಾರು ೧೫೦ ವರ್ಷಗಳ ಹಿಂದೆ ಬೇವಿನಹಳ್ಳಿ ಗೊಲ್ಲರ ಹಟ್ಟಿಯ ಕಾಡುಗೊಲ್ಲರು ಪಕ್ಕದ ಕಳೂರಹಳ್ಳಿಯ ಎಲ್ಲೆಯಲ್ಲಿರುವ ಜುಂಜಪ್ಪ ಮತ್ತು ಕರಿಯಮ್ಮ ದೇವತೆಯನ್ನು ಗದ್ದಲದ ನಡುವೆ ಗುಟ್ಟಾಗಿ ಅಪಹರಿಸಿ, ಒಡವೆ–ವಸ್ತ್ರಗಳ ಸಮೇತ ತಮ್ಮ ಹಟ್ಟಿಗೆ ತರುತ್ತಾರೆ. ಈ ಬಗ್ಗೆ ಅನೇಕ ವರ್ಷಗಳ ಕಾಲ ಕೋರ್ಟಿನಲ್ಲಿ ವ್ಯಾಜ್ಯ ನಡೆಯುತ್ತದೆ.

"ಜುಂಜಪ್ಪ ನಮ್ಮವನು, ಒಡವೆಗಳು ನಮ್ಮವೇ ಆತ ಈಗ ನಮ್ಮಲ್ಲಿಯೇ ಇದ್ದಾನೆ"– ಎಂಬೆಲ್ಲ ಗೊಲ್ಲರ ಬೇಡಿಕೆಗಳ ಮತ್ತು ಸುಳ್ಳುಸಾಕ್ಷ್ಯಗಳ ಮೇರೆಗೆ ೩೧–೫–೧೮೮೬ರಂದು ನ್ಯಾಯಾಲಯದ ತೀರ್ಪು ಗೊಲ್ಲರ ಪರವಾಗಿ ಹೊರಬೀಳುತ್ತದೆ; ಜೊತೆಗೆ ಜುಂಜಪ್ಪನ ಸಮಾಧಿಯ ಮೇಲಿನ ಮೊದಲ ಪೂಜೆ ಮಾತ್ರ ಯಥಾಪ್ರಕಾರ ಅಳುವಿನೋರ ಒಕ್ಕಲಿಗರಲ್ಲೇ ಉಳಿಯುತ್ತದೆ(ಈ ಎಲ್ಲ ವಿರಸದ ಪ್ರಕರಣ ನಡೆದು ಸುಮಾರು ನೂರು ವರ್ಷಗಳೇ ಆಗಿರುವುದರಿಂದ ಬೇವಿನಹಳ್ಳಿ ಗೊಲ್ಲರಹಟ್ಟಿ ಮತ್ತು ಕಳೂರಹಳ್ಳಿಯ ಜನರ ನಡುವೆ ಯಾವುದೇ ಹಳೆಯ ಮನಸ್ತಾಪ ಅಥವಾ

ಕಹಿ ಈಗ ಉಳಿದಿಲ್ಲ. ಅಲ್ಲದೆ, ದೇವರನ್ನು ಉದ್ದೇಶಪೂರ್ವಕವಾಗಿ ಕದ್ದು ತಂದುದ್ದರ ಬಗ್ಗೆ ಈ ಎರಡು ಗುಂಪುಗಳ ಹೇಳಿಕೆಗಳು ಮಾತ್ರ ಒಂದೇ ಆಗಿವೆ.).

ಪಕ್ಕದ ಕಳೂರಹಳ್ಳಿ ಗ್ರಾಮದ ಹೊನ್ನಹಟ್ಟಿ ಅಲೇಗೌಡನು ಕಟ್ಟಿಸಿದ ಜುಂಜಪ್ಪನ ಗುಡಿ ಇದ್ದ ಸ್ಥಳವನ್ನು ಈಗಲೂ ಕಾಣಬಹುದಾಗಿದೆ. ಗುಡಿಯು ಬಿದ್ದು ಹೋಗಿದ್ದು, ತೇರಿನ ಎರಡು ಕಬ್ಬಿಣದ ಗಾಲಿಗಳು ಅಲ್ಲಿವೆ. ಗುಡಿಯ ಪಕ್ಕದಲ್ಲೇ ಅಲೇಗೌಡರ ವಂಶಸ್ಥರು ಈಗಲೂ ವಾಸಿಸುತ್ತಿದ್ದಾರೆ: ಜುಂಜಪ್ಪನ ಗುಡ್ಡೆ(ಸಮಾಧಿ)ಯಲ್ಲಿ ಬೆಳಗಿನ ಪೂಜೆಯನ್ನು ಇವರೇ ನೆರವೇರಿಸುತ್ತಾರೆ, ಮಧ್ಯಾಹ್ನದ ಪೂಜೆಯು ಗೊಲ್ಲರದಾಗಿದೆ.

ಕಳೂರಹಳ್ಳಿಯಲ್ಲಿ ಗೊಲ್ಲರು ಈಗ ಒಂದು ಕುಳವೂ ಇಲ್ಲ. ಅಲ್ಲಿ ಒಲೆಹೂಡಿ ಅಡಿಗೆ ಮಾಡಿದಲ್ಲಿ ತಾವೆಲ್ಲ ಸುಟ್ಟುಹೋಗುತ್ತೇವೆನ್ನುವ ನಂಬಿಕೆ ಈ ಜನರಲ್ಲಿ ಪ್ರಬಲವಾಗಿದೆ. ಈ ಊರಿನ ಹೊಲಗಳಿರುವ ಬಯಲಲ್ಲಿ ಹುಣಸೆಮರದ ಕೆಳಗೆ ಜುಂಜಪ್ಪನ ತಾಯಿ ಚೆನ್ನಮ್ಮನ ಸಮಾಧಿ ಇದೆ. ಈ ಸಮಾಧಿ ಇರುವ ಹೊಲವನ್ನು 'ದೇವರ ಹೊಲ' ಎಂದು ಕರೆಯಲಾಗುತ್ತದೆ. ಜುಂಜಪ್ಪನ 'ಗುಡ್ಡೆ'ಯ ಎದುರಿಗೆ ಅವನ ಬಸವನ ಸಮಾಧಿ ಇದೆ. ಹಿಂಭಾಗಕ್ಕೆ ಸುಮಾರು ಎರಡು ಫರ್ಲಾಂಗ್ ದೂರದಲ್ಲಿ ಜುಂಜಪ್ಪನ ತಂದೆ ಕೆಂಗುರಿ ಮಲ್ಲಪ್ಪನ ಸಮಾಧಿ ಇದೆ. ಕಲ್ಲನಕುಂಟೆ ಚಿತ್ರದೇವರ ಪೌಳಿಯಿಂದ ಜುಂಜಪ್ಪನ ಗುಡ್ಡೆಗೆ ಬರುವ ದಾರಿಯಲ್ಲಿ ಜುಂಜಪ್ಪನ ಜೂಲುನಾಯಿಯ ಸಮಾಧಿ ಇದೆ. ಇದರ ಮೇಲೆ ದಾರಿಯಲ್ಲಿ ಹೋಗುವವರೆಲ್ಲ ತಲಾ ಒಂದೊಂದು ಕಲ್ಲನ್ನು ನೆನಪಿಗಾಗಿ ಎಸೆಯುತ್ತಾ ಹೊರಟು ಅದು ದೊಡ್ಡದಾಗಿ ಬೆಳೆಯುತ್ತಿದೆ. ಜುಂಜಪ್ಪನ 'ಗುಡ್ಡೆ'ಯ ಸುತ್ತಲೂ ದನಕರು ಮತ್ತು ಹೋರಿಗಳನ್ನು ವಾದ್ಯ ಸಮೇತ ಸುತ್ತು ಹಾಕಿಸುವುದು ವಾಡಿಕೆಯಾಗಿದೆ. ಹೀಗೆ ಮಾಡುವುದರಿಂದ ಅವುಗಳಿಗೆ ಯಾವುದೇ ಬಗೆಯ ಆಪತ್ತು ಅಥವಾ ರೋಗರುಜಿನಗಳು ತಟ್ಟುವುದಿಲ್ಲವೆಂದು ಅವರು ನಂಬಿದ್ದಾರೆ."

೨.೯. ಬೆಳದಿಂಗಳ ಸಿರಿ

ಏಪ್ರಿಲ್ ತಿಂಗಳಿನ ಚೆಲ್ಲಿದ ತಿಂಗಳು ಬೆಳಕಿನಲ್ಲಿ ನಡೆಯುವ ಹಿರಿಯಡ್ಕದ 'ಸಿರಿ' ಜಾತ್ರೆ ಇಡೀ ದಕ್ಷಿಣ ಭಾರತದಲ್ಲಿಯೇ ವೈಶಿಷ್ಟ್ಯಪೂರ್ಣವಾದದ್ದು. ಸಾವಿರಾರು ಹೆಂಗಸರು ಸಾಮೂಹಿಕವಾಗಿ ದೈವಾವೇಶಕ್ಕೆ ಒಳಗಾಗುವ ಮತ್ತು ಇಡೀ ರಾತ್ರಿ ಕುಣಿದು, ತನ್ನ ಮನದಾಳದ ಎಲ್ಲ ದುಗುಡವನ್ನು ಹೊರಚೆಲ್ಲುವ ರಾತ್ರಿ ಅದು. ದಕ್ಷಿಣ ಭಾರತದಲ್ಲೇನು ಬಹುಶಃ ಇಡೀ ದೇಶದಲ್ಲಿ ಈ ರೀತಿ ಆಚರಣೆ ಇರಲಾರದು. ಬಹುತೇಕ ಕೆಳವರ್ಗದ ಜನ ಮತ್ತು ಬುಡಕಟ್ಟು ವರ್ಗ ಮಾತ್ರ ಆಚರಿಸುವ ಈ ಸಿರಿ ದಕ್ಷಿಣ ಕನ್ನಡದ ಕೆಲವೆಡೆ ಈಗಲೂ ಆಚರಣೆಯಲ್ಲಿರುವ ಅಳಿಯ ಸಂತಾನದ ಮೂಲದ ಮಾತೃಪ್ರಧಾನ ಕುಟುಂಬದ ಹಿನ್ನೆಲೆಯುಳ್ಳದ್ದು. ಈ ಆಚರಣೆ ಅರ್ಥವಾಗಬೇಕಾದರೆ ಒಂದು ಕಥೆ ಹೇಳಲೇಬೇಕಾಗುತ್ತದೆ.

PDF created with pdfFactory Pro trial version www.pdffactory.com

"ತಮಿಳುನಾಡಿನ ಉತ್ತರ ಭಾಗಕ್ಕೆ ಸೇರಿದ ಲಂಕೆಲೋಕನಾಡಿನ ಸತ್ಯನಾಥಪುರದಲ್ಲಿ ಬೆರ್ಮ ಆಳ್ವ ಎಂಬ ವಯೋವೃದ್ಧನು ವಿಶಾಲವಾದ ಕೃಷಿ ಯೋಗ್ಯ ಜಮೀನು ಹಾಗೂ ಅನೇಕ ಒಕ್ಕಲುಗಳನ್ನು ಹೊಂದಿದ್ದನು. ಶ್ರೀಮಂತನಾಗಿದ್ದರೂ ಅವನಿಗೆ ಸಂತಾನ ಭಾಗ್ಯವಿರಲಿಲ್ಲ. ಮುಂದೆ ನಿಂತು ಬೆಂಬಲಿಸುವ ಗಂಡು ಸಂತಾನವಿಲ್ಲ. ಹಿಂದೆ ನಿಂತು ಬೆಂಬಲಿಸುವ ಹೆಣ್ಣು ಸಂತಾನವಿಲ್ಲ. ಪಕ್ಕದಲ್ಲಿ ನಿಲ್ಲಬಲ್ಲ ಅಳಿಯಂದಿರಿಲ್ಲ, ಕಾಲ ಕೆಳಗೆ ಓಡಾಡಿಕೊಂಡಿರುವ ಮೊಮ್ಮಕ್ಕಳಿಲ್ಲ. ಹೀಗೆ ತನ್ನ ದುಸ್ಥಿತಿಯನ್ನು ಕುರಿತು ಹಲುಬುತ್ತಾ ತನಗೆ ಮಕ್ಕಳಾದರೆ ತನ್ನ ಸಂಪತ್ತನ್ನೆಲ್ಲಾ ದಾನಧರ್ಮಗಳಿಗೆ ವಿನಿಯೋಗಿಸುವುದಾಗಿ ಹರಕೆ ಹೊರುತ್ತಾನೆ. ಒಂದು ದಿನ ಬ್ರಹ್ಮದೇವನು ಅವನ ಮನೆಯ ಬಾಗಿಲಿಗೆ ಬೇಡುವವನ ರೂಪದಲ್ಲಿ ಬರುತ್ತಾನೆ ಅವನ ನಿಜ ಸ್ವರೂಪವನ್ನು ತಿಳಿದ ಬೆರ್ಮ ಆಳ್ವನು ತನ್ನ ಮನೆ ಕೆಲಸದಾಕೆಯಲ್ಲಿ ಭಿಕ್ಷೆ ನೀಡುವಂತೆ ಆಜ್ಞಾಪಿಸುತ್ತಾನೆ. ಕೆಲಸದಾಕೆಯ ಕೈಯಿಂದ ಭಿಕ್ಷೆಯನ್ನು ನಿರಾಕರಿಸಿದ ಅವನು ಯಜಮಾನನೇ ಖುದ್ದಾಗಿ ಬಂದು ನೀಡಬೇಕೆಂದು ಒತ್ತಾಯಿಸುತ್ತಾನೆ. ಬೆರ್ಮ ಆಳ್ವನು ಬಂದಾಗ ಅವನು ಖಿನ್ನವಾಗಿರುವುದರ ಕಾರಣ ಕೇಳುತ್ತಾನೆ. ಬೆರ್ಮ ಆಳ್ವನು ತನ್ನ ವ್ಯಥೆಯ ಕಾರಣವನ್ನು ಮುಂದಿರಿಸಿದಾಗ ತಿರುಕ ರೂಪಿಯಾದ ಬ್ರಹ್ಮನು "ಮೂಲ ಸ್ಥಾನವನ್ನು ಮರೆತು ಕುಲದೈವಗಳ ಗುಡಿಗಳನ್ನು ಪಾಳಬೀಳುವಂತೆ ಮಾಡಿ ಬಾಂಧವರ ಬೇಡಿಕೆಗಳನ್ನು ಪೂರೈಸದಿರುವ ಕಾರಣ ಕುಲದೈವಗಳು ಸಂತಾನ ಫಲವನ್ನು ನೀಡಿಲ್ಲ." ಎಂಬುದಾಗಿ ತಿಳಿಸಿದ. ಸಮಸ್ಯೆಯ ಪರಿಹಾರಕ್ಕಾಗಿ ಕುಟುಂಬದ ಮೂಲಸ್ಥಾನ ಹಾಗೂ ಗುಡಿಗಳ ಜೀರ್ಣೋದ್ಧಾರ ಮಾಡುವಂತೆ ಬೆರ್ಮ ಆಳ್ವನಿಗೆ ಸೂಚಿಸಿದ.

ಬೆರ್ಮ ಆಳ್ವ ಅಪಾರ ಸಂಖ್ಯೆಯ ತನ್ನ ಒಕ್ಕಲು ಪರಿವಾರವನ್ನು ಕೂಡಿಕೊಂಡು ಲಂಕೆಲೋಕನಾಡಿಗೆ ಬಂದು ಹಾಳುಬಿದ್ದ ತನ್ನ ಕುಟುಂಬದ ದೈವಗಳ ಗುಡಿಗಳನ್ನು ನವೀಕರಿಸಿದ. ತನ್ನ ಕುಲ ದೈವವಾದ ಬೆರ್ಮರ್ ಮತ್ತು ಇತರ ದೈವಗಳಿಗೆ ಶ್ರದ್ಧಾ ಭಕ್ತಿಗಳಿಂದ ಉತ್ಸವಾಚರಣೆಗಳನ್ನು ನಡೆಸಿದ. ಬೆರ್ಮರಿಗೆ ಅಡಿಕೆ ಮರದ ಹೂಗೊಂಚಲನ್ನು ಸಮರ್ಪಿಸಿ ತನ್ನ ಈವರೆಗಿನ ಮರೆವನ್ನು ಮನ್ನಿಸಬೇಕಾಗಿ ಬೇಡಿಕೊಂಡ. ಅಷ್ಟರಲ್ಲಿ ಆ ಬಂಗಾರದ ಹಾಳೆ ಬಿಚ್ಚಿಕೊಂಡು ಅದರಲ್ಲಿ ಹೆಣ್ಣು ಶಿಶುವೊಂದು ಕಾಣಿಸಿಕೊಂಡಿತು. ಸಂತೋಷ ಹಾಗೂ ಸತ್ಯದ ಪ್ರತೀಕವಾಗಿ ಜನಿಸಿದ ಆ ಮಗುವಿಗೆ 'ಸಿರಿ' ಎಂಬುದಾಗಿ ನಾಮಕರಣ ಮಾಡಿದ.

ಲೋಕಸಾಮಾನ್ಯ ಬೆಳವಣಿಗೆಯನ್ನು ಮೀರಿ ಅತಿಶಯತೆಯನ್ನು ಮೆರೆದ ಸಿರಿಗೆ ಐದು ವರ್ಷವಾಗುತ್ತಲೇ ಮದುವೆಗೆ ಏರ್ಪಾಡು ನಡೆಸತೊಡಗಿದರು. ಕಡೆಯಂಗಡಿಯ ಕಾಂತ ಆಳ್ವನಿಗೆ ಭರ್ಮ ಆಳ್ವನು ಸಾಕಷ್ಟು ಭೂಮಿ ಕಾಣಿ

ನಗನಾಣ್ಯಗಳ ಕೊಡುಗೆಯೊಂದಿಗೆ ಸಿರಿಯನ್ನು ಮದುವೆ ಮಾಡಿಕೊಟ್ಟನು. ಆದರೆ ಕಾಂತ ಆಳ್ವನು ಈ ಹಿಂದೆಯೇ ವೇಶ್ಯೆಯೊಬ್ಬಳ ಸಂಪರ್ಕ ಇರಿಸಿಕೊಂಡಿದ್ದನು. ಸಾಧ್ವಿಯಾದ ಸಿರಿಯ ಸಹಜಸೌಂದರ್ಯ ಹಾಗೂ ಸತಿತ್ವಗಳು ವೇಶ್ಯೆಯಲ್ಲಿ ನೆಟ್ಟ ಕಾಂತ ಆಳ್ವನ ಮನಸ್ಸನ್ನು ಹಿಂದೆಗೆಸುವಲ್ಲಿ ವಿಫಲವಾದವು. ಆತ ಸಿರಿಯ ಸಕಲ ಸಂಪತ್ತನ್ನು ಆ ವೇಶ್ಯೆಗಾಗಿ ಪೋಲು ಮಾಡಿದ. ಸಿರಿಯು ಗರ್ಭವತಿಯಾದಾಗ ಆಕೆಯನ್ನು ಮೊದಲ ಹೆರಿಗೆಗಾಗಿ ತವರು ಮನೆಗೆ ಕಳುಹಿಸಿಕೊಡುವ ಸಂದರ್ಭದಲ್ಲಿ ಗೌರವಿಸಿ ಆಚರಿಸಬೇಕಾದ ಸೀಮಂತವನ್ನು ಆತ ಏರ್ಪಡಿಸಲಿಲ್ಲ. ಎಂಟನೇ ತಿಂಗಳಿಗೆ ಸಿರಿ ತವರಿಗೆ ಬಾರದೆ ಹೋದಾಗ ಬೆರ್ಮ ಆಳ್ವನೇ ಬಂದು ವಿಚಾರಿಸುತ್ತಾನೆ. ಸೀಮಂತವನ್ನು ನಡೆಸುವಂತೆ ಕಾಂತ ಆಳ್ವನನ್ನು ಒತ್ತಾಯಿಸಿ, ಸಿರಿಯ ಸೀಮಂತದ ಸೀರೆಯ ಬೆಲೆಯನ್ನು ತಾನೇ ನೀಡುತ್ತಾನೆ. ಕಾಂತ ಆಳ್ವನು ಒಂದು ಹೊಸ ಸೀರೆಯನ್ನು ಕೊಂಡುಕೊಂಡು ಅದನ್ನು ತನ್ನ ಸೂಳೆಗೆ ನೀಡಿ ಅವಳ ಒಂದು ಕಡು ಬಣ್ಣದ ಸೀರೆಯನ್ನು ಸಿರಿಗೆ ಉಡುಗೊರೆಯಾಗಿ ತರುತ್ತಾನೆ. ಗಂಡನ ತಾತ್ಸಾರ ಹಾಗೂ ಅವಜ್ಞೆಯಿಂದ ಅವಮಾನಿತಳಾದ ಸಿರಿ ಒಬ್ಬಂಟಿಯಾಗಿ ತವರಿಗೆ ಬರುತ್ತಾಳೆ. ತನ್ನಲ್ಲಿ ಹುಟ್ಟಿದ ಗಂಡು ಮಗುವಿಗೆ 'ಕುಮಾರ' ಎಂಬುದಾಗಿ ಹೆಸರಿಡುತ್ತಾಳೆ. ಹೆತ್ತ ಮಗುವನ್ನು ಕಂಡು ತನ್ನ ಮಗುವೆಂದು ಮಾನ್ಯ ಮಾಡಲು ಅದರ ತಂದೆ ಬಾರದೆ ಹೋದಾಗ ಕುಪಿತಳಾದ ಸಿರಿ 'ತನ್ನ ಗಂಡನ ಭೂಮಿ ಬಂಜರು ಬೀಳಲಿ, ಕುಟುಂಬ ನಿಸ್ಸಂತತಿಯಾಗಲಿ' ಎಂದು ಶಪಿಸುತ್ತಾಳೆ.

ಬೆರ್ಮ ಆಳ್ವನು ಮಗುವಿನ ಮುಖ ನೋಡಿದಲ್ಲಿ ಅವನು ಒಡನೆಯೇ ಸಾಯುತ್ತಾನೆ. ತಂದೆ ಮನೋರೋಗಿಯಾಗುತ್ತಾನೆ. ತಾಯಿಗೆ ದೂರದ ಊರುಗಳಲ್ಲಿ ಭಿಕ್ಷೆ ಬೇಡುವ ದುಸ್ಥಿತಿ ಬರುತ್ತದೆ! ಎಂಬುದಾಗಿ ಜೋಯಿಸರೊಬ್ಬರು ಮಗು ಹುಟ್ಟಿದ ಸಂದರ್ಭದಲ್ಲಿ ನುಡಿಯುತ್ತಾರೆ. ಒಂದು ದಿನ ಕುಮಾರನನ್ನು ಮೀಯಿಸುತ್ತಿದ್ದ ಸಿರಿ, ತುಂಡು ಬಟ್ಟೆಗಾಗಿ ಆ ಕೋಣೆಯಿಂದ ಹೊರಬರುತ್ತಾಳೆ. ಮಗು ಕುಮಾರನೊಬ್ಬನೇ ಇದ್ದ ಬಚ್ಚಲಿನ ಬಾಗಿಲ ಬಳಿ ಹಾದುಹೋಗುತ್ತಿದ್ದ ಬೆರ್ಮ ಆಳ್ವನಿಗೆ ಅಳುತ್ತಿದ್ದ ಮಗುವಿನ ದನಿ ಕೇಳಿಸುತ್ತದೆ. ಸಹಜ ಸೆಳೆತದಿಂದ ಕೋಣೆ ಒಳಗೆ ಹೋದ ಅಜ್ಜ ಮಗುವನ್ನು ಎತ್ತಿಕೊಂಡು ಪ್ರೀತಿಯಿಂದ ಎದೆಗೆ ಒತ್ತಿಕೊಳ್ಳುತ್ತಾನೆ. ಸಿರಿ ಹೊರ ಬಂದಾಗ ನೋಡುತ್ತಾಳೆ ದುಃಖದ ಆವೇಗದಲ್ಲಿ ಸಿರಿ ಮಗುವನ್ನು ಎತ್ತಿಕೊಂಡು ಗೊತ್ತು ಗುರಿಯಿಲ್ಲದೆ ಅಲೆಯ ತೊಡಗುತ್ತಾಳೆ. ಸಿರಿ ಈಗಾಗಲೇ ಗಂಡನೊಂದಿಗೆ ವಿಚ್ಛೇದನ ಮಾಡಿಕೊಂಡಿದ್ದಾಳೆ. ತನ್ನ ಬದುಕಿನ ಏಕೈಕ ಬಂಧು ಅಜ್ಜನನ್ನು ಕಳೆದುಕೊಂಡಿದ್ದಾಳೆ. ಬದುಕು ಭಾಗ್ಯಗಳೆಲ್ಲವನ್ನು ಆಕೆಯ ಗಂಡನ ವೇಶ್ಯೆ ಪೋಲು ಮಾಡಿದ್ದಾಳೆ.

PDF created with pdfFactory Pro trial version www.pdffactory.com

ಸಿರಿ ತೆಂಕನಾಡಿನತ್ತ ಸಾಗುತ್ತಿರಲು ಇಬ್ಬರು ಕ್ಷತ್ರಿಯ ವೀರರು ಆಕೆಗೆ ಎದುರಾಗುತ್ತಾರೆ. ಮೊದಲಿಗೆ ಅವರಿಬ್ಬರೂ ಈಕೆಯನ್ನು ಬಯಸಿದರೂ ಆಕೆ ಸಾಧ್ವಿ ಹೆಣ್ಣು ಎಂದು ಗುರುತಿಸಿಕೊಳ್ಳುತ್ತಾರೆ. ಆಕೆ ಅವರಿಬ್ಬರ ನೆರವನ್ನು ಯಾಚಿಸಿ ತನ್ನನ್ನು ಸಹೋದರಿಯಾಗಿ ಕಾಣಬೇಕೆಂದು ಭಿನ್ನವಿಸಿಕೊಳ್ಳುತ್ತಾಳೆ. "ನೀವು ನನಗಿಂತ ಹಿರಿಯರಾಗಿದ್ದರೆ ತಂಗಿ ಎಂದು ಕರೆಯಿರಿ. ನನಗಿಂತ ಕಿರಿಯರಾಗಿದ್ದರೆ ಅಕ್ಕ ಎಂದು ಕರೆಯಿರಿ" ಎನ್ನುತ್ತಾಳೆ. ಅವಳು ಕೊಟ್ರಪಾಡಿಯ ಕೊಡ್ಸರಾಳ್ವರನಲ್ಲಿಗೆ ಆಕೆಯನ್ನು ಕರೆತಂದು ಮದುವೆ ಯಾಗುವಂತೆ ಒತ್ತಾಯಿಸುತ್ತಾರೆ. 'ಕೈಪತ್ತಾವುನಿ' ಎಂಬ ವಿಧಿ ಪ್ರಕಾರ ಮದುವೆ ಯಾಗುವುದರಿಂದ ಆ ಹಿಂದೆ ಮದುವೆಯಾಗಿದ್ದರೂ ದೋಷ ತಟ್ಟುವುದಿಲ್ಲ ಎಂಬುದಾಗಿ ಕೊಂಡ್ಸರಾಳ್ವ ಸಮಾಧಾನ ಹೇಳುತ್ತಾನೆ. ವರದಕ್ಷಿಣೆ, ಬ್ರಾಹ್ಮಣ ಊಟೋಪಚಾರ, ಬಂಧುವರ್ಗದವರ ಅನುಮತಿ ಯಾವುದೂ ಈ ತರದ ಮದುವೆಗೆ ಬೇಕಿಲ್ಲ.

ಕೊಂಡ್ಸರಾಳ್ವನಿಗೆ ಆ ಹಿಂದೆಯೇ ಮದುವೆಯಾಗಿತ್ತು. ಕೈ ಹಿಡಿದ ಹೆಂಡತಿಗೆ ಗಂಡನ ಮದುವೆಯ ಇರಾದೆ ತಿಳಿದೊಡನೆ ತಾವು ಹೊತ್ತಿಸಿಬಿಟ್ಟ ದೀಪವನ್ನು ಹೊಸದಾಗಿ ಮನೆ ಸೇರುವ ಹೆಣ್ಣು ಸಿರಿ ಕಂಡೊಡನೆ ಅವಳ ಕಣ್ಣು ಕುರುಡಾಗಲೀ ಎಂದು ಶಾಪವೀಯುತ್ತಾಳೆ. ಕೊಂಡ್ಸರಾಳ್ವನಿಗೆ ಮದುವೆಯಾದ ಸಂಗತಿ ಹಾಗೂ ಇದೀಗ ಮರುಮದುವೆಯಿಂದ ಮೊದಲ ಹೆಂಡತಿಯ ಮನಸ್ಸು ಕುಪಿತಗೊಳ್ಳ ಬಹುದಾದನ್ನು ಸಿರಿ ತನ್ನ ಅಂತರದೃಷ್ಟಿಯಿಂದ ಅರಿತುಕೊಳ್ಳುತ್ತಾಳೆ. ಕೈ ಹಿಡಿದ ಹೆಂಡತಿ ಈ ಮರುಮದುವೆಗೆ ಸಮ್ಮತಿ ಸೂಚಿಸಿ ತನ್ನನ್ನು ಮನೆಯೊಳಗೆ ಹಿಡಿದು ಕರೆದುಕೊಂಡು ಬಾರದೆ ತಾನು ಬರಲಾರೆನೆಂದು ಸಿರಿ ಕೊಂಡ್ಸರಾಳ್ವನಿಗೆ ಹೇಳುತ್ತಾಳೆ. ಸಿರಿಯ ಪ್ರಾಮಾಣಿಕತೆ ಹಾಗೂ ರುಜುಬುದ್ಧಿ ಜೊತೆಗೆ ಅವಳ ದಯನೀಯ ಸ್ಥಿತಿಯನ್ನು ಕಂಡ ಮೊದಲ ಹೆಂಡತಿ ಸಿರಿಯನ್ನು ಮನೆಗೆ ಸ್ವಾಗತಿಸಿ ತನ್ನ ಸವತಿಯಾಗಿ ಸ್ವೀಕರಿಸುತ್ತಾಳೆ.

ಕೊಂಡ್ಸರಾಳ್ವನ ಮನೆಯಲ್ಲಿ ಸಿರಿ ಎರಡನೇ ಬಸುರಿಯಾಗುತ್ತಾಳೆ. ಹೆರಿಗೆಯ ಕಾಲಕ್ಕಿಂತ ಸ್ವಲ್ಪ ಮೊದಲು ಆಕೆ ಕಾಡಿನ ಪಕ್ಕದಲ್ಲಿರುವ ಒಂದು ಅಡಿಕೆ ಮರದ ತೋಟದೆಡೆಗೆ ಹೋಗಿ ಅಲ್ಲಿ ವೀಳೆದೆಲೆಯ ಹಾಸಿಗೆ ರಚಿಸುತ್ತಾಳೆ. ಮುಸ್ಸಂಜೆಯ ಹೊತ್ತಿಗೆ ಸಿರಿ ಅಲ್ಲಿ ಹೆಣ್ಣು ಮಗುವೊಂದಕ್ಕೆ ಜನ್ಮ ವೀಯುತ್ತಾಳೆ. ಆ ಮಗುವಿಗೆ 'ಸೊನ್ನೆ' ಎಂದು ಹೆಸರಿಡುತ್ತಾಳೆ. ಸಿರಿ ತಾನೇ ತನ್ನ ಹೆರಿಗೆಯ ಮಾಸನ್ನು ಮಣ್ಣಿನೊಳಕ್ಕೆ ಹುಗಿದಿರಿಸುತ್ತಾಳೆ. ಆದರೆ ರಾತ್ರಿ ಹೊತ್ತು ನರಿಗಳು ಮಣ್ಣನ್ನು ಕೆದಕಿ ಅದನ್ನು ಹೊರಗೆಳೆದು ತಿನ್ನುತ್ತವೆ. ಇನ್ನು ಮುಂದಕ್ಕೆ ನರಿಗಳು ಆ ಪ್ರದೇಶದ ಸಮೀಪಕ್ಕೆ ಹೋಗದಂತೆ ಶಪಿಸುತ್ತಾಳೆ. ಮುಂಜಾವದಲ್ಲಿ ಆಕೆ ಆ ಪ್ರದೇಶದಲ್ಲಿ ಭತ್ತ, ತೆಂಗು,

ಧಾನ್ಯ, ವೀಳೆಯದೆಲೆಗಳು ಸಮೃದ್ಧವಾಗಿ ಬೆಳೆಯಲಿ ಎಂದು ಹರಸುತ್ತಾಳೆ. ಅನಂತರ ಸಿರಿ ಅದೃಶ್ಯಳಾದರೂ ಆಕೆ ದೈವವಾಗಿ ಆ ಪ್ರದೇಶವನ್ನು ಸಂರಕ್ಷಿಸುತ್ತಾಳೆ ಎಂದು ನಂಬಲಾಗುತ್ತದೆ.

ಚಂದ್ರಯ್ಯ ಹೆಗ್ಗಡೆಯ ಮನೆಯಲ್ಲಿ ಸೊನ್ನೆ ಬೆಳೆದು ಮುಂದೆ ಉರ್ಕಿತೋಟದ ಗುರುಮಾರ್ಲನೊಂದಿಗೆ ಮದುವೆಯಾಗುತ್ತಾಳೆ. ತಮಗೆ ಮಕ್ಕಳಾದರೆ ಬ್ರಹ್ಮನಿಗೆ ದೊಡ್ಡ ಹರಕೆ ಮಾಡುವುದಾಗಿ ದಂಪತಿಗಳು ಮನಸ್ಸಿನಲ್ಲಿ ಸಂಕಲ್ಪಿಸಿಕೊಳ್ಳುತ್ತಾರೆ. ಸೊನ್ನೆ ಬೇಗನೇ ಬಸುರಿಯಾಗಿ 'ಅಬ್ಬಗದಾಗರ' ಎಂಬ ಅವಳಿ ಮಕ್ಕಳ ತಾಯಿಯಾಗುತ್ತಾಳೆ. ಕೌಟುಂಬಿಕ ಸುಖ–ಸಂತೋಷದ ಸಾಗರದಲ್ಲಿ ಅವರು ಬೆರ್ಮನಿಗೆ ಹೇಳಿಕೊಂಡ ಹರಕೆಯನ್ನು ಮರೆಯುತ್ತಾರೆ. ಸೊನ್ನೆ ಹಾಗೂ ಗುರುಮಾರ್ಲರಿಗೆ ಬೆರ್ಮ ಭವಿಷ್ಯ ನುಡಿಯುವವನ ರೂಪದಲ್ಲಿ ಕಾಣಿಸಿಕೊಳ್ಳುತ್ತಾನೆ. "ಆಡಿದ ಹರಕೆಯನ್ನು ಮರೆತುದಾದರೆ ಮುಂದೆ ತೀವ್ರ ವ್ಯಥೆಯನ್ನು ಅನುಭವಿಸಬೇಕಾಗಿ ಬರಬಹುದು. ಪರಮಾತ್ಮ ನೀಡಿದುದನ್ನು ಹಿಂದಕ್ಕೆ ಪಡೆಯುವ ಸಾಧ್ಯತೆಯೂ ಇದೆ. ಪರಸ್ಪರ ಜಗಳವೇ ಮಕ್ಕಳ ಪತನಕ್ಕೆ ಹೇತುವಾಗಬಹುದು" ಎನ್ನುತ್ತಾನೆ. ಈ ಮಾತುಗಳಿಂದ ಸಿಟ್ಟುಗೊಂಡ ಗುರುಮಾರ್ಲ ಭವಿಷ್ಯ ನುಡಿದವನನ್ನು ಅಬ್ಬರಿಸಿ ಹೊರಟು ಹೋಗುವಂತೆ ಸೂಚಿಸುತ್ತಾನೆ.

ಸೊನ್ನೆ ಹಾಗೂ ಗುರುಮಾರ್ಲನು ಒಂದು ದಿನ ತಮ್ಮ ಅವಳಿ ಮಕ್ಕಳಿಗೆ ಜಗಳವಾಡದಿರಿ ಎಂದು ಎಚ್ಚರಿಸಿ ಮನೆಯಿಂದ ಹೊರಟು ಹೋಗುತ್ತಾನೆ. ಆಟದ ಸಂದರ್ಭಗಳಲ್ಲಿ ಅನೇಕ ಬಾರಿ ಪರಸ್ಪರ ಜಗಳವಾಡುತ್ತಿರುವುದನ್ನು ಬಲ್ಲ ತಂದೆ–ತಾಯಂದಿರು ಹೆಣ್ಣು ಮಕ್ಕಳ ಪ್ರೀತಿಯ ಆಟದ ಚೆನ್ನಮಣೆಯನ್ನು ಭದ್ರವಾದ ಪೆಟ್ಟಿಗೆಯೊಳಗಿರಿಸಿ ಬೀಗ ಹಾಕಿ ಹೋಗುತ್ತಾರೆ. ಅಷ್ಟರಲ್ಲಿ ಬೆರ್ಮನು ಬ್ರಾಹ್ಮಣನ ರೂಪದಲ್ಲಿ ಬಂದು ಬೀಗದೊಳಗಿನ ಚೆನ್ನೆಮಣೆಯನ್ನು ಮಕ್ಕಳಿಗೆ ತೆಗೆದುಕೊಟ್ಟು ಆಟವಾಡುವಂತೆ ಸೂಚಿಸುತ್ತಾನೆ. ಆಟವಾಡುತ್ತಾ ಮಕ್ಕಳೊಳಗೆ ಜಗಳ ಹತ್ತಿತು. ಒಬ್ಬಳು ಮತ್ತೊಬ್ಬಳ ತಲೆಗೆ ಚೆನ್ನೆಮಣೆಯಿಂದ ಹೊಡೆಯುತ್ತಾಳೆ. ಆಕೆ ಕುಸಿದು ಬಿದ್ದು ತೀರಿಕೊಳ್ಳುತ್ತಾಳೆ. ತನ್ನ ಕೈಯಿಂದ ಘಟಿಸಿ ಹೋದ ಅತ್ಯಂತ ಹೇಯವಾದ ಕೃತ್ಯದಿಂದ ನೊಂದು ಹಾಗೂ ತಂದೆ ತಾಯಿಯರನ್ನು ಎದುರಿಸುವ ಭಯದಿಂದ ತತ್ತರಿಸಿ ಇನ್ನೊಬ್ಬ ಹೆಣ್ಣು ಮಗಳು ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ತಂದೆ ತಾಯಂದಿರು ಮರಳಿದಾಗ ಆ ಬ್ರಾಹ್ಮಣನು ದೇವರಿಗೆ ಹೇಳಿಕೊಂಡ ಹರಕೆಯನ್ನು ಮರೆತ ಫಲವಾಗಿ ಅವನು ನೀಡಿದುದನ್ನು ಮತ್ತೆ ಹಿಂದಕ್ಕೆ ಸೆಳೆದುಕೊಂಡುದಾಗಿ ಹೇಳುತ್ತಾನೆ".[೧೨]

PDF created with pdfFactory Pro trial version www.pdffactory.com

ಈ ಕಥೆಯ ಹಿನ್ನೆಲೆಯಲ್ಲಿ ನಡೆಯುವ ದಕ್ಷಿಣ ಕನ್ನಡದ 'ಸಿರಿ' ಎಂಬ ಈ ವಿಶಿಷ್ಟ ಆಚರಣೆಯನ್ನು ಈಗಾಗಲೇ ವಿದ್ವಾಂಸರನೇಕರು ಅಧ್ಯಯನ ಮಾಡಿದ್ದಾರೆ. ಅವರಲ್ಲಿ ಅಮೆರಿಕಾದ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಪೀಟರ್ ಜೆ ಕ್ಲಾಸ್ ಪ್ರಮುಖರು. ಇತ್ತೀಚೆಗೆ ನಮ್ಮ ನಾಡಿನ ವಿದ್ವಾಂಸರನೇಕರು ಈ ಬಗೆಗಿನ ವೈಜ್ಞಾನಿಕ ಅಧ್ಯಯನದಲ್ಲಿ ತೊಡಗಿದ್ದಾರೆ. ಜಾತ್ರೆ ನಡೆಯುವ ಹಿರಿಯಡ್ಕದ ವೀರಭದ್ರ ದೇವಸ್ಥಾನದ ಆವರಣಕ್ಕೆ ನಾವು ಹೋದಾಗ ಗುಡಿಯ ವಿಶಾಲ ಅಂಗಳದ ತುಂಬ ಮಹಿಳೆಯರ ಗುಂಪುಗಳು. ಸಾಮಾನ್ಯವಾಗಿ ಬಿಳಿ, ಕೆಂಪು ಮತ್ತು ಅರಿಶಿನ ಬಣ್ಣದ ಉಡುಪುಗಳೇ ಹೆಚ್ಚಾಗಿದ್ದ ಮಹಿಳೆಯರು ಮುಡಿಬಿಚ್ಚಿ ಕೈಯಲ್ಲಿ ಸಿಂಗಾರ(ಅಡಿಕೆ ಹೊಂಬಾಳೆ) ಹಿಡಿದು ಯಾವುದೋ ವಿಧಿಗಾಗಿ ಕಾಯುತ್ತಾ ನಿಂತಿದ್ದರು. ಇವರಲ್ಲಿ ಹರೆಯದ ಮದುವೆಯೂ ಆಗದ ತರುಣಿಯರಿಂದ ಹಿಡಿದು ಎಪ್ಪತ್ತರ ವಯಸ್ಸಿನ ವೃದ್ಧೆಯರೂ ಇದ್ದರು. ಹರೆಯದವರ ಕಣ್ಣುಗಳಲ್ಲಿ ಒಂದು ರೀತಿಯ ಅಪರಿಚಿತ ವಾತಾವರಣದ ಬೆದರಿಕೆ ಇದ್ದರೆ, ವೃದ್ಧೆಯರು ಇದೆಲ್ಲವೂ ತುಂಬ ಸಾಮಾನ್ಯ ಎನ್ನುವಂತೆ ಲೀಲಾಜಾಲವಾಗಿದ್ದರು. ಇವರ ನಡುವೆ ಅಲ್ಲಲ್ಲಿ ಕೆಂಪುವಸ್ತ್ರ ತೊಟ್ಟ ಗಂಡಸರೂ ಇದ್ದರು. ಈಗಾಗಲೇ ಇವರೆಲ್ಲರೂ ದೇವಸ್ಥಾನದ ಆವರಣದಲ್ಲಿಯ ಕಲ್ಯಾಣಿಯಲ್ಲಿ ಸ್ನಾನ ಮಾಡಿ ಮಡಿವಸ್ತ್ರ ಧರಿಸಿ ಮೈದುಂಬಲು ಬಂದು ನಿಂತ ಸಿರಿ, ಸೊನ್ನೆ, ಅಬ್ಬಗದಾರಗರು ಎಂಬುದು ಅನಂತರ ತಿಳಿಯಿತು.

ಆಚರಣೆಯ ಮೊದಲ ಹಂತದಲ್ಲಿ ಸಿರಿಯ ಕಥೆಯನ್ನು ನಿಧಾನವಾಗಿ ನಿರೂಪಿಸುವ ತುಳು ಪಾಡ್ದನಗಳನ್ನು ಹಾಡತೊಡಗುವುದು. ಕಥೆಯನ್ನು ನಿರೂಪಿಸುತ್ತಾ ಹೋದಂತೆ ಸಿರಿಯ ಕಷ್ಟ–ಕಾರ್ಪಣ್ಯ, ಅವಳ ಗಂಡನ ಅನಾದಾರ, ಅವನ ಅಸಭ್ಯತೆ ಕೇಳುವವರ ಮನ ತುಂಬುತ್ತಾ ಹೋಗುತ್ತದೆ. ಮೈ ಅದುರ ತೊಡಗುತ್ತದೆ. ಹಾಗೇ ಇಡೀ ದೇಹ ತೂಗತೊಡಗುತ್ತದೆ. ಕ್ರಮೇಣವಾಗಿ ಆವೇಶ ಹೆಚ್ಚುತ್ತಾ ಹೋದಂತೆ ಪಾಡ್ದನ ಗೌಣವಾಗಿ ಕಿರುಚಾಟ ಹೆಚ್ಚಾಗುತ್ತದೆ. ನಾಲಗೆ ಮತ್ತು ತುಟಿಯ ನಡುವೆ ಟಿಸ್ ಟಿಸ್... ಶಬ್ದದೊಡನೆ ಏಕಾಏಕಿ ಕೂಗಿಕೊಳ್ಳುವ ಕುಣಿಯುವ ಅವಸ್ಥೆಗೆ ತಲುಪುತ್ತಿದ್ದಂತೆ ಇನ್ನೇನು ಬೀಳುವ ಸ್ಥಿತಿಗೆ ಬಂದ ಮಹಿಳೆಯರನ್ನು ಸಂಬಂಧಿಕರು ಅಥವಾ ಬೆಂಗಾವಲಿಗೆ ಬಂದವರು ಹಿಡಿಯುತ್ತಾರೆ. ಹಿಡಿದಷ್ಟು ತಡೆದಷ್ಟು ಆವೇಶ ಹೆಚ್ಚುತ್ತದೆ. ದೈವಾವೇಶಕ್ಕೆ ಒಳಗಾದವರು ಹೊಸಬರಾದರೆ, ವೃದ್ಧೆಯರು ಅಥವಾ ಗುಂಪಿನ ನಡುವೆ ಅಲ್ಲಲ್ಲಿ ಕಂಡುಬರುವ ಕೆಂಪುವಸ್ತ್ರದ ಗಂಡಸರು ಅಥವಾ 'ಕುಮಾರ'ರು ಸಿರಿಯ ಮೊದಲ ಗಂಡನ ಮಗ) ಹೊಸಬಳನ್ನು ಪ್ರಶ್ನಿಸುತ್ತಾಳೆ ಯಾರು ನೀನು? ಸಿರಿಯೋ, ಸೊನ್ನೆಯೋ; ಅಬಗ್ಗವೋ, ದಾರಗವೋ? ಹೇಳು ಎಂದು ಒತ್ತಾಯಿಸುತ್ತಾರೆ. ಬಡಪೆಟ್ಟಿಗೆ ಹೇಳದಿದ್ದರೆ ಬೆದರಿಸಿ ಕೇಳುತ್ತಾರೆ. ಅವಳು

ಯಾವುದಾದರೊಂದು ಹೆಸರೇಳುತ್ತಾಳೆ. ಅಲ್ಲಿಗೆ ಇವಳು ಇಂಥವಳೇ ಎಂದು ನಿರ್ದಿಷ್ಟಪಡಿಸಲಾಗುತ್ತದೆ. ಮುಂದಿನ ವರ್ಷದಿಂದ ಖಾಯಂ ಆಗಿ ಬರುವಂತೆ ಪ್ರಯಾಣ ಮಾಡಲಾಗುತ್ತದೆ. ಆವೇಶ ಬಂದು ಕೂಗಿ ಬಾಗಿ ಸುಸ್ತಾಗಿ ಕೆಲವರು ಹಾಗೇ ನೆಲಕ್ಕೆ ಒರಗುತ್ತಾರೆ. ಮತ್ತೆ ಸಿರಿ ಐತಿಹ್ಯದ ಪಾಡ್ದನವನ್ನು ಹಾಡಲಾಗುತ್ತದೆ. ಹಾಡುತ್ತಾ ಹೋದಂತೆ ಬಸವಳಿದು ಬಿದ್ದ ಹೆಣ್ಣು ಮತ್ತೆ ಜೀವ ತುಂಬಿಕೊಳ್ಳ ತೊಡಗುತ್ತಾಳೆ. ಮತ್ತೆ ಅದೇ ರೀತಿಯ ಆವೇಶಕ್ಕೆ ಒಳಗಾಗುತ್ತಾಳೆ. ಕೈಯಲ್ಲಿರುವ ಹಿಂಗಾರದ ಅಕ್ಕಿ ಉದುರುವವರೆಗೆ ದೇಹವನ್ನು ನುಲಿಯುತ್ತಾಳೆ. ವಿಕಾರವಾಗಿ, ಆದರೆ ಅದರಲ್ಲಿಯೂ ಲಯಬದ್ಧವಾಗಿ ಕಿರುಚುತ್ತಾ ತನ್ನ ಆಚರಣೆಯನ್ನು ಮುಂದುವರೆಸುತ್ತಾಳೆ.

ಈ ತೆರನಾದ ಆವೇಶಭರಿತ ಅಸ್ಪಷ್ಟ ನರ್ತನ ದೇವಸ್ಥಾನದ ಆವರಣದಲ್ಲಿ ಇಡೀ ರಾತ್ರಿ ನಡೆಯುತ್ತದೆ. ಸಾವಿರಾರು ಹೆಂಗಸರು ಅದೇ ದೈವತ್ವದ ನಿಶೆಯಲ್ಲಿ ಒರಳುತ್ತಾರೆ. ಇದೇನಿದು? ಯಾವ ಪಾಪಕ್ಕಾಗಿ ಅನ್ನಿಸುವ ಮಟ್ಟಿಗೆ ಅವರ ಬಗೆಗೆ ಕನಿಕರ ಮೂಡುತ್ತದೆ. ಇಂಥ ಸಂಪ್ರದಾಯಗಳು ಇನ್ನೂ ಈ ದೇಶದಲ್ಲಿ ಇವೆಯಲ್ಲಾ ಅನ್ನಿಸಿ ಮನಸ್ಸು ಮುದುಡುತ್ತದೆ. ಆದರೂ ಈ ಆಚರಣೆಯ ಹಿಂದಿನ ಕ್ರೂರ ಸತ್ಯ ನಮ್ಮನ್ನು ಕಲಕುತ್ತದೆ. ಪುರುಷಪ್ರಧಾನ ಸಮಾಜದಲ್ಲಿನ ಹೆಣ್ಣಿನ ಗೋಳಿನ ಪ್ರಕಟಣೆಗೆ ಈ ಆಚರಣೆ ಮಾಧ್ಯಮವಾಗಿದೆ ಎಂಬ ಕಟುಸತ್ಯದ ಅರಿವಾದಾಗ ಈ ಆಚರಣೆ ಕೇವಲ ಮೂಢನಂಬಿಕೆಯಾಗಿರದೆ ಸಾಮಾಜಿಕ ವ್ಯವಸ್ಥೆಯೊಂದರ ಪ್ರತೀಕವಾಗಿದೆ ಅನ್ನಿಸದೆ ಇರದು.

ಮೇಲಿನ ಕಥೆಯನ್ನೇ ನೋಡಿ. ತನ್ನ ತಂದೆಯ ಪ್ರೀತಿಯ ಪುತ್ತಳಿಯಾದ 'ಸಿರಿ' ಸಿರಿವಂತನಾದ ಗಂಡನನ್ನು ಕೂಡಿ ಸುಖದಿಂದ ಇರಲಾಗದೆ ಎಲ್ಲರ ಪ್ರೇಮದಿಂದ ವಂಚಿತಳಾದಳು. ಎರಡನೇ ಗಂಡನ ಮನೆಯಲ್ಲಿಯೂ ತನ್ನ ಹೆರಿಗೆಯನ್ನು ತಾನೇ ಮಾಡಿಕೊಳ್ಳಬೇಕಾದ ಪ್ರಸಂಗ ಬರುತ್ತದೆ. ಅನಂತರ 'ಸಿರಿ'ಯ ಮಗಳಾದ ಸೊನ್ನೆ ಕೂಡ ಯಾವುದೋ ಮನೆಯಲ್ಲಿ ಬೆಳೆಯಬೇಕಾಗುತ್ತದೆ. ಈ ಎಲ್ಲಾ ಅಂಶಗಳು ಹೆಣ್ಣಿನದ ಹೃದಯವನ್ನು ಕಲಕುತ್ತವೆ. ಸಿರಿಯ ಹರಕೆ ಹೊತ್ತು ಬಂದ ಸಾವಿರಾರು ಹೆಂಗಸರಲ್ಲಿ ಬಹುಪಾಲು ಜನರ ಜೀವನವೂ ಇದೇ ಆಗಿರುತ್ತದೆ ಅಥವಾ ಗಂಡನಿದ್ದು ಪರಕೀಯ ಬಾಳು ಬಾಳುತ್ತಿರುತ್ತಾರೆ. ಸಿರಿ ಬೇರಾರೂ ಅಲ್ಲದೆ ತನ್ನವಳೇ ಆಗುತ್ತಾಳೆ. ಹಾಗಾದಾಗ ಸಿರಿ–ಸೊನ್ನೆಯರು ತಾವೇ ಆಗಿ ಪರಸ್ಪರ ಸಂತೈಸತೊಡಗುತ್ತಾರೆ. ಎಷ್ಟು ವಿಚಿತ್ರವಾಗಿರುತ್ತದೆಂದರೆ ಎಲ್ಲಿಂದಲೋ ಯಾವ ಯಾವ ಊರಿನಿಂದಲೋ ಅಪರಿಚಿತರಾಗಿ ಬಂದವರು ತಮ್ಮ ವೈಯಕ್ತಿಕತೆಯನ್ನು ಮರೆತು ಅಕ್ಕ–ತಂಗಿಯರ ಸಂಬಂಧ ಕಲ್ಪಿಸಿಕೊಂಡು ಪರಸ್ಪರ ತಬ್ಬಿಕೊಂಡು ಗೋಳಾಡುತ್ತಾ ಕಾಂತಾ ಆಳ್ವನಂಥ

PDF created with pdfFactory Pro trial version www.pdffactory.com

ಅನಾಗರಿಕರ ವರ್ತನೆಯ ಪ್ರತಿ ಗಂಡನನ್ನು ಹೀಯಾಳಿಸತೊಡಗುತ್ತಾರೆ. ಸಿರಿ ಪಾಡ್ದನವರೆಲ್ಲರ ನಡುವಿನ ಬೆಸುಗೆಯಾಗಿ ಅವರೆಲ್ಲರನ್ನೂ ಒಂದುಮಾಡುತ್ತದೆ. ಒಬ್ಬಳು ಸಿರಿಯಾಗಿ ಮಾತಾಡಿದರೆ ಇನ್ನೊಬ್ಬಳು ಸೊನ್ನೆಯಾಗಿ ಮಾತನಾಡುತ್ತಾಳೆ. ಹೀಗೆ ಒಬ್ಬೊಬ್ಬರಲ್ಲಿ ಸಂವಾದ ಏರ್ಪಡುತ್ತದೆ.

ಸಿರಿ ಜಾತ್ರೆಯನ್ನು ನೋಡಲು ಬರುವ ಇತರರಿಗೂ ಕೊರತೆಯೇನಿಲ್ಲ. ಸಿರಿ ಮೈಮೇಲೆ ಬಂದವರಿಗೆ ಶ್ರದ್ಧೆಯಿಂದ ಕೈಮುಗಿಯುತ್ತ ಹಿಂಗಾರು ಕೈಗಿಟ್ಟು ಹಲವು ಪ್ರಶ್ನೆ ಕೇಳುತ್ತಾರೆ. ತನ್ನ ಮಗಳು ಋತುಮತಿಯಾದದ್ದು, ಗಂಡ ಸಿಗದಿದ್ದು, ಅವಳಿಗೆ ಬಂದ ಕಾಯಿಲೆ ಗುಣಪಡಿಸುವ ಬಗೆ ಮುಂತಾಗಿ ಕೆಲವರ ನೋವಾದರೆ, ಇನ್ನು ಕೆಲವರಿಗೆ ಗಂಡ ಹೊಡೆದದ್ದು, ಕೈ ಮುರಿದದ್ದು, ಇತ್ಯಾದಿಗಳನ್ನು ಸಿರಿಗೆ ಒಪ್ಪಿಸುತ್ತಾರೆ. ಪರಿಹಾರ ಬೇಡುತ್ತಾರೆ ಆಗ ದೈವಾವೇಶದ ಸಿರಿ ಪರಿಹಾರ ಹೇಳುತ್ತಾಳೆ ಅಥವಾ ಅವಳನ್ನೇ ಸಿರಿಯನ್ನಾಗಿ ಪರಿವರ್ತಿಸುತ್ತಾಳೆ.

ಕೆಳವರ್ಗದ ಭೀತಿ, ಭಯ, ನೋವು–ಸಂಕಷ್ಟಗಳನ್ನು ಹೇಳಿಕೊಳ್ಳುವುದಾದರೂ ಯಾರ ಬಳಿ? ಅದಕ್ಕೆ ಒಂದು ದಿನವಾದರೂ ಸಿರಿ ಉತ್ಸವ ನೆರವಾಗುತ್ತದೆ. ದೇವರ ಪೂಜೆಯ ಹರಕೆಯ ನೆಪದಲ್ಲಿ ನಿಟ್ಟುಸಿರು ಹೊರಹೊಮ್ಮುತ್ತದೆ. ಹಳ್ಳಿಯ ಜನ ದುಗುಡ ದುಮ್ಮಾನಗಳನ್ನು ಕಣ್ಣೀರಿನೊಂದಿಗೆ ಬೆರೆಸಿ ಅಮ್ಮ ಸಿರಿಯೇ ನಿನ್ನ ನೋವು ನನ್ನ ನೋವೂ ಹೌದು ಎಂದು ಭಾವಿಸುತ್ತಾರೆ. ಇವರಿಗೆ ಸಿರಿ ಜೊತೆಗಾತಿಯಾಗುತ್ತಾಳೆ. ಹಾಗೆಯೇ ಸಿರಿಯ ನೋವಿಗೂ ಸಾವಿರಾರು ಜೊತೆಗಾರರು ಸಿಗುತ್ತಾರೆ. ನಿಟ್ಟುಸಿರು ಇಡೀ ಉತ್ಸವದುದ್ದಕ್ಕೂ ಹೊಮ್ಮುತ್ತಲೇ ಇರುತ್ತದೆ.

ದಕ್ಷಿಣ ಕನ್ನಡದ ಬಹುತೇಕ ಕೆಳವರ್ಗಗಳ ಹಾಗೂ ಬುಡಕಟ್ಟುಗಳ ಜನರೇ ಸೇರಿ ಆಚರಿಸುವ ಈ ಆಚರಣೆ ಈ ದೇಶದ ಬಾಯಿಕಟ್ಟಿದ ಮಹಿಳೆಯರಿಗೆ ಧ್ವನಿಯಾಗಲು ಒಂದು ಅವಕಾಶ ಮಾಡಿಕೊಡುತ್ತದೆ. ಇಡೀ ವರ್ಷ ಮನೆಯಲ್ಲಿ ಅಸಹಾಯಕರಾಗಿ ಮೂಕವೇದನೆ ಅನುಭವಿಸಿದ ಅವರು ವರ್ಷದ ಒಂದು ನಿರ್ದಿಷ್ಟ ದಿನದಲ್ಲಿ ತಮ್ಮ ಅಳಲನ್ನು ತೋಡಿಕೊಳ್ಳುವ ಮೂಲಕ ಪುರುಷ ಸಮಾಜದ ಕ್ರೌರ್ಯವನ್ನು ಬಯಲಿಗೆಳೆಯುತ್ತಾರೆ.

ದಕ್ಷಿಣ ಕನ್ನಡದ ಖ್ಯಾತ ಜಾನಪದ ವಿದ್ವಾಂಸ ಡಾ.ಅಮೃತ ಸೋಮೇಶ್ವರ ಈ ಆರಾಧನೆಯ ಬಗ್ಗೆ ಹೀಗೆ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

"ಹುಣ್ಣಿಮೆ, ಅಮಾವಾಸ್ಯೆಗಳಂಥ ನಿಸರ್ಗದ ಸಂಧಿ ಸ್ಥಿತಿಗಳಿಗೂ ಮನಸ್ಸಿನ ಸ್ಥಿತ್ಯಂತರಗಳಿಗೂ ಸಂಬಂಧವಿದೆಯಷ್ಟೇ? ಅನೇಕ ಆಚರಣೆಗಳು ಈ ದಿನಗಳಿಗೆ ಸಂಬಂಧಿಸಿ ಜರುಗುವುದನ್ನು ಗಮನಿಸಬಹುದು. ಸಿರಿ ಜಾತ್ರೆಯ ವೇಳೆ ಸಿರಿಗಳಿಗೂ ಕುಮಾರನಿಗೂ ಆರಾಧನೆ ಸಲ್ಲುತ್ತದೆ(ಅಕ್ಕೆ ಸಿರಿ ಅಥವಾ ಅಕ್ಕೆರಸು ಪೊಂಜೆದಿ,

ಸೊನ್ನೆಗಿಂಡೆ, ಅಬ್ಬಗದಾರಗ ಇವರು ಸಿರಿಗಳು. ಅಕ್ಕೆ ಸಿರಿಯ ಮಗ ಕೋಟಿಪೂಂಜ ಕುಮಾರನೆಂದೇ ಪ್ರಸಿದ್ಧನಾಗಿದ್ದಾನೆ. ನೂರಾರು ಸ್ತ್ರೀಯರಿಗೆ ಸಿರಿ ಬಳಗದ ಶಕ್ತಿಗಳೂ, ಕೆಲವರು ಪುರುಷರಿಗೆ ಕುಮಾರನೂ ಮೈದುಂಬಿ ಬರುವುದು ಈ ಉತ್ಸವದ ವಿಶೇಷವಾಗಿದೆ. ಸಾಮಾನ್ಯವಾಗಿ ಒಂದು ದೈವ ಶಕ್ತಿಯು ಏಕಕಾಲದಲ್ಲಿ ಹಲವರ ಮೇಲೆ ಆವೇಶಗೊಳ್ಳುವ ಪದ್ಧತಿ ಕಡಿಮೆ.(ವಿಷ್ಣುಮೂರ್ತಿ ದೈವದ ಒತ್ತೆಕೋಲದಲ್ಲಿ ಮಾತ್ರ ಅಂಥ ವಾಡಿಕೆ ಇದೆ.).

ಸಾಮಾನ್ಯವಾಗಿ ಬ್ರಾಹ್ಮಣೇತರ ವರ್ಗದವರು ಮಾತ್ರ ಸಿರಿಬಳಗದಿಂದ ಆವೇಶಕ್ಕೆ ಒಳಗಾಗುತ್ತಾರೆ(ಆದರೆ ಮೊದಲಿಗೇ ಅಬ್ಬಗದಾರಗರು ಆವೇಶಗೊಂಡದ್ದು ನಂದಳಿಕೆ ದೇವಸ್ಥಾನದ ಬ್ರಾಹ್ಮಣ ಅರ್ಚಕರ ಹೆಂಡತಿಯ ಮೇಲೆ ಎಂಬ ಐತಿಹ್ಯವೂ ಇದೆ!). ಅಪೂರ್ವಕ್ಕೆ ಕ್ರೈಸ್ತರಿಗೂ ಮುಸ್ಲಿಮರಿಗೂ ಸಿರಿಯ 'ಸೂಕೆ' ಇರುವುದುಂಟು. ಇತರ ದೈವ ಸೇವೆಗಳಿಗೆ ಧರಿಸುವಂಥ ಯಾವುದೇ ವೇಷಭೂಷಣ ಸಿರಿ ಮತಾಚರಣೆಯಲ್ಲಿ ಇರುವುದಿಲ್ಲ.

ಆವೇಶಗೊಂಡ ಸಿರಿ ಬಳಗ ಕೈಯಲ್ಲಿ ಅಡಿಕೆಯ ಹೂವನ್ನು ಹಿಡಿದುಕೊಂಡು ಮೈಯೊಲೆಯಿಸುತ್ತ ಸಿರಿಸಂಧಿಯನ್ನು ನಿರ್ದಿಷ್ಟ ಧಾಟಿಯಲ್ಲಿ ಭಾವೋದ್ರಿಕ್ತರಾಗಿ ಹಾಡುತ್ತಾರೆ. ಆವೇಶಗೊಂಡ ಚಿಕ್ಕ ಚಿಕ್ಕ ಗುಂಪುಗಳನ್ನು ಕುಮಾರನಿಂದ ಆವೇಶಗೊಂಡ ಪಾತ್ರಿ ನಿಯಂತ್ರಿಸುತ್ತಿರುತ್ತಾರೆ. ಸಿರಿಬಳಗದೊಂದಿಗೆ ಕುಮಾರನ ಹಾಡಿನ ರೂಪದ ಸಂವಾದ ನಡೆಯುತ್ತದೆ. ಈ ಹಾಡು ಮತ್ತು ಆವೇಶ ಇಡೀ ರಾತ್ರಿ ನಡೆಯುವುದುಂಟು.

ಸಿರಿಜಾತ್ರೆಯ ಹೊರತಾಗಿಯೂ ಭಿನ್ನ ಸಂದರ್ಭಗಳಲ್ಲಿ 'ದಳಿಯ ಹಾಕುವುದು' ಎಂಬ ಕಾರ್ಯಕ್ರಮದಲ್ಲೂ ಸಿರಿಯ ಸಂಧಿ–ಹೆಚ್ಚಾಗಿ ಸಂವಾದ ರೂಪದಲ್ಲಿ ಹಾಡಲ್ಪಡುತ್ತದೆ. 'ಸಿರಿದರ್ಶನ'ದಲ್ಲಿ 'ದೈವಿಕ ಆವೇಶ'ದ ವಿಚಾರ ಏನಿದ್ದರೂ ಸುಪ್ತಮನಸ್ಸಿನ ಕೆಲವೊಂದು ಅದುಮಿಟ್ಟ ಸಂಗತಿಗಳಿಗೆ ಇಲ್ಲಿ ವ್ಯಕ್ತರೂಪ ದೊರಕಿ ಒಂದು ಬಗೆಯ ಮಾನಸಿಕ ತಾಪ ಶಮನಕ್ರಿಯೆ ಜರುಗುತ್ತದೆ ಎಂಬ ಅಂಶ ಸುಸ್ಪಷ್ಟ. ಸ್ವಚ್ಛಂದವಾಗಿ ಹಾಡಿ ಕುಣಿಯುವುದು ಆದಿಮಾನವ ಯುಗದ ಮೂಲ ಪ್ರವೃತ್ತಿ. ಈ ಸಹಜಾಪೇಕ್ಷೆ ಇಲ್ಲಿ ದೈವಿಕ ಉಪಚಾರದ ರೂಪದಲ್ಲಿ ಕಾಣಿಸಿಕೊಳ್ಳುವಂತಿದೆ. ಸಾಮಾನ್ಯ ಪರಿಸರದಲ್ಲಿ, ಕೌಟಂಬಿಕ ಜೀವನದಲ್ಲಿ ಹೀಗೆ ಹಾಡುವಂತಿಲ್ಲ; ಕುಣಿಯುವಂತಿಲ್ಲ. ತನ್ನ ಮನಸ್ಸಿನ ಅಭಿಪ್ರಾಯಗಳನ್ನು ನಿಚ್ಚಳವಾಗಿ ಪ್ರಕಟಿಸುವಂತಿಲ್ಲ. ಆದರೆ, ದೈವಾವೇಶಗೊಂಡ ವ್ಯಕ್ತಿ ಒಂದು ಬಗೆಯ ಸ್ವತಂತ್ರ. ಹಲವಾರು ಜನ ಒಟ್ಟಿಗೇ ಆವೇಶಗೊಂಡಾಗ ಮೂಲತಃ ದುರ್ಬಲ ವ್ಯಕ್ತಿತ್ವದ ಬಡಪಾಯಿಗಳಿಗೆ ಒಂದು ನೈತಿಕ ಧೈರ್ಯ ಬಂದಂತಾಗಬಹುದು. ಆವೇಶ, ವಿಚಿತ್ರವರ್ತನೆ, ಸಂಧಿಯ ಆಲಾಪನೆ ಪ್ರತಿಭಟನೆಯ ಸಂಕೇತಗಳಾಗಬಹುದು.

PDF created with pdfFactory Pro trial version www.pdffactory.com

ಸಿರಿಯ ಆವೇಶಕ್ಕೊಳಗಾದವರಲ್ಲಿ ಎಲ್ಲರೂ ಸಂಧಿ ಹಾಡುವುದಿಲ್ಲ. ಕೆಲವರು ಕೇವಲ ಲಯಬದ್ಧವಾಗಿ ಮೈಯೊಲೆಯಿಸುತ್ತಿರುತ್ತಾರೆ. ಕೆಲವರು ಕೆಲವೇ ಸೊಲ್ಲು ಹಾಡುತ್ತಾರೆ. ಕೆಲವರು ಬರೇ ನಾರಾಯಣ ನಾರಾಯಣ ಎಂದಷ್ಟೇ ಆವರ್ತಿಸುತ್ತಿರುತ್ತಾರೆ. ಅನುಭವ ಹೆಚ್ಚು ಆದಂತೆ ಸಂಧಿ ಸರಾಗವಾಗಿ ಹೊಮ್ಮುತ್ತದೆಂದು ತಿಳಿಯುತ್ತದೆ.

ಇಲ್ಲಿ ಪ್ರಕಟವಾಗುವ ಅನೇಕ ಮಾಸಿಕ ಸಮಸ್ಯೆಗಳ ಮೂಲವನ್ನು ಸಿರಿಪಾಡ್ದನದಲ್ಲಿ ಗುರುತಿಸಬಹುದಾಗಿದೆ. ಮಕ್ಕಳ ಹಂಬಲ, ಸವತಿ ಮತ್ಸರ, ಅನೈತಿಕ ಸಂಬಂಧ, ಗಂಡನಿಂದ ತಿರಸ್ಕಾರ, ಅತ್ತೆ ಸೊಸೆಯರ ಸಂಘರ್ಷ, ಅಕ್ಕ ತಂಗಿಯರ ಮೇಲಾಟ, ಒಡೆತನದ ಆಕಾಂಕ್ಷೆ–ಇತ್ಯಾದಿ ವಿಚಾರಗಳೇ ಬೇರೆ ಬೇರೆ ರೀತಿಯಲ್ಲಿ ವಿವಿಧ ಮುಖಗಳನ್ನು ಪಡೆದು ದೈವಿಕ ಮುಖವಾಡ ಧರಿಸುವ ಸಾಧ್ಯತೆ ಇದೆ. ಇಂಥ ಆವೇಶ ಪ್ರಸ್ಥಾನವನ್ನು ಮನೋವೈಜ್ಞಾನಿಕ ಪೃಥಕ್ಕರಣಕ್ಕೆ ಒಳಪಡಿಸಿದಲ್ಲಿ ಅನೇಕ ಮನೋಚೇಷ್ಟೆಗಳ ರಹಸ್ಯಗಳು ಪ್ರಕಟವಾದವು.

ಕೋಟಿ ಚೆನ್ನಯ ಸಂಧಿಯಲ್ಲಿ ಚಿತ್ರಿತವಾದ ಸಮಸ್ಯೆಗಳಿಗಿಂತ ಭಿನ್ನವೂ ಸಂಕೀರ್ಣ ಮಯವೂ ಆದ ಸಮಸ್ಯೆಗಳು ಸಿರಿ ಸಂಧಿಯಲ್ಲಿವೆ. ಮಾನವ ಸಂಬಂಧಗಳ ವಿಲಕ್ಷಣತೆಯನ್ನು, ಸೂಕ್ಷ್ಮತೆಯನ್ನು ಈ ಸಂಧಿ ಅಡಿಗಡಿಗೂ ಸ್ಪರ್ಶಿಸುತ್ತಾ ಸಾಗುತ್ತದೆ. ಮಾತೃವಂಶೀಯ ಕುಟುಂಬಪದ್ಧತಿಯ ಒಡಲಲ್ಲಿ ರೂಪುಗೊಂಡ ಹೆಣ್ಣೊಬ್ಬಳು ಅದೇ ವ್ಯವಸ್ಥೆಯ ಧಾಳಿಯನ್ನೂ, ಇತರ ಸಮಸ್ಯೆಗಳ ಹಾವಳಿಯನ್ನೂ ದಿಟ್ಟೆಯಾಗಿ ಇದಿರಿಸಿದ ಮಾರ್ಮಿಕ ವೃತ್ತಾಂತ ಈ ಸಂಧಿಯ ಮುಖ್ಯ ವಿಷಯವಾಗಿದೆ. ಅಕ್ಕೆ ಸಿರಿಯದು ಕಣ್ಣೀರ ಬಾಳ್ವೆಯಾದರೂ ಆಕೆ ಧೀರೆ. ಹೊಣೆಗೇಡಿಯಾಗಿ ದಾರಿಗೆ ಬಾರದ ವ್ಯಭಿಚಾರಿ ಗಂಡನಿಗೆ ಆಕೆ ಧೈರ್ಯದಿಂದ 'ಬರ' ಹೇಳುತ್ತಾಳೆ ಮಾತ್ರವಲ್ಲ. ಮರುಮದುವೆ ಯಾಗುತ್ತಾಳೆ. ಹಾಗಿದ್ದರೂ ಕಾರಣಿಕದ ಗರತಿ ಎಂಬ ಗೌರವಕ್ಕೆ ಪಾತ್ರಳಾಗುತ್ತಾಳೆ. "ಸಿರಿಯು ಪ್ರಬುದ್ಧ ಪುರುಷನೊಬ್ಬನ ಬೆಂಬಲವಿಲ್ಲದೆಯೂ ನೈತಿಕ ಸದ್ಗುಣಗಳನ್ನು ಮತ್ತು ಫಲವಂತಿಕೆಯನ್ನು ಕಾಯ್ದುಕೊಂಡು ಬಂದ ಸ್ತ್ರೀಯು ಐತಿಹ್ಯಕ್ಕೆ ದುಷ್ಟಾಂತವಾಗಿದ್ದಾಳೆ. ಅವಳ ಮಗ ಕುಮಾರ ಆಕೆಯ ಸದ್ಗುಣ ಮತ್ತು ಋಜುತ್ವದ ಸಾಕ್ಷಿಯಾಗಿ ನಿಲ್ಲುತ್ತಾನೆ(ಪೀಟರ್ ಜೆ. ಕ್ಲಾಸ್, ೧೯೮೭, ಪು.೩೦).

ಸಿರಿಯನ್ನು ಶಿಷ್ಟಪುರಾಣಗಳ ಸಾಧ್ವಿಯರ ಜೊತೆ ಹೋಲಿಸುವಂತಿಲ್ಲ. ಅಲ್ಲಿಯ ಪಾತಿವ್ರತ್ಯದ ಪರಿಕಲ್ಪನೆ ಬೇರೆ; ಇಲ್ಲಿಯ ಸ್ತ್ರೀ ಶಕ್ತಿಯ ಪ್ರತಿಪಾದನೆ ಬೇರೆ. ಇಲ್ಲಿಯ ನೈತಿಕತೆಯ ಕಲ್ಪನೆ, ಸ್ತ್ರೀಯ ವಿವೇಚನೆ ವಿಶಿಷ್ಟವಾದದ್ದು.

ಸಿರಿ ಸಂಧಿಯ ಕಥಾಭಿತ್ತಿ ತುಂಬ ವಿಸ್ತಾರವಾದದ್ದು. ಪುರಾಣ ಅಥವಾ ಮಹಾಕಾವ್ಯ ಸಹಜವಾದ ಹಲವು ಅತಿಮಾನುಷ ವೃತ್ತಾಂತಗಳು(ಸಿರಿಯ ಜನ್ಮ, ಆಕೆ ಪ್ರಕಟಿಸುವ ಅಸಾಮಾನ್ಯ ಶಕ್ತಿಗಳ, ವರ, ಶಾಪ ಪ್ರಸಂಗಗಳು ಇತ್ಯಾದಿ.) ಇದರಲ್ಲಿ ಸೇರಿಕೊಂಡಿದ್ದರೂ, ಅಂಥ ಪವಾಡಗಳನ್ನು ಒಂದು ವೇಳೆ ಕಳಚಿದರೂ ಮೂಲಕಥೆ ಗಟ್ಟಿಯಾಗಿಯೇ ಉಳಿಯುತ್ತದೆ. ಇತಿಹಾಸದ ಒಂದು ಕಾಲಘಟ್ಟದಲ್ಲಿ ವಾಸ್ತವಿಕವಾಗಿ ನಡೆದುಹೋದ ಕಥೆ ಎಂಬುದರಲ್ಲಿ ಯಾವುದೇ ಸಂಶಯ ತೋರುವುದಿಲ್ಲ. ಭಿನ್ನ ಭಿನ್ನ ವ್ಯಕ್ತಿತ್ವವುಳ್ಳ ಅನೇಕ ಮಂದಿ ತಮ್ಮ ತಮ್ಮ ನಂಬಿಕೆ ಸಾಹಸ, ಸಿಟ್ಟು ಸೆಡುವು, ಸೊಕ್ಕು, ಪಂಥ ಪೌರುಷ, ಕುಹಕ, ಕರುಣೆ–ಇತ್ಯಾದಿ ಶಕ್ತಿ ದೌರ್ಬಲ್ಯಗಳಿಂದ ಜೀವಂತವೆನಿಸಿ ಈ ಹಾಡಿನುದ್ದಕ್ಕೂ ಹಾದು ಹೋಗುತ್ತಾರೆ. ಅವರ ಬಾಳ್ವೆಯ ಉತ್ಕಟತೆ, ಅವರಲ್ಲಿ ಕೆಲವರು ನೆಚ್ಚಿನ ಜೀವನಮೌಲ್ಯಗಳು ನಮ್ಮಲ್ಲಿ ಬೆರಗನ್ನು ಬಿತ್ತದೇ ಇರಲಾರವು. 'ಬೆರ್ಮರ್ ದೈವತ ಸಿರಿ ಕಥೆಯಲ್ಲಿ ಮುಖ್ಯ ಪಾತ್ರ–ಅದೃಷ್ಟ ದೇವತೆಯ ಪಾತ್ರ ವಹಿಸುತ್ತದೆ. ಶಾಪಾನುಗ್ರಹಮೂರ್ತಿಯಾದ ಈ ಬೆರ್ಮರ್ ಬ್ರಾಹ್ಮಣ ವೇಷದಲ್ಲಿ ಬರುವ ಒಂದು ಪಾತ್ರವಾಗಿಯೂ ಕಥಾಸೂತ್ರವನ್ನು ಜಗ್ಗುವುದನ್ನು ಗಮನಿಸಬಹುದು('ಬೆರ್ಮರ್' ದೇವತೆಯ ಹೆಚ್ಚಿನ ವಿಚಾರಗಳಿಗೆ ಲೀಲಾಭಟ್ ಅವರ 'ತುಳುನಾಡ ಬೆರ್ಮರ್–ಒಂದು ಟಿಪ್ಪಣಿ' ಎಂಬ ಲೇಖನ ನೋಡಬಹುದು –'ಸಿರಿ' ಸಂಪುಟ, ಪು.೨೩೬). ಒಂದು ರೀತಿಯಲ್ಲಿ ಇಡೀ ಕಥಾನಕವೇ ಬೆರ್ಮರ್ ದೇವರ ಮಹಿಮಾ ವ್ಯಾಖ್ಯಾನ ಎನ್ನಬಹುದು. ಪ್ರತ್ಯೇಕ ಇಲ್ಲವೆ ಪರೋಕ್ಷವಾದ ಬೆರ್ಮರ್ ದೇವರ ಕಣ್ಣಾಪಿನಲ್ಲೆ ನಾಲ್ಕು ತಲೆಮಾರುಗಳ ಕಥನ ನಡೆಯುತ್ತದೆ. ಬೆರ್ಮರ್ ಕ್ಷೇಮಂಕರ ದೈವತವಾಗಿರುವಂತೆಯೆ, ಸಾಂದರ್ಭಿಕವಾಗಿ(ಶಿಷ್ಟ ದೇವರುಗಳೂ ಅಷ್ಟೆ) ಶಿಕ್ಷಾಕರ್ತನಾಗಿಯೂ ಕಾಣಿಸಿಕೊಂಡಿದ್ದಾನೆ.

ಸಿರಿ ಸಂಧಿಯಲ್ಲಿ ಅಬ್ಬಗ ದಾರಗ ವೃತ್ತಾಂತದಲ್ಲಿ ವರ್ಣಿತವಾದ ಚೆನ್ನಯಾಟವು ಇಂದಿಗೂ ಸಿರಿಜಾತ್ರೆಯ ಸಂದರ್ಭದಲ್ಲಿ ಪುನರಭಿನಯಗೊಳ್ಳುತ್ತಿರುವುದು ಗಮನೀಯವಾಗಿದೆ. ಅಬ್ಬಗ ದಾರಗೆಯರಿಂದ ಆವೇಶಗೊಂಡ ಮಹಿಳೆಯರು ಚೆನ್ನಯಾಟ ಆಡುವ ವಿಧಿಯನ್ನು ನಿರ್ವಹಿಸುತ್ತಾರೆ. ಕುಮಾರನಿಂದ ಆವೇಶಿತನಾದ ಪಾತ್ರಿಯ ಉಪಸ್ಥಿತಿ ಇಲ್ಲಿ ಮುಖ್ಯವಾಗಿದೆ. ಈ ಸನ್ನಿವೇಶಕ್ಕೆ ಸಂಬಂಧಪಟ್ಟ ಸಂಧಿಯನ್ನು ಆಗ ಹಾಡಲಾಗುತ್ತದೆ.

ಪ್ರಾಚೀನ ತುಳುನಾಡಿನ ಸಾಂಸ್ಕೃತಿಕ ಬದುಕಿನ ಅನೇಕ ಮಗ್ಗುಲುಗಳ ಮಾರ್ಮಿಕ ಚಿತ್ರಣ ಈ ಸಂಧಿಯಲ್ಲಿದೆ. ಜನಪದ ವಿಜ್ಞಾನಿಗಳ, ಮಾನವಶಾಸ್ತ್ರಜ್ಞರ, ಮಾನಸ ವಿಜ್ಞಾನಿಗಳ ಕುತೂಹಲವನ್ನು ಸೆಳೆಯತಕ್ಕ ಅನೇಕ ಅಧ್ಯಯನಾಂಶಗಳು ಸಿರಿ ಆರಾಧನೆಯಲ್ಲಿಯೂ, ಅದಕ್ಕೆ ಸಂಬಂಧಪಟ್ಟ ಈ ಪೂರ್ವ ಅಖ್ಯಾಯಿಕೆಯಲ್ಲಿಯೂ ಹುದುಗಿವೆ. ಸ್ತ್ರೀವಾದಿ ಅಧ್ಯಯನಕ್ಕೊಂದು ವಿಶಿಷ್ಟ ಆಕರ–ಈ ಬೃಹತ್ ಪಠ್ಯ.

ಸಿರಿಪಾಡ್ದನ ರೂಪದ ಕಾವ್ಯವನ್ನು ಸಂಗ್ರಹಿಸಿ ಪ್ರಕಟಿಸಿರುವ ಡಾ.ಎ.ವಿ. ನಾವಡ

PDF created with pdfFactory Pro trial version www.pdffactory.com

ಅವರ ಅಭಿಪ್ರಾಯವೂ ಕೂಡ ಡಾ. ಅಮೃತ ಸೋಮೇಶ್ವರ ಅಭಿಪ್ರಾಯಕ್ಕೆ ಪೂರಕವಾಗಿಯೇ ಇದೆ.

"ಲೌಕಿಕ–ಅಲೌಕಿಕವನ್ನು ಒಂದುಗೂಡಿಸುವ, ಬದುಕಿನ ಒತ್ತಡಕ್ಕೆ ಒಳಗಾದ ನೂರಾರು ಮಹಿಳೆಯರು ಆವೇಶಗೊಳ್ಳುವ, ಅಲ್ಲಿ ಸೃಷ್ಟಿಯಾಗುವ ಪರ್ಯಾಯ ಬಂಧುತ್ವ ಹಾಗೂ ಆ ಮೂಲಕ ಪಡೆಯುವ ಸಮಾಧಾನ, ಬಿಡುಗಡೆಗಳ ಸಿರಿ ಆರಾಧನಾ ಪ್ರಪಂಚವನ್ನು ಬಹಳ ಸುಲಭವಾಗಿ ಅರ್ಥೈಸುವುದು ಆಗದು. ಅದನ್ನು ಜಾತ್ರೆಯ ಹೊರಗಿನ ಸಾಮಾಜಿಕ, ಕೌಟುಂಬಿಕ, ಸಾಂಸ್ಕೃತಿಕ, ಆರ್ಥಿಕ ಸಂದರ್ಭಗಳ ಗ್ರಹಿಕೆಯ ಹಿನ್ನೆಲೆಯಲ್ಲಿ ಕಂಡುಕೊಳ್ಳಬೇಕಾಗುತ್ತದೆ. "ಅದಕ್ಕೆ ಉತ್ಸವರೂಪದಲ್ಲಿ ನಡೆಯುವ ಮಹಿಳೆಯರ ಆವೇಶ ಮತ್ತು ಸಿರಿ ಸಂಧಿಯ ಹಾಡುವಿಕೆ ಈ ವ್ಯವಸ್ಥೆಯ ಒಂದು ಮುಖವಾದರೆ, ಸಿರಿ ಹೆಂಗಸರ ವೈಯಕ್ತಿಕ ಬದುಕಿನ ಒಂದು ಇತಿಹಾಸ, ಕುಟುಂಬ ಪದ್ಧತಿ, ಸಿರಿ ಬಳಗದ ಸದಸ್ಯೆಯಾಗಿ ನೇಮಕಗೊಳ್ಳುವ ದಲಿಯ ಸೇವೆ, ನಿತ್ಯಜೀವನದಲ್ಲಿ ಅನುಸರಿಸಬೇಕಾದ ವಿಧಿ ನಿಯಮಗಳು, ಅನುಭವ ಸಿರಿ ಹೆಂಗಸರಿಂದ ಮತ್ತು ಕುಮಾರನ ಸಹಾಯದಿಂದ ಸಿರಿ ಸಂಧಿಯನ್ನು ಕಲಿತುಕೊಳ್ಳುವ ಬಗೆ ಇವುಗಳು ಈ ವ್ಯವಸ್ಥೆಯ ಇತರ ಮುಖಗಳಾಗಿವೆ ಎನ್ನುವ ವಿಸ್ತಾರದ ಅರಿವಿರಬೇಕಾಗುತ್ತದೆ.

ಸಿರಿಪಾಡ್ದನದಲ್ಲಿ ಸಿರಿಯ ಕೌಟುಂಬಿಕ, ಸಾಮಾಜಿಕ ಸಂದರ್ಭ, ವಿಚ್ಛೇದನ, ಮರುಮದುವೆ, ಉತ್ತರಾಧಿಕಾರತ್ವ, ಸ್ತ್ರೀತ್ವ ಮತ್ತು ಪರಿಶುದ್ಧತೆಯ ಪರಿಕಲ್ಪನೆಗಳು, ಗಂಡಿನ ಮೋಸ, ಅನ್ಯಾಯ, ಪುರುಷಪ್ರಭುತ್ವದ ಹೇರಿಕೆಯ ಪ್ರಯತ್ನಗಳು, ಅದರ ವಿರುದ್ಧ ಹೆಣ್ಣಿನ ಹೋರಾಟ ಮತ್ತು ವಿಜಯಗಳು ದಾಖಲಾಗಿದೆ. ಇದರಿಂದಾಗಿ ಬಂಟ ಸಮುದಾಯದ ಮೂಲ ಹೆಣ್ಣೆಂದು ಗ್ರಹೀತಳಾದ ಸಿರಿಯೊಂದಿಗೆ ತುಳುನಾಡಿನ ಎಲ್ಲ ಮಾತೃರೂಪಿ ಕುಟುಂಬದ ಹೆಣ್ಣುಗಳು ತಮ್ಮ ಸಂಬಂಧವನ್ನು ಕಂಡುಕೊಳ್ಳುತ್ತಾರೆ. ಸಿರಿ(ಪಾಡ್ದನ) ಪುರಾಣದೊಂದಿಗೆ ಗಾಢವಾದ ಸಂಬಂಧವಿರುವ ತುಳುವ ಮಹಿಳೆಯರಿಗೆ ಸಿರಿಯ ಬದುಕು ಮತ್ತು ಹೋರಾಟಗಳು ಆದರ್ಶ ಮಾದರಿಯಾಗಿರುವಲ್ಲಿ ಸಿರಿಪಾಡ್ದನವು ಸಿರಿ ಜಾತ್ರೆಗೊಂದು ಸಂಹಿತೆಯಾಗಿ ಕಾರ್ಯನಿರ್ವಹಿಸುತ್ತದೆ. ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳ ಅನೇಕ ಶೈವ ದೇವಾಲಯಗಳಲ್ಲಿ ಸಿರಿ ಆರಾಧನೆ ವಾರ್ಷಿಕ ಜಾತ್ರೆಯ ಸ್ವರೂಪದಲ್ಲಿ ನಡೆಯುತ್ತದೆ. ಉಡುಪಿ ಜಿಲ್ಲೆಯ ಪಾಂಗಾಳ, ಕವತ್ತಾರು, ಹಿರಿಯಡಕ, ಬೊಳ್ಯೊಟ್ಟು, ನಂದಳಿಕೆ; ದಕ್ಷಿಣ ಕನ್ನಡ ಜಿಲ್ಲೆಯ ಕಂಡೇವು, ಆತ್ರಿಜಾಲ್, ಹುರುಂಬಿದೊಟ್ಟು, ಕುತ್ರೊಟ್ಟು, ನಿಡಿಗಲ್ಲ್, ಉರ್ಕಿದೊಟ್ಟು, ಜರೆಗುಡ್ಡೆಗಳು ಪ್ರಮುಖ ಸಿರಿ ಆರಾಧನಾ ಕೇಂದ್ರಗಳು. ಮಾರ್ಚ್, ಏಪ್ರಿಲ್, ಮೇ ತಿಂಗಳು ಹುಣ್ಣಿಮೆಯ ರಾತ್ರಿ ಸಿರಿಜಾತ್ರೆ ಜರುಗುವುದು.

ಬಹುತೇಕ ಸಿರಿಜಾತ್ರೆಗಳು ಶೈವ ದೇವಾಲಯಗಳಲ್ಲಿ ನಡೆಯುವುದದರೂ ಶಿಷ್ಟದೇವರಿಗೂ ಸಿರಿಗೂ ಯಾವುದೇ ಸಂಬಂಧವಿಲ್ಲ. ಈ ದೇವಾಲಯಗಳು ಮೂಲತಃ ಆಲಡೆ ಅಥವಾ ಬೆರ್ಮಸ್ಥಾನಗಳಾಗಿವೆ. ಸಿರಿಯ ಆರಾಧನೆ ಕೇಂದ್ರಗಳು ಸಂಕೀರ್ಣ ಸ್ವರೂಪದ್ದಾಗಿರುತ್ತದೆ. ಒಂದೆಡೆ ಶೈವ ದೇವಾಲಯ ಹಾಗೂ ಪರಿವಾರ ದೇವತೆಗಳು ಇನ್ನೊಂದೆಡೆ ಸ್ಥಳದ ಭೂತಗಳು, ಮತ್ತೊಂದು ಸ್ತರದಲ್ಲಿ ಸಿರಿಗುಂಡ, ಸಿರಿಬಳಗದ ಮೂರ್ತಿಗಳು. ಹೀಗಾಗಿ ಸಿರಿಜಾತ್ರೆಯ ಆವರಣ ಹಾಗೂ ಆರಾಧನೆ ಪ್ರಕ್ರಿಯೆಗಳು ಸಂಕೀರ್ಣತೆಯನ್ನು ಪಡೆದುಕೊಳ್ಳುತ್ತವೆ. ಡಾ.ಪೀಟರ್ ಜೆ.ಕ್ಲಾಸ್ ಗುರುತಿಸುವಂತೆ "ಇಲ್ಲಿನ ಶಿವಾರಾಧನೆ ಸಿರಿಯ ಆರಾಧನೆಯನ್ನು ಅತಿಕ್ರಮಿಸಿ ಜರಗುತ್ತದೆಯೇ ಹೊರತು ಸಿರಿ ಆರಾಧನೆಯ ಒಂದು ಅಂಗವಾಗಿ ನಡೆಯುತ್ತಿಲ್ಲ. ಇಷ್ಟೊಂದು ವ್ಯಾಪಕ ನೆಲೆಯಲ್ಲಿ ಆರಾಧಿಸಲಾಗುವ ಸಿರಿ ಅಧೀನ ದೈವವಾಗಿ ಆರಾಧಿಸಲ್ಪಡುವ ಸಂಗತಿ ಅನೇಕ ಪ್ರಶ್ನೆಗಳನ್ನು ಎತ್ತುತ್ತದೆ."

ಜಾತ್ರೆಯಂದು ಮುಸ್ಸಂಜೆ ಹೊತ್ತಿಗೆ ಸಿರಿಯ ಭಕ್ತರು ಹಾಗೂ ಅವರ ಬಂಧುಗಳು ಸಿರಿಗುಡಿಗೆ ಬಂದು ಕಾಣಿಕೆ ಒಪ್ಪಿಸುತ್ತಾರೆ. ಬ್ರಾಹ್ಮಣ ತಂತ್ರಿಯಿಂದ ಪೂಜೆ ಸಲ್ಲುತ್ತದೆ. ಸಿರಿ ಮತ್ತು ಕುಮಾರ ಮೈದುಂಬುವ ವ್ಯಕ್ತಿಗಳು ಅಂದು ಶೌಚದಲ್ಲಿರಬೇಕು. ಸ್ನಾನ, ಮಡಿಬಟ್ಟೆ, ನಡೆಹಾಸು, ವೇಷಭೂಷಣ, ಹಿಂಗಾರ ಹುಣ್ಣಿಮೆ ರಾತ್ರಿ, ವಾದ್ಯಮೇಳಗಳ ಮೂಲಕ ಅವರನ್ನು 'ಪ್ರತ್ಯೇಕ'ಗೊಳಿಸಲಾಗುವುದು ದೈಹಿಕ ಹಾಗೂ ಮಾನಸಿಕವಾದ ಈ ಪ್ರತ್ಯೇಕೀಕರಣ ಪೂರ್ವಸಿದ್ಧತೆಗಳು ಆವೇಶಕ್ಕೆ ಪೂರಕವಾಗಿ ದುಡಿಯುತ್ತವೆ. ಪ್ರತಿಯೊಂದು ಸಿರಿ ಆರಾಧನಾ ಕೇಂದ್ರಕ್ಕೆ ಸಂಬಂಧಪಟ್ಟಂತೆ ನಿಗದಿಯಾದ ಮೂಲಕುಮಾರ ಅಥವಾ ಸ್ಥಳ ಕುಮಾರ ಮತ್ತು ಅವನ ಅಧೀನ ಕುಮಾರರು ಹಾಗೂ ಸಿರಿಗಳು ಇದ್ದು ಹೆಣ್ಣೊಬ್ಬಳು ಸಿರಿಯಾಗುವ ಪ್ರಕ್ರಿಯೆ ಹೀಗಿರುತ್ತದೆ: ಸಾಮಾನ್ಯವಾಗಿ ಹೆಣ್ಣು ಎಳೆಹರೆಯದಿಂದ ಮಧ್ಯವಯಸ್ಸಿನ(೧೪ರಿಂದ ೩೫) ಗುಂಪಿನಲ್ಲಿ ಸಿರಿ ಆಕರ್ಷಣೆಗೆ ಒಳಗಾಗುತ್ತಾಳೆ. ಒಬ್ಬಾಕೆಯಲ್ಲಿ ದೈಹಿಕ/ಮಾನಸಿಕ ಅಸ್ವಸ್ಥತೆಯ ಚಹರೆಗಳು ಕಂಡುಬಂದಾಗ ಅದು 'ದುಷ್ಟಶಕ್ತಿಯ' ಕಾಟ, ಉಪದ್ರವಗಳೆಂದು ಪರಿಹಾರೋಪಾಯಗಳನ್ನು ನಡೆಸಲಾಗುವುದು. ಆಗಲೂ ಫಲ ಕಂಡುಬಾರದಿದ್ದಲ್ಲಿ ಸಿರಿಜಾತ್ರೆಗೆ ಹೋಗಿ ಹರಕೆ ಹೇಳಿಕೊಳ್ಳುತ್ತಾರೆ. ಆದರಂತೆ ಕುಮಾರನನ್ನು ಮನೆಗೆ ಕರೆಯಿಸಿ ಅಥವಾ ಕುಮಾರನಲ್ಲಿಗೆ ಹುಡುಗಿಯನ್ನು ಕರೆದೊಯ್ದು ಅಥವಾ ವಾರ್ಷಿಕ ಸಿರಿಜಾತ್ರೆಗೆ ಕರೆತಂದು ಸೇರಿಸುತ್ತಾರೆ. ಆರಾಧನಾ ಪ್ರಕ್ರಿಯೆಯೊಳಗೆ ಆವೇಶಿತಳಾಗುವ ಹೆಣ್ಣನ್ನು ಕುಮಾರ ಸಿರಿಪಾಡ್ದನದ ಭಾಗಗಳನ್ನು ಹಾಡುವ ಮೂಲಕ ಮಧ್ಯಂತರ ಜಗತ್ತಿಗೆ ಪ್ರವೇಶಿಸುವಂತೆ ಪ್ರಚೋದಿಸಲಾಗುತ್ತದೆ. ಈ ಪ್ರವೇಶ ಸಾಧ್ಯವಾಗಿ ಆಕೆ ಸಿರಿಬಳಗದ ಯಾವುದಾದರೊಂದು ಪಾತ್ರವಾಗಿ

PDF created with pdfFactory Pro trial version www.pdffactory.com

ತನ್ನನ್ನು ಕಂಡುಕೊಳ್ಳುತ್ತಾಳೆ. ಆವೇಶದ ನಿರಂತರ ಸ್ಥಿತಿಯಲ್ಲಿ ಆಕೆಯನ್ನು ಅನುಭವಿ ಸಿರಿಗಳು ಹಾಗೂ ಕುಮಾರ 'ಬಾಯಿಬಿಡಿಸುವ' ಕಾರ್ಯ ಮಾಡುತ್ತಾರೆ. ಆಗ ಆಕೆ ತಾನು ಸಿರಿಬಳಗದ ಸೊನ್ನೆಯೋ ಆಕೆ ಸಿರಿಬಳಗದ ನಿರ್ದಿಷ್ಟ ಸದಸ್ಯೆಯಾಗಿ ನಾಮಕರಣ ಹೊಂದುತ್ತಾಳೆ. ಮತ್ತಾಕೆ ವರ್ಷ ವರ್ಷವೂ ಜಾತ್ರೆಗೆ ಬಂದು ಸೇವೆ ಸಲ್ಲಿಸಲು ನಿಬದ್ಧಳಾಗುತ್ತಾಳೆ ದೇಹ ಮತ್ತು ಮನಸ್ಸಿನ ಪರಿಶುದ್ಧ ಸ್ಥಿತಿಯಲ್ಲಿ ಮಾತ್ರ ಸಿರಿ ಮೈದುಂಬುವುದು ಸಾಧ್ಯ ಎಂಬ ಬಲವಾದ ನಂಬಿಕೆ ಇದೆ. ಹೀಗಾಗಿ ಹೆಣ್ಣೊಬ್ಬಳಿಗೆ ಸಿರಿಯಾಗುವುದು ಅವಳ ಸಚ್ಚಾರಿತ್ರ್ಯ ಮತ್ತು ಪಾವಿತ್ರ್ಯದ ಸಂಕೇತವೆಂದೂ ಭಾವಿಸಲಾಗುವುದು. ಇದರಿಂದ ಸಿರಿಯಾಗುವ ಮುನ್ನಿನ ಹಾಗೂ ಇವತ್ತಿನ ಅವಳ ಸ್ಥಾನಮಾನದಲ್ಲಿ ಬಹಳಷ್ಟು ವ್ಯತ್ಯಾಸ ಗೋಚರಿಸುತ್ತದೆ.

ಜಾತ್ರೆಯಲ್ಲಿ ತಂತ್ರಿಯಿಂದ ತೀರ್ಥಪ್ರಸಾದ ಸ್ವೀಕರಿಸಿದ ಸಿರಿಗಳು ಮತ್ತು ಕುಮಾರರು ಎದುರುಬದುರಿಗೆ ಸಾಲಾಗಿ ಅಥವಾ ಸುತ್ತುವರಿದು ನಿಲ್ಲುವರು. ಸಿರಿ ಪಾಡ್ದನದ ಹಂದರವು ಅನಾವರಣಗೊಳ್ಳುತ್ತ ಹೋದಾಗ ಲೌಕಿಕ ಜಗತ್ತಿನ ಈ ವ್ಯಕ್ತಿಗಳು ಅಲೌಕಿಕ ಜಗತ್ತನ್ನು ಪ್ರವೇಶಿಸುತ್ತಾರೆ ಹಾಗೂ ಮಧ್ಯಂತರ ಜಗತ್ತಿನ ಪಾತ್ರಗಳಾಗಿ ರೂಪಾಂತರ ಗೊಳ್ಳುತ್ತಾರೆ. ಆಗ ಅವರು ಸಿರಿ–ಕುಮಾರ, ಕುಮಾರ ಸೊನ್ನೆ, ಕುಮಾರ ಅಬ್ಬರ ದಾರಗರಾಗಿ ಪರಸ್ಪರ ಸಂಬಂಧವನ್ನು ಸ್ಥಾಪಿಸಿಕೊಂಡು ಪಾಡ್ದನದ ಮೂಲಕ ಉತ್ತಮ ಪುರುಷರಲ್ಲಿ ಸಂವಾದ ನಡೆಸುತ್ತಾರೆ. ತುಳುವ ಬಂಧುತ್ವ ವ್ಯವಸ್ಥೆಯಲ್ಲಿ ಈ ಜೋಡಿಗಳು ರಕ್ತಬಾಂಧವ್ಯ ಘಟಕವಾಗಿದ್ದು ಅವು ತಾಯಿ–ಮಗ, ಅಣ್ಣ–ತಂಗಿ, ಸೋದರಮಾವ–ಸೊಸೆಯದಾಗಿವೆ. ಮಾತೃರೂಪಿ ತುಳುವ ಸಂಸ್ಕೃತಿಯಲ್ಲಿ ತಾಯಿಯ ಬಳಗವು 'ಕುಟುಂಬ'ವೆಂದು ಪರಿಗಣಿತವಾಗುವುದರಿಂದ ಸೋದರಮಾವ ಕುಟುಂಬದ ಸದಸ್ಯನಾಗಿದ್ದು ಸೋದರಮಾವ–ಸೊಸೆಯು ಒಂದೇ ಬಳಿ ಹೊಂದಿದ್ದು ಅವರೊಳಗಿನ ವಿವಾಹ ನಿಷಿದ್ಧವಾದುದು. ಈ ತಿಳಿವಳಿಕೆ ಸಿರಿಜಾತ್ರೆಯನ್ನು ಸಂತಾನಾಪೇಕ್ಷಿ ಮೇಳವೆಂಬ ಗ್ರಹಿಕೆಯನ್ನು ಮರುವಿಮರ್ಶೆಗೆ ಒಡ್ಡಲು ಒತ್ತಾಯಿಸುತ್ತದೆ."

೨.೧೦. ಬಲೀಂದ್ರ

ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಮತ್ತು ಮಲೆನಾಡಿನ ಹಲವು ಭಾಗಗಳಲ್ಲಿ ಬುಡಕಟ್ಟುಗಳೂ ಮೊದಲ್ಗೊಂಡಂತೆ ವಿವಿಧ ಶೂದ್ರವರ್ಗ ಸಾಮೂಹಿಕವಾಗಿ ಆರಾಧಿಸುವ ಪ್ರಮುಖ ದೈವವೆಂದರೆ ಬಲೀಂದ್ರ. ಆದರೆ, ಈ ದೇವರು ಖಾಯಂ ಆಗಿ ನೆಲೆ ನಿಂತ ದೇವರಲ್ಲ. ವರ್ಷಕ್ಕೊಮ್ಮೆ ಭೂಲೋಕಕ್ಕೆ ಬಂದು ತನ್ನ ಮಕ್ಕಳನ್ನು, ಅವರು ಬೆಳೆಯುವ ಬೆಳೆಗಳನ್ನು ಹಾರೈಸಿ ಹಿಂತಿರುಗುವ ದೇವರು.

ಬಲೀಂದ್ರನ ಪೂಜೆಯನ್ನು ವಿಶೇಷವಾಗಿ ಇಲ್ಲಿ ಪ್ರಸ್ತಾಪಿಸುವುದಕ್ಕೆ ಕಾರಣಗಳಿವೆ. ನಮ್ಮ ಪುರಾಣಗಳ ಪ್ರಕಾರ ಹಿಂದೆ ಚಕ್ರಾಧಿಪತಿಯಾಗಿದ್ದ ಬಲೀಂದ್ರನನ್ನು ಬ್ರಾಹ್ಮಣ ವೇಷ ತೊಟ್ಟ ವಿಷ್ಣು ಭಿಕ್ಷೆಯ ನೆಪದಲ್ಲಿ ಪಾತಾಳಕ್ಕೆ ತುಳಿದ ಪ್ರಸಂಗ ಅತ್ಯಂತ ಜನಜನಿತವಾದುದು. ವೈದಿಕರ ಅದಿದೈವವೆನಿಸಿದ ವಿಷ್ಣು ಈ ದ್ರಾವಿಡ ಚಕ್ರಾಧಿಪತಿಯನ್ನು ಪಾತಾಳಕ್ಕೆ ತುಳಿದು ಅವನ ಭೂಮಿಯನ್ನು ಕಿತ್ತುಕೊಂಡರೂ, ಅಂದು ನಡೆದಿರಬಹುದಾದ ದೌರ್ಜನ್ಯಕ್ಕೊಂದು ಸಂಕೇತ. ಆದರೆ ಸಾಕ್ಷಾತ್ ಬಲೀಂದ್ರನೇ ನಮ್ಮ ಕುಲದ ಮೂಲಪುರುಷ ಎಂದು ನಂಬುವ, ಆರಾಧಿಸುವ ಅಸಂಖ್ಯಾತ ಜನ ಇನ್ನೂ ಇದ್ದಾರೆ ಎಂಬುದೇ ಬಹುಮುಖ್ಯವಾದ ವಿಚಾರ. ಆದ್ದರಿಂದ, ವಾಮನನ ಈ ಅವತಾರದ ಕಥೆ ಸ್ಥಳೀಯ ಬುಡಕಟ್ಟುಗಳ ಭೂಮಿಯನ್ನು ಬ್ರಾಹ್ಮಣರು ಕೈವಶಮಾಡಿಕೊಂಡಿದ್ದರ ಸಂಕೇತವೇ ಎಂಬ ಅನುಮಾನ ಕೂಡ ಬರುತ್ತದೆ. ಹೊರಗಿನಿಂದ ಬಂದ ಆರ್ಯರಿಗೂ ಸ್ಥಳೀಯ ನಿವಾಸಿಗಳಾಗಿದ್ದ ದ್ರಾವಿಡ ಬುಡಕಟ್ಟುಗಳಿಗೂ ಏರ್ಪಟ್ಟ ಸಂಘರ್ಷವೋ, ಒಪ್ಪಂದವೋ ಆಗಿರಬಹುದಾದ ಈ ಪ್ರಸಂಗ ಅತ್ಯಂತ ಕುತೂಹಲಕಾರಿ. ಅದು ಏನೇ ಇರಲಿ, ತಮ್ಮ ಪಿತೃಗಳ ಪ್ರತಿನಿಧಿಯಾಗಿ ವರ್ಷಕ್ಕೆ ಒಮ್ಮೆ ಭೂಮಿಗೆ ಬರುವ ತಮ್ಮ ಮೂಲಪುರುಷನನ್ನು ಸಮೃದ್ಧಿಯ ಸಂಕೇತವಾಗಿ ಆರಾಧಿಸುತ್ತಿರುವುದು ಗಮನಿಸಬೇಕಾದ ವಿಚಾರ.

ಬಲೀಂದ್ರನನ್ನು ಶೂದ್ರರು ತಮ್ಮ ಪಿತೃಗಳ ಪ್ರತಿನಿಧಿ ಎಂದೇ ಭಾವಿಸುತ್ತಾರೆ. ಅಷ್ಟೇ ಅಲ್ಲ ಬಲೀಂದ್ರ ಒಂದು ಕಾಲಕ್ಕೆ ಕೃಷಿ ಮಾಡುತ್ತಿದ್ದ ಹಾಲಕ್ಕಿಗೌಡ ಎಂಬುದು ಅವರ ನಂಬಿಕೆ. ವರ್ಷಕ್ಕೆ ಒಮ್ಮೆ ಅವನು ತನ್ನ ಐದು ಜನ ಸಂಗಡಿಗರೊಡನೆ ವಜ್ರದ ಕೊಡೆ ಹಿಡಿದು ಬರುತ್ತಾನೆ. ಬಂದವನೆ ತನ್ನ ಜೊತೆಗೆ ಬಂದವರನ್ನು ಭಟ್ಟರ ಮನೆಗೂ ಶೆಟ್ಟರ ಮನೆಗೂ ಕಳುಹಿಸಿ ತಾನು ಮಾತ್ರ ಹಾಲಕ್ಕಿ ಗೌಡರ ಮನೆಗೆ ಹೋಗುತ್ತೇನೆ ಎಂದು ಅಲ್ಲಿಗೆ ಬಂದನಂತೆ. ಇಂಥ ವಿಶ್ವಾಸ ಇಟ್ಟುಕೊಂಡಿರುವ ಹಾಲಕ್ಕಿ ಜನ ದೀಪಾವಳಿಯ ಸಮಯದಲ್ಲಿ ಪ್ರತಿವರ್ಷ ಭೂಮಿಗೆ ಬರುವ ಬಲೀಂದ್ರನನ್ನು ಮರೆತಾರೆಯೇ? ಅದೂ ತಮ್ಮಂಥ ಅಪ್ಪಟ ಕೃಷಿಕನಾದ ಭೂಮಿ ಪುತ್ರ ಬರುತ್ತಾನೆಂದರೆ ಅವರಿಗೆ ಎಲ್ಲಿಲ್ಲದ ಸಡಗರ ಮತ್ತು ಸಂತೋಷ.

ಈ ಬಲೀಂದ್ರನ ಹಬ್ಬವನ್ನು 'ಬೂರೆ ಹಬ್ಬ' ಎಂತಲೂ ಕರೆಯುತ್ತಾರೆ. ಕುಂಬಾರನಿಂದ ಹೊಸಗಡಿಗೆಯನ್ನು ತಂದು, ಅದಕ್ಕೆ ಚಿತ್ತಾರಗಳನ್ನು ಬರೆದು ಅಲಂಕರಿಸಿ, ಅದರೊಳಕ್ಕೆ ಹೊಸ ಅಕ್ಕಿ ಮತ್ತು ಮರದ ಚೆಕ್ಕೆ ಹಾಗೂ ಬೆಳ್ಳಿ ಅಥವಾ ಬಂಗಾರದ ನಾಣ್ಯಗಳನ್ನಿಟ್ಟು ಶುದ್ಧ ನೀರು ತುಂಬುತ್ತಾರೆ. ಕಂಠದ ಸುತ್ತ ಮಾವಿನ ಎಲೆಗಳನ್ನಿಟ್ಟು ಕಂಠದ ಮೇಲೆ ಮೊಗೆಕಾಯಿ ಅಥವಾ ತೆಂಗಿನ ಕಾಯಿಯನ್ನು ಇಡುತ್ತಾರೆ. ಗಡಿಗೆಯ ಕೊರಳಿಗೆ ಮಣಿಸರ ಹಾಗೂ ಬಂದಿಗಳನ್ನು ಇಟ್ಟು

PDF created with pdfFactory Pro trial version www.pdffactory.com

ಅಲಂಕರಿಸುವುದಲ್ಲದೇ ವಿವಿಧ ಬಗೆಯ ಹೂಮಾಲೆಯನ್ನು ಧರಿಸುತ್ತಾರೆ. ಹೀಗೆ ಅಲಂಕರಿಸಿದ ಪವಿತ್ರ ಗಡಿಗೆಯೇ ಬಲೀಂದ್ರ. ಬಲೀಂದ್ರನನ್ನು ಮೊದಲು ತುಳಸಿ ಕಟ್ಟೆಯಲ್ಲಿ ಪೂಜಿಸಿ ನಂತರ ಮನೆಯೊಳಗೆ ತರಲಾಗುತ್ತದೆ. ಒಳಗಿನ ಮನೆಯ ಅಂಗಳದಲ್ಲಿ ರಂಗೋಲಿ ಬರೆದು, ಅದರ ಮೇಲೆ ಬಾಳೆಲೆ ಇಟ್ಟು ಅದರ ಮೇಲೆ ಭತ್ತದ ಸಣ್ಣ ರಾಶಿ ಹಾಕಿ, ಭತ್ತದ ಮೇಲೆ ಬಲಿಂದ್ರನನ್ನು ಪ್ರತಿಷ್ಠಾಪಿಸುತ್ತಾರೆ. ಇದು ಮೊದಲ ದಿನದ ಆಚರಣೆಯಾದರೆ, ಎರಡನೇ ದಿನದ ಆಚರಣೆಯನ್ನೇ ಬೂರೆ ಹಬ್ಬ ಎಂದು ಇವರು ಕರೆಯುವುದು.

ಅಂದು ಮೊಗೆಕಾಯಿಯ ಕಡುಬು ಹಾಗೂ ಮೊಗೆಹಣ್ಣಿನ ಹಾಲಿನ ಪಾನೀಯದ ವಿಶೇಷ. ಆ ದಿನ ರಾತ್ರಿ ಹಾಲಕ್ಕಿ ಕೊಪ್ಪದ ಹೆಂಗಸರು ಮೊದಲು ಗೌಡನ ಮನೆಯಿಂದ ಹೊರಟು ಪ್ರತಿಮನೆಗೂ ಬೆಳಕಿನಾರತಿ ಒಯ್ಯುತ್ತಾರೆ. ಆರತಿ ತಂದ ಹೆಣ್ಣುಮಕ್ಕಳಿಗೆ ಮನೆಯವರು ಕಾಣಿಕೆ ನೀಡಿ ಸತ್ಕರಿಸುತ್ತಾರೆ. ಹೀಗೆ ಶೇಖರಿಸಿದ ಹಣದಿಂದ ಹಬ್ಬ ಮುಗಿದ ನಂತರ ಹೆಣ್ಣು ಮಕ್ಕಳೆಲ್ಲಾ ಸೇರಿ ಅವಲಕ್ಕಿ ಕೊಂಡು ತಂದು ತಿನ್ನುತ್ತಾರಂತೆ. ಬಲಿಪಾಡ್ಯದ ದಿನದ ರಾತ್ರಿ ಬಲೀಂದ್ರನಿಗೆ ಕೊನೆ ಆರತಿ ಮಾಡಿ ಪೂಜೆ ಸಲ್ಲಿಸಿ, ಬೆಳಗಿನ ಜಾವ, ಬಲೀಂದ್ರನ 'ಬುತ್ತಿಕೂಳಿ'ನೊಡನೆ ಹೊರಟು ತುಳಸಿಕಟ್ಟೆಯಲ್ಲಿ ವಿಸರ್ಜಿಸುತ್ತಾರೆ. ಆಮೇಲೆ ಹೆಂಗಸರೆಲ್ಲ ಸೇರಿ ಆ 'ಬುತ್ತಿಕೂಳ'ನ್ನು ಹಂಚಿಕೊಂಡು ಪ್ರಸಾದದ ರೀತಿಯಲ್ಲಿ ಸ್ವೀಕರಿಸುತ್ತಾರೆ.

ಇದೇ ಪಾಡ್ಯದ ದಿನ ಹಾಲಕ್ಕಿ ಸಮಾಜದ ಎಲ್ಲರೂ ವಿಶೇಷವಾಗಿ ಗೋಪೂಜೆ ಮಾಡುತ್ತಾರೆ. ದನಕರುಗಳ ಮೈತೊಳೆದು ಅವುಗಳನ್ನು ವಿಧವಿಧವಾಗಿ ಅಲಂಕರಿಸಿ, ಕೊಂಬುಗಳಿಗೆ ಬಣ್ಣ ಬಳಿದು ಚವಲಗಳನ್ನು ಕಟ್ಟುತ್ತಾರೆ. ಬಲೀಂದ್ರ ಭೂಮಿಯಿಂದ ತನ್ನ ಲೋಕಕ್ಕೆ ಹಿಂತಿರುಗುವಾಗ ಈ ಗೋವನ್ನೇ ವಾಹನ ಮಾಡಿಕೊಂಡು ಹೋಗುತ್ತಾನಂತೆ. ಹಾಗೆ ಹೋಗುವಾಗ ಹಾಲಕ್ಕಿ ಒಕ್ಕಲಿಗರ ಭೂಮಿಯಲ್ಲಿ ಹತ್ತಾರು ಬಗೆಯ ಧಾನ್ಯಗಳನ್ನು ಬಿತ್ತುತ್ತ ಹೋಗುತ್ತಾನಂತೆ.

ಲಯದ ಕಲ್ಪನೆ ಹಾಲಕ್ಕಿ ಒಕ್ಕಲಿಗರಲ್ಲಿ ಇಲ್ಲ. ಲಯಕ್ಕೆ ವಿರುದ್ಧವಾದ ಸಮೃದ್ಧಿ ಇವರ ಗುರಿ. ಆ ಸಮೃದ್ಧಿಗಾಗಿ ಆರಾಧಿಸುವುದು ಅವರ ಆಶಯ. ಬೆಂಕಿ, ಬಿರುಗಾಳಿ, ಪ್ರವಾಹಕ್ಕೆ ಇವರ ಸಮ್ಮತಿ ಇಲ್ಲ. ಅವುಗಳನ್ನು ಆಶಿಸುವುದೂ ಇಲ್ಲ. ಅವುಗಳನ್ನೇ ಆರಾಧಿಸುವ ಮೂಲಕ ನಮ್ಮ ಇಡೀ ನಾಡು ಸಮೃದ್ಧಿವಾಗಿರಲಿ, ಹಸುರಾಗಿರಲಿ, ನಗುನಗುತ್ತಾ ಇರಲಿ ಎಂಬುದು ಅವರ ಪ್ರಾರ್ಥನೆ. ಇವರ ಇಂಥ ಸಕಾರಾತ್ಮಕವಾದ ಆಶಯಗಳ ಪ್ರತೀಕವೇ ಬಲೀಂದ್ರ. ಬಲೀಂದ್ರನನ್ನು ಕರಾವಳಿಯಾದ್ಯಂತ, ಅದರಲ್ಲೂ ಉತ್ತರ ಕನ್ನಡದಲ್ಲಿ ಕೃಷಿಕರು ಆರಾಧಿಸುತ್ತಾರೆ. ಅವರ ಆರಾಧನೆಯ ಸಂದರ್ಭದಲ್ಲಿ ಹಾಡುವ ಹಲವು ರೀತಿಯ ಬಲೀಂದ್ರನ ಹಾಡುಗಳನ್ನು ಸಂಗ್ರಹಿಸಿ ಅವುಗಳ

ಅರ್ಥವನ್ನು ಕೊಟ್ಟಿದ್ದಾರೆ ಸಂಗ್ರಾಹಕ ಡಾ. ಎನ್.ಆರ್. ನಾಯಕ್. ಅದನ್ನಿಲ್ಲಿ ಅವಲೋಕಿಸೋಣ.

ಪಾತಾಳದಿಂದ ಬಂದ ಬಲೀಂದ್ರ ಹಣ್ಣಡಕೆ ಕೊನೆಯನ್ನೇರಿ, ತನ್ನ ರಾಜ್ಯದ ಸಿರಿಯನ್ನು ನೋಡುತ್ತಾನೆ. ಅಲ್ಲಿ ಹಾಲು ಹಳ್ಳ, ಮೊಸರುಗುಡ್ಡ ಬೆಳೆಯ ಸಮೃದ್ಧಿ. ಭಕ್ತರು ಮೊಗೆಹಣ್ಣು, ಕುಂಬಳಕಾಯಿ ಕಡಿದು ಮಾಡಿದ ಕಜ್ಜಾಯದ ನೈವೇದ್ಯ ಮಾಡಿರುತ್ತಾರೆ. ತುಲಸಿಯೆಡೆ ಬಂದು ಅಲ್ಲಿಂದ ಭಕ್ತರ ಮನೆಗೆ ಬರುತ್ತಾನೆ. ಅವನ ಪಟ್ಟೆದೋತರ, ಮುತ್ತಿನುಂಗುರ ಹಾಗೂ ಮೈ ಬೆಳಕು ಮನೆ ತುಂಬುತ್ತದೆ. ಮೂರುದಿನ ಉಳಿದು ಮುತ್ತಿನ ಕೊಡೆ ಹಿಡಿದು ಬಲೀಂದ್ರ ಹೊರಡುತ್ತಾನೆ. ಹೋಗುವಾಗ ಸಣ್ಣಕ್ಕಿಯ ಪಾಯಸ ಉಂಡು ಹೋಗುತ್ತಾನೆ.

ಅರಿಸಿನೆಣ್ಣೆಯನ್ನುಜ್ಜಿಕೊಂಡು ಮಿಂದು ಮಡಿಯುಟ್ಟು ಬಲೀಂದ್ರನನ್ನು ಕರೆಯಲು ಸಿದ್ಧರಾಗುತ್ತಾರೆ. ಹೆಣ್ಮಕ್ಕಳು ಪಟ್ಟೆಯುಟ್ಟು ಸಿಂಗಾರ ಮುಡಿದು, ತುಲಸಿಯ ಮುಂದಿನಿಂದ ಬಲೀಂದ್ರನನ್ನು ಮನೆಗೆ ತಂದು ನೈವೇದ್ಯ ಮಾಡುತ್ತಾರೆ. ಮುತ್ತಿನ ಕುಡಿಬಾಳೆಲೆಯಲ್ಲಿ ಹಾಲು, ತುಪ್ಪ, ಅನ್ನವನುಂಡು ಅಕ್ಕಿಯ ಕಣಜದಿಂದ ಇಳಿದು ಬಲಿ ಪಾತಾಳಕ್ಕೆ ಹೋಗುತ್ತಾನೆ. ಮೂರು ದಿನ ರಾಜ್ಯ ಸಿರಿಯನ್ನು ನೋಡಿ ರಾಜ್ಯಕ್ಕೆ ಶುಭ ಕೋರುತ್ತಾನೆ. ತನ್ನ ರಾಜ್ಯದಲ್ಲಿ ಕಟ್ಟದೆ ಕರೆಯಲಿ, ಬಿತ್ತದೆ ಬೆಳೆಯಲಿ ಕಲ್ಲುಗುಡ್ಡಗಳು ಚಿಗುರಿ ನಾಡು ಹಸುರೊಡೆಯಲಿ ಎಂದು ಹಾರೈಸಿ ಪಾತಾಳಕ್ಕಿಳಿಯುತ್ತಾನೆ.

ಮಾಳಿಗೆಯ ಒಳಗಿಂದ ಎಣ್ಣೆಯ ಬೆಳಕಿನಲ್ಲಿ ಬಲೀಂದ್ರ ಇಳಿದು ಬಂದ. ಮಕ್ಕಳೇ ಬುಟ್ಟಿಯನ್ನು ತೆಗೆದುಕೊಳ್ಳಿ. ನಮ್ಮೂರಿನಲ್ಲಿ ಮುತ್ತು ಮಾಣಿಕ್ಯ ಬೆಳೆಯುವಂತೆ ಬೀಜವನ್ನು ಬಿತ್ತುತ್ತಾ ಬರೋಣ. ಪಟ್ಟೆಯ ಹಚ್ಚಡದ ಮುತ್ತಿನುಂಗಿಲದ ಬಲೀಂದ್ರನಿಗೆ ಮುತ್ತಿನಾರತಿ ಬೆಳಗೋಣ.

ಬಲೀಂದ್ರ ಕಾಲ್ನಡಿಗೆಯಿಂದ ಬರುವುದಿಲ್ಲ. ಅವನು ಬೆಳ್ಳಿ ರಥ ಹತ್ತಿ ಬರುತ್ತಾನೆ; ಚಿನ್ನದ ರಥ ಹತ್ತಿ ಹೋಗುತ್ತಾನೆ. ಆತ ಹೋಗುವಾಗ ರಸ್ತೆಯಲ್ಲಿ ಸಿಕ್ಕಿದ ಗೋವಿಂದರಾಯನಿಗೆ, ಭಕ್ತರು ಅವನನ್ನೆದುರುಗೊಳ್ಳಲು ಸಜ್ಜಾಗಿ ಅವನನ್ನು 'ಗೋವಿಂದರಾಯ' ಎಂದು ಕರೆಯುವ ವಿಚಾರ ತಿಳಿಸುತ್ತಾನೆ.

ಬಲೀಂದ್ರನು ಬರುವಾಗ ಹಾವು ಚೇಳುಗಳೆಲ್ಲವೂ ಮಾಯವಾಗುತ್ತವೆ. ಅವನಿಗೆ ಹನ್ನೆರಡು ಸುತ್ತಿನ ಮುಂಡಾಸು, ಗರದೇವಿಗೆ ಬೆಳ್ಳಿಯ ಗಟ್ಟಿ ಹಾಗೂ ಹನ್ನೆರಡು ಮಾಳಿಗೆ ಮನೆ ಕಾರು ಬೆಳೆಗೆ ಬರುವಾಗ, ಕೇದಿಗೆ ಮಾಡುವಾಗ ಬಲೀಂದ್ರ ಬರುತ್ತಾನೆ. ಗರದೇವಿಯು ಮಕ್ಕಳ ಮದುವೆಗೆ ಎಕ್ಕೆ, ಸೀಗೆ, ಬಾಳೆ, ಕರ್ಕಿಗಳನ್ನು ನೆಡುತ್ತಾಳೆ. ಧೂಪ ಸುಟ್ಟು ಎಣ್ಣೆಯಲ್ಲಿ ದೀಪ ಹಚ್ಚುತ್ತಾಳೆ. ಗುಲಗುಂಜಿಯನ್ನು ಕಾಡಿನಲ್ಲಿ ಬೆಳೆದು ಮಕ್ಕಳಿಗೆ ಮಾಲೆ ಮಾಡುತ್ತಾಳೆ. ಹಬ್ಬದಲ್ಲಿ ಬೂರೆ ಹಬ್ಬ ಶ್ರೇಷ್ಠ.

PDF created with pdfFactory Pro trial version www.pdffactory.com

ಗರದೇವಿ ದಾಬನ್ನು ತೆಗೆದುಕೊಂಡು ಹೋಗಿ ಕರುಕಟ್ಟಿದಳು. ಬಾಳೆಲೆಯಲ್ಲಿ ಹಾಲು, ತುಪ್ಪವನ್ನು ಬಲೀಂದ್ರನಿಗೆ ಬಡಿಸಿದಳು. ಬಲೀಂದ್ರ ಹಾಲೂಟವುಂಡು 'ಹುಗ್ಗಿ' ಗುಡಿಗೆ ಹೋದನು.

ಈ ಹಾಡು ಮುಗಿದ ಮೇಲೆ ಬಲೀಂದ್ರನ ಮುಂದೆ ಎರಡು ಪಂಗಡಗಳಾಗಿ ಹಾಡಿ ಕುಣಿಯುತ್ತಾರೆ. ಪುಗಡಿ–ಪೂ ಹಾಕಿ ಕುಣಿಯುತ್ತಾರೆ.

ಚಿನ್ನದ ಭುಜದ ಬಲೀಂದ್ರನು ರಾಜನಂತೆ ಹೋಗುವಾಗ ನಾರು ಮುಡಿಯುಟ್ಟು, ಕಾಲಿಗೆ ಗೆಜ್ಜೆ, ಕೈಗೆ ಉಂಗುರ, ತಲೆಗೆ ವಜ್ರದ ಕಿರೀಟ ತೊಟ್ಟು ಕೈಯಲ್ಲಿ ಚಕ್ರ ಹಿಡಿದು, ಬೆಳ್ಳಿ ಮಂಚದಲ್ಲಿ ಕುಳಿತು ಮಾನವರಿಗೆ ವರವನ್ನು ಕೊಡುತ್ತಾನೆ. ನೀವು ಕಟ್ಟಿದ ಕೊಟ್ಟಿಗೆಗೆ, ತುಂಬಿದ ಸಭೆಗೆ ಸಿರಿ ಬರಲಿ. ನೀವು ಸುಖವಾಗಿ ಬಾಳಿರಿ. ನಾನು ನನ್ನ ರಾಜ್ಯಕ್ಕೆ ಹೋಗುತ್ತೇನೆ ಎಂದು ಮಾಳಿಗೆಯಿಂದಿಳಿದು ಹಟ್ಟಿಗೆ ಬರುತ್ತಾನೆ. ಬೆಳ್ಳಿಯ ಬಸವನನ್ನೇರಿ ರಾಜ್ಯಕ್ಕೆ ಸಿರಿಸಂಪತ್ತು ಬರಲೆಂದು ಹಾರೈಸಿ, 'ಒಡ್ಡಿ' ಗುಡಿಗೆ ಹೋಗುತ್ತಾನೆ.

ಅನಂತರ ದುಮ್ ಸಾಲೆ ಹಾಡು, ಬಿಂಬೀ ಹಾಡು, ತೋಳ್ ಚಿಲುವ ಹಾಡು, ಅಣಕು ಮದುವೆಯ ಹಾಡು ಹಾಡುತ್ತಾರೆ. ಅನಂತರ ಅಣಕು ಮದುವೆ ನಡೆಯುತ್ತದೆ. ಹಾಡು, ಕುಣಿತ, ಸಂಭಾಷಣೆ, ಅಭಿನಯಗಳಿಂದ ಕುಣಿದ ವಿಶಿಷ್ಟ ಹಾಡಿದು.

ಬಾವಿಯ ದಂಡಿಗೆಯ ಮೇಲೆ ಬಂದ ಬಲೀಂದ್ರ ತನ್ನೂರೇ ಶುಭವೆನ್ನುತ್ತಾನೆ. ಅಕ್ಕಿ ರೊಟ್ಟಿ ಬೆಲ್ಲ ತಿಂದು ತವರೂರಿಗೆ ನಡೆಯುತ್ತಾನೆ.

ಬಲ್ಲಾಳ ಬಲೀಂದ್ರನು ರಾಜ್ಯಕ್ಕೆ ಶ್ರೀಮಂತನು. ಆತ ಇಂದ್ರಲೋಕದಿಂದ ಬರುವಾಗ ಜಡಿಮಳೆ ಸುರಿಯುತ್ತದೆ. ಹುಲ್ಲ ಜಿಡ್ಡೆಗಳು ಚಿಗಿಯುತ್ತವೆ. ಬರಡು ಹಯನಾಗುತ್ತವೆ.

ಬಲೀಂದ್ರ ಜೋಟಿ ಕೊಕ್ಕೆಯ ಸಹಾಯದಿಂದ ಹಣ್ಣಡಿಕೆಯ ಕೊನೆಯಿಂದ ಕೊನೆಗೆ ಹಾರಿಬರುತ್ತಾನೆ. ಒಂದಕ್ಕೆ ಭಿತ್ತಿ ಒಂಬತ್ತು ಕಣಜವನ್ನು ಕಟ್ಟುವ ತನ್ನೂರೆ ಸಿರಿ ಎನ್ನುತ್ತಾನೆ. ಬೆಳ್ಳಿಯ ದಂಡಿಗೆ, ಸತ್ತಿಗೆ, ಗೊಂಡೆ ಹಾಗೂ ಫಲಾವಳಿಗಳುಳ್ಳ ರಥವನ್ನೇರಿ ಬಲೀಂದ್ರನು ಬರುತ್ತಾನೆ. ಬೆಳ್ಳಿಯ ಬೆತ್ತದ ಕೋಲು, ಹಸುರಂಗಿ ತೊಟ್ಟ, ನೊಸಲಿಗೊಪ್ಪುವ ಕಿರಿ ಮುಡಿಯುಳ್ಳ ಮಕ್ಕಳು ಬಲೀಂದ್ರನಿಗೆ ಆರತಿ ಬೆಳಗುತ್ತಾರೆ.

ಸಿಂಗಾರ ಕೊನೆಯ ಮೇಲೆ ನಿಂತ ಬಲೀಂದ್ರನು, ಸಿಂಗಾರದ ಏಳು ಬನಗಳು ತನಗೆನ್ನುತ್ತಾನೆ. ಅಕ್ಕಿ ಭಿತ್ತಿ ಬೆಳೆಯುವ ತನ್ನ ರಾಜ್ಯ ಶುಭವೆನ್ನುತ್ತಾನೆ. ಆತನಿಗೆ ಶ್ರೀಗಂಧ ಧೂಪಗಳ ಉಪಚಾರವಾಗುತ್ತದೆ. ಬಲೀಂದ್ರನ ಮುಂದೆ ರಂಗೋಲಿ ಬಿಡಿಸಿ, ಅವನನ್ನು ಹೂಗಳಿಂದ ಸಿಂಗರಿಸಿ ಆರತಿಯನ್ನು ಬೆಳಗುತ್ತಾರೆ. ಮುತ್ತೈದೆತನವನ್ನು ಕೊಟ್ಟು ಹರಸಲು ಬೇಡಿಕೊಳ್ಳುತ್ತಾರೆ.

ಬಾವಿಯ ದಡದಲ್ಲಿ ನಿಂತ ಬಲೀಂದ್ರನಿಗೆ ದಂಡೆಮಾಲೆಯನ್ನು ಹಾಕಿ, ಮನೆಗೆ ತಂದು ಕರ್ಪೂರದಾರತಿಯನ್ನು ಬೆಳಗುತ್ತಾರೆ. ಬೆಳ್ಳಿಯ ಬೆತ್ತವನ್ನು, ಗರುಡನನ್ನು ಹಿಡಿದು, ರಥವೇರಿ ಬಲೀಂದ್ರ ಬರುತ್ತಾನೆ. ಅವನಿಗೆ ಗಂಧ ಹಚ್ಚಿ, ದುಂಡು ಮಲ್ಲಿಗೆಯ ಮಾಲೆ ಹಾಕಿ, ಕರ್ಪೂರದಾರತಿಯನ್ನು ಬೆಳಗುತ್ತಾರೆ.

ಬಾವಿಯ ದಂಡಿಗೆಯ ಮೇಲೆ ನಿಂತ ಬಲೀಂದ್ರನನ್ನು ಹೆಂಗಸರು ತರುತ್ತಾರೆ. ಚಿನ್ನದ ಸತ್ತಿಗೆ, ಚಿನ್ನದ ದಂಡಿಗೆಯಲ್ಲಿ ಬಂದ ಬಲೀಂದ್ರನಿಗೆ ನಾರಿಯರು ಆರತಿಯನ್ನು ಬೆಳಗುತ್ತಾರೆ.

ಮುತ್ತಿನ ಸತ್ತುಗೆ, ಮುತ್ತಿನ ಗೊಂಡೆಯಿಂದ ಕೂಡಿದ ರಥವನ್ನೇರಿ ಬಲೀಂದ್ರ ಬರುತ್ತಾನೆ. ಅವನಿಗೆ ಮುತ್ತಿನಾರತಿಯನ್ನು ಬೆಳಗುತ್ತಾರೆ.

ಭಾಗ್ಯವಂತ ಬಲೀಂದ್ರ ಬರುವ ಹಾದಿಯಲ್ಲಿ ಆತನಿಗೆ ಪ್ರಿಯವಾದ ಮೂಲಂಗಿ, ಮುಡಿಯಾಳ, ಪಚ್ಚೆ ನೆಟ್ಟಿದ್ದಾರೆ. ಆತ ಬರುವ ಹಾದಿಯಲ್ಲಿ ಸಣ್ಣಕ್ಕಿ ಭತ್ತ ಬೆಳೆದಿದ್ದಾರೆ. ಆತ ಬರುವ ದಾರಿಯಲ್ಲಿ ಸಣ್ಣಕ್ಕಿ ಮುಡಿ ಇಡುವರು. ಆತ ಮನೆಗೆ ಬಂದು ಭಾಗ್ಯವನ್ನು ತಂದಿದ್ದಾನೆ.

ಬಲೀಂದ್ರನನ್ನು ಮತ್ತು ಬಲೀಂದ್ರನ ಆರಾಧನೆಯನ್ನು ಕುರಿತು ಹೊನ್ನಾವರ ತಾಲೂಕಿನ ಅಪ್ಪಿಕೇರಿಯ ಕಲಾವಿದೆ ಗಂಗೆ ಅವರೊಡನೆ ಸುದೀರ್ಘವಾಗಿ ಮಾತನಾಡುತ್ತಿದ್ದಾಗ ಗಣಪತಿ ಮತ್ತು ಬಲೀಂದ್ರ– ಈ ಇಬ್ಬರು ದೈವಗಳ ಬಗ್ಗೆ ಮತ್ತು ಆ ದೈವಗಳು ಇಷ್ಟಪಡುವ ಭಕ್ತರ ಮನೆಗಳ ಹಬ್ಬದೂಟದ ಬಗ್ಗೆ ಹೇಳಿದ ವಿನೋದಪೂರ್ಣ ಕಥೆಯನ್ನು ಇಲ್ಲಿ ಪ್ರಸ್ತಾಪಿಸಲೇಬೇಕು. ಆ ಕಥೆಯ ವಿವರ ಹೀಗಿದೆ.

ಅದಾಗ ತಾನೆ ಗಣೇಶ ಚೌತಿ ಮುಗಿದಿತ್ತು. ಬ್ರಾಹ್ಮಣರು ಮತ್ತು ಭಟ್ಟರ ಮನೆಯ ಕಡುಬು, ಕಜ್ಜಾಯ, ಹೋಳಿಗೆ ತಿಂದು ಡುಮ್ಮ ಹೊಟ್ಟೆಯ ಗಣಪತಿ ಹೊಟ್ಟೆ ಸವರುತ್ತಾ ಬರುತ್ತಿದ್ದ. ಅತ್ತ ಕಡೆಯಿಂದ ಬಲೀಂದ್ರ ಚಕ್ರವರ್ತಿ ತನ್ನ ಹಬ್ಬಕ್ಕಾಗಿ ಬರುತ್ತಿದ್ದ. ಈ ಇಬ್ಬರೂ ಚಂದಾವರದ ಕೆರೆಯ ಏರಿ ಮೇಲೆ ಭೇಟಿಯಾದರು. ಗಣಪತಿ ಬ್ರಾಹ್ಮಣರ ಮನೆಯ ಭೋಜನವನ್ನು ಪರಿಪರಿಯಾಗಿ ಹೊಗಳಿ, ಅದು ಅಜೀರ್ಣವಾದ ಪರಿಸ್ಥಿತಿಯನ್ನು ನಿವೇದಿಸಿಕೊಂಡ. ಅದಕ್ಕೆ ಬಲೀಂದ್ರ ನಕ್ಕುಬಿಟ್ಟ. ಯಾಕೆ ನಗುತ್ತೀಯ ಎಂದು ಗಣೇಶ ಕೇಳಿದ. ಅದಕ್ಕೆ ಬಲೀಂದ್ರ "ನಗದೆ ಮತ್ತೇನು ಮಾಡಬೇಕು. ಬ್ರಾಹ್ಮಣರ ಮನೆಯ ಊಟ ಎಂದರೆ ಹಾಗೇನೆ. ಅದು ಅಜೀರ್ಣ. ಹೊಟ್ಟೆಯನ್ನು ಹಾಳುಮಾಡುತ್ತದೆ. ಅದಕ್ಕಾಗಿಯೇ ನೀನು ಹೊಟ್ಟೆನೋವು ತಾಳಲಾರದೆ ಪ್ರತಿ ವರ್ಷ ನೀರಿಗೆ ಬಿದ್ದು ಸತ್ತು ಮತ್ತೆ ಹುಟ್ಟುತ್ತೀಯ. ಆದರೆ, ನನ್ನನ್ನು ನೋಡು, ನಾನು ಭಟ್ಟರ ಮನೆಗೂ ಹೋಗುವುದಿಲ್ಲ, ಶೆಟ್ಟರ ಮನೆಗೂ ಹೋಗುವುದಿಲ್ಲ.

PDF created with pdfFactory Pro trial version www.pdffactory.com

ನಾನು ನೇರವಾಗಿ ನನ್ನ ಮಕ್ಕಳಾದ ಹಾಲಕ್ಕಿ ಒಕ್ಕಲಿಗರ ಮನೆಗೆ ಹೋಗುತ್ತೇನೆ. ಅವರು ನನಗೆ ಕಡುಬು ಕಜ್ಜಾಯ ಕೊಡುವುದಿಲ್ಲ. ಬದಲಾಗಿ, ಐದು ರೀತಿಯ ಗಿಡಮೂಲಿಕೆಗಳಿಂದ ಮಾಡಿದ ಕಷಾಯ ಕೊಡುತ್ತಾರೆ. ಅದನ್ನು ಕುಡಿದರೆ ಎಂಥವರ ಆರೋಗ್ಯವೂ ವೃದ್ಧಿಸುತ್ತದೆ. ವರ್ಷಕ್ಕೊಂದು ಸಲ ಅದನ್ನು ಕುಡಿದವನ ದೇಹ ಶಕ್ತಿದಾಯಕವಾಗುತ್ತದೆ. ಆದ್ದರಿಂದ ಅದನ್ನು ನಾನೂ ಕುಡಿದು, ನನ್ನ ಮಕ್ಕಳಾದ ಹಾಲಕ್ಕಿ ಒಕ್ಕಲಿಗರಿಗೂ ಕುಡಿಸುತ್ತೇನೆ" ಎಂದು ಹೇಳಿ ಬಲೀಂದ್ರ ನೇರವಾಗಿ ಹಾಲಕ್ಕಿಗಳ ಮನೆಗೆ ಬರುತ್ತಾನಂತೆ.

ಭಟ್ಟರ ಮನೆಯ ಕಡುಬು ಕಜ್ಜಾಯಗಳನ್ನು ತಿನ್ನುವ ಗಣಪತಿ ಹೊಟ್ಟೆ ಊದಿಸಿಕೊಂಡು ಮೈಯೆಲ್ಲಾ ಅನಾರೋಗ್ಯವೇ ಆಗಿ, ಪ್ರತಿ ವರ್ಷ ನೀರಿನಲ್ಲಿ ಸತ್ತು ಮತ್ತೆ ಮಣ್ಣಿನಲ್ಲಿ ಹುಟ್ಟುತ್ತಾನೆ. ಆದರೆ ಬಲೀಂದ್ರ ಒಬ್ಬ ಯೋಗಿ. ಅವನು ಅವಧೂತನಂತೆ ಪಾತಾಳದಿಂದ ಉದ್ಭವಿಸಿ, ತನ್ನ ಮಕ್ಕಳಾದ ಹಾಲಕ್ಕಿ ಒಕ್ಕಲಿಗರ ಮನೆಯ ಆರೋಗ್ಯಪೂರ್ಣ ಕಷಾಯ ಕುಡಿದು, ಸಮೃದ್ಧಿಯನ್ನು ಹಾರೈಸಿ ಸಂತಸದಿಂದ ಹಿಂತಿರುಗುತ್ತಾನೆ. ದುಡಿಯುವ ವರ್ಗದ ಜನರು ಕಟ್ಟಿದ ಈ ಕಥೆ ಕುಂತುಣ್ಣುವ ಜನರ ವೈಭವವನ್ನು ತುಂಬಾ ಮಾರ್ಮಿಕವಾಗಿ ತಿರಸ್ಕರಿಸಿ, ತಮ್ಮ ಸರಳತೆಯೇ ಶ್ರೇಷ್ಠ ಎಂದು ಸಾರುತ್ತಾರೆ.

೩

ಮಾತೃಮೂಲ ಪರಂಪರೆ ಮತ್ತು ಮಾತೃದೇವತೆಯರು

ತಾಯಿ ಅಪ್ಪಟ ಸತ್ಯದ ಒಂದು ರೂಪ. ಆದರೆ ತಂದೆ ಸತ್ಯಕ್ಕೆ ಹತ್ತಿರಾದವನು. ಹಾಗೆಂದು ಅವನೇ ಸತ್ಯ ಎಂದು ಹೇಳುವ ಹಾಗಿಲ್ಲ. ಒಂದು ಮಗುವಿನ ತಾಯಿ ಯಾರು ಎಂಬುದು ಅದನ್ನು ಹಡೆದವಳಿಗೆ ಮಾತ್ರ ಗೊತ್ತಿರುತ್ತದೆ. ಅದರ ತಂದೆ ಎನಿಸಿಕೊಂಡವನು ಹೌದಿರಬಹುದು, ಅಲ್ಲದಿರಲೂಬಹುದು. ಅದ್ದರಿಂದ 'ತಾಯಿಯೇ ಸತ್ಯ' ಎಂಬ ಮಾತೊಂದಿದೆ. ಈ ಮಾತನ್ನು ನಾನು ಆಧುನಿಕ ಕಲ್ಪನೆಯ ಪಾತಿವ್ರತ್ಯದ ದೃಷ್ಟಿಯಿಂದ ಹೇಳುತ್ತಿಲ್ಲ. ಮಾನವನ ಇತಿಹಾಸದಲ್ಲಿ ತಂದೆ ಎನ್ನುವವನ ಸ್ಥಾನ ಎಷ್ಟು ಗೌಣವಾಗಿತ್ತು ಮತ್ತು ಈಗಲೂ ಅದು ವಾಸ್ತವ ಅಲ್ಲವೇ ಎಂಬ ಜಿಜ್ಞಾಸೆಯಿಂದ ಹೇಳುತ್ತಿದ್ದೇನೆ. ಖ್ಯಾತ ಮಾನವಶಾಸ್ತ್ರಜ್ಞ ಶ್ರೀ ವಾತ್ಸವ ಅವರು ಗುರುತಿಸುವಂತೆ "ಭಾರತೀಯ ಪರಂಪರೆ ಆರಂಭದಿಂದಲೂ ಸ್ತ್ರೀಯನ್ನು ಆರಾಧಿಸುತ್ತಾ ಬಂದಿದೆ. ತಾಯಿಯಾದವಳು ಎಂದಿಗೂ ತಂದೆಗಿಂತ ಕೀಳಾದವಳಾಗಿರಲಿಲ್ಲ. ಆದರೆ ತಂದೆ ಎಷ್ಟೋ ವೇಳೆಯವರೆಗೆ ಅವಳಿಗಿಂತ ಕಡಿಮೆ ದರ್ಜೆಯವನಾಗಿ ಬಾಳಿದ್ದಿದೆ. ಮಕ್ಕಳನ್ನು ಹೆರುವ ಮತ್ತು ಸಾಕುವ ಅವಳ ಶಕ್ತಿಗಾಗಿಯೇ ಅವಳನ್ನು ಉತ್ತುಂಗ ಸ್ಥಾನದಲ್ಲಿಟ್ಟು ಗೌರವಿಸುತ್ತಾ ಬರಲಾಗಿದೆ. ಆದ್ದರಿಂದಲೇ ಶಾಕ್ತಪಂಥ ಒಂದು ಪ್ರಮುಖ ಪಂಥವಾಗಿ ಈ ದೇಶದಲ್ಲಿ ಬೆಳೆದು ಬಂತು ಮತ್ತು ಅದು ಅದೇ ಸ್ಥಾನಮಾನದಲ್ಲಿ ಮುಂದುವರಿಯುತ್ತಿದೆ."[೧೩]

ಹೀಗೆ ಮಾತೃವಿನಿಂದ ಮೊದಲಾದ ಮಾನವ ಜೀವನ ಮಾತೃವಿನ ಆಸರೆಯಲ್ಲಿಯೇ ಸಾವಿರಾರು ವರ್ಷಗಳನ್ನು ಕಳೆದಿದೆ. ಬೇಟೆಯ ಯುಗದಲ್ಲಿ ಗಂಡಸಾದವನು ಬೇಟೆಗಾಗಿ ಹೊರಹೋದಾಗ, ಹೆಣ್ಣು ಆಹಾರ ಸಂಗ್ರಹಣೆಯಲ್ಲಿ ತೊಡಗುತ್ತಿದ್ದಳು. ತನ್ನ ಮಕ್ಕಳು ಮರಿಗಳ ಪೋಷಣೆ ಮಾಡುತ್ತಲೇ ತನಗೆ ದಕ್ಕುತ್ತಿದ್ದ ಅಗತ್ಯ ವಸ್ತುಗಳನ್ನು ಶೇಖರಿಸುವ ಕೆಲಸ ಅವಳದಾಗಿತ್ತು. ಬೇಟೆ ಎಂದೋ

PDF created with pdfFactory Pro trial version www.pdffactory.com

ಎಲ್ಲಿಯೋ ಹೋಗಿ ಮತ್ಯಾವಾಗಲೋ ಬರುತ್ತಿದ್ದ ಗಂಡುಮಕ್ಕಳ ಪಾಲಿಗೆ ಅಪರಿಚಿತನೇ. ಅಷ್ಟಲ್ಲದೇ ಅಂದಿನ ಜೀವನದಲ್ಲಿ ಇಂಥವನೇ ತಂದೆ ಎಂಬ ಪದ್ಧತಿಯೇ ಇರಲಿಲ್ಲ. ಸಮೂಹದ ಎಲ್ಲರೂ ಎಲ್ಲರಿಗೂ ಗಂಡಂದಿರೇ. ಎಲ್ಲರೂ ಎಲ್ಲರಿಗೂ ಹೆಂಡಂದಿರೇ. ಆದ್ದರಿಂದ ಯಾವ ಗರ್ಭದಲ್ಲಿ ಮಗುವಿನ ಜನನವಾಗುತ್ತದೋ ಅವಳು ಆ ಮಗುವಿನ ತಾಯಿ. ಆದರೆ ತಂದೆ ಯಾರೆಂಬುದು ಯಾರಿಗೂ ಗೊತ್ತಿಲ್ಲ. ತಾಯಿಯಾದವಳಿಗೆ ನಿರ್ದಿಷ್ಟ ಗಂಡೊಂದು ತನ್ನ ಮಗುವಿಗೆ ಹುಟ್ಟಿಗೆ ಕಾರಣ ಎಂಬುದು ಗೊತ್ತಿದ್ದರೂ ಅಂದಿನ ಸಮಾಜದಲ್ಲಿ ಅದು ನಗಣ್ಯ. ಯಾಕೆಂದರೆ ಅದು ಮಾತೃಮೂಲ ಕುಟುಂಬ. ಹೀಗೆ ಆಹಾರ ಸಂಗ್ರಹಣೆ ಮತ್ತು ಅದನ್ನು ಶೇಖರಿಸಿ ಇಡುವ ಕೆಲಸ ನಿರ್ವಹಿಸುತ್ತಿದ್ದ ಹೆಣ್ಣು ಆರ್ಥಿಕ ಚಟುವಟಿಕೆಯಲ್ಲಿಯೂ ಮುಖ್ಯವಾಗುತ್ತಿದ್ದಳು. ಯಾಕೆಂದರೆ ಬೇಟೆಯಲ್ಲಿ ತಂದ ಮಾಂಸ ತಾತ್ಕಾಲಿಕ ಹಸಿವನ್ನು ನೀಗಿಸುತ್ತಿತ್ತಾದರೆ, ಸಂಗ್ರಹಿಸಿಟ್ಟ ಆಹಾರದ ಸರಕುಗಳು ಎಲ್ಲ ಕಾಲದಲ್ಲೂ ತಲೆ ಕಾಯುತ್ತಿದ್ದವು. ಮಾತೃವಿನ ಆರಾಧನೆ ಬಹುಶಃ ಈ ಹಂತದಿಂದಲೇ ಆರಂಭವಾಯಿತೆನಿಸುತ್ತದೆ. "ಆಹಾರ ಸಂಗ್ರಹಣಾ ಹಂತದಿಂದ ಆಹಾರ ಉತ್ಪಾದನಾ ಹಂತಕ್ಕೆ ಸಾಗುವಲ್ಲಿ ಉಂಟಾಗುವ ಮೊದಲ ಬದಲಾವಣೆ ಎಂದರೆ ಆಹಾರವನ್ನು ಕೆಡದಂತೆ ಸಂಗ್ರಹಿಸುವ ಪರಿಕರಗಳನ್ನು ತಯಾರಿಸಿಕೊಳ್ಳುವುದೇ ಆಗಿದೆ. ಇದರಿಂದ ಆಹಾರ ಸಂಗ್ರಹಣೆಯ ಅಪವ್ಯಯದ ಭಯವು ಕಡಿಮೆಯಾಗಿ ಬದುಕು ಒಂದಿಷ್ಟು ಸರಾಗಗೊಳ್ಳುತ್ತದೆ. ಮಡಿಕೆ ಕುಡಿಕೆಗಳು, ಬುಟ್ಟಿಗಳು ಈ ಪ್ರಯತ್ನದಿಂದಲೇ ಹುಟ್ಟಿಕೊಳ್ಳುತ್ತವೆ. ಬಹುಮಟ್ಟಿಗೆ ಇವನ್ನು ಹೆಂಗಸರೇ ತಯಾರಿಸುತ್ತಾರೆ. ಮಡಿಕೆ ಕುಡಿಕೆಗಳು ಆಹಾರವನ್ನು ಕೆಡದಂತೆ ಕಾಪಾಡುವ ಒಂದು ಉತ್ಪಾದನಾ ಸಾಧನವಾಗಿ ರೂಪು ತಳೆಯಿತೆಂಬ ಕಾರಣದಿಂದಲೇ ಅವು ಮಾತೃದೇವತೆಗಳ ಪೂಜೆಯ ಮುಖ್ಯ ಭಾಗವೂ ಆಗುತ್ತವೆ. ಇಂದಿಗೂ ಮಾತೃದೇವತೆಯ ಹೆಸರಿನಲ್ಲೇ ನಡೆಯುವ "ಬೋಗಿಲು"ಗಳಂತಹ ಹಬ್ಬಗಳಲ್ಲಿ ಮಡಿಕೆ ಕುಡಿಕೆಗಳಿಗೆ ಪ್ರಧಾನ ಸ್ಥಾನವಿರುವುದನ್ನು ಕಾಣಬಹುದಾಗಿದೆ. ಮಡಿಕೆಗಳು ಮಾತೃದೇವತೆಗಳ ಆರಾಧನಾ ವಿಧಿಗಳಲ್ಲಿ ಪ್ರಧಾನ ಪಾತ್ರವನ್ನು ಪಡೆಯುತ್ತವಷ್ಟೇ ಅಲ್ಲದೆ ಎಷ್ಟೋ ವೇಳೆ ಸ್ವತಃ ಅವು ಮಾತೃದೇವತೆಗಳ ಪ್ರತಿ ರೂಪಗಳಾಗಿ ನೇರವಾಗಿ ಪೂಜೆಗೊಳಗಾಗುತ್ತವೆ. ಪ್ರಾಚೀನ ಕಾಲದಿಂದ ಈ ವರೆಗೂ ಮಡಿಕೆಗಳನ್ನು ತಯಾರಿಸುವ ಕುಂಬಾರರು ಮಡಿಕೆಯ ಕತ್ತಿನ ಭಾಗದಲ್ಲಿ ಅಲಂಕಾರದ ಕುಸುರಿ ಕೆಲಸವನ್ನು ಮಾಡುತ್ತಾರೆ. ಅದು ಸ್ಪಷ್ಟವಾಗಿ ಸ್ತ್ರೀತ್ವವನ್ನು ಸೂಚಿಸುವಂಥದ್ದಾಗಿರುತ್ತದೆ. ಸತ್ತವರು ಮತ್ತೆ ತಾಯಿಯ ಗರ್ಭವನ್ನು ಸೇರಿಕೊಳ್ಳುತ್ತಾರೆ ಎಂಬ ನಂಬಿಕೆಯಿಂದಾಗಿ, ಬಹು ಪ್ರಾಚೀನ ಸಮಾಜಗಳಲ್ಲಿ ಸತ್ತವರ ದೇಹಗಳನ್ನು ತಾಯಿಯ ಗರ್ಭದ ಸಂಕೇತವಾದ ಮಡಿಕೆಗಳಲ್ಲಿಟ್ಟು ಹೂಳುತ್ತಿದ್ದರು."[೧೪]

ಹೀಗೆ ಆಹಾರ ಸಂಗ್ರಹಣೆಯ ಸಮಯದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿದ ಸ್ತ್ರೀಯ ಸ್ಥಾನಮಾನ ತನ್ನ ಸೃಷ್ಟಿ ಶಕ್ತಿಯ ಜೊತೆಗೆ ಆಹಾರ ರಕ್ಷಣಾ ಶಕ್ತಿಯನ್ನು ಒಂದುಗೂಡಿಸಿಕೊಂಡು, ಆರ್ಥಿಕ ಚಟುವಟಿಕೆಯ ಆರಂಭಿಕ ಹಂತದ ಉದಯಕ್ಕೆ ಕಾರಣಳಾದಳು.ಕೊಸಾಂಬಿಯವರ ಪ್ರಕಾರ ಈ ಹಂತವೇ ಮಾತೃದೇವತೆಯ ಉಗಮಕ್ಕೂ ಕಾರಣವಾಗಿರಬಹುದು. ಹೀಗೆ ಉಗಮಗೊಂಡ ದೇವತೆಯನ್ನು ಅಲೆಮಾರಿ ಜನರು ತಮ್ಮ ಕಾರ್ಯಕಲಾಪಗಳನ್ನು ಮುಗಿಸಿಬಂದು ಸೇರುತ್ತಿದ್ದ ಕೂಡುಹಾದಿಗಳಲ್ಲಿ ಪ್ರತಿಷ್ಠಾಪಿಸುತ್ತಿದ್ದರು. ಅದಕ್ಕೆ ನರಬಲಿ ಅಥವಾ ರಕ್ತಬಲಿಯನ್ನು ನೀಡಲಾಗುತ್ತಿತ್ತು. "ಈ ಮಾತೃದೇವತಾ ಪಂಥದ ಜನಪದ ರೂಪಗಳೇ ಗ್ರಾಮದೇವತೆಗಳು" ಎಂಬುದು ದೇವಿಪ್ರಸಾದ್ ಚಟ್ಟೋಪಾಧ್ಯಾಯ ಅವರ ಅಭಿಪ್ರಾಯ.

ಗಂಡು ಹೀಗೆ ಬೇಟೆಗೆ ಹೊರಡುತ್ತಿದ್ದ ಸಂದರ್ಭದಲ್ಲಿಯೇ ಹೆಣ್ಣು ಕೃಷಿಯನ್ನು ಅನ್ವೇಷಿಸಿದಳು ಎಂಬುದನ್ನು ಮತ್ತೊಂದು ಸಿದ್ಧಾಂತ. ವಿವಿಧ ರೀತಿಯ ಸಸ್ಯಾಹಾರಗಳನ್ನು ಅವಳು ಸಂಗ್ರಹಿಸುತ್ತಿದ್ದಳಾದ್ದರಿಂದ, ಬೀಜ, ಹಣ್ಣು, ಸೊಪ್ಪು, ಗೆಡ್ಡೆ, ಗೆಣಸುಗಳನ್ನು ಕಲೆ ಹಾಕುತ್ತಿದ್ದಳಾದ್ದರಿಂದ, ಅದನ್ನು ನೆಟ್ಟು ಬೆಳೆಸುವ ಅನ್ವೇಷಣೆ ಅವಳಿಂದಲೇ ಆಗಿರುವುದು ಅತ್ಯಂತ ಸಹಜವೇ. ಹೀಗಾಗಿ "ಹೆಣ್ಣಿನ ಗರ್ಭಧಾರಣೆ ಮತ್ತು ಭೂಮಿಯ ಸಸ್ಯಧಾರಣೆ ಇವೆರಡಕ್ಕೂ ಸಾಮ್ಯತೆಯನ್ನು ಕಂಡುಕೊಂಡ ಆದಿಮಾನವ ಹೆಣ್ಣು ಮತ್ತು ಭೂಮಿ ಇವೆರಡು ಪೂಜ್ಯ ವಸ್ತುವೆಂದು ಭಾವಿಸಿದ. ಸಮೃದ್ಧಿಯ ಆಚರಣೆಯಾಗಿ ಮಾಟ ರೂಪುಗೊಂಡಿತು."[೧೫] ಎಂಬುದು ಇಲ್ಲಿ ಗಮನಿಸಬೇಕಾದ ಅಂಶ.

"ಹರಪ್ಪ ಸಂಸ್ಕೃತಿಯಲ್ಲಿ ಒಂದು ಕುತೂಹಲಕರವಾದ ಮುದ್ರೆ ದೊರೆತಿದ್ದು ಇದು ಕೃಷಿ ದೃಶ್ಯಕ್ಕೆ ಸಂಬಂಧಿಸಿದ್ದಾಗಿದೆ. ಈ ಮುದ್ರಿಕೆಯಲ್ಲಿ ಸ್ತ್ರೀಯ ವಿಗ್ರಹವಿದ್ದು ಆಕೆಯ ಗರ್ಭದಿಂದ ಒಂದು ಸಸ್ಯವು ಹುಟ್ಟುತ್ತಿರುವಂತೆ ಚಿತ್ರಿಸಲಾಗಿದೆ. ಇದು ಇನ್ನೊಂದರ ಬದಿಯಲ್ಲಿ ಸ್ತ್ರೀ ಪುರುಷರ ಚಿತ್ರಗಳಿವೆ. ಒಬ್ಬ ಮನುಷ್ಯನು ನೇಗಿಲಿನಂಥ ಆಯುಧವನ್ನು ಹಿಡಿದಿದ್ದಾನೆ. ಈ ಚಿತ್ರದಲ್ಲಿರುವ ಮನುಷ್ಯ ಉಳುಮೆ ಮಾಡುವ ರೈತನೆಂದು ಭಾವಿಸಲಾಗಿದೆ. ಗರ್ಭದಿಂದ ಸಸ್ಯವು ಹೊರಹೊಮ್ಮುತ್ತಿರುವ ಸ್ತ್ರೀ ಚಿತ್ರವನ್ನು ಮಾತೃದೇವತೆಯಂದು ಹೇಳಲಾಗಿದೆ. ಈಕೆಯನ್ನು ಶಾಕಾಂಬರಿ ಎಂದು ಗುರುತಿಸುತ್ತಾರೆ. ಹೀಗೆ ಸಸ್ಯಸಂಬಂಧಿಯಾದ ದೇವತೆಯ ಇನ್ನೊಂದು ಮುದ್ರಿಕೆಯು ಹರಪ್ಪ ಸಂಸ್ಕೃತಿಯಲ್ಲೇ ದೊರಕಿದೆ. ಈ ಚಿತ್ರ ಒಂದು ಹೆಣ್ಣಿನದಾಗಿದ್ದು ಈಕೆ ಒಂದು ವೃಕ್ಷದ ಎರಡು ಕೊಂಬೆಗಳ ಮೇಲೆ ನಿಂತಿದ್ದಾಳೆ. ಒಬ್ಬ ಭಕ್ತನು ಮರದ ಪಕ್ಕದಲ್ಲಿ ಭಾಗಿ ನಿಂತಿದ್ದಾನೆ. ಒಂದು ಮೇಕೆಯು ಭಕ್ತನ ಹಿಂದೆ ನಿಂತಿದೆ. ಇದರ

PDF created with pdfFactory Pro trial version www.pdffactory.com

ಕೆಳಭಾಗದಲ್ಲಿ ಏಳು ವಿಗ್ರಹಗಳನ್ನು ಕಾಣಬಹುದು. ಈ ಚಿತ್ರದ ಹೆಣ್ಣಿನ ವಿಗ್ರಹವನ್ನು ಮಾತೃದೇವತೆಯೆಂದು ಭಾವಿಸಲಾಗಿದೆ. ಇದರಲ್ಲಿ ಏಳು ವಿಗ್ರಹಗಳು ಕಡಿಮೆ ದರ್ಜೆಯ ಏಳು ದೇವತೆಗಳೆಂದು ಭಾವಿಸಲಾಗಿದೆ. ಇಲ್ಲಿರುವ ಮೇಕೆಗೆ ಮನುಷ್ಯನ ಮುಖವಿರುವುದರಿಂದ ಇದು ಬಲಿಗಾಗಿ ತಂದ ಪ್ರಾಣಿಯಲ್ಲವೆಂದು ವಿದ್ವಾಂಸರು ಭಾವಿಸುತ್ತಾರೆ.[೧೬]

"ಭೂಮಿಯನ್ನು ತಾಯಿ ಎಂದೂ ಮಾನವರ ಮಾತೆ ಎಂದೂ ದೇವತೆ ತಾಯಿ ಎಂದೂ, ಅರಣ್ಯ, ಪ್ರಾಣಿ, ಪಕ್ಷಿ, ಇವುಗಳ ಮಾತೃವೆಂದೂ ಪೂಜಿಸಲಾಗಿದೆ. ಸ್ತನ, ಗರ್ಭ, ಯೋನಿ ಇವುಗಳನ್ನು ಮಾತೃದೇವತೆಯ ಸಂಕೇತಗಳೆಂದು ಅವರು ಭಾವಿಸಿದ್ದರು. ಈ ಮೂರು ಅಂಗಗಳು ಮುಖ್ಯ ಮೂರು ಚಟುವಟಿಕೆಗಳನ್ನು ಮಾಡುತ್ತವೆ. ಅವು ಪಾಲನೆ, ಧಾರಣೆ ಮತ್ತು ಸೃಷ್ಟಿ. ಸಿಂಧೂ ಸಂಸ್ಕೃತಿಯಲ್ಲಿ ದೊರೆತಿರುವ ಉಗ್ರಾಕಾರದ ಕಲ್ಲುಗಳನ್ನು ಮಾತೃದೇವತೆಯ ಸೃಷ್ಟಿಯ ಅಂಗವಾದ ಯೋನಿ ಎಂದು ಭಾವಿಸಲಾಗಿದೆ."[೧೭]

ಈ ಸೃಷ್ಟಿಸಂಕೇತವಾದ ಯೋನಿಯನ್ನು ಬಹು ಹಿಂದಿನಿಂದಲೇ ಭಾರತದಲ್ಲಿ ಪೂಜಿಸಿಕೊಂಡು ಬರಲಾಗಿದೆ ಎಂಬುದಕ್ಕೆ ಹರಪ್ಪ ಮತ್ತು ಮಹೆಂಜದಾರೋಗಳಲ್ಲಿ ಸಿಕ್ಕಿರುವ ವಿಗ್ರಹಗಳೇ ಸಾಕ್ಷಿಯಾಗಿವೆ. ಅದರಲ್ಲಿಯೂ ಇಂಥ ವಿಗ್ರಹಗಳು ಕೃಷಿ ಯೋಗ್ಯ ಕಣಿವೆಗಳು ಮತ್ತು ನದಿ ಕೊಳ್ಳಗಳಲ್ಲಿ ಸಿಕ್ಕಿರುವುದು ಇನ್ನೂ ಹೆಚ್ಚಿನ ಜಿಜ್ಞಾಸೆಗೆ ನಮ್ಮನ್ನು ಒಳಪಡಿಸುತ್ತವೆ. ಕರ್ನಾಟಕದಾದ್ಯಂತ ಲಭ್ಯವಿರುವ ಲಜ್ಜಾಗೌರಿ ವಿಗ್ರಹಗಳಂತೂ ಅನಾದಿಕಾಲದಿಂದಲೂ ಪೂಜಿಸಲ್ಪಡುತ್ತಿರುವ 'ಯೋನಿ' ಶ್ರೇಷ್ಠತೆಯನ್ನು ಎತ್ತಿ ಹಿಡಿಯುತ್ತವೆ. "ಸೃಷ್ಟಿದೇವತೆಯ, ಆದಿಮಾತೆಯ ರೂಪವನ್ನು ಈ ವಿಗ್ರಹಗಳು ಪ್ರತಿನಿಧಿಸುತ್ತವೆ. ತಾನು ದಿನವೂ ನೋಡುತ್ತಿದ್ದ ಅನುಭವಿಸುತ್ತಿದ್ದ ಸೃಷ್ಟಿಯ ವ್ಯಾಪಾರಗಳನ್ನು ತನಗೆ ಪರಿಚಯವಿದ್ದ ವಾತಾವರಣದಲ್ಲಿ ಆದಿಮಾನವರು ಅರ್ಥೈಸಿಕೊಳ್ಳಲು ಯತ್ನಿಸಿದರು. ಕ್ರಮೇಣ ಮಳೆ ಬೆಳೆ ಸಮೃದ್ಧಿಯನ್ನು ಕೊಡಮಾಡುವ ಅದೃಶ್ಯ ಶಕ್ತಿಯನ್ನು ರೂಪಿಸಲು ಶ್ರಮಪಟ್ಟರು. ಸಂತತಿ ಬರಲು, ಅದು ಆಹಾರಾದಿಗಳನ್ನು ಪಡೆದು ಬೆಳೆಯಲು ಕಾರಣಳಾದ ಜನನಿಯನ್ನೇ ಬೃಹತ್ ಸೃಷ್ಟಿ ರೂಪದಲ್ಲಿ ಕಂಡರು, ಪೂಜಿಸಿದರು. ಸುಫಲತೆಗೆ ಅವಳನ್ನು ಪ್ರಾರ್ಥಿಸಿದರು. ಸೃಷ್ಟಿ–ಪುಷ್ಟಿ (ಜನನ ಹಾಗೂ ಪೋಷಣೆ)ಗೆ ಹೆಣ್ಣೇ ಕಾರಣ! ಅದರಂತೆ ಕಾಳು, ಹಣ್ಣು ಬೆಳೆಗೆ ಕಾರಣವಾದ ಭೂಮಿಯೂ ಹೆಣ್ಣು ದೇವತೆಯೇ! ಎಂಬ ಕಲ್ಪನೆ ಅವನಲ್ಲಿ ಸ್ಥಿರವಾಗಿ ಬೇರು ಬಿಟ್ಟ ಯುಗದಲ್ಲಿ ಈ ವಿಗ್ರಹಗಳ ಮೂಲವನ್ನು ಹುಡುಕಬಹುದು. ಚರಿತ್ರೆ ಹಾಗೂ ಉತ್ಖನನಗಳ ದೃಷ್ಟಿಯಿಂದ ಪ್ರಾಗೈತಿಹಾಸ ಕಾಲದಿಂದಲೂ ಇಂಥ ವಿಗ್ರಹಗಳು ಕಂಡು ಬರುತ್ತಿವೆ. ನಮ್ಮಲ್ಲಿ, ಮೂರು ಸಹಸ್ರ

ವರ್ಷಗಳಿಂದಲೂ ಸೃಷ್ಟಿಗೆ ಕಾರಣವಾದ ಭೂಮಾತೆಯ ಪೂಜೆ ಬಳಕೆಯಲ್ಲಿರುವುದನ್ನು ಗುರುತಿಸಬಹುದು. ಯೋನಿ ಹಾಗೂ ಸ್ತನಗಳಿಗೆ ಪ್ರಾಧಾನ್ಯ ಕೊಟ್ಟ ಈ ವಿಗ್ರಹಗಳು ಸುಫಲತೆ ಸಮೃದ್ಧಿಗಳ ಆರಾಧ್ಯ ದೇವತೆಯ ರೂಪಗಳಾಗಿವೆ. ಕೆಲವು ಪ್ರಾದೇಶಿಕ ಬದಲಾವಣೆಗಳನ್ನು ಹೊಂದಿದರೂ, ಇಷ್ಟ ಫಲದಾಯಿನಿಯ ರೂಪದಲ್ಲಿ ಭಾವುಕರಿಂದ ಪೂಜಿಸಲ್ಪಡುವ ಜಗಜ್ಜನನಿಯ ಪ್ರತೀಕವಾಗಿ ಮುಂದುವರೆದು ಪ್ರಾಚೀನ ಸಂಪ್ರದಾಯವನ್ನು ಪ್ರತಿನಿಧಿಸುತ್ತವೆ. ಇಂದಿಗೂ ಇದೇ ರೂಪದಲ್ಲಿ ಪೂಜಿಸಲ್ಪಡುವ ಸ್ತ್ರೀ ವಿಗ್ರಹಗಳು ಅಲ್ಲಲ್ಲಿ ಗುಡಿಯಲ್ಲಿದ್ದು, ಮಕ್ಕಳಾಗದವರು, ವ್ರತೋಪಾಸನಗಳನ್ನು ಕೈಗೊಂಡು ವಿಗ್ರಹದ ಯೋನಿ ಸ್ತನಗಳಿಗೆ ಬೆಣ್ಣೆ–ಸಿಂಧೂರಗಳ ಲೇಪದ ಅರ್ಚನೆಯ ವಿಧಾನ ಕೈಗೊಳ್ಳುತ್ತಾರೆ. ಉತ್ತರ ಕರ್ನಾಟಕದ ಕೆಲವಡೆಯಲ್ಲಿ 'ಲಜ್ಜಾಗೌರಿ' ಎಂದೇ ಈ ದೇವತೆಯನ್ನು ಗುರುತಿಸುತ್ತಾರೆ.

ಲಜ್ಜಾಗೌರಿಯ ವಿಗ್ರಹಗಳಲ್ಲಿ ಹಲವು ನದಿಕೊಳ್ಳ, ನಿರ್ಜನ ಕಣಿವೆಗಳಲ್ಲಿ ದೊರೆತಿದ್ದು, ಸಮೀಪದಲ್ಲೇ ಪ್ರಸಿದ್ಧ ಶಕ್ತಿದೇವತೆಯ ಉಪಾಸನಾ ಕೇಂದ್ರಗಳಿದ್ದದ್ದು ಕಂಡು ಬಂದಿದೆ. ಭೀಮಾನದಿ ಕೊಳ್ಳದ ಚಂದ್ರಲಾಂಬೆ, ಮಲಪ್ರಭೆಯ ಮಾಕೂಟೆಶ್ವರಿ (ಮಹಾ ಕೂಟೇಶ್ವರಿ), ಕೃಷ್ಣಾತೀರದ ಜೋಗುಳಾಂಬಾ ಇತ್ಯಾದಿ. ಇವು ತಾಂತ್ರಿಕರ ಪೂಜಾಸ್ಥಾನಗಳಾಗಿದ್ದವು. ಭಾರತದ ಪವಿತ್ರ ಸಾಹಿತ್ಯದಲ್ಲಿ ಶ್ರುತಿ, ಸ್ಮೃತಿ, ಪುರಾಣಗಳ ಬಳಿಕ ತಂತ್ರಶಾಸ್ತ್ರದ ಸ್ಥಾನ ಬರುತ್ತದೆ. ಇದರ ಉಗಮ, ವೇದಗಳಷ್ಟೇ ಹಳೆಯ ತಂತ್ರಾಗಮನಗಳಲ್ಲಿದ್ದು ಶೈವ, ವೈಷ್ಣವ, ಜೈನ, ಬೌದ್ಧಧರ್ಮಗಳೆಲ್ಲ ತಂತ್ರಶಾಸ್ತ್ರದ ಹಲವಾರು ಅಂಶಗಳನ್ನು ಹೊಂದಿದೆ. ತಾಂತ್ರಿಕರಲ್ಲಿ ಸೃಜನಶಕ್ತಿಯುಳ್ಳ ಸ್ತ್ರೀಗೆ ಉನ್ನತ ಸ್ಥಾನವಿದೆ. ಸ್ತ್ರೀ ರೂಪಿ ಶಕ್ತಿ ಪೂಜೆಗೆ ಪ್ರಾಧಾನ್ಯ. ಹೀಗಾಗಿ ಶಾಕ್ತ'ರೆನಿಸಿ ಕೊಳ್ಳುತ್ತಾರೆ. ಸ್ತ್ರೀತತ್ವಶಕ್ತಿಯು ಎಲ್ಲ ಸೃಷ್ಟಿಗೂ ಮೂಲವಾಗಿ ಯೋನಿ ರೂಪದಲ್ಲಿ ಆಕೆಯನ್ನು ಪೂಜಿಸುವುದು ಸಾಮಾನ್ಯ. ಯೋನಿರೂಪವೇ ಸೃಷ್ಟ್ಯಾತ್ಮಕ ಪರತತ್ವದ ಸಂಕೇತವಾಗಿದೆ. ಸೃಷ್ಟಿಕರ್ತೆಯಂತೆ ಲಯಕಾರಣಿಯೂ ಆಗಿದ್ದ ಶಕ್ತಿಯ ಪೂಜೆ ಭಾರತದಾದ್ಯಂತ ವಿವಿಧ ರೂಪಗಳಲ್ಲಿ ನಡೆದು ಬಂದಿತು.

ತಾಂತ್ರಿಕರ ಪೂಜಾಕ್ರಮದಲ್ಲಿ ಸ್ತ್ರೀಯರಿಗೆ ಪ್ರಧಾನ್ಯವಿದ್ದು ಕೆಲವೊಮ್ಮೆ ಶಾಕ್ತಪಂಥದ ಯೋಗಿನಿಯರೇ ತಾಂತ್ರಿಕ ವಿಧಾನಗಳು, ಮಂತ್ರಶಕ್ತಿಗಳಲ್ಲಿ ಮಿಗಿಲಾಗಿರುತ್ತಿದ್ದರು. ಹೆಣ್ಣಿನಲ್ಲಿ ದೈವಿಕತೆ ಕಂಡದ್ದು, ಜಾತಿಪಂಥ ಪದ್ಧತಿಯನ್ನು ಮೀರಿ ನಿಂತದ್ದು ಹಾಗೂ ವರ್ಗಸಮಾನತೆಯನ್ನು ಸಾಧಿಸಿದ್ದು ತಾಂತ್ರಿಕ ತತ್ವದ ಉತ್ತಮಾಂಶಗಳು. ಆದರೆ ಅವರಲ್ಲಿ ಹಲವರು ಬಾಹ್ಯಾಚರಣೆಗಳಲ್ಲೇ ಮಗ್ನರಾಗಿ, ಪಂಚ'ಮ'ಕಾರಗಳಿಗೆ ಮಹತ್ವ ನೀಡಿದ್ದು(ಮಾಂಸ, ಮತ್ಸ್ಯ, ಮುದ್ರೆ, ಮದ್ಯ ಮೈಥುನಗಳು ಪವಿತ್ರ ರೂಪದಲ್ಲಿ ಸಾಧನೆಯ ಅಂಗಗಳಾಗಿವೆ) ಇತರ ವೈದಿಕ ಮತಾನುಯಾಯಿಗಳು ಅವರನ್ನು ವಾಮಪಂಥೀಯ(ವಾಮಮಾರ್ಗಿ)ರೆಂದು ಹೀಗಳೆಯಲು ಕಾರಣವಾಯಿತು.

PDF created with pdfFactory Pro trial version www.pdffactory.com

ಶಂಕರಾಚಾರ್ಯರ ಧರ್ಮ ಸುಧಾರಣೆಯ ಕ್ರಮಗಳು ಪೂರ್ವ ಭಾರತದ ಮೇಲೆ ಅಷ್ಟೊಂದು ಪ್ರಭಾವ ಬೀರಿದಂತೆ ತೋರುವುದಿಲ್ಲ. ಅಲ್ಲಿ ಶಕ್ತಿಪೂಜೆ ಮೊದಲಿನಂತೆಯೇ ಮುಂದುವರಿದು ಅಸ್ಸಾಮದ ಕಾಮಾಖ್ಯಾ, ಜಾಗೃತ ಶಕ್ತಿ ದೇವತೆಯೆಂದು ಮುಂದುವರಿದು ಎಲ್ಲ ವರ್ಗಗಳ ಜನರ ಆರಾಧನೆಗೆ ಪಾತ್ರಳಾಗಿದ್ದಾಳೆ. ಇಲ್ಲಿ ಮುಖ್ಯವಾದದ್ದು ಈ ದೇವತೆಯ ಯೋನಿರೂಪ. ದೇವಾಲಯದ ಒಳಗಡೆ ಗುಹೆಯಲ್ಲಿ ಶಿಲೆಯೊಂದರ ಮೇಲೆ ಪ್ರತಿಷ್ಠಿತಳಾಗಿದ್ದಾಳೆ. ನೈಸರ್ಗಿಕ ಝರಿಯೊಂದು ಯೋನಿಭಾಗವನ್ನು ಸದಾ ಆರ್ದ್ರವಾಗಿಡುತ್ತದೆ. ಜ್ಯೇಷ್ಠ ಮಾಸದ ಕೊನೆಯಲ್ಲಿ ಅಥವಾ ಆಷಾಢದ ಮೊದಲಲ್ಲಿ ಬರುವ 'ಅಂಬುವಾಚಿ' ದೇವಿಯ ವಾರ್ಷಿಕ ಉತ್ಸವ ಮೊದಲಲ್ಲಿ ಆಚರಿಸಲ್ಪಡುತ್ತದೆ. ಆದಿಮಾತೆಯು ಕೃಷಿ ಸಂಬಂಧಿತ ಚಟುವಟಿಕೆಗಳನ್ನೆಲ್ಲಾ ಮೂರು ದಿನಗಳ ಕಾಲ ಸ್ಥಗಿತಗೊಳ್ಳಲು ಕಾರಣಳಾಗುತ್ತಾಳೆ! ಏಕೆಂದರೆ ಅಂಬುವಾಚಿ(ಅಂಬು=ಮಳೆ, ವಾಚಿ=ಅರಳುವುದು)ಯ ಅವಧಿಯಲ್ಲಿ ಭೂಮಿ ರಜಸ್ವಲೆಯಾಗುತ್ತಾಳೆ ಎಂದು ಆ ಜನರ ನಂಬಿಕೆ. ಆಗ ನೆಲಕ್ಕೆ ನೇಗಿಲು ಹತ್ತಕೂಡದು. ಭೂಮಿತಾಯಿಯನ್ನು ನೋಯಿಸಕೂಡದು. ಮೂರುದಿನ ಕಾಮಾಖ್ಯಾ ದೇವಾಲಯದ ಬಾಗಿಲು ಮುಚ್ಚಿರುತ್ತದೆ. ಆ ಬಳಿಕವೇ ದೇವಿಯ ದರ್ಶನ ಲಭ್ಯ. ಕೆಂಪು ಹೂ, ಕೆಂಪು ಬಟ್ಟೆ, ಕುಂಕುಮಗಳಿಂದ ದೇವಿಯನ್ನು ಅರ್ಚಿಸುತ್ತಾರೆ. ಅಪಾರ ಸಂಖ್ಯೆಯಲ್ಲಿ ಭಕ್ತಾದಿಗಳು ನೆರೆದಿದ್ದು ಕೆಂಪು ಬಟ್ಟೆಗಳ ಚೂರುಗಳ ಪ್ರಸಾದ ವಿನಿಯೋಗಕ್ಕೆ ಕಾದಿರುತ್ತಾರೆ. ಬಂಗಾಲದಲ್ಲಿ ಅಂಬುವಾಚಿಯ ಕಾಲ ವಿಶಿಷ್ಟವಾಗಿ ಆಚರಿಸಿದರೆ ಒರಿಸ್ಸಾದಲ್ಲಿಯೂ 'ರಜ ಉತ್ಸವ'ವು ಹೆಣ್ಣು ಮಕ್ಕಳ ಹಬ್ಬವಾಗಿದೆ. ಕಾಶ್ಮೀರದಲ್ಲಿಯೂ ಸೂರ್ಯಪತ್ನಿಯೆಂದು ಭೂಮಿದೇವಿಯ ಋತುಸ್ನಾನದ ಪೂಜೆಯನ್ನು ಸ್ತ್ರೀಯರೇ ಮಾಡುತ್ತಾರೆ. ಹೀಗೆ ಸೃಷ್ಟಿದೇವತೆಯ ಪೂಜೆ, ಭೂದೇವಿಯ ಪೂಜೆಯಲ್ಲಿ ಮಾರ್ಪಾಡಾಗಿ ಒಳ್ಳೆಯ ಫಸಲಿಗೆ ಆಕೆಯನ್ನು ಆರಾಧಿಸುವಲ್ಲಿ ರೂಪ ಹೊಂದಿದೆ.

ಈ ತನಕ ಲಭಿಸಿದ ಲಜ್ಜಾಗೌರಿಯ ಹೆಚ್ಚಿನ ವಿಗ್ರಹಗಳಲ್ಲಿ ಹೊಟ್ಟೆಯನ್ನು ಕುಂಭಾಕಾರದಲ್ಲಿ ಒಡಮೂಡಿಸಲಾಗಿದೆ. ಗರ್ಭಾಶಯದ ಪ್ರತೀಕವಾಗಿ ಪ್ರಾರಂಭವಾದ ಕುಂಭಪೂಜೆ ಅತ್ಯಂತ ಪ್ರಾಚೀನವಾಗಿದ್ದು ಭಾರತದ ಎಲ್ಲಾ ಮತಪಂಥಗಳಲ್ಲಿ ಪವಿತ್ರ ಅರ್ಚನೆಯ ಭಾಗವಾಗಿ ಮುಂದುವರಿದಿದೆ.

ಋಗ್ವೇದಕಾಲೀನ ಕಲ್ಪನೆಯಲ್ಲಿ ಆಕಾಶ(ದ್ಯಾ)ವೇ ತಂದೆ. ಭೂಮಿಯೇ ತಾಯಿ. ಇವರಿಬ್ಬರ ಮುಖಾಮುಖಿ ಸಮಾಗಮದಿಂದ ಭೂಮಿಯು ಗರ್ಭ ಧರಿಸಿ ಬಗೆಬಗೆಯ ಸೃಷ್ಟಿಜೀವಿಗಳಿಗೆ ಕಾರಣಳಾದಳು. ಇಲ್ಲಿ ಬರುವ 'ಉತ್ತಾನಚಮು' ಎಂಬ ಶಬ್ದವು ತೆರೆದ(ಮುಖಾಮುಖಿ) ಕುಂಭವೆಂದು ಅರ್ಥೈಸಲಾಗಿದೆ. ವಿಗ್ರಹರೂಪಿ

ಭೂಮಾತೆಯು ಕುಂಭಧಾರಿಣಿ ಎಂದು ಪೂಜೆಗೊಂಡದ್ದು ಆಶ್ಚರ್ಯವಲ್ಲ. ಪ್ರಾಗೈತಿಹಾಸಿಕ ಕಾಲದಲ್ಲೆಲ್ಲಾ ಕುಂಭಕರ್ಮವು ಹೆಣ್ಣುಮಕ್ಕಳ ಕೆಲಸವಾಗಿದ್ದು, ರೇಣುಕೆಯ ಕಥೆಯಲ್ಲಿ ಹಸಿಮಣ್ಣಿನ ಕೊಡ ಪ್ರಾತಿನಿಧಿಕವಾಗಿದೆ. ಎಲ್ಲಮ್ಮನ ಪೂಜೆಯಲ್ಲಿ ಕೊಡ ಹೊತ್ತು ಕುಣಿಯುವ ವಿಧಿ ಇದೆ. ಪೂರ್ಣಕುಂಭ(ಕಲಶ)ವು ಎಲ್ಲಾ ಉತ್ಸವಾದಿ ವಿಶೇಷ ಪ್ರಸಂಗಗಳಲ್ಲಿ ಆದ್ಯತೆ ಹೊಂದಿದೆ. ಶಕ್ತಿಪೂಜೆಗೆ ಪ್ರಾಧಾನ್ಯವಿರುವ ನವರಾತ್ರಿಯು ಘಟಸ್ಥಾಪನೆಯೊಂದಿಗೆ ಪ್ರಾರಂಭವಾಗುತ್ತದೆ. ಕುಂಭ ಅಥವಾ ಘಟದಲ್ಲಿ ಬಗೆಬಗೆಯ ಕಾಳುಗಳನ್ನು ಇಟ್ಟು ಮೊಳಕೆಯೊಡಿಸಿ ಪೂಜಿಸುವ ಕ್ರಮ ದೇಶದ ವಿವಿಧ ಭಾಗಗಳಲ್ಲಿದೆ. ವರಮಹಾಲಕ್ಷ್ಮಿಯ ಸಾಲಂಕೃತ ಕಲಶ ಪೂಜೆ, ಶ್ರಾವಣ ಮಾಸದ ವೈಶಿಷ್ಟ್ಯವಾಗಿ ಬೆಳೆದುಬಂದಿದೆ. ಮಹಾಲಕ್ಷ್ಮಿಯು ಭುವನೇಶ್ವರಿ ಅಥವಾ ಭೂಮಾತೆಯೇ!

ಬೆಂಗಳೂರಿಗೆ ಪರಿಚಿತವಿರುವ ಕರಗವು ಶಕ್ತಿಪೂಜೆಯಲ್ಲಿ ಸ್ತ್ರೀಯರ ಪ್ರಾಧಾನ್ಯವಿದ್ದ ಯುಗದ ಪಳೆಯುಳಿಕೆಯಾಗಿ ಮುಂದುವರಿದಿದೆ ಎಂಬುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಧರ್ಮರಾಯನ ಕರಗದ ಮುಖ್ಯ ಪೂಜಾರಿ ಸ್ತ್ರೀ ವೇಷವನ್ನು ತೊಡುವುದು ಮತ್ತು ದ್ರೌಪದಿಯು ಶಕ್ತಿಸ್ವರೂಪಿಣಿಯಾಗಿ ಪೂಜಿಸಲ್ಪಡುವುದು ಪ್ರಾಚೀನವಾದ ಮಹತ್ವದ ಸ್ತ್ರೀ ಕರ್ಮಕ್ಕೆ ನೀಡಿದ ಆದ್ಯತೆಯನ್ನು ಸೂಚಿಸುತ್ತದೆ. ನಮ್ಮ ದೇಶದ ಪೂಜಾ ವಿಧಾನಗಳು ಒಮ್ಮಿಂದೊಮ್ಮೆ ಕಣ್ಮರೆಯಾಗುವುದಿಲ್ಲ. ದೇವಾದಿದೇವತೆಗಳ ಸ್ವರೂಪ(ಅಲಂಕಾರ ವಿಶೇಷಗಳಿಂದ) ಅಥವಾ ಅರ್ಚಕ ವರ್ಗವು ಹಿಂದಿನ ಆಳರಸರ ಆಶ್ರಯಕ್ಕನುಗುಣವಾಗಿ ಬದಲಾದರೂ, ಸ್ಥಳ ಪುರಾಣಗಳು ಹಾಗೂ ಅರ್ಚನಾ ವಿಧಿಗಳ ಸಾಂಕೇತಿಕತೆಗಳು ಮುಂದುವರಿದೇ ಬರುತ್ತವೆ. ಇವುಗಳ ವಿಶೇಷ ಅಧ್ಯಯನ ಕೈಗೊಂಡಲ್ಲಿ ನಿಂತ ನೀರಾಗಿರದ, ಎಲ್ಲ ಕಾಲಗಳ ಬದಲಾವಣೆಗಳನ್ನು ಅರಗಿಸಿಕೊಳ್ಳಬಲ್ಲ, ಆದರೆ ಪ್ರಾಚೀನತೆಯನ್ನು ಬಿಟ್ಟು ಕೊಡದ ಭಾರತೀಯ ಪರಂಪರೆಯ ವೈಶಿಷ್ಟ್ಯಗಳನ್ನು ಅರಿಯಲು ಸಹಾಯವಾದೀತು."[೧೮]

ಕರ್ನಾಟಕ ಹಾಗೂ ತಮಿಳುನಾಡಿನಲ್ಲಿ ಬಹು ಜನಪ್ರಿಯವಾಗಿರುವ ಕರಗದ ಆಚರಣೆಯನ್ನು ನಾವು ಮತ್ತೆ ನೆನಪಿಸಿಕೊಳ್ಳಲೇಬೇಕು. ಈ ಕೃತಿಯ ಆರಂಭದ ಪುಟಗಳಲ್ಲಿ ನಾನು ನನ್ನೂರಿನ ಉಜ್ಜನಿ ಚೌಡಮ್ಮನ ಹಬ್ಬವನ್ನು ಪ್ರಸ್ತಾಪಿಸಿ, ಅಲ್ಲಿ ಎಲ್ಲಕ್ಕಿಂತ ಧೂಪುಂಡಿಗೆ ಮತ್ತು ಕರಗ ಕೊಂಡ ಹಾಯುತ್ತವೆ ಎಂದು ಹೇಳಿದ್ದೆ. ಜಲ ಮತ್ತು ಫಲದ ಸಂಕೇತವಾದ ಈ ಕರಗ, ಮೂಲದಲ್ಲಿ ಇದ್ದ 'ಕರಗದಮ್ಮ' ಅಲ್ಲದೇ ಮತ್ತೇನೂ ಅಲ್ಲ. ಅಂದರೆ ಕರ್ನಾಟಕ ಮತ್ತು ತಮಿಳುನಾಡಿನಲ್ಲಿ 'ಕರಗ'ವನ್ನು ಆದಿಶಕ್ತಿಯ ಪ್ರಾಚೀನ ರೂಪವೆಂದು ನಂಬಲಾಗಿತ್ತು. ಈ ಕರಗದ ಆರಾಧನೆಯನ್ನು

PDF created with pdfFactory Pro trial version www.pdffactory.com

ಕುರಿತು ಹಲವು ವಿದ್ವಾಂಸರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ, ಡಾ.ಚಂದ್ರಶೇಖರ ಕಂಬಾರರು "ಕರಗ ಶುದ್ಧಾಂಗವಾಗಿ ಪ್ರಾರಂಭದಲ್ಲಿ ಸಮೃದ್ಧಿ ಸೂಚಕವಾದ ಯೋನಿ ಪೂಜೆಯಾಗಿತ್ತೆಂಬುದರಲ್ಲಿ ಸಂದೇಹವಿಲ್ಲ" ಎಂದು ಹೇಳುತ್ತಾರೆ. ಡಾ. ಸಿದ್ದಲಿಂಗಯ್ಯನವರು "ಸ್ತ್ರೀಪ್ರಧಾನ ಆಚರಣೆಯೊಂದು ಪುರುಷ ಪ್ರಧಾನವಾಗಿ ನಮ್ಮ ಮುಂದಿದೆ" ಎಂದು ಕರಗದ ಇವತ್ತಿನ ಆಚರಣೆಯನ್ನು ಕುರಿತು ಹೇಳುತ್ತಾ, ಅದಕ್ಕೆ ಕಾರಣಗಳನ್ನು ಹೀಗೆ ನೀಡುತ್ತಾರೆ: "ಸಮೃದ್ಧಿ ಆಚರಣೆಗಳೆಲ್ಲವೂ ಸ್ತ್ರೀಸಂಬಂಧಿ ಆಚರಣೆಗಳಾದ್ದರಿಂದ ಅನೇಕ ಸಂಸ್ಕೃತಿಗಳಲ್ಲಿ ಗಂಡಿಗೆ ಆಚರಣೆಯ ಹಕ್ಕನ್ನು, ಆಚರಣೆಯ ಸ್ಥಳಕ್ಕೆ ಅವರ ಪ್ರವೇಶವನ್ನು ನಿರಾಕರಿಸಲಾಗಿದೆ. ಮಾನವ ಜೀವನವಿಧಾನ ಬದಲಾದಂತೆ ಕೃಷಿಯ ಮುಂದುವರಿದ ಘಟ್ಟಗಳಲ್ಲಿ ಗಂಡು ಮಹತ್ವದ ಸ್ಥಾನವನ್ನು ಗಳಿಸಿದ್ದಾನೆ. ಆಗ ಸಮೃದ್ಧಿಯ ಆಚರಣೆಗಳನ್ನು ನೆರವೇರಿಸುವ ಹೊಣೆಗಾರಿಕೆ ಅವನದಾಗುತ್ತದೆ. ಈ ತೊಡಕನ್ನು ನಿವಾರಿಸಲು ಗಂಡುಪೂಜಾರಿಯು ಸ್ತ್ರೀವೇಷಧಾರಿಯಾಗುತ್ತಾನೆ. ಆದ್ದರಿಂದ ಗಂಡು ಹೆಣ್ಣಿನಂತೆ ವರ್ತಿಸಲು ಸಾಂಸ್ಕೃತಿಕ ಕಾರಣಗಳೇ ಮುಖ್ಯ."

ಹೀಗೆ ಗಂಡುಪೂಜಾರಿಗಳು ಸ್ತ್ರೀವೇಷಧಾರಿಗಳಾಗುವ ಸಂಬಂಧ ನಮ್ಮ ಅನೇಕ ಗ್ರಾಮದೇವತೆಗಳ ಹಬ್ಬಗಳ ಸಂದರ್ಭದಲ್ಲಿಯೂ ಏರ್ಪಡುತ್ತದೆ ಎಂಬುದನ್ನು ನಾವು ಗಮನಿಸಲೇಬೇಕು. ಒಟ್ಟಿನಲ್ಲಿ ಈ ಕರಗದ ಆಚರಣೆ ದ್ರಾವಿಡ ಬುಡಕಟ್ಟುಗಳಲ್ಲಿ ಪ್ರಚಲಿತವಿದ್ದ ಫಲ ಸಮೃದ್ಧಿ ಆಚರಣೆಯ ಪಳೆಯುಳಿಕೆ ಎಂಬುದು ನಿಸ್ಸಂದೇಹವಾದ ಸಂಗತಿ.

ಹೀಗೆ ಪ್ರಾಚೀನ ಸಮಾಜಗಳಲ್ಲಿಯೇ ಆರಾಧನೆಗೊಳಪಟ್ಟ ಜಲ ಮತು ಫಲದ ಸಂಕೇತವೆನಿಸಿದ 'ಕುಂಭ–ಕಲಶ–ಕರಗ"ಗಳು ನಮ್ಮ ಬುಡಕಟ್ಟು ಸಮಾಜಗಳಲ್ಲಿ ಇಂದಿಗೂ ಪ್ರಚಲಿತದಲ್ಲಿವೆ ಎಂಬುದನ್ನು ಪ್ರತಿಪಾದಿಸುವುದೇ ಈ ಅಧ್ಯಾಯದ ಉದ್ದೇಶವಾಗಿತ್ತು. ಗೊಂಡರ ಮಂಡಲದಲ್ಲಿ ಪ್ರತಿಷ್ಠಾಪಿಸುವ 'ಕಲಶ' ಮತ್ತು ಮೇರರ ಕಾಡ್ಯನಾಟದ 'ಕಲಶಗಳು' ಹಾಗೂ ಬಲೀಂದ್ರ ಪೂಜೆಯ ಫಲಪುಷ್ಪಭರಿತ ಕಲಶ ಇವೆಲ್ಲವೂ ಇಂಥ ಸಂಕೇತಗಳೇ ಎಂಬುದು ನನ್ನ ಭಾವನೆ. ನಾನು ಈಗಾಗಲೇ ಪ್ರತಿಪಾದಿಸಿದಂತೆ ಅನಂತರದ ಹಲವು ಅವಸ್ತಾಂತರಗಳಲ್ಲಿ ಪುರುಷ ದೈವಗಳು ಅವತರಿಸಿದವು. ಈ ದೈವಾಂತರಗಳನ್ನು ಪ್ರಕೃತಿ ದೇವತೆಯರು, ಸಮೃದ್ಧಿ ದೇವತೆಯರು, ಚಟುವಟಿಕೆಯ ದೇವತೆಯರು, ಉನ್ನತ ದೇವತೆಯರು, ಜಗದಧಿಕಾರದ ದೇವತೆಯರು ಮುಂತಾಗಿ ವಿದ್ವಾಂಸರು ಹೆಸರಿಸಿದ್ದಾರೆ. ಆರಂಭದಲ್ಲಿ ಪ್ರಕೃತಿಯ ಅನುಕರಣೆ, ನಂತರದಲ್ಲಿ ಸರಳ ರೂಪದ ಕಂಬ ಮತು ಕುಂಭಗಳು, ಅನಂತರದಲ್ಲಿ ನಿರ್ದಿಷ್ಟ ರೂಪದ ಮೂರ್ತಿಗಳಾಗಿ ತಮ್ಮ ಇರುವನ್ನು ಗುರುತಿಸಿಕೊಂಡ ಈ ದೇವತೆಗಳ

ಚರಿತ್ರೆ ಸ್ತ್ರೀ ಮತ್ತು ಪುರುಷವರ್ಗಗಳ ನಡುವಿನ ಅನುಸಂಧಾನ ಹಾಗೂ ಸಾಂಸ್ಕೃತಿಕ ಘರ್ಷಣೆಯಾಗಿ ನಮ್ಮ ಕುತೂಹಲವನ್ನು ಕೆರಳಿಸುತ್ತವೆ. ಈ ಸಂದರ್ಭದಲ್ಲಿ ಪ್ರಖ್ಯಾತ ಚಿಂತಕ ಬರ್ಟ್ರೆಂಡ್ ರೆಸಲ್ ಅವರ ಕೆಲವು ಮಾತುಗಳನ್ನು ಉಲ್ಲೇಖಿಸುತ್ತಾ ಈ ಅಧ್ಯಾಯವನ್ನು ತಾತ್ಕಾಲಿಕವಾಗಿ ಮುಗಿಸಬಯಸುತ್ತೇನೆ.

"ಎಲ್ಲ ಆಧುನಿಕ ಸಮಾಜಗಳೂ ಪಿತೃಯಾಜಮಾನ್ಯ ಕುಟುಂಬಪದ್ಧತಿಯ ಮೇಲೆ ನೆಲೆಗೊಂಡಿರುವುದು ಹಾಗೂ ಈ ವ್ಯವಸ್ಥೆಯು ಸಾಧ್ಯವಾಗಲು ಸ್ತ್ರೀ ಪಾವಿತ್ರ್ಯದ ಕಲ್ಪನೆಯನ್ನು ಸೃಷ್ಟಿಸಿಕೊಂಡಿರುವುದು ಇವುಗಳನ್ನು ನೋಡಿದರೆ, ಪಿತೃತ್ವದ ಭಾವನೆಯನ್ನು ಉಂಟುಮಾಡಲು ಯಾವ ಸಹಜ ತುಡಿತಗಳು ಕಾರಣವಾಗಿವೆ ಎಂಬುದನ್ನು ವಿಚಾರಿಸುವುದು ತುಂಬಾ ಮಹತ್ವಪೂರ್ಣವೆನಿಸುತ್ತದೆ. ಅವೈಚಾರಿಕರು ಭಾವಿಸುವಂತೆ ಇದು ಅಷ್ಟೇನೂ ಸರಳವಾದ ವಿಷಯವಲ್ಲ. ಮಗುವಿನ ಬಗ್ಗೆ ತಾಯಿಯ ಭಾವನೆಯನ್ನು ಅರ್ಥ ಮಾಡಿಕೊಳ್ಳುವುದೇನೂ ಕಷ್ಟವಲ್ಲ. ಏಕೆಂದರೆ ಅವರಿಬ್ಬರಲ್ಲಿ ಕೂಸು ಮೊಲೆಯುಣ್ಣುವವರೆಗೆ ನಿಕಟವಾದ ದೈಹಿಕ ಸಂಪರ್ಕವಿದೆ. ಆದರೆ ಮಗುವಿನ ತಂದೆಯ ಸಂಬಂಧ ಪರೋಕ್ಷವಾದದ್ದು, ಕಲ್ಪನಾತ್ಮಕವಾದದ್ದು, ಊಹೆಯಿಂದಾದುದು. ಇದು ತಾಯಿಯ ಪಾತಿವ್ರತ್ಯದೊಂದಿಗೆ ಸಂಬಂಧಿಸಿದ್ದು. ಹೀಗಾಗಿ ಈ ವಿಷಯವು ಪ್ರವೃತ್ತಾ್ಯತ್ಮಕವೆನ್ನಲಾಗದಷ್ಟು ಬೌದ್ಧಿಕಕ್ಷೇತ್ರಕ್ಕೆ ಸೇರಿದೆ; ಕೊನೆಯ ಪಕ್ಷ, ಗಂಡಸಿನ ಬಗ್ಗೆ ಪಿತೃತ್ವಭಾವನೆಯನ್ನು ಅವನ ಮಕ್ಕಳಲ್ಲಿಯೇ ನಿರ್ದೇಶಿಸಬೇಕಾಗುತ್ತದೆಂಬಷ್ಟರ ಮಟ್ಟಿಗಾದರೂ ಇದು ಸತ್ಯ. ಆದರೆ ಇದು ಸದಾ ಆಗುವಂತಹುದೇನೂ ಅಲ್ಲ. ಜನರಿಗೆ ತಂದೆಯರಿರುತ್ತಾರೆಂಬ ವಿಷಯವನ್ನೇ



ಲಜ್ಜಾಗೌರಿ

PDF created with pdfFactory Pro trial version www.pdffactory.com

ಮೆಲನೀಸಿಯನ್ನರು ಅರಿಯರು, ಆದರೂ ತಾವು ತಂದೆಯರೆಂಬುದನ್ನು ತಿಳಿದವರು ಮಕ್ಕಳ ಬಗ್ಗೆ ಇಡುವಷ್ಟೇ ವಾತ್ಸಲ್ಯವನ್ನೇ ಅವರು ಇಟ್ಟಿರುತ್ತಾರೆ. ಮಾಲಿನೋವ್‌ಸ್ಕಿ ಟೋಬ್ರಿಯಂಡ್ ದ್ವೀಪವಾಸಿಗಳ ಬಗ್ಗೆ ರಚಿಸಿರುವ ಗ್ರಂಥಗಳಲ್ಲಿ ಪಿತೃತ್ವದ ಬಗ್ಗೆ ಅಪಾರವಾದ ಬೆಳಕು ಚೆಲ್ಲಲಾಗಿದೆ.

ವಾಸ್ತವವಾಗಿ ಪುರುಷನು ಮಕ್ಕಳಲ್ಲಿ ಆಸಕ್ತಿ ಇಡಲು ಎರಡು ಸ್ಪಷ್ಟ ಕಾರಣಗಳಿವೆ. ಮಗು ತನ್ನದೆಂಬ ನಂಬಿಕೆ ಅಥವಾ ಅದು ತನ್ನ ಹೆಂಡತಿಯದೆಂಬ ಅವನ ತಿಳುವಳಿಕೆ. ತಂದೆಯ ಪಾತ್ರದ ಅರಿವೇ ಇಲ್ಲದಿರುವಡೆಗಳಲ್ಲಿ ಎರಡನೇ ಕಾರಣವೇ ಪ್ರೇರಕವಾಗುವುದು.

ಟೋಬ್ರಿಯಂಡ್ ದ್ವೀಪವಾಸಿಗಳಿಗೆ ತಂದೆಯೆಂಬ ಕಲ್ಪನೆಯೇ ಇಲ್ಲದಿರುವ ವಿಷಯವೂ ಮಾಲಿನೋವ್‌ಸ್ಕಿಯ ಗ್ರಂಥಗಳಿಂದ ವಿವಾದಾತೀತವಾಗಿ ಪ್ರತಿಪಾದಿಸಲ್ಪಟ್ಟಿದೆ. ಆತನು ಕಂಡ ಒಂದು ವಿಷಯವನ್ನು ನಿದರ್ಶನವಾಗಿ ನೋಡಬಹುದು. ಯಾರಾದರೊಬ್ಬನೂ ಒಂದು ವರ್ಷವೋ ಹೆಚ್ಚು ಕಾಲವೋ ಪ್ರವಾಸ ಕೈಗೊಂಡಿದ್ದು ವಾಪಸಾದಾಗ ತನ್ನ ಹೆಂಡತಿಯು ಹೊಸ ಮಗುವನ್ನು ಪಡೆದಿದ್ದರೆ ಸಂತೋಷಿ ಸುತ್ತಾನೆಯೇ ಹೊರತು, ತನ್ನ ಹೆಂಡತಿಯ ಪಾತಿವ್ರತ್ಯದ ಬಗ್ಗೆ ಯುರೋಪಿಯನ್ನರ ಸಂಶಯಸೂಚನೆಗಳು ಅವನಿಗೆ ಅರ್ಥವಾಗುವುದೇ ಇಲ್ಲ. ಎಲ್ಲಾ ಮಾನವ ಬುಡಕಟ್ಟುಗಳೂ ಈಗ ಟೋಬ್ರಿಯಂಡ್ ದ್ವೀಪವಾಸಿಗಳಿರುವ ಸ್ಥಿತಿಯಿಂದ ಹಾದು ಬಂದವರೇ. ಏಕೆಂದರೆ ಪಿತೃತ್ವವನ್ನು ಗುರುತಿಸದಿದ್ದ ಕಾಲವೊಂದು



ಲಜ್ಜಾಗೌರಿ

ಅವರಲ್ಲಿಯೂ ಇದ್ದಿರಬೇಕೆಂಬುದು ಮಾಲಿನೋವ್‌ಸ್ಕಿಯವರ ಸಿದ್ಧಾಂತ. ಇದನ್ನು ಅಲ್ಲಗಳೆಯುವುದು ಕಷ್ಟವೆಂದು ನನಗೂ ಅನಿಸುತ್ತದೆ. ತಂದೆಯನ್ನು ಹೊಂದಿರುವ ಪ್ರಾಣಿ ಕುಟುಂಬಗಳೂ ಇದೇ ರೀತಿ ರೂಪುಗೊಂಡಿರಬೇಕು, ಬೇರೆಯ ರೀತಿಯಲ್ಲಿರಲೂ ಸಾಧ್ಯವಿಲ್ಲ. ಪಿತೃತ್ವವನ್ನು ಗುರುತಿಸಿದ ನಂತರ ಮಾನವರಲ್ಲಿ ಮಾತ್ರ ನಮಗೀಗ ಪರಿಚಿತವಾಗಿರುವಂತಹ ಪಿತೃಭಾವನೆಯುಂಟಾಗಲು ಸಾಧ್ಯ."[೧೯]

ಬರ್ಟ್ರೆಂಡ್ ರಸೆಲ್ ಅವರ ಈ ಮಾತು ಮಾತೃಮೂಲಪ್ರಧಾನವೆಂಬುದು ಕೇವಲ ಭಾರತಕ್ಕಲ್ಲ, ಇಡೀ ಪ್ರಪಂಚಕ್ಕೆ ಅನ್ವಯವಾಗುವ ಆದಿಯ ರೂಪದ ಸಹಜ ಪ್ರಕ್ರಿಯೆ ಎಂಬುದನ್ನು ಪುಷ್ಟೀಕರಿಸುತ್ತದೆ. ಮಾನವ ಚರಿತ್ರೆಯ ಬಹುಮುಖ್ಯ ಅಂಗವಾದ ಈ 'ಮಾತೃದೈವ'ದ ಕಲ್ಪನೆ ಮತ್ತಷ್ಟು ವಿವರವಾಗಿ ಅಧ್ಯಯನಕ್ಕೆ ಒಳಪಡಬೇಕಾದ ವಿಷಯವಾಗಿ ನಮ್ಮ ಮುಂದಿದೆ.

PDF created with pdfFactory Pro trial version www.pdffactory.com

ಉಲ್ಲೇಖಗಳು

೧. ದರ್ಶನ, ದೇವಿಪ್ರಸಾದ್ ಚಟ್ಟೋಪಾಧ್ಯಾಯ, ಅನು–ಡಾ.ಜಿ.ರಾಮಕೃಷ್ಣ, ಪುಟ.೧೪.

೨. ಹೆಚ್ಚಿನ ವಿವರಕ್ಕೆ ಇದೇ ಲೇಖಕನ 'ಉಜ್ಜನಿ ಚೌಡಮ್ಮ' ಪುಸ್ತಕ ನೋಡಿ.

೩. Pastoral Deities in western India – Guntner-Dietzsontneimer- ೩೪ ಮತ್ತು ಜಾತ್ರೆಗಳು: ಎಸ್.ಎಸ್. ಹಿರೇಮಠ, ಪುಟ.೨೬.

೪. ಹೆಚ್ಚಿನ ವಿವರಗಳಿಗೆ ಇದೇ ಲೇಖಕರ 'ದಾಸಪ್ಪ–ಜೋಗಪ್ಪ' ಕೃತಿ ನೋಡಿ.

೫. ನೀನಾಸಂ ಮಾತುಕತೆ, ಸಂ.೩೨ ಪುಟ.೨: ಡಾ.ಆಶೀಸ್ ನಂದಿ, ಅನು: ಕೆ.ವಿ. ಅಕ್ಷರ.

೬. ರಂಗನಾಥ–ತಿಮ್ಮಪ್ಪ, ರಾಜಾರಾಮ ಹೆಗಡೆ(ಲೇಖನ), ಕನ್ನಡ ಅಧ್ಯಯನ (ಮಳೆ ಸಂಚಿಕೆ), ೧೯೯೯, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಹೆಚ್ಚಿನ ವಿವರಗಳಿಗೆ ನೋಡಿ: ತಿರುಪತಿ ತಿಮ್ಮಪ್ಪ–ಎಸ್.ಕೆ.ರಾಮಚಂದ್ರರಾವ್.

೭. ಕಾಡ್ಯನಾಟ, ಪ್ರೊ. ಎ.ವಿ.ನಾವಡ ಮತ್ತು ಗಾಯತ್ರಿ ನಾವಡ.

೮. ಕೊಡಗಿನ ಪಣಿಯರು: ಆರ್. ನಾಗೇಶ್ ಬೆಣಗಾಲು, ಕರ್ನಾಟಕ ಬುಡಕಟ್ಟುಗಳು, ಸಂ.೧, ಪುಟ.೬೯೭.

೯. ರಂಗನಾಥ–ತಿಮ್ಮಪ್ಪ, ರಾಜರಾಮ ಹೆಗಡೆ, ಕನ್ನಡ ಅಧ್ಯಯನ(ಮಳೆ ಸಂಚಿಕೆ).

೧೦. ಇಲ್ಲಿಗರ ಸಂಸ್ಕೃತಿ, ಬಿ.ಸಿದ್ದಲಿಂಗಯ್ಯ ಕಂಬಾಳು, ಪುಟ.೮.

೧೧. ಮ್ಯಾಸಬೇಡರು, ಕೃಷ್ಣಮೂರ್ತಿ ಹನೂರು, ಕರ್ನಾಟಕದ ಬುಡಕಟ್ಟುಗಳು, ಸಂ.೧, ಪುಟ.೭೮೬.

೧೨. ತುಳುವ ದರ್ಶನ–ಪೀಟರ್ ಜೆ. ಕ್ಲಾಸ್, ಕನ್ನಡಾನುವಾದ: ಎ.ವಿ.ನಾವಡ, ಸುಭಾಶ್ಚಂದ್ರ.

೧೩. Mother Goddess: MCP. Srivatsava, page.1.

೧೪. ಪ್ರಾಚೀನ ಭಾರತದ ಚರಿತ್ರೆ, ಡಿ.ಡಿ. ಕೊಸಾಂಬಿ ಅವರ ಚಿಂತನೆಗಳು, ಮೂಲ: ಬಾಲಗೋಪಾಲ್, ಅನು: ಎಚ್.ಎಸ್.ಶ್ರೀಮತಿ.

೧೫. ಗ್ರಾಮದೇವತೆಗಳು, ಡಾ. ಸಿದ್ದಲಿಂಗಯ್ಯ, ಪುಟ.೧೭.

೧೬. Macay E.J.H. Further Excavations of mahenjadaro:PLXCIV 430 (ಉಲ್ಲೇಖ: ಗ್ರಾಮದೇವತೆಗಳು; ಸಿದ್ದಲಿಂಗಯ್ಯ)

೧೭. ಗ್ರಾಮದೇವತೆಗಳು, ಸಿದ್ಧಲಿಂಗಯ್ಯ, ಪುಟ.೨೨.

೧೮. ಮಹಿಳೆ: ಒಂದು ಅಧ್ಯಯನ, ಡಾ. ಜೋತ್ಸ್ನಾ ಕಾಮತ್, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೧೯. ಮದುವೆ ಮತ್ತು ನೀತಿ, ಮೂಲ: ಬರ್ಟ್ರಾಂಡ್ ರಸೆಲ್, ಅನು: ಪಿ.ವಿ. ನಾರಾಯಣ.

PDF created with pdfFactory Pro trial version www.pdffactory.com

ಪರಾಮರ್ಶನ ಗ್ರಂಥಗಳು

೧. ಆಶೀಶ್ ನಂದಿ(ಅನು: ಕೆ.ವಿ.ಅಕ್ಷರ), ನೀನಾಸಂ ಮಾತುಕತೆ(ಲೇಖನ), ಸಂ.೩೨, ಅಕ್ಷರ ಪ್ರಕಾಶನ, ಹೆಗ್ಗೋಡು.

೨. ಕೃಷ್ಣಮೂರ್ತಿ ಹನೂರು, ೧೯೯೫, ಮ್ಯಾಸಬೇಡರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೩. ಕಾಳೇಗೌಡ ನಾಗವಾರ, ಕಾಡುಗೊಲ್ಲರ ಹಟ್ಟಿ ಒಂದು ಅಧ್ಯಯನ(ಅಪ್ರಕಟಿತ ಪಿಎಚ್.ಡಿ. ಪ್ರಬಂಧ).

೪. ಚಂದ್ರಶೇಖರ ಕಂಬಾರ, ೧೯೮೦, ನಮ್ಮ ಜಾನಪದ, ಬೆಂಗಳೂರು

೫. ಜೊತ್ಸ್ನಾ ಕಾಮತ್, ಮಹಿಳೆ: ಒಂದು ಅಧ್ಯಯನ, ೧೯೯೯, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೬. ಪೀಟರ್ ಜೆ. ಕ್ಲಾಸ್, ೧೯೮೭, ಅನು: ಎ.ವಿ. ನಾವಡ, ಸುಭಾಶ್ಚಂದ್ರ, ತುಳುವ ದರ್ಶನ, ಆರ್.ಆರ್.ಸಿ, ಉಡುಪಿ.

೭. ನಾವಡ ಎ.ವಿ., ಗಾಯತ್ರಿ ನಾವಡ, ೧೯೯೨, ಕಾಡ್ಯನಾಟ, ಆರ್.ಸಿ.ಸಿ., ಉಡುಪಿ.

೮. ನಾಗೇಶ್ ಆರ್. ಬೆಣಗಾಲು, ೧೯೯೭, ಕೊಡಗಿನ ಪಣಿಯರು(ಲೇಖನ), ಕರ್ನಾಟಕ ಬುಡಕಟ್ಟುಗಳು, ಸಂ–೧, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು.

೯. ನಾಯಕ ಎನ್.ಆರ್., ೧೯೯೫, ಬಂದನೇ ಬಲೀಂದ್ರರಾಯ, ಹೊನ್ನಾವರ

೧೦. ಬರ್ಟ್ರೆಂಡ್ ರಸೆಲ್, ಅನು: ಪಿ.ವಿ. ನಾರಾಯಣ, ಮದುವೆ ಮತ್ತು ನೀತಿ, ಜ್ಞಾನಪಥ, ಬೆಂಗಳೂರು.

೧೧. ಬಾಲಗೋಪಾಲ್, ೧೯೯೮, ಅನು: ಎಚ್.ಎಸ್.ಶ್ರೀಮತಿ, ಪ್ರಾಚೀನ ಭಾರತದ ಚರಿತ್ರೆ(ಡಿ.ಡಿ.ಕೊಸಾಂಬಿಯವರ ಚಿಂತನೆಗಳು), ಬೆಳ್ಳಿ ಚುಕ್ಕಿ ಬುಕ್ ಟ್ರಸ್ಟ್, ಮೈಸೂರು.

೧೨. ಬೋರಲಿಂಗಯ್ಯ ಹಿ.ಚಿ., ೧೯೮೧, ದಾಸಪ್ಪ ಜೋಗಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೩. ಬೋರಲಿಂಗಯ್ಯ ಹಿ.ಚಿ., ೧೯೭೯, ಉಜ್ಜಿನಿ ಚೌಡಮ್ಮ, ದಿನಕರ ಪ್ರಕಾಶನ, ಬೆಂಗಳೂರು.

೧೪. ರಾಜಾರಾಮ ಹೆಗಡೆ, ೧೯೯೯, ರಂಗನಾಥ, ತಿಮ್ಮಪ್ಪ(ಲೇಖನ), ಕನ್ನಡ ಅಧ್ಯಯನ, ಮಳೆಸಂಚಿಕೆ, ಕನ್ನಡ ವಿ.ವಿ., ಹಂಪಿ.

೧೫. ರಾಮಕೃಷ್ಣ ಜಿ., ೧೯೯೪, ದರ್ಶನ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೧೬. ರಾಮಚಂದ್ರರಾವ್ ಎಸ್.ಕೆ., ೧೯೮೦, ತಿರುಪತಿ ತಿಮ್ಮಪ್ಪ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೧೭. ಸಿದ್ದಗಂಗಯ್ಯ ಬಿ. ಕಂಬಾಳು, ೧೯೯೫, ಇಲ್ಲಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೮. ಸಿದ್ದಲಿಂಗಯ್ಯ, ೧೯೯೭, ಗ್ರಾಮದೇವತೆಗಳು, ಮೂಲಭಾರತಿ ಪ್ರಕಾಶನ, ಬೆಂಗಳೂರು.

೧೯. ಹಿರೇಮಠ ಎಸ್.ಎಸ್., ೧೯೯೩, ಜಾತ್ರೆಗಳು, ಸಮತ ಪ್ರಕಾಶನ, ಹೊಸಪೇಟೆ.

20. Gunter Dietz sontneimar, Pestoral Dieties In Western India, Oxford University Press, Delhi.

21. Srinivatsava M.C.P., 1979, Mother Goddess, Agam Kala prakashan, Delhi.

PDF created with pdfFactory Pro trial version www.pdffactory.com

ಬುಡಕಟ್ಟು ಅಧ್ಯಯನ ಮಾಲೆ - ೧

ಬುಡಕಟ್ಟು ದೈವಾರಾಧನೆ

ಡಾ. ಹಿ.ಚಿ. ಬೋರಲಿಂಗಯ್ಯ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

PDF created with pdfFactory Pro trial version www.pdffactory.com

BUDAKATTU DYVAARAADHANE
(Tribal Worship in Karnataka-A Study)
by
Dr. H.C. Boralingaiah
Professor, Dept. of Tribal Studies
Kannada University, Hampi
Vidyaranya 583 276

Published by
Dr. S.C. Ramesh
Director, Prasaranga
Kannada University, Hampi
Vidyaranya 583 276

Page: x + 108+16 **Price:** Rs. **120/-**

www.kannadauniversity.org

First Impression: 2000
Second Impression: 2015

ISBN 978-93-83044-66-5

© ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೫

ಬೆಲೆ: ರೂ. ೧೨೦/-

ಮುಖಪುಟ: **ಕೆ.ಕೆ. ಮಕಾಳಿ**

ಅಕ್ಷರ ಸಂಯೋಜನೆ
ಸಂಜಯ್ ಗ್ರಾಫಿಕ್ಸ್, ಹಳ್ಳಿಕೆರೆ, ಕಮಲಾಪುರ

ಪುಸ್ತಕ ದೊರೆಯುವ ಸ್ಥಳ
ಸರಸ್ವತಿ ಪುಸ್ತಕ ಮಾರಾಟ ಮಳಿಗೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
ದೂರವಾಣಿ: ೦೮೯೫೪–೨೧೦೪೧೦

ಕನ್ನಡ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ
ನಂ. ೧, ಕಾನೂನು ಕಾಲೇಜಿನ ಹಳೆಯ ಕಟ್ಟಡ
ಮೈಸೂರು ಬ್ಯಾಂಕ್ ವೃತ್ತ, ಅರಮನೆ ರಸ್ತೆ
ಬೆಂಗಳೂರು ೫೬೦ ೦೦೯
ದೂರವಾಣಿ: ೦೮೦–೨೨೩೭೨೩೮೮

ಮುದ್ರಣ
ಮಯೂರ್ ಪ್ರಿಂಟ್ ಆ್ಯಡ್ಸ್, ಬೆಂಗಳೂರು

ಕನ್ನಡವೇ ಸತ್ಯ, ಕನ್ನಡವೇ ನಿತ್ಯ

ವಿದ್ಯೆಯ ಸೃಷ್ಟಿ ಕನ್ನಡ ವಿಶ್ವವಿದ್ಯಾಲಯದ ಒಂದು ಪ್ರಮುಖ ಧ್ಯೇಯ. ವಿಶ್ವದ ಜ್ಞಾನವನ್ನು ಕನ್ನಡಿಗರಿಗೆ ಮುಟ್ಟಿಸುವ ಕನ್ನಡ ಸಂಸ್ಕೃತಿಯನ್ನು ವಿಶ್ವಕ್ಕೆ ಪರಿಚಯಿಸುವ ಮಹತ್ವದ ಹೊಣೆಗಾರಿಕೆ ಕನ್ನಡ ವಿಶ್ವವಿದ್ಯಾಲಯಕ್ಕಿದೆ. ವಿದ್ಯೆಯ ಸೃಷ್ಟಿ ಮತ್ತು ಪ್ರಸರಣ ಎಂದರೆ ಅದು ಕೇವಲ ವಿಶ್ವವಿದ್ಯಾಲಯದಲ್ಲಿರುವ ಅಧ್ಯಾಪಕರಿಂದ ಮಾತ್ರ ಎಂಬ ಹಮ್ಮು ನಮ್ಮದಲ್ಲ. ಇಲ್ಲಿನ ವಿವಿಧ ವಿಭಾಗಗಳ ಒಳಗಿನ ಪ್ರತಿಭಾವಂತರ ಜೊತೆಗೆ ಕರ್ನಾಟಕದ ಎಲ್ಲ ಸಾಂಸ್ಕೃತಿಕ ಕ್ಷೇತ್ರದ ಪ್ರತಿಭಾ ಸಂಪನ್ನತೆಯನ್ನು ಬೆಸೆಯುವ ಕೊಂಡಿಯಂತೆ ಪ್ರತಿಯೊಂದು ವಿಭಾಗವೂ ಕೆಲಸ ಮಾಡುತ್ತದೆ. ಈ ಸುಂದರ ಬೆಸುಗೆ ಹೊಸ ಜ್ಞಾನದ ಸೃಷ್ಟಿಗೆ ಹಾಗೆಯೇ ಅರ್ಥಪೂರ್ಣ ಮೌಲ್ಯಗಳ ಪುನರ್‌ಸ್ಥಾಪನೆಗೆ ಕಾರಣವಾಗಿದೆ. ವಿದ್ಯೆಯ ಸೃಷ್ಟಿಗೆ ಪೂರಕವಾದ ಹಲವು ಬಗೆಯ ಜ್ಞಾನವಾಹಿನಿಗಳ ತಿಳುವಳಿಕೆ ವಿಶ್ವವಿದ್ಯಾಲಯದ ಒಳಗೆ ರೂಪುಗೊಳ್ಳುತ್ತಿದೆ. ಕನ್ನಡ ಸಂಶೋಧನೆಯ ವಿಧಿ ವಿಧಾನಗಳನ್ನು ಸೃಷ್ಟಿಸುವ ಪ್ರಯತ್ನ ಇಲ್ಲಿ ನಡೆಯುತ್ತಿದೆ. ಇವುಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಅನೇಕ ಕಮ್ಮಟ, ತರಬೇತಿ ಮುಂತಾದಂತೆ ಹತ್ತಾರು ಶಿಬಿರಗಳು ಇಲ್ಲಿ ನಡೆಯುತ್ತಿವೆ. ಈ ಎಲ್ಲ ಕುಲುಮೆಗಳಲ್ಲಿ ಪಕ್ವಗೊಂಡ ಜ್ಞಾನ ಪುಸ್ತಕದ ರೂಪದಲ್ಲಿ ಪ್ರಸಾರಾಂಗದ ಮೂಲಕ ಆಕಾರ ಪಡೆಯುತ್ತಿದೆ.

ಕನ್ನಡ ವಿಶ್ವವಿದ್ಯಾಲಯವು ಜನಸಾಮಾನ್ಯರು, ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಸಂಶೋಧಕರನ್ನು ತನ್ನ ಗುರಿಯನ್ನಾಗಿಟ್ಟುಕೊಂಡು ಹಲವು ಬಗೆಯ ಕಾರ್ಯಯೋಜನೆಗಳನ್ನು ಜಾರಿಗೆ ತಂದಿದೆ. ಜನಸಾಮಾನ್ಯರ ತಿಳುವಳಿಕೆಗಾಗಿ ನವಸಾಕ್ಷರ ಮಾಲೆ ಮತ್ತು ಮಂಟಪಮಾಲೆ ಎಂಬ ಪುಸ್ತಕಗಳು, ವಿದ್ಯಾರ್ಥಿಗಳಿಗಾಗಿ ಪಠ್ಯಪುಸ್ತಕಗಳು, ಸಂಶೋಧಕರಿಗೆ ಹಲವು ಬಗೆಯ ವಿಶ್ವಕೋಶಗಳು ಮುಂತಾದಂತೆ ವೈವಿಧ್ಯಮಯ ಜ್ಞಾನ ಸೃಷ್ಟಿ ಇಲ್ಲಿ ನಡೆಯುತ್ತಿದೆ. ಇವೆಲ್ಲವನ್ನೂ ಮೀರಿ ಮತ್ತೊಂದು ಗುರಿ ಕನ್ನಡ ವಿಶ್ವವಿದ್ಯಾಲಯಕ್ಕೆ ಇದೆ. ಅದೇನೆಂದರೆ ಕನ್ನಡ ಸಂಸ್ಕೃತಿಯ ಆಮೂಲಾಗ್ರ ಶೋಧ ನಡೆಸುವ ಮೂಲಕ ದೇಸಿ ಚಿಂತನಾಕ್ರಮವೊಂದನ್ನು ರೂಪಿಸುವುದು. ಭಾರತೀಯ ಸಂಸ್ಕೃತಿ ಎಂದು ಏಕಮುಖವಾಗಿ ಸಾರ್ವತ್ರೀಕರಿಸುವ ಸಾಂಪ್ರದಾಯಿಕ

PDF created with pdfFactory Pro trial version www.pdffactory.com

ತಿಳುವಳಿಕೆ ಯಿಂದ ಹೊರಬಂದು ಪ್ರತಿಯೊಂದು ನೆಲಕ್ಕೂ ತನ್ನದೇ ಆದ ವೈಶಿಷ್ಟ್ಯತೆ ಇದೆಯೆಂಬ ವಾಸ್ತವವಾದ ನೆಲೆಯಲ್ಲಿ ಕನ್ನಡ ನೆಲದ ಗುಣ ಹುಡುಕುವ ಕಾರ್ಯದಲ್ಲಿ ನಾವು ಈಗ ಮಗ್ನರಾಗಿದ್ದೇವೆ. ಆ ಮೂಲಕ ನಿರ್ಲಕ್ಷಿಸಲ್ಪಟ್ಟ ಕ್ಷೇತ್ರಗಳನ್ನು ಪ್ರಧಾನ ನೆಲೆಗೆ ತರುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ಈ ದೇಶದ ಅಥವಾ ನಾಡಿನ ಅಂಚಿನ ಜನಕ್ಕೆ ಕೂಡ ಒಂದು ಶ್ರೀಮಂತ ಸಂಸ್ಕೃತಿ ಇದೆಯೆಂದು, ಆ ಸಂಸ್ಕೃತಿಗೆ ತನ್ನದೇ ವಿಶಿಷ್ಟ ಪರಂಪರೆಯಿದೆಯೆಂದು, ಆ ಪರಂಪರೆಯೇ ನಾಡಿನ ವಿವೇಕ ಮತ್ತು ಜ್ಞಾನವನ್ನು ಕಾಪಾಡಿಕೊಂಡು ಬಂದಿದೆಯೆಂದು ಸ್ಪಷ್ಟ ಮಾತುಗಳಿಂದ ನಿರ್ವಚಿಸಬೇಕಾದ ಕಾಲವೊಂದು ಈಗ ಬಂದಿದೆ. ಆ ಮೂಲಕ ಕನ್ನಡ ನಾಡಿನ ಸರ್ವತೋಮುಖ ಬೆಳವಣಿಗೆಯನ್ನು ಯಾವ ಯಾವ ದಿಸೆಯಲ್ಲಿ ಸಾಧಿಸಬೇಕೆಂಬ ದೂರದೃಷ್ಟಿ ಮತ್ತು ಆಶಾವಾದ ಕೂಡ ನಮ್ಮ ಅಧ್ಯಯನಗಳ ಹಿಂದೆ ಇದೆ.

ಇಂದಿನ ಜಾಗತೀಕರಣ ಹಾಗೂ ಹಿಂಸೆಯ ವಾತಾವರಣದಲ್ಲಿ ನಲುಗುತ್ತಿರುವ ಮಾನವೀಯ ಮೌಲ್ಯಗಳನ್ನು ಹುಡುಕುವ ಮತ್ತು ಹುಟ್ಟುಹಾಕುವ ಬರಹಗಳನ್ನು ಪ್ರೋತ್ಸಾಹಿಸುವ ಕೆಲಸವೂ ಆಗಬೇಕಾಗಿದೆ. ಒಟ್ಟಾರೆಯಾಗಿ ಆಲೋಚನೆಗಳ ಮತ್ತು ಸಿದ್ಧಾಂತಗಳ ಮೌಲ್ಯೀಕರಣದ ಅಗತ್ಯವನ್ನು ಮನಗಂಡಿರುವ ಕನ್ನಡ ವಿಶ್ವವಿದ್ಯಾಲಯ ದೇಸಿ ಮತ್ತು ಸಾಂಪ್ರದಾಯಿಕ ಮೌಲ್ಯಗಳ ನಡುವೆ ಮುಖಾಮುಖಿಯೊಂದನ್ನು ಹುಟ್ಟುಹಾಕುವ ಮೂಲಕ ಸತ್ಯದ ಬೆಳಕಿನೆಡೆಗೆ ಕೊಂಡೊಯ್ಯುವ ಪ್ರಯತ್ನವನ್ನು ಮಾಡುತ್ತದೆಯೆಂಬ ಆಶಯ ನನ್ನದಾಗಿದೆ.

ಬುಡಕಟ್ಟು ಅಧ್ಯಯನ ವಿಭಾಗದಲ್ಲಿ 'ಬುಡಕಟ್ಟು ಮಹಾಕಾವ್ಯಮಾಲೆ'ಯ ನಂತರ ಕೈಗೊಂಡ 'ಬುಡಕಟ್ಟು ಅಧ್ಯಯನ ಮಾಲೆ'ಯ ಸರಣಿ ಪುಸ್ತಕಗಳು ಅತ್ಯಂತ ವಿಶಿಷ್ಟವಾಗಿ ಪ್ರಕಟವಾದವು. ಸಂಶೋಧಕರಿಗೆ ಈ ಪುಸ್ತಕಗಳು ಆಕರಗ್ರಂಥಗಳಾಗಿ ಪರಿಗಣಿಸಲ್ಪಟ್ಟವು. ಈ ಮಾಲೆಯ ಪುಸ್ತಕಗಳಲ್ಲಿ ಒಂದು 'ಬುಡಕಟ್ಟು ದೈವಾರಾಧನೆ'. ಈ ಕೃತಿ ಇದೀಗ ಪುನರ್ ಮುದ್ರಣಗೊಳ್ಳುತ್ತಿರುವ ಅವಕಾಶ ಪಡೆದಿದೆ. ಈ ಕೃತಿಯನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಡಾ. ಸ.ಚಿ. ರಮೇಶ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಬಿ. ಸುಜ್ಞಾನಮೂರ್ತಿ ಅವರಿಗೆ ಆಭಾರಿಯಾಗಿದ್ದೇನೆ.

ಡಾ. ಹಿ.ಚಿ. ಬೋರಲಿಂಗಯ್ಯ
ಕುಲಪತಿ

ದೇಸಿಯೊಳ್ ಪುಗುವುದು ಪೊಕ್ಕು ಮಾರ್ಗದೊಳೆ ತಳ್ವುದು

ಕನ್ನಡ ವಿಶ್ವವಿದ್ಯಾಲಯ ಪ್ರಥಮ ಗುರಿ 'ಕನ್ನಡ ಸಂಸ್ಕೃತಿಯ' ಶೋಧ, ವಿಮರ್ಶೆ ಮತ್ತು ಪ್ರಸಾರ. ಅಂತಿಮ ಗುರಿ ಸುತ್ತಲಿನ ಸಂಸ್ಕೃತಿಗಳ ವಿವೇಕಪೂರ್ಣ ವಿನಿಯೋಗ. ಆದಿಕವಿ ಪಂಪ, ಸಾಹಿತ್ಯಕ್ಕೆ ಅನ್ವಯಿಸಿ ಹೇಳಿರುವ 'ದೇಸಿಯೊಳ್ ಪುಗುವುದು, ಪೊಕ್ಕು ಮಾರ್ಗದೊಳೆ ತಳ್ವುದು' ಎಂಬ ಮಾತು ಪರ್ಯಾಯವಾಗಿ ಇದನ್ನೇ ಧ್ವನಿಸುತ್ತದೆ.

ಸಂಸ್ಕೃತಿ ಎನ್ನುವುದು ಸಮೂಹಸಮ್ಮತ ಜೀವನಪದ್ಧತಿಯಾಗಿದೆ. ಕನ್ನಡಿಗರ ಇಂತಹ ಪದ್ಧತಿಗೆ ಸಾವಿರ ಸಾವಿರ ವರ್ಷಗಳ ಇತಿಹಾಸವಿದೆ. ತನ್ನ ಆಯುರ್ಮಾನದಲ್ಲಿ ಆರ್ಯ-ಆಂಗ್ಲ ಸಂಸ್ಕೃತಿಗಳನ್ನು ಜೀರ್ಣಿಸಿಕೊಳ್ಳುತ್ತ ಬಂದ ಕನ್ನಡ ಸಮಾಜ, ಉದ್ದಕ್ಕೂ ದ್ವಿಭಾಷಾ ಸಂದರ್ಭದಲ್ಲಿ, ಬದುಕುಮಾಡಿದೆ. ಹಿಂದಿನದು ಕನ್ನಡ-ಸಂಸ್ಕೃತ ದ್ವಿಭಾಷಾ ಸಂದರ್ಭ, ಇಂದಿನದು ಕನ್ನಡ-ಇಂಗ್ಲಿಷ್ ದ್ವಿಭಾಷಾ ಸಂದರ್ಭ. ಗ್ರಂಥಸ್ಥ ಭಾಷೆಯಾದ ಸಂಸ್ಕೃತಕ್ಕಿಂತ ಜೀವಂತ ಭಾಷೆಯಾದ ಇಂಗ್ಲಿಷ್ ಬೆಳಕಾಗುತ್ತಲೇ ಬೆಂಕಿಯಾಗಬಹುದೇ? ಎಂಬ ಭಯ ನಮ್ಮಲ್ಲಿ ಹುಟ್ಟಿದೆ. ಹೆಚ್ಚಿನದಾಗಿ ಆಂಗ್ಲ ಜೀವನಶೈಲಿ ನಮ್ಮ ಜೀವನಾಡಿಗಳನ್ನು ದಿನೇ ದಿನೇ ನಿಯಂತ್ರಿಸತೊಡಗಿ, ಒಂದು ಬಗೆಯ ಅತಿರೇಕ ಸೃಷ್ಟಿಯಾಗುತ್ತಲಿದೆ.

ಗಾಂಧೀಜಿಯವರು ಈ ಅತಿರೇಕವನ್ನು ಬಹಳ ಹಿಂದೆಯೇ ಊಹಿಸಿ, 'ಸ್ವದೇಶೀ ಚಳುವಳಿ'ಯನ್ನು ಕೈಗೆತ್ತಿಕೊಂಡಿದ್ದರು. ಈ ಮತ್ತು ಇಂಥ ದೇಶೀ ಚಿಂತನೆಗಳ ಆದರ್ಶದಲ್ಲಿ ಕನ್ನಡ ವಿಶ್ವವಿದ್ಯಾಲಯ ಮೊದಲು ಮಾಡಬೇಕಾದ ಕೆಲಸವೆಂದರೆ ವಿಸ್ಮೃತಿಯ ಸಾಗದಲ್ಲಿ ಮುಳುಗಿ ಹೋಗಿರುವ ನಮ್ಮ ಪಾರಂಪರಿಕ ಕ್ರಿಯೆ, ಪ್ರಕ್ರಿಯೆ ರೂಪದ 'ಸ್ವದೇಶೀ ಸತ್ಯ'ಗಳನ್ನು ಶೋಧಿಸುವುದು; ಬಳಿಕ ಅಲ್ಲಿ ಸೇರಿಕೊಂಡಿರುವ ದೋಷಗಳನ್ನು ದೂರ ಸರಿಸಿ ಗುಣಾಂಶಗಳನ್ನು ಗುರುತಿಸುವ, ಜೊತೆಗೆ ಪೂರ್ಣ ಬದುಕಿಗೆ ಅವಶ್ಯವಿರುವ ಕೊರತೆಗಳನ್ನು ಅನ್ಯಸಂಸ್ಕೃತಿಯಿಂದ ಎಚ್ಚರವಹಿಸಿ ತುಂಬಿಕೊಳ್ಳುವ ಕೆಲಸ ನಮ್ಮಲ್ಲಿ ನಡೆಯಬೇಕಾಗಿದೆ. ಒಟ್ಟಾರೆ ಅನ್ಯಸಂಸ್ಕೃತಿಗಳ ಸಹಯೋಗದಲ್ಲಿಯೂ 'ಕನ್ನಡವು ಕನ್ನಡವ ಕನ್ನಡಿಸುತಿರಬೇಕು' ಎಂಬಂತೆ ನಾವು

PDF created with pdfFactory Pro trial version www.pdffactory.com

ಕನ್ನಡವನ್ನು ಸ್ಥಾನಿಕದಲ್ಲಿ ಬದುಕಿಸಬೇಕಾಗಿದೆ. ಜಾಗತಿಕದಲ್ಲಿ ಬೆಳೆಸಬೇಕಾಗಿದೆ. ಹಾಗೆ ಮಾಡಿದಾಗ ಮಾತ್ರ ಕನ್ನಡತ್ವವನ್ನು ನಾಶ ಮಾಡಿಕೊಂಡು ಜಾಗತಿಕವಾಗುವುದು ತಪ್ಪಿ, ಕನ್ನಡವೂ ಜಾಗತಿಕವಾಗುತ್ತದೆ. ಜಾಗತಿಕವಾಗುವುದೆಂದರೆ ಸ್ಥಾನಿಕದ ನಿರಾಕರಣೆಯಲ್ಲವೆಂಬ ಸತ್ಯ ಸ್ಥಾಪನೆಗೊಳ್ಳುತ್ತದೆ.

ಹೆಗಲ ಮೇಲೆ ಈ ಹೊಣೆಯನ್ನು ಹೊತ್ತು ಅಸ್ತಿತ್ವಕ್ಕೆ ಬಂದಿರುವ ಕನ್ನಡ ವಿಶ್ವವಿದ್ಯಾಲಯ 'ಎಲ್ಲ ರಸ್ತೆಗಳು ರೋಮ್‌ದ ಕಡೆಗೆ' ಎಂಬಂತೆ ಕನ್ನಡದ ಎಲ್ಲ ಹಾದಿಗಳು ಹಂಪಿಯ ಕಡೆಗೆ ಕೇಂದ್ರೀಕರಣಗೊಳ್ಳುವ ಮತ್ತು ಇಲ್ಲಿಂದಲೇ ಜಗತ್ತಿನ ಅಂಚಿನತ್ತ ವಿಕೇಂದ್ರೀಕರಣಗೊಳ್ಳುವ ವಾತಾವರಣವನ್ನು ನಿರ್ಮಾಣ ಮಾಡಬೇಕಾಗಿದೆ. ಈ ರೀತಿ ಐತಿಹಾಸಿಕ ಪರಂಪರೆ ಮತ್ತು ಭೌಗೋಳಿಕ ಪರಿಸರಗಳಲ್ಲಿ ಶ್ರಮಿಸ ಬೇಕಾಗಿರುವ ಕನ್ನಡ ವಿಶ್ವವಿದ್ಯಾಲಯ "ಎಂದೆಂದಿಗೂ ನೀ ಕನ್ನಡವಾಗಿರು" ಎಂಬ ಪ್ರಜ್ಞೆ ಕನ್ನಡಿಗರಲ್ಲಿ ಜಾಗೃತವಾಗಿರುವಂತೆಯೂ ನೋಡಿಕೊಳ್ಳಬೇಕಾಗಿದೆ.

ಈ ಎಲ್ಲ ನೆಲೆಗಳಲ್ಲಿ ಸೃಷ್ಟಿಯಾಗುವ ತನ್ನ ಶೋಧನೆ-ಚಿಂತನೆಗಳನ್ನು ದಾಖಲಿಸ ಬೇಕೆಂಬ ಮತ್ತು ಸಂವಹನಗೊಳಿಸಬೇಕೆಂಬ ತೀವ್ರ ಹಂಬಲದಿಂದ ಈ ವಿಶ್ವವಿದ್ಯಾಲಯ 'ಪ್ರಸಾರಾಂಗ' ಹೆಸರಿನ ಪ್ರಸಾರ ಮಾಧ್ಯಮ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತಂದಿದೆ. ಶ್ರವ್ಯ, ದೃಶ್ಯ, ವಾಚನ ಸಾಮಗ್ರಿಗಳ ಉತ್ಪಾದನೆ-ವಿತರಣೆ ಇತ್ಯಾದಿ ಕಾರ್ಯಗಳನ್ನು ಕೈಗೆತ್ತಿಕೊಂಡಿರುವ ಇದು, ವಾಚನ ಸಾಮಗ್ರಿಯಾಗಿರುವ ಪುಸ್ತಕಗಳ ಉತ್ಪಾದನೆಗೆ ವಿಶೇಷ ಕಾಳಜಿ ವಹಿಸಿದೆ. ಆಂತರಿಕ ಸತ್ವ, ಬಾಹ್ಯ ಸೌಂದರ್ಯಗಳಿಂದ ಕೂಡಿರುವ ವಿಶಿಷ್ಟ "ಪುಸ್ತಕ ಸಂಸ್ಕೃತಿ'ಯನ್ನು ಅಸ್ತಿತ್ವಕ್ಕೆ ತರುತ್ತಲಿರುವ ಈ ಪ್ರಸಾರಾಂಗದ ಇತ್ತೀಚಿನ ಪ್ರಕಟಣೆ 'ಬುಡಕಟ್ಟು ದೈವಾರಾಧನೆ'.

"ಬುಡಕಟ್ಟು ಅಧ್ಯಯನ ವಿಭಾಗ" ನಮ್ಮ ವಿಶ್ವವಿದ್ಯಾಲಯದ ವಿಶಿಷ್ಟ ಘಟಕ. ಇದಕ್ಕೆ ಅರ್ಥ ತುಂಬುವ ದಿಸೆಯಲ್ಲಿ ಅಸ್ತಿತ್ವಕ್ಕೆ ಬಂದಿರುವ ಬುಡಕಟ್ಟು ಅಧ್ಯಯನ ಮಾಲೆಯ ಭಾಗವಾಗಿ ಪ್ರಕಟವಾಗುತ್ತಲಿರುವ 'ಬುಡಕಟ್ಟು ದೈವರಾಧನೆ' ಪುಸ್ತಕ ರಚನೆಗಾಗಿ ಡಾ.ಹಿ.ಚಿ.ಬೋರಲಿಂಗಯ್ಯ ಅವರಿಗೆ ನಮ್ಮ ಧನ್ಯವಾದಗಳು ಸಲ್ಲುತ್ತವೆ.

ಡಾ. ಎಂ.ಎಂ. ಕಲಬುರ್ಗಿ
ಕುಲಪತಿ

ಬುಡಕಟ್ಟು ಅಧ್ಯಯನ ಮಾಲೆಯನ್ನು ಕುರಿತು

ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗವು ತನ್ನ ಆರಂಭದ ನಾಲ್ಕು ವರ್ಷಗಳಲ್ಲಿ ಸಂಸ್ಕೃತಿಯ ಬಹುಮುಖ್ಯ ಮೌಖಿಕ ಆಕರಗಳೆನಿಸಿದ ಬುಡಕಟ್ಟು ಮಹಾಕಾವ್ಯಗಳನ್ನು ಹೊರತಂದಿದೆ. ಬಹುಶಃ ಭಾರತೀಯ ಭಾಷೆಗಳಲ್ಲಿಯೇ ಇದೊಂದು ವಿಕ್ರಮ ಎನ್ನುವ ಹಾಗೆ ಒಟ್ಟು ಒಂಬತ್ತು ಮಹಾಕಾವ್ಯಗಳನ್ನು ನಾವು ಪ್ರಕಟಿಸಿದ್ದೇವೆ.

ಕುಲಪತಿ ಡಾ. ಎಂ.ಎಂ. ಕಲಬುರ್ಗಿ ಅವರು ವಿಭಾಗದ ಇದುವರೆಗಿನ ಸಂಗ್ರಹ ಸಂಪಾದನಾ ಕಾರ್ಯವನ್ನು ಮೆಚ್ಚಿ, ಇನ್ನು ಮುಂದೆ ಅಧ್ಯಯನಕ್ಕೆ ಹೆಚ್ಚು ಒತ್ತು ಕೊಡಿ ಎಂದು ಸೂಚಿಸಿದರು. ಅವರ ಸೂಚನೆಯನ್ನು ವಿಭಾಗ ಉತ್ಸಾಹದಿಂದ ಒಪ್ಪಿತು. ಯಾಕೆಂದರೆ ಕರ್ನಾಟಕದಲ್ಲಿ ಇದುವರೆಗೆ ಬುಡಕಟ್ಟುಗಳನ್ನು ಕುರಿತಾದ ಮಾಹಿತಿ ಸಂಗ್ರಹಣೆ ಆಗಿದೆಯೇ ಹೊರತು, ಅಧ್ಯಯನ ಆಗಿಲ್ಲ ಎಂಬ ಕೊರಗು ನಮ್ಮನ್ನು ಕಾಡುತ್ತಿತ್ತು. ಆದ್ದರಿಂದ ಬುಡಕಟ್ಟು ಸಂಸ್ಕೃತಿಯ ವಿವಿಧ ಮುಖಗಳನ್ನು ಕುರಿತ ಪ್ರಾಥಮಿಕ ಮಟ್ಟದ ಪರಿಶೋಧನೆ ಮತ್ತು ಅಧ್ಯಯನವನ್ನು ಈ ಮಾಲಿಕೆ ಮೂಲಕ ಕೈಗೊಂಡಿದ್ದೇವೆ. 'ಪ್ರಾಥಮಿಕ' ಎಂದು ಯಾಕೆ ಹೇಳುತ್ತಿದ್ದೇನೆಂದರೆ ಇದು ಪ್ರಪ್ರಥಮವಾಗಿ ಕೈಗೊಳ್ಳಲಾಗುತ್ತಿರುವ ಮೊದಲ ಹಂತದ ಸಂಶೋಧನೆ ಎಂಬ ದೃಷ್ಟಿಯಿಂದ. ಆಳವಾದ ಹಾಗೂ ವಿಸ್ತೃತ ರೂಪದ ಸಂಶೋಧನೆಗಳಿಗೆ ನಮ್ಮ ಈ ಪುಟ್ಟ ಗ್ರಂಥಗಳು ಮಾರ್ಗಸೂಚಿಯಾಗುತ್ತವೆ ಎಂಬ ನಂಬಿಕೆ ನನ್ನದು.

ಕನ್ನಡ ವಿಶ್ವವಿದ್ಯಾಲಯದ ಮೂಲ ಧ್ಯೇಯವೆನಿಸಿದ ದೇಸಿ ಸಂಸ್ಕೃತಿಯ ಹುಡುಕಾಟದ ಧೋರಣೆಗೆ ಪೂರಕವಾಗಿಯೇ ನಮ್ಮ ಈ ಅಧ್ಯಯನಗಳು ಹೊರಬರುತ್ತಿವೆ. ನಮ್ಮದು ದೇಶಿಯಲ್ಲಿ ದೇಸಿ ಎಂದರೂ ತಪ್ಪಾಗಲಾರದು!

ಈ ಸಂಬಂಧದಲ್ಲಿ ಪ್ರೋತ್ಸಾಹಿಸಿದ ಸರ್ವರಿಗೂ ವಿಭಾಗದ ಪರವಾಗಿ ಕೃತಜ್ಞತೆಗಳು ಸಲ್ಲುತ್ತವೆ.

ಗಿರಿಸೀಮೆ **ಡಾ. ಹಿ.ಚಿ. ಬೋರಲಿಂಗಯ್ಯ**

PDF created with pdfFactory Pro trial version www.pdffactory.com

ಪರಿವಿಡಿ

ಕನ್ನಡವೇ ಸತ್ಯ, ಕನ್ನಡವೇ ನಿತ್ಯ / 3
ದೇಸಿಯೊಳ್ ಪುಗುವುದು
ಪೊಕ್ಕು ಮಾರ್ಗದೊಳೆ ತಳ್ವುದು / 5
ಬುಡಕಟ್ಟು ಅಧ್ಯಯನ ಮಾಲೆಯನ್ನು ಕುರಿತು / 7
೧. ದೈವ: ಒಂದು ಪೀಠಿಕೆ / ೧
೨. ಬುಡಕಟ್ಟು ವೀರರು ಮತ್ತು ಮಾತೆಯರು / ೧೮
೨.೧. ಬೀರನ ಮನೆ / ೧೯
೨.೨. ಜಟ್ಟಿಗನ ಬನ / ೨೯
೨.೩. ಕಾಡ್ಯನ ಮನೆ / ೩೫
೨.೪. ಕಾವೆಲಿಯಕುಚ್ಚಿ ಕಾಡು / ೪೦
೨.೫. ಪೋಡಿನ ದೈವ / ೪೪
೨.೬. ಮರದ ಮೇಲಿನ ದೇವರು / ೫೬
೨.೭. ಮಿಂಚೇರಿಯ ಹುಲಿ ಸಮಾಧಿ / ೬೧
೨.೮. ಗೊಲ್ಲರ ಹಟ್ಟಿ / ೬೫
೨.೯. ಬೆಳದಿಂಗಳ ಸಿರಿ / ೭೩
೨.೧೦. ಬಲೀಂದ್ರ / ೮೬
೩. ಮಾತೃಮೂಲ ಪರಂಪರೆ ಮತ್ತು ಮಾತೃದೇವತೆಯರು / ೯೩
ಅನುಬಂಧ
ಅ. ಉಲ್ಲೇಖಗಳು / ೧೦೪
ಆ. ಪರಾಮರ್ಶನ ಗ್ರಂಥಗಳು / ೧೦೬
ಇ. ಛಾಯಾಚಿತ್ರಗಳು / ೧೦೯

PDF created with pdfFactory Pro trial version www.pdffactory.com